ಬಳ್ಳಾರಿ ಜಿಲ್ಲೆಯ ಅವಧೂತರು

(ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧಕ

ಜೆ. ಕರಿಯಪ್ಪ

ಹಿರಿಯಶ್ರೇಣಿ ಕನ್ನಡ ಉಪನ್ಯಾಸಕರು

ಸರ್ಕಾರಿ ಪ್ರಥಮ ದರ್ಜೆ ಕಾಲೇಜು

ಬಳ್ಳಾರಿ

ಮಾರ್ಗದರ್ಶಕರು

ಡಾ. ಎಫ್.ಟಿ. ಹಳ್ಳಿಕೇರಿ

ಪ್ರವಾಚಕ

ಹಸ್ತಪ್ರತಿಶಾಸ್ತ್ರ ವಿಭಾಗ

ಹಸ್ತಪ್ರತಿಶಾಸ್ತ್ರ ವಿಭಾಗ

ಭಾಷಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೦೪

ಬಳ್ಳಾರಿ ಜಿಲ್ಲೆಯ ಅವಧೂತರು

(ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧಕ

ಜೆ.ಕರಿಯಪ್ಪ

ಹಿರಿಯಶ್ರೇಣಿ ಕನ್ನಡ ಉಪನ್ಯಾಸಕರು

ಸರ್ಕಾರಿ ಪ್ರಥಮ ದರ್ಜೆ ಕಾಲೇಜು

ಬಳ್ಳಾರಿ

ಮಾರ್ಗದರ್ಶಕರು

ಡಾ.ಎಫ್.ಟಿ.ಹಳ್ಳಿಕೇರಿ

ಪ್ರವಾಚಕರು

ಹಸ್ತಪ್ರತಿಶಾಸ್ತ್ರ ವಿಭಾಗ

ಹಸ್ತಪ್ರತಿಶಾಸ್ತ್ರ ವಿಭಾಗ

ಭಾಷಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೦೪

ದೃಢೀಕರಣ ಪತ್ರ

ಶ್ರೀ ಜೆ.ಕರಿಯಪ್ಪ ಇವರು ಬಳ್ಳಾರಿ ಜಿಲ್ಲೆಯ ಅವಧೂತರು ಎಂಬ ಶೀರ್ಷಿಕೆಯ ಪ್ರೌಢ ಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗಕ್ಕೆ ಸಲ್ಲಿಸುತ್ತಿರುವ ಪ್ರಸ್ತುತ ಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ
ದಿನಾಂಕ : ೮-೦೭-೨೦೦೪

(ಡಾ.ಎಫ್.ಟಿ.ಹಳ್ಳಿಕೇರಿ)
ಮಾರ್ಗದರ್ಶಕರು ಮತ್ತು ಪ್ರವಾಚಕರು
ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಪ್ರಮಾಣ ಪತ್ರ

ಬಳ್ಳಾರಿ ಜಿಲ್ಲೆಯ ಅವಧೂತರು ಎಂಬ ಶೀರ್ಷಿಕೆಯ ಪ್ರೌಢ ಪ್ರಬಂಧವನ್ನು ಡಾ.ಎಫ್.ಟಿ. ಹಳ್ಳಿಕೇರಿಯವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಪಿಎಚ್.ಡಿ. ಪದವಿಗಾಗಿ ಭಾಷಾ ನಿಕಾಯದ ಹಸ್ತಪ್ರತಿಶಾಸ್ತ್ರ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

(ಜೆ.ಕರಿಯಪ್ಪ)
ಹಿರಿಯ ಶ್ರೇಣಿ ಕನ್ನಡ ಉಪನ್ಯಾಸಕರು
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಳ್ಳಾರಿ

ಸ್ಥಳ : ವಿದ್ಯಾರಣ್ಯ
ದಿನಾಂಕ : ೮-೦೭-೨೦೦೪

ಕೃತಜ್ಞತೆಗಳು

ಬಳ್ಳಾರಿ ಜಿಲ್ಲೆಯ ಅವಧೂತರು ಎಂಬ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸಲು ಹರ್ಷವೆನಿಸುತ್ತದೆ. ಅಧ್ಯಯನಕ್ಕಾಗಿ ಅವಕಾಶ ಕಲ್ಪಿಸಿಕೊಟ್ಟ ಅಂದಿನ ಕುಲಪತಿಗಳಾದ ಡಾ.ಎಚ್.ಜೆ.ಲಕ್ಕಪ್ಪಗೌಡ ಹಾಗೂ ಇಂದಿನ ಕುಲಪತಿಗಳಾದ ಡಾ.ಕೆ.ವಿ.ನಾರಾಯಣ ಇವರಿಗೆ ಅನಂತ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ವಿಷಯದ ಆಯ್ಕೆ, ಆಕರಗಳ ಸಂಗ್ರಹ, ಅಧ್ಯಾಯಗಳ ವರ್ಗೀಕರಣ, ಬರವಣಿಗೆಯ ರೀತಿ ಹೀಗೆ ವಿವಿಧ ಹಂತಗಳಲ್ಲಿ ಸೂಕ್ತ ಮಾರ್ಗದರ್ಶನ ನೀಡಿದ ಹಸ್ತಪ್ರತಿಶಾಸ್ತ್ರ ವಿಭಾಗದ ಪ್ರವಾಚಕರಾದ ಡಾ.ಎಫ್.ಟಿ.ಹಳ್ಳಿಕೇರಿ ಅವರಿಗೆ.

ಅಧ್ಯಯನ ಕೈಗೊಳ್ಳಲು ಆಡಳಿತಾತ್ಮಕ ಅನುಮತಿ ನೀಡಿದ ಕುಲಸಚಿವರಾದ ಡಾ.ಕೆ.ವಿ.ನಾರಾಯಣ, ಅಧ್ಯಯನಾಂಗದ ಅಂದಿನ ನಿರ್ದೇಶಕರಾದ ಡಾ.ಹಿ.ಚಿ.ಬೋರಲಿಂಗಯ್ಯ ಹಾಗೂ ಇಂದಿನ ನಿರ್ದೇಶಕರಾದ ಡಾ.ಕರೀಗೌಡ ಬೀಚನಹಳ್ಳಿಯವರಿಗೆ, ಹಸ್ತಪ್ರತಿಶಾಸ್ತ್ರ ವಿಭಾಗದ ಅಂದಿನ ಮುಖ್ಯಸ್ಥರಾದ ಪ್ರೊ.ಎ.ವಿ. ನಾವಡ, ಇಂದಿನ ಮುಖ್ಯಸ್ಥರಾಗಿರುವ ಡಾ.ವೀರೇಶ ಬಡಿಗೇರ ಇವರಿಗೆ,

ಅಧ್ಯಯನಕ್ಕೆ ಪೂರಕ ಸಲಹೆ, ಸಹಕಾರ ನೀಡಿದ ವಿಭಾಗದ ಅಧ್ಯಾಪಕರಾದ ಡಾ.ಕೆ.ರವೀಂದ್ರನಾಥ್, ಡಾ.ಎಸ್.ಎಸ್.ಅಂಗಡಿ, ಎಸ್.ಆರ್.ಚನ್ನವೀರಪ್ಪ ಇವರಿಗೆ, ಕ್ಷೇತ್ರಕಾರ್ಯ ಕೈಗೊಂಡಾಗ ಸಕಲ ಮಾಹಿತಿಯನ್ನು ನೀಡಿದ ಚೇಳಗುರಿಕೆ, ದಮ್ಮೂರು, ಎಮ್ಮಿಗನೂರು, ಹೊಸಪೇಟೆ, ಕುಡುತಿನಿ, ಕೊಳಗಲ್ಲು, ಬೈಲುಹೊದ್ದಿಗೆರೆ, ಕೊಟಗಿನಹಾಳು, ಹಂಪಿ ಮುಂತಾದ ಸ್ಥಳಗಳಲ್ಲಿನ ಅವಧೂತ ಮಠಗಳ ಸಮಿತಿಯವರಿಗೆ, ಮತ್ತು ಗ್ರಾಮದ ಸಮಸ್ತ ವಕ್ತೃಗಳಿಗೆ.

ಮಗನ ಏಳ್ಗೆಯ ಬಗ್ಗೆ ಅನೇಕ ಕನಸುಗಳನ್ನು ಇಟ್ಟುಕೊಂಡಿರುವ ತಂದೆ-ತಾಯಿಗಳಿಗೆ, ಸಹೋದರ-ಸಹೋದರಿಯರಿಗೆ, ಅಧ್ಯಯನಕ್ಕೆ ಪೂರ್ಣ ಸಹಕಾರ ನೀಡಿದ ನನ್ನ ಶ್ರೀಮತಿ ಮಹಾದೇವಮ್ಮ ಇವರಿಗೆ.

ಕ್ಷೇತ್ರಕಾರ್ಯದಲ್ಲಿ ಸಹಕಾರ ನೀಡುತ್ತಾ, ಸ್ನೇಹಿತರಾಗಿ ಹಿತೈಷಿಗಳಾಗಿ, ಯಾವತ್ತೂ ನನ್ನ ಏಳ್ಗೆಯನ್ನು ಬಯಸುತ್ತಿರುವ ಡಾ.ಇಸ್ಮಾಯಿಲ್ ಎಂ.ಮಕಾಂದರ್, ಪ್ರೊ.ರಾಮಕೃಷ್ಣ, ಡಾ.ಜಯಕುಮಾರ್ ಸಿಂಧೆ, ಮಾನಕರಿ ಶ್ರೀನಿವಾಸಾಚಾರ್ಯ, ಡಿ.ಕೆ.ನಟರಾಜು, ಗಂಗಾಧರ, ಸುಂಕಪ್ಪ, ಡಾ.ಸಮೀಉಲ್ಲಾ, ಎಚ್.ಆರ್. ರಮೇಶ್, ಡಾ.ಚಾಜಿ ದೇವೇಂದ್ರಪ್ಪ, ಸಿದ್ದಿ ರುದ್ರಪ್ಪ, ಜಾಫಾ ನಾಯಕ, ಹೊನ್ನೂರು ಅಲಿ, ಸುಬ್ಬಾನಮೂರ್ತಿ ಅವರಿಗೆ.

ಅಧ್ಯಯನ ಕೈಗೊಳ್ಳಲು ಅನುಮತಿ ನೀಡಿ ಸಹಕರಿಸಿದ ಬಳ್ಳಾರಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರುಗಳಾದ ಪ್ರೊ.ಎಂ.ಗೋಪಾಲ್, ಪ್ರೊ.ಕೆ.ಶ್ರೀನಿವಾಸನ್, ಪ್ರೊ.ಬಿ.ಪ್ರಕಾಶ್, ಪ್ರೊ.ಜಿ.ಆರ್. ವೆಂಕಟೇಶಲು ಇವರಿಗೆ ಮತ್ತು ಕಾಲೇಜಿನ ಎಲ್ಲಾ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯವರಿಗೆ, ಕ್ಷೇತ್ರಕಾರ್ಯದಲ್ಲಿ ಸಹಕರಿಸಿದ ವಿದ್ಯಾರ್ಥಿ ಮಿತ್ರರಿಗೆ.

ಹಸ್ತಪ್ರತಿಶಾಸ್ತ್ರ ವಿಭಾಗದ ಬೋಧಕೇತರ ಸಿಬ್ಬಂದಿಯವರಿಗೂ, ಗ್ರಂಥಾಲಯದ ಅಧಿಕಾರಿಗಳಿಗೂ, ಅಚ್ಚುಕಟ್ಟಾಗಿ ಅಕ್ಷರ ಸಂಯೋಜಿಸಿ ಕೊಟ್ಟ ಹೊಸಪೇಟೆಯ ಯಾಜಿ ಗ್ರಾಫಿಕ್ಸ್‌ನ ಶ್ರೀಮತಿ ಸವಿತಾ ಯಾಜಿ ಮತ್ತು ಗಣೇಶ ಯಾಜಿಯವರಿಗೂ, ಅಧ್ಯಯನಕ್ಕೆ ಪೂರಕವಾಗಿ ಛಾಯಾಚಿತ್ರಗಳನ್ನು ಒದಗಿಸಿಕೊಟ್ಟ ಗೆಳೆಯ ಭೈರಪ್ಪ ಇವರಿಗೆ.

ಪ್ರತ್ಯಕ್ಷ ಹಾಗೂ ಪರೋಕ್ಷ ಸಹಕಾರ ನೀಡಿದ ಎಲ್ಲಾ ಹಿರಿಯ, ಕಿರಿಯ ವಿದ್ವಾಂಸರು ಮತ್ತು ಮಿತ್ರರಿಗೆ.

ಅನಂತ ಕೃತಜ್ಞತೆಗಳು.

(ಜೆ.ಕರಿಯಪ್ಪ)

ಪರಿವಿಡಿ

[illegible]

ಅಧ್ಯಾಯ ೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

೧. ೧. ಪ್ರವೇಶ ಮತ್ತು ಉದ್ದೇಶ

೧. ೨. ಲಿಖಿತ ಸಾಹಿತ್ಯ

೧. ೩. ಕ್ಷೇತ್ರಕಾರ್ಯ

೧. ೪. ಅಧ್ಯಯನದ ವ್ಯಾಪ್ತಿ

ಅಧ್ಯಾಯ ೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಅವಧೂತರು ಯೌಗಿಕ ಪಂಥದ ಅನುಭಾವಿಗಳು. ಆರೂಢರು, ಸಿದ್ಧರು, ನಾಥರು, ಸಂತರಂತೆ ಇವರೂ ಸಹ ಲೌಕಿಕಬಂಧನವನ್ನು ತಿರಸ್ಕರಿಸಿ, ಧ್ಯಾನ ಯೋಗದಂತಹ ಸಾಧನೆಯಲ್ಲಿ ನಿರತರಾಗಿ, ಗುರುವಿನ ಅನುಗ್ರಹ ಪಡೆದು, ಆಧ್ಯಾತ್ಮಿಕ ಅನುಭಾವವನ್ನು ಸಾಕ್ಷಾತ್ಕರಿಸಿಕೊಂಡವರು. ಇಂತಹ ಮಹಾನುಭಾವಿಗಳು ದೇಶದ ಪ್ರತಿಭಾಗದಲ್ಲಿಯೂ, ಪ್ರತಿ ತಲೆಮಾರಿನಲ್ಲಿಯೂ, ಆಗಾಗ್ಗೆ ಅವತರಿಸಿರುತ್ತಾರೆ. ಬದುಕಿನ ಜಂಜಾಟದಿಂದ ದೂರವಾಗಿ, ತಮ್ಮ ಸಾಧನೆಯಿಂದ ಅನುಭಾವದ ಚೇತನವಾಗಿ ಬೆಳೆದಿದ್ದಾರೆ. ತಮ್ಮ ಅನುಭಾವಿಕ ವ್ಯಕ್ತಿತ್ವ ದಿಂದಲೇ ಜನಸಾಮಾನ್ಯರನ್ನು ತಮ್ಮೆಡೆಗೆ ಸೆಳೆದುಕೊಂಡು, ಸರ್ವ ವರ್ಗದವರಿಂದ, ಸರ್ವಧರ್ಮದವರಿಂದ, ಭಕ್ತಿಪೂರ್ವಕ ಮನ್ನಣೆ ಪಡೆದಿದ್ದಾರೆ.

ಜಾತಿ, ಮತ, ಧರ್ಮಗಳ ಎಲ್ಲೆಯನ್ನು ಮೀರಿದ ಇವರು, ಹಣ, ಅಧಿಕಾರ, ಅಹಂಕಾರ, ಸತಿ, ಸುತ, ತಂದೆ, ತಾಯಿ, ಬಂಧು-ಬಳಗ ಮುಂತಾದ ಬಂಧನಗಳನ್ನು ತಿರಸ್ಕರಿಸಿ, ಅನುಭಾವಿಕ ಶಕ್ತಿಯ ಮುಂದೆ ಉಳಿದೆಲ್ಲವೂ ತೃಣಸಮಾನವೆಂದು ತಿಳಿದವರು. ತಮ್ಮ ಸಾಧನೆಯಿಂದ ಸಿದ್ಧಿಗೇರಿದ ಮೇಲೆ, ತಮ್ಮನ್ನು ನಂಬಿದ್ದ ಭಕ್ತ ಜನತೆಯನ್ನು ಉದ್ಧರಿಸುತ್ತಾ, ತಮ್ಮ ನಡೆ, ನುಡಿಗಳಿಂದಲೇ ಶಾಶ್ವತ ಸುಖದ ಮಹತ್ವವನ್ನು ಸಾರಿದ್ದಾರೆ. ತಮ್ಮ ಆತ್ಮೋನ್ನತಿಯ ಬೆಳವಣಿಗೆಯ ಜೊತೆಗೆ ಸಮಾಜದ ಉನ್ನತಿಯನ್ನು ಬಯಸಿದ ವರಾಗಿದ್ದಾರೆ.

'ಅವಧೂತ' ಎಂದರೆ ಸರ್ವಸಂಗ ಪರಿತ್ಯಾಗಿಯಾದ ಸನ್ಯಾಸಿ, ದಿಗಂಬರ, ವರ್ಣಾಶ್ರಮಗಳನ್ನು ಮೀರಿ, ಮುಮುಕ್ಷುಮಾರ್ಗದಲ್ಲಿ ನಡೆದು, ಆತ್ಮನಲ್ಲಿಯೇ ವಿಹರಿಸುವವನು ಎಂದರ್ಥ. ಮುಖ್ಯವಾಗಿ ಅವಧೂತ ಎನ್ನುವುದು ಒಂದು ಧರ್ಮವಾಗಿರದೆ, ಸಾಂಸ್ಥಿಕ ಧರ್ಮದ ಚೌಕಟ್ಟನ್ನು ಮೀರಿ ನಿಂತ ಒಂದು ಮಾರ್ಗ ಅಥವಾ ಪಂಥವಾಗಿದೆ. ಸಮಾಜದಿಂದ ದೂರ ಉಳಿದ ಅಂತರ್ಮುಖ ಬದುಕು, ಮಾನಸಪೂಜೆ, ಯೋಗದೃಷ್ಟಿ, ಅಷ್ಟಮಹಾಸಿದ್ಧಿ, ಮೌನಸಾಧನೆ ಮುಂತಾದ ಲಕ್ಷಣಗಳುಳ್ಳ ಅವಧೂತರು ಸಂಗದಲ್ಲಿದ್ದು, ನಿಸ್ಸಂಗಿ ಯಾಗಿದ್ದವರು. ದೈವಾನುಗ್ರಹ, ಗುರೂಪದೇಶ ಪಡೆದು ತನ್ನನ್ನು ತಾನೇ ಮರೆತು, ಲೋಕಕ್ಕೆ ಮರುಳನಂತೆ ಕಂಡು, ದೇಶ ಸಂಚಾರ ಮಾಡಿ, ಹೋದಲ್ಲೆಲ್ಲಾ ತನ್ನ ಮಹಿಮೆಯನ್ನು ತೋರಿ, ಕೊನೆಗೊಂದು ಊರಲ್ಲಿ ನೆಲೆನಿಂತು ಸಮಾಧಿ ಹೊಂದಿದವರು. ತಾತ, ಅಜ್ಜ, ಸ್ವಾಮಿ, ಅಪ್ಪ ಮುಂತಾದ ಆಯಾಯಾ ಪ್ರಾಂತೀಯ ಪ್ರೀತಿಯ ನುಡಿಯಿಂದ ಕರೆಸಿಕೊಂಡಿರುವ ಇವರು, ಶುದ್ಧ ಮನಸ್ಸಿನ ಭಕ್ತರ ಕಷ್ಟ, ನಷ್ಟಗಳನ್ನು, ಎದುರು

[illegible]

[illegible]

[illegible]

[illegible]

[illegible]

[illegible]

ತೊಡರುಗಳನ್ನು ಪರಿಹರಿಸುತ್ತಾ, ಇಷ್ಟಾರ್ಥಗಳನ್ನು ಕಲ್ಪಿಸುವ ದೈವವಾಗಿದ್ದಾರೆ. ಮೇಲು, ಕೀಳು, ಸಣ್ಣವ, ದೊಡ್ಡವನೆನ್ನದೆ, ಸರ್ವರೂ ಸಮಾನರು ಎಂಬ ಧೋರಣೆಯಿಂದ ಬದುಕಿ, ಸ್ವಾತಂತ್ರ್ಯ ಸಮಾನತೆಯನ್ನು ಜಾತ್ಯಾತೀತರಾಗಿ, ಮತಾತೀತರಾಗಿ ಸಾರಿದ್ದಾರೆ. ಇಂಥ ಮಹಾತ್ಮರ ಜೀವನ, ಅವರು ಪ್ರತಿಪಾದಿಸಿದ ಮೌಲ್ಯಗಳು, ನೀಡಿದ ಸಂದೇಶಗಳು ಇಂದಿನ ಜನತೆಗೆ ಅಗತ್ಯವೆನಿಸಿವೆ.

ಉದ್ದೇಶ

ಧರ್ಮಗಳು ಸಾಂಸ್ಥಿಕತೆ ಹೊಂದುವ ಸಂದರ್ಭದಲ್ಲಿ ಅದರಿಂದ ಹೊರಗುಳಿದ ವಿವಿಧ ವರ್ಗದ ಜನತೆ, ಹೊಸದೊಂದು ಮಾರ್ಗವನ್ನು ಹುಟ್ಟುಹಾಕಿದ್ದರ ಪರಿಣಾಮ ಹತ್ತಾರು ಪಂಥಗಳು ಬೆಳೆದಿವೆ. ಶಿಷ್ಟಧರ್ಮಕ್ಕೆ ಪ್ರತಿಯಾಗಿ ಬೆಳೆದ ಇಂಥ ಪಂಥಗಳಲ್ಲಿ ಅವಧೂತರು ಮುಖ್ಯರು. ಇವರು ತಮ್ಮ ಜೀವನದುದ್ದಕ್ಕೂ ಹಠದಿಂದ ವಿಧಿವಿಲಾಸಗಳನ್ನು ಮೆಟ್ಟಿನಿಂತು, ಜೀವನದ ಜಂಜಾಟವನ್ನು ತೊರೆದವರು. ಆಧ್ಯಾತ್ಮದ, ಅನುಭಾವದ ಮಟ್ಟಿಲನ್ನೇರಿ, ಮಾನವಕುಲವನ್ನು ಉದ್ಧರಿಸಲು, ಜಾತಿ, ಮತ, ಭೇದ ಮರೆತು, ಎಲ್ಲರೂ ಒಂದೇ ಎಂದು ಸಾರಿದವರು. ಸಾವಿರಾರು ವರ್ಷಗಳ ಇತಿಹಾಸವಿರುವ ಅವಧೂತ ಪರಂಪರೆ, ಕರ್ನಾಟಕದಲ್ಲಿ ಬೆಳಕಿಗೆ ಬಂದಿದ್ದು ಸು. ೧೨ನೇ ಶತಮಾನದಿಂದ. "ಮೇಲು ವರ್ಗದವರೆಲ್ಲಾ ಶೈವ ವೈಷ್ಣವದಂತಹ ಧರ್ಮಗಳಿಗೆ ಹಂಚಿಹೋದಾಗ, ಸಮಾನತೆಯ ಸೌಜನ್ಯದಿಂದ ಆಧ್ಯಾತ್ಮಿಕ ಚರ್ಚೆಯಿಂದ ವಂಚಿತವಾದ ಕೆಳವರ್ಗದ ಜನತೆ ವೈಧಿಕವಿರೋಧಿ ನಡತೆಯನ್ನು ಹುಟ್ಟುಹಾಕಿದ ಪರಿಣಾಮವಾಗಿಯೇ ವಾಮಾಚಾರದಂತಹ ಪಂಥಗಳು ನಮ್ಮಲ್ಲಿ ಭಿಡೆ ತೊರೆದು ಎದ್ದುನಿಂತವು ಎನಿಸುತ್ತದೆ. ಸಿದ್ಧಸಂಪ್ರದಾಯವು ಇಂತಹ ನೆಲೆಯಿಂದೆದ್ದ ಮಹಾಸಾಗರವಾಗಿದೆ. ಈ ಸಾಗರದ ಅಲೆಗಳಾದ ನಾಥ, ಆರೂಢ, ಅವಧೂತ ಮೊದಲಾದ ಪಂಥಗಳು ಮಧ್ಯಕಾಲೀನ ಕರ್ನಾಟಕದಲ್ಲಿ ಭಕ್ತಿ ಪಂಥದ ಶಿಷ್ಟಧರ್ಮಗಳ ಭುಜಕ್ಕೆ ಭುಜಕೊಟ್ಟು ಸೆಣಸಿದ ಇತಿಹಾಸವಿದೆ."[೧]

೧೨ನೇ ಶತಮಾನದ ವಚನಕಾರರ ಅಥವ ಶರಣರ ಇಷ್ಟಲಿಂಗ ಸಂಸ್ಕೃತಿಯನ್ನು ನಿರಾಕರಿಸುವ ಆತ್ಮಲಿಂಗ ವಾದಿಗಳು ಅಥವಾ ಆತ್ಮಜ್ಞಾನಿಗಳಿಂದ (ಅಜಗಣ್ಣ, ಅಲ್ಲಮ, ರೇವಣಸಿದ್ಧ) ಬೆಳಕಿಗೆ ಬಂದ ಈ ಪಂಥ ಮುಂದೆ ಕಲ್ಯಾಣದಲ್ಲಿ ಉದ್ಭವವಾದ ಸಾಂಸ್ಕೃತಿಕ ಬಿಕ್ಕಟ್ಟನ್ನು ಎದುರಿಸಲಾರದ ಪರಿಸ್ಥಿತಿ ನಿರ್ಮಾಣವಾದಾಗ, ಅಲ್ಲಿಂದ ಚದುರಿದ ಶರಣರು ವಿವಿಧ ಕಡೆ ನೆಲೆಸಿರುವಂತೆ ಹಂಪಿ ಪರಿಸರದಲ್ಲೂ ನೆಲೆಸಿದ್ದಾರೆ. ಅವರುಗಳೇ ವಿಜಯನಗರದ ಪ್ರೌಢದೇವರಾಯನ ಕಾಲದ ನೂರೊಂದು ವಿರಕ್ತರು. ಆ ವಿರಕ್ತರಲ್ಲಿಯೇ ಅವಧೂತ ಪರಂಪರೆಯೊಂದು ಬೆಳೆದು ಬಂದಿರುವ ಸಾಧ್ಯತೆ ಇದೆ.

ಸುಮಾರು ೧೫ ನೇ ಶತಮಾನದಲ್ಲಿ ಕಂಡು ಬಂದ ಅನುಭಾವಿಗಳು ಅಥವ ಶಿವಯೋಗಿಗಳು ಸೃಷ್ಟಿಸಿದ ಅನುಭಾವ ಸಾಹಿತ್ಯದಲ್ಲಿ ಲಿಂಗಾಂಗ ಸಾಮರಸ್ಯ, ಅದರಿಂದಾಗುವ ಆತ್ಯಂತಿಕ ಆನಂದದ ಮಹತ್ವವನ್ನು ಹಲವಾರು ಯೋಗಿಗಳು ಹೇಳಿದ್ದಾರೆ. ನಿಜಗುಣ ಶಿವಯೋಗಿಗಳು, ಮುಪ್ಪಿನ ಷಡಕ್ಷರಿಗಳು, ಕಡಕೋಳ ಮಡಿವಾಳಪ್ಪ ಮುಂತಾದ ಯೋಗಿಗಳು ರಚಿಸಿದ ತತ್ವಪದ ಸಾಹಿತ್ಯ ಅಥವ ಕೈವಲ್ಯ ಸಾಹಿತ್ಯದಲ್ಲಿ ಅವಧೂತ ಪರಂಪರೆ ಬೆಳೆದು ಬಂದಿರುವುದಕ್ಕೆ ಮಾಹಿತಿ ಇದೆ. ನಂತರ ೧೭ ಮತ್ತು ೧೮ನೇ ಶತಮಾನದಲ್ಲಿ ಕಂಡು

ಬಂದವರು, ಅದ್ವೈತ ಉಪಾಸಕರಾದ ಅವಧೂತ ಪಂಥೀಯರು. ಇವರಲ್ಲಿ ಕೆಲವರು ಸಾಹಿತ್ಯ ರಚಿಸಿದರೆ ಮತ್ತೆ ಕೆಲವರು ತಮ್ಮ ನಡೆ ನುಡಿಗಳಿಂದಲೇ ವ್ಯಕ್ತಿಯ ಆಂತರಿಕ ಬದಲಾವಣೆ ತಂದಿದ್ದಾರೆ. ಈ ರೀತಿ ಹಲವು ವರ್ಷಗಳ ಪರಂಪರೆಯುಳ್ಳ ಅವಧೂತರು ನಾಡಿನ ವಿವಿಧ ಪ್ರಾಂತಗಳಲ್ಲಿ ಕಳೆದೆರಡು ಶತಮಾನಗಳಲ್ಲಿ ಅವತರಿಸಿದ್ದು, ಬಳ್ಳಾರಿ ಜಿಲ್ಲೆಯ ವ್ಯಾಪ್ತಿಯಲ್ಲಿಯೇ ಅಧಿಕ ಸಂಖ್ಯೆಯಲ್ಲಿ ಅವಧೂತರು ಕಂಡು ಬರುವುದು ವಿಶೇಷವಾಗಿದೆ.

ಶಿಷ್ಟಕವಿಗಳಿಂದ, ಶಿಷ್ಟ ಜನರಿಂದ ಉಪೇಕ್ಷೆಗೆ ಒಳಗಾಗಿ ಜನಪದರಿಂದ ನಿತ್ಯ ಪೂಜಿಸಿಕೊಳ್ಳುತ್ತಿರುವ ''ಬಳ್ಳಾರಿ ಜಿಲ್ಲೆಯ ಅವಧೂತರು'' ನನ್ನ ಸಂಶೋಧನಾ ಅಧ್ಯಯನದ ವಿಷಯವಾಗಿದೆ. ಪಾಶ್ಚಿಮಾತ್ಯ ಸಂಸ್ಕೃತಿಯ ಪ್ರಭಾವ, ಜಾಗತೀಕರಣ, ನವವಸಾಹತುಶಾಹಿ ಪ್ರಭಾವಗಳ ಒತ್ತಡಕ್ಕೆ ಸಿಲುಕಿರುವ ಇಂದಿನ ಜನತೆಗೆ ಅವಧೂತರು ತೋರಿದ ಭಾವೈಕ್ಯತೆ, ಮತೀಯ ಸಹಿಷ್ಣುತೆ ಮತ್ತು ಸಾಂಸ್ಕೃತಿಕ ಸಮನ್ವಯತೆಯ ದೃಷ್ಠಿಯಿಂದ ನಮಗಿಂದು ಪ್ರಸ್ತುತವಾಗಿ ಅಧ್ಯಯನ ಯೋಗ್ಯರಾಗಿದ್ದಾರೆ.

ಇಂಥ ಮಹಾನುಭಾವಿಗಳ ಅಧ್ಯಯನ ಈವರೆಗೆ ನಡೆದಿಲ್ಲವಾದ್ದರಿಂದ, ಅವಧೂತರ ಪರಿಪೂರ್ಣ ವ್ಯಕ್ತಿತ್ವ, ಜೀವನಮೌಲ್ಯ ಮತ್ತು ಜನತೆಗೆ ನೀಡಿದ ಸಂದೇಶಗಳನ್ನು ಅಧ್ಯಯನಕ್ಕೊಳಪಡಿಸುವುದು ಇಲ್ಲಿನ ಉದ್ದೇಶವಾಗಿದೆ.

೧೯ ಮತ್ತು ೨೦ನೇ ಶತಮಾನದ ಆಜುಬಾಜಿನಲ್ಲಿ ಬಳ್ಳಾರಿ ಜಿಲ್ಲೆಯ ವ್ಯಾಪ್ತಿಯಲ್ಲಿ ಹೆಚ್ಚಿನ ಸಂಖ್ಯೆಯ ಅವಧೂತರನ್ನು ಕಾಣುತ್ತೇವೆ. ಚಾರಿತ್ರಿಕವಾಗಿ ನೋಡಿದರೆ ಹಂಪಿ ಪರಿಸರವೇ ಇದಕ್ಕೆ ಕಾರಣವಾಗಿರಬಹುದು. ಅದೆಷ್ಟೋ ಕವಿಗಳಿಗೆ, ಪಂಡಿತರಿಗೆ, ವಿರಕ್ತರಿಗೆ, ಶರಣರಿಗೆ, ದಾಸರಿಗೆ, ಅನುಭಾವಿಗಳಿಗೆ ಈ ಪ್ರದೇಶವು ಆಶ್ರಯದ ನೆಲೆ ಮತ್ತು ಸಂಚಾರದ ಭೂಮಿಯಾಗಿದೆ. ಹಂಪಿಯ ಮಾದಿರಾಜ, ಹರಿಹರ, ರಾಘವಾಂಕ, ದೇಪರಾಜ, ಮಹಾಲಿಂಗದೇವ, ಲಕ್ಕಣ್ಣ ದಂಡೇಶ, ಗುರುಬಸವ, ಚಾಮರಸ, ಕರಸ್ಥಲ ನಾಗಿದೇವ, ಕನಕದಾಸ ಪುರಂದರದಾಸ, ವಿರುಪಾಕ್ಷಪಂಡಿತ ಹೀಗೆ ಕವಿ ಪರಂಪರೆಯೇ ಈ ನೆಲದಲ್ಲಿ ಬೆಳೆದು ಬಂದಿದೆ.

ವಿಜಯನಗರದ ಅರಸರು ರಾಜಕೀಯ ಅಭ್ಯುದಯದೊಡನೆ, ಸಾಹಿತ್ಯ ಮತ್ತು ಸಂಸ್ಕೃತಿಯ ಸಂವರ್ಧನೆಗೂ ಕಾರಣವಾಗಿದ್ದವರು. ಅದರಲ್ಲೂ ಪ್ರೌಢದೇವರಾಯನ ಕಾಲವು ವಿಶಾಲಧಾರ್ಮಿಕ ಮನೋಭಾವ, ವೀರಶೈವ ಧರ್ಮದ ಪುನರುತ್ಥಾನ, ನೂರೊಂದು ವಿರಕ್ತರ ಅವತಾರ ಈ ಕಾಲದಲ್ಲಿ ನಡೆದಿದೆ. ಕಲ್ಯಾಣದಲ್ಲಿ ಉದ್ಭವವಾದ ಸಾಂಸ್ಕೃತಿಕ ಬಿಕ್ಕಟ್ಟನ್ನು ಎದುರಿಸಲಾರದೆ, ಕಲ್ಯಾಣವನ್ನು ತೊರೆದ ಶರಣರು, ಕೊಡೇಕಲ್ಲು, ಜಲದುರ್ಗ, ಹಂಪಿ ಮುಂತಾದ ಪರಿಸರದಲ್ಲಿ ನೆಲೆಸಿದ್ದಾರೆ. ''ಹಂಪಿಯ ಪರಿಸರದಲ್ಲಿ ನೆಲೆಸಿದ ವಿರಕ್ತರಲ್ಲಿ ಕೆಲವರು 'ಜಗಕೆ ತಾ ಮರುಳು, ತನಗೆ ಜಗ ಮರುಳು' ಎಂಬಂತೆ ಲೀಲಾಮೂರ್ತಿಗಳಾಗಿ ಲೋಕದ ಕಣ್ಣಿನಲ್ಲಿ ಹುಚ್ಚರಂತೆ ತೋರಿದರೂ ಶಿವಯೋಗದ ನಿಬ್ಬೆರಗಿನಲ್ಲಿ ಅಂಗಲೀಲೆಯನ್ನು ಮೆರೆದ ಮಹಾನುಭಾವಿಗಳಾಗಿದ್ದಾರೆ.''[೨] ಇಂತಹ ವಿರಕ್ತರಲ್ಲಿಯೇ ಅವಧೂತ ಪರಂಪರೆಯೊಂದು ಬೆಳೆದಿದ್ದು,, ಮಾನಸಪೂಜೆ, ಮತ್ತು ಆತ್ಮಜ್ಞಾನ ಮಾರ್ಗಕ್ಕೆ ಹೆಚ್ಚಿನ ಮಹತ್ವ ನೀಡಿರುವುದನ್ನು ಕಾಣಬಹುದು. ''ಈ ಪರಿಸರದಲ್ಲಿಯೇ ಇದ್ದ ಕೊಡೇಕಲ್ಲು ಬಸವಣ್ಣನು ಆರೂಢಪಂಥದವನು. ೧೫ನೇ ಶತಮಾನದಲ್ಲಿದ್ದ ನೂರೊಂದು ವಿರಕ್ತರ ಚಟುವಟಿಕೆಗಳನ್ನು

ನಿರಾಕರಿಸಿ, ಅಂದರೆ ಲಿಂಗದೀಕ್ಷೆಯನ್ನು ವಿರೋಧಿಸಿ, ಕೃಷ್ಣಾನದಿ ಪ್ರದೇಶದ ಕೊಡೇಕಲ್ಲಿಗೆ ಬಂದು ಆರೂಢ ಪಂಥವನ್ನು ಬೆಳೆಸಲು ಕೊಡೇಕಲ್ಲು ಬಸವಣ್ಣ ಪ್ರಯತ್ನಿಸಿರಬೇಕು."[5] ಒಟ್ಟಾರೆ ವಿಶಿಷ್ಟ ವ್ಯಕ್ತಿತ್ವ ಮತ್ತು ರೂಪವನ್ನೊಳಗೊಂಡ ವಿರಕ್ತರು ಹಂಪಿ ಪರಿಸರದಲ್ಲಿ ವಾಸಿಸಿರುವುದು ಇತಿಹಾಸ.

ಅನುಭಾವ ಪರಂಪರೆ ವೀರಶೈವರಲ್ಲಿ ಮೊದಲಬಾರಿಗೆ ಕಂಡು ಬಂದಿರುವುದು ಹಂಪಿ ಪರಿಸರದಲ್ಲಿಯೇ. ಅನುಭಾವಿಗಳ ಅನುಭಾವ ಪಂಥವೆಂಬುದು ಜಾತಿ, ಮತ, ಪಂಥಗಳನ್ನು ಮೀರಿರುವಂಥದ್ದು. ಈ ಕಾಲದಲ್ಲಿ ಸೃಷ್ಟಿಯಾದ ಸಾಹಿತ್ಯ ಮತ್ತು ವಿರಕ್ತರ ಹಾಡುಗಳಲ್ಲಿ ನಿಜವಾದ ದಾರ್ಶನಿಕ ಲಕ್ಷಣವನ್ನು, ಅನುಭಾವ ಮಾರ್ಗವನ್ನು , ತತ್ವಬೋಧೆಯನ್ನು ಕಾಣಬಹುದು. ಸಪ್ತಕಾವ್ಯದ ಗುರುಬಸವನು 'ಅವಧೂತ ಗೀತೆ' ಎನ್ನುವ ಯೋಗಮಾರ್ಗದ, ವೈರಾಗ್ಯ ಬೋಧನೆಯ ಆಧ್ಯಾತ್ಮಿಕ ಜೀವನದ ಒಲವು-ನಿಲುವುಗಳನ್ನು ತಿಳಿಸುವ ವಿಶಿಷ್ಟ ಕೃತಿಯೊಂದನ್ನು ಈ ಪರಿಸರದಲ್ಲಿಯೆ ಬರೆದಿದ್ದಾನೆ.

೧೭ನೇ ಶತಮಾನದ ವೇಳೆಗೆ ನೂರೊಂದು ವಿರಕ್ತರ ಮತ್ತು ಅನುಭಾವಿಗಳ ಜೀವನ, ಸಾಧನೆ, ಮೌಲ್ಯ, ತತ್ವಗಳು, ಭಕ್ತರುಗಳ ಮೇಲೆ, ಅವರ ಸಾಂಸ್ಕೃತಿಕ ಜೀವನದ ಮೇಲೆ ಪ್ರಭಾವ ಬೀರಿ ದೈನಂದಿನ ಜೀವನದಲ್ಲಿ ಸೇರ್ಪಡೆಯಾಗಿವೆ. ಈ ಅನುಭಾವ ಪರಂಪರೆಯುಳ್ಳ ಹಲವಾರು ಅವಧೂತರು ಹಂಪಿ ಪರಿಸರದಲ್ಲಿ ಜಾತಿ, ಮತ, ಪಂಥಗಳನ್ನು ಮೀರಿ ಅವತರಿಸಿ ಬಂದಿದ್ದಾರೆ. ೧೯ ಮತ್ತು ೨೦ನೇ ಶತಮಾನದ ವೇಗದ ಯುಗದಲ್ಲಿ, ವೈಜ್ಞಾನಿಕ ಕ್ಷೇತ್ರಕ್ಕೆ, ಆಶ್ಚರ್ಯ ಮತ್ತು ಕುತೂಹಲ ಮೂಡಿಸುವಂತೆ ಇವರ ಅವತಾರವಾಗಿದೆ. ಇವರುಗಳೆಲ್ಲಾ ಭಕ್ತ ಜನತೆಯ ಆರಾಧ್ಯದೇವರಾಗಿ ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡಿರುವುದು ಸ್ಪಷ್ಟ. ಒಟ್ಟಾರೆಯಾಗಿ ಅವಧೂತರ ಜೀವನ, ಸಾಧನೆ, ಸಿದ್ಧಿಯನ್ನು ಶೋಧಿಸಿ, ಅವರ ಸಂಸ್ಕೃತಿಯನ್ನು ಪ್ರತಿಬಿಂಬಿಸುವಂಥ ಕೆಲಸ ಈ ಅಧ್ಯಯನದ ಉದ್ದೇಶವಾಗಿದೆ.

೧. ೨. ಅಧ್ಯಯನದ ಆಕರಗಳು

ಸಂಶೋಧನಾ ದೃಷ್ಟಿ ಇಂದು ಬದಲಾಗುತ್ತಿದೆ. ಈವರೆಗೆ ಉಪೇಕ್ಷಿತವಾಗಿದ್ದ ಕ್ಷೇತ್ರ, ಸಾಹಿತ್ಯ ಮತ್ತು ಜನಮುಖಿ ವ್ಯಕ್ತಿಗಳ ಸಾಧನೆ-ಸಿದ್ಧಿಗಳು ಅಧ್ಯಯನ ವಸ್ತುವಾಗುತ್ತಿವೆ. ಈ ದಿಸೆಯಲ್ಲಿ ಜನಮುಖಿ ವ್ಯಕ್ತಿಗಳಾದ ಅವಧೂತರ ಸಾಧನೆ-ಸಿದ್ಧಿಗಳನ್ನು ಕಟ್ಟಿಕೊಡುವಾಗ ಲಿಖಿತ ಮತ್ತು ಮೌಖಿಕ ಆಧಾರಗಳೆರಡೂ ಮುಖ್ಯ ವಾಗುತ್ತವೆ. ಅವಧೂತರು ಯಾವುದೇ ಒಂದು ವ್ಯವಸ್ಥೆಯ ವಿರುದ್ಧ ಅಥವಾ ವ್ಯಕ್ತಿಗಳ ವಿರುದ್ಧ ಹೋರಾಡಿದ ವರಲ್ಲ. ಮೌನಕ್ಕೆ ಮತ್ತು ಏಕಾಂಗಿತನಕ್ಕೆ ಮಹತ್ವಕೊಟ್ಟಿರುವ ಇವರು ಸಾಹಿತ್ಯವನ್ನೂ ರಚಿಸಿದವರಲ್ಲ. ಆದರೆ ಅವರ ಬಗ್ಗೆ ಸಾಹಿತ್ಯದ ವಿವಿಧ ರೂಪಗಳಲ್ಲಿ ಲಿಖಿತ ಮಾಹಿತಿಗಳು ಲಭ್ಯವಿವೆ. ಹಾಗೆಯೇ ಅವರ ಜೀವನ, ಸಾಧನೆ, ಸಿದ್ಧಿ ಮಹಿಮೆ ಮುಂತಾದ ವಿಷಯಗಳಿಗೆ ಸಂಬಂಧಿಸಿದಂತೆ ಕ್ಷೇತ್ರಕಾರ್ಯದ ಮೂಲಕ ಶಿಷ್ಯಪರಂಪರೆ, ಭಕ್ತ ಸಮೂಹ, ಸಮಿತಿಯ ಸದಸ್ಯರನ್ನು ಭೇಟಿ ಮಾಡಿ ವಿಷಯ ಸಂಗ್ರಹಿಸಲಾಗಿದೆ. ಜೊತೆಗೆ ಮಠದಲ್ಲಿ ನಡೆಯುವ ಪೂಜೆಗಳು, ಆಚರಣೆಗಳು, ಜಾತ್ರೋತ್ಸವಗಳನ್ನು ಸ್ವತಃ ಅವಲೋಕಿಸಿ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಒಟ್ಟಾರೆ ಲಿಖಿತ ಮತ್ತು ಮೌಖಿಕ ಆಕರಗಳನ್ನು ಆಧಾರವಾಗಿಟ್ಟುಕೊಂಡು ಈ ಮಹಾ ಪ್ರಬಂಧವನ್ನು ಸಿದ್ಧಪಡಿಸಲಾಗಿದೆ.

ಲಿಖಿತ ಸಾಹಿತ್ಯ : ಗತಕಾಲದ ವ್ಯಕ್ತಿಗಳ ಜೀವನ ಚರಿತ್ರೆ ಕಟ್ಟುವಾಗ ಅಧ್ಯಯನ ಸಾಮಗ್ರಿಗಳು ಅತ್ಯವಶ್ಯಕ, ಲಿಖಿತ ಆಧಾರಗಳು ದೊರೆತಷ್ಟು ಅಧ್ಯಯನ ಪೂರ್ಣತೆಯನ್ನು ಪಡೆದುಕೊಳ್ಳುತ್ತದೆ. ಈ ಅಧ್ಯಯನ ವ್ಯಾಪ್ತಿಯಲ್ಲಿ ಬರುವ ಅವಧೂತರು ಕವಿಗಳಲ್ಲ. ಆದರೆ ಅವರ ಬಗ್ಗೆ ಚರಿತ್ರೆ, ಪುರಾಣ, ನಾಟಕ, ಲೇಖನಗಳು, ಭಕ್ತಿಗೀತೆಗಳು, ಸುಪ್ರಭಾತ, ಧ್ವನಿಸುರಳಿಗಳು ಮುಂತಾದ ಪ್ರಕಟಿತ ಮತ್ತು ಅಪ್ರಕಟಿತ ಸಾಹಿತ್ಯ ಸೃಷ್ಠಿಯಾಗಿವೆ. ಅವುಗಳನ್ನು ಹೀಗೆ ಸಂಗ್ರಹಿಸಲಾಗಿದೆ.

ಚೇಳಗುರಿಕೆ ಎರ್ರಿತಾತನವರನ್ನು ಕುರಿತು ಬಂದಿರುವ ಪ್ರಮುಖ ಕೃತಿಗಳು

೧. ಶ್ರೀ ಎರ್ರಿಸ್ವಾಮಿಗಳ ಲೀಲಾವಿಲಾಸ ಶಿ.ವ.ಚನ್ನಬಸವೇಶ್ವರ, ೧೯೬೩

೨. ಲೀಲಾಮೃತ, ಪಂ॥ ವೈ.ನಾಗೇಶ ಶಾಸ್ತ್ರಿಗಳು, ೧೯೬೬

೩. ಶ್ರೀ ಎರ್ರಿಸ್ವಾಮಿಗಳ ಶಿವಮಯ ಜೀವನ ಚರಿತ್ರೆ ಮತ್ತು ತಿಕ್ಕಯ್ಯ ವಿರಚಿತ ಭಕ್ತಿಗೀತೆಗಳು (ಸಂ) ಜೋಳದರಾಶಿ ದೊಡ್ಡನಗೌಡ

೪. ಚೇಳಗುರಿಕೆ ಶ್ರೀ ಎರ್ರಿತಾತ ಸ್ವಾಮಿಗಳು, ಬಿ.ಸಿ. ಬಸವರಾಜ್

೫. ಚೇಳಗುರಿಕೆ ಎರ್ರಿತಾತನವರ ಭಕ್ತಿಗೀತೆಗಳು, (ಸಂ) ಜೋಳದರಾಶಿ ದೊಡ್ಡನಗೌಡರು ಮತ್ತು ಶಿ.ವ.ಚನ್ನಬಸವೇಶ್ವರರು

೬. ಚೇಳಗುರಿಕೆ ಎರ್ರಿತಾತ - ಜೋಳದರಾಶಿ ದೊಡ್ಡನಗೌಡ

೭. ಚೇಳಗುರಿಕೆ ಎರ್ರಿತಾತಾ - ಎಸ್.ಶಿವಾನಂದ

೮. Sri Yerriswamy Saint of challagurki

ಎಮ್ಮಿಗನೂರು ಜಡೇತಾತನವರ ಬಗ್ಗೆ ಪ್ರಕಟವಾಗಿರುವ ಪ್ರಮುಖ ಕೃತಿಗಳು

೧. ಶ್ರೀ ಜಡೆಯೋಗೀಶ್ವರ ಚರಿತ್ರೆ, ಗುರುಸಿದ್ಧಲಿಂಗ ಶಿವಾಚಾರ್ಯರು

೨. ಜಡೇಸಿದ್ಧ ಶಿವಯೋಗಿಗಳ ಪುರಾಣ, ಪಂ॥ ಅಮರನಾಥ ಶಾಸ್ತ್ರಿಗಳು

೩. ಮಹಾಮಹಿಮ ಯಮ್ಮಿಗನೂರು ಜಡೇಸಿದ್ಧರ ಶತಕ - ಚನ್ನಬಸವ ಶಿವಬಸಪ್ಪ ಕಲ್ಮಂಗಿ

ದಮ್ಮೂರು ವೆಂಕಾವಧೂತರ ಬಗ್ಗೆ ರಚಿತವಾಗಿರುವ ಪ್ರಮುಖ ಕೃತಿಗಳು

೧. ಶ್ರೀ ಸದ್ಗುರು ವೆಂಕಾವಧೂತರ ಪುರಾಣ, ಶ್ರೀ ಶಿವಮೂರ್ತಿಶಾಸ್ತ್ರಿ

೨. ದಮ್ಮೂರು ಶ್ರೀ ಸದ್ಗುರು ವೆಂಕಾವಧೂತರ ಚರಿತ್ರೆ : ಜೀವನ ಮತ್ತು ಸಾಧನೆ ವೇಮಲ ಗಟ್ಟೆಪ್ಪ ಶ್ರೇಷ್ಠಿ

೩. ಶ್ರೀ ಸದ್ಗುರು ಸ್ತುತಿ ಪುಷ್ಪಾಂಜಲಿ (ಸಂ) ವೇಮಲ ಗಟ್ಟೆಪ್ಪ ಶ್ರೇಷ್ಠಿ

ಹಂಪಿ ಶಿವರಾಮವಧೂತರನ್ನು ಕುರಿತು ಪ್ರಕಟಿತ ಕೃತಿಗಳು

೧. ಶಿವರಾಮವಧೂತರ ಜೀವನ ಚರಿತ್ರೆ - ಚಾಕುಬಂಡೆ, ಎಂ.ಎಸ್.ಪುಟ್ಟಣ್ಣ

೨. ಶಿವರಾಮವಧೂತರ ಪುರಾಣ - ಬದನೇಹಾಳು ಮರಿಸಿದ್ದಯ್ಯ ಸ್ವಾಮಿಗಳು

ಇತರ ಅವಧೂತರನ್ನು ಕುರಿತು ಪ್ರಕಟವಾದ ಕೃತಿಗಳು

ತಟ್ರಕಲ್ಲು ಬುಗ್ಗಪ್ಪತಾತ : ಸಂಕ್ಷಿಪ್ತ ಜೀವನ ಚರಿತ್ರೆ - ಶ್ರೀ ಪಲ್ಲೇದ ಪಂಪಾಪತೆಪ್ಪನವರು.

ಕೊಳಗಲ್ಲು ಶ್ರೀ ಎರ್ರಿಬಸವತಾತನ ಪುರಾಣ : ಡಿ.ಎಂ. ಶಿವಮೂರ್ತಿಶಾಸ್ತ್ರಿ.

ಸಿಂಧಿಗೇರಿ ಮಲ್ಲಪ್ಪತಾತನ ಪುರಾಣ, ಶ್ರೀ ಪ್ರಭಾನಂದ ಪಂಡಿತರು.

ಮಲ್ಲಪ್ಪತಾತನ ಜೀವನ ಮತ್ತು ಚರಿತ್ರೆ : ಕುಂ|| ಬಸಣ್ಣಶಾಸ್ತ್ರಿ

ಶರಣಾಂಬುಧಿ (ಸಂ) ಗಂಗಾಧರ ಪತ್ತಾರ, ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಬಳ್ಳಾರಿ

ಕ್ಷೇತ್ರಕಾರ್ಯ : ಅವಧೂತರನ್ನು ಕುರಿತು ಬಂದಿರುವ ಲಿಖಿತ ಆಕರಗಳಷ್ಟೇ ಮುಖ್ಯವಾದದ್ದು ಕ್ಷೇತ್ರಕಾರ್ಯ. ಇದರಲ್ಲಿ ಸಂದರ್ಶನ ಮತ್ತು ಅವಲೋಕನವನ್ನು ಮುಖ್ಯವಾಗಿ ಅಳವಡಿಸಿಕೊಳ್ಳಲಾಗಿದೆ.

"ಸಂಶೋಧಕ ತನ್ನ ಸಂಶೋಧನೆಗೆ ನೆರವಾಗುವ ವ್ಯಕ್ತಿಗಳನ್ನು, ಸ್ಥಳಗಳನ್ನು, ಪ್ರತ್ಯಕ್ಷವಾಗಿ ಸಂದರ್ಶಿಸಿ, ಮಾನವನ ಆಂತರಿಕ ಭಾವನೆಗಳನ್ನು, ಅವರ ನಂಬಿಕೆಗಳನ್ನು, ಅವರ ವೈಯುಕ್ತಿಕ ನಡವಳಿಕೆಯ ವಿಷಯಗಳನ್ನು ತಿಳಿದುಕೊಳ್ಳಲು ಸಾಧ್ಯವಾಗುತ್ತದೆ."[೪] ಈ ಹಿನ್ನೆಲೆಯಲ್ಲಿ ಅವಧೂತರುಗಳು ಹುಟ್ಟಿದ, ಅಲೆದಾಡಿದ, ನೆಲೆನಿಂತ ಸ್ಥಳಗಳಿಗೆ ಹೋಗಿ, ಅವರನ್ನು ನೋಡಿದವರನ್ನು, ಶಿಷ್ಯರನ್ನು, ಸಮಿತಿಯವರನ್ನು, ಭಕ್ತರನ್ನು ಸಂದರ್ಶಿಸಿ ಮಾಹಿತಿ ಸಂಗ್ರಹಿಸಲಾಗಿದೆ. ಹಾಗೆಯೇ ಅವಧೂತರ ಹೆಸರಿನಲ್ಲಿ ನಿರ್ಮಾಣವಾಗಿರುವ ಮಠಗಳಲ್ಲಿ ನಡೆಯುವ ಆಚರಣೆಗಳ ಬಗ್ಗೆ, ನಂಬಿದ ಭಕ್ತ ಸಮೂಹವನ್ನು ಭೇಟಿ ಮಾಡಿ ವಿಷಯ ಸಂಗ್ರಹಿಸಲಾಗಿದೆ. ಅವಧೂತರ ಬಗ್ಗೆ ಕೃತಿ ರಚಿಸಿರುವ ಲೇಖಕರಿದ್ದರೆ, ಅವರನ್ನು ಭೇಟಿ ಮಾಡಿ ಕೃತಿ ರಚನೆಯ ಹಿನ್ನೆಲೆ ಮತ್ತು ಕೃತಿಯ ವಸ್ತುವಿಗೆ ಸಂಬಂಧಿಸಿದಂತೆ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಈ ದಿಸೆಯಲ್ಲಿ ಕ್ಷೇತ್ರಕಾರ್ಯಕ್ಕೆ ಹೋಗು ವಾಗ ಚರ್ಚಿಸಬೇಕಾದ ವಿಷಯಗಳನ್ನು ಪೂರ್ವತಯಾರಿ ಮಾಡಿಕೊಂಡು ನಿಗದಿಪಡಿಸಿದ ದಿನಾಂಕದಂದು ಹೋಗಿ ಸಂದರ್ಶಿಸಲಾಗಿದೆ. ಚೇಳಗುರಿಕೆ, ದಮ್ಮೂರು, ಎಮ್ಮಿಗನೂರು, ಹಂಪಿ, ಹೊಸಪೇಟೆ, ಕೊಳಗಲ್ಲು, ಸಿಂಧಿಗೇರಿ, ತೆಕ್ಕಲಕೋಟೆ, ಬೈಲುಹೊದ್ದಿಗೆರೆ, ಹರಗಿನಡೋಣಿ, ಕಾಳಘಟ್ಟ ಮುಂತಾದ ಸ್ಥಳಗಳಲ್ಲಿರುವ ಅವಧೂತರ ಮಠಗಳಿಗೆ ಹೋಗಿ ವಿಷಯ ಸಂಗ್ರಹಿಸುವುದರ ಜೊತೆಗೆ, ಮಠಗಳಲ್ಲಿ ನಡೆಯುವ ಆಚರಣೆಗಳಲ್ಲಿ ಭಾಗಿಯಾಗಿ ಸಂಬಂಧಿಸಿದ ಛಾಯಾಚಿತ್ರಗಳನ್ನು ಸಂಗ್ರಹಿಸಲಾಗಿದೆ. "ಇಂಥ ಕ್ಷೇತ್ರಕಾರ್ಯದ ಮೂಲಕ ಆಕರ ಸಾಮಗ್ರಿ ಗಳನ್ನು ಸಂಗ್ರಹಿಸುವುದು ಸುಲಭವಲ್ಲದಿದ್ದರೂ, ಸಂಶೋಧಕನಿಗೆ ಅಂಥ ಆಕರಗಳು ಬಹುಮಹತ್ವದ್ದಾಗಿ, ಕಾಲಹರಣ, ಧನ ವ್ಯಯ, ಶ್ರಮದಾಯಕವಾಗಿದ್ದರೂ, ಸಂಶೋಧಕ ಕ್ಷೇತ್ರಕಾರ್ಯದ ಮೂಲಕ ಆಕರ ಸಾಮಗ್ರಿಗಳನ್ನು ಸಂಗ್ರಹಿಸುತ್ತಾನೆ."[೫] ಒಟ್ಟಾರೆಯಾಗಿ ವಿವಿಧ ಮೂಲಗಳಿಂದ ಸಂದರ್ಶನ ಮೂಲಕವೂ ಮಾಹಿತಿ ಸಂಗ್ರಹಿಸಲಾಗಿದೆ.

ಅವಲೋಕನ : ''ಅವಲೋಕನವೆಂದರೆ ಬಾಹ್ಯನೋಟಕ್ಕೆ ಕಾಣುವ ಕ್ರಿಯೆಯನ್ನು ವೀಕ್ಷಿಸುವುದಕ್ಕಿಂತ ಹೆಚ್ಚಾಗಿ ಅಂತಹ ಕ್ರಿಯೆಯ ಹಿಂದಿನ ನಿಗೂಢ ಅರ್ಥವನ್ನು ಗ್ರಹಿಸುವುದು.''[೬] ಅವಧೂತರು ಪರ್ಯಟನೆ ಮಾಡಿದ ಮತ್ತು ಸಮಾಧಿಯಾದ ಸ್ಥಳಗಳಲ್ಲಿ ವಿವಿಧ ರೀತಿಯ ಆಚರಣೆಗಳು ನಂಬಿಕೆಗಳು ಪ್ರಚಲಿತದಲ್ಲಿವೆ. ಪ್ರತಿಯೊಂದು ಆಚರಣೆ ಮತ್ತು ನಂಬಿಕೆಗಳಲ್ಲಿ ಅಡಗಿರುವ ಭಕ್ತ ಜನತೆಯ ಭಕ್ತಿ ಭಾವಗಳನ್ನು, ಅವುಗಳ ಹಿಂದಿರುವ ಸತ್ಯ ಸಂಗತಿಯನ್ನು ತಿಳಿದುಕೊಳ್ಳಲು ಅಂಥ ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ಪ್ರತಿಯೊಂದನ್ನು ಅವಲೋಕಿಸಿ ಫೋಟೋ ಸಹಿತ ಮಾಹಿತಿ ಸಂಗ್ರಹಿಸಲಾಗಿದೆ.

ಅಧ್ಯಯನದ ವ್ಯಾಪ್ತಿ : ಕ್ಷೇತ್ರಕಾರ್ಯದಲ್ಲಿ ಸಂಗ್ರಹಮಾಡಿದ ಆಕರಗ್ರಂಥಗಳು, ಜನವದಂತಿಗಳು ಮತ್ತು ವಕ್ತೃಗಳ ಮಾಹಿತಿಯನ್ನು ಬಳಸಿಕೊಂಡು ''ಬಳ್ಳಾರಿ ಜಿಲ್ಲೆಯ ಅವಧೂತರು'' ಎನ್ನುವ ಮಹಾಪ್ರಬಂಧವು ಏಳು ಅಧ್ಯಾಯವನ್ನೊಳಗೊಂಡಿದೆ. ಮೊದಲನೆ ಅಧ್ಯಾಯದಲ್ಲಿ 'ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ' ಯನ್ನು ತಿಳಿಸುವುದರ ಜೊತೆಗೆ, ಬಳ್ಳಾರಿ ಜಿಲ್ಲೆಯ ಪರಿಸರದಲ್ಲೆ ಹೆಚ್ಚಾಗಿ ಅವಧೂತ ಪರಂಪರೆ ಬೆಳೆಯಲು ಚಾರಿತ್ರಿಕ ಕಾರಣಗಳನ್ನು ಗುರುತಿಸಲಾಗಿದೆ.

ಎರಡನೆಯ ಅಧ್ಯಾಯದಲ್ಲಿ 'ಅವಧೂತ ಅರ್ಥ, ವ್ಯಾಖ್ಯಾನ, ಲಕ್ಷಣ'ಗಳನ್ನು ತಿಳಿಸುತ್ತಾ ಅವಧೂತ ಪದದ ನಿಷ್ಪತ್ತಿ ಮತ್ತು ವ್ಯಾಪ್ತಿಯ ವಿವರವಿದೆ. ಸಾಧಕನು ಅವಧೂತಸ್ಥಿತಿ ಮುಟ್ಟುವುದಕ್ಕಿಂತ ಪೂರ್ವದ ಸ್ಥಿತಿಯನ್ನು ಅದಕ್ಕೆ ಬೇಕಾದ ಸಾಧನಗಳನ್ನು, ಅವಧೂತಸ್ಥಿತಿಯ ಲಕ್ಷಣ ಮತ್ತು ಇತರೆ ಸ್ಥಿತಿಗಳನ್ನು ಪ್ರಾಚೀನ ಮತ್ತು ಇತ್ತೀಚಿನ ಕೃತಿಗಳನ್ನು ಆಧಾರವಾಗಿಟ್ಟುಕೊಂಡು ಚರ್ಚಿಸಲಾಗಿದೆ. ಅವಧೂತರುಗಳು ನೆಲೆ ನಿಂತ ಕ್ಷೇತ್ರದಲ್ಲಿ ದೇವರಾಗಿರುವುದಕ್ಕೆ ಕಾರಣ, ಅವರು ಮಾಡಿದರೆನ್ನಲಾದ ಪವಾಡಗಳು, ಪವಾಡಗಳ ಅರ್ಥ ಮತ್ತು ಅವುಗಳ ಸಾಧಕ, ಬಾಧಕಗಳನ್ನು ವಿಶ್ಲೇಷಿಸಲಾಗಿದೆ. ಅಧ್ಯಾಯದ ಕೊನೆಗೆ ಅವಧೂತರೊಂದಿಗೆ ಇತರೆ ಅನುಭಾವಿಗಳಾದ ಶರಣರು, ಸಂತರು, ಸೂಫಿಗಳು ಮತ್ತು ಆರೂಢರು ಇವರುಗಳಿಗಿರುವ ಸಂಬಂಧ ಮತ್ತು ವ್ಯತ್ಯಾಸಗಳನ್ನು ತೌಲನಿಕವಾಗಿ ವಿವೇಚಿಸಲಾಗಿದೆ. ಹಾಗೆಯೆ ಭಕ್ತಜನತೆಯಿಂದ ನಿತ್ಯ ಪೂಜಿಸಿ ಕೊಳ್ಳುತ್ತಿರುವ ಅವಧೂತನಿಂದ ಭಕ್ತರು ಮತ್ತು ಸಮಾಜಕ್ಕೆ ಆಗುವ ಪ್ರಯೋಜನವನ್ನು ತಿಳಿಸಲಾಗಿದೆ.

ಮೂರನೆಯ ಅಧ್ಯಾಯದಲ್ಲಿ 'ಕರ್ನಾಟಕದಲ್ಲಿ ಅವಧೂತ ಪರಂಪರೆ ಮತ್ತು ಸಮಕಾಲೀನ' ಪರಿಸರವನ್ನು ಅವಲೋಕಿಸಲಾಗಿದೆ. ಮಧ್ಯಕಾಲೀನ ಭಕ್ತಿ ಚಳುವಳಿಯ ಹಿನ್ನೆಲೆಯಲ್ಲಿ, ಶಿಷ್ಟಧರ್ಮಕ್ಕೆ ಪ್ರತಿಯಾಗಿ ವಿವಿಧ ಪಂಥಗಳು ಬೆಳೆದಿವೆ. ಅವುಗಳಲ್ಲಿ ೧೨ನೇ ಶತಮಾನದ ಶರಣರಲ್ಲಿದ್ದ ಆತ್ಮಲಿಂಗವಾದಿಗಳು, ನಂತರ ೧೫ನೇ ಶತಮಾನದ ಹಂಪಿ ಪರಿಸರದಲ್ಲಿದ್ದ ನೂರೊಂದು ವಿರಕ್ತರು ಮತ್ತು ಅನುಭಾವಿಗಳಿಂದ ರಚಿತವಾದ ಅನುಭಾವ ಸಾಹಿತ್ಯ ಅಥವಾ ಕೈವಲ್ಯ ಸಾಹಿತ್ಯದ ಹಿನ್ನೆಲೆಯಲ್ಲಿ ಅವಧೂತ ಪರಂಪರೆಯನ್ನು ನೋಡಲಾಗಿದೆ. ಬಳ್ಳಾರಿ ಪರಿಸರದಲ್ಲಿ ೧೮ ಮತ್ತು ೧೯ನೇ ಶತಮಾನದಲ್ಲಿ ಹೆಚ್ಚಿನ ಸಂಖ್ಯೆಯ ಅವಧೂತರು ಅವತರಿಸಿದ್ದು, ಅದಕ್ಕೆ ಹಿನ್ನಲೆಯಾಗಿ ಹಂಪಿ ಪರಿಸರವನ್ನಿಟ್ಟುಕೊಂಡು ಅವಧೂತ ಪರಂಪರೆಯನ್ನು ಅವಲೋಕಿಸಲಾಗಿದೆ. ಇದೇ ಕಾಲದಲ್ಲಿ ಅವತರಿಸಿದ ಇತರೆ ಪ್ರದೇಶಗಳ ಅನುಭಾವಿಗಳನ್ನು ಸಹ ಅಧ್ಯಯನದಲ್ಲಿ ಗಮನಿಸಲಾಗಿದೆ.

'ಬಳ್ಳಾರಿ ಜಿಲ್ಲೆಯ ಅವಧೂತರು' ಎಂಬ ನಾಲ್ಕನೆಯ ಅಧ್ಯಾಯದಲ್ಲಿ ಅವಧೂತರ ಜೀವನ ಚರಿತ್ರೆ ಯನ್ನು ನಿರೂಪಿಸಲಾಗಿದೆ. ಅವಧೂತರ ಬದುಕು, ಸಾಧನೆ, ಜನತೆಗೆ ನೀಡಿದ ಸಂದೇಶಗಳನ್ನು, ಲಿಖಿತ

ಮತ್ತು ಮೌಖಿಕ ಆಧಾರಗಳಿಂದ ಕಟ್ಟಿಕೊಡಲಾಗಿದೆ. ಚೇಳಗುರಿಕೆ ಎರ್ರಿತಾತ, ದಮ್ಮೂರು ವೆಂಕಾವಧೂತ, ಹಂಪಿ ಶಿವರಾಮವಧೂತ, ಎಮ್ಮಿಗನೂರು ಜಡೇತಾತ, ಕೊಳಗಲ್ಲು ಎರ್ರಿಬಸವತಾತ, ಹೇರೂರು ವಿರುಪಾವ ಧೂತ, ಬುಗ್ಗಪ್ಪತಾತ, ಕೆಂಪಾವಧೂತ, ರುದ್ರಾವಧೂತ ಮುಂತಾದ ಅವಧೂತರ ಜನ್ಮಸ್ಥಳ, ಬಾಲ್ಯಲೀಲೆ, ವಿದ್ಯಾಭ್ಯಾಸ, ಸಂಸಾರ, ವೈರಾಗ್ಯ, ಗುರುಶೋಧ, ಗುರು ಅನುಗ್ರಹ, ಗುರೂಪದೇಶ, ಯೋಗ, ಸಾಧನೆಯ ಸಿದ್ಧಿ, ಅವಧೂತ ಸ್ಥಿತಿ, ಪವಾಡಗಳು ಮತ್ತು ಸಮಾಧಿಸ್ಥಿತಿ ಹೀಗೆ ಅವರುಗಳ ಜೀವನದ ಪ್ರಮುಖ ಘಟನೆಗಳನ್ನು ಆಕರಗ್ರಂಥ ಮತ್ತು ಕ್ಷೇತ್ರಕಾರ್ಯದಲ್ಲಿ ಸಂಗ್ರಹಿಸಿದ ಮಾಹಿತಿಗಳಿಂದ ನಿರೂಪಿಸಲಾಗಿದೆ.

ಐದನೆಯ ಅಧ್ಯಾಯವು ಅವಧೂತರನ್ನು ಕುರಿತು ಬಂದಿರುವ ಸಾಹಿತ್ಯ ಚರ್ಚೆಗೆ ಮೀಸಲಾಗಿದೆ. ಕವಿಗಳಲ್ಲದ ಅವಧೂತರು ಸಾಹಿತ್ಯ ರಚಿಸಿದವರಲ್ಲ. ಆದರೆ ಅವರನ್ನು ಕುರಿತು ಪುರಾಣ, ಚರಿತ್ರೆ, ನಾಟಕ, ಭಕ್ತಿಗೀತೆ, ಸುಪ್ರಭಾತ, ನಾಮಾವಳಿ ಹೀಗೆ ಸಾಹಿತ್ಯದ ವಿವಿಧ ಪ್ರಕಾರಗಳ ಕೃತಿಗಳು ರಚನೆಯಾಗಿವೆ. ಇವುಗಳ ವಸ್ತು, ವಿನ್ಯಾಸ, ಭಾಷೆ, ಶೈಲಿ ಮತ್ತು ನಿರೂಪಣೆಯ ಬಗ್ಗೆ ವಿವೇಚಿಸುವುದರ ಜೊತೆಗೆ ಕೃತಿ ರಚನೆಯ ಹಿನ್ನೆಲೆ ಮತ್ತು ಕೃತಿಯ ಮಹತ್ವವನ್ನು ಹೇಳಲಾಗಿದೆ. ಅವಧೂತರುಗಳನ್ನು ಕುರಿತು ಹೆಚ್ಚಾಗಿ ಪುರಾಣಗಳೆ ರಚನೆಯಾಗಿರುವುದರಿಂದ, ಪುರಾಣ ಪರಂಪರೆಯನ್ನೂ ಸ್ಥೂಲವಾಗಿ ಈ ಅಧ್ಯಾಯದಲ್ಲಿ ನೀಡಲಾಗಿದೆ.

ಆಚರಣೆಗಳು ಮತ್ತು ನಂಬಿಕೆಗಳ ಬಗ್ಗೆ ಆರನೆಯ ಅಧ್ಯಾಯದಲ್ಲಿ ವಿವರಿಸಲಾಗಿದೆ. ಇಂದು ಪ್ರತಿ ಅವಧೂತರ ಮಠದಲ್ಲಿ ವಿವಿಧ ರೀತಿಯ ಆಚರಣೆಗಳು, ಸಂಪ್ರದಾಯಗಳು ನಡೆಯುತ್ತಿವೆ. ನಾಡಿನ ವಿಶೇಷ ದಿನಗಳಲ್ಲಿ ಮತ್ತು ಅವಧೂತರ ಪುಣ್ಯತಿಥಿಯಂದು ವಿಶೇಷ ಪೂಜೆಗಳು, ಜಾತ್ರೆ, ಉತ್ಸವಗಳು ನಡೆಯುತ್ತಿವೆ. ಅವುಗಳ ಮಾಹಿತಿ ನೀಡುವುದರ ಜೊತೆಗೆ ಅವಧೂತರುಗಳ ಸಮಾಧಿಯನ್ನು, ಮಠವನ್ನು ನಂಬಿ ಜೀವನ ಸಾಗಿಸುತ್ತಿರುವ ಭಕ್ತ ಜನತೆಯ ನಂಬಿಕೆಗಳನ್ನು ವಿಶ್ಲೇಷಿಸಲಾಗಿದೆ. ಇದೇ ಭಾಗದಲ್ಲಿ ಅವಧೂತರು ಮಾಡಿದರೆನ್ನಲಾದ ಪವಾಡಗಳನ್ನು, ಅವುಗಳ ಹಿಂದಿನ ಆಶಯವನ್ನು ಚರ್ಚಿಸಲಾಗಿದೆ.

ಕೊನೆಯದಾಗಿ ಸಮಾರೋಪದಲ್ಲಿ ಅವಧೂತರು ಮತ್ತು ಅವರ ಮೌಲ್ಯಗಳು, ಸಂದೇಶಗಳು ಇಂದು ಎಷ್ಟು ಪ್ರಸ್ತುತ ಎನ್ನುವುದನ್ನು ವಿವೇಚಿಸಲಾಗಿದೆ.

ಕ್ಷೇತ್ರಕಾರ್ಯದಲ್ಲಿ ಸಂದರ್ಶಿಸಿದ ವ್ಯಕ್ತಿಗಳ ಪರಿಚಯವಿದ್ದು, ಕೊನೆಗೆ ಗ್ರಂಥಸೂಚಿ ಹಾಗೂ ಛಾಯಾಚಿತ್ರಗಳ ಮಾಹಿತಿ ಅನುಬಂಧದಲ್ಲಿ ಅಳವಡಿಸಲಾಗಿದೆ.

ಕೊನೆ ಟಿಪ್ಪಣಿಗಳು

೧. ಡಾ.ಬಸವಲಿಂಗ ಸೊಪ್ಪಿನಮಠ, ಕೊಡೇಕಲ್ಲು ವಚನವಾಕ್ಯ, ಪ್ರಸ್ತಾವನೆ, ಪುಟ-೫

೨. ಡಾ.ಶಿವಾನಂದ ವಿರಕ್ತಮಠ, ಪ್ರೌಢದೇವರಾಯನ ಕಾಲದ ಕನ್ನಡ ಸಾಹಿತ್ಯ, ಪುಟ-೧೦೫

೩. ಅಮರೇಶ ನುಗಡೋಣಿ, ಹೈದರಬಾದು ಕರ್ನಾಟಕದ ಹಾಡು ಪಾಡು, ಪುಟ-೩೧

೪. ಡಾ.ಬಿ.ವ್ಹಿ.ಶಿರೂರ, ಸಂಶೋಧನಾ ಸ್ವರೂಪ, ಪುಟ-೧೦೬

೫. ಡಾ.ಸಂಗಮೇಶ ಸವದತ್ತಿಮಠ, ಸಾಹಿತ್ಯ ಸಂಶೋಧನಾಮಾರ್ಗ, ಪುಟ-೮೧

೬. ಡಾ.ಬಿ.ವ್ಹಿ.ಶಿರೂರ ಸಂಶೋಧನಾ ಸ್ವರೂಪ, ಪುಟ-೧೧೩

ಅಧ್ಯಾಯ ಎರಡು

ಅವಧೂತ : ಅರ್ಥ ಮತ್ತು ಲಕ್ಷಣಗಳು

ಅಧ್ಯಾಯ ಎರಡು

ಅವಧೂತ : ಅರ್ಥ ಮತ್ತು ಲಕ್ಷಣಗಳು

ಆಧ್ಯಾತ್ಮಿಕ ಜೀವನವೇ ಭಾರತದ ಸಹಜ ಪ್ರವೃತ್ತಿ. ಈ ದೇಶದ ಪ್ರತಿಯೊಂದು ಭಾಗದಲ್ಲಿಯೂ, ಪ್ರತಿ ತಲೆಮಾರಿನಲ್ಲಿಯೂ, ಅತ್ಯುತ್ತಮರಾದ, ಅತಿಪವಿತ್ರರಾದ, ಆಧ್ಯಾತ್ಮಯೋಗಿಗಳು ಇದ್ದರೆಂಬುದು ಚರಿತ್ರೆಯಿಂದ ತಿಳಿದುಬರುತ್ತದೆ. ಇವರು ಜನತೆಯ ಅಜ್ಞಾನ, ಅಂಧಕಾರವನ್ನು ಕಳೆದು, ಜ್ಞಾನದ ಬೆಳಕನ್ನು ಬೆಳಗಿದ ಭವರೋಗ ವೈದ್ಯರಾಗಿದ್ದಾರೆ. ಸಮಾಜದ ಎಲ್ಲಾ ವರ್ಗದವರನ್ನು ಸಮಾನವಾಗಿ ನೋಡಿ, ಕಾಪಾಡಿ, ಲೋಕೋಪಕಾರಕ್ಕಾಗಿ ತಮ್ಮ ಸರ್ವಸ್ವವನ್ನು ತ್ಯಾಗ ಮಾಡಿದ್ದಾರೆ.

ಬದುಕಿನ ಸಂಘರ್ಷದಿಂದ ದೂರವಾಗಿದ್ದ ಇವರು, ಆಧ್ಯಾತ್ಮಿಕ ಶಕ್ತಿಯನ್ನು, ತಮ್ಮ ಸಾಧನೆಯ ಸಿದ್ಧಿಯಿಂದ ಪಡೆದುಕೊಂಡಿರುತ್ತಾರೆ. ಅಧಿಕಾರ, ಅಹಂಕಾರ, ಐಶ್ವರ್ಯ, ವೈಭವ, ಸಂಸಾರ, ಮೋಹ, ಇವೆಲ್ಲವುಗಳನ್ನು ತ್ಯಜಿಸಿ, ವೈರಾಗ್ಯ ತಾಳಿ, ಲೌಕಿಕ ಬಂಧನದಿಂದ ಸಂಪೂರ್ಣ ಬಿಡುಗಡೆ ಹೊಂದಿರುತ್ತಾರೆ. ಏಕಾಂಗಿಯಾಗಿ ಊರೂರು ಅಲೆದಾಡುವುದು ಇವರ ವಿಶೇಷ ಗುಣವಾಗಿದ್ದು, ಬೆಟ್ಟ, ಗುಡ್ಡಗಳಲ್ಲಿ ಯೋಗ ಸಾಧನೆ ಮಾಡಿ ಅವ್ಯಕ್ತ ಶಕ್ತಿಯನ್ನು ಪಡೆದಿರುತ್ತಾರೆ. ಮುಂದೆ ಮೋಕ್ಷ ಕಾಣಲು ಗುರುಗಳನ್ನು ಹುಡುಕುತ್ತಾ, ಗುರು ದೊರೆತ ಮೇಲೆ ಗುರುಕೃಪೆ ಮತ್ತು ಗುರೂಪದೇಶ ಪಡೆದು ಜೀವನ್ಮುಕ್ತ ಸ್ಥಿತಿಯನ್ನು ಪಡೆದಿರುತ್ತಾರೆ. ಆಗ ಜ್ಞಾನ-ಸನ್ಯಾಸಿಗಳಾಗಿ, ಸದ್ಗುರುಗಳಾಗಿ, ವಿಭೂತಿಪುರುಷರಾಗಿ, ಅನೇಕ ಅದ್ಭುತ ಅತ್ಯಾಶ್ಚರ್ಯಭರಿತವಾದ, ಊಹಾತೀತವಾದ ಪವಾಡಗಳನ್ನು ಸಹಜವಾಗಿಯೇ ತೋರಿದ್ದಾರೆ. ಇಂಥವರನ್ನು ಜೀವನ್ಮುಕ್ತ, ಪರಬ್ರಹ್ಮ, ಪರಮಹಂಸ, ಪರಮಾರೂಢ, ಅವಧೂತರೆಂದೂ ಕರೆಯಲಾಗಿದೆ.

ಅವಧೂತ ಸ್ಥಿತಿ ತಲುಪಿದವರು ಜಾತಿ, ಮತ, ಪಂಥಗಳೆನ್ನದೆ, ಸರ್ವಜನರಿಂದ, ಸರ್ವವರ್ಗದವರಿಂದ, ಸರ್ವ ಧರ್ಮದವರಿಂದ ಭಕ್ತಿ ಪೂರ್ವಕ ಗೌರವ ಮನ್ನಣೆ ಪಡೆದು, ಸಮಾಜಕ್ಕೆ ಕೋಮು ಸೌಹಾರ್ದತೆಯನ್ನು, ಭಾವೈಕ್ಯತೆಯನ್ನು ಸಾರಿದ್ದಾರೆ. ತಮ್ಮನ್ನು ನಂಬಿದ್ದ ಭಕ್ತರ ವೈಯಕ್ತಿಕ ಹಾಗೂ ಸಮುದಾಯಿಕ ಜೀವನದಲ್ಲಿ ಎದುರಾಗುವ ಕಷ್ಟ-ನಷ್ಟಗಳಿಗೆ, ಸಮಸ್ಯೆಗಳಿಗೆ ಪರಿಹಾರ ನೀಡಿರುತ್ತಾರೆ.

೨. ೧. 'ಅವಧೂತ' ಪದದ ನಿಷ್ಪತ್ತಿ, ಅರ್ಥ, ವ್ಯಾಪ್ತಿ

'ಅವಧೂತ' ಎಂಬುದು ಸಮಸ್ಕ್ರುತ ಪದವಾಗಿದ್ದು, ಅವ ಮತ್ತು ಧೂತ ಎಂಬ ಎರಡು ಘಟಕಗಳ ಸಂಯುಕ್ತ ರೂಪದಲ್ಲಿದೆ.

'ಅವ' (ರಕ್ಷಣೇ) ಎಂಬ ಧಾತುವಿದೆ. ಇಲ್ಲಿ ಅವ ಎಂದರೆ 'ರಕ್ಷಣೆ' ಎಂದರ್ಥ.

'ಅವ' ಎಂಬುದು ಅವ್ಯಯವೆಂದು ಪರಿಗಣಿಸಿದಾಗ ಆಲಂಬನ/ಆಶ್ರಯವೆಂಬರ್ಥ ಹೊರಡುತ್ತದೆ.

'ಧೂತ' ಎಂಬುದು 'ಧೂಞ' ಕಂಪನೇ ಎಂಬ ಧಾತುವಿನಿಂದ ಬಂದಿದ್ದು, ಇದಕ್ಕೆ ತ್ಯಜಿಸು ಎಂಬರ್ಥವಿದೆ.

('ತ್ಯಕ್ತಂ ಹೀನಂ ವಿಧುತಂ ಸಮುಜ್ಝಿತಂ ಧೂತಮುತ್ಸೃಷ್ಟಂ' -ಅಮರ ಕೋಶ)

ಈ ಪದಗಳ ಅರ್ಥ ವೈವಿಧ್ಯದಿಂದಾಗಿ ವಿವಿಧ ವ್ಯಾಖ್ಯಾನಗಳು ಕಂಡುಬರುತ್ತವೆ.

I. 'ಅವ' ರಕ್ಷಣೇ ಎಂದು ಅರ್ಥವಾದಾಗ -

ವಿಗ್ರಹಾರ್ಥ : "ಯೇನ ಆತ್ಮನಃ ಆತ್ಮೀಯಸ್ಯಚ ಅವನಂ ರಕ್ಷಣಂಧೂತಂ ತ್ಯಕ್ತಂ, ಸ ಅವಧೂತಃ॥" (ಅಂದರೆ ಯಾರು ತನ್ನ, ತನ್ನವರ ರಕ್ಷಣೆಯ ಪ್ರಯತ್ನವನ್ನು ತೊರೆಯುತ್ತಾನೆಯೋ ಅವನೇ ಅವಧೂತ)

ಸಮಾಸಾರ್ಥ : "ಆತ್ಮಾತೀಯ ರಕ್ಷಣ ವಿಷಯೇ ಫಲಮುದ್ದಿಶ್ಯ ಅಭಿಮಾನಿಕ ಕಾರ್ಯಪ್ರವೃತ್ತಿ ರಹಿತಃ॥" (ಅಂದರೆ ತಾನು ತನ್ನವರ ರಕ್ಷಣೆಯ ವಿಷಯದಲ್ಲಿ ಪ್ರಯೋಜನದ ಅಪೇಕ್ಷೆಯಿಂದ ಅಭಿಮಾನಪೂರ್ವಕವಾಗಿ ಕಾರ್ಯದಲ್ಲಿ ತೊಡಗದಿರುವವನೇ ಅವಧೂತ).

II. 'ಅವ' ಆಲಂಬನ/ಆಶ್ರಯ ಎಂದಾಗ -

"ಸ್ವಾಭಿಮತಂ ಸ್ವಾಪೇಕ್ಷಿತಂ ವಾ ಆಲಂಬನಂ ಆಶ್ರಯಂ ವಾ ಉದ್ದಿಸ್ಯ ಫಲ, ಫಲ ಪ್ರಯೋಜಕ ಪ್ರಯತ್ನಾದಿ ಪ್ರವೃತ್ತಿ ರಹಿತಃ॥" (ಅಂದರೆ ತನಗೆ ಸಮ್ಮತವಾದ, ತಾನೇ ಬಯಸಿದ ಆಶ್ರಯವನ್ನು ಉದ್ದೇಶಿಸಿ, ಫಲಕ್ಕಾಗಿ ಮಾಡುವ ಪ್ರಯತ್ನ ಯಾರಲ್ಲಿ ಇಲ್ಲವೋ ಅವನೇ ಅವಧೂತ).

ಅರ್ಥ :

'ಅವಧೂತ' ಪದಕ್ಕೆ ವಿವಿಧ ಅರ್ಥಗಳಿದ್ದು ಅವುಗಳನ್ನು ಹೀಗೆ ಕ್ರೋಢಿಕರಿಸಲಾಗಿದೆ.

೧. ಸನ್ಯಾಸಿ, ಬೈರಾಗಿ, ಜಗತ್ತಿನ ಸಂಬಂಧವನ್ನು ತ್ಯಜಿಸಿದ ವಿರಕ್ತ. ವರ್ಣಾಶ್ರಮ ಧರ್ಮಗಳನ್ನು ತ್ಯಜಿಸಿ ಪರಮಾತ್ಮ ಧ್ಯಾನಾಸಕ್ತನಾದ ಒಬ್ಬ ಯೋಗಿ.[೧]

೨. ತಳ್ಳಲ್ಪಟ್ಟ, ಎಲ್ಲಾ ಬಗೆಯ ಅಭಿಮಾನವನ್ನು ತಳ್ಳಿಹಾಕಿದವನು. ವಿರಕ್ತರಲ್ಲಿ ಒಂದು ವಿಶೇಷ ಪ್ರಭೇದ.[೨]

೩. ಅಪಮಾನಿಸಲ್ಪಟ್ಟ, ಅಲ್ಲಾಡಿಸಲ್ಪಟ್ಟ, ಕುಲುಕಲ್ಪಟ್ಟ, ವಿರಕ್ತ.[೩]

೪. Separated from worldly feeling and obligations ಎಲ್ಲಾ ಬಿಟ್ಟವನು, A Virakta[೪]

೫. ಸರ್ವಸ್ವವನ್ನು ಬಿಟ್ಟವ.[೫]

೬. ಯಾವ ನಿಯಮಗಳೂ ಇಲ್ಲದ ಸನ್ಯಾಸಿಗಳು. (ಇವರು ನೈತಿಕ ಪಾಪಗಳನ್ನು ಮಾಡಿದವರನ್ನು

ಬಿಟ್ಟು ಉಳಿದೆಲ್ಲರಿಂದಲೂ ಆಹಾರ ಸ್ವೀಕರಿಸುತ್ತಾರೆ. ಸದಾ ಆತ್ಮನಲ್ಲಿಯೇ ಇರುತ್ತಾರೆ. ಅಜಗರದಂತೆ ಮಲಗಿ ಆಹಾರ ಸ್ವೀಕರಿಸುತ್ತಾರೆ.) ಸಮಸ್ತ ಬಂಧನಗಳನ್ನು ಕೊಡವಿ ಹಾಕಿದವನು. ಅತಿವರ್ಣಾಶ್ರಮಿಯಾದ ಸನ್ಯಾಸಿ.[೬]

ವ್ಯಾಪ್ತಿ : ಅವಧೂತನೆಂದರೆ ಪ್ರಾಪಂಚಿಕ ವಿಷಯವಾಸನೆಗಳಿಂದಲೂ, ತನ್ನಿಮ್ಮಿತ್ತಾಗತ ಬಂಧನಗಳಿಂದಲೂ ಮುಕ್ತನಾದವನು ಎಂದು ತಿಳಿಯುತ್ತೇವೆ. ಮುಖ್ಯವಾಗಿ 'ಅವಧೂತ' ಎಂಬುದು ಪಾರಿಭಾಷಿಕ ಪದವಾದರೂ, ಇದೇ ಮಾರ್ಗದ ಇತರ ಹಂತಗಳ ಸಾಧಕರಾದ ಮೌನಿ, ಯತಿ, ಪರಿವ್ರಾಜಕ, ಸನ್ಯಾಸಿ, ಯೋಗಿ, ಅತಿವರ್ಣಾಶ್ರಮಿಮುಂತಾದ ಸಾಧಕರೊಂದಿಗಿನ ಸಾದೃಶ್ಯ ವೈದೃಶ್ಯಗಳನ್ನು ಗುರುತಿಸಬೇಕಾಗುತ್ತದೆ.

ಮೌನಿ : (ಮುನಿ) ಮನು ಅವಬೋಧನೆ ಎಂಬ ಧಾತುವಿನಿಂದ ಹುಟ್ಟಿದೆ. ಅಂದರೆ ಜ್ಞಾನಿಯಾಗಿದ್ದು, ತತ್ತ್ವ ಚಿಂತನೆಗೆ ಪ್ರಾಧಾನ್ಯತೆ ಕೊಟ್ಟ ವ್ಯಕ್ತಿ. ತತ್ತ್ವ ವಿಚಾರವನ್ನು ಕುರಿತು ಒಮ್ಮೆಯೂ ಮಾತನಾಡದೆ ಆತ್ಮಸುಖದಲ್ಲಿರುವವನು. ತನ್ನ ಆತ್ಮನಾದ ಬ್ರಹ್ಮವು ಮಾತಿಗೆ ನಿಲುಕುವುದಿಲ್ಲವೆಂದು ಅರಿತು ಅವಧೂತ ಮೌನಿಯಾಗಿರುತ್ತಾನೆ. ಆದರೆ ಮೌನಿಗಳೆಲ್ಲರೂ ಅವಧೂತರಲ್ಲ. ಮಾತನಾಡುವುದನ್ನು ಬಿಡುವುದೂ ಮೌನವಲ್ಲ. ಅದು ಸಾಧನೆಯ ಸಿದ್ಧಿಯಿಂದ ಲಭಿಸುವಂತದ್ದು.

ಯತಿ : 'ಯತಃ ನಿಗ್ರಹೇ' ಅಂದರೆ ಇಂದ್ರಿಯ ನಿಗ್ರಹವುಳ್ಳ ವ್ಯಕ್ತಿ. ಅವಧೂತನು ಯತಿಯಾಗಿದ್ದು, ಅವನ ಆಚರಣೆಗಳು ಲೋಕಾಭಿರಾಮಕ್ಕೆ ವ್ಯತಿರಿಕ್ತವಾಗಿರುವುದರ ಜೊತೆಗೆ ಹಠಯೋಗಕ್ಕೆ ಸಮೀಪವುಳ್ಳವನಾಗಿರುತ್ತಾನೆ.

ಪರಿವ್ರಾಜಕ : ಪರಿ ಎಂದರೆ ಸುತ್ತಲೂ, ವ್ರಾಜಕ ಎಂದರೆ ಸಂಚರಿಸುವವ. ಅಂದರೆ ಸದಾ ಸಂಚರಿಸುತ್ತಲೇ ಇರುವವನು. ಒಂದರ್ಥದಲ್ಲಿ ಅವಧೂತ ಎಲ್ಲೋ ಹುಟ್ಟಿ, ಎಲ್ಲೋ ಬೆಳೆದು, ಇನ್ನೆಲ್ಲಿಯೋ ನೆಲೆ ನಿಂತಿರುತ್ತಾನೆ.

ಸನ್ಯಾಸಿ : ಆತ್ಮಚಿಂತನೆಗೆ ಪ್ರತಿಬಂಧಕವಾಗಬಹುದಾದಂತಹ ಯೋಗ (ಉಪಾಯ) ಭೋಗಗಳನ್ನು ಮನಸಾ ತ್ಯಾಗ ಮಾಡಿದವನು. 'ಸಮ್ಯಕ್‌ನ್ಯಾಸ ಸನ್ಯಾಸಃ' ಇಲ್ಲಿ ನ್ಯಾಸ ಎಂದರೆ ತ್ಯಾಗ, ಮತ್ತೊಂದು ಅರ್ಥದಲ್ಲಿ ನ್ಯಾಸ ಎಂದರೆ ಅರ್ಪಣ ಎಂದಾಗುತ್ತದೆ. ಅಂದರೆ ಫಲಗಳನ್ನು ಸಕಲ ಕರ್ಮಗಳನ್ನು ಪರಮಾತ್ಮನಿಗೆ ಅರ್ಪಿಸುವವನು ಸನ್ಯಾಸಿ.

ಪರಮಹಂಸ : ಸರ್ವ ಕರ್ಮ ಸನ್ಯಾಸ ಮಾಡಿ, ಆತ್ಮನಿಷ್ಠರಾಗಿರುವ ಶ್ರೇಷ್ಠ ಸನ್ಯಾಸಿಗಳು.

ಯೋಗಿ : "ಯೋಗ ಶಾಸ್ತ್ರಾನುಗುಣವಾದ ಯಮ-ನಿಯಮಾದಿ ಅನುಷ್ಠಾತಾ" ಏಕಾಂಗಿಯಾಗಿ, ಇಂದ್ರಿಯ ಮನಸ್ಸುಗಳನ್ನು ವಶಪಡಿಸಿಕೊಂಡು, ಏನನ್ನೂ ಬಯಸದೆ, ತನ್ನದೆಂಬುದು ಏನೂ ಇಲ್ಲದೆ ಯೋಗಶಾಸ್ತ್ರಕ್ಕನುಗುಣವಾಗಿ ಯಮ-ನಿಯಮಾದಿಗಳನ್ನು ಪಾಲಿಸುವವನು. ಈತನಿಗೆ ಕೊಲೆ, ಹೊಲೆ, ವಿಧಿ ನಿಷೇಧಗಳಿಲ್ಲ. ಈತನಿಗೆ ವಂದಿಸಿದರೆ ಪುಣ್ಯ, ನಿಂದಿಸಿದರೆ ಪಾಪ. ಈತ ಗುರುಭಕ್ತನಾಗಿ, ನಿರ್ವಿಷಯನಾಗಿ, ಕೋಪವಿರಹಿಯಾಗಿ, ಬ್ರಹ್ಮಧ್ಯಾನಪರನಾಗಿರುತ್ತಾನೆ.

ತುರ್ಯಾತೀತ : ನಾಲ್ಕನೆಯ ಅವಸ್ಥೆಯನ್ನು ಮೀರಿದವನು. ದೇಹದೊಡನೆ ಕೂಡಿದ್ದರೂ ನಿರ್ಲೇಪನಾಗಿರುವವನು. ತನ್ನ ದೇಹದ ಸ್ಥಿತಿ-ಗತಿಯ ಕುರಿತು ಗಮನ ಕೊಡದವನು. ಉಟ್ಟಬಟ್ಟೆಯ ಮೇಲೆ ಎಚ್ಚರವಿಲ್ಲದವನು.

ಒಟ್ಟಿನಲ್ಲಿ ಆತ್ಮಚಿಂತನಾರೂಪವಾದ ಜ್ಞಾನದಿಂದ ಅರಿವಿಲ್ಲದೆ ಎಲ್ಲವನ್ನು ಉಲ್ಲಂಘನೆ ಮಾಡಿದ ಅವಧೂತನು ಯತಿ, ಸನ್ಯಾಸಿ, ಯೋಗಿ, ಮುನಿ ಪರಿವ್ರಾಜಕ, ಪರಮಹಂಸ, ತುರ್ಯಾತೀತ ಇತ್ಯಾದಿ ಲಕ್ಷಣಗಳನ್ನು ಒಳಗೊಂಡಿರುತ್ತಾನೆ.

ಅವಧೂತನಾಗಲು ಕಾರಣಗಳು

೧. ಪ್ರಬಲ ಸಂಸ್ಕಾರದಿಂದ : ಇದು ಹುಟ್ಟಿನಿಂದಲೇ ಬಂದಿರುತ್ತದೆ. ಏಕಾಂಗಿತನ, ಮೌನ, ಲೋಕದ ಪರಿವೇ ಇಲ್ಲದಿರುವುದು.

೨. ಅಧ್ಯಯನಾದಿಗಳಿಂದ : ಆಧ್ಯಾತ್ಮಿಕ ಶಾಸ್ತ್ರ, ಪುರಾಣಗ್ರಂಥಗಳ ಸತತ ಅಧ್ಯಯನದಿಂದ.

೩. ಜೀವನದ ಜಿಗುಪ್ಸೆಯಿಂದ : ಬಡತನ, ಸಂಸಾರದ ಹೊಣೆ ಹೊರಲು ಅಸಹಾಯಕತೆ, ನಿಂದನೆಯ ಮಾತುಗಳು, ಇವುಗಳಿಂದ ವೈರಾಗ್ಯ ಮೂಡಿ ಜೀವನದಲ್ಲಿ ಜಿಗುಪ್ಸೆ ಹೊಂದುವುದು.

೪. ಮೇಲಿನ ಎಲ್ಲಾ ಕಾರಣಗಳಿದ್ದರೂ, ಪ್ರಬಲ ಗುರುವಿನ ಅನುಗ್ರಹ ಮತ್ತು ಗುರೂಪದೇಶವು ಅವಧೂತನಾಗಲು ಮುಖ್ಯ ಕಾರಣವಾಗಿರುತ್ತದೆ.

೨. ೨. ಅವಧೂತ ಪೂರ್ವಸ್ಥಿತಿ

ಸಾಧು, ಸನ್ಯಾಸಿ, ಮುನಿ ಮುಂತಾದ ಸರ್ವಸ್ಥಿತಿಗಳಿಗೂ ಶ್ರೇಷ್ಠವಾದ ಅವಧೂತ ಸ್ಥಿತಿ ತಲುಪುವ ಮೊದಲು, ಸಾಧಕನು ಪೂರ್ವಭಾವಿಯಾಗಿ ಮಾನಸಿಕ ಮತ್ತು ದೈಹಿಕ ಬದಲಾವಣೆಯನ್ನು ಪಡೆದಿರಬೇಕು. ಅವಧೂತ ಪೂರ್ವಸ್ಥಿತಿಯ ಬಗ್ಗೆ ಯೋಗಶಾಸ್ತ್ರ ಮತ್ತು ಇದೇ ಮಾರ್ಗದಲ್ಲಿ ನಡೆದ ಮಾಹಾನುಭಾವಿಗಳ ಹೇಳಿಕೆಗಳು ಮಹಾಪ್ರಬಂಧದ ಪೂರ್ಣತೆಗೆ ಅಗತ್ಯವೆಂದು ತಿಳಿದು, ಅವುಗಳನ್ನು ಆಧಾರವಾಗಿಟ್ಟುಕೊಂಡು ಚರ್ಚಿಸಲಾಗಿದೆ. ಸಾಧಕನ ಆರಂಭದಿಂದ ಅಂತ್ಯದವರೆಗಿನ ಹಂತಗಳು ಈ ರೀತಿಯಲ್ಲಿವೆ.

೧. ವೈರಾಗ್ಯವನ್ನೊಳಗೊಂಡ ಸಾಧನ ಚತುಷ್ಟಯಗಳು ಮತ್ತು ಅದರ ಐದು ಉಪಸಾಧನಗಳು.

೨. ಯೋಗ ಮತ್ತು ಯೋಗ ಸಾಧನೆಗಳು. ಹಠಯೋಗ, ರಾಜಯೋಗ, ಸಮಾಧಿಯೋಗ.

೩. ಗುರುಶೋಧ, ಗುರುಸೇವೆ, ಗುರೂಪದೇಶ.

೪. ಅದ್ವೈತ ಭಾವನೆ, ಆತ್ಮಜ್ಞಾನ.

ಜೀವನದಲ್ಲಿ ಜಿಗುಪ್ಸೆ ಬಂದು, ವೈರಾಗ್ಯ ತಾಳಿ, ಪ್ರಾಪಂಚಿಕ ವ್ಯಾಮೋಹದಿಂದ ದೂರ ಉಳಿದ ವಿರಕ್ತನು, ಗುರುವಿನ ಸಾನಿಧ್ಯ ಸೇರುವ ಪೂರ್ವದಲ್ಲಿ ಮತ್ತು ಯೋಗಾಭ್ಯಾಸಕ್ಕಿಂತ ಮೊದಲು, ಯೋಗಶಾಸ್ತ್ರದಲ್ಲಿ ಹೇಳಿರುವ ಸಾಧನ ಚತುಷ್ಟಯಗಳು ಮತ್ತು ಐದು ಉಪಸಾಧನೆಗಳನ್ನು ಅಳವಡಿಸಿಕೊಂಡಿರಬೇಕೆಂದು ಚಿದಾನಂದವಧೂತರು ಜ್ಞಾನಸಿಂಧುವಿನಲ್ಲಿ ಹೇಳಿರುತ್ತಾರೆ.

ಸಾಧನ ಚತುಷ್ಟಯಗಳು

೧. ವಿರಕ್ತ (ವೈರಾಗ್ಯ)　　೨. ವಿವೇಕ　　೩. ಶಮೆ　　೪. ದಮೆ

೧. ವಿರಕ್ತಿ : (ವೈರಾಗ್ಯ) ಇಹ ಪರಗಳ ಸುಖವನ್ನು ಬಯಸದೆ, ಇಂದ್ರಾದಿಪದ ಭೋಗಗಳನ್ನು ಆಸೆ ಪಡದೆ, ತಂದೆ, ತಾಯಿ, ಸತಿ, ಸುತ, ಬಂಧು ಬಳಗ, ಮನೆ, ಮಠ ಇವುಗಳ ಬಗ್ಗೆ ನನ್ನದೆಂಬ ಭಾವನೆಯನ್ನು ಸಂಪೂರ್ಣತೊರೆದು ಬಿಡುವುದೇ ವಿರಕ್ತಿ. ಅವಧೂತ ಪೂರ್ವಸ್ಥಿತಿಯ ವಿರಕ್ತನಿಗೆ, ಮೂಡುವ ಮೊದಲ ಮಾನಸಿಕ ಕ್ರಿಯೆ ಇದಾಗಿದೆ.

೨. ವಿವೇಕ : ಯುಕ್ತಾ-ಯುಕ್ತಿ ವಿವೇಚನೆಯುಳ್ಳವನು. ಅಹಂಬ್ರಹ್ಮಾಸ್ಮಿ, ನಾನೇ ಓಂಕಾರ ಸ್ವರೂಪನು, ನಾನೇ ಪರಮಾತ್ಮನು, ನಿತ್ಯ, ನಿರಾಳನೆಂದು ದೈಹಿಕ ಮತ್ತು ಮಾನಸಿಕ ದೃಷ್ಟಿಯಿಂದ ವಿವೇಚಿಸುವುದೇ ವಿವೇಕ. ಅವಧೂತ ಸ್ಥಿತಿ ತಲುಪುವವನ ಮಾನಸಿಕ ಭಾವನೆ ಇದೇ ಆಗಿದ್ದು, ಪರಮಾತ್ಮನನ್ನು ತನ್ನಲ್ಲೇ ಹುಡುಕುತ್ತಾನೆ.

೩. ಶಮೆ : ಮನೋನಿಗ್ರಹ ಮಾಡಿ, ಮಾನಸಿಕ ನೆಮ್ಮದಿ ಪಡೆಯುವುದು. ದೇಹವಾಸನೆ, ಲೋಕವಾಸನೆ, ಹಿಂದಾದ ಮತ್ತು ಮುಂದೆ ಬರಬಹುದಾದ ವಾಸನೆ, ವಸ್ತ್ರವಾಸನೆ, ಅನ್ನ-ಸ್ನಾನಾದಿಗಳ ವಾಸನೆ, ಈ ರೀತಿ ವಾಸನ ಕ್ಷಯವಾದುದೇ ಶಮೆ.

೪. ದಮೆ : ಇಂದ್ರಿಯ ನಿಗ್ರಹ, ಸಂಸಾರ ಬಂಧನದಿಂದ ಬಿಡುಗಡೆ ಹೊಂದಿ, ದೇಹದಲ್ಲಿ ವಾಸ ಮಾಡಿದ ಜ್ಞಾನೇಂದ್ರಿಯಗಳೂ, ಕರ್ಮೇಂದ್ರಿಯಗಳು ತಮ್ಮ ವಿಷಯಗಳಲ್ಲಿ ಹರಿಯದಂತೆ ಅವುಗಳನ್ನು ನಿಗ್ರಹಿಸುವುದೇ ದಮೆ. ಸುಖ-ಸಾಧನಗಳನ್ನು ತ್ಯಜಿಸಿ ಶರೀರ ಶುದ್ಧಿಯನ್ನು ಈ ಸಾಧನೆಯಿಂದ ಮಾಡಿಕೊಳ್ಳುತ್ತಾನೆ.

ಈ ಸಾಧನ ಚತುಷ್ಟಯಗಳನ್ನು ಸಾಧಿಸಿದ ಬಳಿಕ ಐದು ಉಪ-ಸಾಧನೆಗಳನ್ನು ಅಳವಡಿಸಿಕೊಳ್ಳಬೇಕೆಂದು ತಿಳಿಸುತ್ತಾರೆ.

೧. ಉಪರತಿ
೨. ತಿತಿಕ್ಷೆ
೩. ಭಕ್ತಿ
೪. ಸಮಾಧಾನ .
೫. ಮುಮುಕ್ಷುತ್ವ

೧. ಉಪರತಿ : ಅರಿವು. ಅಂತರಾತ್ಮದಲ್ಲಿ ಶಿವ-ಧ್ಯಾನ ಮಾಡುವುದು ಶಿವನೇ ತಾನೆಂದು ಅರಿಯುವುದು.

೨. ತಿತಿಕ್ಷೆ : ಶೀತೋಷ್ಣ ಸಹಿಸುವಿಕೆ. ಮೌನದಿಂದಿದ್ದು ಎಲ್ಲಾ ದುಃಖಗಳನ್ನು ಸಹಿಸುವುದು, ಯೋಗಾಭ್ಯಾಸ ಮಾಡುವಾಗ ಮೂಡುವ ಚಪಲತೆಯನ್ನು ನಿಗ್ರಹಿಸುವುದು.

೩. ಭಕ್ತಿ : ಗುರು ಸೇವೆ. ಗುರುಪಾದ ಸೇರಿ ಸೇವೆ ಮಾಡುತ್ತಾ ಗುರುಧ್ಯಾನ ಮಾಡುವುದು.

೪. ಸಮಾಧಾನ : ತಾಳ್ಮೆ, ಶಾಂತಿ. ಗುರು ತೋರಿದ ಮಾರ್ಗದಲ್ಲಿ ನಡೆದು, ಗುರಿಮುಟ್ಟಲು ಗುರಿಯಲ್ಲೇ ಮನಸ್ಸಿಡಲು ನಿರ್ಧರಿಸುವುದು.

೫. ಮುಮುಕ್ಷತ್ವ : ಮೋಕ್ಷದ ಅಪೇಕ್ಷೆ. ಮುಕ್ತಿ ಹೊಂದುವ ಆತುರ, ಮೋಕ್ಷ ಸಿಗುವವರೆಗೆ ಜ್ಞಾನಯೋಗದಲ್ಲಿ ತೀವ್ರ ಅಪೇಕ್ಷೆ ಹೊಂದುವುದು. ಇವುಗಳನ್ನು ಸಾಧಿಸಿದ ಬಳಿಕ ಯೋಗವು ಫಲಿಸುತ್ತದೆ.

ಯೋಗ

ಆತ್ಮ-ಪರಮಾತ್ಮನಲ್ಲಿ ಲೀನವಾಗುವುದೇ ಯೋಗ. ಮುಕ್ತಿ ಬಯಸುವವರು ಇಹಪರದ ಭೋಗವಾಸನೆ ಗಳನ್ನು ವಿರತಿಯಿಂದ ನಾಶಮಾಡುವವರು ಯೋಗ ಸಾಧಿಸುತ್ತಾರೆ. ಡಾ.ಎಂ.ಎಂ.ಕಲಬುರ್ಗಿ ಅವರು ಹೇಳುವಂತೆ ಮಾನವನ ಮಾನಸಿಕ, ದೈಹಿಕ, ಬೌದ್ಧಿಕ, ಶಕ್ತಿಯನ್ನು ವೃದ್ಧಿಸುವುದೇ ಯೋಗ. ಯೋಗಸಾಧಕರು, ಯೋಗ ಬಲದಿಂದ ಪ್ರಾಕೃತಿಕ ಗುಣಗಳನ್ನು ಹೋಗಲಾಡಿಸಿ, ಆತ್ಮತತ್ತ್ವಾನುಭೂತಿ ಮಾಧ್ಯಮದ ಮೂಲಕ ಸುಖ-ದುಃಖಗಳನ್ನು ತಿರುಗುಣಿಮಡುವಿನಿಂದ ಪಾರಾಗಿ, ನಿಜಶಾಂತಿ ಸಮಾಧಾನಗಳನ್ನು ಪಡೆಯುವಲ್ಲಿಯೇ ತಮ್ಮ ಕೃತಕೃತ್ಯತೆಯನ್ನು ಕಂಡುಕೊಳ್ಳುವರು.[೭] ಹೀಗಾಗಿ ಅವಧೂತರು ಯೌಗಿಕಪಂಥದವರು. ಅವರು ಸಾಧನೆಯಲ್ಲಿ ಸಿದ್ಧಿಗೇರಿದ್ದು ಯೋಗದಿಂದ.

ಯೋಗದ ಹುಟ್ಟು, ಅರ್ಥ ಮತ್ತು ವ್ಯಾಪ್ತಿ

ಯುಜ್ ಸಮಾಧೌ ಎಂಬ ಧಾತುವಿನಿಂದ ಯೋಗ ನಿಷ್ಪನ್ನವಾಗಿದೆ. ಯೋಗ ಎಂದರೆ ಏಕಾಗ್ರತೆ.

ಯುಜಿರ್ ಯೋಗೇ = ಎಂದರೆ ಒಂದುಗೂಡುವುದು ಎಂಬರ್ಥ ಇದೆ. ಈ ಯೋಗದಲ್ಲಿ ಸಾಧ್ಯಯೋಗ ಮತ್ತು ಸಾಧನಯೋಗವೆಂಬ ಎರಡು ವಿಧಗಳಿವೆ.

ಯಜ್ಞವಲ್ಕ್ಯ ಋಷಿಗಳು ಸಾಧ್ಯಯೋಗದ ಬಗ್ಗೆ ಹೇಳುತ್ತಾ, "ಸಂಯೋಗೋ ಯೋಗ ಇತ್ಯಾಹುರ್ಜೀವಾತ್ಮ ಪರಮಾತ್ಮನೋ" ಎಂದಿದ್ದಾರೆ. ಅಂದರೆ ಜೀವಾತ್ಮ ಮತ್ತು ಪರಮಾತ್ಮರ ಸಂಯೋಗವೇ ಯೋಗವೆಂದು ಹೇಳಬಹುದು.

ಪತಂಜಲಿ ಮಹರ್ಷಿಗಳು "ಯೋಗಶ್ಚಿತ್ತವೃತ್ತಿ ನಿರೋಧಃ" ಎಂದಿದ್ದಾರೆ. ಅಂದರೆ ಯೋಗ ಚಿತ್ತವೃತ್ತಿಯನ್ನು ನಿರೋಧಿಸುವುದು. ಇಲ್ಲಿ ಯೋಗವನ್ನು ಏಕಾಗ್ರತೆ ಎಂಬ ಅರ್ಥದಲ್ಲಿ ಬಳಸಿದ್ದಾರೆ. ಇವರು ಬಳಸಿದ ಯೋಗಕ್ಕೆ ಪತಂಜಲಿಯೋಗವೆಂದೇ ಹೆಸರು.

ವೇದಾಂತ ಸಾಹಿತ್ಯದಲ್ಲಿ ಯೋಗವೆಂದರೆ ಒಂದುಗೂಡುವುದು ಎಂಬರ್ಥದಲ್ಲಿ ಬಳಸಲಾಗಿದೆ. ಇದನ್ನು ವೈದಾಂತಿಕಯೋಗವೆಂದು ಕರೆಯಬಹುದು. ಪತಂಜಲಿಯೋಗದಲ್ಲಿ ಸಾಧನೆಯ ಮುಖ್ಯ ಅಂಗ ಧ್ಯಾನ. ಇದರ ಗುರಿ ಪುರುಷ ಮತ್ತು ಪ್ರಕೃತಿಯನ್ನು ಪ್ರತ್ಯೇಕಿಸುವುದು.

ವೇದಾಂತದಲ್ಲಿ ಧ್ಯಾನವನ್ನು ಉಪಾಸನೆ ಎಂದು ಕರೆಯುತ್ತಾರೆ. ಉಪಾಸನೆಯಲ್ಲಿ ಯೋಗವನ್ನು ಜೀವಾತ್ಮ ಮತ್ತು ಪರಮಾತ್ಮರ ಐಕ್ಯತೆ ಮತ್ತು ಸಣ್ಣವನಾದ ನಾನು ಬೃಹತ್ತಾದ ಬ್ರಹ್ಮದಲ್ಲಿ ಸೇರುವುದೇ ಯೋಗ ಎಂದು ವೇದಾಂತದ ಕಲ್ಪನೆಯಲ್ಲಿ ಭಾವಿಸುತ್ತಾರೆ.

ಯೋಗಶಾಸ್ತ್ರದ ಪ್ರಕಾರ ಯೋಗವೆಂದರೆ ಚೇತನ ವಸ್ತುವನ್ನು ಜಡ ವಸ್ತುವಿನಿಂದ ಪ್ರತ್ಯೇಕಿಸಿ ತಿಳಿಯುವುದು. ನಿತ್ಯವೂ ವ್ಯಾಯಾಮ ಮಾಡುವ ವ್ಯಕ್ತಿ ದೀರ್ಘಾಯುವೂ, ನಿರೋಗಿಯೂ ಆಗಿರುತ್ತಾನೆ. ಆದರೆ ಅದಕ್ಕಿಂತಲೂ ಹೆಚ್ಚಿನ ಪ್ರಯೋಜನ ಈ ಯೋಗದಿಂದಾಗುತ್ತದೆ. ಯೋಗ ಒಂದು ಪರಮಾದ್ಭುತ ವಿಜ್ಞಾನ. ಸಹಸ್ರಾರು ವರ್ಷಗಳ ಹಿಂದೆ ಪತಂಜಲಿ ಮಹರ್ಷಿಗಳು ಜಗತ್ತಿಗೆ ನೀಡಿದ ಅತ್ಯದ್ಭುತ ಕೊಡುಗೆ. ಮಹರ್ಷಿ ಪಂತಜಲಿಗಳು, ಭಗವಾನ್ ಬುದ್ಧನು ಯೋಗವೆಂದರೆ ಬಿಡುಗಡೆ, ಜಡ ವಸ್ತುಗಳ ದಾಸ್ಯದಿಂದ, ದುಃಖದಿಂದ, ಬಂಧನದಿಂದ ಬಿಡುಗಡೆಯಾಗುವುದು ಎಂಬ ಅರ್ಥದಲ್ಲಿ ಹೇಳಿದ್ದಾರೆ. ದುಃಖ ನಿವಾರಣೆಯನ್ನೇ ಪ್ರಧಾನ ಉದ್ದೇಶವಾಗಿಟ್ಟು ಕೊಂಡು ಹೇಯ, ಹೇತು, ಮತ್ತು ಹನೋಪಾಯದ ಪದ್ಧತಿಗಳನ್ನು ಅನುಸರಿಸಿದ್ದಾರೆ. ಪತಂಜಲಿ ಮಹರ್ಷಿಗಳು ಹೇಳುವಂತೆ "ಹೇಯಂ ದುಃಖಃ ಅನಾಗತಂ" ಅಂದರೆ ಇನ್ನೂ ಬಂದಿಲ್ಲದ ದುಃಖದಿಂದ ಪಾರಾಗಬಹುದು - ಎಂದಿದ್ದಾರೆ.

ಯೋಗದ ವಿಶೇಷತೆ : ಇದರಲ್ಲಿ ವೃತ್ತಿ, ಪ್ರತ್ಯಯ ಮತ್ತು ಸಮಾಧಿ ಸ್ಥಿತಿಯನ್ನು ಕಾಣಬಹುದು.

೧. **ವೃತ್ತಿ :** ಮನಸ್ಸಿನಲ್ಲಿ ಉಂಟಾಗುವ ಪ್ರತಿಕ್ರಿಯೆಗಳು. ಈ ವೃತ್ತಿಗಳು ಸಮುದ್ರದ ಅಲೆಗಳಂತೆ, ಪ್ರತಿಕ್ಷಣವೂ ಏಳುತ್ತಿರುತ್ತವೆ. ಈ ವೃತ್ತಿಗಳನ್ನು ನಿಯಂತ್ರಿಸುವುದೇ ಯೋಗ.

೨. **ಪ್ರತ್ಯಯ :** ಯಾವ ವೃತ್ತಿಗಳು ಒಳಹೊರಗಿನ ವಸ್ತು ವಿಷಯಗಳ ಜ್ಞಾನ ನೀಡುವವೋ ಅವೇ ಪ್ರತ್ಯಯಗಳು. ಈ ಪ್ರತ್ಯಯ ನಿರಂತರವಾಗಿ ಮನಸ್ಸಿನಲ್ಲಿ ಮೂಡುತ್ತಿದ್ದರೆ ಅದೇ ಧ್ಯಾನ.

೩. **ಸಮಾಧಿ :** ಧ್ಯಾನದಿಂದ ಸಮಾಧಿ. ಸಮಾಧಿಯಿಂದ ಕೈವಲ್ಯ (ಮೋಕ್ಷ) ಕೇವಲ ಧ್ಯೇಯ ವಸ್ತುವಿನ ಬಗೆಗಿನ ಆಲೋಚನೆಯೊಂದೇ ಇದ್ದು ಉಳಿದುದೆಲ್ಲ ನಾನು ಧ್ಯಾನಿಸುತ್ತಿದ್ದೇನೆ ಎಂಬ ವಿಚಾರವೂ ಇಲ್ಲವಾಗುವ ಅವಸ್ಥೆಯೇ ಸಮಾಧಿ.

ಯೋಗದಲ್ಲಿ ಪ್ರಮುಖವಾಗಿ

೧. ಮಂತ್ರಯೋಗ
೨. ಲಯಯೋಗ
೩. ಹಠಯೋಗ
೪. ರಾಜಯೋಗ.

ಎಂದು ನಾಲ್ಕು ಪ್ರಕಾರಗಳನ್ನು ಗುರುತಿಸಲಾಗಿದೆ.

ಮಂತ್ರಯೋಗ : ತಮಗೆ ಇಷ್ಟವಾದ ಯಾವುದಾದರೊಂದು ಮಂತ್ರದ ಋಷಿದೇವತಾದಿಗಳನ್ನು ಕುರಿತು ಜಪಿಸುವ ಯೋಗ, ಮಂತ್ರಯೋಗ.

[illegible]

ಲಯಯೋಗ : ಸಾಧಕನು ತನ್ನ ಮನಸ್ಸನ್ನು ಧ್ಯಾನಮೂರ್ತಿಯಲ್ಲಿ ಕೇಂದ್ರೀಕರಿಸಿ, ಮನೋವಾಯು ಸಹಿತವಾಗಿ ಲೀನವಾಗುವುದೇ ಲಯಯೋಗ.

ಹಠಯೋಗ : ಹಠಯೋಗವನ್ನು ಪ್ರಾಣನಿರೋಧ ಸಾಧನೆ ಎನ್ನುತ್ತಾರೆ. ದಕ್ಷಿಣ ನಾಸಿಕರಂಧ್ರದಿಂದ ಹೊರಡುವ ಸ್ವರದ ಹೆಸರು ಸೂರ್ಯ. ವಾಮನಾಸಿಕ ರಂಧ್ರದಿಂದ ಹೊರಡುವ ಸ್ವರದ ಹೆಸರು ಚಂದ್ರ. ಇವೆರಡರ ಸಮತ್ವವೇ ಹಠಯೋಗ. 'ಹಠ'ದ ಮೂಲಕ ಮನಸ್ಸನ್ನು ನಿರೋಧ ಮಾಡುವುದು.

ಭವೇದಷ್ಟಾಂಗಮಾರ್ಗೇಣ ಮುದ್ರಾಕರಣ ಬಂಧನ್ಯೆಃ
ತಥಾ ಕೇವಲ ಕುಂಭೇ ವಾ ಹಠಯೋಗಿ ವಶಾನಿಲಃ ||೮

ಯಮ ನಿಯಮಾದಿ ಅಷ್ಟಾಂಗ ಯೋಗಗಳಿಂದಲೂ, ಮಹಾಮುದ್ರೆ ಮುಂತಾದ ಹತ್ತು ಮುದ್ರಾ ಬಂಧಗಳಿಂದಲೂ, ಧೌತಿ ಮುಂತಾದ ಷಟ್ಕರ್ಮ ಬಂಧದಿಂದಲೂ ಕೇವಲ ಕುಂಭರೂಪವಾದ ಪ್ರಾಣಾಯಾಮ ದಿಂದಲೂ, ವಾಯುವನ್ನು ವಶದಲ್ಲಿಟ್ಟುಕೊಂಡವನು ಹಠಯೋಗಿ.

'ಯಮನಿಯಮಾಸನ ಪ್ರಾಣಾಯಾಮ ಪ್ರತ್ಯಾಹಾರ ಧಾರಣಧ್ಯಾನ ಸಮಾಧಯೋಷ್ಟಾವಂಗಾನಿ. ಈ ರೀತಿ ಈ ಯೋಗದಲ್ಲಿ ಎಂಟು ಅಂಗಗಳನ್ನು ಕಾಣಬಹುದು. ಅವುಗಳೆಂದರೆ

ಯಮ : ಅಹಿಂಸಾ, ಸತ್ಯ, ಅಸ್ತೇಯ, ಬ್ರಹ್ಮಚರ್ಯ ಅಪರಿಗ್ರಹಗಳ ಅಭ್ಯಾಸ ಮತ್ತು ಅಖಿಲ ವಿಷಯ ಗಳಲ್ಲಿ ವಿರಕ್ತಿ ತಾಳುವುದು.

ನಿಯಮ : ಶುಚಿತ್ವ, ಸಂತೃಪ್ತಿ, ಶರೀರವನ್ನು ನಿಯಂತ್ರಣದಲ್ಲಿಡುವುದು. ಶಾಸ್ತ್ರಾಧ್ಯಯನ ಹಾಗೂ ಭಗವಂತನಲ್ಲಿ ಶರಣಾಗುವುದು ಮತ್ತು ವಿರಕ್ತಿ ದೃಢವಾಗಿ ನಿಲ್ಲುವುದು. ಇಲ್ಲಿ ಯಮ ನಿಯಮಗಳನ್ನು ಒಟ್ಟಿಗೆ ಮಾಡಬೇಕು.

ಆಸನ : ಶೀತ, ಉಷ್ಣ, ದುಃಖ, ದುಮ್ಮಾನ, ಸುಖ-ದುಃಖ ಇತ್ಯಾದಿ ಅಸಂಖ್ಯ ಶಾರೀರಿಕ, ಮಾನಸಿಕ, ಪೀಡೆಗಳಿಂದ ಜಯಗಳಿಸುವುದು. ವಿಷಯಗಳಲ್ಲಿ ಆಸಕ್ತಿಯಾಗಲಿ, ವಿರಕ್ತಿಯಾಗಲಿ ತೋರದೆ ಬುದ್ಧಿಯಲ್ಲಿ ಉದಾಸೀನ ಸ್ಥಿತಿವುಂಟಾಗುವುದು.

ಪ್ರಾಣಾಯಾಮ : ಶ್ವಾಸ-ಪ್ರಶ್ವಾಸಗಳ ನಿಯಂತ್ರಣ, ಇದರಿಂದ ಧಾರಣ ಶಕ್ತಿ ಹೆಚ್ಚಾಗುತ್ತದೆ.

ಪ್ರತ್ಯಾಹಾರ : ಈ ಜಗತ್ತು ಹುಸಿ, ಅದರಿಂದ ಬರುವ ದುಃಖವೂ ಹುಸಿಯೆಂದು ತಿಳಿದು. ಆ ಹುಸಿ ನೋಟವನ್ನು ಅಂತರ್ಮುಖಿಗೊಳಿಸುವುದು.

ಧಾರಣ : ಧ್ಯಾನದ ಮೊದಲ ಹೆಜ್ಜೆ ಧಾರಣ. ಮನಸ್ಸನ್ನು ಸ್ಥಿರವಾಗಿಡಲು ಪ್ರಯತ್ನಿಸುವುದು. ಜ್ಞಾನವೆಂಬುದು ಆಂತರಿಕವಾದುದೆಂದು ಅರಿಯುವುದು.

ಧ್ಯಾನ : ಧಾರಣದ ನಿರಂತರ ಅಭ್ಯಾಸದಿಂದ ಧ್ಯಾನ. ಚೈತನ್ಯ ತಾನೆಂದು ಏಕೈಕವಾಗಿ ಭಾವಿಸುವುದು. ಬೇರೆ ಬೇರೆ ಧರ್ಮಗಳಲ್ಲಿ ಹೇಳಿರುವ ಧ್ಯಾನ ವಿಧಾನಗಳೆಲ್ಲಾ ಒಂದೇ ಕೇಂದ್ರದಲ್ಲಿ ಅಂದರೆ ಧ್ಯಾನದ ಅವಸ್ಥೆಯಲ್ಲಿ ಸಂಧಿಸುವುದು.

ಸಮಾಧಿ : ಸಂಪೂರ್ಣ ಏಕಾಗ್ರತೆ ಸ್ಥಾಪಿಸುವುದು. ನಿಜಾನಂದದಲ್ಲಿ ಮಗ್ನನಾಗಿರುವುದು ಸಮಾಧಿ ಸ್ಥಿತಿ. ಭೇದವಳಿದು ನಿಂತ ನಿಲುವೇ ಸಮಾಧಿ. ಮನಸ್ಸು ಆತ್ಮನಲ್ಲಿ ಐಕ್ಯವಾಗುವುದು ಸಮಾಧಿ ಸ್ಥಿತಿ. ತನ್ನಲ್ಲಿ ತಾನೆ ನೆಲೆಸಿ, ಚಲಿಸದ ನಿರ್ಭಾವವೇ ಸಮಾಧಿ (ಮೌನ). ಈ ಸಮಾಧಿ ಯೋಗದಿಂದ ಕೈವಲ್ಯ, ಜೀವಾತ್ಮ ಮತ್ತು ಪರಮಾತ್ಮರೀರ್ವರೂ ಸಮತೆ ಪಡೆದರೆ ಅದೇ ಸಮಾಧಿ ಸ್ಥಿತಿ.

ಅಷ್ಟಾಂಗಯೋಗವನ್ನೊಳಗೊಂಡ ಹಠಯೋಗ ಸಾಧನೆ ಮಾಡುವವರಿಗೆ ಅತೀಂದ್ರಿಯ ಸುಖದ ಅನುಭವವಾಗುವುದು. ಶಾಪಾನುಗ್ರಹ ಸಾಮರ್ಥ್ಯ ಪಡೆಯುವರು. ಅರಿಷಡ್ವರ್ಗಗಳು, ಅಷ್ಟಪಾಶಗಳು, ಅಷ್ಟಮದಗಳು, ಸಪ್ತವ್ಯಸನಗಳು, ಷಡ್ಭಾವ ವಿಕಾರಗಳು, ಈಷಣತ್ರಯಗಳು, ತಾಪತ್ರಯಗಳು, ಹಮ್ಮುಬಿಮ್ಮು ಭಾವಗಳು, ಜೀವಭ್ರಾಂತಿ ಮತ್ತು ಸರ್ವ ಇಂದ್ರಿಯ ವ್ಯವಹಾರಗಳು ಈ ಯೋಗಬಲದಿಂದ ನಾಶವಾಗುವವೆಂದು ಯೋಗಸೂತ್ರ ತಿಳಿಸುತ್ತದೆ.

ರಾಜಯೋಗ : ಆಶ್ರಮ ಧರ್ಮ ಕರ್ಮಗಳೊಡವೆ ತನಗಿಲ್ಲದೆ ನಿರ್ಮಲವಾದ ಆತ್ಮಧರ್ಮದಿಂದ ಜೀವನ್ಮುಕ್ತನಾಗುವುದೇ ರಾಜಯೋಗ. ಮಂತ್ರಯೋಗ, ಲಯಯೋಗ, ಹಠಯೋಗಗಳಿಗಿಂತ ರಾಜಯೋಗ ಶ್ರೇಷ್ಠವಾದುದು. ಇದರ ಸಾಧನೆಯಿಂದ ವಾಸನಕ್ಷಯವಾಗುವುದು. ಶೀಲ ಮತ್ತು ಸ್ವಪ್ರಭೆ ಸಂವರ್ಧವಾಗುವವು. ಈ ಯೋಗದಲ್ಲಿ ಹದಿನೈದು ಅವಯವಗಳಿರುತ್ತವೆ. ಯಮ, ನಿಯಮ, ತ್ಯಾಗ, ಮೌನ, ದೇಶ, ಕಾಲ, ಆಸನ, ಮಲಬಂಧ, ದೇಹ, ಸಾಮ್ಯ, ದೃಕ್‌ಸ್ಥಿತಿ, ಪ್ರಾಣಾಯಾಮ, ಪ್ರತ್ಯಾಹಾರ ಧಾರಣ, ಧ್ಯಾನ, ಸಮಾಧಿ ಈ ಯೋಗಗಳಿಂದ ನಿಜಮುಕ್ತಿಯನ್ನು ಪಡೆಯುವನು. ಮನೋವೃತ್ತಿರಹಿತನಾಗಿರುವುದರಿಂದ ಬ್ರಹ್ಮ ಸಾಕ್ಷಾತ್ಕಾರವನ್ನು ಈ ಯೋಗದಿಂದ ಪಡೆಯಬಹುದು.

ಅವಧೂತಸ್ಥಿತಿಗೇರಲು ಹಠಯೋಗ ಮತ್ತು ರಾಜಯೋಗಗಳನ್ನು ಸಾಧಿಸಿ ಸಮಾಧಿಸ್ಥಿತಿಯನ್ನು ಸಾಧಿಸುತ್ತಾನೆ.

ಸಮಾಧಿಸ್ಥಿತಿ : ಭಾರತದ ಯೋಗದರ್ಶನದಲ್ಲಿ ಅನುಭಾವ ಮಾರ್ಗದ ಅಂತಿಮ ಹಂತಕ್ಕೆ ಸಮಾಧಿಸ್ಥಿತಿ ಎನ್ನುತ್ತಾರೆ. ಪ್ರಾಪಂಚಿಕ ವ್ಯವಹಾರಗಳನ್ನು ಸಂಪೂರ್ಣವಾಗಿ ಮರೆತು ಬೇರೆ ಯಾವ ಬಗೆಯ ಆಲೋಚನೆಯನ್ನೂ ಮಾಡದೆ ಅಸಾಧಾರಣ ದೈವಚಿಂತನೆಯಲ್ಲಿ ಧ್ಯಾನದಲ್ಲಿರುವುದೇ ಸಮಾಧಿಸ್ಥಿತಿ. ಇಲ್ಲಿ ಮನಸ್ಸು ಆತ್ಮನಲ್ಲಿ ಐಕ್ಯವಾಗುತ್ತದೆ. ತನ್ನಲ್ಲೇ ತಾನು ನೆಲೆಸಿ ಚಲಿಸದ ನಿರ್ಭಾವವೇ ಸಮಾಧಿ. ಈ ಸಮಾಧಿಸ್ಥಿತಿಯಲ್ಲಿ ಕೈವಲ್ಯ ಜೀವಾತ್ಮ ಮತ್ತು ಪರಮಾತ್ಮರೀರ್ವರೂ ಸಮತೆ ಪಡೆಯುತ್ತಾರೆ.

ನಾನೆ ಬ್ರಹ್ಮವು ನಾನೆ ವಸ್ತುವು
ನಾನೆ ಸಕಲಾಧಾರ ಸಾಕ್ಷಿಯು
ನಾನೆ ಸರ್ವವ್ಯಾಪ್ತ ಸಚ್ಚಿನ್ಮಾತ್ರ ತಾನೆಂದು ।
ಈ ನಿಖಿಲ ನುಡಿಯೆಂದು ಕೊಂಬುವ
ತಾನೆಯೆಂದೇ ಭಾವಿಸುತಲದ
ಧ್ಯಾನ ಪರನಾಗಿರಲು ಅದುವೆ ಸಮಾಧಿ ಕೇಳೆಂದ ॥

ನಾನೆ ಬ್ರಹ್ಮ, ನಾನೆ ಪರವಸ್ತು, ಸಕಲಾಧಾರ ಸಾಕ್ಷಿ, ನಾನೆ ಸರ್ವ ವ್ಯಾಪ್ತ ಸಚ್ಚಿನ್ಮಾತ್ರನು ಎಂದು ನಿರಂತರ ಧ್ಯಾನಪರನಾಗಿರುವುದೇ ಸಮಾಧಿಸ್ಥಿತಿ. ಈ ಸಾಧನೆಯಲ್ಲಿ ನಿತ್ಯಾತ್ಮ ಸುಖದಲ್ಲಿ ಬ್ರಹ್ಮಮಯನಾಗಿ ಯೋಗಿ ಕಾಣುತ್ತಾನೆ. ಚಿದಾನಂದವಧೂತರು ಜ್ಞಾನಸಿಂಧುವಿನಲ್ಲಿ ತಿಳಿಸಿರುವಂತೆ ಸಮಾಧಿಸ್ಥಿತಿ ಯೋಗದಲ್ಲಿ,

೧. ಸವಿಕಲ್ಪ ಸಮಾಧಿ ೨. ನಿರ್ವಿಕಲ್ಪ ಸಮಾಧಿ ಎಂದು ಎರಡು ವಿಧ.

೧. ಸವಿಕಲ್ಪ ಸಮಾಧಿ : (ಇಚ್ಛೆಗೆ ಅಧೀನವಾದುದು) ಇದು ಸಗುಣವಾದುದು ಮತ್ತು ಸರ್ವಶ್ರೇಷ್ಠವಾದುದು ಎಂದೂ ಕರೆಯುತ್ತಾರೆ. ದೇವಲೋಕದ ಸುಖಪಡೆಯಬೇಕೆಂಬುವವರು ಈ ಸುಖದಿಂದ ಸಾಲೋಕ್ಯ (ಪರಮಾತ್ಮ ನೊಡನೆ ಭಕ್ತನು ಅದೇ ಲೋಕದಲ್ಲಿರುವವನು) ಸಾರೂಪ್ಯ (ಇಷ್ಟ ದೇವರಲ್ಲಿ ಒಂದಾಗುವುದು) ಹಾಗೂ ಸಾಯುಜ್ಯ (ಲೀನತೆ) ಪದವಿಗಳನ್ನು ಪಡೆಯುವನು. ಈ ಸ್ಥಿತಿಯಿಂದ ಮಾನಸಿಕ ಸುಖ-ಸಂತೋಷಗಳನ್ನು ಅನುಭವಿಸುತ್ತಾರೆ. ಸಂಸಾರದಲ್ಲಿದ್ದು ಮೋಕ್ಷ ಸಾಧಿಸುವವರಿಗೆ ಇದು ಯೋಗ್ಯವಾದುದು.

೨. ನಿರ್ವಿಕಲ್ಪ ಸಮಾಧಿ : (ಬ್ರಹ್ಮವನ್ನು ಕಾಣುವ ಸ್ಥಿತಿ) ಇದು ನಿರ್ಗುಣವಾದುದು. ನಿರ್ವಿಕಲ್ಪವೆಂದರೆ ವಿಕಾರ ಹೊಂದದ, ಸುಂದರವಾದ ಎಂಬರ್ಥವಿದೆ. ಈ ಯೋಗದಿಂದ ನಾಶರಹಿತವಾದ ನಿರ್ಗುಣಪದವಿಯನ್ನು ಹೊಂದುತ್ತಾರೆ. ಈ ಯೋಗಸಾಧನೆಯಿಂದ ಇಹ ಮತ್ತು ಪರಲೋಕಗಳ ವಾಸನೆಯು ಅಡಗಲು ಮನವು ನಿರ್ಗಮವಾಗಿ ನಶಿಸುವುದು. ಜಾಗರಣಾದಿ ಮೂರು ಅವಸ್ಥೆಗಳನ್ನು ಮೀರಿ ನಾನು ಎಚ್ಚರಾದೆ ಎಂಬುದನ್ನು ಅರಿಯದೆ ಅಚ್ಯುತನು ತಾನಾಗಿರಲು ಅದುವೆ ನಿರ್ವಿಕಲ್ಪ ಸಮಾಧಿ. ಎಲ್ಲವನ್ನು ಸಂಪೂರ್ಣ ಮರೆತು ತಾನೊಬ್ಬನೇ ಇರುವುದು ಈ ಸ್ಥಿತಿಯ ಲಕ್ಷಣ. ಈ ಯೋಗವನ್ನು ಸಾಧಿಸುವಾಗ ಜರುಗಬಹುದಾದ ವಿಘ್ನ ಗಳನ್ನು ಜಯಿಸಿ ಈ ಸ್ಥಿತಿ ಮುಟ್ಟಬೇಕು. ನಿರ್ವಿಕಲ್ಪ ಸಮಾಧಿಯಲ್ಲಿ ನಾಲ್ಕು ಸ್ಥಿತಿಗಳೆಂದು ಚಿದಾನಂದವಧೂತರು ತಿಳಿಸಿರುತ್ತಾರೆ.

೧. **ಪಶುಸ್ಥಿತಿ**

೨. **ಶಿಶುಸ್ಥಿತಿ**

೩. ತೂಕಡಿಕೆ

೪. ನಿದ್ರಾಸ್ಥಿತಿ[೧೦]

೧. ಪಶುಸ್ಥಿತಿ : ಪರರು ತನಗೆ ಕೊಟ್ಟರೆ ಉಣ್ಣುವುದು, ಇಲ್ಲದಿದ್ದರೆ ಇಲ್ಲ. ಈ ಸ್ಥಿತಿಯಲ್ಲಿರುವವರಿಗೆ ಅಹಂ, ಮದ, ಮತ್ಸರ, ವ್ಯಸನಗಳಿರುವುದಿಲ್ಲ. ಅತ್ತಿತ್ತ ನೋಡದೆ ಯಾರೊಡನೆಯೂ ಮಾತನಾಡದೆ ಒಂದೇ ಜಾಗದಲ್ಲಿ ಪಶುವಿನಂತೆ ಕುಳಿತಿರುತ್ತಾರೆ. ಯೋಗಿಯು ಅವಧೂತಸ್ಥಿತಿ ತಲುಪಿದಾಗ ಪಶುಸ್ಥಿತಿಯಲ್ಲಿ ಮೌನವಾಗಿದ್ದು, ಒಂದೇ ಸ್ಥಳದಲ್ಲಿ ಕುಳಿತು, ಯಾರಾದರೂ ಅನ್ನ, ನೀರು ಕೊಟ್ಟರೆ ಸ್ವೀಕರಿಸುತ್ತಾರೆ, ಇಲ್ಲದಿದ್ದರೆ ಸುಮ್ಮನಿರುತ್ತಾರೆ.

೨. ಶಿಶುಸ್ಥಿತಿ : ಈ ಸ್ಥಿತಿಯಲ್ಲಿರುವ ಯೋಗಿಗೆ ದೂಷಣ-ಭೂಷಣ, ವಿಧಿ-ನಿಷೇಧ, ಪಾಪ-ಪುಣ್ಯ ಇವುಗಳ ಬಗ್ಗೆ ಅಲ್ಪವೂ ಅಭಿಮಾನವಿಲ್ಲದೆ, ಸಂತಸದಿಂದ ತನ್ನೊಳಗೆ ತಾನ ಮಗುವಿನಂತೆ ನಗುತ್ತಿರುತ್ತಾರೆ.

[illegible]

೩. **ತೂಕಡಿಕೆ ಸ್ಥಿತಿ :** ಯೋಗಿಯು ಈ ಸ್ಥಿತಿಯಲ್ಲಿ ಕಣ್ಣುಗಳನ್ನು ಅರ್ಧ ಮುಚ್ಚುತ್ತ, ಕೆಲಹೊತ್ತು ತೆರೆಯುತ್ತ ತೂಕಡಿಸುವಂತೆ ಕಾಣುತ್ತಿರುತ್ತಾರೆ.

೪. **ನಿದ್ರಾಸ್ಥಿತಿ :** ಈ ಸ್ಥಿತಿಯಲ್ಲಿ ಯೋಗಿಯು ನಿಂತಾಗ, ಕುಳಿತಾಗ, ನಡೆವಾಗ, ಸರ್ವಕಾಲದಲ್ಲಿ ಕಣ್ಣುಮುಚ್ಚಿ ಆತ್ಮಚಿಂತನೆಯಲ್ಲಿದ್ದು, ನೋಡುವವರಿಗೆ ನಿದ್ರಿಸುವಂತೆ ಕಂಡರೂ ಸಹಜ ಸುಖದ ಅನುಭಾವ ಪಡೆಯುತ್ತಿರುತ್ತಾರೆ.

ಅವಧೂತರುಗಳು ಈ ಎಲ್ಲಾ ಸ್ಥಿತಿಗಳನ್ನು ತಲುಪಿ, ಮೋಕ್ಷ ಸಾಧಿಸಿರುವುದನ್ನು ಕಾಣುತ್ತೇವೆ. ಯೋಗವನ್ನು ಸಾಧಿಸದೆ ಆರೂಢನಾಗಲಿ, ಅವಧೂತನಾಗಲಿ ಆಗಲು ಸಾಧ್ಯವಿಲ್ಲ. ಯೋಗ ಸಾಧಿಸಿ ಗುರುಶೋಧದಲ್ಲಿ ನಿರತನಾಗುತ್ತಾನೆ.

ಗುರುಶೋಧ : ಭಾರತೀಯ ಧರ್ಮಗಳಲ್ಲಿ ಬೌದ್ಧ ಧರ್ಮವನ್ನು ಹೊರತುಪಡಿಸಿದರೆ ಉಳಿದೆಲ್ಲಾ ಧರ್ಮ, ಪಂಥ, ಮಾರ್ಗಗಳಲ್ಲಿ ಗುರುವಿಗೆ ಮಹತ್ವದ ಸ್ಥಾನವಿದೆ. ಗುರುವಿಲ್ಲದೆ ಸಾಧಕನು ಗುರಿ ಮುಟ್ಟಲಾರ ಹಾಗೂ ಮುಂದುವರಿಯಲಾರ.

ಭವಬಂಧನಗಳನ್ನು ಹರಿದೊಗೆದು ಯೋಗವನ್ನು ಸಾಧಿಸಿದ ಸಾಧಕನು ಆತ್ಮಜ್ಞಾನಕ್ಕಾಗಿ ಪರಿತಪಿಸುತ್ತಿರುತ್ತಾನೆ. ಅದಕ್ಕಾಗಿ ಗುರುವನ್ನು ಹುಡುಕಿ, ಗುರು ಅನುಗ್ರಹ ಮತ್ತು ಗುರೂಪದೇಶಗಳಿಸಿ, ಆತ್ಮಾನಂದದಲ್ಲಿ ವಿಹರಿಸುವ ಪರಮ ವಿರಕ್ತನೇ ಅವಧೂತ.

ಅವಧೂತ ಪಂಥದವರಿಗೆ ಗುರು ಸಾಕ್ಷಾತ್ ಪರಬ್ರಹ್ಮ ಸ್ವರೂಪನು. ಸಚ್ಚಿದಾನಂದ ನಿತ್ಯಪರಿಪೂರ್ಣನು. ಪರಮ ಸುಖವನ್ನು ಕೊಡುವವನು. ಕೇವಲ ಜ್ಞಾನ ಸ್ವರೂಪನು. ದ್ವಂದ್ವಾತೀತನು, ಗಗನ ಸದೃಶ್ಯನು, ತತ್ವಮ ಸ್ಯಾದಿಲಕ್ಷ್ಯನು, ನಿತ್ಯನು, ಏಕನು, ವಿಮಲನು, ಅಚಲನು, ಭಾವಾತೀತನು, ಇಂತಹ ಅಪೂರ್ವ ಸಿದ್ಧಿಯನ್ನು ಗುರು ಪಡೆದಿರುತ್ತಾನೆ. ಗುರು ಸದ್ಗುರುಗಳ ಮಹತ್ವವನ್ನು ಕುರಿತು ಪ್ರಾಚೀನಕಾಲದಿಂದಲೂ ವರ್ಣಿಸುತ್ತಾ ಬಂದಿರುವುದನ್ನು ಕಾಣುತ್ತೇವೆ. ಗುರುವಿನ ಅನುಗ್ರಹ ಪಡೆಯಬೇಕೆಂಬುವವರು ಸಂಸಾರದ ಸ್ಮರಣೆಯನ್ನು ಕನಸಿನಲ್ಲಿಯೂ ನೆನಸದೆ ವೈರಾಗ್ಯ ತಾಳಿ ಗುರುವನ್ನು ಶೋಧಿಸಬೇಕು. ಗುರುವಿನಿಂದಲೇ ಸದ್ಗತಿಯೆಂದು, ಗುರುಕೃಪಾಕಟಾಕ್ಷವನ್ನು ಪಡೆಯಲು, ಗುರುವನ್ನು ಆರಾಧಿಸಲು ಹಾತೊರೆಯುತ್ತಿರಬೇಕು. ಅಂಥಗುರುವು ಹೇಗಿರುವನೆಂದರೆ -

ಗುರು ಅಖಂಡನು ಗುರುವಗಮ್ಯನು
ಗುರು ಅಸಾಧ್ಯನು ಗುರು ಅಭೇದ್ಯನು
ಗುರು ಅಚೋದ್ಯನು ಗುರು ಅಗೋಚರ ಗುರುವೆ ಅನಾದಿ ||
ಗುರು ನಿತ್ಯಾನಿತ್ಯ ವಸ್ತುವು
ಗುರುವೆ ಸಚ್ಚಿದಾನಂದ ಚಿನ್ಮಯ
ಗುರುವೆ ತಾರಕಮೂರ್ತಿ ಸುಗುಣಾಕಾರ ರೂಪೆಂದ ||[೧೧]

ಶಾಸ್ತ್ರ ಗ್ರಂಥಗಳಲ್ಲಿ ಉಲ್ಲೇಖವಾಗಿರುವಂತೆ "ಗುರು" ಶಬ್ದವು ಪರಮ ಶ್ರೇಷ್ಠವಾದುದು. "ಗು ಕಾರೋ ಅಂಧಕಾರಶ್ಚ ರು ಕಾರೋ ರನ್ನಿವಾರಕಃ |" ಅಂದರೆ ಮನದಲ್ಲಿರುವ ಅಜ್ಞಾನವೆಂಬ ಕತ್ತಲನ್ನು ಕಳೆದು, ಬೆಳಕಿನ ಪ್ರಕಾಶಕ್ಕೆ ತರುವವನು. ಗುರುವಿನಲ್ಲಿ ಮಾಯಾಮೋಹಗಳಿರುವುದಿಲ್ಲ. ಶಿಷ್ಯನ ಅಜ್ಞಾನವೆಂಬ ಕತ್ತಲೆಯನ್ನು ಅವನ ನಿಜ ಜ್ಞಾನವೆಂಬ ಪ್ರಕಾಶದಿಂದ ಹೋಗಲಾಡಿಸುವವನೇ ಸದ್ಗುರುವು. ಲೌಕಿಕ ಬಂಧನದಲ್ಲಿ ಸಿಲುಕಿ ದುಃಖಿಸುವವರನ್ನು, ಇಂದ್ರಿಯಗಳನ್ನು ನಿಗ್ರಹಿಸಿ ವೈರಾಗ್ಯ ಬೋಧಿಸುತ್ತಾನೆ. ಶಿಷ್ಯನಾಗ ಬಯಸುವವನ ಬಂಧನಗಳನ್ನು ಹೋಗಲಾಡಿಸಿ, ತತ್ತ್ವಮಸಿ ಮಹಾವಾಕ್ಯ ಬೋಧಿಸಿ ನೀನೇ ಪರಮಾತ್ಮನೆಂದು ಬೋಧಿಸುತ್ತಾನೆ. ತಾಪತ್ರಯಗಳಲ್ಲಿ ಸಿಲುಕಿ ದೇಹಾದಿ ವಾಸನೆಗಳಲ್ಲಿ ಸಿಲುಕಿದವರನ್ನು ಬಿಡುಗಡೆ ಮಾಡುವವನು ಸದ್ಗುರುವು. ಪರಮಾರ್ಥವಾದ ಪರಮ ವೈರಾಗ್ಯವನ್ನು ಪಡೆದಿರುವ ಶಿಷ್ಯನಲ್ಲಿ ಏನನ್ನೂ ಬಯಸದೆ ಪರಮತತ್ತ್ವವನ್ನು ಬೋಧಿಸುವವನು, ಜಾತಿ, ಕುಲ, ಧರ್ಮಗಳೊಂದನ್ನು ನೋಡದೆ ಶಿಷ್ಯನಲ್ಲಿ ಪರಮ ವಿರಕ್ತಿಯೊಂದನ್ನೇ ನೋಡುತ್ತಿರುತ್ತಾನೆ. ಗುರುವು ನಿತ್ಯ ಸುಖಿ, ಪರಿಪೂರ್ಣ ಆನಂದನು. ಶಮೆ, ದಮೆ ಮುಂತಾದ ಅತ್ಯಧಿಕ ಗುಣಗಳ ಮೊತ್ತ ಹಾಗೂ ಸರ್ವಸಾಕ್ಷಿಸಂಗಹರನು. ಅವಿದ್ಯೆ ಎಂಬ ಕತ್ತಲಿಗೆ ಸೂರ್ಯನಂತವನು. ಸರ್ವಗುಣ ಸಂಪನ್ನನು. ಇವನಿಗೆ ಕುಲವಿಲ್ಲ. ಜಾತ್ಯತೀತ, ಪಂಥಾತೀತ ಹಾಗೂ ನಿಗಮಾತೀತನು. ಸರ್ವ ಜಗಕ್ಕೆಲ್ಲಾ ಗುರು ಸ್ವರೂಪನಾಗಿರುತ್ತಾನೆ. ಯಾವ ವಿದ್ಯೆಯನ್ನು ಕಲಿಯಬೇಕಾದರೂ ಗುರುವನ್ನು ಆಶ್ರಯಿಸಬೇಕು. ಭಕ್ತಿಯಿಂದ ಗುರುಸೇವೆ ಮಾಡಿ ಗುರುಕೃಪಾಶೀರ್ವಾದ ಪಡೆಯಬೇಕು.

ಮೋಕ್ಷ ಬಯಸುವ ಶಿಷ್ಯ : ನಿರಹಂಕಾರಿ, ಪರಮ ವಿರಕ್ತ, ಸದ್ಗುರುಭಕ್ತಿಯಿರುವವನೇ ಶಿಷ್ಯ. ಸಕಲ ವಿಷಯಗಳಲ್ಲಿ ವಿರಕ್ತಿ ಹೊಂದಿ ಆಸಕ್ತಿಯಿಂದ ಗುರುಸೇವೆಯಲ್ಲಿ ಅನುರಕ್ತನಾಗಿರುತ್ತಾನೆ. ಗುರುವೇ ಬ್ರಹ್ಮ, ಗುರುವೇ ವಿಷ್ಣು, ಗುರುವೇ ಶಿವನು, ಗುರುವೇ ಪರತತ್ತ್ವ, ಸರ್ವವೂ ಗುರುವೇ ಎಂದು ತಿಳಿದವನು ಆದರ್ಶ ಶಿಷ್ಯನಾಗುತ್ತಾನೆ. ಇದಕ್ಕಾಗಿ ವಿಧೇಯತೆ, ಆಸಕ್ತಿ, ಭಕ್ತಿ, ಶ್ರದ್ಧೆ, ಶಿಷ್ಯನಲ್ಲಿ ಮುಖ್ಯವಾಗಿ ಅಳವಡಿಸಿಕೊಳ್ಳಬೇಕಾಗುತ್ತದೆ.

ಗುರುವ ಪಾದವ ಹೊಂದಿ ತಾನಾ
ಗುರುವ ಸೇವಿಸುತಿರ್ದು, ನಿತ್ಯದಿ
ಗುರು ಪ್ರಸಾದವನುಂಡು ಗುರುಚರಣೋದಕವ ಕುಡಿದು ||
ಗುರುವ ಧ್ಯಾನಿಸಿ, ಗುರುವ ಪೂಜಿಸಿ,
ಗುರುವ ಸ್ತುತಿಸಿಯೆ ಗುರುವ ಹಾಡಿಯೆ
ಗುರುವ ನೆನೆವುತ್ತಿಹುದದೇ ಸತ್ಪಥವು ಕೇಳೆಂದ ||[೨]

ಗುರುಚರಣಗಳೇ ತನ್ನ ಪೂಜಾಮೂಲವು ಮತ್ತು ಗುರುಕಟಾಕ್ಷವೇ ತನ್ನ ಮುಕ್ತಿಗೆ ಕಾರಣವೆಂದು ನಿತ್ಯ ಅರಿತಿರುವವನೇ ಉತ್ತಮ ಶಿಷ್ಯ. ಶಿಷ್ಯನಾದವನು ತನ್ನ ದೇಹದ ಉಸಿರಿರುವವರೆಗೂ ಮನದಲ್ಲಿ ಗುರುವನ್ನು ಸ್ಮರಿಸುತ್ತಿರಬೇಕು. ಗುರುವಿನಿಂದ ದೂರವಿದ್ದರೂ ಗುರುವನ್ನು ಮರೆತಿರಬಾರದು. ಗುರುವೇನೇ ಹೇಳಿದರೂ ಅದರ ಬಗ್ಗೆ ವಿಮರ್ಶಿಸದೆ, ನ್ಯಾಯ-ಅನ್ಯಾಯಗಳ ಬಗ್ಗೆ ಯೋಚಿಸದೆ ಆ ಕಾರ್ಯವನ್ನು ಪೂರೈಸಿ ಗುರುವಿನ ಮೆಚ್ಚುಗೆ ಪಡೆಯಬೇಕು. ಶಿಷ್ಯನಾದವನು ಗುರುವಿಗಾಗಿ ತನು-ಮನಗಳ ಸೇವೆಯನ್ನು ಮೀಸಲಿಟ್ಟಿರಬೇಕು.

ತನುಮನವು ಧನವೆಂಬ ವಾಸನ
ವೆನಿತುಯೇನಿಲ್ ಎಲ್ಲವೊಪ್ಪಿಸಿ
ತನುಗುಣಗಳೆನಗೇನುಯಿಲ್ಲವು ಧನವು ಅದುಯಿಲ್ಲ ।
ಮನವುಯಿಲ್ಲವು ಚಿಂತೆಯೆಲ್ಲಿಹು
ದನಿತು ಗುರುರಾಯನದುಯೆಂದೇ
ಮನವು ಒಪ್ಪಿಯೆ ಭಜಿಸುವನೆ ಸಚ್ಛಿಷ್ಯ ಕೇಳೆಂದ ‖ [೧೩]

ತ್ರಿಕರಣಪೂರಕವಾಗಿ ಗುರುವಿನ ಸೇವೆಯಲ್ಲಿ ಒಂದಾಗಬೇಕು. ಗುರುಸೇವೆಯಲ್ಲಿಯೆ ಸುಖ ಹೊಂದುತ್ತಾ ಧ್ಯಾನಾಸಕ್ತನಾಗಿರಬೇಕು. ತನ್ನದೆಂಬ ಭಾವನೆಯನ್ನು ಸಂಪೂರ್ಣ ಕಿತ್ತೆಸೆದು, ಸರ್ವವೂ ಗುರುವಿನದೆಂಬ ಭಕ್ತಿಭಾವವನ್ನು ಹೊಂದಿರಬೇಕು. ಲೋಕದ ಮಾತಿಗೆ ಕಿವಿಗೊಡದೆ ಸದ್ಭಾವದಿಂದ ಗುರುಸೇವೆ ಮಾಡುತ್ತಿರಬೇಕು.

ಗುರುಸೇವೆ : ಮನದಲ್ಲಿ ಸಂಕೋಚವಿಲ್ಲದೆ ಗುರುವಿಗೆ ತನು-ಮನ-ಧನಗಳನ್ನು ಒಪ್ಪಿಸಿ, ಗುರುಪಥ ಪಡೆಯಬಹುದು. ಗುರುವಿನ, ಗುರುಮಠದ ಕೆಲಸವನ್ನು ಕಿಂಚಿತ್ತು ಹಿಂಜರಿಯದೆ ಹಸಿವು ತೃಷೆಗಳೆಲ್ಲವ ದೂರಮಾಡಿ ಸೇವೆಗೈಯುತ್ತಿರಬೇಕು. ಇಂತಹ ಗುರುಸೇವೆಯಲ್ಲಿ - ೧. ಅಂಗ ಸೇವೆ ೨. ಆಪ್ತ ಸೇವೆ ೩. ಸ್ಥಾನ ೪. ಸದ್ಭಾವನೆ ಎಂಬ ನಾಲ್ಕು ವಿಧಗಳಿವೆಯೆಂದು ಚಿದಾನಂದವಧೂತರು ಜ್ಞಾನಸಿಂಧುವಿನಲ್ಲಿ ತಿಳಿಸುತ್ತಾರೆ.

೧. ಅಂಗ ಸೇವೆ : ಶಿಷ್ಯನಾದವನು ಗುರುವಿನ ಕೈ, ಕಾಲು, ಮೈಯನ್ನು ಒತ್ತುತ್ತಿರಬೇಕು. ಗುರುವಿನ ಒಡನಾಡಿಯಾಗಿದ್ದು, ಸ್ನಾನ, ಊಟ, ನಿದ್ರೆಗಳ ಮಾಡಿಸುತ್ತಿರಬೇಕು. ಅಂಗಸೇವೆಯಲ್ಲಿ ಹಿಂಜರಿಕೆ ಮನಸ್ಸು ತೋರದೆ ತೃಪ್ತಿಯಿಂದ ವಿಶಾಲಬುದ್ಧಿಯಲ್ಲಿದ್ದು ಸೇವೆ ಮಾಡಬೇಕು.

೨. ಆಪ್ತ ಸೇವೆ : ಗುರುವಿನ ಸನಿಹದಲ್ಲಿದ್ದು, ಮೋಹಭ್ರಾಂತಿಗಳ ಬಿಟ್ಟು ಗುರುವಿಗೆ ಅನುಕೂಲ ರೀತಿಯಲ್ಲಿದ್ದು, ಸೇವೆಗೈಯುತ್ತಿರಬೇಕು.

೩. ಸ್ಥಾನ : ಗುರುವಿರುವ ಸ್ಥಳವೇ ಸ್ವಸ್ಥಾನವೆಂದು ತಿಳಿದಿರಬೇಕು. ಗುರುವೇ ಶಿವನೆಂದು ತಿಳಿದು ಗುರುಧ್ಯಾನ ಮಾಡುತ್ತಿರಬೇಕು.

೪. ಸದ್ಭಾವನೆ : ಗುರುವೆ ಸಾಕ್ಷಾತ್ ಪರಬ್ರಹ್ಮನೆಂದು ತಿಳಿದಿರಬೇಕು. ದೇವರಿಗಿಂತಲೂ, ಗುರುವೆ ಅಧಿಕ ಎನ್ನುವ ಭಾವನೆ ಹೊಂದಿದ್ದು, ಗುರು ಧ್ಯಾನವೆ ಸರ್ವದೇವರ ಧ್ಯಾನವೆಂದರಿತು ಸೇವೆ ಮಾಡುತ್ತಿರಬೇಕು. ಈಭಾವನೆಯಲ್ಲಿ ಸೇವೆಸಲ್ಲಿಸಿದ ಸಾಧಕನಿ ಗುರುಸೇವೆಯನ್ನು ನಿಜಗುಣಶಿವಯೋಗಿಗಳು ಹೇಳಿರುವಂತೆ- "ವೈರಾಗ್ಯದ ಸುಖವನ್ನು ಬಲ್ಲ, ಸಾರ ಶ್ರುತಿಪಥವನ್ನು ಬಲ, ದೇಹಾದಿಗಳೇ ಆತ್ಮವೆಂಬ ಭಾವನೆಯನ್ನು ನಿವಾರಿಸುವ ಮತ್ತು ಆತ್ಮ ವಿಚಾರದಲ್ಲೇ ನಿರತನಾಗಿರುವ ಗುರುವಿನ ಬಳಿಗೆ ಮುಮುಕ್ಷುವಾದವನು ಹೋಗಿ ಮನಃಪೂರ್ವಕವಾಗಿ ಆ ಗುರುವಿನೊಡನೆ ವಿಚಾರ ಮಾಡುತ್ತ ಶಾಸ್ತ್ರ ಶ್ರವಣಮಾಡುತ್ತ, ಈ ಸಂಸಾರದ ಘೋರ ಪರಿಣಾಮಗಳನ್ನು ಮನಗಾಣುತ್ತ ಇರುವುದು."[೧೪] ಈ ರೀತಿ ಶಿಷ್ಯನು ಗುರುಸೇವೆ ಮಾಡುತ್ತಾ, ಗುರುವಿನೊಡನೆ ವಿಚಾರ ಮಾಡುತ್ತಾ, ಆತನೆ ತನ್ನ ಸದ್ಗತಿಗೆ ಒಡೆಯನು, ಮುಕ್ತಿದಾತನು, ಪರಿಪೂರ್ಣನೆಂದು ತಿಳಿದು, ಗುರು

ಕಟಾಕ್ಷವನ್ನು ಪಡೆದು ಗುರುವಿನಿಂದ ಬ್ರಹ್ಮೋಪದೇಶ ಪಡೆಯುತ್ತಾನೆ. ಗುರುವೂ ಸಹ ಶಿಷ್ಯನ ಈ ಆತ್ಮ ನಿವೇದನೆಯ ಭಕ್ತಿಯನ್ನು ಕಲ್ಮಶರಹಿತ ಸೇವಾಮನೋಭಾವವನ್ನು ಕಂಡು ಸಂತೋಷಿತನಾಗಿ, ಶಿಷ್ಯನನ್ನು ತನ್ನ ಪಕ್ಕದಲ್ಲಿ ಕುಳ್ಳಿರಿಸಿಕೊಂಡು ಆತನಿಗೆ ಬ್ರಹ್ಮೋಪದೇಶ ನೀಡಿ ಅನುಗ್ರಹಿಸುತ್ತಾನೆ.

ಸಕಲ ವಿಷಯಗಳನ್ನು ಬಿಡುವಂತೆ, ಸಕಲ ಸುಖವನ್ನು ತೊರೆಯುವಂತೆ, ಉಪದೇಶಿಸುವ ಸದ್ಗುರುವಿನಿಂದ ವೇದ ರಹಸ್ಯಾರ್ಥಗಳನ್ನು ಕೇಳುತ್ತಾನೆ. ಈ ಸಮಯದಲ್ಲಿ ಶಿಷ್ಯನು ಈಶ್ವರ ಲಕ್ಷಣವನ್ನು, ಜೀವನ ಲಕ್ಷಣವನ್ನು ಮತ್ತು ಜೀವೇಶ್ವರ ಐಕ್ಯವನ್ನು ವಿವೇಚಿಸಿ ಭಾವಿಸುತ್ತಾನೆ. ಇದನ್ನೇ ಆಧ್ಯಾತ್ಮ ವಿಚಾರ ಎನ್ನುತ್ತಾರೆ. “ಗುರುವಿನಿಂದ ಅರಿಯಬೇಕಾದುದನ್ನೆಲ್ಲಾ ಅರಿತು, ಅರಿತ ಆ ಅರ್ಥದಲ್ಲಿಯೇ ಅಭಿರತಿಯುಳ್ಳವನು ಯೋಗಿ. ಕಳಚಿದ ಪೊರೆಯನ್ನು ಸೋಕಿಯೂ, ಸೋಕದಿರುವ ಸರ್ಪನಂತೆ ಯೋಗಿಯು ಈ ಸಂಸಾರದಲ್ಲಿದ್ದು ನಿಸ್ಸಂಗಿಯಾಗಿರುವನು. ವೈರಾಗ್ಯದ ಬಲದಿಂದ ಬಿಟ್ಟಿದ್ದ ವಾಸನೆಯೊಂದನ್ನು ಬಳಿಸಾರಗೊಡನವನು. ತೊಟ್ಟಿದ್ದ ಭ್ರಾಂತಿಗಳನ್ನೆಲ್ಲಾ ಕಳಚಿ ಬಿಸುಟಿರುವವನು. ಶಾಂತಿ, ಸುಖ ತನಗೆ ಅಳವಟ್ಟ ಮೇಲೆ, ತನ್ನ ಸುವಿಚಾರಕ್ಕೆ ವಿಘ್ನಕಾರಿಯಾದ ಪೂರ್ವಾರ್ಥದ ನಿಯತಿಯ ಬಳಕೆಯನ್ನು ಬಿಟ್ಟು ತತ್ತ್ವಮಸಿ ಎಂಬ ಮಹಾವಾಕ್ಯವನ್ನು ಗುರುವಿನಿಂದ ತಿಳಿಯುವನು.”[೧೫] ಗುರುವಿನ ಸಂಗದಿಂದ, ಗುರುವಿನ ಉಪದೇಶದಿಂದ ಜ್ಞಾನ ಪಡೆದ ಶಿಷ್ಯನು ತಾನೆ ಗುರುವಾಗುತ್ತಾನೆ. ನಿತ್ಯ ತೃಪ್ತನಾಗುತ್ತಾನೆ. ಕೊನೆಗೆ ಅದ್ವೈತಭಾವದಲ್ಲಿ ವಿಹರಿಸುತ್ತಾನೆ.

ಅದ್ವೈತಭಾವನೆ : ಗುರುವಿನಿಂದ ಬ್ರಹ್ಮೋಪದೇಶವನ್ನು ಪಡೆದ ಯೋಗಿಯು ಸಮಾಧಿಯೋಗದ ಸ್ಥಿತಿಯಲ್ಲಿದ್ದು, ಅದ್ವೈತಭಾವನೆ ಹೊಂದುತ್ತಾನೆ. ಅದ್ವೈತವೆಂದರೆ ಎರಡು ಅಲ್ಲದ್ದು. ಆತ್ಮವೊಂದೇ ಸದ್ವಸ್ತು. ಇತರ ಎಲ್ಲವೂ ಅನಿತ್ಯ, ಇದೇ ಅದ್ವೈತ. ಜೀವ ಬ್ರಹ್ಮರ ಅಭೇದಕ್ಕೆ ಅದ್ವೈತವೆಂದು ಹೆಸರು. ಈ ಪರಮಾರ್ಥ ಸತ್ಯದ ಸಿದ್ಧಾಂತವನ್ನು ಶಂಕರಾಚಾರ್ಯರು ಶೃತಿ, ಸ್ಮೃತಿಗಳ ಆಧಾರದಿಂದ ಪ್ರತಿಪಾದಿಸಿದ್ದಾರೆ.

“ಬ್ರಹ್ಮಸತ್ಯಂ ಜಗನ್ಮಿಥ್ಯಾ! ಜೀವೋ ಬ್ರಹ್ಮೈವನಾಪರಂ” ||

ಬ್ರಹ್ಮನು ಸತ್ಯ, ಎಲ್ಲೆಲ್ಲಿಯೂ ಬ್ರಹ್ಮವಸ್ತು ವ್ಯಾಪಿಸಿದೆ. ಅದನ್ನು ಬಿಟ್ಟು ಬೇರೆಯಾಗಿ ಕಾಣುವುದೆಲ್ಲ ಮಾಯೆಯು. ನಮ್ಮ ಕಣ್ಣಿಗೆ ಬಣ್ಣದ ಕನ್ನಡಕದಂತೆ ವಿವಿಧ ವರ್ಣಗಳನ್ನು ತೋರಿಸುತ್ತದೆ. ಅವುಗಳಿಗೆ ನಾವು ಬೇರೆ ಬೇರೆ ಹೆಸರುಗಳನ್ನು ರೂಢಿಸಿಕೊಂಡಿದ್ದೇವೆ. ಅವುಗಳನ್ನು ಪೂರ್ತಿ ಅಳಿಸಿಹಾಕಿದರೆ ಉಳಿಯುವುದು ಒಂದು ಚೈತನ್ಯ, ಅದೇ ಬ್ರಹ್ಮ. ಬ್ರಹ್ಮವು ಎಲ್ಲಾ ರೂಪಗಳ ಒಳಗೂ ಹರಿದಿರುತ್ತದೆ. ಅದನ್ನೇ 'ಅಹಂ ಬ್ರಹ್ಮಾಸ್ಮಿ, ತತ್ತ್ವಮಸಿ', 'ಸರ್ವಖಲ್ವಿದಂ ಬ್ರಹ್ಮ' ಎಂದು ಹೇಳಿರುತ್ತಾರೆ. ಆ ಒಂದು ವಸ್ತುವೇ ನಾನು, ನೀನು, ಅವನು, ಎಲ್ಲರು.

ಅದ್ವೈತಕ್ಕೆ ಸ್ತ್ರೀ-ಪುರುಷರೆಂಬ ಭೇದ ಭಾವವಿಲ್ಲ. ಜಾತಿಮತಗಳ ತಾರತಮ್ಯವಿಲ್ಲ. ಅಹಂಕಾರ ಮಮಕಾರಗಳಿಲ್ಲ, ಬಡವ ಶ್ರೀಮಂತನೆಂಬ ವ್ಯತ್ಯಾಸವಿಲ್ಲದೆ ಜ್ಯೋತಿ ಸ್ವರೂಪದಿಂದ ಹೊಳೆಯುವುದು. ಅಹಂ ಬ್ರಹ್ಮಾಸ್ಮಿ, ನಾನೇ ದೇವರು, ದೇವರೇ ನಾನೆಂಬ ತತ್ತ್ವವನ್ನು ಪ್ರಪಂಚಕ್ಕೆ ಸಾರುವ ಅದ್ವೈತೋಪಾಸಕರನ್ನು “ತತ್ತ್ವಮಸಿ” ಬೋಧಕರೆಂದು ಕರೆಯುತ್ತಾರೆ. ತತ್ತ್ವಮಸಿ ಎಂದರೆ 'ತ' ಅಂದರೆ ನಾನು, ತ್ವಂ ಅಂದರೆ ನೀನು, ಅಸಿ ಅಂದರೆ ಆಗಿದ್ದೀಯ ಎಂಬರ್ಥ ಸೂಚಿಸುತ್ತದೆ. ಅದ್ವೈತವು ನಿರಾವರಣ, ನಿರ್ಗುಣ, ಪೂರ್ಣ

ಜ್ಯೋತಿ, ಜ್ಞಾನಶರಧಿ, ಅವ್ಯಕ್ತಾತ್ಮ, ಅಚಲ, ಅನಾದಿ, ಅನಂತ, ಸತ್ಯ, ಮಂಗಳಕರ ನಿತ್ಯ ಸುಖರೂಪನು ಎಂಬ ಅರ್ಥ ಬರುತ್ತದೆ. ಈ ಅದ್ವೈತ ಮಾರ್ಗವೇ ತುರ್ಯಾತೀತವೂ, ಆರೂಢಮಾರ್ಗವೂ, ಅವಧೂತ ಮಾರ್ಗವೂ ಆಗಿರುತ್ತದೆ.

ಕಣ್ಣು ಮುಚ್ಚದೆ ಕಣ್ಣುತೆರೆಯದೆ
ಕಣ್ಣಿನಾ ಗೊಂಬೆಗಳು ನಿಂತೇ
ಕಣ್ಣ ತೆರೆಯಲು ತೆರದಿರುತ ಮುಚ್ಚಿರಲು ಮುಚ್ಚಿರುತ ।
ಕಣ್ಣರೆಪ್ಪೆಯ ಬಡಿಯದಲೆ ತೇ
ಜೋನ್ನತವೆಯಿರುತೀಹ ವಸ್ತುದು
ನ್ಮನಿಯುಯೆನಿಸುವದು ಅದು ಅದ್ವೈತ ವಸ್ತೆಂದ ॥೧೬

ಅದ್ವೈತಭಾವನೆಯಿಂದ ಸಾಧಕನು ಅರಿಯುವುದೇನೆಂದರೆ-

೧. ಬ್ರಹ್ಮವೊಂದೇ ಸತ್ಯ, ನಿತ್ಯ. ಅದಕ್ಕೆ ವ್ಯತಿರಿಕ್ತವಾದದ್ದೆಲ್ಲಾ ಅನಿತ್ಯ, ಅಸತ್ಯ, ಮಿಥ್ಯಾ ಎಂದು ತಿಳಿಯುತ್ತಾನೆ.
೨. ಪ್ರಾಪಂಚಿಕ ಸೌಖ್ಯವು ಅನಿತ್ಯ. ಹಾಗಾಗಿ ಅದರಲ್ಲಿ ಸಂಪೂರ್ಣವಿರಕ್ತಿ ತಾಳುತ್ತಾನೆ.
೩. ಶಮೆ, ದಮೆ, ಉಪರತಿ, ತಿತಿಕ್ಷಾ, ಸಮಾಧಾನ ಮತ್ತು ಶ್ರದ್ಧೆಯನ್ನು ಹೊಂದುತ್ತಾನೆ.
೪. ಮೋಕ್ಷ ಕಾಣಲು ಹಾತೊರೆಯುತ್ತಾನೆ.

ಅನ್ಯ ವಿಷಯಗಳಲ್ಲಿ ನಿರಾಸಕ್ತನಾಗಿದ್ದು, ತಾನೇ ತಾನಾಗಿ ಬೆಳಗುತ್ತ, ಮಾತುಗಳ ಉಲುಹುವಿಲ್ಲದೆ ಸದಾ ತೃಪ್ತಿಯಾಗಿದ್ದು ಹಾಯಾಗಿರುತ್ತಾನೆ. ಮನಸ್ಸಿನಲ್ಲಿ ಯಾವ ಕಲ್ಪನೆಗಳೂ ಇಲ್ಲದೆ ಒಳಹೊರಗೆ ಬರೀ ಬೆಳಗಿನ ಬಯಲು ತಾನಾಗಿ ಜೀವನ್ಮುಕ್ತರ ಹೃದಯದಲ್ಲಿ ನೆಲೆಸಿರುತ್ತಾನೆ. ಈ ಭಾವನೆಯಲ್ಲಿದ್ದವರಿಗೆ ಯಾರ ಮೇಲೂ ಪ್ರೀತಿಯಾಗಲಿ, ಅಪ್ರೀತಿಯಾಗಲಿ ಇರುವುದಿಲ್ಲ. ರಾಗ-ದ್ವೇಷಗಳಿರುವುದಿಲ್ಲ. ಅದ್ವೈತವು ಶಬ್ದಾತೀತ ವಾದುದು. ಅದಕ್ಕೆ ಇಹ-ಪರಗಳೆಂಬ ಲೋಕಗಳಿರುವುದಿಲ್ಲ. ಹೋಮ-ಹವನಗಳಾಗಲಿ, ಪೂಜೆ-ಪುನಸ್ಕಾರ ಗಳಾಗಲಿ, ಯಜ್ಞ-ಯಾಗಾದಿಗಳಾಗಲಿ ಇರುವುದಿಲ್ಲ. ಇದಕ್ಕೆ ಸ್ವಾಮಿ-ಸೇವಕರಿಲ್ಲ. ಲಾಭ-ಹಾನಿಗಳಿಲ್ಲ. ಕ್ರೋಧ, ಲೋಭ-ಮೋಹಗಳಾಗಲಿ, ಶೋಭೆ, ಅಶೋಭೆಗಳಾಗಲಿ, ಶುಭಾಶುಭಗಳಾಗಲಿ ಇರುವುದಿಲ್ಲ. ಈ ಭಾವನೆ ಯಲ್ಲಿರುವವರನ್ನು ತುರ್ಯಾತೀತರೆಂದೂ, ಪರಮಾರೂಢರೆಂದೂ, ಅವಧೂತರೆಂದೂ ಕರೆಯುತ್ತಾರೆ.

ಅದ್ವೈತದಿಂದ ನಮ್ಮ ಪ್ರತಿಯೊಂದು ವಿಚಾರ-ಭಾವನೆಗಳು, ಚಲನ ವಲನಗಳು ಉದಾತ್ತವಾಗುವವು. ವಿಶ್ವಪ್ರೇಮ, ಮಾನವ ಪ್ರೇಮ, ಲೋಕ ಕಲ್ಯಾಣ ಮೂಡುವುದು. ಸ್ವಾರ್ಥದ ಸ್ಥಳದಲ್ಲಿ ತ್ಯಾಗ, ಶೋಷಣೆಯ ಸ್ಥಳದಲ್ಲಿ ಸಹಕಾರ, ಭೇದದಲ್ಲಿ ಏಕತೆ, ಇವುಗಳಿಂದ ಲೋಕದ ಬದುಕು ಸುಖ ಸಮೃದ್ಧಿಗಳಿಂದ, ಸಾಮರಸ್ಯ ಗಳಿಂದ ಕೂಡಿ ಆನಂದಿಸುವುದು. ಅದ್ವೈತಸ್ಥಿತಿಯಲ್ಲಿದ್ದು, ಸಮಾಧಿಸ್ಥಿತಿ ತಲುಪಿದವನು ನಿತ್ಯಶುದ್ಧ ಬುದ್ಧ ಪರಮಾತ್ಮನಾಗಿ ನಿಸ್ಸಂಗದಲ್ಲಿರುತ್ತಾನೆ.

ನಿಸ್ಸಂಗ : ತನ್ಮಾತ್ರ ರೂಪದಲ್ಲಿ ನಾನಿರುವೆನೇ ಹೊರತು ಆ ಯಾವುದರಲ್ಲಿಯೂ ನಾನು ಭಾಗಿಯಾಗಿಲ್ಲ, ನಾನು ನಿರ್ದೇಹಿ ಎಂಬ ಭಾವನೆ ಹೊಂದುವುದು ನಿಸ್ಸಂಗತ್ವ. "ಈ ಸಂಸಾರದಲ್ಲಿ ಪುಣ್ಯ ವಶದಿಂದ ವೈರಾಗ್ಯ ಬಂದು, ಮೋಕ್ಷಾಪೇಕ್ಷೆಯುಂಟಾಗಿ, ಗುರುವಿನ ಸಯುಕ್ತಿಕವಾದ ಉಪದೇಶದಿಂದ ಮತ್ತು ಶಾಸ್ತ್ರಗಳ ವಿವೇಚನೆಯಿಂದ ಜಡ-ಅಜಡಗಳ ಭೇದವನ್ನು ಗುರುತಿಸಿ, ಜಡದೊಡನೆ ತನಗೇನೂ ಸಂಬಂಧವಿಲ್ಲೆಂದು ನಿಶ್ಚಯಿಸಿ, ಜಡವಾದ ಈ ದೇಹ ಮುಂತಾದುದೆಲ್ಲಾ ಸುಳ್ಳೆಂದು ಒಂದು ನಿಲುಕಡೆಗೆ ಬಂದಾಗ ಈ ವೈರಾಗ್ಯ, ಗುರೂಪದೇಶ ನಿಸ್ಸಂಗತ್ವ ಸಿದ್ಧಿಸುವುದು."[೧೭]

ನಿಸ್ಸಂಗತ್ವದಲ್ಲಿದ್ದವನಿಗೆ ಮಾಡಲೇಬೇಕಾದ ಯಾವ ಕರ್ತವ್ಯವೂ ಅವನಿಗಿರುವುದಿಲ್ಲ. ಆದ್ದರಿಂದಲೇ ಅವನಿಗೆ ಯಾವೊಂದು ಮತವೂ ಇರುವುದಿಲ್ಲ. ಸತತವೂ ಅಂತರ್ಮುಖಿಯಾಗಿ ನಿಜಾನುಭವಯೋಗದಲ್ಲಿರುತ್ತಾನೆ. ಇವನನ್ನೇ ಜ್ಞಾನ ಸನ್ಯಾಸಿಯೆಂದೂ, ಆತ್ಮಜ್ಞಾನಿಯೆಂದೂ ಕರೆಯುತ್ತಾರೆ.

ಆತ್ಮಜ್ಞಾನಿಗಳು : ಆತ್ಮನಲ್ಲಿ ವಾಸವಾಗಿರುವುದೇ ಆತ್ಮಜ್ಞಾನ. ಇವರುಗಳನ್ನು ಜ್ಞಾನ ಸನ್ಯಾಸಿಗಳೆಂದು ಕರೆಯುತ್ತಾರೆ. ಸತಿ-ಸುತ, ಧನ, ಕನಕಾದಿಗಳಲ್ಲಿ ಸಂಪೂರ್ಣ ವಿರಕ್ತಿಹೊಂದಿ, ವಿಷಯಗಳಲ್ಲಿ ಉದಾಸೀನತೆ ಪಡೆದು, ಪ್ರಾಪಂಚಿಕ ಬಂಧನವನ್ನು ಸಂಪೂರ್ಣ ತೊರೆಯುವುದೇ ಜ್ಞಾನ ಸನ್ಯಾಸತ್ವವು. ಇಂಥವರು ಜನರಲ್ಲಿ ಬೆರೆಯದೆ ಏಕಾಂತವಾಗಿದ್ದು ಸದಾ ಸಚ್ಚಿದಾನಂದ ಸ್ವರೂಪರಾಗಿ ಧ್ಯಾನಮಗ್ನರಾಗಿರುತ್ತಾರೆ. ತನ್ನ ಆತ್ಮನಾದ ಬ್ರಹ್ಮವು ಮಾತಿಗೆ ನಿಲುಕುವುದಿಲ್ಲ ಎಂದು ಸದಾ ಮೌನಿಗಳಾಗಿರುತ್ತಾರೆ. ಯಾರೊಡನೆಯೂ ಮಾತನಾಡದೆ, ಬೆರೆಯದೆ, ತತ್ತ್ವ ವಿಚಾರವನ್ನು ಕುರಿತು ಒಮ್ಮೆಯೂ ಮಾತನಾಡದೆ ಆತ್ಮಸುಖದಲ್ಲಿರುತ್ತಾರೆ.

ಜ್ಞಾನ ಸನ್ಯಾಸವನು ಕೇಳು ಭ
ವಾನಿಸುತ ಇಂದ್ರಿಗಳ ಸಂಗಿಲ್ಲ
ಮಾನ ಅವಮಾನಗಳ ಸಂಗಿಲ್ಮನದ ಸಂಗಿಲ್ಲ ।
ಏನೂ ಸಂಗಿಲ್ಲಿಹ ಪರದಿ ಮ
ತ್ತೇನು ಸಂಗಿಲ್ದೇಹದಲಿ ಆ
ತ್ಮಾನೆ ತಾನಿರೆ ಜ್ಞಾನ ಸಂಸ್ಯಾಸದುವೆ ಕೇಳೆಂದ ॥[೧೮]

ಮಾನವಮಾನಗಳ ಬಿಟ್ಟು, ಸುಖ-ದುಃಖಗಳ, ಒಳ್ಳೆಯವ-ಕೆಟ್ಟವ, ಕ್ರೋಧ, ಹಸಿವು, ಬಾಯಾರಿಕೆ, ಮರಣ, ಚಳಿ-ಮಳೆ, ಇಹ, ಪರ ಮೊದಲಾದ ಯಾವ ಸಂಗವೂ ಇಲ್ಲದೆ "ಸೋಹಂ" ಮಂತ್ರವನ್ನುಚ್ಚರಿಸುತ್ತ ನಿಸ್ಸಂಗನಾಗಿರುವುದು ಆತ್ಮಜ್ಞಾನಿಗಳ ಸ್ವಭಾವ. ಜ್ಞಾನ ಎನ್ನುವುದು ಮನಸ್ಸಿಗಲ್ಲದೆ ದೇಹಕ್ಕಲ್ಲ. ದೇಹದ ಭಾವನೆಗಳನ್ನು ಹೆಚ್ಚಿಸುವ ಕರ್ಮಸನ್ಯಾಸಿಕ್ಕಿಂತ, ಮನಸ್ಸಿಗೆ ಬೋಧಕವಾದ ಜ್ಞಾನ ಸನ್ಯಾಸವು ಶ್ರೇಷ್ಠವೆಂದು ಅನುಭಾವಿಗಳು ಹೇಳುತ್ತಾರೆ. ಆತ್ಮಜ್ಞಾನವನ್ನು ಪಡೆದ ಜ್ಞಾನಸನ್ಯಾಸಿಯು ಏಕಾಂಗಿಯಾಗಿದ್ದು, ನಿರ್ದೋಷನಾಗಿದ್ದು ಜೀವನ್ಮುಕ್ತಿ ಹೊಂದುತ್ತಾನೆ. ಇಂಥಹ ಜ್ಞಾನ ಸನ್ಯಾಸಿಗಳನ್ನು ಪರಮಹಂಸರೆಂದೂ, ಅವಧೂತನೆಂದೂ, ಅದ್ವಯನೆಂದೂ ಕರೆಯುತ್ತಾರೆ. ಇಂಥ ಮಹಾತ್ಮರುಗಳ ಮಾರ್ಗವು ಲೋಕಕ್ಕೆ ಭಿನ್ನವಾಗಿದ್ದು, ನೋಡುಗರಿಗೆ ವಿಚಿತ್ರವೆನಿಸುತ್ತದೆ.

ಪರಮಹಂಸಾ ಶ್ರಮವ ಕೇಳ್ಕೆ
ತರಳ ಕರ್ಮಾ ಮಾರ್ಗವಾದುದ
ಗುರುಮುಖದಿ ದಂಡವನು ಕಮಂಡಲವ ತಾ ತ್ಯಜಿಸಿ ||
ಹೊರಯಿಕೊಳಯಿಕೆ ಅಂಡ ಕಾಣಿಪ
ತೆರೆದಿ ಕಿರಿಕೌಪೀನ ಹಾಕಿಯೆ
ಬರಿಯ ದೇಹದಿ ಶೀತಕಂಜದೆಯಿಹನು ಅವನೆಂದ ||೯

ಗುರುಮುಖದಿಂದ ಉಪದೇಶ ಪಡೆದು ದಂಡ ಕಮಂಡಲವ ತ್ಯಜಿಸಿ, ಒಂದು ತುಂಡು ಕೌಪೀನಧರಿಸಿ, ಚಳಿ-ಮಳೆ-ಶೀತಕ್ಕಂಜದೆ ಬರಿ ಮೈಯಲ್ಲೆ ಅಲೆದಾಡುತ್ತಿರುತ್ತಾನೆ. ಇವನಿಗೆ ಮನೆ, ಮಠ, ಮಂದಿರಗಳ ಸಂಗ ಇರುವುದಿಲ್ಲ. ದೇಹ ರಕ್ಷಣೆಯ ಚಿಂತೆಯಿರುವುದಿಲ್ಲ. ಸದಾ ಸ್ವತಂತ್ರನಾಗಿದ್ದು, ಏಕಾಂಗಿಯಾಗಿ, ಬ್ರಹ್ಮಭಾವದಿಂದ ಸಂಚರಿಸುತ್ತಿರುತ್ತಾನೆ. ಅಹಂಕಾರ, ವಾಸನೆ, ತಾಪತ್ರಯಗಳ ಲೇಪನವಾಗದೆ ಮುಕ್ತಿ ಪಡೆಯುತ್ತಾನೆ. ಜಗಕೆ ತಾ ಮರುಳು, ತನಗೆ ಜಗ ಮರುಳು ಎಂಬಂತೆ, ಲೋಕದ ಕಣ್ಣಿಗೆ ಹುಚ್ಚರಂತೆ ತೋರಿದರೂ, ಅಂತರಂಗದಲ್ಲಿ ಪರಶಿವ ತತ್ತ್ವದ ಮೂಲ ರಹಸ್ಯವನ್ನು ಕಂಡಿರುತ್ತಾರೆ.

ಅರಿವು ತಾನೆಂದದನರಿಯೆ ಜಾಗರಣವಾ
ನರಿಯೆ ನಾನಾರೆಂಬರಿವು ಸ್ವಪ್ನ
ನೆರೆ ತನ್ನನರಿವೆಂದರಿಯಲದು ಸುಪ್ತಿ
ಮರೆಯದಿರಿವನಂಬುಜಾನನೆ || (೪-೨೧-೧)

ಬರಿಯರಿವಾನೆಂಬ ತಿಳಿವು ತನ್ನೊಳು ತೋರಿ
ಕಲಿಗೊಂಡು ದೃಢವಾಗಲದು ತುರ್ಯ
ನೆರೆ ಮರೆದುದು ನಿಂದೊಡೆ ತುರಿಯಾತೀತ
ವರಿ ನಿಜವದು ತಾನೇ ಪರಮಾತ್ಮ || (೪-೨೧-೨)

ಪರಮಾತ್ಮ ತಾನೆಂದು ಪರಿಕಿಸಿ ಜಗವಿದು
ಪರಮಾರ್ಥ ದಿಂದವೆ ಪುಸಿಯಂದು
ಪರಮಾನುಭವದಿಂದರಿದು ನಿಲಲದು ನಿರಾ
ವರಣ ಸಮಾಧಿಯೆಂದೆನಿಪುದು || (೪-೨೧-೩)

ಇದು ಪರಬ್ರಹ್ಮವೆಂದಿದು ಸತ್ಯವೆಂದು ತಾ
ನಿದರಲಿ ನಿಶ್ಚಲೀಕೃತ ಮಾಗಿ
ಪದಪಿಂದೆ ನಿಲೆ ನಿರ್ಮಲಾಂಗಿ ನೀನರಿದು ನಂ
ಬಿದು ನಿಸ್ಸಮಾಧಿಯೆಂದೆನಿಸುವುದು || (೪-೨೧-೪)

ಬರಿಯರಿವಿನೊಳು ಭಾವನೆ ಲಯಿಸಿ ಬೇರೇನೂ
ವರಿಯದಂತಡಗಿ ತಾನಿರಲದು
ಮರೆಯದರಿಯದವಿರಳ ಪರಬ್ರಹ್ಮವಂ
ದರದಿಹುದಂಗನೆ ಸುಖದೊಳು ॥ (೪-೨೧-೫) [೨೦]

ಅರಿವು ತಾನೆಂದರಿತರೆ ಜಾಗರಣ, ನಾನು ಯಾರು ಎಂಬ ಅರಿವೆ ಸ್ವಪ್ನ, ನನ್ನನ್ನು ನಾನು ಅರಿದೆನೆಂದು ಕಿಂಚಿತ್ತು ಅರಿಯದಿರಲದು ಸುಪ್ತಿ, ಬರಿಯ ಅರಿವೆ ನಾನು ಎಂಬ ತಿಳಿವು, ತನ್ನಲ್ಲಿ ತೋರಿಕೆಗೊಂಡು ದೃಢವಾಗಲದು ತುರ್ಯ, ಆ ತುರ್ಯವನ್ನು ಮರೆತು ನಿಂತರೆ ತುರ್ಯಾತೀತ. ಈ ತುರ್ಯಾತೀತವೆ ನಿಜವಾದ ಪರಮಾತ್ಮ. ಇದನ್ನೇ ತಾನೆಂದು ತಿಳಿದು ಪರಮಾನುಭವದಲ್ಲಿ ನಿಂತರೆ ಅದೇ ನಿರಾವರಣ ಸಮಾಧಿ. ಈ ನಿರಾವರಣ ಸಮಾಧಿಯೇ ಪರಬ್ರಹ್ಮ, ಅದೇ ಸತ್ಯವೆಂದು ಅದರಲ್ಲಿ ನಿಶ್ಚಲವಾಗಿ ನಿಲ್ಲಲು ನಿಸ್ಸಮಾಧಿ. ಈ ಎಲ್ಲ ಮಾರ್ಗಗಳಲ್ಲಿ ಸಂಚರಿಸಿ ಆತ್ಮಜ್ಞಾನದಲ್ಲಿ ನೆಲೆನಿಲ್ಲುತ್ತಾನೆ. ಅಂಥವನನ್ನು ಪರಮಾನುಭವಿಗಳೆಂದೂ, ಅವಧೂತರೆಂದೂ ಕರೆಯುತ್ತೇವೆ.

೨. ೩. ಅವಧೂತ ಲಕ್ಷಣಗಳು

ಅರ್ಥವತ್ತಾದ ಮತ್ತು ಶಾಸ್ತ್ರೀಯ ಶಬ್ಧವಾದ "ಅವಧೂತ" ಎಂಬ ಪದವು ಇಂದು ವಿಶೇಷವೆನಿಸಿದರೂ, "ಅವಧೂತ" ಎಂಬ ಪರಿಕಲ್ಪನೆ ಪ್ರಾಚೀನ ಕಾಲದಿಂದಲೂ ಇತ್ತೆಂದು, ಇದರ ಚಾರಿತ್ರಿಕ ವಿಕಾಸದಿಂದ ತಿಳಿದು ಬರುತ್ತದೆ. ವೇದ, ಉಪನಿಷತ್ತು, ಭಾಗವತ ಮುಂತಾದ ಆಧ್ಯಾತ್ಮಿಕ ಪ್ರಾಚೀನ ಪುರಾಣಗಳಲ್ಲಿ ಅವಧೂತನೆಂದರೆ ಯಾರು? ಅವನ ಲಕ್ಷಣಗಳೇನು? ಎಂಬುದರ ವಿವರಣೆಯಿದೆ.

ಯುಜರ್ವೇದಾಂತರ್ಗತವಾದ ಅವಧೂತ ಉಪನಿಷತ್ತಿನಲ್ಲಿ, ಅವಧೂತ ಶಿಖಾಮಣಿಯಾದ ದತ್ತಾತ್ರೇಯನು ಸಾಂಕೃತಿ ಎಂಬ ಮುಮುಕ್ಷುವಿಗೆ ಪ್ರತ್ಯುತ್ತರವಾಗಿ ಅವಧೂತನ ವಿವರಣೆಯನ್ನು ನೀಡುತ್ತಾರೆ. ಅದರ ವಿವರಣೆ ಹೀಗಿದೆ.

ಅಕ್ಷರತ್ವಾತ್ ವರೇಣ್ಯತ್ವಾತ್ । ಧೂತ ಸಂಸಾರ ಬಂಧನಾತ್ ।
ತತ್ವ ಮಸ್ಯಾದಿ ಲಕ್ಷ್ಯತ್ವಾತ್ । ಅವಧೂತ ಇತೀರ್ಯತೇ ॥ [೨೧]

'ಅ' ಎಂದರೆ ನಾಶರಹಿತನು

'ವ' ಎಂದರೆ ಪುರುಷೋತ್ತಮನು

'ಧೂ' ಎಂದರೆ ಅಭಿಮಾನವೆಂಬ ಸಂಸಾರ ವಿಷಯಗಳೆಲ್ಲವನ್ನು ಬಿಟ್ಟವನು.

'ತ' ಎಂದರೆ ಆ ಪರಮಾತ್ಮನೇ ನಾನು. ನಾನೆ ಆ ಪರಮಾತ್ಮನೆಂಬ ಜೀವಾತ್ಮ ಪರಮಾತ್ಮರ ಐಕ್ಯಭಾವವನ್ನು ಹೊಂದಿರುವವನು.

ಒಟ್ಟಾರೆಯಾಗಿ ನಾಶರಹಿತನೂ, ಪುರುಷಶ್ರೇಷ್ಠನೂ, ಸಂಸಾರ ಬಂಧನಗಳನ್ನು ಕಳೆದು ಬಿಟ್ಟಿರುವವನೂ ಮತ್ತು ಜೀವ ಬ್ರಹ್ಮೈಕ್ಯ ಜ್ಞಾನವನ್ನು ಹೊಂದಿರುವವನೂ ಅವಧೂತನೆನಿಸಿಕೊಳ್ಳುತ್ತಾನೆಂದು ಹೇಳುತ್ತಾರೆ.

[illegible]

ವೇದ ವರ್ಣಗಳ ತತ್ತ್ವವನ್ನು ಚೆನ್ನಾಗಿ ತಿಳಿದಿರುವ ವೇದವೇದಾಂತವಾದಿಗಳಾದ ಆಚಾರ್ಯರಿಂದ 'ಅವಧೂತ' ಪದದ ವ್ಯಾಖ್ಯಾನ ಈ ರೀತಿಯಿದೆ. ಹರಿಯ ಅಂಶದಿಂದ ಹುಟ್ಟಿದ ದತ್ತಾತ್ರೇಯನು ಯದುರಾಜನಿಗೆ ಉಪದೇಶ ಮಾಡಿದನೆನ್ನಲಾದ 'ಅವಧೂತ ಗೀತಾ'ದಲ್ಲಿ 'ಅವಧೂತ' ಪದದ ವ್ಯಾಖ್ಯಾನ ಈ ರೀತಿ ಇದೆ.

ಆಶಾಪಾಶವಿನಿರ್ಮುಕ್ತ ಆದಿಮಧ್ಯಾಂತ ನಿರ್ಮಲಃ ।
ಆನಂದೇ ವರ್ತತೆ ನಿತ್ಯಂ 'ಅ' ಕಾರಂ ತಸ್ಯ ಲಕ್ಷಣಮ್ ॥[೨೨]

"ಅ" ಎಂಬ ಅಕ್ಷರಕ್ಕೆ ಆಶಾಪಾಶಗಳಿಂದ ಪಾರಾದವನು, ಆದಿ ಮಧ್ಯ ಅಂತ್ಯಗಳಲ್ಲಿ ನಿರ್ಮಲನಾದವನು, ನಿತ್ಯವೂ ಆನಂದದಲ್ಲಿ ತಲ್ಲೀನನಾಗಿರುವನು ಎಂದರ್ಥ.

ವಾಸನಾವರ್ಜಿತಾ ಯೇನ ವಕ್ತವ್ಯಂ ಚ ನಿರಾಮಯಮ್ ।
ವರ್ತಮಾನೇಷು ವರ್ತೇತ 'ವ' ಕಾರಂ ತಸ್ಯ ಲಕ್ಷಣಮ್ ॥[೨೩]

"ವ" ಎಂಬ ಅಕ್ಷರಕ್ಕೆ ಜನ್ಮಾಂತರ ವಾಸನೆಗಳನ್ನು ತ್ಯಜಿಸಿದವನು, ನಿರಾಮಯನು, ಅನವರತವೂ ವರ್ತಮಾನದಲ್ಲಿ ತಲ್ಲೀನನಾಗಿರುವವನು ಎಂದರ್ಥ.

ಧೂಳಿಧೂಸರ ಗಾತ್ರಾಣಿ ಧೂತಚಿತ್ತೋ ನಿರಾಮಯಃ ।
ಧಾರಣ ಧ್ಯಾನ ನಿರ್ಮುಕ್ತೋ 'ಧೂ' ಕಾರಸ್ತಸ್ಯ ಲಕ್ಷಣಮ್ ॥[೨೪]

"ಧೂ" ಎಂಬ ಅಕ್ಷರಕ್ಕೆ ಅವನ ದೇಹ ಧೂಳಿನಿಂದ ತುಂಬಿದ್ದರೂ, ಮನಸ್ಸು ಅಶುಚಿಯನ್ನೆಲ್ಲ ಕಳೆದುಕೊಂಡಿರುವುದು. ಧಾರಣ, ಧ್ಯಾನಗಳಿಂದ ನಿರ್ಮುಕ್ತನಾಗಿರುವವನು.

ತತ್ತ್ವಚಿಂತಾ ಧೃತಾಯೇನ ಚಿಂತಾಚೇಷ್ಟಾವಿವರ್ಜಿತಃ ।
ತಮೋಹಂಕಾರ ನಿರ್ಮುಕ್ತ ಸ್ತಕಾರಸ್ತಸ್ಯ ಲಕ್ಷಣಮ್ ॥[೨೫]

"ತ" ಎಂಬ ಅಕ್ಷರಕ್ಕೆ, ತತ್ತ್ವಚಿಂತನೆಯನ್ನು ಮಾಡುವವನು. ಚಿಂತೆಯನ್ನೂ, ಪ್ರವೃತ್ತಿಯನ್ನೂ ತೊರೆದವನು ಹಾಗೂ ಅಹಂಕಾರದಿಂದ ಪಾರಾದವನು ಎಂದರ್ಥ. ಆನಂದಸ್ವರೂಪನೂ, ಅವಧೂತನೂ ಆದ ದತ್ತಾತ್ರೇಯನಿಂದ 'ಅವಧೂತ' ಪದದ ವ್ಯಾಖ್ಯಾನ ಈ ರೀತಿ ರಚಿಸಲ್ಪಟ್ಟಿದೆ.

ಪರಮಾರ್ಥ ಪದಕೋಶದಲ್ಲಿ ವ್ಯಾಖ್ಯಾನಿಸಿರುವಂತೆ -

'ಅ' ಎಂದರೆ ಸಮಸ್ತರಾಗ ಭಾವದೂರವಾದ ಶುದ್ಧ-ಆನಂದದಲ್ಲಿ ನೆಲೆನಿಂತ ಸ್ಥಿತಿ.

'ವ' ಎಂದರೆ ಸಮಸ್ತ ವಾಸನೆಗಳಿಂದ ದೂರ.

'ಧೂ' ಶರೀರ ಮಲಿನವಾದರೂ ಮನಸ್ಸು ಶುದ್ಧ.

'ತ' ಅಹಂಕಾರದಿಂದ ಮುಕ್ತವಾಗಿ ತತ್ ಪದದಲ್ಲಿ ನಿಶ್ಚಿತವಾಗಿ ನೆಲೆ ನಿಂತ ಸ್ಥಿತಿ [೨೬]

ಅವಧೂತನೆಂದರೆ ಪಕ್ಷಪಾತ ವಿನಿರ್ಮುಕ್ತ ಮುನೀಶ್ವರ. ಮೇಲು ಕೀಳು, ಶ್ರೀಮಂತ ಬಡವ, ಎಂಬ ಭೇದವಿಲ್ಲದೆ ಸಮಾನದೃಷ್ಟಿಯುಳ್ಳವನೆಂದು ಅವಧೂತನನ್ನು ಕರೆಯುತ್ತಾರೆ.[೨೭]

ಅವಧೂತನೆಂದರೆ ಸರ್ವಸಂಗ ಪರಿತ್ಯಾಗಿಯಾದ ಸನ್ಯಾಸಿ. ದಿಗಂಬರ, ಮುಮುಕ್ಷುಮಾರ್ಗದಲ್ಲಿ ನಡೆದು ಆತ್ಮಾನಂದದಲ್ಲಿ ವಿರಮಿಸುವ ಯೋಗಿ.[೨೮]

ಅವಧೂತನೆಂದರೆ ವರ್ಣಾಶ್ರಮ ಧರ್ಮಗಳನ್ನು ತ್ಯಜಿಸಿ, ಪರಮಾತ್ಮ ಧ್ಯಾನಾಸಕ್ತನಾದ ಯೋಗಿ.[೨೯]

ಪೂರ್ಣ ಪರಬ್ರಹ್ಮವೇ ಅವಧೂತನು.[೩೦]

ಅವಧೂತ ಒಬ್ಬ ಪರಿವ್ರಾಜಕ ಯತಿ. ರಾಜಕೀಯ, ಸಾಮಾಜಿಕ, ನಿಯಮಗಳಾಚೆ ಇರುವವನು. ಅವನ ಮನಸ್ಸು ಅವ್ಯಕ್ತ ಸತ್ಯದಲ್ಲಿ ಸ್ಥಿರವಾಗಿರುವುದು. ಅವನು ಎಲ್ಲಾ ದ್ವಂದ್ವಗಳನ್ನು ಮೀರಿದವನು.[೩೧] ಹೀಗೆ ವಿವಿಧ ಶಾಸ್ತ್ರಗ್ರಂಥಗಳಲ್ಲಿ ಮತ್ತು ಪದಕೋಶಗಳಲ್ಲಿ ವ್ಯಾಖ್ಯಾನಿಸಲಾಗಿದೆ.

ಯೋ ವಿಲಂಘ್ಯಾಶ್ರಮಾನ್ ವರ್ಣಾನ್ ಆತ್ಮನ್ಯೇವ ಸ್ಥಿತಿಸ್ಸದಾ।
ಅತಿವರ್ಣಾಶ್ರಮೀ ಯೋಗೀ ಅವಧೂತಸ್ಸಕಥ್ಯತೇ ॥[೩೨]

ಯಾರು ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ, ಸನ್ಯಾಸಗಳೆಂಬ ನಾಲ್ಕು ಆಶ್ರಮಗಳನ್ನೂ, ಬ್ರಾಹ್ಮಣ ಕ್ಷತ್ರಿಯ, ವೈಶ್ಯ, ಶೂದ್ರಗಳೆಂಬ ನಾಲ್ಕು ವರ್ಣಗಳ ಬಂಧನವೇ ಇಲ್ಲದೆ, ಇವೆಲ್ಲವುಗಳನ್ನು ದಾಟಿ ಪರಮಾತ್ಮನಲ್ಲಿ ಮನಸ್ಸನ್ನು ಸ್ಥಿರೀಕರಿಸಿ, ಯಾವಾಗಲೂ ಯೋಗಾಭ್ಯಾಸನಿರತನಾಗಿರುತ್ತಾನೆಯೋ ಅವನೇ ಅವಧೂತ. ಈ ಅವಧೂತನಿಗೆ ಅತಿವರ್ಣಾಶ್ರಮಿ ಎನ್ನುತ್ತಾರೆ. ಅತಿವರ್ಣಾಶ್ರಮಿ ಎಂದರೆ 'ಜಾತಿಭೇದಗಳೆಂಬ ಕಟ್ಟುಗಳನ್ನು ಹರಿದವನು' ಎಂದೂ ಕರೆಯುತ್ತಾರೆ. ಈತನು ಮಾಯಾರಹಿತನಾಗಿ, ಯಾವಾಗಲೂ ಆನಂದ ವನ್ನನುಭವಿಸುತ್ತಾ, ಜ್ಞಾನ ಸ್ವರೂಪಿಯಾದ ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಳ್ಳುತ್ತಾನೆ.

ಈ ಜಗತ್ತು ಮಾಯಾಕಲ್ಪಿತವಾದುದೇ ಹೊರತು, ನಿತ್ಯ ಸತ್ಯವಾದುದಲ್ಲ. ಸಕಲ ವಿಧವಾದ ಸುಖ-ದುಃಖಗಳು ಈ ನಶ್ವರವಾದ ದೇಹಕ್ಕೆ ಹೊರತು, ಶರೀರವಿಲ್ಲದ ನನಗಲ್ಲವೆಂದು ತಿಳಿದು ಆಶಾಪಾಶಗಳೆಂಬ ಪಿಶಾಚವನ್ನು ದೂರಮಾಡಿ ಸಚ್ಚಿದಾನಂದ ಸ್ವರೂಪನಾದ ಪರಬ್ರಹ್ಮನಲ್ಲಿ ಮನಸ್ಸನ್ನು ಲೀನಮಾಡಿರುತ್ತಾನೆ. ಈ ವಿಧವಾದ ಜಾತಿಭೇದಗಳೆಂಬ ಭಾವನೆಯೇ ಇಲ್ಲದೆ ಸರ್ವ ಸಮದೃಷ್ಟಿಯುಳ್ಳವನಾಗಿ, ಸರ್ವಸಂಗಪರಿತ್ಯಾಗ ಮಾಡಿ, ಏಕಾಂಗಿಯಾಗಿ ಹುಚ್ಚನಂತೆ ತಿರುಗಾಡುತ್ತಿರುತ್ತಾನೆ.

ಸರ್ವಧರ್ಮಾನ್ ಪರಿತ್ಯಜ್ಯ ನಿರ್ಮಮೋ ನಿರಹಂಕಾರೋ
ಭೂತ್ವಾಬ್ರಹ್ಮೇಷ್ಟಂ ಶರಣಮುಪಗಮ್ಯ ತತ್ತ್ವಮಸಿ, ಸರ್ವಂ
ಖಲ್ವಿದಂ ಬ್ರಹ್ಮ ನೇಹನಾನ್ಯಾಸ್ತಿಕಿಂಚನೇತ್ಯಾದಿ ಮಹಾವಾ
ಕ್ಯಾರ್ಥಾನುಭವಜ್ಞಾನಾ ದ್ಬ್ರಹ್ಮೈವಾಹಮಸ್ಮೀತಿ ನಿಶ್ಚಿತ್ಯ
ನಿರ್ವಿಕಲ್ಪ ಸಮಾಧಿನಾಸ್ವತಂತ್ರೋ ಯತಿಶ್ಚರತಿ ಸ ಸನ್ಯಾಸೀ,
ಸ ಮುಕ್ತಃ, ಸ ಪೂಜ್ಯಃ, ಸ ಯೋಗಿ, ಸ ಪರಮಹಂಸಃ,
ಸ ಅವಧೂತಃ ಸ ಬ್ರಾಹ್ಮಣ ಇತಿಚಃ ॥[೩೩]

ಲೌಕಿಕ ಬಂಧನಗಳಿಂದ, ವಿಷಯವಾಸನೆಗಳಿಂದ ಮುಕ್ತನಾಗಿ, ತನ್ನಲ್ಲಿಯೇ ತಾನಡಗಿ, ಪಡೆಯುವ ಆತ್ಮಾನಂದದ ವಿನಃ ಇನ್ನುಳಿದ ಎಲ್ಲ ಆನಂದಗಳಿಂದ ತನ್ನ ಸಂಬಂಧವನ್ನು ಕಳಚಿಕೊಂಡವನು ಅವಧೂತ. ಪ್ರಾಪಂಚಿಕ ವ್ಯಾಮೋಹದಿಂದ ಸಂಸಿದ್ಧವಾದ ಅಜ್ಞಾನದ ಭವಬಂಧನಗಳನ್ನು ಕಿತ್ತೊಗೆದು ಆತ್ಮಸುಖ ಅನುಭವಿಸುವವನು ಅವಧೂತನಾಗಿರುತ್ತಾನೆ.

೨. ೪. ಅವಧೂತ : ವಿವಿಧ ಸ್ಥಿತಿಗಳು

ಅವಧೂತ ಸ್ಥಿತಿ ಸರ್ವಯೋಗಗಳಿಗೆ, ಸರ್ವಾಶ್ರಮಗಳಿಗೆ ಕೊನೆಯದು. ಇದು ಸಕಲಜ್ಞಾನಗಳ ಶಿಖರ ಮತ್ತು ಮಂಗಳಕರವಾಗಿದ್ದು, ಸರ್ವಸಾಕ್ಷಿಗೆ ಅತೀತವಾದುದು. ಈ ಸ್ಥಿತಿಯಲ್ಲಿರುವವವರು ಸಾಧು, ಸನ್ಯಾಸಿ, ಮುನಿಗಳಿಗಿಂತಲೂ ಅತಿ ಶ್ರೇಷ್ಠರಾಗಿರುತ್ತಾರೆ. ಈ ಸ್ಥಿತಿ ಮುಟ್ಟಲು ವಿವಾಹಿತನೂ, ಅವಿವಾಹಿತನೂ ಆಗಬಹುದು. ಜೀವನದಲ್ಲಿ ವೈರಾಗ್ಯ ಮೂಡಿ, ಸದ್ಗುರುವಿನ ಪೂರ್ಣ ಅನುಗ್ರಹ ಮತ್ತು ಅವರ ಉಪದೇಶ ಪಡೆದು ಸಮಸ್ತವನ್ನೂ ತ್ಯಾಗಮಾಡಿ, ಸಪ್ತವ್ಯಸನಗಳಿಂದ ದೂರನಾಗಿ, ಸಾಧನ ಚತುಷ್ಟಯದ ಮಹತ್ವವನ್ನರಿತು ಮೌನವಾಗಿರುತ್ತಾರೆ. ಕ್ರಮೇಣ ದೇಶ ಕಾಲಗಳ ಪರಿಸ್ಥಿತಿಗಳನ್ನೆಲ್ಲಾ ಮರೆತು ಹಗಲು ರಾತ್ರಿಗಳ ಪರಿವಿಲ್ಲದೆ, ಚಳಿ-ಮಳೆ, ಬೇಸಿಗೆಯನ್ನದೆ ತನ್ನನ್ನು ತಾನು ರಕ್ಷಿಸಿಕೊಳ್ಳಬೇಕೆಂಬ ಪರಿಜ್ಞಾನವೂ ಇವರಿಗಿರುವುದಿಲ್ಲ.

ಸಾಮಾಜಿಕ ಬಂಧನದಿಂದ ಮುಕ್ತನಾಗಿ, ಮಾನ ಅಭಿಮಾನಗಳ ಪರಿವೆಯೇ ಇಲ್ಲದೆ, ದಿಗಂಬರನಾಗಿ ತಿರುಗಾಡುತ್ತಾ, ಎಲ್ಲೆಂದರಲ್ಲಿ ಮಲಗುತ್ತಿದ್ದು, ಹಸಿವು ಬಾಯಾರಿಕೆಗಳ ಯೋಚನೆಯೇ ಇಲ್ಲದೆ ಯಾವಾಗಲೂ ಮೌನವಾಗಿದ್ದು, ಸಮಾಧಿಸ್ಥಿತಿಯಲ್ಲಿರುತ್ತಾರೆ. ಇಂಥವರನ್ನು ಕಂಡ ಜನತೆ ಹುಚ್ಚನೆಂದೇ ಭಾವಿಸುತ್ತಾರೆ. ಈ ಸ್ಥಿತಿಯಲ್ಲಿರುವವರಿಗೆ ಊರುಗಳಷ್ಟೇ ಅಲ್ಲ, ನಾಡು-ಕಾಡು ಒಂದೇ ರೀತಿಯಲ್ಲಿ ಕಾಣುವುದರಿಂದ ಎಲ್ಲೆಂದರಲ್ಲಿ ಅಲೆದಾಡುತ್ತಾ ನಿದ್ರಿಸುತ್ತಾ, ವಾಸಮಾಡುತ್ತಿರುತ್ತಾರೆ. ಇವರು ಯೋಗಯುಕ್ತರಾಗಿ, ವಿರಕ್ತರಾಗಿ, ಸಪ್ತಭೂಮಿಕೆಗಳ ಅನುಭೂತಿಯನ್ನು ಪಡೆದು ಸಹಜಾನಂದದ ಸ್ಥಿತಿಯಲ್ಲಿರುತ್ತಾರೆ. ಇಂತಹ ಸ್ಥಿತಿ ಮುಟ್ಟಿ ಖ್ಯಾತಿವೆತ್ತಿ ಯೋಗಿವರ್ಯರೆಂದರೆ ಜಡಭರತ, ವೃಷಭ, ಶುಕ, ದೂರ್ವಾಸ, ವಾಮದೇವ, ಸಂವರ್ತ, ಸನಸ್ಸುಜಾತ, ಸನತ್ಕುಮಾರ, ಸನಂದನ, ದತ್ತಾತ್ರೇಯ ಮುಂತಾದವರುಗಳೆಂದು, ವೇದ, ಉಪನಿಷತ್ತು ಪುರಾಣಗಳಿಂದ ತಿಳಿಯಬಹುದು.

ಇಂತಹ ಮನಸ್ಥಿತಿ ಮತ್ತು ಲಕ್ಷಣವನ್ನು ಹೊಂದಿದ ಯೋಗಿಗಳಿಗೆ ಅವಧೂತರೆಂದೂ, ತುರ್ಯಾತೀತ ರೆಂದೂ, ಜೀವನ್ಮುಕ್ತರೆಂದೂ ಕರೆಯುತ್ತಾರೆ. ಅವಧೂತರು ಈ ಸ್ಥಿತಿ ಮುಟ್ಟಲು ಕಾರಣವಾದ ಸಂಗತಿಗಳು ಶ್ರೀ ಭಾಗವತದಲ್ಲಿ ಉಲ್ಲೇಖಗೊಂಡಿವೆ.

ವಿಷ್ಣುವಿನ ಅಂಶದಿಂದ ಜನಿಸಿದ ದತ್ತಾತ್ರೇಯನು ಹೇಹಯ ರಾಜನಾದ ಯದುರಾಜನಿಗೆ ಮಾಡಿದ ಉಪದೇಶವನ್ನು ಶ್ರೀ ಭಾಗವತದಲ್ಲಿ (೧೧. ೭-೯) ಶ್ರೀಕೃಷ್ಣನು ಉದ್ಧವನಿಗೆ ಉಪದೇಶಿಸುತ್ತಾನೆ. ದುರ್ಲಭ ವಾದ ಮನುಷ್ಯ ದೇಹವು ನಾಶವಾಗುವುದಕ್ಕೆ ಮೊದಲು ನಿಃಶ್ರೇಯಸ್ಸನ್ನು ಪಡೆಯಬೇಕೆಂಬುದೇ ಆ ಉಪದೇಶದ ಸಾರವಾಗಿದೆ.

ಭಾಗವತದಲ್ಲಿ ಶ್ರೀಕೃಷ್ಣನ ಉಪದೇಶವನ್ನು ಕೇಳುತ್ತಿದ್ದ ಉದ್ಧವನು "ಹೇ ಜ್ಞಾನ ಸ್ವರೂಪನಾದ ಪರಮಾತ್ಮನೇ, ಸಂಸಾರದ ವಿವಿಧ ತಾಪಗಳಿಂದ ಬಳಲಿಬೆಂಡಾದ ನನಗೆ ವೈರಾಗ್ಯವುಂಟಾಗಿದೆ. ನಿನ್ನಲ್ಲಿ ನಾನು ಶರಣು ಬಂದಿರುವೆ, ಜ್ಞಾನವನ್ನು ನನಗೆ ವಿಸ್ತರಿಸಿ ಹೇಳು" ಎಂದು ಕೇಳುತ್ತಾನೆ. ಆಗ ಶ್ರೀಕೃಷ್ಣನು ಶಕ್ತಿಶಾಲಿಯಾದ ಯದುರಾಜನಿಗೂ, ಅವಧೂತನಾದ ಬ್ರಾಹ್ಮಣನಿಗೂ ಹಿಂದೆ ನಡೆದ ಸಂವಾದವನ್ನು ಹೇಳುತ್ತಾನೆ.[೩೪]

ಧರ್ಮಜ್ಞನಾದ ಯದುರಾಜನು ಕಾಡಿನಲ್ಲಿ ನಿರ್ಭೀತಿಯಿಂದ ಸಂಚರಿಸುತ್ತಿರುವ ಅವಧೂತ ಬ್ರಾಹ್ಮಣನಿಗೆ 'ಹೇ ಬ್ರಹ್ಮನ್, ಇಂದ್ರಿಯ ವಿಷಯಗಳಲ್ಲಿ ಲೋಕ ವಿಲಕ್ಷಣವಾದ ವಿರಕ್ತಿಯು ನಿನಗೆ ಹೇಗೆ ಉಂಟಾಯಿತು? ವಿಧ್ವಾನನಾಗಿದ್ದರೂ ಒಬ್ಬ ಮುಗ್ಧ ಬಾಲಕನಂತೆ ನೀನು ನಡೆದುಕೊಳ್ಳುತ್ತಿರುವೆ! ಬಹುತೇಕವಾಗಿ ಸಕಲ ಮಾನವರು ಧರ್ಮ-ಅರ್ಥ-ಕಾಮ ಈ ಮೂರು ಸಂಗತಿಗಳ ಪ್ರಾಪ್ತಿಗಾಗಿ ನಾನಾ ಕಾರ್ಯಗಳಲ್ಲಿ ತೊಡಗುವರು. ಕೀರ್ತಿ ಹಾಗೂ ಸಂಪತ್ತುಗಳಂತೂ ಮಾನವನಿಗೆ ಅತೀವ ಅಪೇಕ್ಷಿತ ವಸ್ತುಗಳು. ಜ್ಞಾನ ಸೌಂದರ್ಯದಿಂದ ಸಕಲ ಆಕರ್ಷಕ ಗುಣಗಳಿಂದ ಯುಕ್ತನಾಗಿದ್ದರೂ, ನೀನು ಜಡ, ಉನ್ಮತ್ತ ಹಾಗೂ ಪಿಶಾಚಿಯಂತೆ, ಮನಸ್ಸಿಗೆ ಬಂದಂತೆ ಸಂಚಾರ ಮಾಡುತ್ತಿರುವೆ, ನಿನ್ನ ಹೃದಯದಲ್ಲಿ ತುಂಬಿರುವ ಆನಂದಕ್ಕೆ ಕಾರಣವೇನು? ಎಂದು ಪ್ರಶ್ನಿಸುತ್ತಾನೆ. ಯದುರಾಜನ ಪ್ರಶ್ನೆಗಳಿಗೆ ಅವಧೂತನು ಈ ಬಗೆಯ ಆತ್ಮಜ್ಞಾನವನ್ನು ಪಡೆಯಲು, ಲೋಕಾಭಿಮಾನವನ್ನು ತೊರೆಯಲು, ನನಗೆ ಬುದ್ಧಿ ಕಲಿಸಿದ ಗುರುಗಳು ಇಪ್ಪತ್ತನಾಲ್ಕು ಮಂದಿಗಳೆಂದು ತಿಳಿಸಿ, ಯಾವ ಯಾವ ಗುರುಗಳಿಂದ ಯಾವ ಯಾವ ಜ್ಞಾನವನ್ನು ಪಡೆದಿರುವೆ ಎಂಬುದನ್ನು ತಿಳಿಸುತ್ತಾನೆ.

೧. **ಭೂಮಿ :** ಇದರಿಂದ ಕ್ಷಮಾಗುಣವನ್ನೂ, ಪರಹಿತ ಸಾಧನೆಯನ್ನು ಮತ್ತು ಸನ್ಮಾರ್ಗದಿಂದ ಭ್ರಷ್ಟನಾಗಬಾರದೆಂಬುದನ್ನು ಕಲಿತೆನು.

೨. **ವಾಯು :** ಇದರಿಂದ ಎಲ್ಲಾ ಕಡೆ ಸಂಚರಿಸುತ್ತಿದ್ದರೂ, ಯಾವುದರಲ್ಲಿಯೂ ಆಸಕ್ತನಾಗದೆ, ನಿರ್ಲಿಪ್ತನೂ, ನಿರಭಿಮಾನಿಯೂ, ಆಗಿರಬೇಕೆಂಬುದನ್ನು ಕಲಿತೆನು.

೩. **ಆಕಾಶ :** ಸರ್ವತ್ರ ವ್ಯಾಪಕತೆಯನ್ನು ತನ್ನನ್ನು ಸೇರುವ ಪದಾರ್ಥಗಳಿಂದ ಪ್ರತ್ಯೇಕತೆಯನ್ನು ಪಡೆಯಬೇಕೆಂಬುದನ್ನು ಕಲಿತೆನು.

೪. **ನೀರು :** ಶುದ್ಧ ಜಲದಂತೆ ಮನುಷ್ಯ ಸ್ವಭಾವದಿಂದಲೇ ಸ್ವಚ್ಛನಾಗಿರಬೇಕೆಂಬ ಗುಣವನ್ನು ಕಲಿತೆನು.

೫. **ಸೂರ್ಯ** : ಅಸಂಗತ್ವ ಮಾತ್ರವಲ್ಲದೆ ಬಿಂಬ (ಪರಮಾತ್ಮ) ಹಾಗೂ ಪ್ರತಿಬಿಂಬ (ಜೀವ) ಇವುಗಳ ಸಂಬಂಧದ ಬಗ್ಗೆ ಯಥಾರ್ಥ ಜ್ಞಾನವನ್ನು ತಿಳಿದುಕೊಂಡೆನು.

೬. **ಚಂದ್ರ :** ಕಣ್ಣಿಗೆ ಕಾಣದ ವೇಗದಿಂದೋಡುವ ಕಾಲಚಕ್ರದಲ್ಲಿ ತಿರುಗುವ ಚಂದ್ರಬಿಂಬದ ಕಲೆಗಳ ವೃದ್ಧಿ ಹಾಸಗಳನ್ನು ಕಂಡು ಜನನಾದಿ ಸ್ಮಶಾನಾಂತರವಾದ ಭಾವಗಳು ಶರೀರಕ್ಕೆ ಹೊರತು ಜೀವನಿಗಲ್ಲ ವೆಂಬುದನ್ನು ನಿರ್ವಿಕಾರನಾಗಿ ಬಿಂಬಾಂತರ್ಗತನಾದ ಚಂದ್ರನಿಂದ ಕಲಿತೆನು.

೭. **ಕಪೋತ :** ಎಂದಿಗೂ ಯಾರೊಂದಿಗೂ ಅತಿ ಸ್ನೇಹವನ್ನು ಮಾಡಬಾರದೆಂಬುದನ್ನು ಕಲಿತೆನು.

೮. **ಅಜಗರ :** ಅಲ್ಪವಾಗಲಿ, ಬಹಳವಾಗಲಿ, ಪ್ರಯತ್ನವಿಲ್ಲದೆ ಸಿಕ್ಕಿದ್ದರಿಂದ ಸಂತೃಪ್ತನಾಗಬೇಕೆಂಬುದನ್ನು ಕಲಿತೆನು.

೯. **ಸಮುದ್ರ :** ಮಳೆಗಾಲದಲ್ಲಿ ಹಿಗ್ಗದೆ, ಬೇಸಿಗೆಯಲ್ಲಿ ಕುಗ್ಗದೆ, ಸರ್ವದಾ ಸಮನಾಗಿ ಮತ್ತು ಪ್ರಸನ್ನ ಗಂಭೀರತೆಯನ್ನು ಕಲಿತೆನು.

೧೦. **ಪತಂಗ :** ಆಕರ್ಷಣೆಗೆ ಒಳಗಾಗಿ ಅಜಿತೇಂದ್ರಿಯರಾಗಿ (ಸ್ತ್ರೀ ಲಂಪಟರಾಗಿ ತನ್ನ ವಿವೇಕವನ್ನು ಕಳೆದುಕೊಳ್ಳುವುದು) ದೀಪದ ಜ್ವಾಲೆಗೆ ಮೋಹಿತನಾಗಿ ಸಿಕ್ಕಿ, ನಾಶವಾಗುತ್ತಾರೆಂಬುದನ್ನು ಪತಂಗದಿಂದ ಕಲಿತೆನು.

೧೧. **ಜೇನು ನೊಣ :** ಹೂವಿಗೆ ಸ್ವಲ್ಪವೂ ಹಾನಿಮಾಡದೆ, ಯಾವ ಹೂವಿನಲ್ಲೂ ಆಸಕ್ತಿ ತೋರದೆ, ರಸವನ್ನು ಸಂಗ್ರಹಿಸುವ ಜ್ಞಾನವನ್ನು ಜೇನು ನೊಣದಿಂದ ಕಲಿತೆನು.

೧೨. **ಗಜ :** ಪರಸ್ತ್ರೀ ವ್ಯಾಮೋಹದಿಂದ ಅನಾಹುತಕ್ಕೀಡಾಗುವುದನ್ನು ಕರಿಣಿಗಾಗಿ ಕಾದಾಡಿ ಮಡಿದ ಕರಿರಾಜನಿಂದ ಕಲಿತೆನು.

೧೩. **ಮಧುಹಾರಿ :** ತಾನೂ ತಿನ್ನದೆ ಕೂಡಿಟ್ಟಿದ್ದನ್ನು ಪರರು ಬಂದು ಸುಖಿಸುತ್ತಾರೆಂಬುದನ್ನು ಮಧುಹಾರಿಯನ್ನು ನೋಡಿ ಕಲಿತೆನು.

೧೪. **ಜಿಂಕೆ :** ಕರಣೇಂದ್ರಿಯವನ್ನು ಅಂಕಿತದಲ್ಲಿಟ್ಟುಕೊಳ್ಳಬೇಕೆಂಬುದನ್ನು ಬೇಟೆಗಾರನ ಮಧುರ ವೇಣುನಾದಕ್ಕೆ ಕಿವಿಗೊಟ್ಟು ಪ್ರಾಣವನ್ನೇ ಕೊಟ್ಟು ಕೆಟ್ಟಿರುವ ಜಿಂಕೆಯಿಂದ ಕಲಿತೆನು.

೧೫. **ಮೀನು :** ಜಿಹ್ವಾಲೋಲುಪ್ಯಕ್ಕೆ ಒಳಗಾಗಬಾರದೆಂಬುದನ್ನು ಮೀನಿನಿಂದ ಕಲಿತೆನು.

೧೬. **ಪಿಂಗಳೆ ಎಂಬ ವೇಶ್ಯೆ :** ಕ್ಷಣಿಕ ಧನದ ಬಗ್ಗೆ ಚಿಂತಿಸಿ, ಮೋಹದಿಂದ ವಿವೇಕ ಶೂನ್ಯವಾಗುವುದು. ಹಾಗೆಯೇ ಆಸೆಯೇ ದುಃಖಕ್ಕೆ ಕಾರಣವೆಂದು ವೈರಾಗ್ಯ ತಳೆದ ಪಿಂಗಳೆ ಎಂಬ ವೇಶ್ಯೆಯಿಂದ ಕಲಿತೆನು.

೧೭. **ಟಿಟ್ಟಿಭ ಪಕ್ಷಿ :** ಕಷ್ಟಪಟ್ಟು ಸಂಪಾದಿಸಿದ ದ್ರವ್ಯವು ನಷ್ಟವಾದಾಗ ಬರುವ ದುಃಖವನ್ನು, ಹಾಗೆಯೇ ಆಸೆಯನ್ನು ಬಿಟ್ಟುಕೊಟ್ಟು ಸುಖ ಪಡೆಯುವುದನ್ನು ಈ ಪಕ್ಷಿಯಿಂದ ಕಲಿತೆನು.

೧೮. **ಕನ್ಯೆ :** ಬಹು ಜನರು ಕಲೆತ ಕಡೆ ಜಗಳವಾಗುವುದು. ಅದಕ್ಕಾಗಿ ಜ್ಞಾನಿಯಾದವನು ಒಂಟಿಯಾಗಿಯೇ ಇದ್ದು, ದುರ್ಜನ ಸಂಗಬಿಡಬೇಕೆಂಬುದನ್ನು ಕನ್ಯೆಯಿಂದ ಕಲಿತೆನು.

೧೯. **ಕಮ್ಮಾರ :** ಅಭ್ಯಾಸಯೋಗದಿಂದ ಮನಸ್ಸನ್ನು ಸ್ಥಿರವಾಗಿ ನಿಲ್ಲಿಸುವುದನ್ನು ಕಲಿತೆನು.

೨೦. **ಸರ್ಪ :** ಏಕಾಂಗಿಯಾಗಿ ಸಂಚರಿಸಬೇಕೆಂಬುದನ್ನು, ಸ್ವಲ್ಪವೇ ಆಹಾರವನ್ನು, ಒಂದೊಂದು ಸಲ, ಬರಿಗಾಳಿಯಿಂದಲೇ ಜೀವಿಸಬಹುದೆಂಬುದನ್ನು ಸರ್ಪದಿಂದ ಕಲಿತೆನು.

೨೧. **ಜೇಡರ ಹುಳು :** ತನ್ನ ಹೃದಯದಿ ಲಾಲಾದಿರಸದಿಂದ ಗೂಡನ್ನು ಕಟ್ಟಿ, ಆಟವಾಡಿ, ಮತ್ತೆ ನುಂಗಿ ಬಿಡುತ್ತದೆ. ಇದಕ್ಕೆ ಬೇರೆಯವರ, ಬೇರೆ ವಸ್ತುವಿನ ಅಗತ್ಯವಾಗಲಿ, ಸಹಾಯವಾಗಲಿ, ಬೇಕಿಲ್ಲವೆಂಬುದನ್ನು ಕಲಿತೆನು.

೨೨. ಕಣಜ : ಯಾವ ಭಾವದಿಂದ ಜೀವನು ಪರಮಾತ್ಮನ ವಿಷಯದಲ್ಲಿ ಚಿಂತನೆ ಮಾಡುವುದೋ ಅದರಂತೆಯೇ ಜೀವನು ರೂಪವನ್ನು ತಾಳುವನೆಂಬುದನ್ನು ಕಲಿತೆನು.

೨೩. ಬೆಂಕಿ : ದುರ್ಜನರು ಬೂದಿಯಂತೆ ಮುತ್ತಿದರೆ ತಲೆದೋರದಿದ್ದು, ಸುಜನರು ಗಾಳಿಯಂತೆ ಬಂದರೆ, ನಿಜಗುಣವನ್ನು ತೋರುತ್ತಾ ಬೇಡಿದವರಿಗೆ ಅವರು ಕೊಟ್ಟ ಸ್ವಲ್ಪ ಹವಿಸ್ಸನ್ನುಂಡು ಹಿಂದು ಮುಂದಿನ ಎಲ್ಲಾ ಪಾಪಗಳನ್ನು ಸುಡುವ ಶ್ರೇಯೋದಾಯಕನಾಗಿರಬೇಕೆಂಬುದನ್ನು ಅಗ್ನಿಯಿಂದ ಕಲಿತೆನು.

೨೪. ಕೂಸು : ಚಿಕ್ಕಮಕ್ಕಳಂತೆ ನಿಶ್ಚಿಂತೆಯಿಂದಿರುವುದನ್ನು, ಮಾನಾಪಮಾನಗಳ ಭಾವನೆಗಳಿಲ್ಲದಿರುವುದನ್ನು ಕಲಿತೆನು.

ಈ ಎಲ್ಲಾ ಗುರುಗಳಿಂದ ಅರಿವನ್ನು ಪಡೆದ ಅವಧೂತನು ತನ್ನ ಮಾನಸಿಕ ಮತ್ತು ದೈಹಿಕ ಪರಿವರ್ತನೆ ಮಾಡಿಕೊಂಡು ಮೂಲ ಸ್ವಭಾವದಲ್ಲಿ ಬದಲಾವಣೆಗೊಂಡಿರುತ್ತಾನೆ. ಜೊತೆಗೆ ಅವಧೂತನೆ ಹೇಳುವಂತೆ ನನ್ನ ಶರೀರವೂ ನನಗೆ ಗುರುವಾಗಿ ಹಲವು ಜ್ಞಾನವನ್ನು ನೀಡಿದೆ ಎನ್ನುತ್ತಾನೆ. ಹೀಗೆ ತನ್ನ ಇರುವು ಮತ್ತು ಜ್ಞಾನ ಸಂಪಾದಿಸಿದ ಬಗ್ಗೆ ತಿಳಿಸುತ್ತಾನೆ.

ಬ್ರಹ್ಮಜ್ಞಾನವನ್ನು ಪಡೆದ ಅವಧೂತನು ಜಾತಿ, ಮತ, ಪಂಥಗಳೆಂಬ ಕಟ್ಟನ್ನು ಹರಿದು, ತರತಮ ಭೇದ ವಿಲ್ಲದೆ, ಎಲ್ಲಾ ಬಂಧಗಳನ್ನು ಕಳೆದುಕೊಂಡು, ಸರ್ವವೂ ಬ್ರಹ್ಮಮಯವೆಂದು ತಿಳಿದು ಅಂತರ್ಮುಖಿಯಾದ ಈತನ ಹಾವಭಾವಗಳು ವಿಚಿತ್ರವಾದವುಗಳು. ಮಾತನಾಡಿದರೆ ಎಲ್ಲೋ ಒಂದೆರಡು ನುಡಿಗಳು, ಇಲ್ಲದಿದ್ದರೆ ಅವುಗಳೂ ಇಲ್ಲ. ಸದಾಮೌನಿಯಾಗಿ ಧ್ಯಾನಾಸಕ್ತನಂತೆ ಕುಳಿತಿರುತ್ತಾನೆ. ನುಡಿದ ಒಂದೆರಡು ನುಡಿಗಳು, ನುಡಿದಂತೆ ನಡೆದವುಗಳು. ಇಂಥವುಗಳನ್ನು ಕಂಡ ಕೆಲಜನರು ಈತನನ್ನು ಹುಚ್ಚನೆಂದು ಹಾಸ್ಯ ಮಾಡಿದರೆ ಮತ್ತೆ ಕೆಲ ಜನರು ಈತ ಸಾಮಾನ್ಯನಲ್ಲ, ಮಹಾಮಹಿಮನೆಂದು ತಿಳಿದು ಭಯ-ಭಕ್ತಿ-ಗೌರವದಿಂದ ಪೂಜಿಸತೊಡಗುತ್ತಾರೆ. ತಾವು ತಂದ ಹಾಲು-ಹಣ್ಣುಗಳನ್ನು ನೀಡುತ್ತಾರೆ. ಇವುಗಳಾವು ಬೇಕಾಗಿರದ ಅವಧೂತನು, ಇಚ್ಛೆ ಬಂದರೆ ತಿನ್ನುವುದು, ಇಲ್ಲದಿದ್ದರೆ ಅದರ ಪರಿವೇ ಇಲ್ಲದೆ ಸುಮ್ಮನಿರುತ್ತಾನೆ. ಅವಧೂತ ಸ್ಥಿತಿ ತಲುಪಿದವರಿಗೆ ದೇಹದ ವಾಸನೆಯೇ ಇರುವುದಿಲ್ಲ.

ನಾಽಹಂ ದೇಹೋ ಜನ್ಮಮೃತ್ಯು ಕುತೋ ಮೇ
ನಾಽಹಂ ಪ್ರಾಣಃ ಕ್ಷುತ್ಪಿಪಾಸೇ ಕುತೋ ಮೇ
ನಾಽಹಂ ಚಿತ್ತಂ ಶೋಕಮೋಹೌ ಕುತೋ ಮೇ
ನಾಽಹಂ ಕರ್ತಾ ಬಂಧಮೋಕ್ಷೌ ಕುತೋ ಮೇ [೩೫]

ನಾನು ದೇಹವಲ್ಲ, ನನಗೆ ಹುಟ್ಟು ಸಾವುಗಳೆಲ್ಲಿಯವು. ನಾನು ಪ್ರಾಣವಲ್ಲ, ಆದುದರಿಂದ ನನಗೆ ಹಸಿವು ಬಾಯಾರಿಕೆಗಳಿಲ್ಲ. ಚಿತ್ತವು ನಾನಲ್ಲ, ಹಾಗಾಗಿ ನನಗೆ ಶೋಕ ಮೋಹಗಳೆಲ್ಲಿಯವು. ನಾನು ಕರ್ತನಲ್ಲ, ಬಂಧಮೋಕ್ಷಗಳೆಂಬುವು ನನ್ನಲ್ಲಿವುಂಟಾಗುವುದಿಲ್ಲವೆಂಬ ಭಾವವನ್ನಿಟ್ಟುಕೊಂಡು, ಉನ್ಮತ್ತನಂತೆ ಎಲ್ಲೆಂದರಲ್ಲೆ ತಿರುಗಾಡುತ್ತಾ ಸದಾ ಪರಮಾತ್ಮನ ಧ್ಯಾನ ಮಾಡುತ್ತಿರುತ್ತಾನೆ.

ಮನಸ್ಸು, ಬುದ್ಧಿ, ಚಿತ್ತ, ಅಹಂಕಾರಗಳೆಂಬ ಅಂತಃಕರಣ ಚತುಷ್ಟಯಗಳು ನಾನಲ್ಲ. ಕಣ್ಣು, ಕಿವಿ, ಮೂಗು, ಬಾಯಿ, ಚರ್ಮಗಳೆಂಬ ಜ್ಞಾನೇಂದ್ರಿಯಗಳು ನಾನಲ್ಲ. ಪಂಚಭೂತಗಳೂ ನಾನಲ್ಲವೆಂದು, ಚಿದಾನಂದ ಸ್ವರೂಪಿಯಾದ ಶಿವನೇ ನಾನೆಂದು ತಿಳಿದು, ತಿಳಿದಂತೆ ನಡೆಯುತ್ತಿರುತ್ತಾನೆ. ಪ್ರಾಣಾದಿ ಪಂಚವಾಯುಗಳು, ಸಪ್ತಧಾತುಗಳು, ಪಂಚಕೋಶಗಳು, ಕರ್ಮೇಂದ್ರಿಯಗಳೂ ನಾನಲ್ಲವೆಂದು ತಿಳಿದಿರುವವನೇ ಅವಧೂತನು.

ನ ಪುಣ್ಯಂ ನಪಾಪಂ ನಸೌಖಂ ನದುಃಖಂ
ನ ಮಂತ್ರಂ ನತೀರ್ಥಂ ನವೇದ ನಯಜ್ಞಾ
ಅಹಂ ಭೋಜನಂ ನೈವ ಭೋಜ್ಯಂ ನ ಭೋಕ್ತಾ ।
ಚಿದಾನಂದರೂಪ ಶಿವೋऽಹಂ ಶಿವೋऽಹಂ ‖[೩೬]

ಪಾಪ ಪುಣ್ಯಗಳು ನಾನಲ್ಲ. ಸುಖ-ದುಃಖಗಳು ನಾನಲ್ಲ. ಮಂತ್ರ ಜಪ-ತಪಗಳು ನಾನಲ್ಲ. ತೀರ್ಥ, ವೇದ, ಯಜ್ಞ ಇವುಗಳು ಯಾವುವೂ ನನಗೆ ಬೇಕಾಗಿಲ್ಲ. ಭೋಜ್ಯ ಭೋಜನಗಳು ನಾನಲ್ಲ ಮತ್ತು ಭೋಕ್ತನೂ ನಾನಲ್ಲವೆಂದು ತಿಳಿದು ಚಿದಾನಂದ ಸ್ವರೂಪಿಯಾದ ಶಿವನೇ ನಾನೆಂದು ತಿಳಿದವನೇ ಅವಧೂತನು.

ರಾಗ-ದ್ವೇಷಗಳಿಲ್ಲದೆ, ಸಹ್ಯ-ಅಸಹ್ಯವೆಂಬ ಭಾವನೆಯಿಲ್ಲದೆ, ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯಗಳೆಂಬ ಅರಿಷಡ್ವರ್ಗಗಳ ಭಾವನೆಯಿಲ್ಲದವನೆ ಅವಧೂತನು. ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಪುರುಷಾರ್ಥಗಳೂ ಇಲ್ಲದೆ ಶಿವ ಸ್ವರೂಪಿಯಾದವನು ಅವಧೂತನು.

ನ ಮೃತ್ಯುರ್ನ ಶಂಕಾ ನಮೇ ಜಾತಿಭೇದಾಃ ।
ಪಿತಾ ನೈವ ಮೇ ನೈವ ಮಾತಾ ನಜನ್ಮ ‖
ನ ಬಂಧುರ್ನ ಮಿತ್ರಂ ಗುರುರ್ನೈವ ಶಿಷ್ಯಃ ‖
ಚಿದಾನಂದರೂಪ ಶ್ಯಿವೋऽಹಂ ಶಿವೋಹಂ ‖[೩೭]

ಜನನ ಮರಣಗಳಿಲ್ಲದೆ, ಸಂದೇಹಗಳಿಲ್ಲದೆ, ಜಾತಿ, ಭೇದಗಳೆಂಬ ತಾರತಮ್ಯ ಭಾವನೆಯಿಲ್ಲದೆ, ತಂದೆ, ತಾಯಿ, ಬಂಧು-ಬಳಗ, ಮಿತ್ರ, ಗುರು, ಶಿಷ್ಯರಿಲ್ಲದೆ, ಶಿವನೇ ತಾನೆಂದು ನಿಶ್ಚಯ ಜ್ಞಾನಿಯಾಗಿರುವವನೇ ಅವಧೂತನು. ದೇಹಾದಿ ಭಾವನೆಯ ತೊರೆದು, ಪರಮಾತ್ಮನನ್ನು ತನ್ನಲ್ಲಿಯೇ ನೋಡುತ್ತಾ, ಒಳಗೆ ಹೊರಗೆ ಎಂಬುದಿಲ್ಲದೆ, ಪ್ರಾಪಂಚಿಕ ಐಶ್ವರ್ಯವೆಲ್ಲ ನಶ್ವರ, ಜ್ಞಾನವೇ ನಿಜವಾದ ಐಶ್ವರ್ಯವೆಂದು ತಿಳಿದವನೇ ಜೀವನ್ಮುಕ್ತನಾದ ಅವಧೂತನು. ಮನೆಯನ್ನು ಬಿಟ್ಟು, ಶರೀರಕ್ಕೆ ಸಂಬಂಧಿಸಿದ ಬಂಧುವರ್ಗವನ್ನು ತ್ಯಜಿಸಿ, ಆತ್ಮಜ್ಞಾನವನ್ನು ಹೊಂದಿ, ಯಾವುದರಲ್ಲಿಯೂ ಇಚ್ಛೆಯೆಂಬುದಿಲ್ಲದೆ, ಸಕಲವಿಷಯ ಸುಖಗಳಲ್ಲಿ ನಿರಾಸಕ್ತಿ ತಳೆದ ಮಹಾನುಭಾವಿಗಳೇ ಅವಧೂತರು.

ಸಾಮಾಜಿಕ ನಿಯಮಗಳಾಚೆ ಇರುವ ಅವಧೂತನು ಎಲ್ಲಾ ದ್ವಂದ್ವಗಳನ್ನು ಮೀರಿರುತ್ತಾನೆ. ನಾಮ, ಕಾಲ, ರೂಪ, ದೇಶ, ಕಾರ್ಯ, ಕಾರಣಗಳನ್ನೆಲ್ಲಾ ಮೀರಿ, ತೋರಿಕೆಯ ಜಗತ್ತನ್ನು ತೊರೆದು ಪರಮಸತ್ಯದಲ್ಲಿ

ನಿಂತಿರುತ್ತಾನೆ. ತೋರಿಕೆಯ ದೇವತೆಗಳನ್ನು ಮೀರಿ ಆತ್ಮನಲ್ಲಿ ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಂಡಿರುತ್ತಾನೆ. ಈ ಜಗತ್ತನ್ನು ಮರೀಚಜಲದಂತೆ ಭಾವಿಸುವ ಅವಧೂತನು -

ಅತೀತಾನಾಗತಂ ಕರ್ಮ ವರ್ತಮಾನಂ ತಥೈವ ಚ |
ನ ಕರೋಮಿ ನ ಭುಂಜಾಮಿ ಇತಿ ಮೇ ನಿಶ್ಚಲಾಮತಿಃ || [೩೮]

ಭೂತ, ವರ್ತಮಾನ ಭವಿಷ್ಯಗಳಿಗೆ ಸೇರಿದ ಕರ್ಮವನ್ನು ಮಾಡುವುದಾಗಲಿ, ಅದರ ಫಲವನ್ನು ಅನುಭವಿಸುವುದಾಗಲೀ, ಯಾವುದೂ ನನಗೆ ಇಲ್ಲವೆಂಬ ನಿಶ್ಚಿತಮತಿಯಾಗಿರುತ್ತಾನೆ.

ಶೂನ್ಯಗಾರೇ ಸಮರಸಪೂತಸ್ತಿಷ್ಠನ್ನೇಕಃ ಸುಖಮವಧೂತಃ
ಚರತಿ ಹಿ ನಗ್ನ ಸ್ತ್ಯಕ್ತ್ವಾ ಗರ್ವ ವಿಂದತಿ ಕೇವಲಮಾತ್ಮನಿ ಸರ್ವಮ್ || [೩೯]

ಅವಧೂತನು ತಾನೊಬ್ಬನೇ ಸಮರಸಪೂತನಾಗಿ ಒಂದು ಶೂನ್ಯ ಸ್ಥಾನದಲ್ಲಿ ಸುಖದಿಂದಿರುವನು ಅಥವಾ ಗರ್ವತೊರೆದು ನಗ್ನನಾಗಿ ಚಲಿಸುವನು. ಏಕೆಂದರೆ ಅವನಿಗೆ ಎಲ್ಲವೂ ತನ್ನ ಆತ್ಮನಲ್ಲಿಯೇ ದೊರಕುವುದು. ಈ ಸ್ಥಿತಿಯನ್ನು ಪಡೆಯಲು ಅವಧೂತನೇ ಹೇಳುವಂತೆ "ಭಾವಪರಿಶುದ್ಧವಾಗಿ ಸಮರಸದಲ್ಲಿ ಮಗ್ನನಾದರೆ ಮಾತ್ರ ಪ್ರಾಪ್ತವಾಗುವುದು." ಇದು ಪ್ರಾಪ್ತವಾದಾಗ ಸಾರತರನಾದ ಶಿವನಾಗುತ್ತಾನೆ. ಇಲ್ಲವೆ ಪರವಸ್ತುವಾಗುತ್ತಾನೆ. ಹೋಗುವುದು ಬರುವುದು ಆತನಿಗಿರುವುದಿಲ್ಲ. ಅವಧೂತ ನಿರ್ವಿಕಲ್ಪ ಮತ್ತು ನಿರಾಕುಲನು. ಸರ್ವ ಅವಯವಗಳಿಂದ ನಿರ್ಮುಕ್ತನು. ಇವನು ವೇದ ದೀಕ್ಷೆಗಳಿಲ್ಲದೆ, ಮುಂಡನೆ ಕ್ರಿಯೆಯಿಲ್ಲದೆ, ಗುರು-ಶಿಷ್ಯರ ಭೇದವಿಲ್ಲದೆ, ಯಂತ್ರ-ಮುದ್ರಾದಿಗಳಿಲ್ಲದೆ ಈಶನಾಗಿರುವ ಶಾಶ್ವತವಾದ ಆತ್ಮವನ್ನು ಪಡೆಯುತ್ತಾನೆಂದು ಶಾಸ್ತ್ರ ಕೃತಿಗಳಲ್ಲಿ ಹೇಳಲಾಗಿದೆ. ಮುಂದೆ ನಾನತ್ವ, ಉಭಯತ್ವ, ಏಕತ್ವ, ಅನ್ಯತಾಭಾವ ಅಥವಾ ಅಣುತ್ವ, ದೀರ್ಘತ್ವ, ಮಹತ್ವ, ಶೂನ್ಯತ್ವ ಅಥವಾ ಪ್ರಮಾಣ, ಪ್ರಮೇಯ, ಸಮತ್ವ ಇವುಗಳಿಲ್ಲದೆ ಈಶನಾಗಿರುವ ಶಾಶ್ವತವಾದ ಆತ್ಮವನ್ನು ಪಡೆಯುತ್ತಾನೆ.

ನಿರ್ಮಲ ಮೂಲರಹಿತೋ ಹಿ ಸದೋದಿತೋऽಹಂ
ನಿರ್ಧೂಮ ಧೂಮರಹಿತೋ ಹಿ ಸದೋದಿ ತೋऽಹಂ
ನಿರ್ದೀಪ ದೀಪರಹಿತೋ ಹಿ ಸದೋದಿತೋऽಹಂ
ಜ್ಞಾನಾಮೃತಂ ಸಮರಸಂ ಗಗನೋಪಮೋऽಹಂ || [೪೦]

ಅವಧೂತನೇ ಹೇಳುವಂತೆ ನನಗೆ ಮಲವಿಲ್ಲ, ಆಶ್ರಯವಿಲ್ಲ. ಏಕೆಂದರ ನಾನು ಯಾವಾಗಲೂ ಇರುವೆನು. ನನ್ನಲ್ಲಿ ಭ್ರಾಂತಿಯ ಧೂಮವಿಲ್ಲ. ಯಾವ ಮೋಡವೂ ನನ್ನನ್ನು ಕವಿದಿಲ್ಲ. ಏಕೆಂದರೆ ನಾನು ಯಾವಾಗಲೂ ಇರುವೆನು. ನಾನು ಮತ್ತೊಂದು ಬೆಳಕಿನಿಂದ ಬೆಳಕನ್ನು ಎರವಲಾಗಿ ತೆಗೆದುಕೊಳ್ಳುವುದಿಲ್ಲ. ನನಗೆ ಬೇರೆ ಬೆಳಕೇ ಇಲ್ಲ. ಏಕೆಂದರೆ ನಾನೇ ಸರ್ವದಾ ಬೆಳಗುತ್ತಿರುವೆನು. ಗಗನದಂತಿರುವ ಸಮರಸವಾದ ಜ್ಞಾನಾಮೃತವೇ ನಾನು. ಇಂತಹ ಸಮರಸವೆಂಬ ಜ್ಞಾನಾಮೃತವನ್ನು ಪಡೆದ ನನ್ನಲ್ಲಿ ಮೋಹ-ನಿರ್ಮೋಹಗಳೆಂಬ ಅವಸ್ಥೆಗಳ ವಿಕಲ್ಪವಿಲ್ಲ. ಶೋಕ ಅಶೋಕಗಳೆಂಬ ಅವಸ್ಥೆಗಳ ವಿಕಲ್ಪವಿಲ್ಲ. ಲೋಭ-ನಿರ್ಲೋಭಗಳೆಂಬ ಅವಸ್ಥೆಗಳ

ವಿಕಲ್ಪವಿಲ್ಲೆಂದು ತಿಳಿಸುತ್ತಾನೆ. ಸಂಸಾರ ಸಂತತಿಯೆಂಬ ಲತೆಗೆ ಬದ್ಧನಾಗಿರದೆ, ಸಂತೋಷ, ಸುಖ ಎಂಬ ದೈಹಿಕ ಆಕಾಂಕ್ಷೆಗಳಿಗೆ ಮಾರು ಹೋಗದೆ, ಅಜ್ಞಾನದ ಬಂಧನವಿಲ್ಲದೆ, "ಜ್ಞಾನಾಮೃತಂ ಸಮರಸಂ ಗಗನೋಪಮೋಽಹಂ" ಆಗಿರುತ್ತಾನೆ.

ರಾಗಾದಿದೋಷಗಳಿಂದ ಮುಕ್ತನಾದ ಅವಧೂತನು ದೈವಾದಿದೋಷಗಳಿಂದಲೂ ಮುಕ್ತನಾಗಿರುತ್ತಾನೆ. ಪರಮಾರ್ಥತತ್ತ್ವವು ನಿರ್ವ್ಯಾಕುಲವೂ, ಸ್ಥಿರವೂ, ಆಗಿರುವಂತೆ ಸಮರಸನಾಗಿರುತ್ತಾನೆ. ಇಂತಹ ಅವಧೂತನಿಗೆ ದೇವತೆಯ ಆವಾಹನೆಯೂ ಇರುವುದಿಲ್ಲ, ವಿಸರ್ಜನೆಯೂ ಇರುವುದಿಲ್ಲ.

ಅವಧೂತನ ಪೂಜೆಗೆ ಪುಷ್ಪ-ಪತ್ರಗಳು ಬೇಕಿಲ್ಲ. ಹಾಗಾಗಿ ಮಂತ್ರ-ಧ್ಯಾನಗಳ ಅವಶ್ಯಕತೆಯಿಲ್ಲದೆ, ಪ್ರತಿಯೊಂದರಲ್ಲೂ ವಿಮುಕ್ತನಾದವನು. ಇವನಿಗೆ ಅಂಜನವಾಗಲಿ, ನಿರಂಜನವಾಗಲಿ, ಅಂತರವಾಗಲಿ, ನಿರಂತರವಾಗಲಿ ಇರುವುದಿಲ್ಲ. ಅಂತರದಲ್ಲಿ ಭಿನ್ನತೆ ಕಾಣುವುದಿಲ್ಲ. ಹಾಗಾಗಿ ಅವಧೂತನು ಅನಾಮಯನಾಗಿರುವ ನಿರ್ವಾಣವನ್ನು ಹೊಂದುತ್ತಾನೆ.

ಅವಧೂತನು ಉಪಾಸಕನೂ ಅಲ್ಲ, ಉಪಾಸ್ಯ ವಸ್ತುವೂ ಅಲ್ಲ. ಇವನಿಗೆ ಉಪದೇಶವೂ ಇಲ್ಲ, ಕ್ರಿಯೆಯೂ ಇಲ್ಲ. ಪೂರ್ಣ ಜ್ಞಾನ ಸ್ವರೂಪನಾಗಿರುವ ಅವಧೂತನು ಅನಾಮಯನಾಗಿರುವ ನಿರ್ವಾಣವನ್ನು ಹೊಂದುತ್ತಾನೆ. ಮೂರ್ತ-ಅಮೂರ್ತ ರೂಪವಿಲ್ಲದೆ, ಆದಿ-ಮಧ್ಯ ಅಂತ್ಯಗಳಿಲ್ಲದೆ ಇರುವಾಗ ಬಲ-ಅಬಲಗಳಿಲ್ಲದೆ ನಿರ್ವಾಣವನ್ನು ಹೊಂದುತ್ತಾನೆ.

ರಥ್ಯಾ ಕರ್ಪಟ ವಿರಚಿತ ಕಂಥಃ
ಪುಣ್ಯಾ ಪುಣ್ಯ ವಿವರ್ಜಿತ ಪಂಥಃ ।
ಶೂನ್ಯಗಾರೇ ತಿಷ್ಠತಿ ನಗ್ನೋ
ಶುದ್ಧ ನಿರಂಜನ ಸಮರಸ ಮಗ್ನಃ ॥[೪೧]

ಅವಧೂತನು ದಾರಿಯ ಪಕ್ಕದಲ್ಲಿ ಬಿದ್ದಿರುವ ಚಿಂದಿ ಬಟ್ಟೆಯಿಂದ ನಗ್ನ ಶರೀರವ ಮುಚ್ಚಿ, ಪುಣ್ಯ-ಅಪುಣ್ಯ ಇವುಗಳಿಲ್ಲದ ದಾರಿಯಲ್ಲಿ ನಡೆಯುತ್ತಿರುವನು. ಯಾವುದಾದರೂ ಒಂದು ಶೂನ್ಯ ಸ್ಥಳದಲ್ಲಿ ಕೂಡುವನು. ಶುದ್ಧನಾಗಿ, ನಿರಂಜನನಾಗಿ, ಸಮರಸದಲ್ಲಿ ಮಗ್ನನಾಗಿರುವನು. ಮಾನ-ಅವಮಾನಗಳ ಚಿಂತೆಯೇ ಇಲ್ಲದೆ, ಹೇಗಿದ್ದರೇನು? ಹೇಗೆ ನಡೆದರೇನು? ಎಲ್ಲಿದ್ದರೇನು? ಯಾವುದಕ್ಕೂ ಯೋಚಿಸದೆ ಶುದ್ಧ ಮನಸ್ಕನಾಗಿ ತನ್ನಲ್ಲೇ ಎಲ್ಲವನ್ನು ಪೂರೈಸಿಕೊಳ್ಳುವನು. ಇಂತಹ ಅವಧೂತನಿಗೆ ಯುಕ್ತ-ಅಯುಕ್ತಗಳ ಭಾವನೆಯಿಲ್ಲದೆ ಇದ್ದರೂ ದಕ್ಷನಾಗಿದ್ದು, ನಿರಂಜನ ತತ್ತ್ವದಿಂದ ಪವಿತ್ರನಾಗಿರುತ್ತಾನೆ. ಸರ್ವವನ್ನೂ ವಿವರ್ಜಿಸಿ, ದೇಹ-ವಿದೇಹಗಳ, ರಾಗ-ವಿರಾಗಗಳ ವಿಚಾರ ಮಾಡದೆ ನಿರ್ಮಲನಾಗಿದ್ದು ನಿಶ್ಚಲ ತತ್ತ್ವ ಅರಿತಿರುತ್ತಾನೆ.

ಅಪ್ರಮತ್ತೋ ಗಭೀರಾತ್ಮ ಧೃತಿಮಾನ್ ಜಿತಷಡ್ಗುಣಃ ।
ಅಮಾನೀ ಮಾನದಃ ಕಲ್ಪೋ ಮೈತ್ರಃ ಕಾರುಣಿಕಃ ಕವಿಃ ॥[೪೨]

ಅವಧೂತನು ಅಪ್ರಮತ್ತನು, ಗಂಭೀರ ಸ್ವಭಾವದವನು ಮತ್ತು ಧೃತಿಯಿಂದ ಕೂಡಿದವನು. ಹಸಿವು, ದಾಹ, ದುಃಖ, ಮೋಹ, ವೃದ್ಧಾಪ್ಯ, ಸಾವು ಈ ಆರು ಗುಣಗಳಿಂದ ಮುಕ್ತನಾದವನು. ತಾನು ಅಹಂಕಾರಿ ಯಾಗದೆ, ಇತರರಿಗೆ ಮರ್ಯಾದೆಯನ್ನು ಕೊಡುವನು. ಸಮರ್ಥನಾಗಿದ್ದು, ಕರುಣೆಯುಳ್ಳವನಾಗಿದ್ದು, ಜ್ಞಾನಿಯಾಗಿರುತ್ತಾನೆ.

ಕೃಪಾಳು ಕೃತ ದ್ರೋಹಸ್ತಿತಿಕ್ಷುಃ ಸರ್ವ ದೇಹಿನಾಮ್ ।
ಸತ್ಯ ಸಾರೋಽನವದ್ಯಾತ್ಮ ಸಮಃ ಸರ್ವೋಪಕಾರಕಃ ॥[೪೩]

ಅವಧೂತನು ಕೃಪಾಳು ಮತ್ತು ಕರುಣಾಮಯಿ. ಯಾರಿಗೂ ದ್ರೋಹವನ್ನು ಮಾಡುವವನಲ್ಲ. ಸರ್ವಸಹಿಷ್ಣು ಮತ್ತು ಸತ್ಯ ಸಾರವೇ ತಾನಾಗಿರುತ್ತಾನೆ. ಪರಿಶುದ್ಧ ಮನಸ್ಕನಾಗಿದ್ದು, ಎಲ್ಲರನ್ನೂ ಸಮದೃಷ್ಟಿಯಿಂದ ನೋಡುತ್ತಿರುತ್ತಾನೆ. ಎಲ್ಲರಿಗೂ ಉಪಕಾರವನ್ನು ಮಾಡುತ್ತಿರುತ್ತಾನೆ. ಚಿತ್ತವನ್ನು ಸ್ವಸ್ಥಗೊಳಿಸಿ, ಆನಂದ ಸ್ವರೂಪವನ್ನು ಧರಿಸುತ್ತಾನೆ. ಇವುಗಳೆಲ್ಲ ಅವಧೂತನ ಸಹಜ ಸ್ವಭಾವಗಳು.

ಅವಧೂತನಿಗೆ ಜ್ಞಾನಮಾರ್ಗ ಮತ್ತು ಯೋಗಮಾರ್ಗಗಳೇ ಮುಖ್ಯವಾಗಿದ್ದು, ಭಕ್ತಿ ಮತ್ತು ಕ್ರಿಯಾ ಮಾರ್ಗಗಳು ಗೌಣವಾಗಿರುತ್ತವೆ.

ವಿಷಯ ವಾಸನೆಯಲ್ಲಿರುವವರು, ಚಂಚಲ ಮನಸ್ಸನ್ನು ಹೊಂದಿ ವಿಷಯಕ್ಕೆ ಹಾತೊರೆಯುತ್ತಾ ಮುಕ್ತಿಯನ್ನು ಮೂಸಿ ನೋಡಲೂ ಸಿದ್ಧವಿರುವುದಿಲ್ಲ. ಹೀಗಿರುವಾಗ ಚಂಚಲವಾದ ಮನವ ನಿಲ್ಲಿಸಿದರೆ ಮನದ ತುದಿ ಯಲ್ಲಿಯೇ ಪರಮಾತ್ಮನಿರುವುದನ್ನು ಕಾಣಬಹುದು. ಪರಮಾತ್ಮನ ನೆಲೆಯನ್ನು ಅರಿಯಲು ಸದ್ಗುರುವಿನ ಮಾರ್ಗವನ್ನು ಕಂಡುಕೊಳ್ಳಬೇಕು. ಸದ್ಗುರುವಿನ ಗುರೂಪದೇಶದಂತೆ ಸಾಧಕ ಮಾರ್ಗವನ್ನು ಕಂಡುಕೊಂಡು ಸಿದ್ಧಿಗೇರಿ, ಸಂಸಾರವು ಹುಸಿ, ಅನಿತ್ಯ, ಸುಖವಿಲ್ಲದ್ದು, ಹುರುಳಿಲ್ಲದ್ದು, ಅದು ತೀರಾ ಕೆಳಮಟ್ಟದ್ದು, ಅದರಿಂದ ನಿಜ ಸುಖಕ್ಕೆ ಅಡ್ಡಿಪಡಿಸುವುದೆಂದು ತಿಳಿದು ಸಂಸಾರ ಬಂಧನದಿಂದ ಪಾರಾಗಿ, ಪರಮಸುಖ ಪಡೆಯಲು ಮಾರ್ಗ ಕಂಡುಕೊಂಡವರು ಅವಧೂತರು.

.....ವಿಷಯೇಂದ್ರಿಯಗಳನು
ಬೆದರಿಸಿ, ಗುರು ಚರಣದ ಸಂಗವನು
ಮುದವದಿರದೆ ನೋಡುತ್ತ ಭವಗಳನು
ಸದೆ ಬಡಿದಮಲಾತ್ಮನ ಕೂಡಿದನು ॥[೪೪]

ವಿಷಯೇಂದ್ರಿಯಗಳನ್ನು ನಿಗ್ರಹಿಸಿ, ಗುರುಪಾದವನ್ನು ಸೇರಿ ಆತನ ಉಪದೇಶದಿಂದ ಪರಮಾತ್ಮನನ್ನು ಸೇರಲು, ಸಂಸಾರದ ವ್ಯಾಮೋಹವ ಸಂಪೂರ್ಣ ಕಿತ್ತೆಸೆದವನೆ ಅವಧೂತನು. ಸದ್ಗುರುವಿನ ಉಪದೇಶದಂತೆ, ಚಂಚಲತೆಯ ಬಿಟ್ಟು ನಿಶ್ಚಿತಮನದಿಂದ ಮದಗಜದಂತಿರುತ್ತಾನೆ. ಷಡರಿವಿಕಾರದ ಗುಣಗಳನ್ನು ಬಿಟ್ಟು, ಯೋಗಿಯಾಗಿ ಮೋಕ್ಷವನ್ನು ಪಡೆದು ಪರಮಾತ್ಮನಲ್ಲಿ ಸುಖಿಯಾಗಿರುತ್ತಾನೆ.

ಪ್ರಕಟಿಸಿ ವಿಧಿಲಿಖಿತವನೊಡೆದೆಳೆದು
ಸ ಕುಟಿಲ ಸಂಸಾರವ ಸದೆ ಬಡಿದು
ಪ್ರಕೃತಿ ವಿಕಾರಂಗಳ ಕೊಡಹಿದುದು
ಸ್ವಕಳಿತವೆನಿಪವಧೂತ ತತ್ವವಿದು ॥೪೫

ಹಣೆ ಬರಹವ ಅಳಿಸಿ, ಕುಟಿಲ ಸಂಸಾರದ ಭ್ರಮೆಯನ್ನಳಿದು ವಿವೇಕಿಯಾಗಿ, ಪ್ರಕೃತಿ ವಿಕಾರಗಳನ್ನು ಬಿಸುಟುವುದೇ ಅವಧೂತ ತತ್ವವು.

ನಾನಾ ವಿಧವಧೂತನ ಚಿಹ್ನೆ ।
ಯೇನೆಂದರಿಯಲು ಬಾರದು ತನ್ನ ।
ಜ್ಞಾನೋತ್ತರ ವಿವರಣೆಯೊಳಭಿನ್ನ ।
ಸಾನಂದವೆ ತಾನಾಗಿಹ ಚೆನ್ನಾ ॥೪೬

ಹಸಿವು-ತೃಷೆಗಳ ಪರಿಹರಿಸಿ, ಸಕಲೇಂದ್ರಿಯವನ್ನು ನಿಗ್ರಹಿಸಿ, ಯಮನನ್ನು ಜಯಿಸಿದ ಶಿವಕರಜಾತ ನಾಗಿರುತ್ತಾನೆ. ಹರುಷ ವಿಷಾದಗಳನ್ನತಿಗಳೆದು ಯೋಗಮಾರ್ಗದಿಂದ ವಿಹರಿಸುತ್ತಿರುತ್ತಾನೆ. ಶಮೆ-ದಮೆ-ಶಾಂತಿ-ತಿತಿಕ್ಷೆಗಳು ಇವನಲ್ಲಿ ಅಳವಟ್ಟಿರುತ್ತವೆ. ಮಣಿ-ಮಂತ್ರ-ಔಷಧಗಳಿಂದ ಜನರನ್ನು ಈತನು ಭ್ರಮೆ ಗೊಳಿಸುವವನಲ್ಲ. ಅವಧೂತನಿಗೆ ಯಾವ ಆಸ್ತಿಯೂ ವ್ಯವಹಾರವೂ ಬೇಕಾಗಿಲ್ಲ. ಸತ್ವಗುಣ ಸಂಪನ್ನನಂತೆ ಪರೋಪಕಾರಿಯಾಗಿರುತ್ತಾನೆ.

ಅವರವರೊಳಗಿಹನವರವರಂತೆ
ವಿವರಿಸಿ ನೋಡಲು ತಾ ತನ್ನಂತೆ
ರವಿ ಗಗನಾಂಗಣದೊಳು ನಡೆವಂತೆ
ಭವ ವಿರಹಿತನಾದನುವೋರಂತೆ ॥೪೭

ಅವಧೂತನು ಎಲ್ಲರಂತೆ ಇವನಿರದೆ, ಹುಚ್ಚರಿಗೆ ಹುಚ್ಚನಂತೆ, ಭಕ್ತರಿಗೆ ದೇವರಂತೆ ತೋರುವ ಅವಧೂತ ಆಕಾಶದಲ್ಲಿ ಸೂರ್ಯನಂತೆ ಗಂಭೀರನಾಗಿ ನಡೆಯುತ್ತಿರುವನು.

ಅವಧೂತನು ಬಾಹ್ಯಪೂಜೆಗಿಂತಲೂ ಮಾನಸಪೂಜೆಗೆ ಮಹತ್ವ ನೀಡಿರುತ್ತಾನೆ. ನಿರ್ಭೀತನಾದ ಜಗಜಟ್ಟಿಯಂತಿರುವ ಅವಧೂತನು ಯಾವಾಗಲೂ ಪರಮಾತ್ಮನಲ್ಲಿ ಒಂದಾಗಿರುತ್ತಾನೆ.

ಭಕ್ತರ ಉಪಚಾರ-ಪೂಜೆಗಳೇನೆಂದೂ ಬಯಸದ ಅವಧೂತ ಹಗಲೆನ್ನದೆ, ರಾತ್ರಿಯೆನ್ನದೆ, ಚಳಿ-ಮಳೆ-ಬಿಸಿಲೆನ್ನದೆ ಎಲ್ಲೆಂದರಲ್ಲಿ ಓಡಾಡುತ್ತಿರುತ್ತಾನೆ. ದೇಹದ ಮೇಲಿನ ವಸ್ತ್ರಗಳ ಪರಿವೆಯಿಲ್ಲದೆ ಯಾವುದರ ಮೇಲೆಯೂ ಅರಿವಿಲ್ಲದೆ, ಜಾತಿ-ಮತ-ಪಂಥಗಳ ಭೇದ-ಭಾವವಿಲ್ಲದೆ, ಬೇಕಾದರೊಂದು ಮನೆಗೆ ಹೋಗಿ ಭಿಕ್ಷೆ ಬೇಡುವನು. ಇಲ್ಲದಿದ್ದರೆ ಯಾವುದೂ ಇಲ್ಲ.

.....ಕೇಳವಧೂತನೆಂದಡೆ
ಬಗೆಯು ತಾನದು ಏನುಯೆನೆ ನಿಗಿ
ನಿಗಿಪ ವೈಶ್ವಾನರನು ತೊಳೆಯದ ಮಲಿನ ಹೊಂದದಿಹ!
ಅಗಣಿತದ ನಿಜ ಬ್ರಹ್ಮವಿರುತಿರೆ
ತಗುಲಿದುದು ಅವಧೂತನೆಂಬಾ
ಬಗೆಯ ಯೆನಿಸಿತು ನಿಗಮವೀಪರಿ ನುಡಿಯುತಿಹುದೆಂದ ॥೪೬

ಈತ ನಿಗಿನಿಗಿಪ ಅಗ್ನಿಯಂತವನು, ಪೂರ್ಣ ನಿರ್ಮಲ ಪರಬ್ರಹ್ಮನು, ಪರಮಹಂಸನು. ಬಾಹ್ಯಾಂತರಕೆ ಅತೀತನಾದವನು. ನಿರುತ ಅಧ್ವಯನು. ಕರ್ಮೋಪರತಿಯುಳ್ಳ ಅವಧೂತನು ಸರ್ವವ ತ್ಯಜಿಸಿ ಬಟ್ಟ ಬಯಲಿನಲ್ಲಿರುವವನು. ಮನಸ್ಸಿಗೆ ತೋರಿದ ಪರಿಯಲ್ಲಿ ಕೌಪೀನವಧರಿಸಿ ಚಲಿಸುತ್ತಿರುವವನು. ದೇಹದಿಂದ ಮಾಲಿನ್ಯವು ಹೊರಬೀಳುತ್ತಿದ್ದರೂ, ಅದಕ್ಕೆ ಅಸಹ್ಯಹೊಂದದೆ ಅತಿವಿರಕ್ತಿಯಿಂದ, ಮಲಿನವೆಂಬುದು ಶರೀರಕ್ಕೆ ಹೊರತು ನನಗಲ್ಲವೆಂಬ ಭಾವನೆಯಲ್ಲಿರುವನು.

ಕೆಲವು ದಿನ ಬಟ್ಟೆ ಧರಿಸಿ ನಡೆದರೆ ಕೆಲದಿನ ದಿಗಂಬರನಾಗಿಯೇ ಓಡಾಡುತ್ತಿರುವನು. ಕೆಲ ದಿನ ಗುಡಿ, ಮಠ, ಮಂದಿರಗಳಲ್ಲಿದ್ದರೆ, ಕೆಲದಿನ ಅವರಿವರ ಮನೆ ಮುಂದಿನ ಕಟ್ಟೆಗಳಲ್ಲಿ ವಾಸಿಸುವನು. ಕೆಲದಿನ ಊಟ ಮಾಡಿದರೆ, ಕೆಲದಿನ ಅದರ ಪರಿವೇ ಇಲ್ಲದೆ ಇರುವನು. ಕೆಲದಿನ ಸ್ನಾನ ಮಾಡಿದರೆ ಕೆಲದಿನ ಮಾಲಿನ್ಯ ದಿಂದಲೇ ಇರುವನು. ಈ ರೀತಿ ವರ್ತಿಸುವ ಅವಧೂತನನ್ನು ಕೆಲವರು ಹೀನೋಕ್ತಿಗಳನ್ನಾಡುತ್ತಾ ಅಪಹಾಸ್ಯ ಮಾಡುವರು. ಅದ್ಯಾವುದು ತನಗೆ ಸಂಬಂಧವಿಲ್ಲವೆಂಬಂತೆ ಧ್ಯಾನಾಸಕ್ತನಾಗಿರುವನು. ನಿಂದಿಸಿದವರು ನಾನಾ ರೀತಿಯ ಬಾಧೆಗಳಿಗೆ ಬಲಿಯಾಗಿ ನಾಶವಾಗಿರುವರು. ಕೆಲವರು ಇವನನ್ನು ಭಕ್ತಿಯಿಂದ ಪೂಜಿಸಿ, ಸ್ಮರಣೆ ಮಾಡುತ್ತಾ ನಿತ್ಯದ ಕಷ್ಟಗಳನ್ನು ಪರಿಹರಿಸಿಕೊಳ್ಳುವರು.

ಅವಧೂತಪಥ ಜ್ಞಾನರೂಪ ವಿಹಂಗಮ ಪಥ. ಅವನ ಮಾರ್ಗಕ್ಕೆ ನಿಶ್ಚಿತ ಪಂಕ್ತಿ ಅಥವಾ ಪಂಗಡವಿಲ್ಲ. ಈ ಸ್ಥಿತಿಗೆ ಬೇಕಾಗಿರುವುದು ಆತ್ಮಜ್ಞಾನ. ಆತ್ಮಜ್ಞಾನಿಗಳಾದ ಅವಧೂತನು ನಿರಾಶ್ರಯನು ಮತ್ತು ನಿತ್ಯಾನಂದನು. ಆಶ್ರಮವಿಲ್ಲದ ಅತ್ಯಾಶ್ರಮಿಯು. ಲೌಕಿಕ ಸಂಬಂಧವನ್ನು ತ್ಯಜಿಸಿ, ಅಂತರಂಗದಲ್ಲಿ ಗುರುವಿನೋಪದೇಶವನ್ನು ಧರಿಸಿ, ಅವನ ಕರುಣೆಯಿಂದ ಬಾಹ್ಯ ವಿಷಯಗಳನ್ನೆಲ್ಲಾ ಮರೆತು ಯಮ-ನಿಯಮಾದಿ ಅಷ್ಟಾಂಗಯೋಗವ ಸಾಧಿಸಿ ಸದಾ ಮೌನಿಗಳಾಗಿರುವವರು. ಇಂಥವರು ನಾನಾ ರೀತಿಯ ಸ್ಥಿತಿಯಲ್ಲಿ (ಅವಸ್ಥೆ) ಕಾಣುತ್ತಾರೆ.

ಆರವಸ್ಥೆಯು ಆತಗೆಯು ತಾ
ಸಾರಿಹವು ಕೇಳಯ್ಯ ಅರಿವಡೆ
ಮೂರು ಬಾಲೋನ್ಮತ್ತನಂತೆ ಪಿಶಾಚಿವೆಂಬಂತೆ ॥
ಮೂರು ಅಂಧನು ಮೂಕನಂತೆ ವಿ
ಚಾರಿಸಲಿಕೆಯು ಬಧಿರನಂತೆಯು
ವೀರ ನಿನಗಾವಸ್ಥೆ ಆರನು ವಿವರಿಸುವೆನೆಂದ ॥೪೭

ಅವಧೂತನು ಬಾಲ್ಯ, ಉನ್ಮತ್ತ, ಪಿಶಾಚ, ಅಂಧಕ, ಮೂಕ, ಬಧಿರ (ಕಿವುಡ)ನಂತೆ ಆರು ಅವಸ್ಥೆಯಲ್ಲಿ ವಿಹರಿಸುತ್ತಿರುತ್ತಾನೆ.

೧. **ಬಾಲ್ಯಾವಸ್ಥೆ :** ಮಾನಭಿಮಾನವಿಲ್ಲದೆ, ತನ್ನೊಳು ಯಾವ ಊಹೆಗಳಿಲ್ಲದೆ, ತನ್ನೊಳು ತಾನು ನಗುತ್ತಿರುವನು. ಉಪಕಾರ-ಅಪಕಾರಗಳಿಲ್ಲದೆ, ಪಾಪ-ಪುಣ್ಯಗಳಿಲ್ಲದೆ, ಜ್ಞಾನ-ವಿಜ್ಞಾನವಿಲ್ಲದೆ, ಹಾನಿ-ಕ್ಷೇಮಗಳ ಮರೆತು ಸಮಭಾವದಲ್ಲಿ ಮಕ್ಕಳಂತೆ ಇರುವುದು ಬಾಲ್ಯಾವಸ್ಥೆ.

೨. **ಉನ್ಮತ್ತ ಅವಸ್ಥೆ :** ಅವಧೂತನು ನಡೆದಾಡುವಾಗ ದಾರಿಯಲ್ಲಿ ತಗ್ಗು ದಿನ್ನೆ ನೋಡದೆ ಯಾರನ್ನೂ ದಿಟ್ಟಿಸದೆ, ಯಾರಿಗೂ ತಗ್ಗಿ ಬಗ್ಗಿ ನಡೆಯದೆ, ವಿರತಿಯೆ ತುಂಬಿ, ದಾರಿಯಲ್ಲಿ ಯಾರು ಬಂದರೂ ಹೋದರು ಗಮನಿಸದೆ ಮದ್ದಾನೆಯಂತೆ ನಡೆದಾಡುತ್ತಿರುವುದೇ ಉನ್ಮತ್ತಾವಸ್ಥೆ.

೩. **ಪಿಶಾಚ ಅವಸ್ಥೆ :** ದೃಷ್ಟಿ ಒಂದು ಕಡೆ, ಗಮನ ಮತ್ತೊಂದು ಕಡೆ. ದೇಹವು ಮಣ್ಣು, ಕಸ, ಧೂಳಿನಲ್ಲಿದ್ದರೂ, ಯಾವ ಪರಿವೇ ಇಲ್ಲದೆ ಇರುವುದು. ಕಣ್ಣು ತೆರೆದಂತೆ, ಇಲ್ಲವೆ ಮುಚ್ಚಿದಂತೆ. ನೋಡಿದವರು ಹೆದರುವ ಸ್ಥಿತಿಯಲ್ಲಿರುವುದೇ ಪಿಶಾಚ ಅವಸ್ಥೆಯು.

೪. **ಮೂಕಾವಸ್ಥೆ :** ಅಸ್ಥಿರವಾದ ಲೋಕದಲ್ಲಿ ಯಾರೊಡನೆಯೂ ಮಾತನಾಡದೆ, ಯಾವಾಗಲೂ ಮೌನಿಯಾಗಿರುವುದೇ ಮೂಕಾವಸ್ಥೆ.

೫. **ಅಂಧಕಾವಸ್ಥೆ :** ಪರವಶನಾಗಿ, ಧ್ಯಾನಾಸಕ್ತನಾಗಿ, ಒಂದೂ ರೂಪಗಾಣದೆ, ನಿಜ ಸುಖದಲ್ಲಿರುವುದು. ಬಾಹ್ಯ ಸೃಷ್ಠಿಯನ್ನು ನೋಡದೆ ಕುರುಡಾಗಿರುವುದೇ ಅಂಧಕಾವಸ್ಥೆ.

೬. **ಬಧಿರಾವಸ್ಥೆ :** (ಕಿವುಡ) ಅಂತರಂಗದಲ್ಲಿ ಓಂಕಾರ ಧ್ಯಾನ ಮಾಡುತ್ತಾ, ಆ ಶಬ್ಧದಲ್ಲಿ ಮುಳುಗಾಡುತ್ತಾ, ಬಾಹ್ಯದ ಯಾವ ಶಬ್ಧಗಳನ್ನು ಕೇಳದೆ ಇರುವುದೇ ಬಧಿರಾವಸ್ಥೆಯು.

ಅವಧೂತ ಸ್ಥಿತಿ ಮುಟ್ಟಿದ ಯೋಗಿಯು ಈ ಎಲ್ಲಾ ಅವಸ್ಥೆಗಳಲ್ಲಿದ್ದು ಲೋಕಕ್ಕೆ ಮರುಳನಂತೆ ತೋರುವನು. ಇಹ-ಪರವೆಂಬ ಎರಡರ ಬಯಕೆಯನ್ನು ಬಿಟ್ಟು, ನಾಡು-ಕಾಡೆನ್ನದೆ ಪರವಶನಾಗಿ ತಿರುಗಾಡುತ್ತಿರುವನು. ನಡೆ-ನುಡಿ, ನೋಟ, ವೇಷ, ವರ್ತನೆ ಸಂಪೂರ್ಣವಾಗಿ ಲೌಕಿಕಕ್ಕೆ ಭಿನ್ನವಾಗಿರುವವು.

ಕಾಗ ದೃಷ್ಟೀ ಬಗೋ ಧ್ಯಾನೀ ।
ಬಾಲ ಅವಸ್ಥೆ ಭುಯಂಗ ಅಹಾರೀ ॥
ಸೋ ಅವಧೂತ ಬೈರಾಗೀ ಪಾರಬತೀ ॥
ದೂಜೀ ಸಬ್ ಭೇಷಾ ರೀ ॥[೫೦]

(ಕನ್ನಡದಲ್ಲಿ) ಕಾಕ ದೃಷ್ಟಿ ಬಕ ಧ್ಯಾನ ।
ಬಾಲಾವಸ್ಥೆ ಭುಜಂಗಹಾರಿ ।
ಅವನೆ ಅವಧೂತ ಭೈರಾಗಿ ಪಾರಬತಿ ।
ಉಳಿದವರೆಲ್ಲಾ ವೇಷಧಾರಿ ॥

ಅವಧೂತನಿಗೆ ನಿರ್ಧಿಷ್ಟ ವೇಷಗಳಿಲ್ಲ, ಆಚರಣೆಗಳಿಲ್ಲ. ವಿಕೃತ ಅವಸ್ಥೆಗಳೆ ಅವಧೂತನವುಗಳು. "ಲೋಕಾಚಾರವ ತೊರೆದಡೆ ದೊರೆವುದು ಮೋಕ್ಷಧ್ವಾರವೆಂದು ಅರಿತಿರುವ ಅವಧೂತನು ಉನ್ಮನಮಂಟಪದಲಿಹ ನಿರ್ವಾಣದೇವ. ಸದಾ ಭೇದ ತೊರೆದು ಲವಲೀನವಾಗಿ ಪೂಜಿಪೊಡೆ ದೀಪವೇಕೆ? ಧೂಪವೇಕೆ? ಸತ್ಯವನೊರೆವ ದತ್ತ ಅವಧೂತ"[೫೧] ಅವಧೂತನು ಅರಿತಿರುವಂತೆ ಧೂಪ-ದೀಪಗಳೆಲ್ಲಾ ಬಾಹ್ಯಾಡಂಬರಕೆ, ಇವುಗಳ ಅವಶ್ಯಕತೆ ತನಗಿಲ್ಲವೆಂದರಿತು ಅವುಗಳನ್ನೆಲ್ಲಾ ತಿರಸ್ಕರಿಸುತ್ತಾ ಮಾನಸ ಪೂಜೆಯಲ್ಲಿ ತಲ್ಲೀನನಾಗಿರುತ್ತಾರೆ.

ಷಿಮಾ ಜಾಪಂ, ಸೀಲ ಸೇವಾ |
ಪಂಚ ಇಂದ್ರೀ ಹುತಾಸನಂ |
ಉನಮನಿ ಮಂಟಪ ನಿರವಾನ ದೇವ |
ಸದಾ ಜೀವಿತ ಭಾವನ ಭೇವ |
ಲೌಲೀಲ ಪೂಜಾ ಮನ ಪಹೂವ |
ಸತಿ-ಸತಿ ಭೂಷಿತ ಶ್ರೀ ದತ್ತ ಅವಧೂತ ||[೫೨]

(ಕನ್ನಡದಲ್ಲಿ) ಕ್ಷಮೆಯೇ ಜಪ | ಶೀಲವೇ ಸೇವೆ |
ಪಂಚೇಂದ್ರಿಯವೇ ಹುತಾಶನ |
ಉನ್ಮನಿಯ ಮಂಟಪ | ನಿರ್ವಾಣ ದೇವ |
ಸದಾ ಜೀವಿಪ ಭಾವ | ಭೇದವಿಲ್ಲದೆಡೆ |
ಲವಲೀಲ ಪೂಜೆ | ಮನವೇ ಕುಸುಮ |
ಸತ್ಯ ಸತ್ಯವನೊರೆವ ಶ್ರೀ ದತ್ತ ಅವಧೂತ ||

ದೇವರು, ಜಪ, ಧ್ಯಾನ, ಪೂಜೆ ಮುಂತಾದವುಗಳನ್ನು ಲೌಕಿಕರಿಗಿಂತ ಸಂಪೂರ್ಣ ಭಿನ್ನವಾಗಿ ತಿಳಿದ ಅವಧೂತನು ಆಸೆಯೆಂಬುದೊಂದು ಮಹಾದುಃಖ. ನಿರಾಸೆಯೇ ಪರಮಸುಖ. ಆಸೆ ನಿರಾಸೆ ಎರಡರ ತ್ಯಾಗಿ, ತಪಸ್ವಿಯಾಗಿ ನಿದ್ರಿಪನು ಸುಖವಾಗಿ. ಧೂಳು ಮುತ್ತಿದ ದೇಹ ಈ ಭೂಮಿ, ತನಗೆ ಸಮವೆಂಬ ಮಿತ್ರತ್ವ ಇಂಥ ವೈರಾಗ್ಯದ ಲಕ್ಷಣ ಹೊಂದಿದ ಅವಧೂತನು "ಆಸನ ಹಾಕಿ ಕುಳಿತರೆ ಕಬ್ಬಿಣದ ಮೊಳೆ ಜಡಿದಂತೆ ಅಚಲ. ನಡೆದರೆ ವಾಯು ವೇಗದಿಂದ ನಡೆಯುತ್ತಾನೆ. ಮಲಗಿ ನಿದ್ರಿಸುವ ಇವನು ಬದುಕಿದ್ದು ಸತ್ತಂತೆ. ಪಂಜರದ ಗಿಳಿಯಂತೆ ಶೂನ್ಯವೇ ತಾಯಿ (ಸಮಾಧಿಸ್ಥತಿ) ಶೂನ್ಯವೇ ತಂದೆ. ಅದೇ ನಿರಂಜನ ಬ್ರಹ್ಮ, ಶೂನ್ಯದ ಪರಿಚಯ ದೊರೆತ ಮೇಲೆ ಸ್ಥೈರ್ಯವುಂಟಾಗುತ್ತದೆ. ಆಗ ಯೋಗಿ ನಿಶ್ಚಲನಾಗುತ್ತಾನೆ."[೫೩] ಲೌಕಿಕ ಚೇಷ್ಟೆಗೆ, ದೂಷಣೆಗೆ, ನಿಂದಕತೆಗೆ, ತ್ರಿಣಯನ ಸಮನಾದ ಯೋಗಿಯು ಎಂದೂ ಅಂಜನು, ಅಳುಕನು. ಆತನ ಮನವೆಂದೂ ಚಂಚಲವಾಗದು. ಆತ್ಮ ಸ್ವರೂಪದಲ್ಲಿ ಸುಸ್ಥಿರನು. ಲೌಕಿಕರ ಉಪದ್ರವ ಏನೇ ಇರಲಿ ಕಣ್ಣು ತೆರೆಯದೆ ಸಮಾಧಿಸ್ಥಿತಿಯಲ್ಲಿರುವನು. ಈತನ ನಡಾವಳಿಯನ್ನು ಕಂಡು ಕೆಲವರು ಪೀಡಿಸುತ್ತಿದ್ದರೆ, ಮತ್ತೆ ಕೆಲವರು ಈತನಾರೋ ಮಹಾಮಹಿಮನೆಂದು, ಸ್ನಾನ ಮಾಡಿಸಿ, ಮಡಿ ಬಟ್ಟೆ ತೊಡಿಸಿ ಪೂಜಿಸುವರು. ಮಕ್ಕಳಿಗೆ ಊಟ ಮಾಡಿಸುವಂತೆ ಊಟ ಮಾಡಿಸುವರು. ಶುದ್ಧ ಮನಸ್ಸಿನ ಭಕ್ತರು ಈ ರೀತಿ ಸೇವೆ ಮಾಡುತ್ತಿದ್ದರೆ,

[illegible]

[illegible]

[illegible]

ಅವಧೂತನು ಕಿಂಚಿತ್ತು ಪ್ರತಿಕ್ರಿಯೆ ತೋರಿಸದೆ ತಾನೆ ತಾನಾಗಿರುವನು. ದೇಹಪ್ರಜ್ಞೆಯಿಲ್ಲದೆ, ನಿದ್ರಿತನಂತೆ ಪರಬ್ರಹ್ಮದಲ್ಲಿ ಸ್ವಸ್ಥನಾಗಿರುವನು. ತನ್ನಲ್ಲಿ ಪೂರ್ಣಪ್ರಜ್ಞೆ ತುಂಬಿದ್ದರೂ ಜಡಮತಿಗಳಿಗೆ, ತಿಳುವಳಿಕೆ ಓಸ ನಂತೆ, ಹುಚ್ಚನಂತೆ ಕಾಣುವನು. 'ಅವಧೂತನಿಗೆ ಲೋಕದ ಸಂಪತ್ತು ದುಃಖದ ಸಮುದ್ರ, ಅದೇ ವಿರತಿಯು ಸುಖದ ಸಂಪತ್ತಿದ್ದಂತೆ.' ಆತ್ಮಸುಖದಲ್ಲಿ ವಿರಮಿಸುವ ಅವಧೂತನು ವಿವಿಧ ಸ್ಥಿತಿಗಳಲ್ಲಿ ಗೋಚರಿಸುವನು.

ಸಂಚಿತ, ಆಗಾಮಿ ಕರ್ಮಿಗಳೆರಡೂ ನಾಶವಾಗಿ, ಆರಬ್ಧ ಕರ್ಮದಿಂದ ವ್ಯವಹರಿಸುತ್ತಿರುವ ದೇಹಾದಿ ನಿರಭಿಮಾನಂಚಿತವೇ ಮುಕ್ತಿ. ಇಂತಹ ಮೋಕ್ಷದಲ್ಲಿ ಎರಡು ವಿಧವೆಂದು ಚಿದಾನಂದವಧೂತರು ತಿಳಿಸುತ್ತಾರೆ.

೧. ಜೀವನ್ಮುಕ್ತ

೨. ವಿದೇಹ ಕೈವಲ್ಯ (ವಿಲಕ್ಷಣ ಸ್ಥಿತಿ)

ಜೀವನ್ಮುಕ್ತ ಸ್ಥಿತಿ : ಜೀವನು ಮುಕ್ತಿಯನ್ನು ಹೊಂದುವ ಸ್ಥಿತಿಗೆ ಜೀವನ್ಮುಕ್ತಯೆಂದು ಹೆಸರು. ಮುಕ್ತಿಯನ್ನು ಹೊಂದಬೇಕೆಂದು, ತನ್ನ ಸಕಲ ಮನೋವ್ಯಾಪಾರಗಳನ್ನು ನಾಶಮಾಡಿ, ಸಂಚಿತ, ಪ್ರಾರಬ್ಧ-ಆಗಾಮಿಯೆಂಬ ವಾಸನಾತ್ರಯ ಕರ್ಮಗಳನ್ನು ನಾಶಮಾಡಿದ ಮೇಲೆ ಈ ಸ್ಥಿತಿ ತಲುಪುತ್ತಾನೆ.

ಜೀವಾತ್ಮನೆ ಪರಬ್ರಹ್ಮ ಸ್ವರೂಪವೆಂಬ ಬ್ರಹ್ಮಜ್ಞಾನವನ್ನು ತತ್ತ್ವವಿಚಾರದಿಂದಲೂ, ಗುರೂಪದೇಶ ದಿಂದಲೂ ತಿಳಿದು, ಸಮಸ್ತ ಕೋರಿಕೆಗಳನ್ನು ತೊರೆದು, ತಾನೇ ತಾನಾಗಿ ಕೇವಲ ಸಾಕ್ಷಿ ಸ್ವರೂಪನಾಗಿ ಆನಂದವನ್ನು ಅನುಭವಿಸುವ ಬ್ರಹ್ಮಜ್ಞಾನಿಯೇ ಜೀವನ್ಮುಕ್ತನು. ಜೀವಾತ್ಮನಿಗೂ, ಪರಬ್ರಹ್ಮನಿಗೂ ಐಕ್ಯಭಾವ ತಿಳಿದವನೇ ಜೀವನ್ಮುಕ್ತ.

ತನು-ಮನಗಳ ಹಂಗಿಲ್ಲದೆ, ಶಾಸ್ತ್ರಾದಿವಾಸನೆಗಳ ಸಂಗವಿಲ್ಲದೆ ಮತ್ತು ಸುಖ-ದುಃಖ ದಾವಾಗ್ನಿಯ ಉಪಟಳದಿಂದ ತನಗೆ ಭಂಗವಿಲ್ಲವೆಂದು ಶಾಂತನಾಗಿರುತ್ತಾನೆ. ತಾನೇ ಪರಮಾತ್ಮನೆಂಬ ಪವಿತ್ರಭಾವದಲ್ಲಿ ಮೈಮರೆತು, ಬಾಹ್ಯಾಂತರವನರಿಯದಲೆ ನಿಜಾನಂದದಲ್ಲಿ ವಿಹರಿಸುತ್ತಾನೆ.

ಸ್ಥೂಲ ತನುವಿಲಿ ಸೂಕ್ಷ್ಮತನುವಿಲಿ
ಮೇಲೆಯಿಹ ಕಾರಣದ ತನುವಿಲಿ।
ಕಾಲುಯಿಕ್ಕಿಯ ಪೂರ್ಣ ಪ್ರಭೆಯದು ಮೂರರಲಿ ತುಂಬಿ ॥
ಕಾಲ ತ್ರಿತಯನ ರಾತ್ರೆ ದಿವವನು।
ವಾಲಯದಿ ಮರೆದಿರಲು ನಿತ್ಯ ನಿ
ರಾಲಯವು ಅದು ಅದುವೆ ಜೀವನ್ಮುಕ್ತಿ ಕೇಳೆಂದ ॥[೫೪]

ಸ್ಥೂಲ-ಸೂಕ್ಷ್ಮ-ಕಾರಣವೆಂಬ ತನು ಮೂರರಲಿ ಮುಕ್ತನ ಆತ್ಮ ಪ್ರಭೆಯು ತುಂಬಿರುವುದು. ಕಾಲ ತ್ರಿತಯ ಮತ್ತು ದಿವರಾತ್ರಿಯೆಂಬ ಭೇದವನು ಮರೆತು, ದೇಶ ಕಾಲಾತೀತವಾದ ನಿಜಾಲಯದಲಿ ವಿಶ್ರಮಿಸುವನು.

ಸಂಕಲ್ಪ-ವಿಕಲ್ಪಗಳೆಂಬುವಿಲ್ಲದೆ, ನಿಶ್ಚೇಷ್ಟಿತನಾಗಿ, ನಿರ್ವಿಕಾರನಾಗಿ, ಮನಸ್ಸನ್ನು ಬ್ರಹ್ಮದಲ್ಲಿ ಲಯಮಾಡಿ ಸಮಾಧಿ ನಿಷ್ಠೆಯಲ್ಲಿರುತ್ತಾನೆ. ಸ್ನಾನ, ಪೂಜೆ, ಜಪ, ತಪ, ಹೋಮ, ಹವನ ಮುಂತಾದ ಸತ್ಕರ್ಮಗಳೆಂಬು

ವನ್ನು ತೊಲಗಿಸಿ, ದಂತಧಾವನ ಶೌಚಾದಿ ಕರ್ಮಗಳನ್ನು ಮರೆತು ಏಕಾಂತ ಸ್ಥಳದಲ್ಲಿ ಕುಳಿತುಕೊಂಡು, ಯಾವ ಕೋರಿಕೆಯೂ ಇಲ್ಲದೆ ತನ್ನ ಮನಸ್ಸನ್ನು ಆ ಪರಮಾತ್ಮನಲ್ಲಿ ಐಕ್ಯ ಮಾಡಿರುತ್ತಾನೆ. ಸದಾ ಆತ್ಮಧ್ಯಾನ ಮಾಡುತ್ತಾ ಜಗತ್ತು ಮಿಥ್ಯ, ಅಶಾಶ್ವತವೆಂದು ತಿಳಿದು ಸಮಾಧಿ ಸ್ಥಿತಿಯಲ್ಲಿರುತ್ತಾನೆ.

ಜರಾಮರಣ ಮಾಪಚ್ಚ । ರಾಜ್ಯಂ ದಾರಿದ್ರ್ಯಮೇವ ಚ ॥
ರಮ್ಯ ಮಿತ್ಯೇವ ಯೋ ಭಾಂಕ್ತೇ । ಸ ಜೀವನ್ಮುಕ್ತ ಉಚ್ಯತೆ ॥[೫೫]

ಆತ್ಮಸ್ವರೂಪಿಯಾದ ನನಗೆ ದೇಹಸಂಬಂಧವಾದ ರಾಜ್ಯ, ಹಣ, ಅಧಿಕಾರ, ಭೋಗ, ಕಷ್ಟ, ಮುದಿತನ, ಸಾವು ಮೊದಲಾದವುಗಳು ಎಂದಿಗೂ ಅಂಟವು ಎಂದು ಮನಸ್ಸಿನಲ್ಲೆಣಿಸಿ ಇವುಗಳಲ್ಲಿ ಯಾವುದು ಉಂಟಾದರೂ ಅದಕ್ಕೆ ಭಯಪಡದೆ ಧೈರ್ಯದಿಂದ ಜೀವನ್ಮುಕ್ತನಿರುತ್ತಾನೆ. ವಾಸನತ್ರಯಗಳನ್ನು ಕಳೆದು, ಅರಿಷಡ್ವರ್ಗಗಳಿಗೆ ಎಡೆಗೊಡದೆ ಜಾಗ್ರತಾವಸ್ಥೆಯಲ್ಲಿದ್ದರೂ, ಸುಪ್ತಾವಸ್ಥೆಯನ್ನು ಹೊಂದಿ ಆ ಸುಖವನ್ನು ನಿರಂತರವಾಗಿ ಅನುಭವಿಸುತ್ತಿರುತ್ತಾನೆ.

ದೇಹೇಂದ್ರಿಯೇಷ್ವಹಂಭಾವಃ ಇದಂ ಭಾವ ಸ್ತದನ್ಯಕೇ ॥
ಯಸ್ಯ ನೋ ಭವತಃ ಕ್ವಾಪಿಃ ಸ ಜೀವನ್ಮುಕ್ತ ಇಷ್ಯತೆ ॥[೫೬]

ಆತ್ಮನೇ ನಾನೆಂದೂ, ನಾನೇ ಆತ್ಮನೆಂದು ತಿಳಿದು, ದೇಹ ಮತ್ತು ಇಂದ್ರಿಯಗಳು ನಾನೆಂಬ ಅಹಂಕಾರ ಮಮಕಾರಗಳನ್ನು ತೊಲಗಿಸಿ, ಬ್ರಹ್ಮನಿಷ್ಠಾತತ್ಪರನಾಗಿರುತ್ತಾನೆ. ಪರಬ್ರಹ್ಮನಲ್ಲಿ ಬೆರೆತು ಒಳಗೂ ಹೊರಗೂ ತಾನೇ ತಾನಾಗಿ ಮೆರೆಯುತ್ತಿರುತ್ತಾನೆ. ಈತನು ವಿಗ್ರಹಾರಾಧನೆ ಮೊದಲಾದ ಸಗುಣಾರಾಧನೆಗಳನ್ನು ಬಿಟ್ಟು, ಅಹಂಕಾರ ರೂಪವಾದ ಸಕಲ ಮಲಿನ ವಾಸನೆಗಳನ್ನು ಕಳೆದು, ಬ್ರಹ್ಮಜ್ಞಾನ, ತ್ಯಾಗಶೀಲನಾಗಿ, ಪರಮಾತ್ಮನೊಡನೆ ಕೂಡಿಕೊಂಡಿರುವ ಮಹಾನುಭಾವನಾಗಿರುತ್ತಾನೆ. ಪ್ರಾರಬ್ಧವಶದಿಂದ ಬಿಡದೆ ಬರುವ ರೋಗ, ಸಂಕಟ, ಅಭಿಮಾನ, ನಿಂದೆಗಳು ದೇಹಕ್ಕೇ ಹೊರತು ತನಗಲ್ಲವೆಂದು, ಲೌಕಿಕದೊಳು ಮೂಕನಂದದಿ ಇದ್ದು ದೇಹಾದಿ ವಿಕಾರಗಳನ್ನು ಸಾಕ್ಷಿಯಾಗಿ ನಿರ್ಲಿಪ್ತ ಸ್ಥಿತಿಯಲ್ಲಿ ನೋಡುತ್ತಿರುವನು. ತುರೀಯಾತೀತನಾಗಿ, ಸರ್ವಪರಿಪೂರ್ಣನಾದ ಪರಬ್ರಹ್ಮನನ್ನು ಧ್ಯಾನಿಸುತ್ತಾ ಸರ್ವಕಡೆಯಲ್ಲೂ ಸಂಚಾರ ಮಾಡುವ ಸ್ವಭಾವವುಳ್ಳವನಾಗಿರುತ್ತಾನೆ. ನಿರ್ಮಲ ಮನಸ್ಕನಾದ ಜೀವನ್ಮುಕ್ತನು ಶುದ್ಧ ಅದ್ವೈತ ಜ್ಞಾನದಿಂದ ಅಖಂಡ ಬ್ರಹ್ಮಾನಂದದಲ್ಲಿ ಮಗ್ನನಾಗಿರುತ್ತಾನೆ. 'ಅಹಂ ಬ್ರಹ್ಮಾಸ್ಮಿ' ಅಂದರೆ ನಾನೇ ಪರಬ್ರಹ್ಮನು, ಪರಬ್ರಹ್ಮನು ನಾನೆಂಬ ಜೀವಾತ್ಮ ಪರಮಾತ್ಮರ ಐಕ್ಯಜ್ಞಾನವುಳ್ಳವರೇ ಜೀವನ್ಮುಕ್ತರು. ಹಠಯೋಗ, ರಾಜಯೋಗದಂತಹ ಯೋಗಗಳನ್ನು ಸಾಧಿಸಿ, ವಿಹಂಗಮ ಪಥದಲ್ಲಿ ಸಾಗಿ ಜೀವನ್ಮುಕ್ತಿ ಪಡೆದವರನ್ನು ಅವಧೂತರೆಂದೂ, ಶುದ್ಧ ಪರಮಹಂಸರೆಂದೂ ಕರೆಯುತ್ತಾರೆ.

ಲಕ್ಷಣ

೧. ಪ್ರತ್ಯೇಕವಾಗಿ ಆಚರಿಸಬೇಕಾದ ನಿಯಮವೊಂದೂ ಜೀವನ್ಮುಕ್ತನಾದ ಅವಧೂತನಿಗಿರುವುದಿಲ್ಲ.

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

೨. ಇವನಿಗೆ ಇಷ್ಟವಾದದ್ದೇ ಪೂಜೆ, ನೋಡಿದ್ದೇ ಲಕ್ಷ್ಯ ಒಡಗೂಡಿದ್ದೇ ಯೋಗ.

೩. ಜ್ಞಾನ ಸ್ವರೂಪಿಯಾದ ಜೀವನ್ಮುಕ್ತನಿಗೆ ಜನ್ಮಾಂತರದ ಸುದ್ಧಿಯಿರುವುದಿಲ್ಲ.

೪. ಸಮರಸಭಾವ, ಹೊಗಳಿಕೆ, ತೆಗಳಿಕೆಗೆ ಅಥಾವ ಮೇಲು-ಕೀಳೆಂಬ ಭೇದಭಾವವಿಲ್ಲದೆ, ರಾಗದ್ವೇಷಗಳಿಲ್ಲದೆ ಇರುವವನು ಜೀವನ್ಮುಕ್ತನಾದ ಅವಧೂತನು.

ವಿಲಕ್ಷಣಸ್ಥಿತಿ : ಈ ಸ್ಥಿತಿ ಪಡೆದ ಅವಧೂತ ಕೆಲದಿನ ನೆಲದಮೇಲೆ ಮಲಗುವನು, ಕೆಲದಿನ ಸ್ಮಶಾನದಲ್ಲಿರುವನು, ಒಮ್ಮೆ ವಸ್ತ್ರಧಾರಿಯಾಗಿದ್ದರೆ, ಇನ್ನೊಮ್ಮೆ ದಿಗಂಬರ. ಒಮ್ಮೆ ಊಟ ಮಾಡಿದರೆ, ಇನ್ನೊಮ್ಮೆ ಉಪವಾಸ. ಒಮ್ಮೆ ಸ್ನಾನ ಮಾಡಿದರೆ, ಇನ್ನೊಮ್ಮೆ ಮಲಿನದಲ್ಲಿರುವನು. ಇಂತಹ ವಿಚಿತ್ರಲಕ್ಷಣ ಹೊಂದಿದ ಅವಧೂತನು ಯಾವುದೇ ವರ್ಣಾಶ್ರಮಗಳಿಲ್ಲದೆ, ಜಾತಿ, ಮತ, ಪಂಥಗಳನ್ನು ಮೀರಿದವನಾಗಿರುತ್ತಾನೆ.

ಪ್ರಕೃತಿಯು ಜನ ಸಂಗತಿಯು ಘಾತಕ |
ಸುಖವದಲ್ಲವು ಉತ್ತುಮರನೇ
ದುಃಖಕೆ ತಾಹದು ಅಳಲಿಪುದು ಆಯಾಸಕೆಯು ತಹದು |
ನಿಖಿಳದೊಳು ಮಾತೇನು ಯೆನಗಂ
ದಖಿಲ ಸಂಗತಿ ತ್ಯಜಿಸಿ ಮೌನವೆ
ಯುಕುತಿಯಿದಕೆಂದೆನುತ ಒಬ್ಬನೆಯಿಹನು ಅವಧೂತ ||[೫೭]

ಯಾರ ಕ್ಷೇಮವೇನೆಂದರಿಯದೆ, ತನ್ನ ಶರೀರದ ಕ್ಷೇಮವೇನಂದರಿಯದೆ, ಪರಮಾತ್ಮನೇ ತಾನಾಗಿ ನಿತ್ಯ ಮೆರೆಯುವವನು ಅವಧೂತ.

ಮುಮುಕ್ಷುವಾದವನು ಯಾರೇ ಆಗಲಿ ಅವನಿಗೆ ನಿತ್ಯಕರ್ಮಾನುಷ್ಠಾನದಿಂದ ಧರ್ಮೋತ್ಕರ್ಷ ವುಂಟಾಗುವುದು. ಇದರಿಂದ ಪಾಪ ನಿವೃತ್ತಿಯಾಗುವುದು. ಪಾಪನಿವೃತ್ತಿಯಿಂದ-ಚಿತ್ತಶುದ್ಧಿ. ಚಿತ್ತಶುದ್ಧಿಯಿಂದ-ಸಂಸಾರದೋಷ ದರ್ಶನ, ಸಂಸಾರದೋಷ ದರ್ಶನದಿಂದ-ವಿಷಯ ವಿರಕ್ತಿ, ವಿಷಯ ವಿರಕ್ತಿಯಿಂದ-ಮೋಕ್ಷಾಪೇಕ್ಷೆ, ಮೋಕ್ಷಾಪೇಕ್ಷೆಯಿಂದ -ಬಾಹ್ಯಕರ್ಮೋಪರತಿ, ಬಾಹ್ಯಕರ್ಮೋಪರತಿಯಿಂದ -ಯೋಗಾಭ್ಯಾಸ, ಯೋಗಾಭ್ಯಾಸದಿಂದ -ಪ್ರತ್ಯಗಾತ್ಮಭರತಿ, ಪ್ರತ್ಯಗಾತ್ಮಭರತಿಯಿಂದ ತತ್ತ್ವಮಸ್ಯಾದಿ ಮಹಾವಾಕ್ಯವಿಚಾರ. ಆ ವಿಚಾರದಿಂದ -ಅದ್ವೈತಜ್ಞಾನ. ಆ ಜ್ಞಾನದಿಂದ -ಅವಿದ್ಯಾನಾಶ, ಅವಿದ್ಯಾನಾಶದಿಂದ -ದ್ವೈತಭ್ರಾಂತಿನಷ್ಟ. ದ್ವೈತಭ್ರಾಂತಿನಷ್ಟದಿಂದ ಶುಭಾಶುಭಾಬುದ್ಧಿ ಪರಿತ್ಯಾಗ, ಆ ಪರಿತ್ಯಾಗದಿಂದ ರಾಗ ದ್ವೇಷಹಾನಿ, ಆ ರಾಗದ್ವೇಷ ಹಾನಿಯಿಂದ ವಿಧಿನಿಷೇಧ ನಿರಸನ, ಆ ವಿಧಿನಿಷೇಧ ನಿರಸನದಿಂದ ಪುಣ್ಯಪಾಪಕ್ಷಯ, ಆ ಪುಣ್ಯಪಾಪಕ್ಷಯ ದಿಂದ ದೇಹಭಾವವಿಚ್ಛಕ್ತಿ, ಆ ವಿಚ್ಛಕ್ತಿಯಿಂದ ಸರ್ವಪಾಪ ವಿಮೋಚನೆ. ಸರ್ವಪಾಪ ವಿಮೋಚನೆಯಿಂದ ಸರ್ವೋತ್ಕರ್ಷವಾದ, ಪುನರಾವೃತ್ತಿರಹಿತವಾದ, ಸಕಲಶಾಸ್ತ್ರ ಪರ್ಯಾವಸಾನವಾದ, ನಾಮ ರೂಪ ಕ್ರಿಯಾ ವಾಸನೆ ಹೋಗುವ, ವಾಚಾಮಗೋಚರವಾದ, ನಿತ್ಯಾನಂದ ಸ್ವರೂಪವಾದ ವಿದೇಹ ಕೈವಲ್ಯ ಪ್ರಾಪ್ತ ವಾಗುವುದು.[೫೮]

ಹೀಗೆ ಅವಧೂತನು ತನಗಿಷ್ಟಬಂದ ಮಾರ್ಗದಲ್ಲಿ ವಿಹರಿಸುತ್ತಾ, ಯಾವ ಸೀಮಿತಕ್ಕೂ ಒಳಪಡದೆ, ವಿವಿಧ ಸ್ಥಿತಿಗಳಲ್ಲಿ ಗೋಚರಿಸುವನು. ವಿವಿಧ ಲಕ್ಷಣ, ವಿವಿಧ ಅವಸ್ಥೆಗಳಲ್ಲಿ ಕಾಣಬರುವ ಅವಧೂತ ಪಂಥಕ್ಕೆ ಪ್ರಾಚೀನ ಪರಂಪರೆಯಿದ್ದು, ಇಂದಿಗೂ ದೇಶದ ವಿವಿಧ ಕಡೆ ಅವತರಿಸುತ್ತಿದ್ದಾರೆ. ತಮ್ಮದೇ ಆದ ವಿಶಿಷ್ಟ ಸಂಸ್ಕೃತಿಯನ್ನು ಹೊಂದಿರುವ ಅವಧೂತ ಸಂಸ್ಕೃತಿ, ಕೋಮು ಸೌಹಾರ್ದಕ್ಕೆ, ಭಾವೈಕ್ಯತೆಗೆ, ಬಾಂಧವ್ಯಕ್ಕೆ ತಳಹದಿಯಾಗಿದೆ.

೨. ೫. ಅವಧೂತರ ಪವಾಡಗಳು

ಅವಧೂತರು ಜನಪ್ರಿಯರಾಗಿರುವುದನ್ನು ತೋರಿಸುವ ಸಂಗತಿಗಳೆಂದರೆ, ಅವರು ತೋರಿದರೆನ್ನಲಾದ ಪವಾಡಗಳು, ಅಥವ ಮಹಿಮೆಗಳು. ಕಾಲದಿಂದ ಕಾಲಕ್ಕೆ ಅವತರಿಸಿದ ಆಚಾರ್ಯರು, ಪ್ರವಾದಿಗಳು, ಸಂತರು, ಯೋಗಿಗಳು, ಪವಾಡಗಳನ್ನು ಮಾಡಿದ್ದಾರೆಂಬುದನ್ನು, ಅವರ ಜೀವನ ಚರಿತ್ರೆಗಳು ತಿಳಿಯಪಡಿಸುತ್ತವೆ. ಅವಧೂತರ ಚರಿತ್ರೆಗಳು, ಪುರಾಣಗಳೂ ಸಹ ಇದಕ್ಕೆ ಹೊರತಾಗಿಲ್ಲ.

'ಪವಾಡ' ಎಂಬ ಶಬ್ದವನ್ನು ಇಂಗ್ಲೀಷಿನ 'Miracle' ಶಬ್ದಕ್ಕೆ ಸಂವಾದಿಯಾಗಿ ಬಳಸುತ್ತೇವೆ. "Miracle is generally difined by the etymology of the word. as that which causes wonder and astonishment being extra-ordinary in itself and inexplicable by normal standard or as a sign of indicating some thing other than itself"[೫೯] ಪವಾಡಗಳು ವಿಚಿತ್ರವಾದ, ಆಶ್ಚರ್ಯಕರವಾದ, ಅಸಮಾನ್ಯವಾದ ವಸ್ತು ಅಥವಾ ಸಂಗತಿಗಳು. ಈ ಪವಾಡಗಳು ಜನಸಾಮಾನ್ಯರ ಅನುಭವಕ್ಕಿಂತ ಬೇರೆಯಾದ ವಿಲಕ್ಷಣ ಸಂಗತಿಗಳು. ಇಂಥ ಪವಾಡಗಳನ್ನು 'ದೇವರು ಇಲ್ಲವೆ ದೈವೀಶಕ್ತಿಯ ಬಲವಿದ್ದ ಮಾನವೀಯ ಅನುಕಂಪವುಳ್ಳ ಮಹಾಪುರುಷನಿಂದ, ದುಃಖಿತರ, ಆರ್ತರ, ರಕ್ಷಣೆಗಾಗಿ ಹಾಗೂ ಸಾಮಾನ್ಯ ಜನತೆ ದೈವೀಶಕ್ತಿಯಲ್ಲಿ ಸಂಶಯ ತಾಳಿದಾಗ ಅದರ ಸ್ಥಿರೀಕರಣಕ್ಕಾಗಿ ಯಾವುದೇ ಪೂರ್ವಭಾವಿ ತಯಾರಿಯಿಲ್ಲದೆ ಜರುಗುವ ಘಟನೆಗಳು."[೬೦]

ಭಾರತೀಯ ಯೋಗ ಶಾಸ್ತ್ರದಲ್ಲಿ ಹೇಳಿರುವಂತೆ, ಹಠಯೋಗದಂತಹ ಸಾಧನೆಯಿಂದ ಹಂತ ಹಂತವಾಗಿ ಅಣಿಮಾದಿ ಅಷ್ಟೈಶ್ವರ್ಯಗಳನ್ನು ಪವಾಡಗಳಂತಹ ಸಿದ್ಧಿಗಳನ್ನು ಪಡೆದುಕೊಳ್ಳಬಹುದೆಂದಿದ್ದಾರೆ. ಇಂತಹ ಯೋಗ ಸಾಧನೆಗಳಿಂದ ಹಂತ ಹಂತವಾಗಿ ಸಿದ್ಧಿಗಳು ಕರಗತವಾಗುವವು. ಆ ಸಿದ್ಧಿಗಳಿಂದ ಆತನಿಗೆ ಆಶ್ಚರ್ಯಕಾರಕ ಘಟನೆಗಳು ಅಥವಾ ಪವಾಡಗಳನ್ನು ಎಸಗುವ ಶಕ್ತಿ ಪ್ರಾಪ್ತವಾಗುತ್ತದೆಂದು ಯೋಗಶಾಸ್ತ್ರ ದಲ್ಲಿ ಹೇಳಲಾಗಿದೆ. "ಪವಾಡವೆಂದರೆ ಅಸಮಾನ್ಯ ಘಟನೆ. ಅಥವಾ ನಿಸರ್ಗದ ಯಾವುದೇ ನಿಯಮ ನಿಬಂಧನೆ ಗಳಿಂದ ವಿವರಿಸಲಾಗದ ಕಾರ್ಯ-ಕಾರಣ ಸಂಬಂಧವಿಲ್ಲದ, ಮತ್ತು ನಿಸರ್ಗದ ನಿಯಮಗಳಿಗೆ ಮಿಕ್ಕಿದ ಅಲೌಕಿಕ ಶಕ್ತಿಯ ಕಾರ್ಯ."[೬೧] ವಿಚಾರವಾದಿಗಳ ಕಣ್ಣಿಗೆ ಕಟ್ಟುಕತೆಯಾಗಿ ಕಾಣುವ ಈ ಮಿತ್‌ಗಳನ್ನು ಭಕ್ತರು ತಮ್ಮ ದಿನನಿತ್ಯದ ಬಾಳಿನಲ್ಲಿ ಎದುರಾಗುವ ಸಾಮಾಜಿಕ, ಧಾರ್ಮಿಕ, ನೈಸರ್ಗಿಕ ಮತ್ತು ಇತರೆ ತೊಡಕು ತಾಪತ್ರಯಗಳನ್ನು ದೇವರೆಂದು ನಂಬಿದ ಮಹಾತ್ಮರ ಪವಾಡಗಳ ಮೂಲಕ ಎದುರಿಸುತ್ತಾರೆ.

ಸಂಭವಿಸುವ ಎಲ್ಲಾ ಸಮಸ್ಯೆಗಳನ್ನು ಪವಾಡಪುರುಷರ ಮಹಿಮೆಯಿಂದ ಮಾನಸಿಕವಾಗಿ ಪರಿಹರಿಸಿಕೊಂಡಂತೆ ನಡೆಯುತ್ತಾರೆ.

ಅವಧೂತರು ಮಾಡಿದರೆನ್ನಲಾದ ಪವಾಡಗಳಲ್ಲಿ ಸ್ವಾರ್ಥವಾಗಲಿ, ಮಂತ್ರ ವಿದ್ಯೆಗಳಲ್ಲಿರುವಂತೆ ಮಾಟದ ಅಂಶವಾಗಲಿ, ವ್ರತಾಚರಣೆಯ ನಿಯಮ ನಿಬಂಧನೆಗಳಾಗಲೀ ಇರುವುದಿಲ್ಲ. ಅವಧೂತರ ಹೆಚ್ಚಿನ ಪವಾಡಗಳೆಲ್ಲಾ ಮಕ್ಕಳಿಲ್ಲದವರಿಗೆ ಸಂತಾನ ಕೊಡುವುದು, ಕಾಯಿಲೆ ವಾಸಿಮಾಡುವುದು, ಸಾವಿನಿಂದ ಉಳಿಸುವುದು, ಮಳೆ ತರುವುದು, ಬರಗಾಲ ಓಡಿಸುವುದು, ಬರಡು ಆಕಳು ಮತ್ತು ಎಮ್ಮೆಗಳಲ್ಲಿ ಹಾಲು ತರಿಸುವುದು, ಸಾಂಕ್ರಾಮಿಕ ರೋಗಗಳನ್ನು ಓಡಿಸುವುದು, ದೆವ್ವ-ಪೀಡೆ ಪಿಶಾಚಿಗಳಿಂದ ರಕ್ಷಿಸುವುದು, ನಂಬಿದ ಶುದ್ಧಮನಸ್ಸಿನ ಭಕ್ತರ ಬಡತನ ನಿವಾರಿಸುವುದು, ತನ್ನನ್ನು ನಿಂಧಿಸಿದವರಿಗೆ ಕಡು ಕಷ್ಟ ಕೊಡುವುದು, ಇತ್ಯಾದಿ ಭಕ್ತರ ವೈಯಕ್ತಿಕ ಮತ್ತು ಸಾಮೂಹಿಕ ಸಮಸ್ಯೆಗಳಿಗೆ ಸಂಬಂಧಿಸಿದವುಗಳಾಗಿವೆ. "ಈ ಪವಾಡಗಳು ನಂಬಿಕೆಯನ್ನು ಒಳಗೊಂಡ ತಾರ್ಕಿಕತೆಯನ್ನು ಮೀರಿದ ಕ್ರಿಯೆಗಳಾಗಿ ಕಾಣಿಸಿಕೊಂಡಿವೆ. ಈ ಪವಾಡಗಳು ಸಮುದಾಯದ ನಂಬಿಕೆಗಳನ್ನು ಆಧರಿಸಿರುವುದರಿಂದ ಈ ತರದ ನಂಬಿಕೆಗಳಿಗೆ ಧಾರ್ಮಿಕ ಪರಿವೇಷವಿರುವುದರಿಂದ ಅಂತಿಮವಾಗಿ ಅವು ಜೀವಪರ ಧೋರಣೆಯನ್ನು ಹೊಂದುವುದರಿಂದ ಸಮುದಾಯಗಳು ತಾರ್ಕಿಕತೆಯನ್ನು ಬೆಳೆಸದೆ ನಂಬುತ್ತವೆ."[೬೨]

ಪವಾಡಗಳ ಹಾಗೆಯೇ ಅವಧೂತರುಗಳನ್ನು ದೈವತ್ವಕ್ಕೇರಿಸುವ ಇನ್ನೊಂದು ಧಾರ್ಮಿಕ ಪ್ರಕ್ರಿಯೆಯೆಂದರೆ ಭವಿಷ್ಯ ಹೇಳುವುದು. ಮುಂದೆ ಘಟಿಸಬಹುದಾದ ಘಟನೆಯನ್ನು, ವಸ್ತು, ವಿಷಯವನ್ನು ತಮ್ಮ ದಿವ್ಯ ದೃಷ್ಟಿಯ ಮುಖಾಂತರ ಹೇಳುವುದು. ಹಾಗೆಯೇ ಅವರ ಹುಚ್ಚು ಅಥವಾ ವಿಚಿತ್ರ ವರ್ತನೆಗಳನ್ನು ಮುಂದೆ ಘಟಿಸಬಹುದಾದ ಘಟನೆಗಳ ಸೂಚನೆಯೆಂದು ಭಾವಿಸುತ್ತಾರೆ. ಅವಧೂತನು ಕುಡುಗೋಲು ಹಿಡಿದು ಓಡಾಡಿದರೆ ರೋಗ-ರುಜಿನಗಳು ಬರುತ್ತವೆ ಎಂದೂ, ತನ್ನ ಹೆಗಲ ಮೇಲಿದ್ದ ಕಂಬಳಿಯನ್ನು ಕೊಡವಿದರೆ ಮಳೆ ಬರುತ್ತದೆಂದೂ ತಿಳಿಯುತ್ತಾರೆ. ಭಕ್ತರು ಭಾವಿಸಿದಂತೆ ನಡೆದಿರುವುದರಿಂದ ಯೋಗಿಗಳ ಬಗೆಗಿನ ಗೌರವ ಇನ್ನೂ ಅಧಿಕವಾಗಿರುತ್ತದೆ.

"ಸಂತರ ಪವಾಡಗಳ ಇನ್ನೊಂದು ಭಾಗವೆಂದರೆ ಅವರ ವಿಚಿತ್ರ ವರ್ತನೆಗಳದ್ದು. ತಮ್ಮ ಹುಚ್ಚಿನ ಮೂಲಕ ಅವರು ಮಾಡಿದ ಚಟುವಟಿಕೆಗಳು ಅವರ ಜನಪ್ರಿಯತೆಯನ್ನು ಹೆಚ್ಚಿಸಿವೆ. ವಾಸ್ತವವಾಗಿ ಹುಚ್ಚಿನ ಅಂಶವು ಅನುಭಾವಿ ಪಂಥದಲ್ಲಿ ಸಾಮಾನ್ಯ. ಯೋಗದ ಮೂಲಕ ಪರಾ (Trans) ಸ್ಥಿತಿಗೆ ಹೋಗುವುದು. ಇದಕ್ಕೆ ಉತ್ತೇಜನ ಪಡೆಯಲು ಭಂಗಿಯಂತಹ ಮಾದಕಗಳನ್ನು ತೆಗೆದುಕೊಳ್ಳುವುದು. ಇವು ಹುಚ್ಚಿಗೆ ಪೂರಕ ಸಂಗತಿಗಳು. ದೈವಿಕವಾದ ಈ ಹುಚ್ಚಿನ ಸ್ಥಿತಿಯಲ್ಲಿ ಅವರು ಧಾರ್ಮಿಕ ಸಾಮಾಜಿಕ ಶಿಷ್ಟಾಚಾರಗಳನ್ನು ಮೀರಿ ನಿರಂಕುಶಮತಿಗಳಾಗಿ ದಾರ್ಶನಿಕ ಸ್ಥಿತಿ ಪಡೆಯುತ್ತಿದ್ದರು."[೬೩]

ಪವಾಡಗಳಂತಹ ಸಿದ್ಧಿಯನ್ನು ಯೋಗಿಗಳು ಹಠಯೋಗದಂತಹ ಸಾಧನೆಯಿಂದ ಪಡೆದುಕೊಂಡು ತಮ್ಮ ಅಂತಃ ಪ್ರೇರಣಾನುಗುಣನಾಗಿ ಎಲ್ಲಿ ಅವಶ್ಯಕವೆನಿಸುವುದೋ ಅಲ್ಲೆಲ್ಲಾ ಅವುಗಳನ್ನು ಪ್ರಯೋಗಿಸಿರುತ್ತಾರೆ. ಬಾಹ್ಯಾಡಂಬರಕ್ಕೆ, ಜಂಭಕ್ಕೆ, ಜೋರು, ಅಹಂಕಾರಗಳಿಗೆ, ದೊಡ್ಡಸ್ತಿಕೆಗೆ ಈ ಶಕ್ತಿಯನ್ನು ಅವಧೂತರುಗಳು

ಪ್ರಯೋಗಿಸುತ್ತಿರಲಿಲ್ಲ. ಈ ಶಕ್ತಿ ಪರಮಾತ್ಮನಿಂದಲೇ ಪ್ರಾಪ್ತವಾದುದೆಂದು ಲೋಕಕಲ್ಯಾಣಕ್ಕೆ, ಜನಹಿತಕ್ಕೆ ತಮ್ಮ ಕರ್ಮ ಮತ್ತು ದಕ್ಷತೆಗಳಿಗೆ ಅನುಗುಣವಾಗಿ ಉಪಯೋಗಿಸಿ ಮಹಾತ್ಮರಾಗಿದ್ದಾರೆ. ಅಂದರೆ ಪವಾಡ ಮಾಡುವವರೆಲ್ಲಾ ಮಹಾತ್ಮರಲ್ಲ, ಲೋಕ ಕಲ್ಯಾಣಕ್ಕೆ ತಮ್ಮ ಶಕ್ತಿ ಸಾಮರ್ಥ್ಯವನ್ನು ಪವಾಡಗಳ ಮುಖಾಂತರ ವಿನಿಯೋಗಿಸುವವರು ಮಾತ್ರ ಮಹಾತ್ಮರು.

೨. ೬. ನೆಲೆನಿಂತ ಕ್ಷೇತ್ರ

ಯೋಗ ಸಾಧನೆಯಿಂದ ಅಣಿಮಾದಿ ಅಷ್ಟೈಶ್ವರ್ಯಗಳನ್ನು, ಪವಾಡಗಳಂತಹ ಸಿದ್ಧಿಗಳನ್ನು ಪಡೆದ ಅವಧೂತರು, ಲೋಕಕಲ್ಯಾಣವನ್ನು ಬಯಸಿ, ತನ್ನನ್ನು ನಂಬಿದ ಶುದ್ಧ ಮನಸ್ಸಿನ ಭಕ್ತರ ವೈಯಕ್ತಿಕ ಮತ್ತು ಸಾಮೂಹಿಕ ಸಮಸ್ಯೆಗಳನ್ನು ಪರಿಹರಿಸಿ, ಇಷ್ಟಾರ್ಥವನ್ನು ನೀಡುವ ದೇವರಾಗಿದ್ದಾರೆ. ಇಂತಹ ಮಹಾತ್ಮರನ್ನು ನೋಡುವುದೇ ಭಾಗ್ಯ ಹಾಗೂ ಆತನು ನಲೆನಿಂತ ಕ್ಷೇತ್ರವೂ ಅಷ್ಟೇ ಪವಿತ್ರವೆಂಬ ಭಾವನೆ ಭಕ್ತರ ಮನದಲ್ಲಿ ಮೂಡಿರುತ್ತದೆ.

ಆತನಿದ್ದಾ ದೇಶ ಮಂಗಳ ।
ವಾತನಿದ್ದಾ ಗ್ರಾಮ ಮಂಗಳ ।
ವಾತ ತಿರುಗಿದ ದೇಶ ದೇಶಗಳೆಲ್ಲಾ ಮಂಗಳವು ॥
ಆತ ಕುಳಿತ ಸ್ಮಶಾನ ಮಂಗಳ ।
ವಾತ ಹೊಕ್ಕಾ ಮನೆಯು ಮಂಗಳ ।
ವಾತ ನಿಜ ಪರಮಾತ್ಮ ಮಂಗಳಮೂರ್ತಿ ತಾನೆಂದ ॥[೬೪]

ಅವಧೂತನನ್ನು ನೋಡಿದವರಿಗೆ, ಕೊಂಡಾಡಿದವರಿಗೆ, ಅವರ ಸೇವೆ ಮಾಡಿದವರಿಗೆ ಮಂಗಳವಾಗುತ್ತದೆ. ಆತನ ಸ್ಮೃತಿ ಮಾಡಲು ಸ್ಮರಣೆ ಮಾತ್ರದಿಂದ ಪುಣ್ಯಾತ್ಮರು ಮುಕ್ತಿಹೊಂದಬಲ್ಲರು. ಅರಿಯದೆ ಆತನನ್ನು ನೆನೆದವರಿಗೆ ಉತ್ತಮ ಜನ್ಮ ಪ್ರಾಪ್ತವಾಗಿ ಮುಂದಿನ ಜನ್ಮದಲ್ಲಿ ಬ್ರಹ್ಮನಿಷ್ಠರನ್ನು ಸೇವಿಸಿ ಮುಕ್ತಿ ಪಡೆಯುವರು. ಅವಧೂತರ ಸಂಗ, ಸ್ನೇಹದಿಂದ ಜನ್ಮ ಸಾರ್ಥಕ್ಯವಾಗುವುದೆಂಬ ನಂಬಿಕೆ ಭಕ್ತ ಜನತೆಯಲ್ಲಿ ಮೂಡಿರುತ್ತದೆ.

ಇಂತಹ ಮಹಾತ್ಮರು ತಮ್ಮ ಊರಲ್ಲಿಯೇ ಇರಲಿಯೆಂದು ಪರ ಊರಿಗೆ ಕಳಿಸಬಾರದೆಂದು ಭಕ್ತರು ನಿರ್ಧರಿಸಿ, ಅವಧೂತನಿಗಾಗಿ ಮಠ ಕಟ್ಟಿಸಿ ಅಲ್ಲಿಯೇ ಸ್ಥಿರವಾಗಿ ನೆಲೆಸುವುದಕ್ಕೆ ವ್ಯವಸ್ಥೆ ಮಾಡುತ್ತಾರೆ. ಮಠವನ್ನು ಕಟ್ಟಿಸಿದ ಮೇಲೆ ಅವಧೂತನಿಗೆ ನಿತ್ಯವೂ ಭಕ್ತರು ಸೇವೆ ಮಾಡುತ್ತಿರುತ್ತಾರೆ. ಎಲ್ಲೆಲ್ಲಿಂದಲೋ ಬಂದ ಭಕ್ತರ ದರ್ಶನಕ್ಕೆ ಅವಧೂತನನ್ನು ಒಂದು ಎತ್ತರದ ಪೀಠದ ಮೇಲೆ ಕೂರಿಸುತ್ತಾರೆ. ಬಂದ ಭಕ್ತರು ಅವಧೂತನ ದರ್ಶನ ಪಡೆದು ಪಾದಗಳಿಗೆ ನಮಸ್ಕರಿಸಿ, ಆ ಪಾದಗಳನ್ನು ತಮ್ಮ ತಲೆಯ ಮೇಲಿರಿಸಿಕೊಂಡರೆ ತಮ್ಮ ಪಾಪಗಳೆಲ್ಲಾ ಪರಿಹಾರವಾಗುವವೆಂದು ನಂಬಿದ್ದಾರೆ. ಇದ್ಯಾವುದನ್ನು ತಿಳಿಯದ ಅವಧೂತನು ತನ್ನ ಧ್ಯಾನದಲ್ಲಿ ಮಗ್ನನಾಗಿರುತ್ತಾನೆ. ಯಾರ ಮೇಲೂ ತನ್ನ ನೋಟ ಬೀರದೆ ಯಾವುದೋ ಒಂದು ಅಪೂರ್ವ ವಸ್ತುವನ್ನು ನೋಡುತ್ತಿರುವಂತೆ, ಬಯಲನ್ನು ನೋಡುತ್ತಿರುತ್ತಾನೆ. ಬಂದ ಭಕ್ತರು ಅವಧೂತನು ತಮ್ಮ

ಕಡೆ ನೋಡಲೆಂದು ಆತನ ಎಡ-ಬಲಗಳಲ್ಲಿ ನಿಂತಿರುತ್ತಾರೆ. ಆದರೆ ಅವಧೂತನು ಯಾವಾಗಲಾದರೊಮ್ಮೆ ಕೈ ಆಡಿಸುವುದು, ಇಲ್ಲದಿದ್ದರೆ ಇಲ್ಲ. ಯಾವಾಗಲಾದರೊಮ್ಮೆ ಒಂದೆರಡು ಮಾತು ಇಲ್ಲದಿದ್ದರೆ ಸದಾ ಮೌನ. ಹೀಗೆ ಮಠದಲ್ಲಿ ಕುಳಿತ್ತಿದ್ದವನು ಇಲ್ಲವೆ ಮಲಗಿದ್ದವನು ಇದ್ದಕ್ಕಿದ್ದ ಹಾಗೆ ಎದ್ದು ಬೀದಿಗೆ ನಡೆಯುತ್ತಾನೆ. ಇಲ್ಲವೆ ಸ್ಮಶಾನಕ್ಕೆ ಹೋಗಿರುತ್ತಾನೆ. ಆಗ ಭಕ್ತರು ಎಲ್ಲಾ ಕಡೆ ಹುಡುಕಿ ಮತ್ತೆ ಮಠಕ್ಕೆ ಇಲ್ಲವೆ ತಮ್ಮ ಮನೆಗಳಿಗೆ ಕರೆತರುತ್ತಾರೆ. ಮನೆಗೆ ಬಂದ ಅವಧೂತನಿಗೆ ಭಕ್ತಿಯಿಂದ ಪೂಜಿಸಿ ಸೇವೆ ಮಾಡುತ್ತಾರೆ. ಅದರ ಫಲವಾಗಿ ಪೂಜಿಸಿದವರ ಮನೆಯು ಪವಿತ್ರವಾಗಿ, ಸುಖ ಸಮೃದ್ಧಿ ನೆಲೆಸಿರುತ್ತದೆ. ಇದನ್ನು ಕಂಡ ಅನೇಕ ಭಕ್ತರು ಬಲವಂತವಾಗಿ ಅವಧೂತನನ್ನು ತಮ್ಮ ಮನೆಗಳಿಗೆ ಕರೆದುಕೊಂಡು ಹೋಗಿ ಸ್ನಾನ ಮಾಡಿಸಿರುತ್ತಾರೆ. ಮಡಿ ವಸ್ತ್ರಗಳನ್ನು ಉಡಿಸಿ, ಪೀಠದಲ್ಲಿ ಕೂರಿಸಿ, ವಿಭೂತಿ, ಗಂಧ ಹಚ್ಚಿ ಫಲತಾಂಬೂಲ ನೀಡಿರುತ್ತಾರೆ. ಇದ್ಯಾವುದೂ ಬೇಕಾಗಿಲ್ಲದ ಅವಧೂತನಿಗೆ ಬಲವಂತದಿಂದ ಸೇವೆ ಮಾಡುತ್ತಾರೆ. ಈ ರೀತಿ ಬಲವಂತದಿಂದ ಸೇವೆ ಮಾಡಿದ ಮನೆಗಳು ಯಥಾಸ್ಥಿತಿಯಲ್ಲಿಯೇ ಇದ್ದೂ, ಆತನೇ ತಾನಾಗಿ ಹೋದ ಮನೆಗಳು ಉತ್ತಮ ಸ್ಥಿತಿ ಪಡೆದಿವೆ ಎಂಬ ನಂಬಿಕೆ ಭಕ್ತ ಜನತೆಯಲ್ಲಿದೆ.

ಸುತ್ತ-ಮುತ್ತಲಿನ ಗ್ರಾಮಗಳಲ್ಲಿ ಅವಧೂತನ ಮಹಿಮೆ ಪ್ರಚಾರವಾಗಿ, ಆತನ ಮುಖದರ್ಶನದಿಂದ ತಮ್ಮೆಲ್ಲಾ ಕಷ್ಟಗಳು, ತೊಂದರೆಗಳು, ಅಪಾಯಗಳು ಪಾರಾಗಿ, ತಮ್ಮ ಬಯಕೆಗಳನ್ನು ಅವಧೂತನು ಈಡೇರಿಸುತ್ತಾರೆಂಬ ನಂಬಿಕೆಯಿಂದ ಜನ ತಂಡೋಪತಂಡವಾಗಿ ಮಠಗಳಿಗೆ ಬರುತ್ತಾರೆ. ಮುಂದೆ ತಮ್ಮ ಇಷ್ಟಾರ್ಥಗಳು ಕೈಗೂಡಿದಾಗ ಭಕ್ತರು ಕಾಣಿಕೆ ರೂಪದಲ್ಲಿ ಧನ-ಧಾನ್ಯಗಳನ್ನು ಮಠಕ್ಕೆ ತಂದುಕೊಡುತ್ತಾರೆ.

ಅವಧೂತನ ಮುಖದರ್ಶನ ಮಾಡಿದರೆ ಸಾಕ್ಷಾತ್ ಪರಮಾತ್ಮನ ದರ್ಶನ ಮಾಡಿದಂತೆಯೇ ಎಂದು ಭಾವಿಸಿ, ಬರುವ ಭಕ್ತರ ಸಂಖ್ಯೆಯನ್ನು ಕಂಡ ಮಠದವರು ಈ ಮಹಾತ್ಮನು ಇರುವವರೆಗೆ ಮಾತ್ರ ಭಕ್ತರು ಬರುವರು. ಆಮೇಲೆ ಈ ಕಡೆ ಸುಳಿಯುವುದೇ ಇಲ್ಲವೆಂದರಿತು, ಬರುವ ಭಕ್ತರಿಗೆ ಮಠದಲ್ಲಿ ಉಳಿದುಕೊಳ್ಳಲು ಕೊಠಡಿ, ಸ್ನಾನ, ಊಟಕ್ಕೆ ವ್ಯವಸ್ಥೆ ಮಾಡಿರುತ್ತಾರೆ. ಮುಂದೆ ಅವಧೂತನು ಮಠದಲ್ಲಿಯೇ ಐಕ್ಯವಾಗಲು ವ್ಯವಸ್ಥೆಮಾಡಿ, ಅದರಂತೆ ಐಕ್ಯನಾದ ಮೇಲೆ ಸಮಾಧಿಮಾಡಿ ಗದ್ದುಗೆ ನಿರ್ಮಾಣ ಮಾಡಿರುತ್ತಾರೆ. ಕಾಲಾನಂತರ ಮಠಕ್ಕೆ ಬರುವ ಭಕ್ತರು ನೀಡುವ ಸಹಕಾರದಿಂದ ಮಂಟಪ ನಿರ್ಮಾಣಮಾಡಿ, ಅವಧೂತನ ಪ್ರತಿಮೆ ಮಾಡಿ ಪ್ರತಿಷ್ಠಾಪಿಸಿರುತ್ತಾರೆ. ಅವಧೂತನು ಐಕ್ಯನಾದ ದಿನದಂದು, ಪುಣ್ಯತಿಥಿಯ ಅಂಗವಾಗಿ ಪ್ರತಿ ವರ್ಷವೂ ಜಾತ್ರೆ-ಮಹೋತ್ಸವಗಳನ್ನು ನಡೆಸುತ್ತಾ ಬರುತ್ತಾರೆ.

೨. ೭. ಅವಧೂತ ಮತ್ತು ಇತರೆ ಅನುಭಾವಿಗಳು

ಧ್ಯಾನದಿಂದ ಮತ್ತು ಆತ್ಮಾರ್ಪಣಾಭಾವದಿಂದ ಪರಮಾತ್ಮನಲ್ಲಿ ಸಾಯುಜ್ಯ ಪಡೆಯುವಂತಹ ಮುಮುಕ್ಷುವನ್ನು 'ಅನುಭಾವಿ' ಎಂದು ಕರೆಯುತ್ತೇವೆ. ಇವರು ನಡೆಯುವ ಮಾರ್ಗವೇ ಅನುಭಾವ ಮಾರ್ಗ. ಈ ಅನುಭಾವಮಾರ್ಗದ ಶೋಧನೆಯಲ್ಲಿ ಎರಡು ಮಾರ್ಗಗಳಿವೆ. ಒಂದು ವಿರಕ್ತಿ ಮತ್ತು ನಿರಹಂಕಾರ. ಎರಡನೆಯದು ತಪಸ್ಸು, ಇಂದ್ರಿಯ ನಿಗ್ರಹ, ಯಮ ನಿಯಮಗಳ ಪಾಲನೆ. ಇಂತಹ ಮಾರ್ಗದಲ್ಲಿ ನಡೆದವರು ಮುಖ್ಯವಾಗಿ -

೧. ಉತ್ತರ ಭಾರತದ ಕಬೀರ ನಾನಕರ ಮಾರ್ಗ

೨. ಸೂಫಿ ಪಂಥದ ಅನುಭಾವಿಗಳ ಮಾರ್ಗ

೩. ದಕ್ಷಿಣ ಭಾರತದ ವಚನಕಾರರ ಮಾರ್ಗ

"ಅನುಭಾವವು ಸಾಧಕರ ಸ್ಪರ್ಶಮಣಿ, ಸಿದ್ಧಿ ಶಿಖರದಲ್ಲಿ ಅರಿವಿಗೆ ಆಗುವ ಅದ್ಭುತ ಆಘಾತ. ಸಾಂಸ್ಥಿಕತೆಯ ಅರಮನೆ ಮಠಗಳಲ್ಲಿ ಅನುಭಾವ ಅರಳುವುದಿಲ್ಲ. ಹೀಗಾಗಿ ಬಹಳಷ್ಟು ಅನುಭಾವಿಗಳು ಸೂಫಿಗಳು, ಸಂತರು, ಶರಣರು, ದಾಸರು, ಶಿವಯೋಗಿಗಳು ಧಾರ್ಮಿಕ ಬಂಡಾಯಗಾರರೆ ಆಗಿದ್ದಾರೆ."[೬೫] ಬಸವಣ್ಣನವರು ಅನುಭಾವವನ್ನು 'ಅನುಭಾವವೆಂಬುದು ನೆಲದ ಮರೆಯ ನಿಧಾನದಂತೆ, ಅಂತರಂಗದ ರತ್ನ, ಹಾಗೂ ಶಿಶು ಕಂಡ ಕನಸು' ಎಂದಿದ್ದಾರೆ. "ಇಂಥಹ ಅನನ್ಯ ಆಧ್ಯಾತ್ಮ ಸಾಧಕರು ಯಾವುದೇ ಒಂದು ಸಾಂಸ್ಥಿಕ ಧರ್ಮದ ಚೌಕಟ್ಟಿನಲ್ಲಿ ಇರುವಂಥವರಲ್ಲ. ಇವರುಗಳನ್ನು ಶೈವ ಅನುಭಾವಿ, ವೈಷ್ಣವ ಅನುಭಾವಿ, ವೀರಶೈವ ಅನುಭಾವಿಗಳು ಎಂದು ವಿಭಾಗಿಸಲು ಬರುವುದಿಲ್ಲ ಅನುಭಾವಿಗಳು ಎಂದರೆ ಎಲ್ಲಾ ಧರ್ಮದ ಚೌಕಟ್ಟುಗಳನ್ನು ಮೀರಿ ನಿಂತಿದ್ದಾರೆ ಎಂದೇ ಅರ್ಥ."[೬೬]

ಇವರು ಧರ್ಮ, ಜಾತಿ, ಮತ, ಪಂಥ, ಮೇಲು-ಕೀಳು ಎಂಬ ಭೇದವಿಲ್ಲದೆ, ನಿರ್ಮಲ ಪ್ರೇಮದಿಂದ, ಉದಾರ ಮನೋಭಾವದ ಸಹಿಷ್ಣುತಾವಾದಿಗಳಾಗಿರುತ್ತಾರೆ. ಏಕಾಂತವಾಗಿದ್ದು, ಇಷ್ಟದೈವವ ಧ್ಯಾನಿಸುತ್ತಿರುತ್ತಾರೆ. ಇವರುಗಳ "ಅನುಭಾವಕ್ಕೆ ಯಾವುದೇ ಒಂದು ಧರ್ಮದ ಹಂಗಿಲ್ಲ, ಅದು ತಾರ್ಕಿಕವಲ್ಲ, ಒಮ್ಮೆ ಜ್ಞಾನ, ಒಮ್ಮೆ ಭಕ್ತಿ, ಒಮ್ಮೆ ವಿರಕ್ತಿ, ಒಮ್ಮೆ ಹಠ, ಒಮ್ಮೆ ದೈನ್ಯ, ಒಮ್ಮೆ ಮೌನ, ಒಮ್ಮೆ ಮಾತು, ಒಮ್ಮೆ ಮಹಾಶಾಂತಿ, ಒಮ್ಮೆ ವೀರಕ್ರೋಧದಲ್ಲಿ ಮೆರೆಯುತ್ತ ಯಾವ ಹಿಡಿತಕ್ಕೂ, ಹೊಡೆತಕ್ಕೂ ಸಿಕ್ಕದೆ ಸಾಗುವ ನಡೆ-ನುಡಿ. ಅನುಭಾವಿಗಳು ದೈವಿಕ ಅರಿವಿನ ಮಹಾಸಾಗರದಲ್ಲಿ ಹುಚ್ಚೆದ್ದು ಕುಣಿಯುವ ಮುಗ್ಧ ಮಕ್ಕಳಾಗಿರುತ್ತಾರೆ."[೬೭]

ಅನುಭಾವಿಗಳ ಪರಿಕಲ್ಪನೆಯ ಪರಮಾತ್ಮ ಎಲ್ಲಾ ಧರ್ಮದ, ಎಲ್ಲಾ ಜನರ, ಎಲ್ಲಾ ದೇವರುಗಳ ಪ್ರತಿರೂಪ. ಬಾಲಲೀಲಾ ಮಹಂತ ಶಿವಯೋಗಿಗಳು ಹೇಳಿರುವಂತೆ

ಇರದೊಂದು ಕನ್ನಡಿಯು ನೂರಾರು ಜನಪಿಡಿಯೆ
ಸರಳಾಗಿ ಅವರವರ ರೂಪು ಕಾಣುವಂತೆ
ಹರಿಯ ಭಕ್ತರಿಗೆ ಹರಿ, ಹರನ ಭಕ್ತರಿಗೆ ಹರ
ನರರೇನು ಭಾವಿಸುವರದರಂತೆ ತೋರುವನು

ಅನುಭಾವಿಗಳು ಜೀವಿಸಿದ್ದ ಕಾಲ, ಭಾಷೆ, ಪ್ರದೇಶ, ಪರಿಸರಗಳು ಬೇರೆ ಬೇರೆಯಾಗಿದ್ದರೂ, ಅವರುಗಳ ಸಾಧನೆ-ಸಿದ್ಧಿಯಲ್ಲಿ ಅಲ್ಪ-ಸ್ವಲ್ಪ ವ್ಯತ್ಯಾಸ ಕಂಡುಬಂದರೂ, ಅವರುಗಳ ಗುರಿ ಮತ್ತು ಅಂತರಂಗದ ನಿಲುವು, ಲಕ್ಷ್ಯಗಳು ಒಂದೇ ಆಗಿದ್ದವು. ಈ ದೃಷ್ಠಿಯಲ್ಲಿ ಅವಧೂತರಿಗೂ ಇತರೆ ಅನುಭಾವಿಗಳಾದ ಶರಣರು, ಸಂತರು , ಸೂಫಿಗಳು, ಆರೂಢರಿಗೂ ಇರುವ ಸಾಮ್ಯ-ವ್ಯತ್ಯಾಸಗಳನ್ನು ಸಂಕ್ಷಿಪ್ತವಾಗಿ ಗುರ್ತಿಸುವ ಪ್ರಯತ್ನ ಇಲ್ಲಿದೆ.

[illegible]

ಶರಣ : "ಈ ಪದವು ಲಿಂಗವಂತ, ಶಿವಭಕ್ತ ಎಂಬ ಸಾಮಾನ್ಯ ಅರ್ಥದಲ್ಲೂ, ಷಟ್‌ಸ್ಥಲದ ಐದನೆಯ ಹಂತದಲ್ಲಿ ಜ್ಞಾನಿಯಾದ ಶಿವಭಕ್ತನ ಸ್ಥಿತಿ ಎಂಬ ವಿಶೇಷಾರ್ಥದಲ್ಲೂ ಬಳಕೆಗೊಂಡಿದೆ."[೬೮] ವೀರಶೈವ ಸಾಧುಗಳನ್ನು ಶರಣ ಎಂದು ಕರೆಯುತ್ತಾರೆ. ಶರಣ ಶಿವನ ಪ್ರತಿರೂಪ. ವಿಭೂತಿ ಇವನ ಲಾಂಛನ. ಇಷ್ಟ ಲಿಂಗ ಇವನ ಆಭರಣ. ಚನ್ನಬಸವಣ್ಣನವರು ಹೇಳುವಂತೆ "ಕೋಟಿಗೊಬ್ಬ ಶರಣ" ಅಂದರೆ ಶರಣನಾಗುವುದು ಒಂದು ಸಾಧನೆ ಎಂಬರ್ಥದಲ್ಲಿ ಹೇಳಿದ್ದಾರೆ. ಪರರ ದುಃಖದಲ್ಲಿ ಭಾಗಿಯಾಗುವ ಆಧ್ಯಾತ್ಮಚಿಂತಕ. ಸಾಧನೆಯಲ್ಲಿ ನಿರತ ಸಾಧಕನಾಗಿದ್ದು ಶ್ರೇಷ್ಠ ಅನುಭಾವಿಗಳಾಗಿರುತ್ತಾರೆ. ನಿಷ್ಠೆಯುಳ್ಳ ಬದುಕನ್ನು ತನ್ನ ಜೀವನದ ವ್ರತವನ್ನಾಗಿ ಸ್ವೀಕರಿಸಿರುತ್ತಾರೆ. ವೀರಶೈವ ಸಿದ್ಧಾಂತದ ತತ್ತ್ವಗಳನ್ನು ತಮ್ಮ ನಡೆ-ನುಡಿಯಲ್ಲಿ ಸಾಧಿಸಿ ತೋರಿಸುತ್ತಾರೆ.

ಅಂಗಲಿಂಗೀ ಜ್ಞಾನರೂಪಃ ಶಿವಃ ಪತಿಃ
ಯತ್ಸೌಖ್ಯಂ ತತ್ಸಮಾವೇಶೇ ತದ್ವಾನ್ ಶರಣನಾಮವಾನ್ ‖

ಎಂದು ಸಿದ್ಧಾಂತ ಶಿಖಾಮಣಿಯಲ್ಲಿ ಶರಣರು ಯಾರು ಎನ್ನುವ ಪ್ರಶ್ನೆಗೆ ಉತ್ತರವಿದೆ. ಶಿವಜ್ಞಾನವನ್ನು ಪಡೆದ ಸಾಧಕನು ತಾನು ಸತಿ-ಪರಮಾತ್ಮ ಪತಿ ಎಂದು ತಿಳಿದು ಇಷ್ಟಲಿಂಗದ ಮೂಲಕ ಉಪಾಸನೆ ಮಾಡುವವನು ಶರಣ.

ಶರಣರ ಅನುಭಾವ ಪಥ ಭಕ್ತಿಸ್ಥಲದಿಂದ ಐಕ್ಯಸ್ಥಲದವರೆಗೆ ಆರು ಮೆಟ್ಟಿಲುಗಳಲ್ಲಿ ಪೂರ್ಣಗೊಂಡು ಮಾನವತೆಯು ಏರಬಹುದಾದ ಕೊನೆಯ ಎತ್ತರವನ್ನು ಅದು ತೋರಿಸುತ್ತದೆ. ಭೌತಿಕ ದೃಷ್ಟಿಗೆ ಅದು ಅಗೋಚರವಾದರೂ ಆಂತರಿಕ, ಆಧ್ಯಾತ್ಮಿಕ ದೃಷ್ಟಿಗೆ ಪೂರ್ಣರೂಪದಲ್ಲಿ ಗೋಚರವಾಗುತ್ತದೆ. ಪರಿಪೂರ್ಣ ದೃಷ್ಟಿಯಿಂದ ಜೀವನವನ್ನು ನೋಡಿದ ಸಾಧನೆಯ ಸಾಧಕರ ಫಲ. "ಸಾಧಕರ ಮನಸ್ಸನ್ನು ಸಾಧನೆಯ ಬಲದಿಂದ ಸುಪ್ರಮಾನಸ ನೆಲೆಗೆ ನಿಲ್ಲಿಸುವ ಬರೀ ಪೂರ್ಣಯೋಗವಲ್ಲ, ಪರಿಪೂರ್ಣಯೋಗವಾಗಿದೆ."[೬೯]

ಶರಣರು ಮತ್ತು ಅವಧೂತರ ಧರ್ಮ ಮಾನವಧರ್ಮವೇ ಆಗಿದ್ದು, ಈ ಇಬ್ಬರೂ ಜಾತಿ, ಕುಲವನ್ನು ನಿರಾಕರಿಸಿದವರು. ಆದರೆ ಶರಣರು ಜಗತ್ತನ್ನು ಸ್ವೀಕಾರಾತ್ಮಕವಾಗಿ ಕಂಡರೆ, ಅವಧೂತರು ಜಗನ್ಮಿಥ್ಯ ಎಂದು ಭಾವಿಸಿದ್ದವರು.

ಶರಣರಿಗೆ ಷಟ್‌ಸ್ಥಲ ಮತ್ತು ಪಂಚಾಚಾರಗಳು ಮುಖ್ಯ. ಮೋಕ್ಷವೆಂದರೆ ಷಟ್‌ಸ್ಥಲದ ಐಕ್ಯಸ್ಥಲವೆಂದು ತಿಳಿದವರು. "ಶರಣರ ದೃಷ್ಟಿಯಲ್ಲಿ ಐಕ್ಯವೆಂದರೆ ಬಯಲಾಗುವುದು. ಶಿವಾಂಗನಾದ ಸಾಧಕನು ಷಟ್‌ಸ್ಥಲವನ್ನು ಅನುಸರಿಸಿ ತನ್ನ ಸಾಧನೆಯಲ್ಲಿ ಸಿದ್ಧಿ ಪಡೆದು ಕೊನೆಗೆ ಐಕ್ಯನಾಗುತ್ತಾನೆ. ಪುನಃ ಶಿವನೇ ತಾನಾಗುತ್ತಾನೆ. ಪ್ರವೃತ್ತಿಮಾರ್ಗದಿಂದ ಜೀವನಾಗಿ ಜನಿಸಿದವನು ನಿವೃತ್ತಿಮಾರ್ಗದಿಂದ ದೇವನಾಗುವ ಪಥವೇ ಷಟ್‌ಸ್ಥಲಮಾರ್ಗ, ಇದೇ ಐಕ್ಯ ಹಾಗೂ ಜೀವನ್ಮುಕ್ತಿಸ್ಥಿತಿ. ತನ್ನದೆಲ್ಲವ ಕಳೆದುಕೊಂಡು ಬಟ್ಟಬಯಲಾಗುವ ನಿರ್ವಾಣಸ್ಥಾನ."[೭೦] ಅವಧೂತರಿಗೆ ಜೀವನ್ಮುಕ್ತಿಸ್ಥಿತಿ ಪಡೆಯಲು ಯಾವ ಅವಸ್ಥೆಗಳು ಇಲ್ಲ. ಮುಖ್ಯವಾಗಿ ಬದುಕಿರುವಾಗಲೆ ಮುಕ್ತಿಯನ್ನು ಪಡೆದು ಜೀವನ್ಮುಕ್ತರಾಗಿರುತ್ತಾರೆ.

ಅವಧೂತರು ಮತ್ತು ಶರಣರು ದೈವಸಾಕ್ಷಾತ್ಕಾರ ಅಥವಾ ಇಷ್ಟದೈವದೊಡನೆ ಒಂದಾಗುವ ಅನುಭವಕ್ಕಾಗಿ ಹಂಬಲಿಸುತ್ತಿರುತ್ತಾರೆ. ಆದರೆ ಇಬ್ಬರ ಮಾರ್ಗ ಮಾತ್ರ ಭಿನ್ನ. ಶರಣರ ಮಾರ್ಗ ಜ್ಞಾನಮಾರ್ಗ. ಜ್ಞಾನ ಮತ್ತು ಕ್ರಿಯೆಗೆ ಹೆಚ್ಚಿನ ಮಹತ್ವ ನೀಡುತ್ತಾರೆ. ತಾತ್ವಿಕವೂ, ತಾರ್ಕಿಕವೂ, ಆದ ಷಟ್‌ಸ್ಥಲಮಾರ್ಗದಲ್ಲಿ ನಡೆಯುತ್ತಾರೆ. ಅವಧೂತರುಗಳಿಗೆ ಯಾವುದೇ ತಾರ್ಕಿಕವಿಲ್ಲ. ಹಾಗೆಯೇ ಯಾವುದೇ ಶಿಸ್ತಿನ ಕ್ರಮಕ್ಕೆ ಕಟ್ಟು ಬೀಳುವುದಿಲ್ಲ. ಒಮ್ಮೆ ಜ್ಞಾನಿಗಳಾಗಿ, ಒಮ್ಮೆ ಭಕ್ತರಾಗಿ, ವಿರಕ್ತರಾಗಿ, ಹಠಯೋಗಿಗಳಾಗಿ. ಮೌನಿಗಳಾಗಿ, ಶಾಂತರಾಗಿ, ಅಂತರ್ಮುಖಿಯಾಗಿರುತ್ತಾರೆ. ಮುಗ್ಧಮಕ್ಕಳಂತೆ ವರ್ತಿಸುತ್ತಾರೆ.

ಶರಣರಲ್ಲಿ ಶುದ್ಧತೆ ಮುಖ್ಯ. ಅವಧೂತರಲ್ಲಿ ಮಲಿನತೆಯಲ್ಲಿಯೇ ಮಗ್ನವಾಗಿರುತ್ತಾರೆ.

ಅವಧೂತರು ಮತ್ತು ಶರಣರ ಮಾರ್ಗದಲ್ಲಿ ಗುರುವಿಗೆ ಅಗ್ರಸ್ಥಾನ, ಪರಮಾತ್ಮನು ಗುರುವಿನ ರೂಪದಲ್ಲಿ ಬಂದಿರುವನೆಂದು ನಂಬಿರುತ್ತಾರೆ. ಗುರುವೇ ಸರ್ವಸ್ವ. ಶರಣರು ಕಾಯಕಕ್ಕೆ ಹೆಚ್ಚಿನ ಮಹತ್ವ ನೀಡಿ, ಸಾಹಿತ್ಯರಚನೆಯ ಉದ್ದೇಶವಿರದಿದ್ದರೂ, ವಚನಗಳನ್ನು ರಚಿಸಿರುತ್ತಾರೆ. ಆದರೆ ಅವಧೂತರು ಹೆಚ್ಚಾಗಿ ಮೌನಿಗಳು ಮತ್ತು ಕವಿಗಳಲ್ಲದವರು. ಅವರಲ್ಲಿ ಕೆಲವರು ಮಾತ್ರ ಸಾಹಿತ್ಯ ರಚಿಸಿದ್ದಾರೆ.

ಶರಣರು ಸಂಗದಲ್ಲಿ ಬೆರೆತರೆ, ಅವಧೂತರು ಏಕಾಂಗಿಗಳು, ಶರಣರ ಧರ್ಮ ವೀರಶೈವಧರ್ಮವಾದರೆ, ಅವಧೂತರದು ಅದೇ ಒಂದು ಮಾರ್ಗವಾಗಿ ಬೆಳೆಯಿತು.

ಸೂಫಿಗಳು : 'ಸೂಫಿ' ಎಂದರೆ ಪರಮಾತ್ಮನನ್ನು ಪ್ರಿಯತಮೆಯ ರೂಪದಲ್ಲಿ ಉಪಾಸನೆ ಮಾಡುವವ. ಹೆಚ್ಚಾಗಿ ಉಣ್ಣೆಯ ಬಟ್ಟೆಯನ್ನು ಇಲ್ಲವೆ ಕುಲಾವಿಯನ್ನು ಧರಿಸುತ್ತಿದ್ದ ಭಗವದ್ಭಕ್ತರನ್ನು ಸಂತರು-ಫಕೀರರು ಎಂದು ಕರೆಯಲಾಗುತ್ತಿದೆ.

"ಸೂಫಿ ಎಂದರೆ ಅನುಭಾವಿ, ಸಿದ್ಧ."[೭೧] ಹೆಣ್ಣಾಗಲಿ, ಗಂಡಾಗಲಿ, ಸಚ್ಚಾರಿತ್ಯ-ತ್ಯಾಗ ಮನೋಭಾವ, ಆಡಂಬರರಹಿತ, ಇಂದ್ರಿಯ ಸುಖರಹಿತ, ಭೌತಿಕ ಸಂಪತ್ತನ್ನು ಬಿಟ್ಟು ಮಹಾತ್ಮ ಅಥವಾ ಮಹಾತ್ಮಳು ಸೂಫಿ ಧರ್ಮದಲ್ಲಿ ಆದರ್ಶ ವ್ಯಕ್ತಿಗಳೆನಿಸುತ್ತಾರೆ. "ಹಜರತ್ ಮಹಮ್ಮದರ ಆತ್ಮಜ್ಞಾನವನ್ನು ಆಧಾರ ವಾಗಿಟ್ಟು ಕೊಂಡು ಸೂಫಿ ತತ್ತ್ವ ಅಭಿವ್ಯಕ್ತವಾಗಿದೆ. ಮಹಮ್ಮದರು ಸ್ವಾತ್ಮಾನುಭವದಿಂದ ಕಂಡ ಜ್ಞಾನವನ್ನು ಸೂಫಿಗಳು ತಮ್ಮ ಅನುಭವದಲ್ಲಿ ಅಳವಡಿಸಿಕೊಂಡರು."[೭೨]

೧. ಸೂಫಿ ಸಂತರು ಸನಾತನ ಇಸ್ಲಾಂ ಧರ್ಮದ ಅನುಯಾಯಿಗಳೇ ಆದರೂ ಜೀವ-ಜಗತ್ತು ಮತ್ತು ಈಶ್ವರರ ರಹಸ್ಯಗಳಿಗೆ ಸಂಬಂಧಿಸಿದಂತೆ ಸನಾತನ ಇಸ್ಲಾಮಿಯರಿಗೂ, ಸೂಫಿ ಸಂತರಿಗೂ ಮತ ಭೇದವಿದೆ.

೨. ಪ್ರೇಮವೇ ಸೂಫಿಗಳ ಮೂಲ ಸಿದ್ಧಾಂತ.

೩. ಏಕೇಶ್ವರವಾದಿಗಳು.

೪. ನಿರಾಕಾರ ದೇವರ ಆರಾಧನೆ.

೫. ಪ್ರಪಂಚವನ್ನು ಮಾಯ ಎಂದು ಭಾವಿಸದೆ ಸತ್ಯವಸ್ತುಗಳ ವ್ಯಕ್ತಿರೂಪ ಎಂದು ಭಾವಿಸಿದರು.

೬. ಭಕ್ತಿಮಾರ್ಗ ಅನುಸರಿಸಿದರು.

೭. ಸರ್ವರಲ್ಲಿ ಸಮಾನತೆ, ದಯಾಪರತೆವುಳ್ಳವರು.

೮. ಸದಾಚಾರ ಮತ್ತು ಸರಳತೆಯುಳ್ಳವರು.

೯. ಆಧ್ಯಾತ್ಮಿಕ ಸಾಧನೆಯಲ್ಲಿ ಸೂಫಿತತ್ತ್ವ ಅತ್ಯಂತ ಸರಳವಾದದು.

ಒಬ್ಬ ಸೂಫಿ ದೈವಪ್ರೇಮದ ಹಂತವನ್ನು ತಲುಪಲು ಆರು ಅವಸ್ಥೆಗಳನ್ನು ದಾಟಬೇಕಾಗುತ್ತದೆ. ತಲಅತ್, ಶರೀಅತ್, ತರೀಕತ್, ಮಾರೀಫತ್, ಹಕೀಕತ್, ಹಖೀದತ್. ಆಗ ಆ ಸೂಫಿಯು ಅನಲ್ ಹಕ್ ಸ್ಥಿತಿ ಹೊಂದುತ್ತಾನೆ ಎಂಬ ನಂಬಿಕೆಯಿದೆ.

ಭಗವಂತನನ್ನು ಭಯದಿಂದ ಭಜಿಸುವುದಕ್ಕಿಂತ ಪ್ರೇಮದಿಂದ ಆರಾಧಿಸುವುದು ಮೇಲು ಎಂದು ತಿಳಿದಿರುತ್ತಾರೆ. ತನ್ನನ್ನು ತಾನು ತಿಳಿಯುವ ಸ್ವಸ್ವರೂಪ ಆತ್ಮಜ್ಞಾನಕ್ಕೆ ಮಹತ್ವ ನೀಡುತ್ತಾರೆ.

ಅವಧೂತರು ಮತ್ತು ಸೂಫಿಗಳಲ್ಲಿರುವ ಪ್ರಮುಖ ಸಾಮ್ಯತೆ ಮತ್ತು ವ್ಯತ್ಯಾಸಗಳನ್ನು ಹೀಗೆ ಹೇಳಬಹುದು.

೧. ಅವಧೂತರಂತೆ ಸೂಫಿಗಳು ಜೀವನದಲ್ಲಿ ಬೇಸರವಾಗಿ ಜಿಗುಪ್ಸೆತಾಳಿ, ವಿರಕ್ತರಾಗಿ ಏಕಾಂತ ವಾಸಿಗಳಾಗಿರುತ್ತಾರೆ.

೨. ಅವಧೂತರು ಮತ್ತು ಸೂಫಿಗಳು ದುಡಿಯದೆ ಕೊನೆಗೆ ಭಿಕ್ಷೆಗೂ ಹೋಗದೆ ಆಹಾರ ತನ್ನಷ್ಟಕ್ಕೆ ತಾನೆ ಬರುತ್ತದೆ ಎಂದು ತಿಳಿದಿರುತ್ತಾರೆ.

೩. ಇಬ್ಬರಲ್ಲೂ ದೈವಿಕ ಉನ್ಮತ್ತತೆ ಇರುತ್ತದೆ.

೪. ಅಹಂ ಬ್ರಹ್ಮಾಸ್ಮಿ (ಅನಲ್ ಹಕ್) ಎಂಬ ಅದ್ವೈತ ಸಿದ್ಧಾಂತವನ್ನು ನಂಬಿ, ಆ ಸ್ಥಿತಿಗೇರಿರುತ್ತಾರೆ.

೫. ಮಾನವ ದೇವನಾಗುವ ನಂಬಿಕೆ ಇಬ್ಬರಲ್ಲೂ ಇದ್ದು, ಇಬ್ಬರೂ ಆತ್ಮಜ್ಞಾನಿಗಳು.

೬. ಇಬ್ಬರಿಗೂ ಗುರುಮುಖ್ಯ. ಗುರುವಿಲ್ಲದೆ ಗುರಿಯಿಲ್ಲ ಮತ್ತು ಗುರುವೇ ಸರ್ವಸ್ವ ಎಂದು ಬಲವಾಗಿ ನಂಬಿದವರು.

೭. ಇಬ್ಬರಲ್ಲೂ ಭವಿಷ್ಯ ಹೇಳುವುದು ಇತ್ತು. (ದಿವ್ಯದೃಷ್ಟಿಯ ಮುಖಾಂತರ, ಮೈದುಂಬಿ ಹಾಗೂ ದಿವ್ಯ ಜ್ಞಾನದ ಮೂಲಕ ಹೇಳುವುದು.)

ಸಂಕೇತ, ಸೂಚನೆಗಳ ಮೂಲಕ, ಮುಂದೆ ಆಗಬಹುದಾದುದನ್ನು ಸೂಚಿಸುತ್ತಿದ್ದರು. ಇಲ್ಲವೆ ಹೇಳುತ್ತಿದ್ದರು.

ಸಂತರು : ಸಂತ ಶಬ್ದ ಸಂಸ್ಕೃತದ ಸತ್‌ನಿಂದ ರೂಪುಗೊಂಡಿದ್ದು. ಸತ್ ಎಂದರೆ ಶುದ್ಧ ಅಸ್ತಿತ್ವವುಳ್ಳದ್ದು ಎಂದರ್ಥ. ಈ ಸತ್ ಚಿಂತನೆಯಲ್ಲಿ ತೊಡಗಿರುವ ಸಾಧಕನೇ ಸಂತ. ಸಂತ ಶಬ್ದವನ್ನು ನಮ್ಮ ಸಾಹಿತ್ಯ

ಪರಂಪರೆಯಲ್ಲಿ, ಬಹು ಆಯಾಮದ ಅರ್ಥದಲ್ಲಿ ಬಳಸಲಾಗಿದೆ. "ಸಜ್ಜನ, ಪವಿತ್ರಾತ್ಮ, ಪರೋಪಾಕಾರಿ, ಸದಾಚಾರಿ, ಸರ್ವಭೂತಹಿತಬಯಸುವವ, ಜಪ-ತಪ-ದಾನ ಧರ್ಮಾಧಿಗಳಲ್ಲಿ ನಿರತನಾಗಿರುವವ, ಆಧ್ಯಾತ್ಮ ಚಿಂತನೆಯನ್ನು ಬದುಕಿನ ಅವಿಭಾಜ್ಯ ಅಂಗವನ್ನಾಗಿಸಿಕೊಂಡವ, ನಡೆ-ನುಡಿಯಲ್ಲಿ ಸಾಂಗತ್ಯವುಳ್ಳವ, ನಿಷ್ಕಾಮಿಯಾಗಿರುವವ, ಸೇವಾಭಾವ ಮತ್ತು ಮಾನವೀಯ ಅಂತಃಕರಣವನ್ನು ಆತ್ಮೀಕರಿಸಿಕೊಂಡಿರುವ ಸಾಧಕನನ್ನು ಸಂತ ಎಂದು ವ್ಯಾಪಕ ಅರ್ಥದಲ್ಲಿ ಕರೆದಿದ್ದಾರೆ."[೭೩]

ನಿರ್ಗುಣಭಕ್ತಿಯ ಉಪಾಸಕರು ಮತ್ತು ಪ್ರಚಾರಕರಾಗಿದ್ದ ಸಂತರು ಪ್ರತಿಪಾದಿಸಿದ ಜೀವನಮೌಲ್ಯ ಮತ್ತು ಆಧ್ಯಾತ್ಮಿಕ ಚಿಂತನೆಗಳನ್ನು ಸಂತಮತದವುಗಳೆಂದು ಕರೆಯಲಾಯಿತು. ಸಂತನು ಹೇಗಿರಬೇಕೆಂಬುದನ್ನು ಕಬೀರರೇ ಹೇಳುವಂತೆ, ನಿರ್ವೈರಿ ಹಾಗೂ ಕಾಮರಹಿತನಾಗಿರಬೇಕು. ಪರಮಾತ್ಮನಲ್ಲಿ ಅನುರಾಗವುಳ್ಳವನಾಗಿದ್ದು, ವಿಷಯಾಸಕ್ತಿಯಿಂದ ದೂರವಿರಬೇಕು ಎಂದು ಆತನ ಸ್ವಭಾವವನ್ನು ತಿಳಿಸಿದ್ದಾರೆ. ಒಂದು ರೀತಿಯಲ್ಲಿ ಸಂತ ಮತ್ತು ಪರಮಾತ್ಮರ ಮಧ್ಯೆ ಯಾವ ವ್ಯತ್ಯಾಸವೂ ಇಲ್ಲದ ಪರಮಾತ್ಮನ ಪ್ರತಿನಿಧಿಗಳೇ ಸಂತರೆಂಬ ಭಾವನೆಯಿದೆ.

ಸಂತರು ಮಹಾನ್ ಮಾನವತಾವಾದಿಗಳು. ಜಾತಿ, ವರ್ಗಗಳ, ಸಂಕೋಲೆಯಿಂದ ಮಾನವ ಸಮಾಜವನ್ನು ಬಿಡುಗಡೆಗೊಳಿಸಿ, ವರ್ಣರಹಿತ, ವರ್ಗರಹಿತ, ಸಮಾಜ ನಿರ್ಮಿಸಲು ಶ್ರಮಿಸಿದವರು. ಅಹಂಕಾರ ಮಮಕಾರಗಳ ತೊರೆದು ಸಕಲ ಜೀವಜಗತ್ತನ್ನು ಪ್ರೀತಿಯಿಂದ ಕಾಣುವ ಸಂತರಿಗೆ ಯಾವುದೇ ಆಚಾರದ ಕಟ್ಟುಪಾಡುಗಳಿಲ್ಲ. ಆತ್ಮಜ್ಞಾನವೇ ಪರಮಗುರಿ ಎಂದು ನಂಬಿದ ಸಂತರು ಶಂಕರಾಚಾರ್ಯರ ಅದ್ವೈತ ಚಿಂತನೆಯ ನೆಲೆಗಟ್ಟಿನಲ್ಲಿ ತಮ್ಮ ಚಿಂತನೆಯನ್ನು ಮೂಡಿಸಿಕೊಂಡವರು.

ಭಕ್ತಿಗೆ ಎಲ್ಲರೂ ಅರ್ಹರೆಂದು, ಸರ್ವಸಮಾನತೆಯ ಸಮಾಜ ನಿರ್ಮಾಣಕ್ಕೆ ಶ್ರಮಿಸಿದ ಸಂತರು, ಶರಣರು ವಚನಗಳನ್ನು ರಚಿಸಿದಂತೆ ಇವರು "ಉಲಟ್ ಬಾಂಸಿ"ಗಳೆಂಬ ರೂಪದ ಸಾಹಿತ್ಯ ರಚಿಸಿ ಜನರ ಮನಸ್ಸಿಗೆ ಹತ್ತಿರವಾದರು. ಸಾಹಿತ್ಯದಲ್ಲಿ ಜನಸಾಮಾನ್ಯರು ಬಳಸುವ ಆಡುಭಾಷೆಯಲ್ಲಿ ತಮ್ಮ ಚಿಂತನೆಗಳನ್ನು, ಅನುಭವಗಳನ್ನು ಅಭಿವ್ಯಕ್ತಪಡಿಸಿದರು. ಅವಧೂತರು ಮತ್ತು ಸಂತರಿಗೆ ಇರುವ ಸಾಮ್ಯತೆಗಳು.

೧. ಅವಧೂತರು ಮತ್ತು ಸಂತರು ಜಗತ್ತು ಮಿಥ್ಯ, ನಶ್ವರ, ದುಃಖಮಯ ಎಂದು ತಿಳಿದವರು. ಬ್ರಹ್ಮಸತ್ಯ, ಜಗನ್ಮಿಥ್ಯ ಎಂಬ ಅದ್ವೈತ ಸಿದ್ಧಾಂತಕ್ಕೆ ದನಿಗೂಡಿಸಿದವರು.

೨. ಇಬ್ಬರಲ್ಲೂ ಗುರುವಿಗೆ ಹೆಚ್ಚಿನ ಮಹತ್ತ್ವವಿದೆ. ಗುರು ಭಗವಂತನಿಗಿಂತಲೂ ಶ್ರೇಷ್ಠವೆಂದೂ ತಿಳಿದಿರುತ್ತಾರೆ.

೩. ಯಾವುದೇ ಧಾರ್ಮಿಕ ಕಟ್ಟುಪಾಡುಗಳಿಲ್ಲದೆ, ಯಾವುದೇ ಒಂದು ಪಂಗಡ, ಜಾತಿ, ಸಮೂಹಕ್ಕಷ್ಟೇ ಸೀಮಿತವಾಗಿರದೆ ಸೃಷ್ಟಿಯ ಎಲ್ಲಾ ಜೀವರಾಶಿಗಳನ್ನು ಸಮನಾಗಿ ಕಂಡಿರುತ್ತಾರೆ.

೪. ಪರಮಾತ್ಮ ನಿರ್ಗುಣ, ನಿರಾಕಾರ, ಅಗಮ್ಯ ಅಗೋಚರ, ನಿರಂಜನಸ್ವರೂಪ, ಸರ್ವಾಂತರ್ಯಾಮಿ, ಎಂದು ತಿಳಿದ ಆತ್ಮಜ್ಞಾನಿಗಳು.

೫. ಮೋಕ್ಷವನ್ನು ಬದುಕಿರುವಾಗಲೆ ಪಡೆದು ಪರಮಸುಖವನ್ನು ಪಡೆದು ಜೀವನ್ಮುಕ್ತರಾಗುವುದು ಇವರ ಗುರಿ.

೬. ಎಲ್ಲಾ ವರ್ಗದ, ಎಲ್ಲಾ ಕುಲಕಸುಬಿನ ಸಂತರು ಮತ್ತು ಅವಧೂತರಿರುತ್ತಾರೆ. ಜಾತಿಯನ್ನು ನಿರಾಕರಿಸಿ, ಮಾನವ ಜಾತಿಯನ್ನು ಎತ್ತಿಹಿಡಿದು ಅದನ್ನು ವಿಶ್ವಕ್ಕೆ ಸಾರಿದವರು.

೭. ಶರಣರು ಮತ್ತು ಸೂಫಿಗಳಿಗಿರುವಂತೆ, ಇವರಿಗೆ ಮುಕ್ತಿಮಾರ್ಗವನ್ನು ಮುಟ್ಟಲು ಯಾವುದೇ ರೀತಿಯ ಅವಸ್ಥೆಗಳಿರುವುದಿಲ್ಲ. ಶರಣರಿಗೆ ಷಟ್‌ಸ್ಥಲ ಮತ್ತು ಪಂಚಾಚಾರಗಳು ಮುಖ್ಯ. ಸೂಫಿಗಳಿಗೂ ಇದೇ ರೀತಿಯ ಅವಸ್ಥೆಗಳಿವೆ.

೮. ಸಂತರು ಸಾಹಿತ್ಯ ರಚಿಸಿದ್ದರೆ, ಅವಧೂತರಲ್ಲಿ ಹೆಚ್ಚಾಗಿ ಸಾಹಿತ್ಯ ರಚಿಸಿದವರಿಲ್ಲ.

ಆರೂಢರು : ಆರೂಢ ಎಂದರೆ ಏರಿದವನು. (ಸಿಂಹಾರೂಢ, ಜ್ಞಾನಾರೂಢ, ಸಿದ್ಧಾರೂಢ) ಕರ್ಮಕಾಂಡವೆಂಥದ್ದೂ ಇಲ್ಲದವ ಆರೂಢ. ಆರೂಢ ಸ್ಥಿತಿ ತಲುಪಲು ಮೊದಲು ಹಠಯೋಗ, ಸಗುಣಯೋಗ, ಬ್ರಹ್ಮೋಪಾಸನೆಗಳು ಅಗತ್ಯ. 'ಅಖಿಲಭಾವ ರಹಿತನಾದ ಆರೂಢನು ತನುಮಾನಸಾದಿಗಳ ಚೇಷ್ಟೆಗೆ ಇಷ್ಟಜನಕೆ, ಲೋಕಕೆ, ವೇದ ವಿಧಿಗಳಿಗೆ ಇನಿಸು ಕಿಂಕರನಾಗಿರುವುದಿಲ್ಲ. ಈತನಿಗೆ ಕೂಡುವ, ಅಗಲುವ, ಅರ್ಥಾತ್ ಯೋಗ-ವಿಯೋಗಗಳ ಕಲ್ಪನೆಯಿಲ್ಲ, ಆತನಿಗೆ ಸುಖ-ದುಃಖಾದಿ ದ್ವಂದ್ವಗಳಿರುವುದಿಲ್ಲ.'

ಶ್ರೀಗುರುವಿನ ಕರುಣೆಯಿಂದ ಆರೂಢನಿಗೆ ಸರ್ವವೂ ಬ್ರಹ್ಮವೆಂಬ ಅನುಭವವಾಗುತ್ತದೆ. ತಾನಲ್ಲದೆ ಇನ್ನೊಂದಿಲ್ಲವೆನ್ನುವ ಅನುಭಾವದಲ್ಲಿ ನೆಲೆನಿಂತವನು ಆರೂಢನು.

ತನು-ಮನ-ಧನ-ಧಾನ್ಯ-ವನಿತೆ-ಪುತ್ರ ಇಂಥವುಗಳಲ್ಲಿ ರತಿಭಾವವಾಗಲಿ, ವಿರತಿಭಾವವಾಗಲಿ, ತಲೆದೋರದೆ ನೈಜಭಾವನೆಯಿಂದಿರುತ್ತಾನೆ. ಭೋಗವಿಷಯಗಳಲ್ಲಿ, ತತ್ತ್ವ ವಿಷಯಗಳಲ್ಲಿ ರತಿಯಾಗಲಿ, ವಿರತಿಯಾಗಲಿ ಇಲ್ಲದೆ ನಿರ್ವಿಷಯನಾಗಿರುತ್ತಾನೆ. ಒಟ್ಟಾರೆ ಆರೂಢನು ಸರ್ವಸಮತ್ವ ಭಾವನೆಯುಳ್ಳವನಾಗಿರುತ್ತಾನೆ.

ಆರೂಢನು ಬ್ರಹ್ಮವೇ ತಾನಾಗಿದ್ದು, ಆತನ ಜ್ಞಾನದಲ್ಲಿ ಈ ಜಗತ್ತು ಕ್ಷಣಿಕವಾದುದು, ಮಿಥ್ಯೆಯೆಂದು ತಿಳಿದು, ಯಾವ ವಸ್ತುವಿನಲ್ಲಿಯೂ ಭ್ರಾಂತಿಯೆಂಬುದಿಲ್ಲದೆ ಇರುತ್ತಾನೆ. ಇಂಥ ಸ್ವಭಾವವುಳ್ಳವನನ್ನು ಆರೂಢನೆಂದೂ, ಅವಧೂತನೆಂದೂ, ಜೀವನ್ಮುಕ್ತನೆಂದೂ ಕರೆಯುತ್ತಾರೆ.

ಶರಣರು, ಸೂಫಿಗಳು, ಸಂತರು, ಆರೂಢರು, ಅವಧೂತರುಗಳ ಮಾರ್ಗದಲ್ಲಿ ಅಲ್ಪಸ್ವಲ್ಪ ವ್ಯತ್ಯಾಸ ಕಂಡುಬಂದರೂ ಅವರುಗಳ ಗುರಿ ಮಾತ್ರ ಒಂದೇ ಆಗಿದೆ. ಈ ಎಲ್ಲಾ ಅನುಭವ ಪಂಥಗಳು ಉದಯಿಸಿದ ಕಾಲ, ದೇಶ, ಭಾಷೆ, ನೆಲ, ಪರಿಸರ, ಪರಿಸ್ಥಿತಿಗಳು ಬೇರೆ ಬೇರೆಯಾಗಿ ಕಂಡುಬಂದರೂ ಅಂತರಂಗದ ನಿಲುವು ನಿರ್ಧಾರಗಳು ಒಂದೇ ರೀತಿಯಲ್ಲಿವೆ. ಇವರ ಚಿಂತನೆ, ಅನುಭವ, ಅನುಭಾವಗಳಲ್ಲಿರುವ ಸಾಮ್ಯತೆಗಳು ಆಶ್ಚರ್ಯ ಮೂಡಿಸುವುದರ ಜೊತೆಗೆ, ಚಿಂತನೆಗೆ ಇಂಬು ಕೊಡುತ್ತವೆ.

ಭಕ್ತರಾಗಿ, ದಾರ್ಶನಿಕರಾಗಿ, ಸಮಾಜ ಸುಧಾರಕರಾಗಿ, ವಿರಕ್ತರಾಗಿ, ಆತ್ಮಜ್ಞಾನಿಗಳಾಗಿ, ಮೌನಿಗಳಾಗಿ, ಕವಿಗಳಾಗಿ, ಸಾಧಿಸಿದ ಸಿದ್ಧಿ-ಸಾಧನೆಗಳು ಮನುಕುಲದ ಮುಂದೆ ಹೊಸ ಹೊಸ ಮೌಲ್ಯಗಳನ್ನು ಇರಿಸಿವೆ.

ಇವರೆಲ್ಲಾ ತಮ್ಮ ಸಾಧನೆಗೆ ಬಳಸಿಕೊಂಡ ಪಥ ಅನುಭಾವದ ಪಥವಾಗಿದ್ದು, ದೈವವನ್ನು ಎಲ್ಲರೂ ಸತಿಪತಿಗಳ ರೂಪದಲ್ಲಿ ಕಂಡಿದ್ದಾರೆ. ಭಗವಂತನೊಂದಿಗೆ ನೇರ ಸಂಬಂಧ ಹೊಂದಿದ್ದ, ಈ ಅನುಭಾವಿಗಳು, ಜೀವ, ದೇವರು, ಜಗತ್ತು, ಮೋಕ್ಷ, ಭಕ್ತಿ, ಜಾತಿ, ಅನುಭಾವ ಇವುಗಳ ಬಗೆಗಿನ ನಿಲುವು ಒಂದೇ ಆಗಿರುತ್ತದೆ. ಇವರೆಲ್ಲಾ ಗುರುವಿನ ಬಗ್ಗೆ ಅತೀವ ಶ್ರದ್ಧೆ ಮತ್ತು ಗೌರವವನ್ನು ಹೊಂದಿದ್ದವರು.

ಒಟ್ಟಾರೆಯಾಗಿ ಎಲ್ಲಾ ಅನುಭಾವಿಗಳ ಉದ್ದೇಶ ಲೋಕಕಲ್ಯಾಣ, ಸಕಲಜೀವಿಗಳಿಗೂ ಲೇಸನ್ನು ಬಯಸುವುದು. ಬಯಸಿದ್ದ ಕಲ್ಯಾಣ ಆತ್ಮಕಲ್ಯಾಣದಲ್ಲಿ ಅಡಗಿತ್ತು. ಇವರುಗಳಲ್ಲಿ ಯಾರ ಪ್ರಭಾವ, ಯಾರ ಮೇಲಾಗಿತ್ತು, ಯಾವ ರೀತಿಯ ಸಂಪರ್ಕಗಳಿದ್ದವೋ ನಿಚ್ಚಳವಾಗಿ ತಿಳಿಯದು. ಪರಸ್ಪರ ಪ್ರಭಾವವನ್ನು ಬೀರಿಕೊಂಡಿರುವ ಇವರೆಲ್ಲಾ ದೈವಿಕ ಸಮತಾವಾದಿಗಳಾಗಿದ್ದಾರೆ. ಒಟ್ಟಿನಲ್ಲಿ ೧೮-೧೯ನೆಯ ಶತಮಾನದಲ್ಲಿ ಅಧಿಕ ಸಂಖ್ಯೆಯಲ್ಲಿ ಅವತರಿಸಿದ ಅವಧೂತರುಗಳು ಧರ್ಮಜಾತಿಗಳನ್ನು ಮೀರಿದ ಗುರು-ಶಿಷ್ಯರ ಪರಂಪರೆಯನ್ನು ನಾಡಿನ ತುಂಬ ಹುಟ್ಟುಹಾಕಿದ್ದಾರೆ.

ಕೊನೆ ಟಿಪ್ಪಣಿಗಳು

೧. ಸಂಸ್ಕೃತ-ಕನ್ನಡ : ಶಬ್ದಕೋಶ, ಸಂಪಾದಕ ಮತ್ತು ಪ್ರಕಾಶಕ, ಚಕ್ರವರ್ತಿ ಶ್ರೀನಿವಾಸ ಗೋಪಾಲಾಚಾರ್ಯ, (ತೃತೀಯ ಭಾಗ)

೨. ನಿಘಂಟು : ಕನ್ನಡ ಸಾಹಿತ್ಯ ಪರಿಷತ್ತು, ಭಾಗ-೧, ಪುಟ-೪೪೫

೩. ಸಂಸ್ಕೃತ-ಕನ್ನಡ : ಸುವರ್ಣಕೋಶ

೪. ಕನ್ನಡ-ಇಂಗ್ಲಿಷ್ ಡಿಕ್ಷ್ನರಿ (ಸಂ) ರೆ|| ಎಫ್.ಕಿಟ್ಟೆಲ್, B.G.E.M

೫. ಕನ್ನಡ-ಕನ್ನಡ : ಶಬ್ದಕೋಶ, (ಸಂ) ಗುರುನಾಥ ಜೋಶಿ, ಬಿ.ಅಶ್ವತ್ಥನಾರಾಯಣರಾವ್, ದ್ವಿತೀಯ ಸಂಸ್ಕರಣ

೬. ಅ.ರಾ.ಸೇ, (ಸಂ) ಪರಮಾರ್ಥ ಪದಕೋಶ

೭. ಕಲಬುರ್ಗಿ ಎಂ.ಎಂ., ಮಾರ್ಗ-೩, ಪುಟ-೩೫೯

೮. ಅದೇ, ಪುಟ-೩೬೮

೯. ಡಾ.ಜಿ.ಎಸ್.ಕಾಪಸೆ, ಪ್ರೊ.ಆರ್.ಬಿ.ಕಂಠಿ ಚಿದಾನಂದವಧೂತರ, ಜ್ಞಾನಸಿಂಧು, ೧೯-೧೮, ಪರಿಷ್ಕೃತ ಮೂಲ ಕಾವ್ಯ.

೧೦. ಅದೇ, ಪುಟ-೩೬೪

೧೧. ಅದೇ, ೩-೪೭

೧೨. ಅದೇ, ೩-೫೨

೧೩. ಅದೇ, ೩೬-೪೧

೧೪. ಬಸವರಾಜು.ಎಲ್. (ಸಂ) ನಿಜಗುಣ ಶಿವಯೋಗಿಯ ತತ್ತ್ವದರ್ಶನ, ಪುಟ-೨೦೧

೧೫. ಅದೇ, ಪುಟ-೨೦೧

೧೬. ಡಾ.ಜಿ.ಎಸ್.ಕಾಪಸೆ, ಪ್ರೊ.ಆರ್.ಬಿ.ಕಂಠಿ, ಚಿದಾನಂದವಧೂತರ ಜ್ಞಾನಸಿಂಧು, ೪೦-೨೨, ಪರಿಷ್ಕೃತ ಮೂಲ ಕಾವ್ಯ

೧೭. ಬಸವರಾಜು ಎಲ್. (ಸಂ) ನಿಜಗುಣರ ತತ್ವದರ್ಶನ, ಪುಟ-೨೦೬

೧೮ ಡಾ.ಜಿ.ಎಸ್.ಕಾಪಸೆ, ಪ್ರೊ.ಆರ್.ಬಿ.ಕಂಠಿ, ಚಿದಾನಂದವಧೂತರ ಜ್ಞಾನಸಿಂಧು, ೪೧-೨೨, ಪರಿಷ್ಕೃತ ಮೂಲ ಕಾವ್ಯ

೧೯. ಅದೇ, ೪೧-೩೭

೨೦. ನಿಜಗುಣ ಶಿವಯೋಗಿ, ಪರಮಾನುಭವ ಬೋಧೆ, ೪-೨೧

೨೧. ಉದ್ಧೃತ : ಸಚ್ಚಿದಾನಂದ ಪರಮಹಂಸ ಯೋಗೀಶ್ವರ, ಕನ್ನಡಕ್ಕೆ ಭೀಮಸೇನ (ಅನು) ಜೀವ ಬ್ರಹ್ಮೈಕ್ಯ ರಾಜಯೋಗ ಸಾರಾಮೃತ, ಪುಟ-೬೩೩

೨೨. ಸ್ವಾಮಿ ಸೋಮನಾಥನಂದ (ಅನು) ಅವಧೂತ ಗೀತಾ ಪುಟ-೮-೬, ನಾಲ್ಕನೇ ಮುದ್ರಣ

೨೩. ಅದೇ, ೮-೭

೨೪. ಅದೇ, ೮-೮

೨೫. ಅದೇ, ೮-೯

೨೬. ಅ.ರಾ.ಸೇ. (ಸಂ) ಪರಮಾರ್ಥ ಪದಕೋಶ, ಪುಟ-೫೦

೨೭. ಕೃಷ್ಣಮೂರ್ತಿ ಎಂ.ಎಸ್. ಸಿದ್ಧ ಸಾಹಿತ್ಯ, ಪುಟ-೧೮೯

೨೮. ಡಾ.ಎಂ.ಎಸ್.ಸುಂಕಾಪುರ, ಪಂ.ನಾಗಭೂಷಣ ಶಾಸ್ತ್ರಿಗಳು (ಸಂ) ಗುರುಬಸವ ಕೃತ, ಅವಧೂತ ಗೀತೆ, ಮುನ್ನುಡಿ, ಪ್ರಥಮ ಆವೃತ್ತಿ

೨೯. ಕನ್ನಡ ವಿಶ್ವಕೋಶ, ಮೈಸೂರು ವಿ.ವಿ., ಪುಟ-೫೫೦

೩೦. ಡಾ.ಜಿ.ಎಸ್.ಕಾಪಸೆ, ಪ್ರೊ.ಆರ್.ಬಿ.ಕಂಠಿ (ಸಂ) ಚಿದಾನಂದವಧೂತರ ಜ್ಞಾನಸಿಂಧು, ಪೀಠಿಕೆ, ಪರಿಷ್ಕೃತ ಮೂಲಕಾವ್ಯ

೩೧. ಸ್ವಾಮಿ ಸೋಮನಾಥಾನಂದ, (ಅನು) ಅವಧೂತ ಗೀತಾ, ಮುನ್ನುಡಿ, ನಾಲ್ಕನೇ ಮುದ್ರಣ

೩೨. (ಉದ್ಧೃತ) ಸಚ್ಚಿದಾನಂದ ಪರಮಹಂಸ ಯೋಗೀಶ್ವರ, ಕನ್ನಡಕ್ಕೆ ಭೀಮಸೇನ (ಅನು) ಜೀವಬ್ರಹ್ಮೈಕ್ಯ ರಾಜಯೋಗ ಸಾರಾಮೃತವು ಪುಟ-೬೩೪

೩೩. (ಉದ್ಧೃತ) ಚನ್ನಬಸವೇಶ್ವರ ಶಿ.ವ.ಚೇಳ್ಳಗುರ್ಕಿ ಶ್ರೀಎರ್ರಿಸ್ವಾಮಿಗಳ ಲೀಲಾವಿಲಾಸ, ಪುಟ-೮೧

೩೪. ಶ್ರೀಮದ್ ಭಾಗವತ

೩೫. ಸಚ್ಚಿದಾನಂದ ಪರಮಹಂಸ ಯೋಗೀಶ್ವರ, ಭೀಮಸೇನ (ಅನು) ಜೀವ ಬ್ರಹ್ಮೈಕ್ಯ ರಾಜಯೋಗ ಸಾರಾಮೃತವು, ಪುಟ-೬೩೭

೩೬. ಅದೇ, ಪುಟ-೬೩೯

೩೭. ಅದೇ,

೩೮. ಸ್ವಾಮಿ ಸೋಮನಾಥನಂದ (ಅನು) ಅವಧೂತ ಗೀತಾ (೧-೭೨) ನಾಲ್ಕನೇ ಮುದ್ರಣ

೩೯. ಅದೇ, ೧-೭೩

೪೦. ಅದೇ, ೩-೩

೪೧. ಅದೇ, ೭-೧

೪೨. ಅದೇ, ೮-೩

೪೩. ಅದೇ, ೮-೪

೪೪. ಡಾ.ಎಂ.ಎಸ್.ಸುಂಕಾಪುರ, ಪಂ.ನಾಗಭೂಷಣ ಶಾಸ್ತ್ರಿಗಳು (ಸಂ) ಗುರುಬಸವ ಕೃತ ಅವಧೂತ ಗೀತಾ ಪುಟ-೮ ಪ್ರಥಮ ಆವೃತ್ತಿ

೪೫. ಅದೇ, ಪುಟ-೧೨

೪೬. ಅದೇ, ಪುಟ-೧೨

೪೭. ಅದೇ, ಪುಟ-೧೫

೪೮. ಡಾ.ಜಿ.ಎಸ್.ಕಾಪಸೆ, ಪ್ರೊ.ಆರ್.ಬಿ.ಕಂಠಿ (ಸಂ) ಚಿದಾನಂದವಧೂತರ ಜ್ಞಾನಸಿಂಧು, ೪೨-೪, ಪರಿಷ್ಕೃತ ಮೂಲ ಕಾವ್ಯ

೪೯. ಅದೇ, ೪೨-೨೧

೫೦. ಕೃಷ್ಣಮೂರ್ತಿ, ಎಂ. ಎಸ್. ಸಿದ್ಧ ಸಾಹಿತ್ಯ, ಪುಟ-೨೬೦

೫೧. ಅದೇ, ಪುಟ-೨೬೩

೫೨. ಅದೇ, ಪುಟ-೨೬೫

೫೩. ಅದೇ, ಪುಟ-೩೫೬

೫೪. ಡಾ.ಜಿ.ಎಸ್.ಕಾಪಸೆ, ಪ್ರೊ.ಆರ್.ಬಿ.ಕಂಠಿ (ಸಂ) ಚಿದಾನಂದವಧೂತರ ಜ್ಞಾನಸಿಂಧು, ೩೯-೨೭, ಪರಿಷ್ಕೃತ ಮೂಲ ಕಾವ್ಯ

೫೫. (ಉದ್ಧೃತ) ಸಚ್ಚಿದಾನಂದ ಪರಮಯೋಗೀಶ್ವರ (ಕನ್ನಡಕ್ಕೆ) ಭೀಮಸೇನ, ಜೀವಬ್ರಹ್ಮೈಕ್ಯ ರಾಜಯೋಗ ಸಾರಾಮೃತವು, ಪುಟ-೬೫೦

೫೬. ಅದೇ, ಪುಟ-೬೫೨

೫೭. ಡಾ.ಜಿ.ಎಸ್.ಕಾಪಸೆ, ಪ್ರೊ.ಆರ್.ಬಿ.ಕಂಠಿ (ಸಂ) ಚಿದಾನಂದವಧೂತರ ಜ್ಞಾನಸಿಂಧು, ೪೨-೬೧, ಪರಿಷ್ಕೃತ ಮೂಲ ಕಾವ್ಯ.

೫೮. ಬಸವರಾಜ್ ಎಲ್, (ಸಂ) ನಿಜಗುಣ ಶಿವಯೋಗಿಯ ತತ್ತ್ವದರ್ಶನ ಪುಟ-೩೭

೫೯. Encyclopedia Britanica Vol. 16

೬೦. ಪೂಜಾರ ವ್ಹಿ.ಜಿ, ವೀರಶೈವ ಸಾಹಿತ್ಯದಲ್ಲಿ ಪವಾಡಗಳು, ಪುಟ-೮

೬೧. ರಹಮತ್ ತರೀಕೆರೆ (ಸಂ) ಧರ್ಮ ವಿಶ್ವಕೋಶ, ಪುಟ-೨೦೩

೬೨. ಅದೇ, ಪುಟ-೨೦೩

೬೩. ರಹಮತ್ ತರೀಕೆರೆ, ಕರ್ನಾಟಕದ ಸೂಫಿಗಳು, ಪುಟ ೧೫೫, ಪರಿಷ್ಕೃತ ಮುದ್ರಣ

೬೪. ಡಾ.ಜಿ.ಎಸ್.ಕಾಪಸೆ, ಪ್ರೊ.ಆರ್.ಬಿ.ಕಂಠಿ (ಸಂ) ಚಿದಾನಂದವಧೂತರ ಜ್ಞಾನಸಿಂಧು, ೪೨-೧೦೫, ಪರಿಷ್ಕೃತ ಮೂಲ ಕಾವ್ಯ.

೬೫. ರಹಮತ್ ತರೀಕೆರೆ (ಸಂ) ಧರ್ಮ ವಿಶ್ವಕೋಶ, ಪುಟ-೧

೬೬. ಅದೇ, ಪುಟ-೧

೬೭. ಅದೇ, ಪುಟ-೨

೬೮. ವಿದ್ಯಾಶಂಕರ. ಎಸ್. (ಸಂ) ವಚನ ಪರಿಭಾಷಾಕೋಶ, ಪುಟ-೨೧೯

೬೯. ಷಣ್ಮುಖಯ್ಯ ಅಕ್ಕೂರಮಠ, ಸೂಫಿ ಮತ್ತು ಶರಣರ ಅನುಭಾವ ಪಥ, ಪುಟ-೩೮

೭೦. ತಿಪ್ಪೇಸ್ವಾಮಿ, ಶರಣರು ಮತ್ತು ಸಂತರು, ಪುಟ-೪೫

೭೧. ರಹಮತ್ ತರೀಕೆರೆ, ಕರ್ನಾಟಕದ ಸೂಫಿಗಳು, (ಪರಿಷ್ಕೃತ ಮುದ್ರಣ)

೭೨. ಷಣ್ಮುಖಯ್ಯ ಅಕ್ಕೂರಮಠ, ಸೂಫಿ ಮತ್ತು ಶರಣರ ಅನುಭವ ಪಥ, ಪುಟ-೪

೭೩. ತಿಪ್ಪೇಸ್ವಾಮಿ, ಶರಣರು ಮತ್ತು ಸಂತರು, ಪುಟ-೧೫

ಅಧ್ಯಾಯ ಮೂರು

ಅವಧೂತ ಪರಂಪರೆ ಮತ್ತು ಸಮಕಾಲೀನ ಪರಿಸರ

ಅಧ್ಯಾಯ ಮೂರು

ಅವಧೂತ ಪರಂಪರೆ ಮತ್ತು ಸಮಕಾಲೀನ ಪರಿಸರ

ಪ್ರತಿಯೊಬ್ಬ ಮಾನವನು ಮುಕ್ತಿಗಾಗಿ, ಶಾಂತಿ-ನೆಮ್ಮದಿಗಾಗಿ ಪರಿತಪಿಸುವುದು ಸಹಜ. ಅಂತಹ ಮುಕ್ತಿ ಪಡೆಯಲು ಭಕ್ತಿಯಿಂದ ಸಾಧ್ಯವೆಂದು ಅನೇಕ ಅನುಭಾವಿಗಳು ಜಗತ್ತಿನಾದ್ಯಂತ ಸಾರಿದ್ದಾರೆ. ಸಂತರು, ಶರಣರು, ದಾಸರು, ಸೂಫಿಗಳು ಮುಂತಾದ ಅನುಭಾವಿಗಳು ಮುಕ್ತಿಮಾರ್ಗದ ಮಹತ್ವ ನುಡಿದು, ನುಡಿದಂತೆ; ನಡೆದು ಜೀವನ್ಮುಕ್ತಿಯ ಸ್ಥಿತಿ ಪಡೆದಿದ್ದಾರೆ. ಆಧ್ಯಾತ್ಮಿಕ ಜೀವನದಲ್ಲಿ ಜೀವನ್ಮುಕ್ತಿಯು ಅತ್ಯುತ್ತಮವಾಗಿದ್ದು, ಇದರಲ್ಲಿ ನೆಲೆನಿಂತವರು ಲೌಕಿಕ ಸಂಘರ್ಷಗಳಿಂದ ದೂರವಾಗಿ, ಮನೆ, ಮಡದಿ, ಮಕ್ಕಳು, ಹಣ, ಅಧಿಕಾರ ಮುಂತಾದ ಆಶಾಪಾಶಗಳಿಂದ ಮುಕ್ತರಾಗಿರುತ್ತಾರೆ. ಜಾತಿ-ಮತ ಧರ್ಮ, ಅಂತಸ್ತುಗಳನ್ನು ಮೀರಿ ನಿರಹಂಕಾರ ಮತ್ತು ದ್ವೇಷರಹಿತರಾಗಿದ್ದು, ತಮ್ಮನ್ನು ನಂಬಿದ ಎಲ್ಲಾ ವರ್ಗದ ಜನತೆಯ ಮೇಲೆ ಪ್ರೀತಿ-ದಯೆ ತೋರುತ್ತಾ ಮಾನವೀಯತೆ ಮೆರೆದಿದ್ದಾರೆ.

ಭಾರತ ದೇಶವು ಅನೇಕ ಸಾಧು ಸತ್ಪುರುಷರು, ಶರಣರು-ಶಿವಯೋಗಿಗಳು, ಆರೂಢ-ಅವಧೂತರು ಮುಂತಾದ ಅನುಭಾವಿಗಳ ಪರಂಪರೆಗೆ ಖ್ಯಾತಿವೆತ್ತಿದೆ. ರಾಜಕೀಯ, ಸಾಮಾಜಿಕ, ಧಾರ್ಮಿಕ ಕ್ಷೇತ್ರಗಳ ಅಸಮಾನತೆ, ಮತ್ತು ನಂಬಿಕೆಗಳು, ಸಾಮಾಜಿಕ ಕಟ್ಟುಪಾಡುಗಳು ಜಟಿಲವಾಗಿದ್ದು, ಸಾಮಾನ್ಯ ಜನತೆ ಉಸಿರು ಕಟ್ಟಿರುವಂಥ ಪರಿಸ್ಥಿತಿಯಲ್ಲಿ ಇಂಥ ಮಹಾತ್ಮರು ಅವತರಿಸಿರುತ್ತಾರೆ. ಸಮಾಜ ಮತ್ತು ಧರ್ಮವನ್ನು ತಿಳಿಗೊಳಿಸಿ, ಎಡರಾಗಿದ್ದ ವಿಷಮ ಪರಿಸ್ಥಿತಿಯನ್ನು ಹೋಗಲಾಡಿಸುವ ಮಹತ್ಕಾರ್ಯ ಇವರದ್ದಾಗಿತ್ತು. ಇಂತಹ ಸಂಕರ ಸ್ಥಿತಿಯಲ್ಲಿ ಧರ್ಮ ಬೋಧಕರು, ಸಮಾಜ ಸುಧಾರಕರು ಹೊಸ ಹೊಸ ಸ್ಫೂರ್ತಿಗಳಿಂದ ಭಕ್ತಿಮಾರ್ಗದಲ್ಲಿ ಪ್ರವೃತ್ತರಾಗಿ, ಭಕ್ತಿಮಾರ್ಗ ನೇರ ಹಾಗು ಸರಳವಾಗಿದ್ದು, ಸರ್ವರೂ ಅವಲಂಬಿಸಿ ಆಚರಿಸಲು ಸುಲಭವಾಗಿದೆ ಎಂದು ಸಾರಿದರು. "ದೇವರು ತೀವ್ರ ಒಲಿಯುವಂತಹ ಈ ಮಾರ್ಗದಲ್ಲಿ ಕರ್ಮಕಾಂಡದ ವಿಧಿ ನಿಯಮಗಳಿಲ್ಲದೆ, ಜಾತಿ-ಮತ-ಪಂಥಗಳ ಕಡಿವಾಣವಿಲ್ಲದೆ, ಉಚ್ಚ-ನೀಚಗಳ ತಾರಾತಮ್ಯವಿಲ್ಲದೆ, ಭಾಷೆಯ ಗೊಂದಲವಿಲ್ಲದೆ, ಚಿತ್ತ ಶುದ್ಧಿಯಿಂದ ಭಗವಂತನನ್ನು ಉಪಾಸನೆ ಮಾಡುವುದು, ಪ್ರೀತಿಸುವುದು ದಾರಿಯಾಗುತ್ತದೆ. ಕಾಲಕಾಲಕ್ಕೆ ಇಂಥ ಭಕ್ತರ ಸಮೂಹ ಅಥವಾ ಸಮುದಾಯಗಳು ಧಾರ್ಮಿಕ ಮೂಢನಂಬಿಕೆ, ಕಂದಾಚಾರಗಳನ್ನು ತೊಡೆದು ಹಾಕಿ ಸಮಾಜದಲ್ಲಿ ಪರಿವರ್ತನೆಯನ್ನು ತರಲು ಪ್ರಯತ್ನಮಾಡಿವೆ. ಸಮಾಜ ಕಲ್ಯಾಣಕ್ಕಾಗಿ ನಡೆದ ಇಂತಹ ಹೋರಾಟಗಳನ್ನು ಭಕ್ತಿ ಚಳುವಳಿ ಎಂದು ಕರೆಯುತ್ತಾರೆ."[೧] ಭಕ್ತಿ ಚಳುವಳಿಯ ಪ್ರವರ್ತಕರುಗಳ ಸಂಪ್ರದಾಯ, ಆಚಾರ-

ವಿಚಾರ, ಉಪಾಸನೆ ಮುಂತಾದವುಗಳಲ್ಲಿ ವಿಭಿನ್ನತೆ ಕಂಡುಬಂದರೂ, ಎಲ್ಲಾ ಧರ್ಮಗಳ, ಎಲ್ಲಾ ಮತಗಳ ಸಾರವು ಒಂದೇ ಆಗಿದ್ದು, ದೇವರು ಒಬ್ಬನೇ ಎಂಬ ಮೂಲ ಮಂತ್ರವು ಇವರುಗಳ ದಿವ್ಯ ಸಂದೇಶವಾಗಿತ್ತು. ನಿರ್ದಿಷ್ಟ ವರ್ಗ, ವರ್ಣ, ಜಾತಿ, ಮತ, ಪಂಥ-ಪಂಗಡಗಳಿಗೆ ಸೇರದೆ, ಸರ್ವ ಮತಧರ್ಮಗಳಲ್ಲಿ ನಿರೂಪಿತವಾಗಿರುವ ಬ್ರಹ್ಮತತ್ವದ ಸಾರವನ್ನು ಭಕ್ತಿಮಾರ್ಗದಲ್ಲಿ ಕಂಡುಕೊಂಡ ಪಾರಮಾರ್ಥಿಕರಾಗಿದ್ದಾರೆ. ಇವರೆಲ್ಲಾ ದೇವರನ್ನು ಬಾಹ್ಯದಲ್ಲಿ ಹುಡುಕದೆ, ಅರಿವಿನ ಮುಖಾಂತರ ತಮ್ಮಂತರಂಗದಲ್ಲೆ ಹುಡುಕಿದವರು. ಇವರನ್ನೆ ಅನುಭಾವಿಗಳೆಂದೂ, ಅವರ ಮಾರ್ಗವನ್ನು ಅನುಭಾವದ ಮಾರ್ಗವೆಂದೂ ಕರೆಯಲಾಗಿದೆ.

ಅನುಭಾವ ಮಾರ್ಗದಲ್ಲಿ ವಿರಕ್ತಿ, ಶೋಧನೆ ಏರ್ಪಟ್ಟು ಅಹಂಭಾವ ಸಂಪೂರ್ಣ ನಾಶವಾಗುತ್ತದೆ. ಯೋಗ, ಇಂದ್ರಿಯನಿಗ್ರಹ, ಯಮ-ನಿಯಮಾದಿಗಳ ಪಾಲನೆ, ಅಂತ್ಯದಲ್ಲಿ ಸಮಾಧಿಸ್ಥಿತಿ ತಲುಪುವುದು ಇವರ ಗುರಿ. ಒಟ್ಟಾರೆ ಈ ಅನುಭಾವಿಗಳು ಧ್ಯಾನದಿಂದ ಮತ್ತು ಆತ್ಮಾರ್ಪಣಾ ಭಾವದಿಂದ ಪರಮಾತ್ಮನಲ್ಲಿ ಐಕ್ಯವಾಗುವಂತಹ ಮುಮುಕ್ಷುಗಳು ಇವರಾಗಿರುತ್ತಾರೆ. ಇಂಥ ಮಾರ್ಗದಲ್ಲಿ ನಡೆದ ಪಂಥಗಳು ಮುಖ್ಯವಾಗಿ ಇಂತಿವೆ.

೧. ಸೂಫಿ ಪಂಥದ ಅನುಭಾವಿಗಳು

೨. ಉತ್ತರ ಭಾರತದ ಕಬೀರ-ನಾನಕರ ಮಾರ್ಗ

೩. ಮಧ್ಯಕಾಲೀನ ಭಗವದ್ಭಕ್ತರು

೪. ಮಹಾರಾಷ್ಟ್ರದ ಮತ್ತು ಬಂಗಾಳದ ಸಂತರು

೫. ತಮಿಳುನಾಡಿನ ಆಳ್ವಾರರು ಮತ್ತು ನಾಯನ್ಮಾರರು

೬. ಕರ್ನಾಟಕದ ಶಿವಶರಣರು

೩. ೧. ಶರಣರಲ್ಲಿನ ಆತ್ಮಲಿಂಗವಾದಿಗಳು

ಕರ್ನಾಟಕದ ಇತಿಹಾಸದಲ್ಲಿ ೧೨ನೇ ಶತಮಾನವು ಧಾರ್ಮಿಕ, ಸಾಮಾಜಿಕ, ಆರ್ಥಿಕ ಸುಧಾರಣಾ ದೃಷ್ಟಿಯಿಂದ ಮಹತ್ತರ ಕಾಲಘಟ್ಟ. ಈ ಘಟ್ಟದಲ್ಲಿ ಶೈವ ಮತ್ತು ವೈದಿಕ ಧರ್ಮಗಳ ಪ್ರಭಾವದಿಂದ ಅನೇಕ ಅಸಂಗತಗಳು ತಲೆದೋರಿ, ಕಂದಾಚಾರ ಪದ್ಧತಿಗಳು ಬೆಳೆದು ಧರ್ಮದ ತತ್ವಗಳು ನಿಜಾಚರಣೆಯಲ್ಲಿ ನಿಷ್ಕ್ರಿಯವಾಗಿದ್ದವು. ಧರ್ಮ ನಿಂತ ನೀರಾಗಿದ್ದು, ದೇವಾಲಯಗಳನ್ನಾಳುತ್ತಿದ್ದ ಪುರೋಹಿತರು, ಪೂಜಾರಿಗಳು ಶಾಸ್ತ್ರ, ತಿಥಿ, ವಾರ, ನಕ್ಷತ್ರ, ಪಂಚಾಂಗ ಶುಭ-ಅಶುಭ ಇತ್ಯಾದಿಗಳ ಹೆಸರಿನಲ್ಲಿ ಸಾಮಾನ್ಯ ಜನತೆಯನ್ನು ಭಯ ಭೀತಿಗೊಳಿಸಿದ್ದರು. ಹಾಗೆಯೇ ಇವುಗಳ ಪರಿಹಾರಕ್ಕೆ ತಮ್ಮ ಬಳಿಗೇ ಬರುವಂತೆ ಮಾಡಿಕೊಂಡು ಸುಖ-ಜೀವನಕ್ಕೆ ದಾರಿ ಮಾಡಿಕೊಂಡಿದ್ದರು. ಒಟ್ಟಾರೆ ನಂಬಿಕೆ ಮತ್ತು ಸಂಪ್ರದಾಯಗಳಲ್ಲಿ ಗೊಡ್ಡುತನ ಬೆಳೆದು ಸಾಮಾನ್ಯ ಜನರ ಜೀವನ ಕ್ರಮ ಉಸಿರುಕಟ್ಟುವಂತಿತ್ತು. ಇಂಥ ಪರಿಸ್ಥಿತಿಯಲ್ಲಿ ಹುಟ್ಟಿಬಂದ ಶರಣರು ತಮ್ಮ ನಡೆ-ನುಡಿಯಿಂದ ಕಂಡುಂಡ ಅನುಭವಗಳನ್ನು ವಚನ ರೂಪದಲ್ಲಿ ಹೇಳುತ್ತಾ ಸಾಮಾಜಿಕ ಚಳುವಳಿ ಪ್ರಾರಂಭಿಸಿದರು.

ರಾಜಕೀಯ ಅಶಾಂತಿ, ಮತಘರ್ಷಣೆ, ಜೈನಧರ್ಮದ ಅವನತಿ, ಕಂದಾಚಾರ, ಯಜ್ಞ ಯಾಗಾದಿ ಹಿಂಸೆಗಳು ಜನರಿಗೆ ಬೇಸರವನ್ನುಂಟು ಮಾಡಿದ್ದವು. ಇಂಥ ಕಟ್ಟಳೆಯಿಂದ ಹೊರಬರಲು ಜನತೆ ಹಾತೊರೆಯುತ್ತಿತ್ತು. ಆಗ ಹುಟ್ಟಿದ ವಚನ ಚಳುವಳಿಗೆ ಸಮಾಜದ ಎಲ್ಲಾ ವರ್ಗದ ಜನತೆ ಲಿಂಗಭೇದ ಮರೆತು, ಜಾತಿ, ಮತಭೇದ ಮರೆತು ಪಾಲ್ಗೊಂಡರು. ವೈಧಿಕ ವಿರೋಧಿ ಮನೋಧರ್ಮವನ್ನು ಹುಟ್ಟುಹಾಕುತ್ತಾ ಸಾಮಾನ್ಯ ಜನತೆಯಲ್ಲಿ, ಸಮಾನತೆ, ಸ್ವಾತಂತ್ರ್ಯ-ಸಾಮರಸ್ಯ-ವೃತ್ತಿ ಗೌರವವನ್ನು ಈ ಚಳುವಳಿ ಬೆಳೆಸಿತು. ಪ್ರಗತಿಪರ ಧೋರಣೆಯಿಂದ ಹುಟ್ಟಿಬಂದ ಇದು ಇಷ್ಟಲಿಂಗ ಸಂಸ್ಕೃತಿಯನ್ನು ಸಾರಿತು. ಸಮಾಜ ಕೇಂದ್ರಿತವಾಗಿದ್ದ ಈ ಚಳುವಳಿಯ ನೇತಾರರಾಗಿದ್ದವರು ಬಸವಣ್ಣ, ಅಲ್ಲಮಪ್ರಭು, ಚನ್ನಬಸವಣ್ಣ, ಸಿದ್ಧರಾಮ, ಅಕ್ಕಮಹಾದೇವಿ ಇತ್ಯಾದಿ ಶರಣರು. ವಿಶಿಷ್ಟ ವ್ಯಕ್ತಿತ್ವದಿಂದ ಪ್ರಭಾವ ಬೀರಿದ ಇವರು ನುಡಿದ ಅನುಭಾವದ ನುಡಿಗಳು ಸಮಾಜದ ಎಲ್ಲಾ ವರ್ಗದ ಜನತೆಯನ್ನು ತನ್ನೆಡೆಗೆ ಆಕರ್ಷಿಸಿದವು. ಇವರ ಅನುಭಾವದ ನುಡಿ ಆಧ್ಯಾತ್ಮದ ಅನುಭವ ನೀಡುವ ಅನುಭಾವ ಸಾಹಿತ್ಯವಾಯಿತು; ಅನುಭಾವದ ಮಾರ್ಗವಾಯಿತು.

''ಪರಮಾತ್ಮ ಜೀವಾತ್ಮ ಇವುಗಳ ಸಂಬಂಧದಿಂದ ಉಂಟಾಗುವ ಅಮೃತತತ್ವ ಅನುಭಾವದ ಮೂಲಭೂತವಾದ ತಳಹದಿ. ದೇವನೊಡನೆ ಸಮರಸಗೊಂಡು ಅಮೃತತತ್ವವನ್ನು ಪಡೆಯಬೇಕೆಂದು ಜೀವನದ ನಿರಂತರ ಹಂಬಲವನ್ನು ಕೈಗೂಡಿಸಿ ಕೊಡುವ ಸಾಧನೆಯೇ ಅನುಭಾವ ಮಾರ್ಗ.''[೨] ಇಂಥ ಶರಣ-ಶರಣೆಯರ ಮಾರ್ಗ ಜಗತ್ತಿನ ಇತಿಹಾಸದಲ್ಲಿ ಸೇರಿದೆ. ''ಈ ಶರಣರ ಮಾರ್ಗದಲ್ಲಿಯೇ ವಿಲಕ್ಷಣರೂಪದ, ವೈರಾಗ್ಯ ಮನೋಧರ್ಮದ ಆತ್ಮವಾದಿಗಳ ಗುಂಪೊಂದು ಇತ್ತು. ಅಲ್ಲಮಪ್ರಭು, ಅಜಗಣ್ಣ, ಸಿದ್ಧಾರಾಮನಂಥವರ ಈ ಮಾರ್ಗವನ್ನು ನಂತರದ ಅನೇಕ ಯೋಗಿಗಳು, ಆರೂಢರು, ನಾಥರು, ಅವಧೂತರು, ತತ್ವಪದಕಾರರು ಮುಂದುವರೆಸಿಕೊಂಡು ಬಂದಿದ್ದಾರೆ. ಅಲ್ಲಮನ ನಡೆದಾಟ, ಅವನು ಭೇಟಿಮಾಡುವ ಜನ, ಅವರೊಡನೆ ನಡೆಸುವ ಚರ್ಚೆ, ಇವೆಲ್ಲ ಮಧ್ಯಕಾಲದ ಸೂಫಿ, ನಾಥ, ಆರೂಢ, ಪಂಥದ ಗುಣಗಳು.''[೩] ಅಲ್ಲಮ ದೈಹಿಕವಾಗಿ ಮಲಿನ ಮತ್ತು ವಿಲಕ್ಷಣ ರೂಪದವ, ಈ ಸ್ಥಿತಿಯಲ್ಲಿಯೇ ತಿರುಗಾಡುತ್ತಾ ಮುಕ್ತಾಯಕ್ಕ, ಬಸವಣ್ಣ, ಸಿದ್ಧರಾಮ, ಗೋರಕ್ಷರನ್ನು ಭೇಟಿಯಾಗುತ್ತಾನೆ. ಅಲ್ಲಮನ ಮಲಿನತೆ, ಜಾತ್ಯತೀತ ನಿಲುವು ಆ ಕಾಲದ ಮಡಿವಂತಿಕೆಯನ್ನು ಜಾತಿ, ಮತ, ಪಂಥವನ್ನು ತಿರಸ್ಕರಿಸುವಂತಿರುತ್ತದೆ. ಶಿವಗಣ ಪ್ರಸಾದಿ ಮಹಾದೇವಯ್ಯಗಳ ಶೂನ್ಯ ಸಂಪಾದನೆಯಲ್ಲಿ ಅಲ್ಲಮ ಕಲ್ಯಾಣವನ್ನು ಪ್ರವೇಶಿಸುವ ಪ್ರಸಂಗದ ಚಿತ್ರಣ ಒಬ್ಬ ಅವಧೂತನ ವರ್ಣನೆಯಂತೆಯೇ ಕಾಣುತ್ತದೆ.

ಮತ್ತೆ ಬರುವನೆಂದು ಕಲ್ಯಾಣದ ಶಿವಶರಣರಿಗೆಲ್ಲ ಹೇಳಿದಂತೆ, ತಮ್ಮ ಪಾದಯಾತ್ರೆಯನ್ನು ಮುಗಿಸಿ, ಮರಳಿ ಕಲ್ಯಾಣಕ್ಕೆ ಒಬ್ಬ ಮರುಳನ (ಅವಧೂತ) ರೂಪದಲ್ಲಿ ಬರುತ್ತಾರೆ. ಆದರೆ ಅವರೇ ಪ್ರಭುದೇವರೆಂಬುದಕ್ಕೆ ಅವರ ಹೊರ ವೇಷ ಎಂದಿನಂತಿರುವುದಿಲ್ಲ. ಬರುತ್ತಿರುವ ಅಲ್ಲಮಪ್ರಭುವನ್ನು ತೋರಿಸುತ್ತಾ ಬಸವಣ್ಣನವರು ಚನ್ನಬಸವಣ್ಣನಿಗೆ ಹೇಳುತ್ತಾರೆ. ''ತಲೆಯೆಲ್ಲಾ ಕೆದರಿದೆ, ಅವರ ನಡೆ ತೊನೆಯುತ್ತಿದೆ, ಹಣೆಯ ಮೇಲೆ ಬುಗುಟಿದೆ, ಅಂಗೈಯ ಲಿಂಗದ ಮೇಲೆ ದೃಷ್ಟಿನಟ್ಟು ಬಹಿರಂಗದ ಅವಧಾನ ತಪ್ಪಿ, ಎಡವಿಬಿದ್ದು ಹುಬ್ಬು ಒಡೆದಿದೆ. ಕಿವಿ ಹರಿದಿದೆ, ಧಾರೆಧಾರೆಯಾಗಿ ಮೈಮೇಲೆ ರಕ್ತ ಸ್ರವಿಸಿ ಅದರ ಮೇಲೆಲ್ಲಾ

ಧೂಳು ಮುಸುಕಿದೆ. ಬೆನ್ನೆಲ್ಲಾ ಬಾರೆದ್ದಿದೆ. ಮೈಯೆಲ್ಲಾ ಮುಳ್ಳು ತರಚಿದ ಘಾಯವಾಗಿದೆ. ಪಿರ್ರೆಯೆಲ್ಲಾ ಕಪ್ಪುಹಿಡಿದು ಅಲ್ಲಿ ದಿಗಂಬರವಾಗಿರುವ ಪ್ರಭುದೇವರ ಮೈಯೆಲ್ಲಾ ಬಣಗುಟ್ಟುತ್ತಿದೆ. ಮೊಣಕಾಲು ಮುಂಗಾಲು ಬೆರಳು ಗಾಯಗಳಿಂದ ರಟ್ಟು ಕಟ್ಟಿದೆ. ಅಯ್ಯ ಚೆನ್ನಬಸವಣ್ಣ ನೋಡು ಪ್ರಭುದೇವರ ಆಕಾರ ಅದೆಷ್ಟು ಭಯಂಕರ ದಯನೀಯವಾಗಿದೆ ಎನ್ನುತ್ತಾರೆ. ಅದಕ್ಕೆ ಚನ್ನಬಸವಣ್ಣ ಪ್ರಭುದೇವರ ಪರಿ ತೋರಿಸುತ್ತಾ ನಿಂತರೆ ನೆರಳಿಲ್ಲ, ನಡೆದರೆ ಹೆಜ್ಜೆಯಿಲ್ಲ, ಈ ಜಂಗಮವೇ ಹೀಗೆ ಲೌಕಿಕದ ರೀತಿಯದಲ್ಲ ಎನ್ನುತ್ತಾರೆ. ಮಡಿವಾಳ ಮಾಚಯ್ಯನವರು ಪ್ರಭುದೇವರನ್ನು ಕುರಿತು, ಅವರು ಒಮ್ಮೆ ಬಾಲಕನಂತೆ, ಒಮ್ಮೆ ಲೋಲನಂತೆ, ಒಮ್ಮೆ ಮುದುಕನಂತೆ, ಒಮ್ಮೆ ಮದೋನ್ಮತ್ತನಂತೆ ರೂಪ ಧರಿಸುತ್ತಾರೆ: ಒಮ್ಮೆ ಕಾಣುತ್ತಾರೆ, ಒಮ್ಮೆ ಕಣ್ಮರೆಯಾಗುತ್ತಾರೆ. ಒಮ್ಮೆ ಇಲ್ಲಿದ್ದರೆ ಮರುಕ್ಷಣವೇ ಮತ್ತೆಲ್ಲಿಯೋ ಕಾಣಿಸಿಕೊಳ್ಳುತ್ತಾರೆ''[೪] ಎನ್ನುತ್ತಾರೆ. ಇಲ್ಲಿ ಅಲ್ಲಮನ ಚಿತ್ರಣವು ಅವಧೂತನಂತೆ ಚಿತ್ರಣಗೊಂಡಿದ್ದು, ಅವಧೂತರು ಮಲಿನತೆಯನ್ನು ಶ್ರೇಷ್ಠವೆಂದು ಒಪ್ಪಿರುವಂತೆ ಅಲ್ಲಮನ ವಿಲಕ್ಷಣ ರೂಪ ಇಲ್ಲಿದೆ.

ಭಕ್ತಿಪಂಥದಲ್ಲಿ ಮೇಲುವರ್ಗದವರೆಲ್ಲಾ ಧರ್ಮವೆಂದರೆ ಶಿಷ್ಟ ಧರ್ಮ, ಸಾಹಿತ್ಯವೆಂದರೆ ಶಿಷ್ಟ ಸಾಹಿತ್ಯ ಎಂಬ ಅರೆ ತಿಳುವಳಿಕೆಯನ್ನು ನಂಬಿ ಶೈವ-ವೈಷ್ಣವದಂತಹ ಧರ್ಮಗಳನ್ನು ನಂಬಿದವರು, ಮಧ್ಯಕಾಲೀನ ಕರ್ನಾಟಕದಲ್ಲಿ ಹುಟ್ಟಿದ ಅನುಭಾವಮಾರ್ಗವು ಮತ್ತು ವಚನ ಚಳುವಳಿಯಲ್ಲಿದ್ದ ಆತ್ಮವಾದಿಗಳ ಮಾರ್ಗವು ನಮ್ಮಲ್ಲಿದ್ದ ಧಾರ್ಮಿಕ ನಂಬಿಕೆ ಮತ್ತು ಸಾಮಾಜಿಕ ಕಟ್ಟುಪಾಡುಗಳನ್ನು ಕಿತ್ತೆಸೆಯಲು ಪ್ರೇರೇಪಿಸಿತು. ಆಗ ಸಹಜವಾಗಿ ಆತ್ಮಲಿಂಗಿಗಳಾದ ಅನುಭಾವಿಗಳಿಗೂ, ಇಷ್ಟಲಿಂಗಿಗಳಾದ ಭಕ್ತರಿಗೂ ವ್ಯತ್ಯಾಸ ಕಂಡುಬಂದಿತು. ಆಧ್ಯಾತ್ಮಮಾರ್ಗದಿಂದ ವಂಚಿತವಾಗಿದ್ದ ಹಲವಾರು ವರ್ಗದ ಜನತೆ, ಮೂಲಧಾರ್ಮಿಕ ವಿರೋಧಿ ನಡತೆಯನ್ನು ಹುಟ್ಟುಹಾಕಿದ್ದರಿಂದ ಸಿದ್ಧ ಸಂಪ್ರದಾಯದಂತಹ ಹಠಯೋಗಿ ಪರಂಪರೆ ನಮ್ಮಲ್ಲಿ ತಲೆ ಎತ್ತಲು ಕಾರಣವಾಯಿತು. ಆ ಸಿದ್ಧಸಂಪ್ರದಾಯದಲ್ಲೆ ಬರುವ ನಾಥ, ಆರೂಢ, ಅವಧೂತ ಮೊದಲಾದ ಪಂಥಗಳು ಶಿಷ್ಟ ಧರ್ಮಗಳಿಗೆ ಪ್ರತಿಯಾಗಿ ಬೆಳೆದವು. ''ಗೋರಖನಾಥ ಹಾಗೂ ಮಚ್ಛೇಂದ್ರನಾಥರನ್ನು ಮೂಲಗುರುಗಳೆಂದು ನಂಬಿರುವ ನಾಥಯೋಗಿಗಳನ್ನು ಸಿದ್ಧ ಅಥವಾ ಜೋಗಿ ಎಂದು ಕರೆಯಲಾಗುತ್ತಿತ್ತು. ಸಿದ್ಧ, ಜೋಗಿ ಎಂಬ ಹೆಸರುಳ್ಳ ನೂರಾರು ಬೆಟ್ಟ-ಗುಹೆ-ಕೊಳ್ಳ-ಊರುಗಳು ಕರ್ನಾಟಕದಲ್ಲಿವೆ. ಇವು ಈ ಪಂಥದ ವ್ಯಾಪಕತೆ ಮತ್ತು ಜನಪ್ರಿಯತೆಗಳನ್ನು ಸೂಚಿಸುತ್ತದೆ. ಮುಂದೆ ಕರ್ನಾಟಕದಲ್ಲಿ ಬಂದ ನೂರಾರು ಅವಧೂತರು, ಆರೂಢರು, ತತ್ವಪದಕಾರರು ನಾಥ-ಸಿದ್ಧಪಂಥಕ್ಕೆ ಸಂಬಂಧವುಳ್ಳವರೇ ಆಗಿದ್ದಾರೆ.''[೫] ಇದೇ ಕಾಲದಲ್ಲಿ ಉತ್ತರದಿಂದ ಬಂದು ನೆಲೆಯೂರುತ್ತಿದ್ದ ಸೂಫಿ ಪಂಥದ ಜೊತೆ ಇವರು ಸಖ್ಯ ಬೆಳೆಸಿಕೊಂಡರು. ಸೂಫಿ ಪಂಥದ ಸಂತರೂ ಸಹ ಸಿದ್ಧ ಪಂಥದವರಂತೆ ಅನುಭಾವಿಗಳು. ''ಲಿಂಗ ಕಟ್ಟಿದ ಶರಣರ ಪ್ರಭಾವ ತಗ್ಗಿದಂತೆ ಯೋಗಪಂಥಗಳು ಮತ್ತೆ ಚೈತನ್ಯ ಪಡೆದವು. ಸೂಫಿಗಳು ಸಹಜವಾಗಿ ಇಂತಹ ಅನುಭಾವ ಪಂಥಗಳ ಜೊತೆ ಸೇರಿಕೊಂಡರು. ನಿರಾಕಾರವಾದಿ ಇಸ್ಲಾಮಿಗೂ ಇದು ಪ್ರಿಯವಾದ ಚಿಂತನೆ ಆಗಿತ್ತು.''[೬]

ಸಿದ್ಧರು, ಆರೂಢರು, ಅವಧೂತರು ಲೋಕಹಿತವನ್ನು ಸಾಧಿಸುವುದಕ್ಕೆ ಹೊರಟವರು. ಲೋಕದ ಆಸೆಯಿಲ್ಲದೆ, ಸಂಗದಲ್ಲಿದ್ದು ನಿಸ್ಸಂಗಿಯಾಗಿದ್ದರೆಂಬುದನ್ನು ತಮ್ಮ ಆಚಾರ-ವಿಚಾರಗಳಿಂದಲೇ ವ್ಯಕ್ತಪಡಿಸಿ

ದವರು. ರಾಜಯೋಗ-ಹಠಯೋಗದಂತಹ ಯೌಗಿಕ ಮಾರ್ಗಗಳನ್ನು ಅನುಸರಿಸಿ ಅದ್ವೈತ ಸಿದ್ಧಿಯನ್ನು ಸಾಧಿಸಿ ಕೊಂಡಿದ್ದವರು.

೩. ೨. ನೂರೊಂದು ವಿರಕ್ತರಲ್ಲಿನ ಪ್ರಭೇದ

ಈ ಪರಂಪರೆಯನ್ನು ಮುಂದುವರೆದು ಗುರುತಿಸುವುದಾದರೆ ಮಧ್ಯಕಾಲೀನ ಕರ್ನಾಟಕದಲ್ಲಿ ಹುಟ್ಟಿದ ವಿಜಯನಗರದ ಅರಸರು ರಾಜಕೀಯ ಅಭ್ಯುದಯದೊಡನೆ, ಸಾಹಿತ್ಯ-ಸಂಸ್ಕೃತಿ-ಸಂವರ್ಧನೆಗೂ ಕಾರಣವಾಗಿದ್ದಾರೆ. ಅವರ ವಿದ್ಯಾಪ್ರೇಮ, ಕಲಾಭಿಮಾನ, ಧರ್ಮನಿಷ್ಠೆ ಹಾಗೂ ಸಾಹಿತ್ಯದ ಅಭಿಮಾನ ಅಪಾರ. ''೧೫ನೇ ಶತಮಾನದ ವಿಜಯನಗರದ ದೊರೆ ಪ್ರೌಢದೇವರಾಯನ ಮಹಾಮಂತ್ರಿ ಲಕ್ಕಣ್ಣ ದಂಡೇಶನು ತನ್ನ ಶಿವತತ್ವ ಚಿಂತಾಮಣಿಯಲ್ಲಿ ಉಲ್ಲೇಖಿಸಿದ ೬೦೦ ಕ್ಕೂ ಮಿಕ್ಕಿನ ನೂತನ ಗಣಂಗಳ ಕಾಲ ಮುಗಿಯುತ್ತಿದ್ದಂತೆಯೇ ನೂರೊಂದು ವಿರಕ್ತರು ಉದಯರಾಗಿ ವೀರಶೈವಧರ್ಮವನ್ನುದ್ಧರಿಸಿದರೆಂಬ ಸಂಗತಿ ಬರುತ್ತದೆ.''[೭] ಭಕ್ತ್ಯಾವೇಶದಿಂದ ಬಣ್ಣಿಸಿರುವ ಚರಲಿಂಗಮೂರ್ತಿಗಳು ೧೦೧ ವಿರಕ್ತರೇ ಆಗಿರಬಹುದೆಂದು ಕೆಲ ಪದ್ಯಗಳಿಂದ ತಿಳಿಯುತ್ತದೆ. ''ಬಿಟ್ಟ ಜಡೆಗಳ ದಿಗಂಬರದ ಶಿವಲಿಂಗದೊಳು ನಟ್ಟ ದೃಷ್ಟಿಯ.... ಈ ರೀತಿಯ ವಿರಕ್ತರ ವೇಷಭೂಷಣಗಳ ಚಿತ್ರಣಬರುತ್ತದೆ. ಹಾಗಾಗಿ ಇಂಥ ವಿರಕ್ತರಲ್ಲೆ ಕೆಲವರು ಲೌಕಿಕವಾಗಿ ಬಾಳಿ ಅಲೌಕಿಕ ವ್ಯಕ್ತಿತ್ವ ಸಿದ್ಧಿಯನ್ನು ಪಡೆದುಕೊಂಡವರಿದ್ದಾರೆ. ಕೆಲವರಂತೂ ಜಗಕೆ ತಾಮರುಳು ತನಗೆ ಜನ ಮರುಳು ಎಂಬಂತೆ ಲೀಲಾಮೂರ್ತಿಗಳಾಗಿ, ಲೋಕದ ಕಣ್ಣಿನಲ್ಲಿ ಹುಚ್ಚರಂತೆ ತೋರಿದರೂ ಶಿವಯೋಗದ ನಿಬ್ಬೆರಗಿನಲ್ಲಿ ಅಂಗಲೀಲೆಯನ್ನು ಮರೆದ ಮಹಾನುಭಾವಿಗಳಾಗಿದ್ದವರು.[೮] ವಿಜಯನಗರದ ಅರಸ ಪ್ರೌಢದೇವರಾಯನ ಆಶ್ರಯದಲ್ಲಿ ನಡೆದ ವಚನಸಂಕಲನ ಕಾರ್ಯಚಟುವಟಿಕೆಗಳೆಲ್ಲವೂ ವೀರಶೈವರಿಗೆ ಒಂದು ಧಾರ್ಮಿಕ ಚೌಕಟ್ಟನ್ನು ನಿರ್ಮಿಸಿ, ಮಿತಿಯನ್ನು ಹೇರಿದಂತೆ ಕಾಣುತ್ತಿದ್ದವು. ಈ ಕಾಲದಲ್ಲಿ ಆರೂಢ ಪಂಥ ಬೆಳೆದಿರುವಂತೆ ಕಾಣುತ್ತಿದೆ. ಆರೂಢರು (ಯೌಗಿಕ ಪಂಥದವರು) ಬಂಧನಗಳಿಂದ ಮುಕ್ತರಾದವರು. ಜೀವನ್ಮುಕ್ತರಾಗಿ, ಮೌನಕ್ಕೆ ಹೆಚ್ಚು ಗಮನವಿರಿಸಿದವರು. ದೇಹ-ಮನಸ್ಸು-ಆತ್ಮದ ಶುದ್ಧೀಕರಣವೇ ಇವರ ಮುಖ್ಯ ಗುರಿಯಾಗಿತ್ತು. ಧರ್ಮ, ಜಾತಿ ಅವುಗಳನ್ನು ಪ್ರತಿನಿಧಿಸುವ ಸಂಕೇತಗಳನ್ನು ನಿರಾಕರಿಸುವ ಪಂಥವಿದು.[೯] ಇಂಥವರೆಲ್ಲಾ ವಿಜಯನಗರದ ಸುತ್ತ-ಮುತ್ತಲಿನ ಪ್ರದೇಶದಲ್ಲಿದ್ದು, ಅನುಭಾವ ಮಾರ್ಗದಲ್ಲಿ ನಡೆದವರಾಗಿದ್ದಾರೆ. ಹಂಪಿ ಪ್ರದೇಶದಲ್ಲಿದ್ದ ೧೦೧ ವಿರಕ್ತರ ಚಟುವಟಿಕೆಗಳನ್ನು ವಿರೋಧಿಸುತ್ತಿದ್ದ ಕೆಲವರು ಅದೇ ಸಮಯದಲ್ಲಿ ಉತ್ತರಭಾಗದಿಂದ ದಕ್ಷಿಣದ ಕಡೆ ಆಗಮಿಸುತ್ತಿದ್ದ ಸೂಫಿ ಪಂಥದ ಜೊತೆ ಸಖ್ಯ ಬೆಳೆಸಿಕೊಂಡು ಆಧ್ಯಾತ್ಮಿಕ ಬದುಕನ್ನು ಕಟ್ಟಿಕೊಂಡರು. ಸೂಫಿಗಳು ಕೂಡ ಮೂಲ ಇಸ್ಲಾಂ ಧರ್ಮದಿಂದ ಬೇರೆಯಾಗಿದ್ದು ಪ್ರೇಮತತ್ವವನ್ನು ಸಾರುತ್ತಿದ್ದರು. ಈ ಎಲ್ಲಾ ಪಂಥಗಳು ವ್ಯಕ್ತಿಗಳ ಸಾಧನೆಯನ್ನು ಅವಲಂಬಿಸಿದ್ದವು. ಜಾತಿ, ಮತ, ಪಂಥಗಳನ್ನು ಮೀರಿದ ವ್ಯಕ್ತಿತ್ವವನ್ನು ಹೊಂದಿದ್ದ ಇವರುಗಳಲ್ಲಿ ವಿಭಿನ್ನ ಮನೋಧರ್ಮದವರನ್ನು ಸಹ ಕಾಣಬಹುದು. ಅವರುಗಳಲ್ಲಿ ಚಾಮರಸ, ಕಲ್ಲುಮಠದ ಪ್ರಭುದೇವರಂಥ ಉದ್ದಾಮ ಕವಿ ಮತ್ತು ಅನುಭಾವಿಗಳನ್ನೂ, ಗುರುಬಸವನಂಥ ವೀರಶೈವ ವೇದಾಂತ ಬೋಧಕರನ್ನೂ, ನಿರ್ವಾಣಿ ಬೋಳೇಶ-ಬತ್ತಲೇಶ್ವರರಂಥವರು ಅನುಭಾವದ ಹಾಡುಗಳನ್ನು ಬರೆದವರಿದ್ದರು. ''ಕೆಲವು ವಿರಕ್ತರ ಆಚರಣೆಗಳು

[illegible]

ಬಾಹ್ಯನೋಟಕ್ಕೆ ಮರುಳಾಗಿ ತೋರಿದರೂ, ಅಂತರಂಗದಲ್ಲಿ ಪರಶಿವತ್ವದ ಮೂಲ ರಹಸ್ಯವನ್ನು ತಿಳಿದವ ರಾಗಿದ್ದರು. ಬಹಿರಂಗದಲ್ಲಿ ಕ್ರಿಯೆ, ಅಂತರಂಗದಲ್ಲಿ ಅರಿವು, ಈ ಉಭಯವೊಂದಾದ ಮಹಾತ್ಮರ ನಡವಳಿಕೆ ವಿಚಿತ್ರವಾಗಿದ್ದರೂ ಸತ್ಯವಾಗಿ ತೋರಿದೆ. ಅವರು ಅಘಟಿತ ಘಟನಾ ನೂತನ ಬ್ರಹ್ಮರು. ವಿಪರೀತ ಚರಿತರು. ಅವರು ಆಚರಿಸಿದ ಕಾಯಕಗಳೆಲ್ಲಾ ಸಹಜ ಲೀಲೆಗಳು. ನೂರೊಂದು ವಿರಕ್ತರ ಜೀವನದಲ್ಲಿ ನಡೆದ ಒಂದೊಂದು ಘಟನೆಗಳು ಮೋದಿಯ ರುದ್ರನ ಕಾವ್ಯದಲ್ಲಿ ಒಂದೊಂದು ಪವಾಡವೆಂಬಂತೆ ವರ್ಣಿತ ವಾಗಿವೆ.''[೧೦] ವೀರಶೈವ ಪರಿಕಲ್ಪನೆಯ ವಿರಕ್ತರಿಗೆ ಭಿನ್ನವಾಗಿದ್ದ ಈ ನೂರೊಂದು ವಿರಕ್ತ ಜನರು ಒಂದು ರೀತಿ ವಾಮಾಚಾರಿಗಳಂತೆಯೇ ಅರೆ ಮರುಳ ಸ್ಥಿತಿಯವರಾಗಿಯೇ ಇದ್ದಾರೆ. ಇಂಥವರನ್ನು ಪರಿಶುದ್ಧ ವಿಚಾರದ ವೀರಶೈವ ವಿರಕ್ತರೆಂದು ಒಪ್ಪುವುದಾದರೂ ಹೇಗೆ, ಆದುದರಿಂದ ಒಂದು ಬಗೆಯ ವಾಮಾಚಾರದ ಶಿವೋಪಾಸಕರಂತಿರುವ ಇವರು ನಾಥಪಂಥೀಯರಂತೆ ಕಾಣುತ್ತಾರೆ. ಈ ಪಂಥದ ಸಂತರಿಗೆ ಅವಧೂತರೆಂದು ಹೆಸರು. ನೂರೊಂದು ವಿರಕ್ತರ ಸ್ಥಿತಿಯೂ ಅವಧೂತರನ್ನು ನೆನಪಿಸುತ್ತದೆ.[೧೧] ಇಲ್ಲಿ ಕಾಣುವ ಮುಖ್ಯ ಅಂಶವೆಂದರೆ ವೀರಶೈವ ವಿರಕ್ತರಲ್ಲಿ ಅವಧೂತ ಪರಂಪರೆಯೊಂದು ಈ ಕಾಲದಲ್ಲಿ ಬೆಳೆಯುತ್ತಾ ಬಂದಿದೆ. ಇವರ ಈ ಸ್ಥಿತಿಗೆ ಆ ಕಾಲದ ಸಾಮಾಜಿಕ, ಧಾರ್ಮಿಕ ಪರಿಸರವೇ ಕಾರಣ. ಸಹಜವಾಗಿಯೇ ಇವರು ಸಮಾಜದಿಂದ ದೂರವಿದ್ದು ಬೆಟ್ಟ-ಗವಿ-ಕೊಳ್ಳಗಳಲ್ಲಿ ವಾಸವಾಗಿದ್ದು ಯೋಗ ಸಾಧನೆ ಮಾಡಿರುತ್ತಾರೆ. ಮಾನಸ ಪೂಜೆ ಮತ್ತು ಜ್ಞಾನಮಾರ್ಗಕ್ಕೆ ಹೆಚ್ಚಿನ ಮಹತ್ವ ನೀಡಿದ ಇವರು ವಿಶಿಷ್ಟ ಸ್ವಭಾವದ ಅನುಭಾವಿಗಳಾಗಿದ್ದಾರೆ.

ಲೌಕಿಕ ಜೀವನದ ಬಗ್ಗೆ ಜಿಗುಪ್ಸೆ ಹೊಂದಿದ್ದು, ಜಗತ್ತಿನ ನೋವುಗಳು, ಆಸೆ-ನಿರಾಸೆಗಳು, ದುಃಖ-ದುಮ್ಮಾನಗಳು, ಚಂಚಲತೆ, ಅತೃಪ್ತಿ, ಅಸಮಾಧಾನ, ಅರ್ಥಹೀನ ಆಚರಣೆಗಳು, ಇಂಥವುಗಳಿಂದ ಬೇಸತ್ತು ಸಾಮಾಜಿಕ ಜೀವನದ ಬಗ್ಗೆಯೇ ಜಿಗುಪ್ಸೆ ಹೊಂದಿರುತ್ತಾರೆ. ಮನೆ, ಮಠ, ಹೆಂಡತಿ, ಮಕ್ಕಳು, ಬಂಧು-ಬಳಗ ಇವುಗಳನ್ನೆಲ್ಲಾ ತ್ಯಜಿಸಿ ಬಂಧನದಿಂದ ಹೊರಬಂದಿರುತ್ತಾರೆ. ಮಾನ-ಅಭಿಮಾನಗಳನ್ನು ಬಿಟ್ಟು ವೈರಾಗ್ಯಮೂರ್ತಿಗಳಾಗಿದ್ದು, ಮೌನಕ್ಕೆ, ಏಕಾಂಗಿತನಕ್ಕೆ ಹೊಂದಿಕೊಂಡಿರುವ ಇವರು ಸದಾ ಧ್ಯಾನಮಗ್ನರಾಗಿರುತ್ತಾರೆ. ಅಂತರಂಗದಲ್ಲಿ ಪರಶಿವನನ್ನು ಸಾಕ್ಷಾತ್ಕರಿಸಿಕೊಂಡ ಇವರು ಗುರು ಮತ್ತು ಶಿಷ್ಯರ ಸಂಬಂಧಕ್ಕೆ ಹೆಚ್ಚಿನ ಮಹತ್ವ ನೀಡಿರುತ್ತಾರೆ. ಅನುಭಾವಮಾರ್ಗದಲ್ಲಿ ಗುರುವಿನ ಸ್ಥಾನ ಶ್ರೇಷ್ಠವಾಗಿದ್ದು, ಸಾಧನೆಯಲ್ಲಿ ತೊಡಗಿದ ಇಂಥ ಯೌಗಿಕ ಪಂಥಗಳ ಅನುಭಾವಿಗಳು ಜಾತ್ಯತೀತ ಗುರುವನ್ನು ಶ್ರಮ ವಹಿಸಿ ಹುಡುಕಿ ಪಡೆದುಕೊಳ್ಳುತ್ತಾರೆ. ಇವರಿಗೆ ಗುರು ಯಾವುದೇ ಜಾತಿಗೆ ಸೇರಿದ್ದರೂ ಯೋಗ್ಯತೆಯೇ ಮುಖ್ಯ ವಾಗಿರುತ್ತದೆ. ಶಿಷ್ಯನು ಗುರುಸ್ಥಾನಕ್ಕೆ ಅಧೀನನಾಗಿದ್ದು, ಗುರುವೇ ದೈವ, ಗುರುವಿಲ್ಲದೆ ದಾರಿಯಿಲ್ಲವೆಂದು ನಂಬಿರುತ್ತಾರೆ. ಲೋಕದ ನಡೆಯು ನನಗೆ ಸಂಬಂಧವಿಲ್ಲ ಎನ್ನುವ ನಿರ್ಲಿಪ್ತ ಮನೋಭಾವದ ಈ ಯೋಗಿಗಳು ಕ್ಷಣಿಕವಾದ ಈ ಜಗತ್ತಿನಿಂದ ದೂರವಾಗಿ ಅನಂತತೆಯೊಂದಿಗೆ ಲೀನವಾಗುತ್ತಾರೆ. ಅಂದರೆ ಮೋಕ್ಷ ಹೊಂದು ವುದು ಇಲ್ಲವೆ ನಿರ್ವಾಣ ಸ್ಥಿತಿ ತಲುಪುವುದು ಇವರುಗಳ ಗುರಿ. ನಿರ್ವಾಣವೆಂದರೆ ವ್ಯಕ್ತಿಯು ಕಾಲ-ದೇಶಗಳಿಂದ ಬದ್ಧವಾದ ಈ ಜಗತ್ತಿನಿಂದ ದೂರವಾಗುವುದೆಂದು ಬುದ್ಧ ತಿಳಿಸಿದ್ದಾನೆ. ಪ್ರಾಚೀನ ಹಾಗೂ ಮಧ್ಯಕಾಲೀನ ಸಮಾಜದಲ್ಲಿ ಜಗತ್ತಿನ ಎಲ್ಲಾ ಭಾಗಗಳಲ್ಲಿಯೂ ಹುಟ್ಟಿಕೊಂಡಂಥ ಭಕ್ತಿ ಚಳುವಳಿಗಳು ತಮ್ಮ ಹಿಂದಿನ ಸಾಂಸ್ಥಿಕಗೊಂಡಂಥ ಎಲ್ಲಾ ಧಾರ್ಮಿಕ, ಸಾಮಾಜಿಕ ಸ್ವರೂಪಗಳನ್ನು ವಿಮರ್ಶಿಸುತ್ತಾ, ಇಲ್ಲವೇ ವಿರೋಧಿಸುತ್ತಾ

[illegible]

ಬೆಳೆದಿರುವುದು ಗಮನಾರ್ಹವಾಗಿದೆ. ಶ್ರೇಷ್ಠರಾದ ಅನುಭಾವಿಗಳು ಹುಟ್ಟಿರುವುದು ಕೂಡ ಇಂಥ ಕಾಲದಲ್ಲಿಯೇ. "ಅನುಭಾವದ ಮುಖ್ಯ ಸ್ವರೂಪಗಳಲ್ಲಿ ಒಂದು ಎಂದು ಹೇಳಬಹುದಾದದ್ದು ಎಂದರೆ ವ್ಯಕ್ತಿಯ ಆಧ್ಯಾತ್ಮಿಕ ಔನ್ನತ್ಯವೊಂದಕ್ಕೆ ಅದು ಕೊಡುವ ಪ್ರಾಶಸ್ತ್ಯ. ಈ ಪ್ರಾಶಸ್ತ್ಯದಿಂದಾಗಿ ವ್ಯಕ್ತಿಯು ತನ್ನನ್ನೇ ತಾನು ಅರಿಯುವ ಮಿತಿಯನ್ನು ವಿಸ್ತರಿಸಿಕೊಳ್ಳುವ ಪ್ರಯತ್ನಗಳು ಪ್ರಮುಖ ಸ್ಥಾನ ಪಡೆದಿವೆ."[೧೨]

೧೭ ಮತ್ತು ೧೮ನೇ ಶತಮಾನದ ವೇಳೆಗೆ ವೀರಶೈವ ಧರ್ಮ ಸಾಂಸ್ಥಿಕ ಧರ್ಮವಾಗುತ್ತಿದ್ದಂತೆ, ಇದರಿಂದ ಹೊರಗುಳಿದ ವಿರಕ್ತರು ಇಷ್ಟಲಿಂಗ ಸಂಸ್ಕೃತಿಯನ್ನು ವಿರೋಧಿಸುತ್ತಾ, ಗುರು-ಶಿಷ್ಯರ ಸಂಯೋಗ ದೀಕ್ಷಾಪ್ರಕ್ರಿಯೆಯನ್ನು ಮುಖಾಮುಖಿ ಸಂಯೋಗದ ಅನುಭವ ಮಾರ್ಗವಾಗಿ ಅಳವಡಿಸಿಕೊಂಡರು. ಇವರುಗಳಲ್ಲಿ ಕೆಲವರು ವಚನ ಚಳುವಳಿಯ ಆಶಯವನ್ನು ಮುಖ್ಯವಾಗಿಟ್ಟುಕೊಂಡ ಸಾಂಸ್ಕೃತಿಕ ನಾಯಕರನ್ನು ಕಾಣುತ್ತೇವೆ. ಇವರು ಜನ ಸಮುದಾಯದಲ್ಲಿ ಪ್ರಭಾವ ಬೀರಿ ಒಕ್ಕಲುಗಳನ್ನು ಪಡೆದಿದ್ದಾರೆ. ವಚನಗಳನ್ನು, ತತ್ವಪದಗಳನ್ನು ಕೆಲವರು ರಚಿಸಿ ಸಾಹಿತ್ಯಿಕ ಕೊಡುಗೆ ನೀಡಿದರೆ, ಕೆಲವರು ತಮ್ಮ ನಡೆಗಳಿಂದಲೇ ಸಾಮಾಜಿಕ ಬದಲಾವಣೆ ತಂದಿದ್ದಾರೆ. ಮೌನಕ್ಕೆ, ಏಕಾಂತಕ್ಕೆ ಮಹತ್ವ ನೀಡಿದ ಕೆಲವರು ಸಾಹಿತ್ಯ ರಚಿಸಲಿಲ್ಲ. ನುಡಿದ ಕೆಲ ನುಡಿಗಳೇ ಸಾಂಕೇತಿಕ ಅರ್ಥ ಪಡೆಯುತ್ತಿದವು.

ಉತ್ತರ ಕರ್ನಾಟಕದಕಡೆ ಕೊಡೇಕಲ್ಲು ಮತ್ತು ಸಾವಳಗಿ ಶಿವಲಿಂಗನ ಪರಂಪರೆಯನ್ನು, ಮಧ್ಯ ಕರ್ನಾಟಕದಲ್ಲಿ ಪಂಚಗಣಾಧೀಶರ ಪರಂಪರೆಯನ್ನು, ದಕ್ಷಿಣ ಕರ್ನಾಟಕದಲ್ಲಿ ಮಂಟೇಸ್ವಾಮಿ ಮತ್ತು ಮಲೆಮಾದೇಶ್ವರ ಸ್ವಾಮಿ ಪರಂಪರೆಯನ್ನು ಕಾಣಬಹುದು. ಇವರೆಲ್ಲಾ ವೀರಶೈವಧರ್ಮದ ಸಾಂಸ್ಥಿಕತೆಯನ್ನು ನಿರಾಕರಿಸಿದವರು. ಇಂಥ ಅನುಭಾವಿಗಳ ಮತ್ತು ವಿರಕ್ತರ ಪ್ರಭಾವ ಸಮಾಜದ ಮೇಲೆ ಗಾಢವಾಗಿತ್ತೆಂಬುದಕ್ಕೆ ಕನ್ನಡ ಜನಪದ ಗೀತೆಗಳಲ್ಲಿಯೂ ವಿವರಿಸಲಾಗಿದೆ.

ನೂರೊಂದು ಶರಣಾರು ನೂರೊಂದು ಬಂದಾರು
ಸಾರಿ ಹೇಳ್ಯಾನು ಒಕ್ಕಲಿಗೋ ಹೊಲಸುಗ್ಗಿ
ಧೀರ ಕಾಯಕದ ದಿನವೆಂದೊ ||
ನೂರೊಂದು ತಲಗಳಲಿ ನೂರೊಂದು ಶರಣರಿಗೆ
ಸಾರವನು ತತ್ತ್ವ ಪ್ರಭುದೇವ ಚನ್ನಬಸವ
ಮೀರಿದರು ನಾನಾ ದೀವಟಿಗೆ [೧೩]

ಅಂದಿನ ಜನತೆಯಲ್ಲಿ, ಅವರ ಜೀವನದಲ್ಲಿ, ಆಚಾರ ವಿಚಾರಗಳಲ್ಲಿ ಅನುಭಾವಿಗಳ ತತ್ತ್ವದ ಮಾತುಗಳು, ನಡತೆಗಳು, ಅವರ ಹೋರಾಟ ಮುಂತಾದವು ಪ್ರಭಾವ ಬೀರಿವೆ. ಕರ್ಮ, ಜ್ಞಾನ, ವೈರಾಗ್ಯ, ಭಕ್ತಿ ಇವುಗಳನ್ನೊಳಗೊಂಡ ಅನುಭಾವಮಾರ್ಗ ಜನತೆಯ ಮೇಲಾಗಿರುವುದನ್ನು ಕಾಣುತ್ತೇವೆ. ಪ್ರತಿಷ್ಠಿತ ತತ್ತ್ವ ಶಾಸ್ತ್ರಜ್ಞರ ಸ್ಥಾಪಿತ ಧರ್ಮಗಳ ಆಚಾರ್ಯ ಪರಂಪರೆಗಿಂತ ಭಿನ್ನವಾದ ಆಧ್ಯಾತ್ಮಿಕ, ಅನುಭಾವಿಕ ಚಟುವಟಿಕೆಗಳು ಸ್ಥಳೀಯ ಮಟ್ಟದಲ್ಲಿ ಚರಿತ್ರೆಯುದ್ದಕ್ಕೂ ಸಮಾನಾಂತರವಾಗಿ ಹರಿದುಬಂದಿವೆ. "ಹೆಚ್ಚಾಗಿ ಕೆಳಸ್ತರದ ಶ್ರಮಜೀವಿ ವರ್ಗದ ನಡುವೆ ಇದ್ದ ಈ ಚಟುವಟಿಕೆಯ ಕೇಂದ್ರಗಳು ತೋಂಡಿ ಸಂಪ್ರದಾಯವನ್ನೂ,

[illegible]

ದೇಶಿಭಾಷೆಗಳನ್ನೂ ಬಳಸಿಕೊಂಡು ಜನಪ್ರಿಯವಾಗಿವೆ. ಅದರಲ್ಲೂ ಕರ್ನಾಟಕದಲ್ಲಿ ೧೭, ೧೮, ೧೯ನೇ ಶತಮಾನಗಳಲ್ಲಿ ಇವು ಸಾಂಸ್ಥಿಕ ಮತಗಳ ಅಬ್ಬರಗಳ ನಡುವೆ ನಿಂತು, ಪುರೋಹಿತ ಶಾಹಿಗಳ ಧರ್ಮ ದರ್ಪದ ವಿರುದ್ಧ ಜನರನ್ನು ಆಕರ್ಷಿಸಿ ವಿಕಿರಣಗಳನ್ನು ಸೂಸುತ್ತಲೇ ಬದುಕಿದವು.''[೧೪]

ಸೂಫಿಸಂತರು, ಆರೂಢರು, ಅವಧೂತರು, ಸಿದ್ಧರು, ತತ್ವಪದಕಾರರು ಧರ್ಮವನ್ನು ಜಾತಿ, ಮತ, ಲಿಂಗಾತೀತವಾಗಿ ನೀಡಿದರು. ಖಾಜಾ ಅಮಿನುದ್ದೀನ್, ಶಿರಹಟ್ಟಿ ಫಕೀರೇಶ, ತಿಂತಿಣಿ ಮೋನಪ್ಪ, ಕಡಕೋಳ ಮಡಿವಾಳಪ್ಪ, ಶಿಶುನಾಳ ಶರೀಫ, ಶಿಲವೇರಿ ಶಿವಪ್ಪ, ಕೈವಾರ ತಾತಯ್ಯ, ಯರ್ರಿತಾತ ಮೊದಲಾದವರು ''ಎಲ್ಲಾ ಜಾತಿಯ ಮರಗಳನ್ನು ಹೊಟ್ಟೆಯಲ್ಲಿಟ್ಟುಕೊಂಡ ಒಂದು ಕಾಡು ಇದ್ದಂತೆ.''[೧೫] ಒಟ್ಟಾರೆ ಶರಣರಿಗೂ, ಸೂಫಿಗಳಿಗೂ, ಅವಧೂತರಿಗೂ, ಹರಿದಾಸರಿಗೂ ಸಮಾನ ಅಂಶವಿರುವುದು ಸಾಂಸ್ಥಿಕ ಧರ್ಮಗಳನ್ನು ವಿರೋಧಿಸುವ ವಿಷಯದಲ್ಲಿ. ಇವರೆಲ್ಲಾ ಜಾತಿ, ಮತ, ಲಿಂಗಭೇದಗಳನ್ನು ಮುಖ್ಯವಾಗಿಸದೆ ಪ್ರಾಮಾಣಿಕ ಭಕ್ತಿ ಸಾಧನೆಯನ್ನು ಮೆರೆದವರಾಗಿದ್ದಾರೆ.

ಯೌಗಿಕ ಪಂಥಗಳ ಅವಧೂತರು, ಆರೂಢರು, ಸಿದ್ಧರು, ನಾಥರು ಎಂದು ಕರೆಸಿಕೊಳ್ಳುವ ಸಂತರು, ಅನುಭಾವಿಗಳು ೧೭-೧೯ ನೇ ಶತಮಾನದಲ್ಲಿ ತಮ್ಮ ಅನುಭಾವಿಕ ವ್ಯಕ್ತಿತ್ವದಿಂದಲೇ ಜನಸಾಮಾನ್ಯರನ್ನು ಆಕರ್ಷಿಸಿದರು. ಸಮಾಜದಲ್ಲಿ ತುಂಬಿದ್ದ ಅರಾಜಕತೆಯನ್ನು ಕಮ್ಮಿಮಾಡಲು ಇವರು ಪರೋಕ್ಷವಾಗಿ ಕಾರಣರಾದರು. ಹಾಗೆ ನೋಡಿದರೆ ಈ ಸಂತ ಪರಂಪರೆಯವರು ವ್ಯಕ್ತಿಗತವಾಗಿ ದೇವರನ್ನು ಸಾಕ್ಷಾತ್ಕರಿಸಿ ಕೊಳ್ಳಬೇಕೆಂದು ನಂಬಿದ್ದವರು. ಅಂಥ ಅನುಭವಕ್ಕಾಗಿ ತನ್ಮಯತೆಯನ್ನು ಪಡೆಯಲು ಲೌಕಿಕದ ಕಟ್ಟುಪಾಡು ಗಳನ್ನು ಬದಿಗೊತ್ತಿ ತಮ್ಮ ಒಳದನಿಗೆ ಮಾತ್ರ ಓಗೊಡುವ ಸ್ಥಿತಿಗೆ ಬದ್ಧರಾದರು. ತಾವು ಸಾಧನೆಯಿಂದ ದಕ್ಕಿಸಿಕೊಳ್ಳುವ ಅನುಭಾವಿಕ ಶಕ್ತಿಗೆ ಶರಣಾಗಿ ಅದರ ಜೊತೆ ಮೌನಸಂಧಾನವನ್ನು ನಿರಂತರವಾಗಿ ನಡೆಸಿ, ಅನುಭಾವದ ಆತ್ಯಂತಿಕ ಗತಿಗೆ ಯತ್ನಿಸಿದವರು. ತಮ್ಮ ಸಾಧನೆಗೆ ಆರಂಭದಲ್ಲಿ ಗುರುವಿನ ನೆರವನ್ನು ಉತ್ಕಟವಾಗಿ ಬಯಸಿದರು. ವ್ಯಕ್ತಿಗತವಾಗಿ ತಮ್ಮ ಆತ್ಮೋನ್ನತಿಗಾಗಿ ಧ್ಯಾನ, ಯೋಗದಲ್ಲಿ ನಿರತರಾಗಿ ಲೌಕಿಕದ ವ್ಯಾಮೋಹವನ್ನು ಕಳೆದುಕೊಂಡು ಯೋಗಿಗಳಾದರು. ಇಂಥ ಯೋಗಿಗಳು ಯಾವುದೇ ಧರ್ಮವನ್ನು ಪ್ರತಿಪಾದಿಸಿದವರಲ್ಲ. ಅವರು ಯಾವುದೇ ಜಾತಿಯಲ್ಲಿ ಹುಟ್ಟಿರಬಹುದು. ಆ ಜಾತಿ-ಧರ್ಮವನ್ನು ಅವರು ಪ್ರಚಾರ ಮಾಡುವ ಯಾವುದೇ ಕೆಲಸಕ್ಕೆ ಕೈ ಹಾಕಲಿಲ್ಲ. ಅಧಿಕಾರ, ಸಂಪತ್ತು, ಭೋಗವನ್ನು ಖಂಡಿಸಿದರು.[೧೬]

ಒಟ್ಟಾರೆ ೧೨ನೇ ಶತಮಾನದ ವಚನ ಚಳುವಳಿಯಲ್ಲಿದ್ದ ಆತ್ಮವಾದಿಗಳು, ೧೫ನೇ ಶತಮಾನದಲ್ಲಿ ಕಂಡುಬಂದ ವಿಜಯನಗರದ ಪ್ರೌಢದೇವರಾಯನ ಕಾಲದ ನೂರೊಂದು ವಿರಕ್ತರಲ್ಲಿದ್ದ ವಿಶಿಷ್ಟ ಸ್ವಭಾವ ವಿರಕ್ತರು ಕಂಡು ಬರುತ್ತಾರೆ. ಇಂಥ ಪರಂಪರೆಯಲ್ಲಿ ಅವಧೂತ ಪರಂಪರೆಯೊಂದು ಬೆಳೆದು ಬಂದಿರುವುದನ್ನು ಕಾಣಬಹುದು.

೩. ೩. ಸಾಹಿತ್ಯದ ಹಿನ್ನೆಲೆ

ಕನ್ನಡ ಸಾಹಿತ್ಯದಲ್ಲಿ ಅವಧೂತರನ್ನು ಕುರಿತು ಬಂದಿರುವ ಕೃತಿಗಳು ವಿರಳ. ಕಾರಣ ಅವಧೂತರುಗಳು

[illegible]

[illegible]

[illegible]

ಸಾಮಾನ್ಯವಾಗಿ ಕವಿಗಳಲ್ಲ. ೧೫ನೇ ಶತಮಾನದಲ್ಲಿ ಸಪ್ತಕಾವ್ಯವನ್ನು ಬರೆದಿರುವ ಗುರುಬಸವನ 'ಅವಧೂತ ಗೀತೆ'ಯೇ ಪೂರ್ಣಪ್ರಮಾಣದ ಕೃತಿಯೆಂದು ಕಾಣುತ್ತದೆ. ಆದರೆ ಅದಕ್ಕಿಂತಲೂ ಮುಂಚೆ ಕೆಲವೊಬ್ಬ ಕವಿಗಳು ಸಂದರ್ಭ ಸನ್ನಿವೇಶಕ್ಕೆ ಅನುಸಾರವಾಗಿ ತಮ್ಮ ಕೃತಿಗಳಲ್ಲಿ 'ಅವಧೂತ' ಪದದ ಅರ್ಥ ವ್ಯಾಪ್ತಿಯನ್ನು ಉಲ್ಲೇಖಿಸಿರುವುದು ತಂಡುಬರುತ್ತದೆ.

ಪಂಪನು ತನ್ನ ಆದಿಪುರಾಣದ ಪೀಠಿಕಾ ಭಾಗದಲ್ಲಿ ತೀರ್ಥಂಕರನ ಪೂರ್ವ ಭವಾವಳಿಯ ಕತೆಯನ್ನು ನಿರೂಪಿಸುವಾಗ ಅವಧೂತನೆಂಬ ಪದವನ್ನು ಬಳಸಿದ್ದಾನೆ. ಆದಿತೀರ್ಥಂಕರನಾದ ಆದಿನಾಥ ತನ್ನ ಹಿಂದಿನ ಹನ್ನೊಂದನೆ ಜನ್ಮದಲ್ಲಿ ಶ್ರೀಷೇಣನೆಂಬರಸನಿಗೆ ಜಯವರ್ಮನೆಂಬ ರಾಜಪುತ್ರನಾಗಿರುತ್ತಾನೆ. ತಾನೆ ಹಿರಿಯವನಾಗಿದ್ದರೂ ತನ್ನನ್ನು ಕಡೆಗಣಿಸಿ ಕಿರಿಯವನಾದ ಶ್ರೀವರ್ಮನಿಗೆ ಪಟ್ಟಕಟ್ಟಿದ್ದರಿಂದ ಖಿನ್ನನಾಗಿ ಮುಂದಿನ ಜನ್ಮದಲ್ಲಾದರೂ ಪಟ್ಟದ ದೊರೆಯಾಗಬೇಕೆಂದು ಬಯಸಿ, ಎಲ್ಲವನ್ನು ತ್ಯಜಿಸಿ ಸನ್ಯಾಸದೀಕ್ಷೆ ವಹಿಸುತ್ತಾನೆ. "ಆ ಜಯವರ್ಮನುಂ ಅವಮಾನ ಪವಮಾನವಧೂತನಾಗಿ ಪೋಗಿ"[೧೭] ಎಂದು ಜಿಗುಪ್ಸೆ ಗೊಂಡ ಜಯವರ್ಮನ ಸ್ಥಿತಿಯನ್ನು ಅವಧೂತನಿಗೆ ಹೋಲಿಸಿ ಬರೆದಿದ್ದಾನೆ.

ಬಾಚಿಕಾಯಕದ ಬಸವಣ್ಣ ಎನ್ನುವ ಶರಣ ಬಡಗಿ ಕಾಯಕ ಮಾಡುತ್ತಿದ್ದ. ತನ್ನ ಕಾಯಕಕ್ಕೆ ಸಂಬಂಧಿಸಿದ ಹೋಲಿಕೆಗಳನ್ನು ತನ್ನ ವಚನಗಳಲ್ಲಿ ಹೇಳಿದ್ದಾನೆ.

ಆರುದರ್ಶನವೆಲ್ಲ ಎನ್ನ ಬಾಚಿಯ ಕಲೆ
ಮಿಕ್ಕಾದ ಮೀರಿದ ಅವಧೂತರುಗಳೆಲ್ಲ
ಎನ್ನ ಉಳಿಯೊಳಗಣ ಒಡಪು
ಇಂತೀ ಮೀರಿ ವೇಧಿಸಿ ಭೇದಿಸಹೆನೆಂಬರೆಲ್ಲ
ಎನ್ನ ಕೊಡತಿಯಡಿಯಲ್ಲಿ ಬಡೆಯಿಸಿಕೊಂಬ ಬಡಿಹೋರಿಗಳು

ತನ್ನ ಕಾಯಕದಲ್ಲೆ ಜ್ಞಾನವನ್ನು, ಅರಿವನ್ನು ಕಾಣುತ್ತಿದ್ದು ಆರು ದರ್ಶನವನ್ನೇ ಮೀರಿದ ಅವಧೂತರುಗಳೆಲ್ಲ ಎನ್ನ ಕಾಯಕದ ವಸ್ತುವಿನಲ್ಲಿದ್ದಾರೆಂದು ತಿಳಿಸಿದ್ದಾನೆ.

ಗುರುಲಿಂಗ ವಿಭು(೧೫೫೦) ತನ್ನ ಭಿಕ್ಷಾಟನಚರಿತೆಯಲ್ಲಿ ಭಿಕ್ಷೆಗೆ ಬಂದ ಶಿವನನ್ನು ವರ್ಣಿಸುವಾಗ, ಅವನನ್ನು ಅವಧೂತನೆಂದು ಕರೆದಿದ್ದಾನೆ.

"ಭವಗೇಡಿಯಾಗಿ ಬಯಸದೆ ಬಂದ ಭಿಕ್ಷಮಂ
ಸವಿದು ಚರಿಪವಧೂತ ಬಂದು ಭಿಕ್ಷಾ ಎಂದ
ಭವನು ಶ್ರೀಕೃಷ್ಣನರಮನೆಯೊಳಗೆ ಭಿಕ್ಷಾಧ್ವನಿಯನುಚ್ಚರಿಸುತ್ತಿರ್ದನು"[೧೮]

ಶಿವನು ಧ್ವಾರಾವತಿಗೆ ಹೋಗಿ ಭಿಕ್ಷಾಟನವನ್ನು ಮಾಡಿ ತನ್ನ ಭಿಕ್ಷಾಪಾತ್ರೆಯಾದ 'ಅಜಕಪಾಲ'ವನ್ನು ಹಿಡಿದುಕೊಂಡು ಕೃಷ್ಣನ ಮನೆಯಲ್ಲಿ ಭಿಕ್ಷೆ ಕೇಳುವ ಸನ್ನಿವೇಶದಲ್ಲಿ ಬಯಸದೆ ಬಂದ ಪದಾರ್ಥವನ್ನು ಸವಿದು ಸಂಚರಿಸುತ್ತಿರುವ ಅವಧೂತನು (ಶಿವ) ಶ್ರೀ ಕೃಷ್ಣನ ಅರಮನೆಯ ಮುಂದೆ ನಿಂತು ಭಿಕ್ಷಾ ಎಂಬ ಶಬ್ಧವನ್ನು ಉಚ್ಛರಿಸುತ್ತಿದ್ದನು ಎಂದು ವರ್ಣಿಸಿದ್ದಾನೆ.

[illegible]

[illegible]

[illegible]

[illegible]

[illegible]

[illegible]

ಗುಬ್ಬಿಯ ಮಲ್ಲಣ್ಣಾರ್ಯನು ತನ್ನ ವೀರಶೈವಾಮೃತ ಪುರಾಣದಲ್ಲಿ,

"ಅವಧೂತನೆನಿಸಿ ಹುಟ್ಟಿಲ್ಲದ ನಿಜಾವಯಂ
ಭುವಿಯೊಳಾರೂಢ ನಿರವಯನೆನಿಸಿ ಪರುಷದಿಂ
ದವಯಧಿಕನೆನಿಸಿರ್ದ ಗುರುಪಾದ ಪಂಕಜಂಗಳ ನಾವು ಕೀರ್ತಿಸುವೆವು"[೧೯]

ಎಂದು ಸ್ಮರಿಸಿದ್ದಾರೆ. ಲಕ್ಷ್ಮೀಶನು ತನ್ನ ಜೈಮಿನಿ ಭಾರತದ ೫ನೇ ಸಂಧಿಯಲ್ಲಿ ಉಪಕಥೆಯೊಂದನ್ನು ಹೇಳುವಾಗ 'ಅವಧೂತ'ನ ಸ್ವಭಾವವನ್ನು ತಿಳಿಸಿದ್ದಾನೆ. ಕರಂದಮನೆಂಬ ರಾಜನ ಮಗ ವಿವಕ್ಷಿಯು ಯಜ್ಞವನ್ನು ಮಾಡಲು ಅಂಗೀರಸನ ಮಗನಾದ ಬೃಹಸ್ಪತಿಯನ್ನು ಕೇಳಲು, ಅದಕ್ಕೆ ಇಂದ್ರನು ವಿರೋಧಿಸುತ್ತಾನೆ. ಆಗ ರಾಜ ವಿವಕ್ಷಿಯು ಭಂಗಿತನಾಗಿ ನಾರದರನ್ನು ಕಾಣುತ್ತಾನೆ. ನಾರದರು ಆತನನ್ನು ಸಂತೈಸಿ, ಬೃಹಸ್ಪತಿಯ ತಮ್ಮನಾದ ಸಂವರ್ತನಿಂದ ಯಜ್ಞವನ್ನು ನೆರವೇರಿಸೆಂದು ತಿಳಿಸುತ್ತಾ, ಆ ಸಂವರ್ತನು ಯಾರು? ಎಲ್ಲಿದ್ದಾನೆ? ಹೇಗಿದ್ದಾನೆ? ಎಂಬುದರ ಮಾಹಿತಿ ನೀಡುತ್ತಾರೆ.

ಜನಪ ನಿನಗೆಚ್ಚರಿಪೆನಾದಿಯೊಳ್ ಪಂಕಜಾ
ಸನನ ಮಾನಸಪುತ್ರನಾದನಂಗಿರಸನವನ
ತನುಜರ್ ಬೃಹಸ್ಪತಿಯುಮಿನ್ನೊರ್ವ ಸಂವರ್ತನೆಂಬವಂ ಬಳಿಕವರ್ಗೆ
ದಿನದಿನಕೆ ದಾಯಾದ ಮತ್ಸರಂ ಪೆರ್ಚುತಿರೆ
ಮನೆವಾಳ್ತೆಯೊಳ್ ಪಸುಗೆಯಂ ಕುಡದೆ ಗುರು ತಗು
ಳ್ದನುಜನಂ ಪೊರಮಡಿಸೆ ಕಾಶಿಯೊಳ್ ಪೋಗಿರ್ಪನಾತನವಧೂತನಾಗಿ

ಮನೆಯ ವಿಷಯಕ್ಕೆ ಅಣ್ಣ ತಮ್ಮಂದಿರಲ್ಲಿ ಅಸಮಾಧಾನವಾಗಿ ದಿನದಿಂದ ದಿನಕ್ಕೆ ದಾಯಾದಿಮತ್ಸರ ಹೆಚ್ಚಾಗಿ, ಜಿಗುಪ್ಸಿತನಾಗಿ, ವೈರಾಗ್ಯ ಬಂದು, ಎಲ್ಲವನ್ನು ತ್ಯಜಿಸಿದ ಸಂವರ್ತನು ಅವಧೂತನಾಗಿ ಕಾಶಿಯಲ್ಲಿ ತಿರುಗಾಡುತ್ತಿದ್ದಾನೆಂದು ಕವಿ ಹೇಳಿದ್ದಾನೆ.

ಆತನಂ ವರಿಸಿದೊಡೆ ಯಜ್ಞಮಾದಪುದು ನಿನ
ಗೇತಕಿನ್ನೆಣಿಕೆ ನಡೆ ಕಾಶಿ ಪಟ್ಟಣದೊಳಾ
ತಪೋನಿಧಿ ನಿನ್ನ ಕಣ್ಗೆ ಗೋಚರಿಸದಿರೆ ಪೊಳಲ ಪೆರ್ಬಾಗಿಲೊಳಗೆ
ಘಾತಿಯಾಗಿರ್ದ ಪೆಣನಂ ಬಿಸುಡಿಸದನಖಿಳ
ಜಾತಿಗಳ ತುಳಿದು ಕೊಂಡಡೆಯಾಡುತಿರ್ಪವವ
ಧೂತನಾಗಿರ್ದವಂ ಕಂಡು ತೊಲಗಿದಡರಿದು ಬೆಂಬಿಡದೆ ಪೋಗೆಂದನು

ಕಾಶಿ ಪಟ್ಟಣದ ಹೆಬ್ಬಾಗಿಲಿನಲ್ಲಿ ಒಂದು ಹೆಣವನ್ನು ಹಾಕು, ಎಲ್ಲರೂ ಅದನ್ನು ತುಳಿದರೆ, ಅವಧೂತನಾದ ಸಂವರ್ತ ಮಾತ್ರ ಅದನ್ನ ತುಳಿಯುವುದಿಲ್ಲ. ಆಗ ಅವನೇ ಅವಧೂತನಾದ ಸಂವರ್ತನೆಂದು ತಿಳಿದು, ಅವನ ಹಿಂದೆಯೇ ಹೋಗೆಂದನು.

ಪೊಕ್ಕಲ್ಲಿ ಪೊಕ್ಕು ಬೆಂಬಿಡದೆ ನೀಂ ಬರೆ ಕಂಡು
ಸಿಕ್ಕಿದೆತ್ತಣದೆಂದು ಬಯ್ದಪಂ ಪೊಯ್ದಪಂ
ಮುಕ್ಕಳಿಸಿ ಮೇಲುಗುಳ್ದಪನೇನನಾದೊಡಂ ಮಾಡುವಂ ನೀನದಕ್ಕೆ
ಹೆಕ್ಕಳಿಸಿ ಹಿಮ್ಮೆಟ್ಟದಿರ್ದೊಡಾರೊರೆದರೆ।
ನ್ನಿಕ್ಕೆಯಂ ಪೇಳೆಂದವಂ ಕೇಳ್ದೊಡೆನ್ನನಿದಿ
ರಿಕ್ಕಿ ನಾರದನರಿಪಿ ತಾಂ ಕಿಚ್ಚಿನೊಳ್ ಬಿದ್ದನೆಂದುಸಿರ್ ಪೋಗೆಂದನು ॥ [೨೦]

ಹೀಗೆ ನಾರದರು ಅವಧೂತನ ಲಕ್ಷಣ, ಸ್ವಭಾವವನ್ನು ಲಕ್ಷ್ಮೀಶನು ವಿವರಿಸಿದ್ದಾನೆ.

ಅನುಭವಾಮೃತವನ್ನು ಬರೆದ ಮಹಾಲಿಂಗರಂಗನು ೧೭ನೇ ಶತಮಾನದವನಾಗಿದ್ದು; ಸಂಸ್ಕೃತ ತಿಳಿಯದ ಕನ್ನಡಿಗನಿಗೆ ಇದೊಂದು "ಅಖಿಲ ವೇದಾಂತಾರ್ಥವನು ಸಂಗ್ರಹಿಸಿ ಪೇಳುವೆ, ಸಕಲಂಗೆ ತಿಳಿಯುವಂತೆ" ಎಂದಿದ್ದಾನೆ. ಈ ಕೃತಿಯಲ್ಲಿ ಅಧಿಕಾರಿ ಲಕ್ಷಣ, ವೈರಾಗ್ಯ ಪ್ರಕರಣ, ತ್ವಂಪದಾರ್ಥ ಶೋಧನೆ, ತತ್ವಪದಾರ್ಥ ಶೋಧನೆ, ಹಸಿಪದಾರ್ಥ ನಿರ್ಣಯ, ಸಪ್ತಭೂಮಿಕೆಗಳ ಅಭ್ಯಾಸ, ಪರಮಾತ್ಮಪದ ನಿರೂಪಣೆ, ನಿರ್ಗುಣಾರಾಧನೆಯ ನಿರ್ಣಯ; ಹೀಗೆ ಆಧ್ಯಾತ್ಮಮಾರ್ಗ ಅನುಸರಿಸಿದ ಅನುಭಾವಿಗೆ ಮೋಕ್ಷದ ಮಹತ್ವವನ್ನು ತಿಳಿಸುವ ಕೃತಿಯಾಗಿದೆ. ವೈರಾಗ್ಯದ ಸ್ಥಿತಿಯನ್ನು ಹೇಳುತ್ತಾ -

ಹೆಂಡಿರೇತಕೆ? ಮಕ್ಕಳೇತಕೆ?
ಬಂಡಿ ತುಂಬಿದ ಧನವದೇತಕೆ?
ಮಂಡೆ ತುಂಬಿದ ಬಳಗ ವಿದ್ದೇನಹುದು? ಯಮಭಟರು ॥
ಚಂಡ ಪಾಶದಿ ಕಟ್ಟಿ ಖಳನನು
ಕೊಂಡು ಹೋಹಂದಿನಲಿ ಹಿತವರು।
ಕಂಡು ಬಿಡಿಸುವರುಂಟೆ? ಯಾರಿದ್ದೇನು ಫಲವೆಂದ ॥

ಹೆಂಡಿರು, ಮಕ್ಕಳು, ಬಂಧು, ಬಳಗ ಯಾರಿದ್ದರೂ ಪ್ರಯೋಜನವಿಲ್ಲ. ಪ್ರಯೋಜನವಿಲ್ಲದ ಇವರಲ್ಲಿ ಬಂಧನದಲ್ಲಿರುವುದು ವ್ಯರ್ಥ ಎಂದು ವೈರಾಗ್ಯದ ಚಿತ್ರಣ ನೀಡಿದ್ದಾರೆ. ಮುಂದೆ ಜೀವನ್ಮುಕ್ತನ ವ್ಯಕ್ತಿತ್ವವನ್ನು ತಿಳಿಸುತ್ತಾ, ಜೀವನ್ಮುಕ್ತನಿಗೆ ವರ್ಣಾಶ್ರಮಗಳಿಲ್ಲ, ಧರ್ಮಗಳ ನೆಲೆಯಿಲ್ಲದವ, ಯಾವ ವಿಧಿ ನಿಯಮ ಗಳಿಲ್ಲದವನೆಂದು ತಿಳಿಸುತ್ತಾರೆ.

ಆವ ವರ್ಣಾಶ್ರಮದ ತೊಡಕೆ
ಲ್ಲಾವ ವೈದಿಕ ಲೌಕಿಕಂಗಳು
ಯಾವುವೂ ತನಗಿಲ್ಲ, ಬಗೆಯನು ವಿಧಿ ನಿಷೇಧಗಳ ॥
ಕೇವಲಾನಂದಾನುಭವ ಶಿವ
ಭಾವವೇ ತಾನಾಗಿ ಸರ್ವವ
ಪಾವನವ ಮಾಡುತ್ತ ಜೀವನ್ಮುಕ್ತನಾಗಿಹನು ॥[೨೧]

ಅತಿವರ್ಣಾಶ್ರಮಿಯಾದ ಜೀವನ್ಮುಕ್ತನೇ ಅವಧೂತನೆಂದು ಅವನಿಗೆ ಯಾವ ನಿಯಮಗಳಿಲ್ಲವೆಂಬುದನ್ನೂ ತಿಳಿಯಬಹುದು. ವೇದವ್ಯಾಸರು ಶುಕನಿಗೆ ಆಧ್ಯಾತ್ಮ ಪ್ರಪಂಚದ ಹಲವು ವಿಧಿಗಳನ್ನು ಹೇಳುವಂತೆ ಮಹಲಿಂಗ ರಂಗನು ಅನುಭವಾಮೃತವನ್ನು ಬರೆದಿದ್ದಾನೆ.

೧. ಸ್ವರವಚನಗಳು : ೧೨ನೇ ಶತಮಾನದ ಶರಣರು ಕುಲವೇಳು ಹದಿನೆಂಟು ಜಾತಿಗಳು ಒಂದೇ ಎಂದು ಸಾರಿದ್ದ ಆಶಯ, ನಂತರದ ಶತಮಾನದಲ್ಲಿ ವೀರಶೈವಧರ್ಮದ ಸಾಂಸ್ಥಿಕ ಪ್ರಕ್ರಿಯೆಯಿಂದ ಒಡೆದುಹೋಯಿತು. ವೀರಶೈವ ಧರ್ಮದ ಆಚಾರಮಾರ್ಗದಿಂದ ಅನೇಕ ಸಮುದಾಯಗಳು ಹೊರಗುಳಿದವು. ಹೀಗೆ ಹೊರಗುಳಿದ ಸಮುದಾಯಗಳಲ್ಲಿ ಕೆಳವರ್ಗದ ಕಾಯಕ ಜೀವಿಗಳ ಮತ್ತು ಕುಶಲಕರ್ಮಿಗಳ ಸಂಖ್ಯೆ ಹೆಚ್ಚಿದೆ. ಇಂತಹ ಸಂದರ್ಭದಲ್ಲಿ ಕೆಳವರ್ಗದ ಸಾಂಸ್ಕೃತಿಕ ನಾಯಕರಾದ ಮಂಟೇಸ್ವಾಮಿ ಮತ್ತು ಮಲೆಮಾದೇಶ್ವರರು ಮುಖ್ಯರು. ಇವರು ಕೆಳವರ್ಗದ ಜನರ ಆರಾಧ್ಯದೈವಗಳಾಗಿ ಅವರ ಸಾಂಸ್ಕೃತಿಕ ಶೂನ್ಯತೆಯನ್ನು ತುಂಬಿದ್ದಾರೆ. ವಚನ ಚಳುವಳಿಯ ಕಾಯಕತತ್ವ, ಜಾತಿರಹಿತ ಸಮಾಜತತ್ವಗಳನ್ನು ಇವರು ಪ್ರತಿಪಾದಿಸಿದ್ದಾರೆ. ಈ ನಾಯಕರನ್ನು ಅನುಸರಿಸಿದ ಸಮುದಾಯಗಳು ಮುಂದೆ ಪಂಥಗಳಾಗಿವೆ.[೨೨] ೧೫ನೇ ಶತಮಾನದಲ್ಲಿದ್ದ ಮಂಟೇಸ್ವಾಮಿಯು ಈವರೆಗೆ ಜಾನಪದರ ಹಾಡುಗಳಲ್ಲಿ, ಅವರ ಆಚರಣೆಯಲ್ಲಿ ಮಾತ್ರ ಇದ್ದವನು. ಈಗ ಆತನು ಬರೆದಿರುವ "ಅವಧೂತನಂಗವನು ನೋಡೋ" ಎನ್ನುವ ಸ್ವರವಚನ ಅವಧೂತನ ವ್ಯಕ್ತಿತ್ವ ಮತ್ತು ಲಕ್ಷಣವನ್ನು ತಿಳಿಸುತ್ತದೆ.

ಅವಧೂತನಂಗವನು ನೋಡೊ ಶಿವ ಶಿವ
ಭುವನದೊಳು ಕೇವಲ ಅಜಾತ ನಿರ್ಮಲನ ||
ಶೃಂಗಾರ ಹೆಂಗಳೆಯರಿಗೆ ಕಂಗಳ ನೋಡನವಧೂತ
ಲಿಂಗದಲ್ಲಿ ಮನ ಒಲಿಯನವಧೂತ
ಹಿಂಗಿ ಸಕಲ ಕರ್ಮಗಳ ಬಾಳ್ವನವಧೂತ
ಅಂತರಂಗದ ಕರ್ಮ ಲಿಂಗದ ಸಂಗನರಿದನವಧೂತ || ೧ ||

ಬಾಲೆಯರ ನಡೆ ನುಡಿಗೆ ಒಳಗಾಗದನವಧೂತ
ಮೂಲ ಪ್ರಣಮ ಮಂತ್ರನರಿದನವಧೂತ
ಕಾಲ ಕರ್ಮಾದಿಗಳಿಗೆ ಒಳಗಾಗದವನವಧೂತ || ೨ ||

ನಾರಿಯರ ನಗೆ ನುಡಿಗೆ ಒಳಗಾಗದವನವಧೂತ
ವೀರಶೈವದ ಘನವನರಿದನವಧೂತ
ಮಾರಾರಿ ಶರಣರಿಗೆ ತಿಳಿದನವಧೂತ
ಕಾರುಣಿಕ ಲಿಂಗನರಿದನವಧೂತ || ೩ ||

ಚಂದ್ರಮುಖಿಯರ ನೋಡಿ ಚಕೋರವಾಗದವಧೂತ
ಮಂದಗಮನಿಯರಿಗೆ ಸಂದವಲ್ಲದವಧೂತ

ಬಂದ ಮೋಕ್ಷಾದಿಗಳಿಗೆ ಸಂದವಲ್ಲದವಧೂತ
ಗಂಧ ಶ್ರೀಗಂಧವನು ಪರಿಮಳವಾದನವಧೂತ ॥ ೪ ॥

ಅಂಬುಜಾಕ್ಷಿಯರ ಅಧರ ಪಾನವ ಜರಿದನವಧೂತ
ಕುಂಭ ಕುಚದಲ್ಲಿ ಕೈಯ್ಯನಿಡದನವಧೂತ
ಇಂಬಾದ ತೋಳು ತೊಡೆಗಳ ಕಂಡು ಹಂಬಲಿಸದವಧೂತ ॥ ೫ ॥

ನಾನು ನೀನೆನ್ನದೆ ತಾನಾದನವಧೂತ
ಸ್ವಾನುಭಾವದಲಿ ನಿಜವ ತಿಳಿದವನವಧೂತ
ಹೀನ ಕಾಂಕ್ಷೆಯನಳಿದು ಭಾನುವಿನ ಕಳೆ ಅವಧೂತ
ಮೌನ-ಮುಗ್ಧವಾಗಿ ನಿಂದನವಧೂತ ॥ ೬ ॥

ಉರಿ ಉಂಡ ಕರ್ಪೂರದ ಪರಿಯವನವಧೂತ
ವಿರಳ ನಿತ್ಯಂಧನವಧೂತ
ಗುರು ಸಂಗನಾತ್ಮಜನೊಳಗೆ ಮಂಟೇದಲಿಂಗ ॥ ೭ ॥
ಕರಗೊಂಡು ಹಾಕೆ ಇಲ್ಲದವಧೂತ ॥ [೨೩]

ಲೋಕಜೀವನಕ್ಕೆ ಸಂಪೂರ್ಣ ಭಿನ್ನವಾದ, ಚಪಲ-ಚಂಚಲತೆಗಳನ್ನು ಮೀರಿದ, ಅಲೌಕಿಕತ್ವದ ಮಾರ್ಗ ಹಿಡಿದ, ಮೌನಕ್ಕೆ ಮಹತ್ವ ನೀಡಿದ, ಅಂತರಂಗದಲ್ಲೆ ದೈವವನ್ನು ಸಾಕ್ಷಾತ್ಕರಿಸಿಕೊಳ್ಳುವ ಅವಧೂತನ ವ್ಯಕ್ತಿತ್ವವನ್ನು, ಲಕ್ಷಣವನ್ನು ಹಾಗೂ ಈ ಪರಂಪರೆಯಲ್ಲಿ ಬಂದ ಇಂಥ ಅವಧೂತರುಗಳ ಚಿತ್ರಣವನ್ನು ಇಲ್ಲಿ ಕಾಣಬಹುದು.

ಸುಮಾರು ೧೮ನೇ ಶತಮಾನದಲ್ಲಿದ್ದ ಕೂಡಲೂರೇಶ (ಕೂಡಲೂರ ಬಸವಲಿಂಗ ಶರಣರು) ರಚಿಸಿರುವ ಸ್ವರವಚನಗಳಲ್ಲಿ 'ಅವಧೂತನು' ಎನ್ನುವ ವಚನದಲ್ಲಿ ಅವಧೂತನ ಆತ್ಮಜ್ಞಾನದ, ಆತ್ಮತೃಪ್ತಿಯ ಚಿತ್ರಣವಿದೆ. ಅವಧೂತನಿಗೆ ಗುರುಮುಖ್ಯ. ಆತನೇ ದೈವ, ಗುರುವಿನ ಅನುಗ್ರಹವಿಲ್ಲದೆ ಮೋಕ್ಷ ಅಸಾಧ್ಯವೆಂದು ನಂಬಿದ್ದವರು.

ಗುರುವಿನಾಜ್ಞೆಯ ಮೀರದೆ ನಡಿವವನ
ನರನೆನ್ನಬೇಡ ಅವನೆ ಪರಮಾತ್ಮ
ಅರಿಯದ ಅಜ್ಞಾನಿ ಜನರೇನು ಬಲ್ಲರು
ಪರಕೆ ಪರತರ ವಸ್ತು ಅವನು ॥
ಮುತ್ತು ನೀರೊಳು ಪುಟ್ಟಿ ಮತ್ತೆ ನೀರಾಗುವುದೇ ?
ಮುತ್ತು ಲಕ್ಷಾಂತರ ಬೆಲೆಯಾಯಿತು
ತತ್ವಜ್ಞಾನಿಯು ತಾನು ಸತ್ತು ಹುಟ್ಟುವನಲ್ಲ

ಅತ್ಯಂತ ಆನಂದ ಪರಿಪೂರ್ಣನವನು ||
ಜಾತಿಯೊಳು ಪುಟ್ಟಿ ಅಜಾತನಾದವಗೆ
ಜಾತಿಭೇದಂಗಳು ಆತನಿಗುಂಟೆ ?
ಜ್ಯೋತಿ ಪ್ರಕಾಶ ಕೂಡಲೂರೇಶನೆ
ದಾತ ಪ್ರಖ್ಯಾತ ಅವಧೂತನವನು ||[೨೪]

ಅವಧೂತನು ಜಾತಿಮತಗಳ ಕಟ್ಟಳೆಗಳನ್ನು ಬದಿಗೊತ್ತಿ ಅಜಾತನಾಗಿರುತ್ತಾನೆ. ಈತ ಯಾವಾಗಲೂ ಆತ್ಮ ಜ್ಞಾನದಲ್ಲಿ ವಿಹರಿಸುವವನು. ಮನಸ್ಸಿನಲ್ಲೆ ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಂಡವನು. ಸದಾ ಮೌನಿಯಾಗಿದ್ದು, ಆತ್ಮತೃಪ್ತಿಯಲ್ಲಿರುವ ಅವಧೂತನನ್ನು ಅಜ್ಞಾನಿ ಜನರೇನು ಬಲ್ಲರೆಂದು, ಆತನ ವ್ಯಕ್ತಿ ಚಿತ್ರಣ ನೀಡುತ್ತಾರೆ. ಅವಧೂತರೆಲ್ಲ ದೈವವನ್ನು ಬಾಹ್ಯದಲ್ಲಿ ಹುಡುಕದೆ ಅರಿವಿನ ಮುಖಾಂತರ ತಮ್ಮಂತರಂಗದಲ್ಲಿಯೇ ಹುಡುಕಿದರೆಂಬುದು ಇವರ ವಚನದ ತಿರುಳು.

೨. ಕೈವಲ್ಯ/ ತತ್ವಪದಗಳು : ಅಂತರಂಗದ ಅರಿವಿನ ಮೂಲಭೂತ ತತ್ವವನ್ನು ಒಳಗೊಂಡು ಶರಣರು ವಚನಗಳನ್ನು ರಚಿಸಿರುವಂತೆ, ತತ್ವಪದಗಳನ್ನು ಬರೆದಿದ್ದಾರೆ. ಅವುಗಳನ್ನೆ ತತ್ವ ಸಾಹಿತ್ಯ ಅಥವಾ ಅನುಭಾವ ಸಾಹಿತ್ಯವೆಂದು ಕರೆಯಲಾಗಿದೆ. ಒಟ್ಟಾರೆ ಅಲೌಕಿಕ ನಿತ್ಯ ಸತ್ಯವನ್ನು ತಿಳಿಯಪಡಿಸುವುದೇ ತತ್ವ ಸಾಹಿತ್ಯ ಅಥವಾ ಅನುಭಾವ ಸಾಹಿತ್ಯ. ತತ್ವಜ್ಞಾನ ಯಾವುದನ್ನು ಬೌದ್ಧಿಕ ಜಿಜ್ಞಾಸೆಗಳಿಂದ ಚರ್ಚಿಸುತ್ತದೆಯೋ ಅದನ್ನೆ ಧರ್ಮವು ಹೃದಯ ನಿಷ್ಠವಾದ ಜೀವಂತ ಆಚರಣೆಯಿಂದ ಅರಿತುಕೊಳ್ಳಲು ಪ್ರಯತ್ನಿಸುತ್ತದೆ. ಆ ಸತ್ಯವನ್ನು ಪ್ರತ್ಯಕ್ಷವಾಗಿ ಕಂಡುಕೊಳ್ಳಲು ಹವಣಿಸುತ್ತದೆ. ಇದೆ ಧರ್ಮಮಾರ್ಗದ ಕೊನೆಯಗುರಿ. ಆ ಸತ್ಯದ ಪ್ರತ್ಯಕ್ಷ ದರ್ಶನವನ್ನೇ ಅನುಭಾವ ಸಾಹಿತ್ಯ ಎನ್ನಬಹುದು. ಈ ಸಾಹಿತ್ಯವು ಅಥವಾ ಹಾಡುಗಳು ಜಾತ್ಯತೀತ, ಧರ್ಮಾತೀತ ರಚನೆಗಳಾಗಿವೆ. ಜಾತಿ, ಮತ, ಧರ್ಮಗಳ ವಲಯವನ್ನು ಮೀರಿ ಬೆಳೆದಿರುವ ಈ ಹಾಡುಗಳು ತುಂಬಾ ಜನಪ್ರಿಯವಾಗಿವೆ. ಇಂಥ ಹಾಡುಗಳನ್ನು ಧರ್ಮನಿರಪೇಕ್ಷ ಸಾಹಿತ್ಯವೆಂದೂ, ತತ್ವಪದಗಳೆಂದೂ, ಅದ್ವೈತ ಸಾಹಿತ್ಯವೆಂದೂ, ಕೈವಲ್ಯ ಸಾಹಿತ್ಯವೆಂದೂ ಕರೆಯುತ್ತಾರೆ.

೧೫ನೇ ಶತಮಾನದಿಂದ ಆರಂಭವಾದ ಈ ಹಾಡುಗಳನ್ನು ಯೌಗಿಕ ಪರಂಪರೆಗೆ ಸೇರಿದ ಅನೇಕರು ರಚಿಸಿದ್ದಾರೆ. ಅತಿ ಗಹನವಾದ ಆಧ್ಯಾತ್ಮಿಕ ಅನುಭವಗಳನ್ನು ಹೇಳದೆ, ಸರಳ ಮತ್ತು ಸುಂದರ ಶೈಲಿಯಲ್ಲಿ ತತ್ವಪದಗಳು ರಚನೆಯಾಗಿ ಜನಸಾಮಾನ್ಯರಿಗೂ ಅರ್ಥವಾಗಿ ತುಂಬಾ ಜನಪ್ರಿಯವಾಗಿವೆ. ತತ್ವಪದಗಳ ರಚನೆಯಲ್ಲಿ ನಿಜಗುಣ ಶಿವಯೋಗಿಗಳು ಪ್ರಮುಖರು. ಸ್ವತಃ ವಿರಕ್ತರಾಗಿದ್ದು, ಶಂಭುಲಿಂಗನ ಬೆಟ್ಟದಲ್ಲಿ ನಿಂತು ಶಿವಯೋಗ ತತ್ಪರನಾಗಿದ್ದರೆಂದು ತಿಳಿಯುತ್ತದೆ. ಷಟ್‌ಶಾಸ್ತ್ರಗಳೆಂದು ಪ್ರಸಿದ್ಧವಾಗಿರುವ ಆರು ಗ್ರಂಥಗಳನ್ನು ಬರೆದಿದ್ದಾರೆ. ಅವುಗಳೆಂದರೆ ೧. ಅನುಭವ ಸಾರ ೨. ಪರಮಾರ್ಥ ಗೀತೆ ೩. ಪರಮಾನುಭವ ಬೋಧೆ ೪. ಕೈವಲ್ಯ ಪದ್ಧತಿ ೫. ಪರಮಾರ್ಥ ಪ್ರಕಾಶಿಕೆ ೬. ವಿವೇಕ ಚಿಂತಾಮಣಿ.

ತತ್ವ ಸಾಹಿತ್ಯದ ದೃಷ್ಟಿಯಿಂದ ಇವರ 'ಕೈವಲ್ಯ ಪದ್ಧತಿ' ಕೃತಿಯು ಅತಿಮುಖ್ಯವಾದುದು. ಅನುಭಾವದ ಗೀತೆಗಳ ಸಂಕಲನ ಇದಾಗಿದ್ದು, ಸಾಧಕನು ಜೀವನದ ಯಾತ್ರೆಯಲ್ಲಿ ಪಡೆಯಬಹುದಾದ ಮೋಕ್ಷದ

ಮಾರ್ಗವನ್ನು ನಿರೂಪಿಸಿದ್ದಾರೆ. ಕೈವಲ್ಯ ಎಂದರೆ ಮುಕ್ತಿ, ಮೋಕ್ಷ ಎಂದರ್ಥ. ಅದನ್ನೆ ಅನುಭಾವಿಗಳು ಶೂನ್ಯ, ಬಯಲು, ಬಿಡುಗಡೆ ಎಂಬ ಹೆಸರಿನಿಂದ ಕರೆದಿದ್ದಾರೆ. ಈ ತತ್ವಸಾಹಿತ್ಯ ಪರಂಪರೆಯನ್ನು ಮುಂದುವರಿಸಿದವರು ಮುಪ್ಪಿನ ಷಡಕ್ಷರಿ, ಸರ್ಪಭೂಷಣ ಶಿವಯೋಗಿ, ಬಾಲಲೀಲಾ ಮಹಾಂತ ಶಿವಯೋಗಿ, ಶಿಶುನಾಳ ಶರೀಫರು ಪ್ರಮುಖರು.

ಮುಪ್ಪಿನ ಷಡಕ್ಷರಿಗಳ ಸುಬೋಧಸಾರವು ಸಾಮಾನ್ಯಜನತೆಗೆ ಆಧ್ಯಾತ್ಮಿಕ ಜೀವನದ ಆದರ್ಶವನ್ನು ಬಿತ್ತಲು ಸಹಾಯಕವಾಗಿದೆ.

ಅವರವರ ದರುಶನಕೆ
ಅವರವರ ವೇಷದಲಿ
ಅವರವರಿಗೆಲ್ಲಾ ಗುರು ನೀನೊಬ್ಬನೇ ।
ಅವರವರ ಭಾವಕ್ಕೆ
ಅವರವರ ಪೂಜೆಗಂ
ಅವರವರಿಗೆಲ್ಲ ದೇವ ನೀನೊಬ್ಬನೆ ॥

ಬಾಲಲೀಲಾ ಮಹಾಂತ ಶಿವಯೋಗಿಗಳು ೧೯ನೇ ಶತಮಾನದಲ್ಲಿದ್ದವರು. ಕೈವಲ್ಯ ಸಾಹಿತ್ಯದ ದೃಷ್ಟಿಯಿಂದ ಮತ್ತು ಅವುಗಳ ಅನುಭಾವದ ನೆಲೆಯಿಂದ ಹಾಡುಗಳನ್ನು ರಚಿಸಿದ್ದಾರೆ.

ಅವರವರ ಭಕ್ತಿಗೆ ಅವರವರ ಭಾವಕ್ಕೆ
ಅವರವರ ತೆರನಾಗಿ ಇರುತಿಹನು ಶಿವಯೋಗಿ ।
ಇರದೊಂದು ಕನ್ನಡಿಯು ನೂರಾರು ಜನ ಪಿಡಿಯೆ
ಸರಳಾಗಿ ಅವರವರ ರೂಪು ಕಾಣುವಂತೆ
ಹರಿಯ ಭಕ್ತರಿಗೆ ಹರಿ, ಹರನ ಭಕ್ತರಿಗೆ ಹರ
ನರರೇನು ಭಾವಿಸುವರದರಂತೆ ತೋರುವನು ॥ ೧ ॥
ಮತಭೇದದವರು ದುರ್ಮತಿಯಿಂದ ಯತಿವರೆಗೆ
ಸ್ತುತಿ ನಿಂದೆ ಮಾಡಿದರೆ ಅವರಿಗೆ ತಿರುಗುವುವು
ಯತಿವರನು ತಾ ತನ್ನ ಪಥದಲ್ಲಿರುವನು
ಕ್ಷಿತಿಯ ಜನರ ಪಾಪ-ಪುಣ್ಯ ಫಲ ಪರೀಕ್ಷೆ ॥ ೨ ॥

ಕುಲಛಲವ ಹಿಡಿದಿರುವ ಕಲಕು ಮನದವರಲ್ಲಿ
ತಿಳಿವಳಿಕೆ ಶಿವಚಂದ್ರಮ ಕಾಣುವ ಪರಿಯೆಂತು
ಕುಲ-ಛಲವನತಿಗೆಳೆದ ತಿಳಿಯ ಮನದವರಲ್ಲಿ
ಸತಿ ಮಹಂತಲಿಂಗ ಚಿತ್ಸೂರ್ಯ ಕಾಣುವನು ॥ ೩ ॥

ದೇವನೊಬ್ಬ ನಾಮ ಹಲವು. ನರರೇನು ಭಾವಿಸುವರು ಅದರಂತೆ ದೇವನಿರುವ ಎನ್ನುವ ಆಧ್ಯಾತ್ಮಿಕ ವಿಷಯವನ್ನು ಜನಸಾಮಾನ್ಯರಿಗೂ ತಿಳಿಯುವಂತೆ ಸರಳವಾಗಿ ಹೇಳಿರುವುದು ಇವರ ವಿಶೇಷತೆಯಾಗಿದೆ. ಇಂಥ ತತ್ವಪದಗಳನ್ನು ರಚಿಸುವವರು ಶಿಷ್ಟ ಪರಂಪರೆಯಲ್ಲೂ, ಜಾನಪದ ಪರಂಪರೆಯಲ್ಲೂ ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಹಳ್ಳಿ-ಹಳ್ಳಿಗಳಲ್ಲೂ ತತ್ವಪದಗಳನ್ನು ಹಾಡುವವರಿದ್ದು, ತುಂಬಾ ಜನಪ್ರಿಯತೆ ಪಡೆದುಕೊಂಡಿದೆ.

೩. ಅವಧೂತ ಸಾಹಿತ್ಯ : ಅವಧೂತರನ್ನು ಕುರಿತು ಪೂರ್ಣಪ್ರಮಾಣದ ಕೃತಿಗಳು ಮತ್ತು ಅವಧೂತರು ರಚಿಸಿದ ಕೃತಿಗಳು ತುಂಬ ಕಡಿಮೆ. ಅವಧೂತಪಂಥ ಸಾಹಿತ್ಯದ ಮೂಲಕ ಹೆಚ್ಚು ಜನಪ್ರಿಯವಾದದ್ದು ೧೭ ಮತ್ತು ೧೮ನೇ ಶತಮಾನದಿಂದ ಎಂದು ಕಾಣುತ್ತದೆ. ಆಧ್ಯಾತ್ಮ ಮತ್ತು ವೇದಾಂತದ ವಿಷಯವನ್ನು ಸಕಲರಿಗೂ ತಿಳಿಯುವಂತೆ ವೈಶಿಷ್ಟ್ಯಪೂರ್ಣ ಕೃತಿಗಳನ್ನು ಈ ಕಾಲದಲ್ಲಿ ಕೆಲವು ಅವಧೂತರು ರಚಿಸಿದ್ದಾರೆ.

ಪ್ರೌಢದೇವರಾಯನ ಕಾಲದ ನೂರೊಂದು ವಿರಕ್ತರಲ್ಲಿ ಒಬ್ಬನಾದ ಗುರುಬಸವನು (೧೪೩೦) ''ಅವಧೂತ ಗೀತೆ'' ಎಂಬ ಕೃತಿಯನ್ನು ಚೌಪದಿಯ ರೂಪದಲ್ಲಿ ಬರೆದಿದ್ದಾನೆ. ಆತನೆ ತನ್ನನ್ನು ಸ್ವಾನುಭವ ಸಿದ್ಧನಾದ ಅವಧೂತನೆಂದು ಹೇಳಿಕೊಂಡಿದ್ದಾನೆ.

ಸ್ವಾನುಭವದ್ವಯದಿಂ ಗುರುಬಸವ
ತಾನವಧೂತನೆನಿಸಿ ಕೇಳ್ದಿರವ
ಜ್ಞಾನೋತ್ತರ ಮಾರ್ಗದ ಬಹು ವಿಧವ
ಸಾನಂದದಿ ಪೇಳ್ದನು ನಿಜಮತವ ॥ ೨೫

ಜ್ಞಾನೋತ್ತರ ಮಾರ್ಗದ ವಿಧಿ ವಿಧಾನಗಳನ್ನು ಅನುಭವಕ್ಕೆ ತಂದುಕೊಂಡವನೇ ಅವಧೂತನೆಂದು ಕವಿ ತೀರ್ಮಾನಿಸಿದ್ದಾನೆ. ಅವಧೂತ ಪರಂಪರೆಯೊಂದು ಈ ಕಾಲದಲ್ಲಿ ಬೆಳೆದಿದ್ದು, ಗುರು ಬಸವನು ಅವಧೂತ ತತ್ವವನ್ನು ಜ್ಞಾನ ಮಾರ್ಗ ಮತ್ತು ಯೋಗಮಾರ್ಗಗಳ ಹಿನ್ನೆಲೆಯಲ್ಲಿ ಬೋಧಿಸಿದ್ದಾನೆ.

ಪ್ರಕಟಿಸಿ ವಿಧಿಲಿಖಿತವನೊಡೆದುಳಿದು
ಸಕುಟಿಲ ಸಂಸಾರವ ಸದೆ ಬಡಿದು
ಪ್ರಕೃತಿ ವಿಕಾರಂಗಳ ಕೊಡಹಿದುದು
ಸ್ವಕಳಿತವೆನಿಪವಧೂತ ತತ್ವವಿದು ॥

ಹಣೆಬರಹವನ್ನು ಅಳಿಸಿ, ಕುಟಿಲ ಸಂಸಾರದ ಭ್ರಮೆಯನ್ನಳಿದು ವಿವೇಕಿಯಾಗಿ ಪ್ರಕೃತಿ ವಿಕಾರಗಳನ್ನು ಬಿಸುಟುವುದೇ ಅವಧೂತ ತತ್ವವು. ಅವಧೂತನು ಸಾಧಕಮಾರ್ಗವನ್ನು ಹಿಡಿದು ಸಿದ್ಧಿಗೇರುವ ಮಹಾಜ್ಞಾನಿ ಎಂದು ಬಣ್ಣಿಸಿದ್ದಾನೆ. ಅವಧೂತನ ಲಕ್ಷಣಗಳನ್ನು ತಿಳಿಸುತ್ತಾ -

ನಾನ ವಿಧವವಧೂತನ ಚಿಹ್ನೆ ।
ಏನೆಂದರಿಯಲು ಬಾರದು ತನ್ನ ।

ಜ್ಞಾನೋತ್ತರ ವಿವರಣೆಯೊಳಭಿನ್ನ ।
ಸಾನಂದವೆ ತಾನಾಗಿಹ ಚೆನ್ನ ॥ [೨೬]

ಉತ್ತಮರಲ್ಲಿ ಸರ್ವೋತ್ತಮನಾಗಿದ್ದು, ಹಸಿವು ಬಾಯಾರಿಕೆಗಳ ತ್ಯಜಿಸಿ, ಸಕಲೇಂದ್ರಿಯಗಳನ್ನು ನಿಗ್ರಹಿಸಿ, ಯಮನನ್ನು ಜಯಿಸಿದ ಶಿವಕರ ಜಾತನೇ ಅವಧೂತನು. ಆತನ ವಿವಿಧ ಸ್ವಭಾವಗಳನ್ನು ವಿವಿಧ ಲಕ್ಷಣಗಳನ್ನು ಹೇಳುತ್ತಾ ಶಮೆ, ದಮೆ, ಶಾಂತಿ ಆತನಲ್ಲಿ ಅಳವಟ್ಟು ಪ್ರತಿಭಾವಂತನೂ, ಸತ್ವಗುಣಸಂಪನ್ನನೂ ಪರೋಪಕಾರಿಯೂ ಆಗಿರುತ್ತಾನೆಂದು ತಿಳಿಸುತ್ತಾನೆ.

ಶಿವಪೂಜೆಯನಾಗಳು ಮುದದಿಂದೆ
ಹವಣಿಸುತಿಹುದನುಭವದೊಲವಿಂದೆ
ನೆವವಿಲ್ಲದೆ ಪೇಳಿದೆವೆಲೆ ಕಂದ
ತವೆ ಸುಖಿಗಳು ಕೇಳೆ ನಾವದರಿಂದೆ ॥ [೨೭]

ಅವಧೂತರು ವಿಶೇಷತಃ ಬಾಹ್ಯ ಪೂಜೆಗಿಂತಲೂ, ಮಾನಸ ಪೂಜೆಗೆ ಹೆಚ್ಚು ಮಹತ್ವ ನೀಡಿದವರು. ಜ್ಞಾನವಿಲ್ಲದೆ ಕೇವಲ ಭಾವಾವೇಶ ಭಕ್ತಿಯಿಂದ ಮಾಡುವ ಶಿವಪೂಜೆಯು ನಮಗೆ ಸದ್ಗತಿಯನ್ನೀಯಲಾಗದೆಂದು ಅವಧೂತರ ಅಭಿಪ್ರಾಯ.

ಅವಧೂತ ಗೀತೆಯ ಶೈಲಿ ಸರಳವಾಗಿದ್ದು, ಸಂಸಾರದ ಅನಿಶ್ಚಿತತೆ, ಯೋಗಮಾರ್ಗ, ವೈರಾಗ್ಯ ಬೋಧೆ, ಗುರುಕಟಾಕ್ಷ ಮುಂತಾದ ಆಧ್ಯಾತ್ಮಿಕ ಜೀವನದ ಒಲವು ನಿಲವುಗಳನ್ನು ಈ ಕೃತಿ ನಿರೂಪಿಸುತ್ತದೆ.

ಮುಂದೆ ೧೭ನೇ ಶತಮಾನದವರೆಗೂ ಅವಧೂತ ಸಾಹಿತ್ಯ ಕಂಡುಬಂದಿಲ್ಲ. "ಅಲ್ಲಿ ಇಲ್ಲಿ ಎಳೆ ಎಳೆಯಾಗಿ ಸಿಕ್ಕುವ ಆಧಾರಗಳಿಂದ ಈ ಪಂಥದ ಸೆಲೆಯನ್ನು ೧೭ನೇ ಶತಮಾನದವರೆಗೂ ಹೋಗಬಹುದು. ನಮಗೆ ದೊರೆತಿರುವ ಹೆಸರುಗಳಲ್ಲಿ ಸಚ್ಚಿದಾನಂದರೆಂಬುವರು ಮೊದಲಿಗರು. ಅವರ ಶಿಷ್ಯರಾದ ಸಹಜಾನಂದರು ಭಕ್ತಿ ರಸಾಯನವನ್ನು (೧೭೫೦) ಬರೆದಿದ್ದಾರೆ. ಅನುಭವಾಮೃತ ಬರೆದ ಮಹಾಲಿಂಗರಂಗರು ಸಹಜಾನಂದರ ಶಿಷ್ಯರು. ಮುಂದಿನ ಪೀಳಿಗೆಯು ಬ್ರಹ್ಮಾನಂದ, ಚಿದಾನಂದರಿಂದ ಮುಂದುವರೆಯಿತು. ಚಿದಾನಂದವಧೂತರು ಅನುಭವಾಮೃತವನ್ನು ಆಧರಿಸಿ ಜ್ಞಾನಸಿಂಧು ಬರೆದರು.[೨೮] ಸಹವಾಸಿ ನಿರಂಜನಾವಧೂತರು (೧೭೦೦) ತಮ್ಮ ಗುರುವಾದ ಗಗನಾನಂದರ ನೆನಪಿಗಾಗಿ "ಗಗನ ತಾರಾವಳಿ" ಕೃತಿಯನ್ನು ಬರೆದಿದ್ದಾರೆ. ಇವರೆಲ್ಲಾ ತಮ್ಮ ಆಳವಾದ ಚಿಂತನೆ ಸಿದ್ಧಾಂತಗಳಿಂದ ಆಧ್ಯಾತ್ಮ ಮತ್ತು ವೇದಾಂತದ ವಿಷಯವನ್ನು ಸಕಲರಿಗೂ ತಿಳಿದು ಅರ್ಥವಾಗುವಂತೆ ವೈಶಿಷ್ಟ್ಯಪೂರ್ಣವಾಗಿ ರಚಿಸಿದ್ದಾರೆ.

ಚಿದಾನಂದವಧೂತರು (೧೭೦೦) ಅವಧೂತ ಪರಂಪರೆಯಲ್ಲಿಯೇ ಪ್ರಮುಖರು. ಇವರು ಹಳೆ ಬಳ್ಳಾರಿ ಜಿಲ್ಲೆಯ ಆದವಾನಿ ತಾಲೂಕಿಗೆ ಸೇರಿದ ಹರಿವಾಣವೆಂಬ ಗ್ರಾಮದಲ್ಲಿ ಜನಿಸಿ ಶ್ರೀ ರಾಜರಾಜೇಶ್ವರಿಯನ್ನು ಪ್ರಸನ್ನೀಕರಿಸಿಕೊಂಡವರು. ಗಂಗಾವತಿ ಸಮೀಪದ ಅಯೋಧ್ಯೆಯಲ್ಲಿದ್ದ ಮಹಾಜ್ಞಾನಿ ಸದ್ಗುರು ಕೊಂಡಪ್ಪನಿಂದ ಜ್ಞಾನೋದಯವನ್ನು ಪಡೆದು, ಯೋಗಿಪುಂಗವರಾಗಿ ಮೆರೆದು, ಹಲವಾರು ದೇಶಗಳಲ್ಲಿ ಸಂಚಾರ ಕೈಗೊಂಡು

ಅನುಭಾವವನ್ನು ಗಳಿಸಿಕೊಂಡರು. ತರುವಾಯ ಹಲವಾರು ಪವಾಡಗಳನ್ನು ಮೆರೆದು ಹಲವಾರು ಶಿಷ್ಯರಿಗೆ ಬ್ರಹ್ಮೋಪದೇಶವನ್ನು ಮಾಡಿ ಉದ್ಧರಿಸಿದ್ದಾರೆ. ಜ್ಞಾನಸಿಂಧು, ದೇವಿಮಹಾತ್ಮೆ, ಬಗಳಾಮುಖಿ ಸ್ತೋತ್ರ, ಬಗಳಾಬ್ರಹ್ಮೈಕ್ಯ ಸ್ತೋತ್ರ, ಕಥಾಸಾಗರ, ಚಿದಾನಂದ ಲಹರಿ, ಚಿದಾನಂದರಗಳೆ, ತತ್ವ ಚಿಂತಾಮಣಿ ಹೀಗೆ ಹಲವು ವೈವಿಧ್ಯಮಯವಾದ ಕೃತಿಗಳನ್ನು ರಚಿಸಿದ್ದಾರೆ.

ಅನುಭವಾಮೃತವನ್ನು ಆಧರಿಸಿ ಬರೆದ ಜ್ಞಾನಸಿಂಧು ವಿಶೇಷ ಜನಪ್ರಿಯತೆಯನ್ನು ಪಡೆದುಕೊಂಡಿದೆ. ಈ ಕೃತಿ ಬೃಹತ್ ಪದ್ಯ ಕಾವ್ಯ. ವೈರಾಗ್ಯ, ಸಾಧನ ಚತುಷ್ಟಯಗಳು, ಸಪ್ತಭೂಮಿಕೆಗಳು, ಹಟಯೋಗ, ರಾಜಯೋಗ, ಭಕ್ತಿಯೋಗ, ಬಹುಸಮಾಧಿ ಲಕ್ಷಣ, ಸದ್ಗುರು ಸಚ್ಛಿಷ್ಯ ಲಕ್ಷಣ, ಜೀವನ್ಮುಕ್ತಿ ಸ್ಥಿತಿ, ಅವಧೂತ ಪೂರ್ವ ಸ್ಥಿತಿಗಳನ್ನು ತಿಳಿಸುತ್ತಾ, ಸಾಧಕನು ಅವಧೂತಸ್ಥಿತಿ ತಲುಪಿದಾಗ ಆತನಲ್ಲಿ ಕಾಣುವ ಆರು ಅವಸ್ಥೆಗಳು, ಆತನ ವೈರಾಗ್ಯ ಮತ್ತು ಅವಧೂತಸ್ಥಿತಿ, ಹಾಗೆಯೇ ಅವಧೂತನಿಂದ ಲೋಕಕ್ಕೆ ಆಗುವ ಪ್ರಯೋಜನ ಮುಂತಾದವುಗಳನ್ನು ವಿವರಿಸಲಾಗಿದೆ. ಪರಶಿವನು ತನ್ನ ಮಗನಾದ ಷಣ್ಮುಖನಿಗೆ ಉತ್ತರ ಕೊಡುವಂತೆ ಈ ಕೃತಿಯು ಸಂಭಾಷಣೆಯ ರೂಪದಲ್ಲಿದೆ.

ತರಳ ಕೇಳವಧೂತ ನಾನಾ
ಪರಿಯ ಕರಸುವ ಪರಮಹಂಸಂ
ಬುರುತರದ ನಾಮೆಂದು ಪರಮಾರೂಢಯಿಂತೆಂದು |
ನಿರುತ ಅದ್ವಯನೆಂದು ಸಾಕ್ಷಾ
ತ್ಪರಮನೇ ತಾನೆಂದು ಬಾಹ್ಯಾಂ
ತರಕತೀತನುಯೆಂದು ಕರೆಸುವನಾದ ಕೇಳೆಂದ[೨೯]

ಅವಧೂತಸ್ಥಿತಿ ಅನುಭಾವಮಾರ್ಗದಲ್ಲಿಯೆ ಅನುಪಮವಾದುದು. ಪರಮಹಂಸ, ಪರಮಾರೂಢ, ಸಾಕ್ಷಾತ್ ಪರಿಶಿವನೆನಿಸುವನೇ ಅವಧೂತ. ಆತನ ಚಾರಿತ್ರ್ಯ ವಾಙ್ಮನಕ್ಕೆ ಅತೀತವಾದುದು. ಎಲ್ಲಾ ಯೋಗಗಳ ಕೊನೆಯ ಸಿದ್ಧಿಯೇ ಅವಧೂತಾವಸ್ಥೆ.

ಸರ್ವಯೋಗಕ್ಕೆ ಕಡೆಯುಯಿದು ಕೇಳ
ಸರ್ವ ಆಶ್ರಮಗಳಿಗೆ ಕಡೆಯದು
ಸರ್ವ ಜ್ಞಾನಕೆ ಕಡೆಯುಯಿದು ಸರ್ವಕ್ಕೆ ಕಡೆಯುಯಿದು
ಸರ್ವಕೆಯು ತಾ ಶಿಖರವಿದು ಇದು
ಸರ್ವಮಂಗಳಕಾರಕಿದು ಇದು
ಸರ್ವ ಸಾಕ್ಷಿಗತೀತವಿದು ಅವಧೂತ ವಾಚ್ಯೆಂದ[೩೦]

ಸರ್ವಯೋಗಗಳಿಗೆ, ಸರ್ವಾಶ್ರಮಗಳಿಗೆ ಅವಧೂತ ಸ್ಥಿತಿಯು ಕೊನೆಯದು. ಸಕಲ ಜ್ಞಾನಗಳ ಶಿಖರವು, ಇದೇ ಮಂಗಳಕಾರಕವು, ಸರ್ವ ಸಾಕ್ಷಿಗೆ ಅತೀತವು, ಜ್ಞಾನ ವಿಹಂಗಮ ಪಥವು ಈ ಅವಧೂತಸ್ಥಿತಿಯೆಂದು ತಿಳಿಸಿದ್ದಾರೆ. ಹೀಗೆ ಅವಧೂತ ಸ್ಥಿತಿಯನ್ನು ಅದರ ಮಾರ್ಗವನ್ನು ತಿಳಿಸುತ್ತಾ, ಆತನ ಬಾಲ, ಉನ್ಮತ್ತ,

[illegible]

[illegible]

[illegible]

[illegible]

[illegible]

[illegible]

ಪಿಶಾಚ, ಅಂಧಕೆ, ಮೂಕ, ಕಿವುಡ ಅವಸ್ಥೆಗಳನ್ನು ವಿವರಿಸಿದ್ದಾರೆ. ಲೌಕಿಕರ ಸಂಗ ತನಗೇಕೆಂದು ಯಾವಾಗಲೂ ಮೌನದಲ್ಲಿರುವನು. ಕೆಲವರು ಈತನ ಸೇವೆ ಮಾಡಲು ಪ್ರಯತ್ನಿಸಿ ನಿರಾಶೆಯಾಗುವರು. ಅವರಲ್ಲೆ ಕೆಲವು ಪುಣ್ಯಜೀವಿಗಳ ನಿಷ್ಕಾಮ ಸೇವೆಗೆ ತಾನು ಮೆಚ್ಚಿ ಅವರಿಗೆ ಆಶೀರ್ವದಿಸಿರುವನು. ಆತನಿದ್ದ ದೇಶಕ್ಕೆ ನಾಡಿಗೆ ಒಳ್ಳೆಯದಾಗುತ್ತದೆ. ಆತನಿದ್ದ ಗ್ರಾಮಕ್ಕೆ ಆತ ತಿರುಗಾಡಿದ ಸ್ಥಳಗಳಿಗೆ ಆತ ಕುಳಿತುಕೊಂಡ ಸ್ಥಳಗಳಲ್ಲಿ ಮಂಗಳವಾಗಿರುವುದು. ಅವಧೂತನನ್ನು ನೋಡಿದವರಿಗೆ, ಕೊಂಡಾಡಿದವರಿಗೆ, ಆತನ ಸೇವೆಮಾಡಿದವರಿಗೆ ಒಳ್ಳೆಯದಾಗುತ್ತದೆಂದು ಹೇಳಿ ಆತನಿರುವ ನಾಡಿನಲ್ಲಿ

ಕಾಶಿ ಆತನಿದ್ದಲ್ಲಿಯಿಹದು
ವಾಸವೀಹವು ಸರ್ವನದಿ ಆ
ಶೇಷ ಸುಕೃತವು ಅಲ್ಲಿಹುದು ನಿಜಮುಕ್ತಿ ಅಲ್ಲಿಹುದು
ವಾಸ ಮಾಡಿಹನಲ್ಲಿ ಪರ
ಮೇಶ ಸರ್ವಾದೇವತೆಗಳಿಹು
ದಾ ಸದಾಶಿವನಾತನೈ ಅವಧೂತ ಕೇಳೆಂದ[೩೧]

ಪುಣ್ಯ-ಫಲಗಳು ಆತನಿದ್ದಲ್ಲೆ ಇರುವವು. ಆತ ನಿಜ ಪರಮಾತ್ಮ ಮಂಗಳ ಮೂರ್ತಿ ಅವಧೂತನೆಂದು ತಿಳಿಸಿದ್ದಾರೆ.

ಜ್ಞಾನಸಿಂಧುವು ಅಜ್ಞಾನ ಜನಿತ ದುಃಖಗಳನ್ನು ಪರಿಹರಿಸುವುದು, ಮುಮುಕ್ಷುವಿಗೆ ಜ್ಞಾನಾಮೃತವನ್ನು ನೀಡುವುದು, ವೇದ, ಶಾಸ್ತ್ರ, ಪುರಾಣ, ಆಗಮ, ಚರಿತ್ರೆ, ಗಾದೆ ಇತ್ಯಾದಿ ಸಕಲವಿದ್ಯೆಗಳಿಂದ ಕೂಡಿದ ಹಾಗೂ ಆ ವಿದ್ಯೆಗಳ ಸಾರವಾದ 'ಜ್ಞಾನಸಿಂಧು' ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಒಂದು ಉತ್ತಮ ಕೃತಿಯಾಗಿದೆ.

೩. ೪. ಸಮಕಾಲೀನ ಪರಿಸರ

ಅವಧೂತ ಪರಂಪರೆಗೆ ಸಾವಿರ ವರ್ಷಗಳ ಇತಿಹಾಸವಿದ್ದರೂ, ಸಾಹಿತ್ಯದ ಮುಖಾಂತರ ಹೆಚ್ಚು ಜನಪ್ರಿಯಗೊಂಡಿದ್ದು ೧೭ನೇ ಶತಮಾನದಲ್ಲಿ. ೧೭ನೇ ಶತಮಾನ ಹಲವು ಬಗೆಯ ಸಂಕೀರ್ಣಗಳ ಆಗರ. ಕನ್ನಡದ ನೆಲದಲ್ಲಿ ಹಲವು ಬಗೆಯ ಚಿಂತನೆಗಳು ನಡೆಯುತ್ತಿದ್ದ ಕಾಲ. ಸೂಫಿಗಳು, ದಾಸರು, ತತ್ವಪದಕಾರರು, ಜಾನಪದಕಾರರು, ಅವಧೂತರು, ಸಿದ್ಧರು, ಇಂಥವರೆಲ್ಲ ಒಂದೇ ಕಾಲದಲ್ಲಿ ಇದ್ದುದನ್ನು ನೆನಪಿಸಿ ಕೊಳ್ಳಬೇಕು. ಇದು ಆ ಕಾಲದ ಸಂದರ್ಭ. ಈ ಸಂದರ್ಭವು ಪರಸ್ಪರ ಕೊಳುಕೊಡುಗೆಗಳಲ್ಲಿ ತಾನು ಮೈವೆತ್ತು ಕೊಳ್ಳುತ್ತಿದ್ದುದನ್ನು ಗಮನಿಸಬೇಕಾಗಿದೆ. ಇಲ್ಲಿ ಯಾವೊಂದು ಮತದ ಗೆಲವು-ಸೋಲುಗಳಿಲ್ಲ. ಅವೆಲ್ಲವೂ ಸಾಮರಸ್ಯದ ಕೊಂಡಿಗೆ ಬೆಸೆದುಕೊಂಡ ಸಂದರ್ಭ.[೩೨]

೧೮ ಮತ್ತು ೧೯ನೇ ಶತಮಾನದ ಕಾಲವನ್ನು ಅವಲೋಕಿಸಿದರೆ ಭಾರತದ ಸ್ವಾತಂತ್ರ್ಯ ಸಂಗ್ರಾಮದ ಕಾಲಘಟ್ಟ, ಯುದ್ಧದ ಭೀತಿ, ಬರಗಾಲ, ಕಗ್ಗತ್ತಲು ಕಾರ್ಮೋಡ ತುಂಬಿದ ಸಂದರ್ಭ. ಪರಕೀಯರ ಆಕ್ರಮಣದಿಂದ ಸಾಮಾಜಿಕ ಮತ್ತು ಧಾರ್ಮಿಕ ಜೀವನ ತತ್ತರಿಸಿತ್ತು. ಬ್ರಿಟಿಶ್ ಮಿಷನರಿಗಳು ಹಿಂದೂ

[illegible]

ಧರ್ಮವನ್ನು ಮನವಾರೆ ತೆಗಳಿ ಜನರನ್ನು ಅಧರ್ಮದಿಂದ ವಿಮುಖರನ್ನಾಗಿ ಮಾಡಬಯಸಿದ್ದರು. ಆದರೆ ಜನರಲ್ಲಿ ಪುರಾತನ ಮತತತ್ವ, ಪರಂಪರೆಗಳಲ್ಲಿ ಅಭಿಮಾನ ಹೆಚ್ಚುತ್ತಾ ನಡೆಯಿತು. ಅಲ್ಲದೆ ಸ್ವತಂತ್ರ ವಿಚಾರಶಕ್ತಿಯನ್ನು ಪ್ರೇರೇಪಿಸಿತು ಮತ್ತು ಮುಂದಿನ ರಾಜಕೀಯ ಆಂದೋಲನಕ್ಕೆ ನೆಲವನ್ನು ಹರಗಿ ಸಜ್ಜುಗೊಳಿಸಿತ್ತು. ಜನತೆಗೆ ಅದೊಂದು ಉಪಕೃತಿಯಾಗಿ ಪರಿಣಮಿಸಿತು. ಪೂರ್ವಾಚಾರವೂ, ಭಕ್ತಿಶ್ರದ್ಧೆಗಳು ಸಡಿಲವಾದವು. ಅಭಿವ್ಯಕ್ತಿಯಲ್ಲಿ ವೈಯಕ್ತಿಕ ವಿಚಾರ ಸರಣಿ, ತಾರ್ಕಿಕ ದೃಷ್ಟಿ ಮತ್ತು ವಾಸ್ತವತೆಯ ಪ್ರಜ್ಞೆ ಇವು ಒಡಮೂಡಿದ್ದವು.[೩೩] ಒಟ್ಟಾರೆ ದೇಶದಲ್ಲಿ ವಿಷಮ ಪರಿಸ್ಥಿತಿ ತಲೆದೋರಿತ್ತು. ಇಂಥ ಪರಿಸ್ಥಿತಿಯಲ್ಲಿ ನಾಡಿನಾದ್ಯಂತ ಹಲವಾರು ಶಿವಯೋಗಿಗಳು, ಆರೂಢರು, ಅವಧೂತರು, ಅನುಭಾವಿಗಳು, ತತ್ವಪದಕಾರರು ಅವತರಿಸಿ ಜನತೆಯಲ್ಲಿ, ಅವರ ಬದುಕಿನಲ್ಲಿ ಕವಿದ ಕತ್ತಲೆಯನ್ನು ಹೋಗಲಾಡಿಸಿದ್ದಾರೆ. ಇವರುಗಳ ಯೋಗದಲ್ಲಿ, ಆಚರಣೆಯಲ್ಲಿ ವಿವಿಧತೆ ಇರಬಹುದು. ಸಾಧಿಸಿದ ಸಿದ್ಧಿಯಲ್ಲಿ ತಾರತಮ್ಯ ಇರಬಹುದು. ಆದರೆ ಗುರಿಮಾತ್ರ ಒಂದೇ ಆಗಿತ್ತು. ಹಾಗಾಗಿ ಇವರೆಲ್ಲಾ ಸದಾ ಅಭಿವಂದ್ಯರಾಗಿ ಮಹಾತ್ಮರಾಗಿದ್ದಾರೆ.

ನವಲಗುಂದದ ನಾಗಲಿಂಗಸ್ವಾಮಿಗಳು, ಹೊಸರಿತ್ತಿಯ ಶ್ರೀ ಗುದ್ದಲೀಸ್ವಾಮಿಗಳು, ಉಣಕಲ್ಲು ಶ್ರೀ ಸದ್ಗುರು ಸಿದ್ದೇಶ್ವರರು, ಹೊಸಳ್ಳಿಯ ಶ್ರೀ ಬೂದಿಸ್ವಾಮಿಗಳು, ಕಳಸದ ಗೋವಿಂದ ಭಟ್ಟರು, ನಾಯ್ಕನಹಟ್ಟಿ ತಿಪ್ಪೇರುದ್ರಸ್ವಾಮಿಗಳು, ತಿಂತಿಣಿ ಮೋನಪ್ಪಯ್ಯ, ಶಿಶುನಾಳ ಶರೀಫರು ಮುಖ್ಯ ಅನುಭಾವಿಗಳಾಗಿದ್ದಾರೆ. ಇದೇ ಸಮಯದಲ್ಲಿ ಹಂಪಿ ಮತ್ತು ಸುತ್ತಮುತ್ತಣ ಪ್ರದೇಶದಲ್ಲಿ ಇಂತಹ ಹಲವಾರು ಸಾಧು-ಸತ್ಪುರುಷರು, ಶಿವಯೋಗಿಗಳು, ಅವಧೂತರು ಅವತರಿಸಿದ್ದಾರೆ. ಎಲ್ಲೋ ಹುಟ್ಟಿ ಮತ್ತೆಲ್ಲೋ ಬೆಳೆದು ಇನ್ನೆಲ್ಲಿಯೋ ನೆಲೆ ನಿಂತಿರುವ ಮಹಾತ್ಮರು ಈ ಪ್ರದೇಶದಲ್ಲಿದ್ದಾರೆ. ಆದವಾನಿ ಲಕ್ಷ್ಮಮ್ಮನವರು, ಗೂಳ್ಯದ ಗಾದಿಲಿಂಗಪ್ಪ, ಚೇಳಗುರಿಕೆ ಎರ್ರಿತಾತ, ಹಂಪಿಯ ಶಿವರಾಮವಧೂತ, ದಮ್ಮೂರು ವೆಂಕಾವಧೂತ, ಎಮ್ಮಿಗನೂರು ಜಡೀತಾತ, ಸಿಂಧಿಗೇರಿ ಮಲ್ಲಪ್ಪತಾತ, ಕೊಳಗಲ್ಲು ಎರಿಬಸವತಾತ, ಬೈಲುಹೊದ್ದಿಗೆರೆ ಸುಡುಗಾಡಪ್ಪತಾತ, ಗಾದಿಗನೂರು ತಿಪ್ಪಯ್ಯತಾತ, ಅಲ್ಲೀಪುರದ ಮಹದೇವತಾತ, ಹೇರೂರು ವಿರುಪನಗೌಡ, ಕುಡಿತಿನಿ ಶಂಕ್ರಪ್ಪತಾತ, ಉಪ್ಪಾರಹೊಸಳ್ಳಿ ನಾಗಲಿಂಗಪ್ಪ, ಬಳಗಾನೂರು ಮರಿಸ್ವಾಮಿ, ಸಕ್ಕರೆ ಕರಡಪ್ಪ, ಮರಿಸ್ವಾಮಿಗಳು, ಗುಡ್ಡದ ಗವಿಸಿದ್ದೇಶ್ವರ, ಬುಗ್ಗಾವಧೂತರು ಮುಂತಾದ ಮಹಾಮಹಿಮರು ತಮ್ಮ ಲೀಲಾವಿನೋದಗಳಿಂದ ನಾಡಿನ ಜನರ, ಜನ ಜೀವನದ ಜಾಗೃತಿಗೆ, ಅನುಗ್ರಹದ ಶಕ್ತಿಗಳಾಗಿ ಅವತರಿಸಿ ಜೀವನ್ಮುಕ್ತರಾಗಿದ್ದಾರೆ.

ಆಧ್ಯಾತ್ಮಿಕ ಜೀವನದಲ್ಲಿ ಜೀವನ್ಮುಕ್ತಿಸ್ಥಿತಿ ಅತ್ಯುನ್ನತವಾದ ಆದರ್ಶ. ಈ ಸ್ಥಿತಿ ಮುಟ್ಟಿದವರು ಲೌಕಿಕ ಸಂಘರ್ಷಗಳಿಂದ ದೂರವಾಗಿ ಆಶಾ-ಪಾಶಗಳಿಂದ ಮುಕ್ತರಾಗಿರುತ್ತಾರೆ. ಮನುಷ್ಯನೇ ಸೃಷ್ಟಿಸಿಕೊಂಡ ದುಃಖಗಳಿಂದ, ತಾಪತ್ರಯಗಳಿಂದ ಮುಕ್ತರಾಗಿದ್ದು, ಶಾಂತಚಿತ್ತರಾಗಿರುತ್ತಾರೆ. ಇವರುಗಳ ಮುಖ್ಯ ಸ್ವಭಾವಗಳು:

೧. ನಿರಹಂಕಾರಿಗಳು

೨. ದ್ವೇಷರಹಿತರು

೩. ಜಾತ್ಯತೀತರು

೪. ಅತಿವರ್ಣಾಶ್ರಮಿಗಳು

೫. ನಿಷ್ಪಕ್ಷಪಾತರು

೬. ಭಯರಹಿತರು

೭. ವಿಶಾಲ ಹೃದಯವುಳ್ಳವರು

೮. ಪೂರ್ಣ ಪರಿಶುದ್ಧರು

ಇವರುಗಳ ವರ್ತನೆ ಲೌಕಿಕರ ನೋಟಕ್ಕೆ ವಿಚಿತ್ರವಾಗಿ ಕಂಡರೂ ಅಂತರಂಗದಲ್ಲಿ ಪರಶಿವನನ್ನು ಸಾಕ್ಷಾತ್ಕರಿಸಿಕೊಂಡವರು. ಆಧ್ಯಾತ್ಮ, ವೇದಾಂತ ಮುಂತಾದ ವಿಷಯಗಳನ್ನು ಜನರಿಗೆ ತಮ್ಮ ನಡೆ, ನುಡಿಗಳಿಂದ ಸಮಾಜದಲ್ಲಿ ಜನಜಾಗೃತಿಯನ್ನುಂಟು ಮಾಡುವಲ್ಲಿ ಶ್ರಮಿಸಿದವರು.

ಒಟ್ಟಾರೆಯಾಗಿ ೧೨ನೇ ಶತಮಾನದ ಶರಣ ಸಮೂಹದಲ್ಲಿದ್ದ ಅಲ್ಲಮಪ್ರಭು, ಅಜಗಣ್ಣ, ಸಿದ್ಧರಾಮನಂತಹ ಹಲವಾರು ಆತ್ಮವಾದಿಗಳ ಮಾರ್ಗವನ್ನು, ಮುಂದೆ ಬಂದ ಪ್ರೌಢದೇವರಾಯನ ಕಾಲದ ನೂರೊಂದು ವಿರಕ್ತರಲ್ಲಿ ಕಾಣುತ್ತೇವೆ. ನೂರೊಂದು ವಿರಕ್ತರು ತಮ್ಮ ಕಾಯಕ, ಲಿಂಗಾಂಗ ಸಾಮರಸ್ಯ-ತತ್ವಗಳ ಜೊತೆಗೆ ಅನುಭಾವಪೂರ್ಣವಾದ ಹಾಡುಗಳನ್ನು ಬರೆದಿದ್ದಾರೆ. ಈ ಘಟನೆಗಳನ್ನು ನೋಡಿದರೆ ಈ ಕಾಲದ ವೀರಶೈವ ಜೀವನದ ಮಾರ್ಗವು "೧. ಆಚಾರ್ಯ ಸಂಪ್ರದಾಯ ೨. ಶರಣ ಸಂಪ್ರದಾಯ ೩. ವೇದಾಂತ ಸಂಪ್ರದಾಯ ೪. ಅವಧೂತ ಸಂಪ್ರದಾಯ" ಇವುಗಳು ಪರಸ್ಪರ ಸಾಮರಸ್ಯದಿಂದ ಬಹುವಿಶಾಲವಾದ ಚೌಕಟ್ಟನ್ನು ಪಡೆಯಿತೆಂದು ಭಾವಿಸಬಹುದು.[೩೪] ನಂತರ ಬಂದ ನಿಜಗುಣ ಶಿವಯೋಗಿಗಳು ಮುಪ್ಪಿನ ಷಡಕ್ಷರಿಗಳು, ಬಾಲಲೀಲ ಮಹಾಂತಯೋಗಿ ಮುಂತಾದ ಯೌಗಿಕ ಮಾರ್ಗದವರಿಂದ ರಚಿತವಾದ ಕೈವಲ್ಯ ಸಾಹಿತ್ಯ ಅಥವಾ ತತ್ವಪದ ಸಾಹಿತ್ಯ, ಅವಧೂತ ಪಂಥೀಯರಿಂದ ರಚನೆಗೊಂಡ ೧೭ ಮತ್ತು ೧೮ನೇ ಶತಮಾನದ ಅದ್ವೈತ ಸಾಹಿತ್ಯ ಹೀಗೆ ಸುಮಾರು ಸಾವಿರ ವರ್ಷಗಳ ಪರಂಪರೆಯನ್ನು ಹೊಂದಿದೆ ಅವಧೂತ ಸಂಪ್ರದಾಯ. ೧೮ ಮತ್ತು ೧೯ನೇ ಶತಮಾನದಲ್ಲಿ ನಾಡಿನಾದ್ಯಂತ ಹಲವಾರು ಅವಧೂತರು ಅವತರಿಸಿ ಅವಧೂತ ಮಾರ್ಗವನ್ನು ಮುಂದುವರೆಸಿದರು. ಈ ಕಾಲದ ಅವಧೂತರು ಹೆಚ್ಚಾಗಿ ಕವಿಗಳಲ್ಲ. ಯಾವುದೇ ಒಂದು ವ್ಯವಸ್ಥೆಯ ವಿರುದ್ಧ ಹೋರಾಡಿದವರಲ್ಲ. ಆದರೂ ತಮ್ಮ ವಿಶಿಷ್ಟ ನಡೆ-ನುಡಿಯಿಂದ ಮತೀಯ ಸಹಿಷ್ಣುತೆಗೆ ರಾಷ್ಟ್ರೀಯ ಭಾವೈಕ್ಯತೆಗೆ, ಭಾಷಾ ಬಾಂಧವ್ಯಕ್ಕೆ ಕಾರಣವಾಗಿ ಭಕ್ತ ಜನತೆಯ ಮನ-ಮನೆ-ಮಂದಿರಗಳಲ್ಲಿ ನೆಲೆಸಿದ್ದು ಸಾಮಾಜಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಬದುಕಿನಲ್ಲಿ ಬದಲಾವಣೆ ತಂದಿದ್ದಾರೆ.

ಕೊನೆ ಟಿಪ್ಪಣಿಗಳು

೧. ರಹಮತ್ ತರೀಕೆರೆ (ಸಂ) ಧರ್ಮ ವಿಶ್ವಕೋಶ, ಪುಟ-೨೬೨

೨. ಷಣ್ಮುಖಯ್ಯ ಅಕ್ಕೂರಮಠ, ಸೂಫಿ ಮತ್ತು ಶರಣರ ಅನುಭಾವ ಪಥ : ಪುಟ-೩೬

೩. ಅಮರೇಶ ನುಗಡೋಣಿ, ಶೂನ್ಯ ಸಂಪಾದನೆಗಳು ಸಾಂಸ್ಕೃತಿಕ ಮುಖಾಮುಖಿ, ಪುಟ-೧೨೫

೪. ಬಸವರಾಜ್ ಎಲ್. (ಸಂ) ಶಿವಗಣ ಪ್ರಸಾದಿ ಮಹಾದೇವಯ್ಯಗಳ ಶೂನ್ಯ ಸಂಪಾದನೆ, ಪುಟ-೧೮೮

೫. ರಹಮತ್ ತರೀಕೆರೆ, ಕರ್ನಾಟಕ ಕನ್ನಡಿ, ಪುಟ-೧೨೭

೬. ರಹಮತ್ ತರೀಕೆರೆ, ಕರ್ನಾಟಕದ ಸೂಫಿಗಳು, ಪುಟ-೮೦

೭. ಶಿವಾನಂದ ವಿರಕ್ತಮಠ, ಪ್ರೌಢದೇವರಾಯನ ಕಾಲದ ಕನ್ನಡ ಸಾಹಿತ್ಯ, ಪುಟ-೮೬

೮. ಅದೇ, ಪುಟ-೮೬

೯. ಅಮರೇಶ ನುಗಡೋಣಿ, ಹೈದರಾಬಾದ್ ಕರ್ನಾಟಕದ ಹಾಡು-ಪಾಡು, ಪುಟ-೩೦

೧೦. ಶಿವಾನಂದ ವಿರಕ್ತಮಠ, ಪ್ರೌಢದೇವರಾಯನ ಕಾಲದ ಕನ್ನಡ ಸಾಹಿತ್ಯ, ಪುಟ-೧೦೭

೧೧. ಕಲಬುರ್ಗಿ ಎಂ.ಎಂ., ಮಾರ್ಗ-೩, ಪುಟ-೨೩೦

೧೨. ಬಸವರಾಜ ಕಲ್ಗುಡಿ, ಮಧ್ಯಕಾಲೀನ ಭಕ್ತಿ ಮತ್ತು ಅನುಭಾವ ಸಾಹಿತ್ಯ ಹಾಗೂ ಚಾರಿತ್ರಿಕ ಪ್ರಜ್ಞೆ, ಪುಟ-೧೮೧

೧೩. ಗದ್ದಿಗೀಮಠ ಬಿ.ಎಸ್. ಕನ್ನಡ ಜಾನಪದಗೀತೆಗಳು, ಪುಟ-೧೩೩

೧೪. ರಹಮತ್ ತರೀಕೆರೆ, ಮರದೊಳಗಣ ಕಿಚ್ಚು, ಪುಟ-೧೬೦

೧೫. ಶಿವಪ್ರಕಾಶ ಎಚ್.ಎಸ್., ಕನ್ನಡ ತತ್ವಪದಕಾರರು, ಪುಟ-೨

೧೬. ಅಮರೇಶ ನುಗಡೋಣಿ, ಹೈದರಾಬಾದ್ ಕರ್ನಾಟಕದ ಹಾಡು-ಪಾಡು, ಪುಟ-೩೮

೧೭. ಗುಂಡಪ್ಪ ಎಲ್. (ಸಂ) ಪಂಪನ ಆದಿಪುರಾಣ, ೨-೩೮

೧೮. ಗುರುಲಿಂಗ ವಿಭು, ಭಿಕ್ಷಾಟನಾ ಚರಿತೆ, ಪುಟ-೩-೧೭

೧೯. ಗುಬ್ಬಿಯ ಮಲ್ಲಣಾರ್ಯ, ವೀರಶೈವಾಮೃತ ಪುರಾಣ, ೧-೩-೧೧

೨೦. ದೇವುಡು ನರಸಿಂಹಶಾಸ್ತ್ರಿ, ಶಿವಮೂರ್ತಿಶಾಸ್ತ್ರಿ, (ಸಂ) ಲಕ್ಷ್ಮೀಶನ ಜೈಮಿನಿ ಭಾರತ, ಪುಟ ೫, (೨೭, ೨೮, ೨೯)

೨೧. ಮಹಾಲಿಂಗರಂಗ, ಅನುಭವಾಮೃತ

೨೨. ವೆಂಕಟೇಶ ಇಂದ್ವಾಡಿ, ಮಂಟೇಸ್ವಾಮಿ ಪರಂಪರೆ, ಪುಟ-೩

೨೩. ಶಿವಾನಂದ ಎಸ್. ವಿರಕ್ತಮಠ (ಸಂ) ವಚನ-ಸ್ವರವಚನ, ಪುಟ-೪೦೪

೨೪. ಶಾಂತರಸ (ಸಂ) ಕೂಡಲೂರು ಬಸವಲಿಂಗ ಶರಣರ ಸ್ವರವಚನಗಳು ಪುಟ-೮

೨೫. ಸುಂಕಾಪುರ ಎಂ.ಎಸ್. (ಸಂ) ನಾಗಭೂಷಣಶಾಸ್ತ್ರಿಗಳು, ಗುರುಬಸವ ಕೃತ ಅವಧೂತ ಗೀತೆ, ಪುಟ-೨೧

೨೬. ಅದೇ, ಪುಟ-೧೨

೨೭. ಅದೇ, ಪುಟ-೧೬

೨೮. ಶ್ರೀನಿವಾಸ ಹಾವನೂರ, ಹೊಸಗನ್ನಡದ ಅರುಣೋದಯ, ಪುಟ-೨೧೩

೨೯. ಕಾಪಸೆ ಜಿ.ಎಸ್. ಕಂಠಿ ಆರ್.ಬಿ. (ಸಂ), ಚಿದಾನಂದವಧೂತ ವಿರಚಿತ ಜ್ಞಾನಸಿಂಧು, ೪೨-೫

೩೦. ಅದೇ, ೪೨-೫

೩೧. ಅದೇ, ೪೨-೧೦೬

೩೨. ಮಲ್ಲೇಪುರಂ ಜಿ.ವೆಂಕಟೇಶ, ಮಹಲಿಂಗ ರಂಗ, ಪುಟ-೬

೩೩. ಶ್ರೀನಿವಾಸ ಹಾವನೂರು, ಹೊಸಗನ್ನಡದ ಅರುಣೋದಯ, ಪುಟ-೧೫, ೧೬

೩೪. ಶಿವಾನಂದ ವಿರಕ್ತಮಠ, ಪ್ರೌಢದೇವರಾಯನ ಕಾಲದ ಕನ್ನಡ ಸಾಹಿತ್ಯ, ಪುಟ-೫೦೬

ಅಧ್ಯಾಯ ನಾಲ್ಕು

ಬಳ್ಳಾರಿ ಜಿಲ್ಲೆಯ ಅವಧೂತರು

೪. ೧. ಚೇಳಗುರಿಕೆ ಎರ್ರಿತಾತ

೪. ೨. ಎಮ್ಮಿಗನೂರು ಜಡೆಪ್ಪತಾತ

೪. ೩. ದಮ್ಮೂರು ವೆಂಕಾವಧೂತ

೪. ೪. ಕೊಳಗಲ್ಲು ಎರಿಬಸವತಾತ

೪. ೫. ಸಿಂಧಿಗೇರಿ ಮಲ್ಲಪ್ಪತಾತ

೪. ೬. ಹಂಪಿ ಶಿವರಾಮವಧೂತ

೪. ೭. ಹೇರೂರು ವಿರೂಪಾವಧೂತ

೪. ೮. ಕಾಳಘಟ್ಟದ ರುದ್ರಾವಧೂತ

೪. ೯. ಬೈಲುಹೊದ್ದಿಗೆರೆ ಸುಡುಗಾಡಪ್ಪತಾತ

೪. ೧೦. ಕುಡಿತಿನಿ ಶಂಕ್ರಪ್ಪತಾತ

೪. ೧೧. ಕೊಡಗಿನಹಾಳು ಬಸಪ್ಪತಾತ

೪. ೧೨. ಹರಗಿನದೋಣಿ ಬುಗ್ಗಾವಧೂತ

೪.೧೩. ಹೊಸಪೇಟೆ ಕೆಂಪಾವಧೂತ

ಅಧ್ಯಾಯ ನಾಲ್ಕು

ಬಳ್ಳಾರಿ ಜಿಲ್ಲೆಯ ಅವಧೂತರು

ಬಳ್ಳಾರಿ, ಹೊಸಪೇಟೆ, ಸಿರುಗುಪ್ಪ, ಸಂಡೂರು, ಹೂವಿನ ಹಡಗಲಿ, ಹಗರಿ ಬೊಮ್ಮನಹಳ್ಳಿ, ಕೂಡ್ಲಿಗಿ ತಾಲೂಕುಗಳನ್ನೊಳಗೊಂಡ ಬಳ್ಳಾರಿ ಜಿಲ್ಲೆಯು ಕರ್ನಾಟಕದ ಗಡಿಭಾಗದ ಜಿಲ್ಲೆಯಾಗಿದೆ. ಈ ಪ್ರದೇಶವು ಕಪ್ಪುಮಣ್ಣಿನಿಂದ ಕೂಡಿ, ವ್ಯವಸಾಯ ಪ್ರಧಾನವಾಗಿದ್ದರೂ, ಹೇರಳವಾಗಿ ಖನಿಜ ಸಂಪತ್ತು ದೊರೆಯುವುದರಿಂದ ಕೈಗಾರಿಕಾ ಜಿಲ್ಲೆಯೆಂದೇ ಹೆಸರು ಪಡೆದಿದೆ. ಅಲ್ಲಲ್ಲಿ ಕಲ್ಲು ಬೆಟ್ಟಗಳಿದ್ದು, ಬಳ್ಳಾರಿ, ಸಂಡೂರು, ಹೊಸಪೇಟೆಗಳಲ್ಲಿರುವ ಬೃಹತ್ ಕೈಗಾರಿಕಾ ಕಾರ್ಖಾನೆಗಳಿಂದ ಕಬ್ಬಿಣ, ಮ್ಯಾಂಗನೀಸ್, ರೆಡ್‌ಆಕ್ಸೈಡ್‌ಗಳನ್ನು ಇಲ್ಲಿ ತೆಗೆಯಲಾಗುತ್ತಿದೆ. ಕುಡಿಯುವ ನೀರು ಮತ್ತು ನೀರಾವರಿ ವ್ಯವಸಾಯಕ್ಕೆ ತುಂಗಭದ್ರಾ ಅಣೆಕಟ್ಟು ಇದ್ದು, ಹಗರಿ ಮತ್ತು ಚಿಕ್ಕ ಹಗರಿ ಎಂಬ ಉಪನದಿಗಳೂ ಇಲ್ಲಿವೆ.

ಐತಿಹಾಸಿಕವಾಗಿಯೂ ಮಹತ್ವ ಪಡೆದಿರುವ ಈ ಪ್ರದೇಶವನ್ನು ಮೌರ್ಯರು, ಶಾತವಾಹನರು, ಕದಂಬರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ನೊಳಂಬರು, ಗಂಗರು ಮುಂತಾದ ರಾಜಮನೆತನಗಳು ಆಳಿರುವುದರ ಜೊತೆಗೆ, ವಿಶ್ವಪ್ರಸಿದ್ಧ ರಾಜಮನೆತನವಾದ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾದದ್ದು ಈ ನೆಲದಲ್ಲಿ. ಇಂತಹ ಹಲವಾರು ಐತಿಹಾಸಿಕ ಹಿನ್ನೆಲೆಯುಳ್ಳ ಹಂಪಿ ಪರಿಸರದಲ್ಲಿ ಉಚ್ಚಂಗಿದುರ್ಗ, ಕಂಪ್ಲಿ, ಬಳ್ಳಾರಿ, ಗುಡೇಕೋಟೆ, ಕೆಂಚನಗುಡ್ಡ ಮೊದಲಾದ ಕಡೆ ಪ್ರಾಚೀನಕಾಲದ ಮತ್ತು ಸ್ಥಳೀಯ ಪಾಳೇಗಾರರು ಕಟ್ಟಿದ ಕೋಟೆಗಳಿವೆ.

ಹೀಗೆ ಐತಿಹಾಸಿಕವಾಗಿ, ಸಾಂಸ್ಕೃತಿಕವಾಗಿ ಮಹತ್ವ ಪಡೆದಿರುವ ಈ ಪ್ರದೇಶವು ೧೮ ಮತ್ತು ೧೯ನೇ ಶತಮಾನದಲ್ಲಿ ಹಲವಾರು ಶರಣರು, ಸಂತರು, ಸೂಫಿಗಳು, ಅವಧೂತರು ಅವತರಿಸಿದ ಭೂಮಿಯಾಗಿದೆ. ಒಟ್ಟಾರೆ ಚಾರಿತ್ರಿಕ, ಸಾಹಿತ್ಯಿಕ ಮತ್ತು ಆಧ್ಯಾತ್ಮಿಕ ಪರಂಪರೆಯುಳ್ಳ ಈ ಪ್ರದೇಶ ವೈಶಿಷ್ಟ್ಯಪೂರ್ಣವಾದುದು.

೧೨ನೇ ಶತಮಾನದ ವಚನಕಾರರ ಪ್ರಭಾವ ಮತ್ತು ಪ್ರೌಢದೇವರಾಯನ ಕಾಲದಲ್ಲಿ ಹಂಪಿಯ ಪರಿಸರದಲ್ಲಿದ್ದ ವಿರಕ್ತರ ಪ್ರಭಾವ ಇಲ್ಲಿನ ಆಧ್ಯಾತ್ಮಿಕ ಪರಂಪರೆಗೆ ಸಾಕ್ಷಿಯಾಗಿದೆ. ಹಂಪಿಯ ಪರಿಸರದಲ್ಲಿದ್ದ ವಿರಕ್ತರ ಗುಂಪಿನಲ್ಲಿ ಅವಧೂತ ಪರಂಪರೆಯೊಂದು ಬೆಳೆದು, ಮುಂದೆ ಈ ನೆಲದಲ್ಲಿ ಗುರು ವಿರಕ್ತಮಾರ್ಗದ ಅವಧೂತ ಪಂಥವು ಬೆಳೆದು ಬಂದಿದೆ.

[illegible]

[illegible]

[illegible]

[illegible]

[illegible]

ಚೇಳಗುರಿಕೆ ಎರ್ರಿತಾತ, ಎಮ್ಮಿಗನೂರು ಜಡೆಪ್ಪತಾತ, ದಮ್ಮೂರು ವೆಂಕಪ್ಪತಾತ, ಹಂಪಿ ಶಿವರಾಮವಧೂತ, ಕೊಳಗಲ್ಲು ಎರಿಬಸವತಾತ, ಸಿಂಧಿಗೇರಿ ಮಲ್ಲಪ್ಪತಾತ, ಹೇರೂರು ವಿರುಪಾವಧೂತ, ಹೊಸಪೇಟೆ ಕೆಂಪಾವಧೂತ, ಬುಗ್ಗಾವಧೂತ, ಕಾಳಘಟ್ಟ ರುದ್ರಾವಧೂತ, ಸುಡುಗಾಡಪ್ಪತಾತ, ಹೀಗೆ ಹಲವಾರು ಅವಧೂತರ ಪರಂಪರೆಯನ್ನು ಈ ಜಿಲ್ಲೆಯಲ್ಲಿ ಕಾಣಬಹುದು.

೪. ೧. ಚೇಳಗುರಿಕೆ ಎರ್ರಿತಾತ

ಕರ್ನಾಟಕ ಮತ್ತು ಆಂಧ್ರಪ್ರದೇಶದ ಗಡಿಭಾಗದಲ್ಲಿರುವ ಚಿಕ್ಕ ಗ್ರಾಮ ಚೇಳಗುರಿಕೆ. ಈ ಗ್ರಾಮಕ್ಕೆ ಮಹತ್ವ ಬಂದಿರುವುದು ಎಲ್ಲಿಂದಲೋ ಬಂದು ಇಲ್ಲಿ ನೆಲೆನಿಂತಿರುವ ಎರ್ರಿತಾತನವರಿಂದ. ಸದಾ ಭಕ್ತರಿಂದಲೇ ತುಂಬಿರುವ ಈ ಗ್ರಾಮ ಇಂದು ಪುಣ್ಯಕ್ಷೇತ್ರವಾಗಿ, ವೈಜ್ಞಾನಿಕ ಯುಗಕ್ಕೆ ಸೋಜಿಗವೆನಿಸುವ ಹಾಗೆ ನಿತ್ಯ ಸತ್ಯವಾಗಿ, ಪ್ರತ್ಯಕ್ಷ ಸಾಕ್ಷಿಯಾಗಿ, ಈ ಸಿದ್ಧ ಪುರುಷನಿಂದ ದಿನದಿಂದ ದಿನಕ್ಕೆ ಪ್ರಸಿದ್ಧಿಗೆ ಬರುತ್ತಿದೆ. ಗಡಿಗ್ರಾಮ ವಾಗಿರುವುದರಿಂದ ಸಹಜವಾಗಿಯೇ ಕರ್ನಾಟಕ ಮತ್ತು ಆಂಧ್ರಪ್ರದೇಶದ ಧರ್ಮ ಮತ್ತು ಸಂಸ್ಕೃತಿಗಳ ಸಮನ್ವಯತೆಯಿದ್ದು, ಭಾಷಾಬಾಂಧವ್ಯದಿಂದ, ಜಾತ್ಯತೀತ ನಿಲುವುಗಳಿಂದ, ಸರ್ವಧರ್ಮೀಯರಿಗೆ, ಸರ್ವಭಕ್ತರಿಗೆ ಆದರ್ಶನೀಯವಾಗಿದೆ.

ಇಲ್ಲಿ ನೆಲೆನಿಂತಿರುವ ಎರ್ರಿತಾತನು ಯಾವ ಪ್ರಾಂತ್ಯದವರೆಂಬುದು ಸರಿಯಾಗಿ ತಿಳಿಯದು. ಈ ಪ್ರಾಂತ್ಯದವರೇ ಆಗಿದ್ದರೆ ಅವರ ಪೂರ್ವ ಇತಿಹಾಸ ತಿಳಿಯುತ್ತಿತ್ತು. ಹೆತ್ತ ತಂದೆ-ತಾಯಿಗಳು, ಹುಟ್ಟಿದ ಊರು, ಹೆಸರು, ಕುಲಗೋತ್ರ ಮುಂತಾದ ಯಾವ ವಿಷಯಗಳೂ ಸ್ಪಷ್ಟವಾಗಿ ದೊರೆತಿಲ್ಲ. "ಕನ್ನಡ, ತೆಲುಗು, ತಮಿಳು, ಇಂಗ್ಲಿಷ್ ಭಾಷೆಗಳಲ್ಲಿ ಚೇಳಗುರಿಕೆ ಎರ್ರಿತಾತನವರ ಚರಿತ್ರೆ ರಚನೆಗೊಂಡಿದೆ. ಪ್ರಕಟಿತ ಕೃತಿಗಳೆಲ್ಲದರಲ್ಲೂ ತಾತನವರ ಪೂರ್ವ ಜೀವನದ ಬಗೆಗೆ ಖಚಿತವಾಗಿ ಹೇಳಿಲ್ಲ. ಎಲ್ಲವೂ ಐತಿಹ್ಯವೇನೋ ಎಂಬಂತೆ ಸಂಗ್ರಹಿತ ವಾಗಿದೆ. ಆದರೆ ಹೆಚ್ಚಿನ ಅಥವಾ ವಿವಾದಾತ್ಮಕ ಸಂಗತಿಗಳಿಲ್ಲದಿರುವುದು ಒಂದು ವಿಶೇಷ."[೧] ಇದುವರೆಗೂ ಎರ್ರಿತಾತನ ಬಗ್ಗೆ ದೊರೆತಿರುವ ದಾಖಲೆಗಳಲ್ಲಿ ೧೮೫೭ರಲ್ಲಿ ಚೇಳಗುರಿಕೆಗೆ ಬಂದರೆಂದೂ, ಬಂದಾಗ ಪೂರ್ಣಾವಧೂತ ಸ್ಥಿತಿಯಲ್ಲಿ ಇದ್ದರೆಂಬುದು ತಿಳಿಯುತ್ತದೆ. ತಾತನವರ ಪೂರ್ವ ಚರಿತ್ರೆಯ ಬಗ್ಗೆ ಅಂದು ತಾತನವರನ್ನು ಯಾರೂ ಕೇಳಿಲ್ಲ, ಕೇಳಿದರೂ ಆತ ಯಾರಿಗೂ ಹೇಳಿಲ್ಲ, ಹೇಳಿದರೂ ಯಾರಿಗೂ ಸರಿಯಾಗಿ ಅರ್ಥವಾಗಿಲ್ಲದಿರುವುದು ತಿಳಿಯುತ್ತದೆ.

ಸುಮಾರು ೭೦ ವರ್ಷ ವಯಸ್ಸಿನ ಎರ್ರಿತಾತನು ಚೇಳಗುರಿಕೆಯ ಮಲ್ಲಪ್ಪನ ಮಟ್ಟಿಯಲ್ಲಿ ಬಂದು ಕುಳಿತ್ತಿದ್ದಾಗ, ಊರ ಪ್ರಮುಖರೆಲ್ಲಾ ಹೋಗಿ, ಒತ್ತಾಯ ಮಾಡಿ, ಊರೊಳಗೆ ಕರೆತಂದಿದ್ದಾರೆ. ಆಗ ಎರ್ರಿತಾತನವರ ಸ್ಥಿತಿ ಹೇಗಿತ್ತೆಂಬುದನ್ನು ಕೃತಿಯೊಂದು ಹೀಗೆ ಉಲ್ಲೇಖಿಸುತ್ತದೆ. "ಪರವಶಸ್ಥಿತಿಯ ಎರ್ರಿತಾತನವರ ಗತಿಮತಿಗಳು ವಿಚಿತ್ರವೂ, ಊಹಾತೀತವೂ, ಲೌಕಿಕಾನುಭವಕ್ಕೆ ನಿಲುಕಲಾರದವುಗಳೂ ಆಗಿದ್ದವು. ಆದ್ದರಿಂದ ಎಲ್ಲರಂತೆ ಇವರಿರಲಿಲ್ಲ. ಇವರಿದ್ದ ಈ ಸ್ಥಿತಿಯನ್ನು ಎಲ್ಲರೂ ಅರಿಯುವಂತಿರಲಿಲ್ಲ. ಊಟ, ಉಡುಗೆ, ನಡೆ, ನುಡಿ, ಮುಂತಾದ ಅವರ ನಿತ್ಯ ಜೀವನವು ನೋಡುವವರ ಕಣ್ಣಿಗೆ ಆಶ್ಚರ್ಯವನ್ನುಂಟು ಮಾಡುತ್ತಿದ್ದವು. ಒಟ್ಟಾರೆ ಇವರ ವರ್ತನೆ ಪ್ರಾಪಂಚಿಕ ಸಾಮಾಜಿಕ ವೃತ್ತಿಗೆ ವ್ಯತಿರಿಕ್ತವಾಗಿದ್ದವು."[೨]

ಮಹಾತ್ಮರುಗಳ ವರ್ತನೆಯು "ಬಾಲೋನ್ಮತ್ತ ಪಿಶಾಚವಜ್ಜಡ ವೃತ್ತ್ಯಾ ಲೋಕಮಾಚರೇತ್" ಎನ್ನುವ ಉಪನಿಷತ್ ವಾಕ್ಯದಂತೆ, ಬಾಲಕರಂತೆ, ಉನ್ಮತ್ತರಂತೆ, ಪಿಶಾಚಿಗಳ ವರ್ತನೆಯಂತಿರುತ್ತದೆ ಎನ್ನುವ ಮಾತು ಎರ್ರಿತಾತನಿಗೆ ಸರಿಯಾಗಿ ಹೊಂದಿಕೊಳ್ಳುತ್ತಿತ್ತು. ಹಸಿವು ತೃಷೆಗಳ ಅರಿವಿಲ್ಲದೆ, ಮಾನ, ಅವಮಾನ, ಭಯ, ನಾಚಿಕೆಗಳ ಗುರ್ತಿಲ್ಲದೆ, ಭಾವಬತ್ತಲೆಯ ಕುರುಹೆಂಬಂತೆ, ತನು ಬತ್ತಲೆಯಾಗಿ ಅರೆಗಣ್ಣ ನೋಟದಿಂದ, ಕತ್ತಲು ಬೆಳಕುಗಳ ಹಂಗಳಿದು, ಜನಸಂಗದಲ್ಲಿ ನಿಸ್ಸಂಗಿಯಾಗಿ, ನಿರಂಕುಶನಾಗಿ, ತನಗಿಷ್ಟಬಂದಂತೆ ಇರುತ್ತಿದ್ದರು. ಇಂತಹ ವಿಚಿತ್ರ ವರ್ತನೆಯನ್ನು ಕಂಡ ಲೋಕದ ಜನ, ಅಪಹಾಸ್ಯ ಮಾಡಿ, ಇವನೊಬ್ಬ 'ಎರ್ರಿ (ಹುಚ್ಚ) ತಾತ' ಎಂದು ಕರೆದ ಹುಚ್ಚು ಮನಸ್ಸಿನ ಜನರ ಹೆಸರೇ ಶಾಶ್ವತವಾಗಿ ಪ್ರಸಿದ್ಧಿಯನ್ನು ಪಡೆದು, ಇಂದಿನವರೆಗೂ ಅದೇ ಹೆಸರು ಪ್ರಚಾರವಾಗುತ್ತಿದೆ. 'ಎರ್ರಿ' ಎನ್ನುವುದು ನಮ್ಮಗಳ ಹುಚ್ಚುತನದ ಪ್ರತೀಕವಾದರೆ, 'ತಾತ' ಎನ್ನುವುದು ಪ್ರೀತಿಯ ಪ್ರತೀಕವಾಗಿದೆ ಎನ್ನಬಹುದು. ಯೋಗಿಗಳನ್ನು, ಮಹಾನುಭಾವಿಗಳನ್ನು, ಸಿದ್ಧಪುರುಷರನ್ನು, ಹುಚ್ಚರೆಂದು ಕರೆಯುವುದು ಲೋಕ ರೂಢಿಯಾಗಿದೆ. ಇದಾವುದಕ್ಕೂ ಗಮನಕೊಡದೆ ಮಾನವರಾಗಿ ಹುಟ್ಟಿ ದೇವಮಾನವರಾಗಿ ಬೆಳೆದ ಪ್ರತಿಯೊಬ್ಬರ ಹಿನ್ನೆಲೆಯೂ ಇಂತಹ ವಿಚಿತ್ರ ಘಟನೆಗಳ ನ್ನೊಳಗೊಂಡಿರುವುದನ್ನು ಇತಿಹಾಸದಲ್ಲಿ ಕಾಣಬಹುದು.

ಎರ್ರಿತಾತನವರ ವರ್ತನೆಯನ್ನು ಹುಚ್ಚೆಂದು ಅಪಹಾಸ್ಯಗೈದು ನಿರ್ಲಕ್ಷಿಸುವ ಜನರ ನಡುವೆಯೇ, ಕೆಲವರು ಈ ವ್ಯಕ್ತಿಯಲ್ಲಿ ಯಾವುದೋ ಅವ್ಯಕ್ತ ಶಕ್ತಿ ಅಡಗಿದೆಯೆಂದು ನಂಬಿ ಆತನ ವಿಪರೀತ ಚರ್ಯೆಗಳನ್ನು ಸಹಿಸಿ, ಆತನ ಸೇವೆಗೈದು, ಆಶೀರ್ವಾದ ಅನುಗ್ರಹಕ್ಕೆ ಪಾತ್ರರಾಗಿ, ಧನ್ಯರಾದ ಭಕ್ತರೂ ಇದ್ದರು. ದಿನದಿಂದ ದಿನಕ್ಕೆ ತಾತನವರ ಮಹಿಮೆಗಳು ಹೆಚ್ಚಾಗಿ ದರ್ಶನಕ್ಕಾಗಿ ತಮ್ಮ ಕಷ್ಟಗಳನ್ನು, ನೋವುಗಳನ್ನು ಪರಿಹರಿಸಿಕೊಳ್ಳಲು ಬರುವವರ ಸಂಖ್ಯೆ ಅಧಿಕವಾಗುತ್ತದೆ. ಮೊದಲಿದ್ದ ತಾತನವರ ಮೇಲಿನ ಹುಚ್ಚುತನ ಮಾಯವಾಗಿ, ಭಯಭಕ್ತಿಗಳು ಮೂಡಿ, ದೇವರಂತೆ ಆರಾಧಿಸತೊಡಗಿದರು. ದಿನಗಳೆದಂತೆ ತಾತನವರ ಭಕ್ತರ ಸಂಖ್ಯೆ ಹೆಚ್ಚುತ್ತಾ ಇಂದು ಕರ್ನಾಟಕ, ಆಂಧ್ರ, ಮಹಾರಾಷ್ಟ್ರ ಹೀಗೆ ನೆರೆಯ ರಾಜ್ಯಗಳಲ್ಲದೆ, ವಿದೇಶಗಳಲ್ಲಿರುವ ಹಲವಾರು ಭಾರತೀಯರು ಅವರ ಭಕ್ತರಾಗಿದ್ದಾರೆ. ಇಂತಹ ಮಹಾನುಭಾವಿಯ ಪೂರ್ವ ಇತಿಹಾಸ ಅಸ್ಪಷ್ಟವಾಗಿದ್ದರೂ, ಲಬ್ಯವಿರುವ ಶಿಷ್ಟ-ಜನಪದ ಆಕರಗಳಿಂದ ಕೆಲವು ಮಾಹಿತಿಗಳನ್ನು ಸಂಗ್ರಹಿಸಲಾಗಿದೆ.

"ಎರ್ರಿತಾತನವರು ಯಾವಾಗಲಾದರೊಮ್ಮೆ ತಮಗೆ ತಾವೇ ಮಾತನಾಡಿಕೊಳ್ಳುತ್ತಿದ್ದ, ಕನ್ನಡ ಶೈಲಿಯಿಂದ ಮೈಸೂರು ನಾಡಿನ ಕಡೆಯವರೆಂದು ಊಹಿಸಬಹುದಿತ್ತು. 'ರಂಗಾ-ರಂಗಾ' ಎಂದು ಹೇಳಿಕೊಳ್ಳುತ್ತಿದ್ದ ನುಡಿಯಿಂದ ಆ ರಂಗನು ಆತನ ಅನುಗ್ರಹದ ಗುರುವೋ, ದೈವವೋ ಆಗಿರಬೇಕೆಂದು ಕೆಲವರ ಅಭಿಪ್ರಾಯ ವಾಗಿದೆ. ಈ ಅಭಿಪ್ರಾಯವನ್ನು ಪುಷ್ಟೀಕರಿಸಲು ಕೆಲವರು ಈತನನ್ನು ಬ್ರಾಹ್ಮಣನೆಂತಲೂ, ಇನ್ನೂ ಕೆಲವರು ಲಿಂಗವಂತನೆಂತಲೂ ಊಹಿಸಿದರು. ಲಿಂಗವಂತನೆಂಬ ಊಹೆಗೆ ರಂಗನು ಮೂಲವಲ್ಲದಿದ್ದರೂ, ಅವರು ಕುಳಿತಾಗ ಎಡದ ಹಸ್ತವನ್ನು ಲಿಂಗಹಸ್ತದ ಭಂಗಿಯಲ್ಲಿರುವುದನ್ನು ನೋಡಿ, ಆ ರೀತಿ ಊಹೆಗೆ ಆಸ್ಪದವಿದೆ ಎಂದು ಲಿಂಗವಿಲ್ಲದ ಹಸ್ತವನ್ನು ತಮ್ಮ ವಿಚಾರಕ್ಕೆ ಗುರಿಯಾಗಿಟ್ಟುಕೊಂಡರು. ಯಾರ ವಿಚಾರ, ಯಾವ ಗುರಿ, ಯಾರ ಚರ್ಚೆಗಳಿಗೂ ನಿಲುಕದೆ ನಿಶ್ಚಯಾತ್ಮಕನಾಗಿ ಜಾತಿ, ಮತ, ಪಂಥಗಳ ಚಿಹ್ನೆಗಳಿಲ್ಲದೆ ಎಲ್ಲವೂ

ತಾನಾಗಿ, ಎಲ್ಲ ಧರ್ಮದವರು, ಎಲ್ಲಾ ಜಾತಿಯವರು ಭಕ್ತಿಯಿಂದ ನೀಡಿದ ಪದಾರ್ಥಗಳನ್ನು ಸೇವಿಸುತ್ತಿದ್ದರು."[೩] ಒಟ್ಟಾರೆ ಚೇಳಗುರಿಕೆಗೆ ಬಂದು ಭಕ್ತರ ಇಷ್ಟಾರ್ಥಗಳನ್ನು ನೆರವೇರಿಸುತ್ತಾ ತನ್ನ ಸಾಧನಾ ಶಕ್ತಿಯಿಂದ ಮಹಿಮೆಗಳನ್ನು ತೋರಿಸುತ್ತಾ, ಭಕ್ತರ ಮನ-ಮನೆಗಳಲ್ಲಿ ದೇವರಾಗಿ ಪೂಜೆಗೊಳ್ಳುತ್ತಿದ್ದರು. ಚೇಳಗುರಿಕೆಗೆ ಬರುವುದಕ್ಕಿಂತ ಮುಂಚೆ ತಾತನು ಕಲ್ಯಾಣದುರ್ಗ, ಬೆಳಗುಪ್ಪೆ, ಮುಸ್ತೂರು, ಉರವಕೊಂಡ, ವೆಲುಗೊಂಡೆ, ಚೀಕಲಗುರಿಕೆ ಮುಂತಾದ ಕಡೆಗಳಲ್ಲಿ ಅಲೆದಾಡುತ್ತಿದ್ದರೆಂದೂ, ಅಲ್ಲೆಲ್ಲಾ ಕೆಲವು ಪವಾಡಗಳನ್ನು ಮಾಡುತ್ತಿದ್ದರೆಂದೂ, ಇಂದಿಗೂ ಜನ ಹೇಳುತ್ತಾರೆ. ಈ ಎಲ್ಲಾ ಮೂಲಗಳಿಂದ ಮತ್ತು ತಾತನವರ ಬಗ್ಗೆ ಬಂದಿರುವ ಗ್ರಂಥಗಳ ಆಧಾರದಿಂದ ಭಕ್ತರು ಈಗಲೂ ಹೇಳುವ ಕೆಲ ಮಾಹಿತಿಗಳಿಂದ ಅವರ ಪೂರ್ವ ಇತಿಹಾಸವನ್ನು ಈ ರೀತಿ ಸಂಗ್ರಹಿಸಲಾಗಿದೆ.

ಹುಟ್ಟಿದ ಸ್ಥಳ, ಬಾಲ್ಯ, ವಿದ್ಯಾಭ್ಯಾಸ : ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಯ ಮುಖ್ಯ ಕೇಂದ್ರಗಳಲ್ಲಿ ಒಂದಾದ ಹಳೇಮೈಸೂರು ಪ್ರಾಂತ್ಯದಲ್ಲಿನ ದೊಡ್ಡ ಬಳ್ಳಾಪುರದ ಪಕ್ಕದಲ್ಲಿನ ಲಿಂಗನಹಳ್ಳಿ ತಾತನವರ ಜನ್ಮ ಸ್ಥಳ. "ಈ ಹಳ್ಳಿಯಲ್ಲಿನ ಶಿವಭಕ್ತರಾದ ನೀಲಕಂಠಾರಾಧ್ಯ ಮತ್ತು ನಿರ್ಮಲಾಂಬಿಕೆ ದಂಪತಿಗಳೇ ತಾತನವರ ತಂದೆ-ತಾಯಿಗಳೆಂದೂ, ತಾತನವರ ಪೂರ್ವ ಹೆಸರು "ನಂಜುಂಡ"ನೆಂದೂ ಗೊತ್ತಾಗಿದೆ."[೪]

ತಾತನವರು ಚಿಕ್ಕನಾಯ್ಕನಹಳ್ಳಿಯವರೆಂದೂ, ಮೊದಲ ಹೆಸರು ನಂಜಪ್ಪಶಾಸ್ತ್ರಿಯೆಂದೂ-ಪ್ರತೀತಿ ಇದೆ. ಅವರು ಚೇಳಗುರ್ಕಿಯಲ್ಲಿದ್ದಾಗ ಚಿಕ್ಕನಾಯ್ಕನಹಳ್ಳಿಯವರು ಬಂದು ಕರೆಯುತ್ತಿದ್ದರೆಂದೂ, ಶ್ರೀ ಎರ್ರಿಸ್ವಾಮಿಗಳ ಲೀಲಾ ವಿಲಾಸದಲ್ಲಿ ಉಲ್ಲೇಖಿಸಿದೆ.

ತಾತನವರು ತುಮಕೂರಿನವರೆಂದೂ, ಮ್ಯಾಜಿಸ್ಟ್ರೇಟ್ ಕೆಲಸ ಮಾಡುತ್ತಿದ್ದರೆಂದೂ, ಉದ್ಯೋಗದಲ್ಲಿದ್ದಾಗಲೇ ತಾತನವರಿಗೆ ನಿರ್ವಿಕಲ್ಪ ಸಮಾಧಿಯಾಗುತ್ತಿತ್ತೆಂದೂ, ಇಂತಹ ಕೆಲವು ಯೋಗಾಭ್ಯಾಸಕ್ಕಾಗಿ ನಿದ್ರಾಹಾರಗಳನ್ನು ತೊರೆದು ಯೋಗಮಗ್ನರಾಗಿರುತ್ತಿದ್ದರೆಂದೂ, ವೀರಶೈವ ತತ್ತ್ವವನ್ನು, ಲಿಂಗಾಂಗ ಸಾಮರಸ್ಯದ ಶಿವಯೋಗವನ್ನು ಚೆನ್ನಾಗಿ ಅರಿತು ಸಿದ್ಧ ಪುರುಷನಾದ ಮಹಾಯೋಗಿಯೂ ಆಗಿದ್ದರೆಂಬ ಅಭಿಪ್ರಾಯವು ಶ್ರೀ ವೈ.ಎಂ.ಚಂದ್ರಯ್ಯನವರು ಸಂಗ್ರಹಿಸಿರುವ ಮಾಹಿತಿಯಿಂದ ತಿಳಿಯುತ್ತದೆ.

ಒಟ್ಟಾರೆ ಲಭ್ಯವಿರುವ ಆಧಾರಗಳಿಂದ ತಾತನವರು ಮೈಸೂರು ಪ್ರಾಂತದ ಲಿಂಗನಹಳ್ಳಿಯವರೆಂದೂ, ಅಲ್ಲಿಯೇ ಅವರು ತತ್ವ ವಿಚಾರಗಳನ್ನು, ಗುರೂಪದೇಶವನ್ನು, ಹಠಯೋಗದಂತಹ ಮಹಾಸಿದ್ಧಿಯ ವಿಷಯಗಳನ್ನು ಅರಿತಿರುವುದು ತಿಳಿಯುತ್ತದೆ. ತಾತನವರು ಬೆಳೆದಂತೆ ತಂದೆ, ತಾಯಿ, ಗುರುಗಳ ಪ್ರೋತ್ಸಾಹದಿಂದ ವಿದ್ಯಾಬುದ್ಧಿಯನ್ನು ಕಲಿತಿದ್ದಾರೆ.

"ಕನ್ನಡದೊಳಂ ಸಂಸ್ಕೃತದೊಳ
ತ್ಯುನ್ನತಾಂಗ್ಲ ಸುಭಾಷೆಯೊಳ ಮು
ತ್ಪನ್ನ ಚತುರತೆಯಾಂತು ಮೇಣಾಂದ್ರಾದಿ ಭಾಷೆಗಳೋಳ್ ।
ಇನ್ನು ತಿಳಿವಂ ಪಡೆದು ಪಿತೃಗಳ

ಕಣ್ಣ ಪುಣ್ಯವ ಮೂರ್ತಿಯೆನಿಸಿದ
ಸನ್ನುತನ ನಂಜುಂಡ ನೋಡಲಪ್ಪಿದುದು ಜೌವನವು"[೫]

ವಿದ್ಯಾವಂತನಾಗಿ, ಬುದ್ಧಿವಂತನಾಗಿ, ಶಾಸ್ತ್ರಪಾರಂಗತನಾಗಿದ್ದ ಹುಡುಗನು ಸತ್ಯ, ಧರ್ಮ, ನ್ಯಾಯ ದಿಂದಿರುವುದನ್ನು ಕಂಡು ತಂದೆ, ತಾಯಿ ಮತ್ತು ಲಿಂಗನಹಳ್ಳಿಯ ಗುರುಗಳಾದ ನಾಗಯ್ಯನವರು ಸಂತೋಷ ದಿಂದ ಬೀಗುತ್ತಿದ್ದರು. ವಿದ್ಯಾವಂತನಾದ ಮಗನು ಉದ್ಯೋಗಿಯಾಗಿರಲಿ ಎನ್ನುವ ತಂದೆ-ತಾಯಿಗಳ ಹಾರೈಕೆ ಯಂತೆ ಕಂದಾಯ ಇಲಾಖೆಯಲ್ಲಿ ಉದ್ಯೋಗಿಯಾಗಿ ನಂತರ ತಾಲ್ಲೂಕು ಅಧಿಕಾರಿಯಾಗಿ ಕಾರ್ಯನಿರ್ವಹಿಸಿ ಗೌರವಗಳನ್ನು ಸಂಪಾದಿಸಿರುತ್ತಾರೆ.

ವಿವಾಹ, ವೈರಾಗ್ಯ, ಗುರೂಪದೇಶ : ಬಹು ಸಾತ್ವಿಕ ಸ್ವಭಾವದವರಾದ ತಾತನವರು, ಲಿಂಗನಹಳ್ಳಿಯ ವೇದಾಂತಿಗಳಾದ ನಾಗಯ್ಯನವರಲ್ಲಿ ಶಿಷ್ಯಭಾವದಿಂದಿದ್ದು, ತತ್ತ್ವವಿಚಾರಗಳನ್ನು ತಿಳಿಯುತ್ತಾ ಉದ್ಯೋಗದಲ್ಲಿ ಬಿಡುವು ಮಾಡಿಕೊಂಡು ಶಿವಯೋಗ ಸಮಾಧಿಯಲ್ಲಿ ಕಾಲಕಳೆಯುತ್ತಿದ್ದರು. ಯಾರೊಂದಿಗೂ ಹೆಚ್ಚಿನ ಮಾತುಕತೆಯಿಲ್ಲ, ಏಕಾಂಗಿ. ಮೌನಸ್ಥಿತಿಯಲ್ಲಿದ್ದ ಮಗನ ವರ್ತನೆಯನ್ನು, ದಿನದಿಂದ ದಿನಕ್ಕೆ ದೈಹಿಕವಾಗಿ, ಮಾನಸಿಕ ವಾಗಿ ಆಗುತ್ತಿರುವ ಬದಲಾವಣೆಯನ್ನು ಕಂಡ ತಂದೆಯು ಮದುವೆಯಾದರೆ ಸರಿಹೋಗಬಹುದೆಂದು ನಿರ್ಧರಿ ಸುತ್ತಾರೆ. "ಮಗನೆ, ಮದುವೆಯಾಗಿ ಸುಖದಿಂದ ಬಾಳು, ಸಂಸಾರಯೋಗವೆ ಶಿವಯೋಗವಾಗುವುದು, ಬಸವಾದಿ-ಪ್ರಮಥರು ಸಂಸಾರದಲ್ಲಿದ್ದು ಭಕ್ತಿಯೋಗ ತೋರಿದ್ದಾರೆ. ಇದಕ್ಕಿಂತ ಮಿಗಿಲಾದುದು ಯಾವುದೂ ಇಲ್ಲ. ಸದ್ಗುಣ ರೂಪದ ಸತಿಯ ಕೈ ಹಿಡಿದು ಸಂಸಾರ ನಡೆಸು"[೬] ಎಂದು ಒತ್ತಾಯಿಸುತ್ತಾರೆ. ಮನಸ್ಸಿಲ್ಲದಿದ್ದರೂ ತಂದೆ, ತಾಯಿಗಳ ಒತ್ತಾಯಕ್ಕೆ ಮಣಿದು ಮದುವೆಯಾಗಲು ಒಪ್ಪಿಗೆ ಕೊಡುತ್ತಾರೆ.

"ಬಳಿಕ ಪಿತೃಗಳು ಹೊನ್ನ ಗಣಿಯಿಂ
ತೊಳಗುವಾ ಕೋಲಾರದೊಳು ಸತ್
ಕುಲದ ಶಿವಶಿವೆಯೆಂಬ ಪಿತೃವರರಲ್ಲಿ ಪುಟ್ಟಿರ್ದ
ಚೆಲುವೆಯಾಗಿ ಸುಭಕ್ತಿ ಗುಣ ಸಂ
ಕಲಿತಳೆನಿಸಿದ ಮಂಜುಳಾಖ್ಯೆಯ
ತಳೆದ ಕನ್ಯೆಯನಾ ಸುತಗೆ ನಿಶ್ಚಯ ಮಾಡಿದರು"[೭]

ವಿವಾಹದೊಂದಿಗೆ ದಾಂಪತ್ಯ ಜೀವನ ಆರಂಭಿಸಿದ ದಂಪತಿಗಳಿಗೆ ಕೆಲವು ವರ್ಷಗಳ ನಂತರ ಗಂಡು ಮಗು ಜನಿಸುತ್ತದೆ. ಆ ಮಗುವಿಗೆ ಶಿವಮೂರ್ತಿಯೆಂದು ನಾಮಕರಣ ಮಾಡಿರುತ್ತಾರೆ. ಹೀಗೆ ತಂದೆ, ತಾಯಿಗಳಿಂದ ಸತಿ-ಸುತರಿಂದ, ಅಧಿಕಾರದಿಂದ, ಗೌರವ ಮಾನ್ಯತೆಗಳು ದೊರೆಯುತ್ತಿರಲು, ಮನಸ್ಸು ಮಾತ್ರ ಆತ್ಮ ಸುಜ್ಞಾನದ ಕಡೆ ಸೆಳೆಯುತ್ತಿರುತ್ತದೆ. ಅಧಿಕಾರ, ಹಣ, ಸಂಸಾರ ಕ್ಷಣಿಕವಾದುದೆಂದು ತಿಳಿದು, ಲೌಕಿಕ ಜೀವನದ ಬಗ್ಗೆ ಜಿಗುಪ್ಸೆ ಮೂಡುತ್ತದೆ. ಗುರುಗಳಾದ ನಾಗಯ್ಯನವರು ಶಿಷ್ಯನು ತನಗಿಂತಲೂ ಬೌದ್ಧಿಕವಾಗಿ ದೊಡ್ಡವನೆಂದು ಮನವರಿಕೆಯಾದಾಗ ಶಿಷ್ಯನನ್ನು (ತಾತ) ಕರೆದು 'ನೀನು ನನ್ನ ಹತ್ತಿರ ತಿಳಿಯಬೇಕಾದದ್ದು ಇನ್ನೇನೂ ಇಲ್ಲಪ್ಪ' ಎಂದು ಹೇಳಿ ದೊಡ್ಡಬಳ್ಳಾಪುರದ ಗಗನಾರ್ಯರಲ್ಲಿಗೆ ಕಳುಹಿಸುತ್ತಾರೆ.

ತಾತನವರು ಗಗನಾರ್ಯರಲ್ಲಿಗೆ ಹೋಗಲು "ಶಿಷ್ಯನನ್ನು ಪರೀಕ್ಷಿಸಬೇಕೆಂದು ಹತ್ತಿರ ಕರೆಯದೇ ಇದ್ದ, ಗಗನಾರ್ಯರ ಮನೆಯಬಾಗಿಲನ್ನು ಎರಡು, ಮೂರು ದಿನ ಕಾಯ್ದು, ಅವರ ಅನುಗ್ರಹಕ್ಕೆ ಪಾತ್ರರಾಗಿ, ಉಪದೇಶವನ್ನು ಪಾಲಿಸಬೇಕೆಂದು ಪ್ರಾರ್ಥಿಸುತ್ತಾರೆ. ಆಗ ಗುರುಗಳು ಬೆತ್ತಲೆಯಾಗಿ ಮೂರು ಸಲ ಊರು ಸುತ್ತಿ ಬಾ ಎಂದು ನಿರೂಪಿಸಲು, ತಾತನು ಅದರಂತೆಯೇ ಮಾಡಿ ತಾನು ನಿರ್ಗ್ರಂಥಿ ಮುನಿಸತ್ತಮನೆಂಬುದನ್ನು ತೋರಿಸಿದರಂತೆ."[೮] ಶಿಷ್ಯನ ಜಿಜ್ಞಾಸೆಯನ್ನು ಕಂಡ ಗುರುಗಳು ತತ್ವ ಸಾಧನೆಯ ಮರ್ಮವನ್ನರುಹಿ, ನಿಶ್ಚಿಚ್ಛೆಯಂತೆ ಸಮಾಧಿಯ ನಿಜಸಿದ್ಧಿಯನ್ನು ಪಡೆಯೆಂದು ಸಾಂಖ್ಯ, ಯೋಗ, ನ್ಯಾಯ, ವೈಶೇಷಿಕ ವಿಮರ್ಶೆ, ಕರ್ಮವಿಚಾರವನ್ನು ಬ್ರಹ್ಮ ಸ್ವರೂಪವನ್ನು ಬೋಧಿಸಿದ್ದಾರೆ.

"ದ್ವೈತದೋಳ್ ಮತ್ತಂ ವಿಶಿಷ್ಟಾ
ದ್ವೈತದೋಳ್ ಜೀವೇಶ ಭೇದವ
ಪೂತ ಮುಕ್ತ ಸ್ಥಿತಿಯೊಳಂ ವಾದಿಸುವುದನು ಚಿತದಾ |
ಮಾತೆನಿಸುವುದು ಶಂಕರೋಕ್ತಾ
ದ್ವೈತದೊಳು ಪರಕಿಪೊಡೆ ಮಿಥ್ಯಾ
ಭೂತವೆನಿಸುವವಿನ್ನು ಜೀವ ಜಗತ್ತುಗಳು ಮತ್ತಂ"[೯]

ದ್ವೈತ ಮತ್ತು ವಿಶಿಷ್ಟಾದ್ವೈತ ಸಿದ್ಧಾಂತದ ಅರ್ಥವನ್ನು ತಿಳಿಸುತ್ತಾ ಅರಿವೇ ಮುಕ್ತಿಗೆ ಕಾರಣವೆಂದೂ, ಸತ್ ಕ್ರಿಯೆಗಳಿಂದ ಚಿತ್ತಶುದ್ಧಿಯೆಂದೂ, ಅದ್ವೈತ ಸಾಧನೆಯಿಂದ ತತ್ತ್ವವಿಚಾರವ ತಿಳಿಯಬೇಕೆಂದು ಗುರೂಪದೇಶ ನೀಡಿದ್ದಾರೆ. ಗುರೂಪದೇಶದಿಂದ ಪ್ರಭಾವಿತರಾದ ತಾತನವರು ಲಿಂಗನಹಳ್ಳಿಯನ್ನೂ, ತಂದೆ, ತಾಯಿ, ಹೆಂಡತಿ, ಮಗುವಿನ ಮಮತೆಯನ್ನೇ ಮರೆತು, ಗಗನಾರ್ಯರಲ್ಲಿಯೇ ಇದ್ದು, ಗುರುಸೇವೆ ಮಾಡುತ್ತಿರುವಾಗ, ಗುರು ಮತ್ತು ಶಿಷ್ಯರ ಮಧ್ಯೆ ಒಂದು ಘಟನೆ ನಡೆದಿದೆ. "ಗಗನಾರ್ಯರ ಯಾವುದೋ ಒಂದು ಕೈಬರಹದ ಗ್ರಂಥದ ಕೆಲವು ಪುಟಗಳು ಗೆದ್ದಲು ತಿಂದು ಹಾಳಾಗಿರುತ್ತವೆ. ಅದನ್ನು ಮತ್ತೆ ಬರೆಯಲು ಜ್ಞಾಪಕವಿಲ್ಲದ್ದಕ್ಕಾಗಿ ಚಿಂತಿಸುತ್ತಿರುತ್ತಾರೆ. ಆಗ ತಾತನವರು ಗ್ರಂಥದ ಶಿಥಿಲಭಾಗಗಳನ್ನೆಲ್ಲಾ ಬರೆದು ಒಂದು ನೂತನ ಪ್ರತಿಯನ್ನೇ ಸಿದ್ಧಪಡಿಸಿದ್ದರು. ಇದನ್ನು ಕಂಡ ಗುರುಗಳು ಆಶ್ಚರ್ಯಚಕಿತರಾಗಿ ನೀನು ಸಾಮಾನ್ಯನಲ್ಲಪ್ಪ, ನಿರಂಜನಮೂರ್ತಿ ಎಂದರು."[೧೦] ಅಂದಿನಿಂದ ತಾತನವರಿಗೆ ನಿರಂಜನರೆಂಬ ಹೆಸರು ಪ್ರಾಪ್ತವಾಗಿದೆ.

ಮೈಸೂರಿನ ಆಗಿನ ಅರಸರಾಗಿದ್ದ ಶ್ರೀಕೃಷ್ಣರಾಜೇಂದ್ರರು ನಡೆಸುತ್ತಿದ್ದ, ಅನುಭವಗೋಷ್ಠಿಗೆ ಗಗನಾರ್ಯರು ಹೋಗುತ್ತಿದ್ದರೆಂದೂ, ಕೆಲವು ಕಾಲನಂತರ ಆ ಕಾರ್ಯಭಾರವನ್ನು ಶಿಷ್ಯರಾದ ನಿರಂಜನರಿಗೆ (ತಾತ) ವಹಿಸಿದ್ದಾರೆ. ಹೀಗೆ ಗುರುಗಳು ಲಿಂಗೈಕ್ಯರಾಗುವವರೆಗೂ ತಾತನವರು ಅವರ ಸೇವೆ ಮಾಡಿದ್ದಾರೆ. ನಂತರ ಅವರ ಸಮಾಧಿಯಿರುವ ಸ್ಥಳದಲ್ಲೇ ಕೆಲವು ದಿನಗಳಿದ್ದು, ಮುಂದೆ ಚನ್ನರಾಯಪಟ್ಟಣದ ಗವಿಯೊಳಗೆ ಹೋಗಿ ಯೋಗ ಸಾಧನೆ ಮಾಡಿ ಬಂದಿದ್ದಾರೆ. ಆಗ ತಾತನವರಿಗೆ ಕೈತುಂಬಾ ಉಗುರು ಬೆಳೆದಿದ್ದವೆಂತಲೂ ಒಂದು ಕಂಬಳಿ, ಒಂದು ಕೌಪೀನ ಬಿಟ್ಟು ದೇಹದ ಮೇಲೆ ಇನ್ನೇನೂ ಇರಲಿಲ್ಲವೆಂತಲೂ, ಆಗಾಗ ಗಾಂಜಾ ಸೇದುತ್ತಿದ್ದರೆಂದೂ, ತಮ್ಮದೇ ಆದ ಒಂದು ಪ್ರತ್ಯೇಕ ಚಿಲುಮೆಯಿತ್ತೆಂದೂ, ಬೇರೆ ಯಾರಿಗೂ ಚಿಲುಮೆಯನ್ನು

ಕೊಡುತ್ತಿರಲಿಲ್ಲ ವೆಂದೂ, ಚಂದ್ರಯ್ಯನವರು, ಸಂಗ್ರಹಿಸಿರುವ ಜನಾಭಿಪ್ರಾಯದಿಂದ ತಿಳಿಯುತ್ತದೆ. ಈ ಸ್ಥಿತಿ ತಲುಪಿದ ತಾತನವರಿಗೆ ಸಂಸಾರ ಹಾಗೂ ಉದ್ಯೋಗ ಎರಡರಲ್ಲೂ ನಿರಾಸಕ್ತಿ ಮೂಡಿ, ಸಾಮಾಜಿಕ ಬಂಧನದಿಂದ ಬಿಡುಗಡೆ ಹೊಂದಿ, ಮೌನ ಮತ್ತು ಏಕಾಂತವಾಗಿರಲು ಬಯಸುತ್ತಿದ್ದರು.

ಆ ಸಮಯದಲ್ಲಿ ತಾತನವರಿಗೆ ತುಮಕೂರಿಗೆ ವರ್ಗಾವಣೆಯಾಗುತ್ತದೆ. ಕೆಲಸ ಮಾಡುವ ಸಮಯದಲ್ಲಿ ನಿಷ್ಠೆಯಿಂದಿದ್ದು, ಬಿಡುವಿನ ಸಮಯದಲ್ಲಿ ಯೋಗಮಾರ್ಗವನ್ನು, ನಿರ್ವಿಕಲ್ಪ ಸ್ಥಿತಿಯನ್ನೂ ಅಭ್ಯಾಸ ಮಾಡುತ್ತಿದ್ದರು. ಲೌಕಿಕ ಬಂಧನದಿಂದ ಬಿಡುಗಡೆ ಹೊಂದಲು ಹಾತೊರೆಯುತ್ತಿದ್ದ ತಾತನವರು, ಒಂದು ವರ್ಷ ರಜೆ ಪಡೆದು ಮನೆಯವರನ್ನೆಲ್ಲಾ ಒಪ್ಪಿಸಿ, ಬೇಗ ಮರಳಿ ಬರುವುದಾಗಿ ಸಂತೈಸಿ, ಸಂಸಾರ ಬಂಧನದಿಂದ ಮುಕ್ತನಾಗಿ, ಚಿಕ್ಕನಾಯ್ಕನಹಳ್ಳಿ, ಕೂಪೂರು ಗ್ರಾಮಗಳನ್ನು ದಾಟುತ್ತಾ ಮಲ್ಲೇಶ್ವರ ಬೆಟ್ಟದ ಗವಿಯಲ್ಲಿ ಕೆಲವು ದಿನ ವಾಸವಾಗಿದ್ದಾರೆ. ಮುಂದೆ ರಂಗಾಪುರದ ರಂಗನಾಥಸ್ವಾಮಿ ಬೆಟ್ಟದ ಗವಿಯಲ್ಲಿದ್ದಾಗ, ಅವರನ್ನು ನಾಗಯ್ಯನೆಂದೂ, ನಾಗೇಂದ್ರನೆಂದೂ, ನಾಗೇಶಯೋಗಿಯೆಂದೂ ಕರೆಯುತ್ತಿದ್ದು, ಆ ಸಮಯದಲ್ಲಿ ಅವರು ಪೂರ್ಣಾವಧೂತ ಸ್ಥಿತಿಯಲ್ಲಿದ್ದರೆಂಬುದು ಜನಾಭಿಪ್ರಾಯದಿಂದ ತಿಳಿಯುತ್ತದೆ.

ಲೌಕಿಕ ಸುಖಕ್ಕೆ ನೌಕರಿ, ಸಂಸಾರದ ಸಂತೋಷಕ್ಕೆ ಸತಿ-ಸುತರು, ತಂದೆ-ತಾಯಿಗಳು ಇದ್ದರೂ, ಇದಾವುದೂ ಬೇಕಿಲ್ಲದ ತಾತನು, ಎಲ್ಲವನ್ನೂ ತ್ಯಜಿಸಿ, ಸಂಚಾರಿಯಾಗಿ, ಹಸಿವು, ಬಾಯಾರಿಕೆಗಳ ಅರಿವಿಲ್ಲದೆ ಬೆಟ್ಟ ಗುಹೆಗಳಲ್ಲಿ ವಾಸಮಾಡತೊಡಗಿದ್ದಾರೆ.

ಅವಧೂತ ಸ್ಥಿತಿ : ರಂಗನಾಥ ಸ್ವಾಮಿಯ ಬೆಟ್ಟದಲ್ಲಿ ತಾತನು ಪೂರ್ಣಾವಧೂತ ಸ್ಥಿತಿಯಲ್ಲಿದ್ದಾಗ,

"ತಲೆಯ ಜಡೆಯೊಳು ಗಡ್ಡಮೀಸೆಗ
ಳೊಳು ಸುದೀರ್ಘ ನಂಖಗಳೊಳು ಶಿವ
ಕಳೆಯೊಳೆಸೆವಾಸ್ವಾಮಿಯಂತಿರಲೂರವರು ಬಂದು।
ಅಲಘು ಭಕ್ತಿಯೊಳೆರಗಿ, ಬಯಸಿದ
ಫಲವನೀಯುವ ಯೋಗಿ ಯಾರೋ
ನೆಲಸಿದುದು ಬಂದಿಲ್ಲಿ ನಮ್ಮಯ ಪುಣ್ಯವೆಂದರಿದು"[೧೧]

ತುಂಡು ಬಟ್ಟೆ, ಕಂಬಳಿ, ತಲೆತುಂಬಾ ಕೂದಲು, ಗಡ್ಡ ಮೀಸೆಗಳು, ಬೆರಳ ತುಂಬಾ ಉಗುರುಗಳು, ಮೈತುಂಬಾ ಮಲಿನ, ಆದರೆ ಮುಖದಲ್ಲಿ ಮಾತ್ರ ಮಿಂಚಿನ ಕಳೆಯಿಂದ ಒಬ್ಬ ಸಾಧುವಿನಂತೆ ಕಾಣುತ್ತಾರೆ. ದರ್ಶನಕ್ಕಾಗಿ ಬರುವವರ ಸಂಖ್ಯೆ ಹೆಚ್ಚಾಗುತ್ತದೆ. ಗದ್ದಲ ವಾತಾವರಣ ನಿರ್ಮಾಣವಾದಾಗ ಆ ಸ್ಥಳವೂ ಬೇಸರವಾಗಿ, ಅದನ್ನು ಬಿಟ್ಟು ಸಿರಾ, ಹಿರಿಯೂರು, ಕಳವಿಬಾಗಿ, ಸಾಣೇಕೆರೆ ಮಾರ್ಗವಾಗಿ ಪರಿವ್ರಾಜಕನಂತೆ ಊರೂರು ಅಲೆಯುತ್ತಾ ಕಲ್ಯಾಣದುರ್ಗಕ್ಕೆ ಬಂದಿರುತ್ತಾರೆ.

ಕಲ್ಯಾಣದುರ್ಗಕ್ಕೆ ಬಂದ ನಂತರದ ದಿನಗಳಲ್ಲಿ ನಡೆದ ಪ್ರಮುಖ ಘಟನೆಗಳು ತಾತನವರ ಲೀಲೆಗಳಾಗಿವೆ. ಸ್ನಾನವಿಲ್ಲದೆ, ಮೈಮೇಲೆ ಬಟ್ಟೆಯಿಲ್ಲದೆ, ಅನ್ನ-ನೀರಿಲ್ಲದೆ, ಸದಾ ಮೌನಿಯಾಗಿ ತಿರುಗಾಡುತ್ತಿದ್ದ ತಾತನು ಕಲ್ಯಾಣದುರ್ಗದಲ್ಲಿ ಎತ್ತರವಾದ ಬೇವಿನ ಕಟ್ಟೆಯ ಮೇಲೆ ಯೋಗ ನಿದ್ರೆಯಲ್ಲಿದ್ದಾಗ, ಹಾವೊಂದು ಮೈ

ಮೇಲೆ ಹರಿದಾಡಿ ಸುತ್ತಿಕೊಳ್ಳುತ್ತದೆ. ಯಾರೋ ಹುಚ್ಚನಿರಬೇಕೆಂದು ತಿಳಿದ ಜನ ಈ ದೃಶ್ಯವನ್ನು ಕಂಡು ಬೆಚ್ಚಿ ಬೆರಗಾಗಿದ್ದಾರೆ. ಹಾವು ತಕ್ಷಣ ಮಾಯವಾದುದನ್ನು ಕಂಡ ಜನ ಈತ ಸಾಮಾನ್ಯನಲ್ಲ ಮಹಾತ್ಮನೆಂದು ಭಯ-ಭಕ್ತಿ ತಾಳಿದ್ದಾರೆ. ಇದಾದ ಕೆಲದಿನಗಳಲ್ಲಿ ಬಿರುಸಾದ ಮಳೆಗೆ ಸಿಕ್ಕ ತಾತನು ಕಸಕಟ್ಟಿಗಳು ತುಂಬಿದ ತಗ್ಗಿನಲ್ಲಿ ಹೂತುಹೋಗಿ ಎರಡು ದಿನಗಳ ನಂತರ ನೋಡಿದರೆ ಅಲ್ಲೆ ಉಸಿರಾಡುತ್ತಿದ್ದರಂತೆ. ಇಂಥ ಘಟನೆಗಳನ್ನು ಕಣ್ಣಾರೆ ಕಂಡ ಜನ, ಈತ ಮಹಿಮಾಪುರುಷನಿರಬೇಕೆಂದು ಹೊಗಳಿ ಭಯ-ಭಕ್ತಿಯಿಂದ ಕಾಣುತ್ತಾರೆ. ಈ ಸುದ್ದಿ ಊರಿಂದೂರಿಗೆ ಹರಡುತ್ತದೆ. ಹುಚ್ಚುತನದಿಂದ, ಬತ್ತಲೆಯಾಗಿ ತಿರುಗಾಡುತ್ತಿದ್ದಾರೆಂಬ ವಿಷಯವನ್ನು ತಿಳಿದ ತಾತನ ಹೆಂಡತಿ ಮಂಜುಳೆ ಮಗು ಸಮೇತ ಕಲ್ಯಾಣದುರ್ಗಕ್ಕೆ ಬರುತ್ತಾಳೆ. ತಾತನವರ ಪೂರ್ಣಾವಧೂತ ಸ್ಥಿತಿಯನ್ನು ಕಂಡ ಮಂಜುಳೆ ಇವರನ್ನು ಕರೆದೊಯ್ಯುವುದು ಅಸಾಧ್ಯವೆಂದೂ, ಅಪ್ರಯೋಜಕವೆಂದು ತಿಳಿದು ಹಿಂದಿರುಗಿ ಹೋಗಿಬಿಟ್ಟಿದ್ದಾರೆ. ಹೀಗೆ ಸಂಸಾರದಿಂದ ಸಂಪೂರ್ಣ ಮುಕ್ತಿ ಪಡೆದ ತಾತನು ಸದಾ ಏಕಾಂತತೆಯನ್ನು ಬಯಸುತ್ತಾ ಅರಿವಿಲ್ಲದೆ ಮತ್ತೊಂದು ಗ್ರಾಮಕ್ಕೆ ಹೋಗುತ್ತಿದ್ದರು.

ವಿವಿಧ ಗ್ರಾಮಗಳಲ್ಲಿ ತೋರಿದ ಮಹಿಮೆಗಳು

ಕಲ್ಯಾಣದುರ್ಗದಿಂದ ಅಲೆದಾಡುತ್ತ ಬೆಳಗುಪ್ಪೆಗೆ ಬಂದು, ದಿಗಂಬರ ಸ್ಥಿತಿಯಲ್ಲಿ, ಪೂರ್ಣಪರವಶರಾಗಿ ತಿರುಗಾಡುತ್ತಿರುತ್ತಾರೆ. ಇಂಥ ಸ್ಥಿತಿಯನ್ನು ಕಂಡ ಕೆಲವರು ''ಜ್ಞಾನ ಶೂನ್ಯನು, ಎರ್ರಿ(ಹುಚ್ಚ)ಯೆಂದು ಕರೆದರು.'' ಆ ಹುಚ್ಚು ಜನರು ಇಟ್ಟ ಹೆಸರೆ ಶಾಶ್ವತವಾಗಿ 'ಎರ್ರಿತಾತ'ನೆಂದು ಪ್ರಚಾರವಾಗಿದೆ. ತಾತನವರ ಈ ನಗ್ನ ಸ್ಥಿತಿಯನ್ನು ಕಂಡು ಜನರು ನಾಚಿಕೊಂಡೋ ಭಯಗೊಂಡೋ ಓಡಿಹೋಗುತ್ತಿರುತ್ತಾರೆ. ಅವರಲ್ಲಿ ನೀರು ತರುತ್ತಿದ್ದ ಒಬ್ಬ ಹೆಣ್ಣುಮಗಳು ಹಾಗೇ ನಿಂತೇ ಇದ್ದಳು. ಆಗ ತಾತನವರು ಆಕೆಯ ಎದೆ ಮುಟ್ಟಲು, ಅದರ ಪರಿಣಾಮವಾಗಿ ಬಂಜೆಯಾಗಿದ್ದ ಆ ಹೆಂಗಸು ಮುಂದೆ ಗರ್ಭವತಿಯಾದಳೆಂಬ ಪ್ರತೀತಿಯೂ ಇದೆ.

ಆದರೆ ಶಿ.ವ.ಚನ್ನಬಸವೇಶ್ವರರು ತಮ್ಮ ಲೀಲಾವಿಲಾಸ ಗ್ರಂಥದಲ್ಲಿ ಬೆಳುಗುಪ್ಪೆಯಲ್ಲಿದ್ದ ಎರ್ರಿಸ್ವಾಮಿಯೇ ಬೇರೆ, ಚೇಳಗುರಿಕೆಯ ಎರ್ರಿಸ್ವಾಮಿಯೇ ಬೇರೆ ಎಂದೂ, ಈ ಮೇಲಿನ ಘಟನೆ ನಡೆದದ್ದು ಬೆಳುಗುಪ್ಪೆಯ ಎರ್ರಿಸ್ವಾಮಿಯಿಂದ ಎಂದು ತಿಳಿಸಿದ್ದಾರೆ. ಬೆಳುಗುಪ್ಪೆಯಲ್ಲಿದ್ದಾಗ ತಾತನು ಒಂದು ಬಾವಿಯಲ್ಲಿ ಮುಳುಗಿ, ಮತ್ತೊಂದು ಬಾವಿಯಲ್ಲಿ ತೇಲುತ್ತಿದ್ದರೆಂದೂ, ತುಂಬಾ ಹೊತ್ತು ಬಾವಿಯಲ್ಲಿ ಮುಳುಗುವುದೂ, ತೇಲುವುದೂ ಮಾಡುತ್ತಿದ್ದರೆಂದೂ ಜೊತೆಗೆ ಹಲವಾರು ಪವಾಡಗಳನ್ನು ಮಾಡುತ್ತಿದ್ದರೆಂದೂ ತಿಳಿಯುತ್ತದೆ. ತಾತನವರಲ್ಲಿದ್ದ ಹುಚ್ಚು ಭಾವನೆ ಸಂಪೂರ್ಣ ಮಾಯವಾಗಿ, ದೇವರೆಂದೂ, ಪವಾಡ ಪುರುಷನೆಂದೂ ಜನ ಪೂಜಿಸ ತೊಡಗುತ್ತಾರೆ. ಹಾಗೆಯೇ ತಾತನವರು ತನ್ನನ್ನು ನಂಬಿದ ಶುದ್ಧ ಮನಸ್ಸಿನ ಭಕ್ತರ ಕಷ್ಟಗಳನ್ನು, ನೋವುಗಳನ್ನು ಪರಿಹರಿಸಿ, ಉದ್ಧಾರ ಮಾಡುತ್ತಿದ್ದರೆಂಬ ವಿಷಯ ತಿಳಿಯುತ್ತದೆ.

ತಾತನ ನಿಷ್ಠಾವಂತ ಭಕ್ತಳಾಗಿದ್ದ ಕುರುಬರ ಲಕ್ಷ್ಮಮ್ಮ ಎಂಬುವವಳು ಅಧಿಕ ಬಡತನದಲ್ಲಿ ಬಳಲುತ್ತಿದ್ದಾಗ ಆಕೆಯ ಅಜ್ಜನು ಊರಿಗೆ ಹೋಗುವ ಸಂದರ್ಭದಲ್ಲಿ, ತಾತನು ಮಾರ್ಗ ಮಧ್ಯದಲ್ಲಿ ಆತನನ್ನು ಕರೆದು, ಒಂದು ಹುತ್ತದ ಜಾಗಕ್ಕೆ ಕರೆದುಕೊಂಡು ಹೋಗುತ್ತಾರೆ. ಅಲ್ಲಿ ''ಕಂಬಳಿ ಹಾಸಿ ಕಣ್ಣು ಮುಚ್ಚಯ್ಯ'' ಎಂದು ಹುತ್ತದಿಂದ ಹಾವೊಂದನ್ನು ತೆಗೆದು ಕಂಬಳಿಯಲ್ಲಿಟ್ಟು, ಆತನಿಗೆ ನೀಡುತ್ತಾ, ದೇವರ ಜಗುಲಿಯೊಳಿಟ್ಟು

ಪೂಜಿಸಿ ನಂತರ ಬಿಚ್ಚಿ ಎಂದು ಹೇಳಿ ಕಳುಹಿಸುತ್ತಾರೆ. ಆ ಮುದುಕ ಹೆದರಿ ಮನೆಗೆ ಬಂದು ಪೂಜಿಸಿ ನೋಡಲು, ಹಾವು ಬಂಗಾರದ ಗಟ್ಟಿಯಾಗಿತ್ತೆಂದು ಸ್ವತಃ ಲಕ್ಷ್ಮಮ್ಮನವರು ತಿಳಿಸಿದ ವಿಷಯವನ್ನು ಶಿ.ವ.ಚನ್ನಬಸವೇಶ್ವರರು ತಮ್ಮ ಕೃತಿಯಲ್ಲಿ ಉಲ್ಲೇಖಿಸಿದ್ದಾರೆ. ಹೀಗೆ ನಂಬಿದ ಭಕ್ತರ ಕಷ್ಟಗಳನ್ನು ಪವಾಡ ಸದೃಶದಿಂದ ಪರಿಪರಿಸಿ, ಉದ್ಧರಿಸಿದ ತಾತನವರು ಹುಚ್ಚನಂತೆ ಕಂಡರೂ ಅದ್ಭುತವಾದ ಶಕ್ತಿ ಪಡೆದಿದ್ದರು. ಇಂಥ ಶಕ್ತಿಯನ್ನು ಸ್ವಾರ್ಥಕ್ಕಾಗಿ ಬಳಸದೆ, ನಿಸ್ವಾರ್ಥತೆಯಿಂದ, ನಂಬಿದ ಭಕ್ತರ ಸಮಸ್ಯೆಗಳ ಪರಿಹಾರಕ್ಕಾಗಿ ಬಳಸಿರುವುದು ತಿಳಿಯುತ್ತದೆ. ಆದರೆ ನಿಂತಲ್ಲೆ ನೆಲೆ ನಿಲ್ಲುವುದು ಅವರ ಸ್ವಭಾವವಲ್ಲ. ತನಗೆ ತಿಳಿದಷ್ಟು ದಿನ ಮಾತ್ರ ಇದ್ದು, ನಂತರ ಯಾರಿಗೂ ಗೊತ್ತಾಗದ ಹಾಗೆ ಮುಂದಿನ ಊರಿಗೆ ಹೊರಡುತ್ತಿದ್ದರು.

ಬೆಳಗುಪ್ಪೆಯಿಂದ ಮುಸ್ಟೂರಿಗೆ ಬಂದು ಊರಹೊರಗಿನ ರಾಮಲಮ್ಮನ ಗುಡಿಯೊಳಗಿದ್ದು, ನಂತರ ಊರೊಳಗಿನ ಶಿವದೇವಾಲಯದಲ್ಲಿ ಕೆಲದಿನವಾಸವಾಗಿದ್ದಾರೆ. ಶಿವದೇವಾಲಯದಲ್ಲಿದ್ದಾಗ, ಅಲ್ಲಿದ್ದ ಕಲ್ಲು ಬಸವನನ್ನು ನಡೆಸಿರುವುದಾಗಿ ತಿಳಿಯುತ್ತದೆ.

"ನೋಡಿ ಲಿಂಗದ ಮುಂದೆಸೆವ ಕಳೆ
ಗೂಡಿರುವ ಬಸವಣ್ಣನಂ ನಡೆ
ನಡೆ ನೀಂ ಮುಂದಕ್ಕೆನಲು ತದ್ಗುರುವು ನುಣ್ಣಲ್ಲಿಂ ।
ಮಾಡಿರುವ ತನ್ಮೂರ್ತಿ ನಡೆದುದು
ಮೂಡಿಸುತ್ತಚ್ಚರಿ ನಲಿವುಗಳ
ನೋಡುವಲ್ಲಿಯ ಜನರ ಮನದೊಳ್ ನಡೆದ ಲೀಲೆಯಿಂದಾ"[೧೨]

ಈ ರೀತಿ ಕಲ್ಲು ಮೂರ್ತಿ ಬಸವನನ್ನು ನಡೆಸಿ, ಆ ಊರಿನ ತಿಪ್ಪಾರೆಡ್ಡಿಯ ಮಾವಿನ ತೋಟದಲ್ಲಿದ್ದು, ಗಿಡಗಳಿಗೆ ನೀರು ಹಾಕುತ್ತಾ, ಬಿಡುವಿನಲ್ಲಿ ಧ್ಯಾನ ಮಾಡುತ್ತಾ ವಾಸವಾಗಿದ್ದರು.

ಹಿರೇಮುಸ್ಟೂರಿನ ಸಿದ್ಧೇಶ್ವರನ ಜಾತ್ರೆಯ ಗಲಾಟೆಯಲ್ಲಿ ಪರವಶನಾಗಿ ಓಡಾಡುತ್ತಿರುವಾಗ, ಯಾರೋ ಹಿಡಿದಿದ್ದ ಪಂಜಿನ ಕೆಂಡವೊಂದು ಜಡೆಗಟ್ಟಿದ ತಾತನ ತಲೆಯ ಮೇಲೆ ಬಿದ್ದು ಸುಡುತ್ತಿರುತ್ತದೆ. ಬೆಂಕಿ ಬಿದ್ದರೂ ಅದರ ಅರಿವಿರದೆ ಸುಮ್ಮನೇ ಇದ್ದ ತಾತನನ್ನು ಕಂಡ ಜನ ಇವನೆಂಥಾ ಹುಚ್ಚನೆಂದೂ, ಇನ್ನೂ ಕೆಲವರು ಇವನೆಂಥಾ ಮಹಾತ್ಮನೆಂದೂ ಕೈಮುಗಿಯುತ್ತಾ ಬೆಂಕಿಯನ್ನು ನಂದಿಸಿರುತ್ತಾರೆ. ಅಲ್ಲಿಂದ ಮುಂದೆ ಮುಸ್ಟೂರನ್ನು ಬಿಟ್ಟು ಬರುವಾಗ ಮಾರ್ಗಮಧ್ಯದಲ್ಲಿ ಪ್ರಾಣ ಕಳೆದುಕೊಂಡು ಬಿದ್ದಿದ್ದ ಹದ್ದನ್ನು 'ಎದ್ದು ಹೋಗಯ್ಯ' ಎನಲು, ಅದು ಬದುಕಿ ಹಾರಿಹೋಯಿತೆಂದೂ ತಿಳಿಯುತ್ತದೆ. ಹೀಗೆ ಊರೂರು ಅಲೆದಾಡುತ್ತಿರುವಾಗ ಒಂದೇ ಸಲ ಮೂರ್‍ನಾಲ್ಕು ಊರುಗಳಲ್ಲಿ ಕಾಣುತ್ತಿದ್ದರೆಂದೂ ಅಲ್ಲಿನ ಜನರ ಜೊತೆ ಮಾತನಾಡುತ್ತಿದ್ದರೆಂದೂ ಸಂಗ್ರಹಿತ ಮಾಹಿತಿಯಿಂದ ತಿಳಿಯುತ್ತದೆ.

ಮುಸ್ಟೂರನ್ನು ಬಿಟ್ಟ ತಾತನು ಉರುವಕೊಂಡಕ್ಕೂ ಬಂದು, ಅಲ್ಲಿಯೂ ಅನೇಕ ಪವಾಡಗಳನ್ನು ಮಾಡಿದ್ದಾರೆ. ಊರಲ್ಲಿಯ ಕೆರೆಗಳಲ್ಲಿ, ಬಾವಿಗಳಲ್ಲಿ ತನ್ನಿಚ್ಛೆ ಬಂದಂತೆ ಈಜುತ್ತಿದ್ದ ತಾತನು ಗಂಟೆಗಟ್ಟಲೆ,

ದಿನಗಟ್ಟಲೆ ನೀರಿನಿಂದ ಹೊರಬರುತ್ತಿರಲಿಲ್ಲ. ಯಾರಾದರು ಏನಾದರೂ ಕೊಟ್ಟರೆ ತಿನ್ನುವುದು ಮತ್ತೆ ನೀರಿನಲ್ಲಿ ಮುಳುಗುವುದು ಮನಸ್ಸಿಗೆ ಬಂದಾಗ ಹೊರಬರುವುದು ಇದು ದಿನ ನಿತ್ಯದ ಅಭ್ಯಾಸ ವಾಗಿರುತ್ತದೆ. ಹೀಗಿರುವಾಗ ಒಂದು ದಿನ ಒಬ್ಬ ಮುಸ್ಲಿಂ ಯುವಕ ತಾತನನ್ನು ಕೆಣಕಲು, ಈಜುತ್ತಿದ್ದ ಅವರ ಮೇಲೆ ಜಿಗಿದು ಹಾರುತ್ತಾನೆ. ಮುಳುಗಿದ ತಾತ ಎಷ್ಟು ಹೊತ್ತಾದರೂ ಮೇಲೆ ಬರಲಿಲ್ಲ. ಗಾಬರಿಗೊಂಡ ಯುವಕ ಹೆದರಿಕೆಯಿಂದ ಮನೆಗೆ ಹೋಗುತ್ತಾನೆ. ಹೋಗುವಾಗ ದಾರಿಯಲ್ಲಿನ ಬಸವಣ್ಣನ ಗುಡಿಯಲ್ಲಿ ತಾತನವರು ಇದ್ದುದು ಕಂಡು ಬರುತ್ತದೆ.

ನೋಡಲು ಹುಚ್ಚನಂತೆ, ವಿಚಿತ್ರವಾಗಿ ತಿರುಗಾಡುತ್ತಿದ್ದ ಇವರ ಮೇಲೆ ಕೆಲ ಪುಂಡುಪೋಕರಿಗಳು, ಹಾಸ್ಯ ಮಾಡುತ್ತಾ, ಕಲ್ಲುಗಳನ್ನು ಎಸೆದರೆ, ಅದಕ್ಕೆ ಏನನ್ನೂ ಪ್ರತಿಕ್ರಿಯೆ ತೋರದೆ, ಊರೆಲ್ಲಾ ತಿರುಗಾಡುತ್ತಾ ತನಗಿಷ್ಟ ಬಂದವರ ಮನೆಯಲ್ಲಿ ತಂಗುತ್ತಿರುತ್ತಾರೆ. ಇಂತಹ ಯೋಗಿಗೆ ಆಶ್ರಯ ಕೊಟ್ಟು, ಉಪಚಾರ ಮಾಡಿದ ಮನೆಗಳು, ಮನೆತನಗಳು ಉದ್ಧಾರವಾಗಿರುವುದು ತಿಳಿಯುತ್ತದೆ. ದಿನ ಕಳೆದಂತೆ ತಾತನ ಬಗ್ಗೆ ಇದ್ದ ಹುಚ್ಚು ಭಾವನೆಗಳು ಕರಗಿ, ಜನರಲ್ಲಿ ಭಕ್ತಿ-ಭಾವಗಳು ಮೂಡಲಾರಂಭಿಸುತ್ತವೆ. ತಮ್ಮ ಕಷ್ಟ-ಸುಖಿಕ್ಕೆಲ್ಲಾ ತಾತನೇ ಕಾರಣವೆಂದು ನಂಬಿ, ತಮ್ಮೆಲ್ಲಾ ಸಮಸ್ಯೆಗಳಿಗೆ ಅವರಲ್ಲಿ ಮೊರೆ ಹೋಗುವುದು ಹೆಚ್ಚಾಗುತ್ತದೆ. ''ಮಕ್ಕಳಿಗೆ ಜ್ವರ ಬರುತ್ತಿದೆ, ತಾತ ಏನು ಮಾಡಬೇಕು ಎಂದು ಕೇಳಿದ ತಾಯಂದಿರಿಗೆ ಬೆಲ್ಲ ತಾ ನಿಲ್ಲಿಸ್ತೀನಿ ಎಂದು ಹೇಳಿ, ಅದರಂತೆ ಜ್ವರ ನಿಲ್ಲಿಸಿದ್ದಾರೆ. ಮನದಲ್ಲಿ ನಂಬಿಕೆ ಇಲ್ಲದವರು ಬಂದು ಕೇಳಿದರೆ 'ಜಯ ನಮಃ ಪಾರ್ವತಿ ಹರಹರ ಮಹಾದೇವ' ಎನ್ನುತ್ತಿದ್ದರಂತೆ. ಹಾಗೆಂದಾಗ ಆ ಮನೆಯ ಮಕ್ಕಳು ಸಾಯುತ್ತಿದ್ದರಂತೆ.''[೧೩] ಹೀಗೆ ತಾತನು ಜನತೆಯ ಕಷ್ಟಗಳನ್ನು ವಿಘ್ನಗಳನ್ನು ಪರಿಹರಿಸುತ್ತಾರೆ ಎನ್ನುವ ವಿಷಯ ತಿಳಿದ ಕಳ್ಳರ ಗುಂಪೊಂದು ಬಂದು ಈ ಎರ್ರಿ ದೇವರು ಹೇಳ್ತಾನಂತೆ, ಕೇಳಿ ಕಳ್ಳತನಕ್ಕೆ ಹೋಗೋಣ ಎಂದು ಗುಡಿಯಲ್ಲಿ ಮಲಗಿದ್ದ ತಾತನನ್ನು ಎಬ್ಬಿಸಿ ಕೇಳುತ್ತಾರೆ. ಅಂತರ್ಮುಖಿಯಾದ ತಾತನು ಅವರ ಮಾತಿಗೆ ಮರುತ್ತರ ಕೊಡದೆ ಮೌನಿಯಾಗಿರುತ್ತಾರೆ. ಕೋಪಗೊಂಡ ಕಳ್ಳರು ತಮ್ಮಲ್ಲಿದ್ದ ಕಾಯಿಗಳನ್ನು ಅವರ ತಲೆಗೆ ಹೊಡೆಯಲು, ಆಗಲೂ ಮೌನಿಯಾಗಿದ್ದು, ಸಮಾಧಿ ಸ್ಥಿತಿಯಲ್ಲಿದ್ದಂತೆ ಧ್ಯಾನಾಸಕ್ತರಾಗಿರುತ್ತಾರೆ. ಬೇಸತ್ತ ಕಳ್ಳರು ಕಳ್ಳತನಕ್ಕೆ ಹೋಗಲು, ಅಲ್ಲಿ ಪೊಲೀಸರ ಕೈಗೆ ಸಿಕ್ಕು ಕೆಲವರು ಜೈಲಿಗೆ ಹೋದರೆ, ಮತ್ತೆ ಕೆಲವರು ತಮ್ಮ ತಮ್ಮಲ್ಲೆ ಹೊಡೆದಾಡಿ ಸತ್ತಿರುವುದು ತಿಳಿ ಯುತ್ತದೆ. ಈ ರೀತಿ ಲೀಲೆಗಳನ್ನು ಮಾಡುತ್ತಾ, ನಂಬಿದ ಭಕ್ತರ ಸಮಸ್ಯೆಗಳನ್ನು ಪರಿಹರಿಸುತ್ತಾ ನಿಂದಿಸಿದವರಿಗೆ ಮನದಲ್ಲೇ ಶಪಿಸುತ್ತಾ ವೆಲಗೊಂಡೆಗೆ ಬಂದಿದ್ದಾರೆ.

ವೆಲಗೊಂಡೆಗೆ ಬಂದಾಗ ತಾತನ ಮೈಯೆಲ್ಲಾ ನರಕಮಯವಾಗಿತ್ತಂತೆ. ತಾನೆ ಹಚ್ಚಿಕೊಂಡಿದ್ದನೋ, ಪರವಶ ಸ್ಥಿತಿಯಲ್ಲಿ ಹೊಲಸು ಜಾಗದಲ್ಲಿ ಮಲಗಿದ್ದಾಗ ಅಂಟಿಕೊಂಡಿತೋ, ಅಂತೂ ಹೇಸಿಗೆ ಹಚ್ಚಿಕೊಂಡ ಮೈ ಯಿಂದಲೇ ಬಂದು ಜನರ ಮಧ್ಯದಲ್ಲಿ ಕುಳಿತುಕೊಳ್ಳುತ್ತಾರೆ. ಅಸಹ್ಯಗೊಂಡ ಕೆಲವರು ''ಇವನಾರೋ ಹುಚ್ಚ, ಹೊರಗೆ ತಳ್ಳಿ ಊರು ಬಿಡಿಸಿರಿ ಎಂದು ಊರ ಹಳ್ಳದ ದಂಡೆಯವರೆಗೂ ಬಿಟ್ಟು ಬಂದಿರುತ್ತಾರೆ. ಆಗ ರಭಸವಾದ ಮಳೆಬಂದು ತೆಪ್ಪವಿಟ್ಟ ಜಾಗದಲ್ಲಿ ಹೆಣ ತೇಲಿದಂತೆ ತೇಲುತ್ತಿದ್ದರಂತೆ. ಈ ಘಟನೆ ನಡೆದ ಎರಡು ದಿನಗಳು ಕಳೆದ ಮೇಲೆ ಹತ್ತಿರ ಹೋಗಿ ನೋಡಿದಾಗ ಉಸಿರಾಡುತ್ತಿದ್ದ ತಾತನನ್ನು ಕಂಡು ಭಯಭೀತರಾಗಿ, ಮೇಲಕ್ಕೆ ತಂದು ಶೈತ್ಯೋಪಚಾರ ಮಾಡಿದರಂತೆ.''[೧೪] ಈತ ಸಾಮಾನ್ಯನಲ್ಲ, ಮಹಾತ್ಮನೆಂದು ಊರೊಳಗೆ ಕರೆತಂದು

ಭಯ-ಭಕ್ತಿಯಿಂದ ಉಪಚರಿಸಿದ್ದಾರೆ. ಹೀಗಿರುವಾಗ ಒಮ್ಮೆ ತಾತನು ಪರವಶಸ್ಥಿತಿಯಲ್ಲಿರುವಾಗ ಒಂದು ಹಾವು ಅವರ ಕೊರಳ ಸುತ್ತಿಕೊಂಡು ಆಡುತ್ತಿತ್ತು. ಈ ಅದ್ಭುತ ದೃಶ್ಯವನ್ನು ಕಣ್ಣಾರೆ ಕಂಡ ಊರ ಜನಗಳಲ್ಲಿ ಭಕ್ತಿ-ಗೌರವಗಳು ಮೂಡಿ ದೇವರಂತೆ ಪೂಜಿಸತೊಡಗುತ್ತಾರೆ. ಹೀಗೆ ಊರೆಲ್ಲಾ ಅವರ ಮಹಿಮೆಗಳ ಬಗ್ಗೆ ಮಾತನಾಡುತ್ತಿರುವಾಗ, ತಾತನು ಮತ್ತೊಂದು ಊರಿಗೆ ಅವರಿಗೆ ತಿಳಿಯದಂತೆ ಹೋಗಿರುತ್ತಿದ್ದನು.

ಚೀಕಲಗುರಿಕಿಗೆ ಬಂದು ದಾಸಯ್ಯನೆಂಬುವನ ಹೊಲದಲ್ಲಿ ನೆಲೆಸಲು, ದಾಸಯ್ಯನ ಹೊಲ, ಮನೆ, ಬೆಳೆಯೆಲ್ಲಾ ವೃದ್ಧಿಯಾಗುತ್ತದೆ. ನನ್ನ ಏಳ್ಗೆಗೆ ಈ ತಾತನೇ ಕಾರಣನೆಂದು ದಾಸಯ್ಯನು ಪರಮಯೋಗೀಶ್ವರನೆಂದೂ, ಮಹಾತ್ಮನೆಂದೂ ತಾತನನ್ನು ಕೊಂಡಾಡಿ ಊರವರಿಗೆಲ್ಲಾ ವಿಷಯ ತಿಳಿಸುತ್ತಾನೆ. ಊರವರೆಲ್ಲಾ ಬಂದು ತಾತನವರಿಗೆ ನಮಸ್ಕರಿಸಿ, ತಮ್ಮ ಕಷ್ಟನಷ್ಟಗಳನ್ನು ಹೇಳಿಕೊಳ್ಳತೊಡಗುತ್ತಾರೆ.

"ಬಳಿಕ ಮಾದಾಸಯ್ಯಗಿರುವಾ
ಹೊಲದ ಹಳ್ಳದ ಗಡ್ಡೆಯೊಳು ಸಲೆ
ನೆಲೆಸಿರುವ ನೋರ್ವನು ಮಹಾ ಲೀಲಾಪುರುಷನೆಂದು
ತಿಳಿದು ಸನಿಹದ ಹಳ್ಳಗಳ ಜನ
ಗಳು ತದಮಳಾತ್ಮನ ಸಂದರ್ಶನ
ಕೆಳಸಿ ಬರತೊಡಗಿದರು ದಿನದಿನದಲ್ಲಿ ಭಕ್ತಿಯೊಳು"[೧೫]

ಹೀಗೆ ಅನೇಕ ಊರುಗಳನ್ನು ಸುತ್ತುತ್ತಾ, ಅನೇಕ ಪವಾಡಗಳನ್ನು ಮೆರೆಯುತ್ತಾ, ಅನೇಕ ಜನ ಭಕ್ತರ ಆರಾಧ್ಯ ದೈವವಾಗಿ, ಮುಂದೆ ಎಲ್ಲಿಯೂ ನಿಲ್ಲದೆ, ಚೇಳಗುರಿಕೆಯ ಮಾರ್ಗವಾಗಿ ಬಂದಿದ್ದಾರೆ. ಊರಿಗೆ ಎರಡು ಮೈಲಿ ದೂರದಲ್ಲಿ ಊರ ದಕ್ಷಿಣಕ್ಕಿರುವ ಮಲ್ಲಪ್ಪನ ತೆಪ್ಪ ಎಂಬ ಮಟ್ಟಿಯ ಹತ್ತಿರ ಬಂದು ಕೂತಿರಲು, ಊರವರಿಗೆ ಈ ವಿಷಯ ತಿಳಿದು ಊರ ಪ್ರಮುಖರೆಲ್ಲಾ ಸೇರಿ ಊರೊಳಗೆ ಕರೆತರುತ್ತಾರೆ.

ಎಲ್ಲೋ ಹುಟ್ಟಿ, ಎಲ್ಲೆಲ್ಲಿಯೋ ಅಲೆದಾಡಿ, ಎಲ್ಲಿಯೂ ನಿಲ್ಲದೆ ಯಾರ ವಶಕ್ಕೂ ಸಿಲುಕದೆ, ಚೇಳಗುರ್ಕಿಯಲ್ಲಿ ನೆಲೆ ನಿಂತಿರುವ ಎರ‍್ರಿತಾತನವರು ಬಳ್ಳಾರಿ ಪ್ರಾಂತ್ಯವಷ್ಟೇ ಅಲ್ಲದೆ, ನೆರೆಯ ರಾಜ್ಯಗಳಲ್ಲೂ ತಮ್ಮ ಪ್ರಭಾವ ಬೀರಿ ಭಕ್ತ ಜನತೆಯ ಆರಾಧ್ಯ ದೈವವಾಗಿದ್ದಾರೆ.

ಚೇಳಗುರಿಕೆಯಲ್ಲಿ ನೆಲೆ ನಿಂತ ತಾತ

೧೮೯೭ರಂದು ಊರ ಹೊರಗಿನ ಮಲ್ಲಪ್ಪನ ಮಟ್ಟಿಯ ಹತ್ತಿರ ಯಾರೋ ಒಬ್ಬ ವಿಚಿತ್ರರೀತಿಯ ಹುಚ್ಚ ಬಂದು ಕುಳಿತಿರುವನೆಂಬ ಸುದ್ದಿಯನ್ನು ತಿಳಿದ ಊರ ಮುಖಂಡರು ಹೋಗಿ ಮಾತನಾಡಿಸುತ್ತಾರೆ. ನೋಟವಿಲ್ಲ, ಮಾತಿಲ್ಲ, ಧ್ಯಾನ ಮಾಡುವವನಂತೆ ಸುಮ್ಮನೆ ಕುಳಿತಿದ್ದ ತಾತನನ್ನು ಊರು, ಹೆಸರು, ಎಲ್ಲಿಂದ ಬಂದೆ, ಎಲ್ಲಿಗೆ ಹೋಗಬೇಕು ಹೀಗೆ ಏನೆಲ್ಲಾ ಕೇಳಿದರೂ ಅವರಿಂದ ಉತ್ತರವಿಲ್ಲ, ಬರೀ ಮೌನ. ಸಂಜೆಯಾಗಿ ಕತ್ತಲೆ ಕವಿಯುತ್ತಾ ಬಂದರೂ ಅನ್ಯ ಮನಸ್ಕನಾಗಿದ್ದ ತಾತನು ಊರೊಳಗೆ ಬಾರದಿರುವುದನ್ನು ಕಂಡು ಜನ ಹಿಂದಿರುಗುತ್ತಾರೆ. ಮತ್ತೆ ಮಾರನೆಯ ದಿನ ಬಂದು ನೋಡಿದರೆ ಎಲ್ಲಿದ್ದ ತಾತ ಅಲ್ಲಿಯೇ ಇದ್ದರು. ಒಂದು

ತುಂಡು ಬಟ್ಟೆ ವಿನಃ ಮೈಮೇಲೆ ಇನ್ನೇನೂ ಇರಲಿಲ್ಲ. "ಆ ಬಟ್ಟ ಬಯಲಿನಲ್ಲಿ ಚಳಿ-ಮಳೆಗಳೆನ್ನದೆ ಕುಳಿತಿದ್ದ ಅವರನ್ನು ನೋಡಿದ ಜನಕ್ಕೆ ಭಯ-ಭಕ್ತಿಗಳು ಮೂಡಿ, ಎಲ್ಲರೂ ಅವರನ್ನು ಎತ್ತಿಕೊಂಡು ಊರೊಳಗೆ ಒತ್ತಾಯ ಮಾಡಿ ಕರೆದುಕೊಂಡು ಬರುತ್ತಾರೆ."[೧೬] ಚೇಳಗುರಿಕೆಗೆ ಬಂದ ನಂತರದ ಚರಿತ್ರೆ ಇಲ್ಲಿಂದ ಪ್ರಾರಂಭ ವಾಗುತ್ತದೆ. ಈವರೆಗೆ ಸದಾ ಮೌನಿಯಾಗಿರುತ್ತಿದ್ದ ತಾತನು ತನ್ನ ಪೂರ್ವ ಇತಿಹಾಸವನ್ನು ಯಾರು ಎಷ್ಟೇ ಕೇಳಿದರೂ ಹೇಳಿಲ್ಲ. ಹಾಗಾಗಿ ಈವರೆಗೆ ನಿರೂಪಿಸಿದ ತಾತನ ಪೂರ್ವದ ಚರಿತ್ರೆಯ ಸಂಗತಿಗಳು ಸತ್ಯವೆಂದಾಗಲಿ, ಅಥವ ಕಟ್ಟುಕತೆಯೆಂದಾಗಲಿ ಖಚಿತವಾಗಿ ಹೇಳುವುದು ಕಷ್ಟ.

ಊರೊಳಗೆ ಬಂದ ತಾತನವರು ಈಶ್ವರಗುಡಿಯೊಳಗೆ ಕೆಲದಿನ, ತನಗೆ ಇಷ್ಟಬಂದ ಮನೆಯವರ ಚಾವಡಿಯಲ್ಲಿ ಕೆಲದಿನ ಇರುತ್ತಾರೆ. ಎಲ್ಲಿದ್ದರೂ ತನ್ನಷ್ಟಕ್ಕೆ ತಾನೆ, ಯಾರೊಡನೆಯೂ ಮಾತಿಲ್ಲ, ಅರೆಗಣ್ಣ ನೋಟ, ಯಾರಾದರೂ ಉಡಿಸಿದರೆ ಉಡುಗೆ, ಇಲ್ಲದಿದ್ದರೆ ದಿಗಂಬರ. ಸಡಿಲಿದ ಉಡುಗೆಯನ್ನು ಕಟ್ಟಿಕೊಳ್ಳು ತ್ತಲೂ ಇರಲಿಲ್ಲ. ಸ್ನಾನವಿಲ್ಲದಿದ್ದರೂ ಮುಖದಲ್ಲಿ ತೇಜೋಮೂರ್ತಿಯಂಥ ಕಳೆ. ಹುಲುಸಾಗಿ ಬೆಳೆದ ತಲೆಕೂದಲು, ಗಡ್ಡಮೀಸೆಗಳು, ಹುರಿದಿರುವಿಕೊಂಡ ಉಗುರುಗಳು, ನೋಡುವವರ ಅಂತರಂಗವನ್ನು ಸೆರೆ ಹಿಡಿದ ಕಣ್ಣಿನ ದೃಷ್ಟಿ, ಇಂತಹ ಲಕ್ಷಣಹೊಂದಿದ ತಾತನು ಎದ್ದರೂ ನಿಂತರೂ, ನಡೆದರೂ, ಮಲಗಿದರೂ ಆಯಾಯ ಭಂಗಿಗಳಲ್ಲೇ ಇರುತ್ತಿದ್ದರಂತೆ. ತನಗೆ ತಾನೆ ಏನೇನೋ ಮಾತನಾಡಿಕೊಳ್ಳುತ್ತಿರುವಾಗ 'ತಾತ ನಿಂದು ಯಾವೂರು? ಹೆಸರೇನು? ಎಂದು ಯಾರಾದರು ಕೇಳಿದರೆ ಕಾಗದ ಪೆನ್ಸಿಲ್ ತಾರಯ್ಯ ಎಂದು "ಮಹರಾಜ ರಾಜೇ ಶ್ರೀ ಹಿರಿಯೂರು ತಾಲೂಕು ತಹಶೀಲ್‌ದಾರರಿಗೆ' ..ಎಂದು ಬರೆದು ಮುಂದೆ ಬರೆಯದೆ ಸಾಕು, ಸಾಕು, ಎಂದು ಸುಮ್ಮನಾಗಿ ಬಿಡುತ್ತಿದ್ದರಂತೆ."[೧೭] ಎರ್ರಿತಾತನಿಗೂ, ಹಿರಿಯೂರಿಗೂ ಏನು ಸಂಬಂಧ ಎಂಬುದು ಇಂದಿಗೂ ತಿಳಿದಿಲ್ಲ. ಹಿರಿಯೂರಿನಲ್ಲಿ ಕೆಲವು ದಿನಗಳಕಾಲ ತಹಶೀಲ್ದಾರರ ಕಛೇರಿಯಲ್ಲಿ ಸೇವೆಸಲ್ಲಿಸಿರಬಹುದು. ಆದರೆ ಸ್ಪಷ್ಟವಾಗಿ ಹೇಳಲು ಆಧಾರಗಳಿಲ್ಲ. ಹೀಗೆ ಅವರಿವರ ಮನೆಗಳಲ್ಲಿ, ಗುಡಿಗಳಲ್ಲಿ ವಾಸಿಸುತ್ತಾ ಬೀದಿಯಲ್ಲಿ ತಿರುಗಾಡುತ್ತಾ ಇರುವಾಗ,

> ಬಂದು ಬೆಳಗುಪ್ಪೆಯವನೋರ್ವನು
> ಹಿಂದೆ ನಮ್ಮೂರಲ್ಲಿ ಬತ್ತಲೆ
> ಯಿಂದ ತಿರುಗುತ್ತಿರ್ದನೆರ್ರಿಸ್ವಾಮಿ ಯೀತನೆ ತಾಂ ।
> ಎಂದೊರೆದ ಕತದಿಂದಮಾ ಹೆಸ
> ರಿಂದೆ ಕರೆವುದು ರೂಢವಾದುದು
> ಬಂಧ ವಿರಹಿತ ತದ್ಗುರುವನಾ ಚೇಳಗುರ್ಕೆಯೊಳಂ"[೧೮]

ಹೀಗೆ ಕರೆದ ಎರ್ರಿತಾತನೆಂಬ ಹೆಸರು ಶಾಶ್ವತವಾಗಿ ಪ್ರಚಾರವಾಯಿತು. ಊರೂರು ತಿರುಗಾಡುವ ತಾತ ಚೇಳಗುರ್ಕೆಗೆ ಬಂದಮೇಲೆ ಮತ್ತೆ ಯಾವ ಊರಿಗೂ ಹೋಗಲಿಲ್ಲ. ಅದಕ್ಕಾಗಿ ಚೇಳಗುರ್ಕೆ ಎರ್ರಿತಾತನೆಂದೇ ಪ್ರಸಿದ್ಧಿಯಾದರು. ಅವರ ನಡೆ, ನುಡಿ ವಿಚಿತ್ರವಾಗಿ ಕಂಡರೂ, ಈ ಹುಚ್ಚನಲ್ಲಿ ಯಾವುದೋ ಅವ್ಯಕ್ತ ಮಹಿಮೆ ಅಡಗಿದೆಯೆಂದು ನಂಬಿ, ಅವರ ಸೇವೆ ಮಾಡುತ್ತಾ ಅವರ ಆಶೀರ್ವಾದ, ಅನುಗ್ರಹಕ್ಕೆ ಜನ ಬರ ತೊಡಗುತ್ತಾರೆ. ಹುಚ್ಚು ಮನಸ್ಸಿನ ಜನಕ್ಕೆ ಹುಚ್ಚನಂತೆ, ಭಕ್ತ ಮನಸ್ಸಿನ ಜನರಿಗೆ ದೇವರಂತೆ ಚೇಳಗುರ್ಕೆಯಲ್ಲಿ

ನೆಲೆನಿಂತರು. ಇಂದು ಅಪಾರ ಭಕ್ತ ಸಮೂಹವಿದ್ದು, ಕರ್ನಾಟಕ ಆಂಧ್ರಗಳ ಭಕ್ತರು ಮಠದಲ್ಲಿ ಸದಾ ತುಂಬಿ ರುತ್ತಾರೆ. ಭಾಷಾತೀತ-ಜಾತ್ಯತೀತ ಮಠವಾಗಿ ದಿನದಿಂದ ದಿನಕ್ಕೆ ವೈವಿಧ್ಯಮಯವಾಗಿ ಬೆಳೆಯುತ್ತಿದೆ. ಕನ್ನಡ ಮತ್ತು ತೆಲುಗು ಎರಡೂ ಭಾಷೆಗಳಲ್ಲಿ ಮಠದ ವ್ಯವಹಾರಗಳು ನಿತ್ಯವೂ ನಡೆಯುತ್ತಿವೆ.

ತಾತನವರ ಮಹಿಮೆಗಳು : ಅವಧೂತರು, ಸೂಫಿಗಳು, ಸಿದ್ಧರು ಮುಂತಾದ ಅನುಭಾವಿಗಳು ಜನಪ್ರಿಯ ರಾಗಿರುವುದಕ್ಕೆ ಅವರ ಮಹಿಮೆ ಅಥವಾ ಪವಾಡಗಳೇ ಸಾಕ್ಷಿಯಾಗಿವೆ. ವಿಚಾರವಂತರ ಕಣ್ಣಿಗೆ ಕಟ್ಟುಕತೆಯಾಗಿ ತೋರುವ ಇವರ ಪವಾಡಗಳು ಭಕ್ತರಿಗೆ ಮಾತ್ರ ತಾವು ನಂಬಿರುವ ವ್ಯಕ್ತಿಯ ಮಹಿಮೆಯಿಂದಲೇ ತಮ್ಮ ಸಮಸ್ಯೆಗಳು ಪರಿಹಾರವೆಂದೂ, ಅವುಗಳನ್ನು ಮಾನಸಿಕವಾಗಿ ಪರಿಹರಿಸಿಕೊಂಡವರಂತೆ ಭಾವಿಸುತ್ತಾರೆ.

ಮುಖ್ಯವಾಗಿ ಅವಧೂತರ ಪವಾಡಗಳು ಬರಡು ಎಮ್ಮೆ ಆಕಳುಗಳಲ್ಲಿ ಹಾಲು ತರಿಸಿರುವುದು, ಮಕ್ಕಳಿಲ್ಲ ದವರಿಗೆ ಮಕ್ಕಳಾಗುವಂತೆ ಆಶೀರ್ವದಿಸಿರುವುದು, ಕೆಲವೊಮ್ಮೆ ಸತ್ತಂತವರನ್ನು ಬದುಕಿಸಿರುವುದು, ರೋಗಿಗಳನ್ನು ಗುಣಪಡಿಸಿರುವುದು, ದೆವ್ವ ಪೀಡೆಯಂಥ ಗಾಳಿಸೋಂಕು ರೋಗದವರನ್ನು ರಕ್ಷಿಸಿರುವುದು, ಬಡತನ ಹೋಗಲಾಡಿಸಿರುವುದು ಹೀಗೆ ಭಕ್ತರ ವೈಯಕ್ತಿಕ ಸಮಸ್ಯೆಗಳನ್ನು ತೊಂದರೆಗಳನ್ನು ಪರಿಹರಿಸಿ ಕಾಪಾಡಿರುವುದು. ಜೊತೆಗೆ ಗ್ರಾಮಕ್ಕೆ ಬರಗಾಲ ಬಂದಾಗ, ಬೆಳೆಗಳು ಹಾನಿಯಾದಾಗ ಮಳೆ ತರಿಸಿರುವುದು, ಕುಡಿಯುವ ನೀರಿನ ಸಮಸ್ಯೆ ಪರಿಹರಿಸಿರುವುದು. ಗ್ರಾಮಕ್ಕೆ ಸಾಂಕ್ರಾಮಿಕ ರೋಗ ಬಂದಾಗ ತಡೆಗಟ್ಟಿರುವುದು ಇಂಥ ಸಾಮೂಹಿಕ ಸಮಸ್ಯೆಗಳನ್ನು ತಾವು ಪಡೆದ ಸಿದ್ಧಿಯಿಂದ ಊರಿನ ಮತ್ತು ಭಕ್ತರ ಹಿತಕ್ಕಾಗಿ ಪ್ರಯೋಗಿಸಿದ್ದಾರೆ. ಹಾಗೆಯೇ ಇವರ ಕೆಲವೊಂದು ವರ್ತನೆಗಳು ಮುಂದೆ ಘಟಿಸಬಹುದಾದ ಘಟನೆಗಳ ಸೂಚನೆಯಾಗಿಯೂ ಕಂಡುಬರುತ್ತಿದ್ದವು. ಎರ್ರಿತಾತನವರು ಸಹ ಇಂತಹ ವಿಚಿತ್ರ ವರ್ತನೆಯನ್ನು, ಹಲವಾರು ಪವಾಡಗಳನ್ನು ತೋರಿರುವುದುಂಟು. ಅವುಗಳಲ್ಲಿ ಮುಖ್ಯವಾದವುಗಳನ್ನು ಇಲ್ಲಿ ಉಲ್ಲೇಖಿಸಲಾಗಿದೆ.

ಯಾವುದಾದರೊಂದು ಉಪದ್ರವ ಊರಿಗೆ ಬರುವ ಸೂಚನೆ ಕಂಡು ಬಂದರೆ, ಅದಕ್ಕೆ ತಾತನು ಸೂಚ್ಯವಾಗಿ, ಇಲ್ಲವೆ ವಾಚ್ಯವಾಗಿ ತಿಳಿಸುತ್ತಿದ್ದರಂತೆ. ಇದು ಕೆಲವರಿಗೆ ಅರ್ಥವಾದರೆ, ಮತ್ತೆ ಕೆಲವರಿಗೆ ವಿಚಿತ್ರವಾಗಿ ಕಂಡಿದೆ. ಒಂದು ಸಲ ಊರಿಗೆ ಕಾಲರಾ ರೋಗ ಪ್ರಾಪ್ತವಾಗುವುದರ ಸೂಚಕವಾಗಿಯೇ ಎನ್ನುವಂತೆ, ತಾತನು ಗುಡಿಯಿಂದ ಸ್ಮಶಾನಕ್ಕೆ ಸ್ಮಶಾನದಿಂದ ಗುಡಿಗೆ ಹೋಗಿ ಬರುತ್ತಿದ್ದರು. ಹಗಲೆನ್ನದೆ ರಾತ್ರಿಯೆನ್ನದೆ ಹೀಗೆ ಓಡಾಡುವುದನ್ನು ಕಂಡ ಜನ 'ಈ ಹುಚ್ಚುತಾತ ಹೀಗೇಕೆ ಮಾಡುತ್ತಾನೆ? ಎಂದು ಹಾಸ್ಯಮಾಡಿದವರೂ ಉಂಟು. ಹೀಗೆ ಮಾಡಿದ ಕೆಲದಿನಗಳಲ್ಲೆ ಕಾಲರಾ ರೋಗ ಊರಿಗೆ ಕಾಲಿಟ್ಟಿದೆ. ಕಾಲರಾ ರೋಗ ಪ್ರಾರಂಭವಾದ ಮೇಲೆ ತಾತನು ಕೈಯಲ್ಲಿ ಕಲ್ಲು ಹಿಡಿದು ಕೆಲವರ ಮನೆಗೆ ಎಸೆದಿದ್ದಾರೆ. ಮತ್ತೆ ಕೆಲವರ ಮನೆಗೆ ಎಸೆಯಲೆಂದು ಕೈಗೆತ್ತಿಕೊಂಡ ಕಲ್ಲನ್ನು ಬೇಡವೆಂದು, ತನಗೆ ತಾನೆ ಏನೇನೋ ಮಾತನಾಡುತ್ತಾ ಕೆಳಗೆ ಹಾಕಿದ್ದಾರೆ. ಯಾರ ಮನೆಗೆ ಕಲ್ಲೆಸೆದಿದ್ದನೋ ಆ ಮನೆಗಳಲ್ಲಿ ಒಬ್ಬರೋ ಇಬ್ಬರೋ ರೋಗಕ್ಕೆ ತುತ್ತಾಗಿದ್ದರೆ, ಕಲ್ಲು ಎಸೆಯುವುದು ಬೇಡ ಎಂದು ಬಿಟ್ಟ ಮನೆಗಳಿಗೆ ರೋಗವೇ ಸೋಂಕಿರಲಿಲ್ಲವಂತೆ. ರೋಗದಿಂದ ಭಯಭೀತ ಜನಗಳು ತಾತ ನನ್ನು ಕೇಳಿದಾಗ "ಲೆಖ್ಖವದು ಮುಗಿದಿಲ್ಲವಯ್ಯ" ಎಂದು ಕೈಬೆರಳುಗಳೆಣಿಸಿ, ಒಂದು ಹಸ್ತ ತೋರಿಸಿ ದರಂತೆ. ಅದರಂತೆ ಮುಂದಿನೈದು ದಿನಗಳಲ್ಲಿ ಅಂಟಿದ್ದ ಕಾಲರಾ ರೋಗ ಪರಿಹರಿಸಿದ್ದಾರೆ.

"ಹಿಂದೆ ಮಾರಿಗೆ ಬಿಟ್ಟಿರುವ ಸೊ
ಕ್ಕೊಂದಿ ದುರುಮಹಿಷವನು ಹಿಡಿದೆಳ
ತಂದು ತಾನದಕೂರಜನರಿಂದರ್ಚನೆಯ ಗೈಸಿ।
ಇಂದು ನಡೆ ನಿಮ್ಮವರ ಕರೆಕೊಂ
ಡೆಂದು ಸುರಲಾ ಗುರುವು ಮೌನವ
ನೊಂದಿ ದೇವಿಯ ಕೋಣವದು ಪೊರಮಟ್ಟುದಾ ನೆಲೆಯಿಂ"[೧೯]

ಹೀಗೆ ತಮ್ಮ ಸಾಧನೆಯ ಸಿದ್ಧಿಯನ್ನು ಪ್ರಯೋಗಿಸಿದ್ದಾರೆ. ಇಂತಹ ಹಲವಾರು ಮಹಿಮೆಗಳನ್ನು ತೋರಿಸುತ್ತಾ, ಯಾರ ಮನೆಯಲ್ಲೂ ಇರದೆ, ತನಗಿಷ್ಟ ಬಂದ ಕಡೆ ಅಲೆದಾಡುತ್ತಿದ್ದುದು ಇವರ ಹವ್ಯಾಸವಾಗಿತ್ತು.

ಹಜಾಮರ ಭೀಮಪ್ಪ ತಾತನವರ ಪರಮ ಭಕ್ತ. ಅವರ ಮೇಲಿನ ಗೌರವದಿಂದ ತನ್ನ ಹೊಲಕ್ಕೆ ಕರೆದೊಯ್ದು ಅಲ್ಲೊಂದು ಶಿಲಾಮಂಟಪವನ್ನು ಕಟ್ಟಿ, ಅವರ ಯೋಗಕ್ಷೇಮ ನೋಡಿಕೊಳ್ಳುತ್ತಿದ್ದನು. ಸುಮಾರು ಎರಡು ವರ್ಷಗಳ ಕಾಲ ತಾತನವರು ಅಲ್ಲಿದ್ದರೆಂದು ತಿಳಿಯುತ್ತದೆ. ಕುಡಿತದ ಚಟವಿದ್ದ ಭೀಮಪ್ಪನ ಸಹವಾಸದಿಂದ ತಾತನವರ ವ್ಯಕ್ತಿತ್ವಕ್ಕೆ ಕುಂದುಂಟಾಗಬಹುದೆಂದು ಶಂಕಿಸಿದ ಊರ ಪ್ರಮುಖರು, ತಾತನವರನ್ನು ಕರೆತಂದು ವಾಸಕ್ಕಾಗಿ ಊರಲ್ಲಿ ಮನೆಯೊಂದನ್ನು ಕಟ್ಟಿಸಿ ಕೊಡುತ್ತಾರೆ. ತಾತನು ಭೀಮಪ್ಪನ ಹೊಲದಲ್ಲಿದ್ದ ಕುರುಹಾಗಿ, ಆತನ ವಂಶಜರು ತಾತನವರ ಕೇಶ, ಮತ್ತು ಉಗುರುಗಳನ್ನು ಪೂಜಿಸಿಕೊಂಡು ಬಂದರೆಂದು ತಿಳಿಯುತ್ತದೆ. ಚೇಳಗುರ್ಕಿಯಲ್ಲಿದ್ದ ತಾತನು ಎಂದಿನಂತೆ ಅವರಿವರ ಮನೆಗಳಿಗೆ ಹೋಗುತ್ತಾ, ಎಲ್ಲೆಂದರಲ್ಲಿ ತಿರುಗಾಡುತ್ತಾ ಇರುವಾಗ "ಒಂದು ದಿನ ಮೇಗಳ ಮನೆಯ ದೊಡ್ಡಪ್ಪಗೌಡನ ಮನೆಯಲ್ಲಿ ಎಮ್ಮೆ ಕರು ಸತ್ತಿರುತ್ತದೆ. ಯಾರೋ ತಂದು ಕೊಟ್ಟ ರೊಟ್ಟಿಯನ್ನು ತಿನ್ನುತ್ತಾ, ಅಲ್ಲಿಗೆ ಬಂದ ತಾತನು, ಮೊಸರನ್ನು ಬಯಸಿ ಮನೆಯ ಯಜಮಾನಿಯನ್ನು ಕೂಗಿ 'ಮೊಸರು ತಾರವ್ವ' ಎಂದರು. ಎಮ್ಮೆಕರು ಸತ್ತಿರುವುದಕ್ಕೆ ದುಃಖಿಗಳಾಗಿದ್ದ ಯಜಮಾನಿ, ತಾತನವರ ಈ ಮಾತನ್ನು ಕೇಳಿ ಕೋಪಗೊಂಡು "ನಿನ್ನಾಬಿಯಾಗ ಮಣ್ಣಾಕ ತಿಂದು ಹಲ್ಟುತ್ತಿದ್ದೀಯಲ್ಲಾ, ಅಲ್ಲಿ ನೋಡು ಕರು ಸತ್ತೈತಿ, ಹೊತ್ಗೊಂಡೋಗಾಕೆ ಬಂದಾರೆ" ಎನ್ನುತ್ತಾಳೆ. ಈ ಮಾತನ್ನು ಕೇಳಿ ತಾತನು ಒಳಗೆ ಬಂದು 'ಕಣ್ಣೆ ಬಿಡಯ್ಯ' ಎಂದು ಹೇಳುತ್ತಾ, ಸತ್ತು ಬಿದ್ದ ಕರುವನ್ನು ಮೆತ್ತಗೆ ಒದ್ದರಂತೆ. ಅವರ ಪಾದಸ್ಪರ್ಶದಿಂದ ಸತ್ತು ಬಿದ್ದಿದ್ದ ಕರು ಬದುಕಿ, ಎದ್ದು ತಾಯ ಹಾಲುಣ್ಣತೊಡಗಿತಂತೆ."[೨೦] ಈ ಘಟನೆ ನಡೆದ ಮೇಗಳ ಮನೆಯ 'ಹಂಪಮ್ಮ ಮೇಟಿ' ಎನ್ನುವ ಅಜ್ಜಿ ಈ ಘಟನೆಯನ್ನು ಕಣ್ಣಾರೆ ಕಂಡುದಾಗಿ ತಿಳಿಸುತ್ತಾರೆ. ಹೀಗೆ ಹಲವಾರು ಪವಾಡಗಳು ಆಗುತ್ತಿರುವಲ್ಲಿ ಅವರ ಮೇಲಿದ್ದ ಹುಚ್ಚು ಭಾವನೆಗಳೆಲ್ಲಾ ಮಾಯವಾಗಿ, ಈತ ಸಾಮಾನ್ಯನಲ್ಲ ಮಹಿಮಾಪುರುಷನೆಂಬುದು ಜನ ಜನಿತವಾಗಿದ್ದರಿಂದ, ಸುತ್ತ ಮುತ್ತಲಿನ ಗ್ರಾಮದವರು ಚೇಳಗುರಿಕೆಗೆ ಬರುವುದು ದಿನದಿಂದ ದಿನಕ್ಕೆ ಹೆಚ್ಚಾಗುತ್ತದೆ.

ಒಮ್ಮೆ ಮಳೆಯಿಲ್ಲದೆ ಬೆಳೆಗಳೆಲ್ಲಾ ಒಣಗಿರುತ್ತವೆ. ರೈತರೆಲ್ಲಾ ಕಂಗಾಲಾಗಿ ಮಳೆಗಾಗಿ ಪ್ರಾರ್ಥಿಸು ತ್ತಿರುತ್ತಾರೆ. ಆಗ ತಾತನು ಯಾರಿಗೂ ತಿಳಿಯದಂತೆ ಮಲ್ಲಪ್ಪನ ಮಟ್ಟಿಯಲ್ಲಿಗೆ ಬಂದು ಧ್ಯಾನಾಸಕ್ತರಾಗಿ ಕುಳಿತಿರಲು, ಇದಕ್ಕಿದ್ದಂತೆ ಜೋರಾದ ಮಳೆ ಸುತ್ತ ಬಂದರೂ ತಾತನವರು ಕುಳಿತಿದ್ದ ಜಾಗದಲ್ಲಿ ಮಾತ್ರ

[illegible]

ಮಳೆಯಾಗಿರಲಿಲ್ಲವಂತೆ. ತಾತನು ಮಟ್ಟಿಯಲ್ಲಿರುವ ವಿಷಯ ತಿಳಿದ ಊರವರು ಬಂದು, ಅವರನ್ನು ಊರೊಳಗೆ ಕರೆತರಲು 'ಗಂಗೆ ಬಂದಾಳಯ್ಯ' ಎಂದು ಪದ ಹಾಡಿಕೊಂಡು ಬಂದಿದ್ದಾರೆ. ಸುಮಾರು ದಿನಗಳ ಕಾಲ ಮಳೆ ಬಂದದ್ದರಿಂದ, ಮಳೆಯಿಲ್ಲದೆ ಕಂಗಾಲಾಗಿದ್ದ ರೈತರು ಭಕ್ತರು ಸಂತೋಷಗೊಂಡಿದ್ದಾರೆ. ತಾತನಿಗೆ ಮಳೆಯೆಂದರೆ ಪ್ರೀತಿ, ಮಳೆ ಬರುವಾಗ ಹೊರಗೆ ಹೋಗಬಾರದೆಂದು ಹಾಸಿಗೆ ಹಾಸಿ, ಹೊದಿಸಿ ಮಲಗಿಸಿದರೆ, ಮಳೆ ಜೋರಾಗುತ್ತಲೇ ಹಾಸಿಗೆಯಿಂದ ಎದ್ದು ಬಂದ ತಾತ ಮಳೆಯಲ್ಲಿ ತಿರುಗಾಡುತ್ತಿದ್ದರು. ಒಮ್ಮೊಮ್ಮೆ ಮಳೆ ಬರುವಾಗ ಕಂಬಳಿ ಹೊದ್ದು, ಮಳೆಯಲ್ಲಿಯೇ ಮಲಗಿಬಿಡುತ್ತಿದ್ದರೆಂದು ತಿಳಿಯುತ್ತದೆ.

ಮಕ್ಕಳಿಲ್ಲದೆ ಕೊರಗುತ್ತಿದ್ದ ನಾಗಮ್ಮ, ತಾತನು ಮನೆ ಮುಂದೆ ಹೋಗುತ್ತಿದ್ದಾಗ, ಮಕ್ಕಳ ಭಾಗ್ಯ ಬೇಡುತ್ತಾಳೆ. ಆಗ ತಾತನವರು ಮುಂದೆ ಬಿದ್ದಿದ್ದ ಕಲ್ಲೊಂದನ್ನು ಕೊಟ್ಟು ಪೂಜಿಸು ಎಂದಿದ್ದಾರೆ. ನಾಗಮ್ಮನು ಆ ಕಲ್ಲನ್ನು ಮನೆಯಲ್ಲಿಟ್ಟು ಪೂಜಿಸಲು ಮಕ್ಕಳಾಗಿವೆ. ಹಾಗೆಯೇ ಪೂಜಿಸಿದ ಕಲ್ಲು ಗಣೇಶವಾಗಿದ್ದು, ಈಗಲೂ ಕಲ್ಲುಗಣೇಶನನ್ನು ಆ ಮನೆಯವರು ಪೂಜಿಸುತ್ತಿರುವುದಾಗಿ ತಿಳಿಸುತ್ತಾರೆ.

ಭಕ್ತರ ಸಂಖ್ಯೆ ದಿನೇ ದಿನೇ ಅಧಿಕವಾಗಿ ತಮ್ಮ ಇಷ್ಟಾರ್ಥಗಳನ್ನು ತಾತನಲ್ಲಿ ನಿವೇದಿಸಿಕೊಳ್ಳುತ್ತಿದ್ದರು. ಇಷ್ಟಾರ್ಥಗಳು ನೆರವೇರಿದಾಗ ಕಾಣಿಕೆಯ ರೂಪದಲ್ಲಿ ಏನಾದರೊಂದನ್ನು ಅವರಿಗೆ ನೀಡುತ್ತಿದ್ದರು. ಒಬ್ಬ ಶ್ರೀಮಂತ ಭಕ್ತರು ತಮ್ಮ ಬಯಕೆಗಳನ್ನು ತಾತನವರು ಈಡೇರಿಸಿದರೆಂದು, ಬಂಗಾರದ ಕಡಗಗಳನ್ನು ಅವರ ಕೈಗಳಿಗೆ ತೊಡಿಸುತ್ತಾರೆ. ತಾತನು ಯೋಗ ಸಮಾಧಿ ಸ್ಥಿತಿಯಲ್ಲಿದ್ದಾಗ, ಯಾರೋ ಅವುಗಳನ್ನು ಕದಿಯುತ್ತಾರೆ. ಮರುದಿನ ತಾತನ ಭಕ್ತರೊಬ್ಬರು ಅವರನ್ನು ಕೇಳಿದ್ದಕ್ಕೆ "ಇದ್ದವ ಕೊಟ್ಟ, ಇಲ್ಲದವನೊಯ್ದ" ಎಂದು ಹೇಳಿ, 'ಕದ್ದವ ಕಡಿಸಿ ಕೊಂಡು ಸಾಯ್ತಾನೆ' ಎಂದಿದ್ದರು. ಅದರಂತೆ ಕೆಲದಿನಗಳಲ್ಲಿಯೇ ಕದ್ದವನನ್ನು ಎಲ್ಲಿಂದಲೋ ಬಂದ ಹಾವೊಂದು ಕಚ್ಚಿ ಸಾವನ್ನಪ್ಪಿದ ವಿಷಯ ತಿಳಿಯುತ್ತದೆ.

ನಿತ್ಯವೂ ಹೀಗೆ ಎಷ್ಟೋ ಪವಾಡಗಳು ನಡೆಯುತ್ತಿದ್ದು, ಎಲ್ಲೆಲ್ಲಿಂದಲೋ ಜನರು ತಮ್ಮ ಕಷ್ಟಗಳನ್ನು ಹೇಳಿಕೊಳ್ಳಲು, ಅವರ ಆಶೀರ್ವಾದ ಪಡೆಯಲು ಬರುತ್ತಿರುತ್ತಾರೆ. ಹೀಗೆ ಬರುವವರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗತೊಡಗುತ್ತದೆ.

"ಭಾವಿಸುವಡಾ ಚೇಳಗುರ್ಕಿಯು
ಪಾವನ ಕ್ಷೇತ್ರಮದೆನಿಸಲಾ
ಭಾವ ಜಾಹಿತ ತಾತನನುಪಮ ದರ್ಶನಕ್ಕಾಗಿ
ತೀವಿದುರು ಮುದದಿಂದೆ ಭಕ್ತ ಜ
ನಾವಳಿಯು ಬರತೊಡಗಿದುದು ಮಿಗೆ
ಭೂವಲಯದೆಲ್ಲೆಡೆಗಳಿಂದಂ ಪ್ರತಿದಿವಸದಲ್ಲಿ"[೫]

ಸಂತರು, ಯೋಗಿಗಳು, ಅವಧೂತರು, ಜ್ಞಾನಾಕಾಂಕ್ಷಿಗಳು ಹೀಗೆ ದರ್ಶನಾರ್ಥಿಗಳಾಗಿ, ಗುರು ಅನುಗ್ರಹಕ್ಕಾಗಿ ಗುರೂಪದೇಶಕ್ಕಾಗಿ ಬರುತ್ತಿರುತ್ತಾರೆ. ದರ್ಶನಾರ್ಥಿಗಳಾಗಿ ಬಂದವರಲ್ಲಿ ಗಡಿಗೆ ಪರುಶಪ್ಪನೆಂಬ ಅವಧೂತನೂ

ಒಬ್ಬನೆಂದು ತಿಳಿಯುತ್ತದೆ. ಇವರ ಬಗ್ಗೆ ಹೆಚ್ಚಿನ ಮಾಹಿತಿ ತಿಳಿದು ಬಂದಿಲ್ಲ. ಆ ಸಮಯದಲ್ಲಿ ತಾತನೊಂದಿಗೆ ಇವರನ್ನು ಕೂಡಿಸಿ ತೆಗೆದ ಫೋಟೋ ಇಂದಿಗೂ ಮಠದಲ್ಲಿದೆ.

ತಿಕ್ಕಾವಧೂತರ ಆಗಮನ

ತಾತನವರನ್ನು ಕಾಣಲು ಬಂದ ದರ್ಶನಾರ್ಥಿಗಳಲ್ಲಿ, ಜ್ಞಾನಾಕಾಂಕ್ಷಿಗಳಲ್ಲಿ ತಿಕ್ಕಾವಧೂತರು ಮುಖ್ಯರು. ಈತನ ನಿಜನಾಮಧೇಯವೇನೋ, ತಂದೆ-ತಾಯಿಗಳಾರೋ, ಯಾವ ಊರೋ, ಎಲ್ಲಿಂದ ಬಂದರೋ ಒಂದೂ ತಿಳಿಯದು. ತಾತನಂತೆ ಈತನೂ ಮೌನಿ. ಸುಮಾರು ಒಂದು ವರುಷಗಳ ಕಾಲ ಯಾರೊಂದಿಗೂ ಮಾತನಾಡಿರಲಿಲ್ಲ. ತಾತನ ಸೇವೆಯೇ ಕಾಯಕ. ಕಂತೆ ಭಿಕ್ಷೆ ಬೇಡುತ್ತಾ, ಮನೆ ಮನೆಗೆ ಅಲೆದಾಡುತ್ತಾ ತಾತನವರ ಬಳಿಯಲ್ಲಿಯೇ ಉಳಿದ. ಈತನ ಸೇವಾಮನೋಭಾವದಿಂದ ಸಂತುಷ್ಟರಾದ ಜನಕ್ಕೆ ಈತನ ಹೆಸರೇನೆಂಬುದೇ ತಿಳಿಯಲಿಲ್ಲ. 'ಹುಚ್ಚು ಗುರುವಿಗೆ ತಿಕ್ಕ (ಎರ್ರಿ) ಶಿಷ್ಯನು ಕೂಡಿಕೊಂಡನೆಂದು' ಕುಹಕತನದಿಂದ ನುಡಿದ ಹೆಸರೇ "ತಿಕ್ಕಯ್ಯ"ನೆಂದು ಪ್ರಸಿದ್ಧಿ ಪಡೆದಿದೆ. ತಾತನನ್ನು ಗುರುವನ್ನಾಗಿ ಮಾಡಿಕೊಂಡು ಅವರ ಎಲ್ಲಾ ಸೇವೆಗಳನ್ನು ಮಾಡುತ್ತಿದ್ದ. ಇಬ್ಬರ ಪೂರ್ವ ಇತಿಹಾಸ ಅಸ್ಪಷ್ಟ. ಆದರೂ ಗುರು-ಶಿಷ್ಯರ ಸಂಬಂಧ ಬೆಳೆದಿದೆ. ಇವರಿಬ್ಬರನ್ನು ಕುರಿತು ದೊಡ್ಡನಗೌಡರು ಹೇಳಿರುವಂತೆ,

"ನೀನಾರೋ? ಹೆಸರೇನೋ? ಯಾವ ನಾಡಿನ ಮೃಡನೊ?
ಎರಿತಾತನೆಂದೆನಿಸಿ ಚೇಳ್ಗುರಿಕೆಯಲಿ ನಿಂದೆ ||
ಬಿಳುಪಿಡಿದ ಜಡೆ ಮುಡಿಯ ಸಿರಿಮೊಗದ ನಿಜಶಾಂತಿ
ಚೆಲುವೇರಿದಯವದ ನಿಲುವಿಕೆಯ ತನುಕಾಂತಿ
ಸುಳಿವ ಕರಣಂಗಳನ್ನು ತಡೆದ ಗುರುತರದಾಂತಿ
ಇಳೆಗಿಳಿದ ನಿಸ್ವಾರ್ಥ ನಿರ್ಲೇಪ ವೈರಾಗ್ಯ ಮೂರ್ತಿ || ೧ ||

ಜಾತಿ ಮತ ಕುಲಪಂಥ ಸೂತಕಾದಿಗಳಳಿದು |
ಭೀತಿ ಮಾನವಮಾನ ನಿಂದೆ ನುತಿಗಳ ತುಳಿದು |
ಖ್ಯಾತಿ ಪಾತಕ ಪುಣ್ಯ ಸ್ವರ್ಗ ನರಕಗಳೊದೆದು |
ಶಾಂತಿಯಿಂದೆಲ್ಲವನು ಸಮಧಿ ಸಂಭಾವಿಸಿದ || ೨ ||

ಅರಿವಿನರಮನೆಯಲ್ಲಿ ಚಿರಮುಕ್ತಿ ಕಾಂತೆಯಲಿ |
ಸುರತ ಶಿವಸುಖ ಸಾರದಾನಂದವಾರ್ಧಿಯಲಿ
ಅರಿವು ಮರೆವೆಯ ನೀಗಿ ಶೂನ್ಯದಲಿ ಗುರುತಳಿದು
ಗುರುತಾಗಿ-ಗುರುವಾಗಿ ಹೊರಗಿಂತು ತೋರುವ || ೩ ||

ಅರಿಯ ಬಹುದೇ ನಿನ್ನ ಎರ್ರಿಯ ಮರ್ಮವನು |
ಅರಿತವನು ತಾನೊಬ್ಬ ನಿನ್ನಂತೆ ತಿಕ್ಕಯ್ಯ |

ಎರ್ರಿತಿಕ್ಕುಗಳೊಂದೆ ಲೌಕಿಕರ ನೋಟದಲ್ಲಿ ।
ಯಾರರಿಯಬಲ್ಲರೋ ನೀನೆ ಪೇಳುವತನಕ ॥ ೪ ॥

ಧರೆಯ ಚೇತನವೆಸೆದು ಗಗನಮಂ ಭೇದಿಸುವ
ತೆರನಂತೆ ನರನಾಗಿ ಭವವಿರುವ ಹರನಾಗಿ
ದುರಿತಕಂಜಿದ ನರರ ಕರುಣದಿಂದೋಜೆಯಲಿ
ಅರಿವಿತ್ತು ಸಲಹುವ ರಾಮೇಶನಲಿ ಬೆರೆದ ॥[೨೨]

ಪಾರಲೌಕಿಕವೂ, ಪಾರಮಾರ್ಥಿಕವೂ ಆದ ಇವರ ವರ್ತನೆ ಲೌಕಿಕರ ನೋಟಕ್ಕೆ ಹುಚ್ಚಾಗಿಯೇ ಕಂಡಿರುವುದು ಸಹಜವಾಗಿದೆ. ಗುರುವನ್ನು, ಜ್ಞಾನವನ್ನು ಅರಸುತ್ತಾ, ಲೋಕ ಜೀವನವನ್ನು ತ್ಯಜಿಸಿ ಬಂದ ಈ ವ್ಯಕ್ತಿಗೆ ಚೇಳಗುರ್ಕಿಯಲ್ಲಿ ಗುರು ಸಿಕ್ಕಂತಾಯಿತು. ಅವ್ಯಕ್ತ ಮತ್ತು ಅಲೌಕಿಕವಾಗಿದ್ದ ಇವರಿಬ್ಬರ ಗುರು-ಶಿಷ್ಯರ ಸಂಬಂಧ ವಿಚಿತ್ರವಾಗಿದ್ದರೂ, ಆಧ್ಯಾತ್ಮ ಲೋಕದಲ್ಲಿ ಸತ್ಯವಾಗಿತ್ತು.

ತಾತನವರ ಸೇವೆಯೇ ನಿತ್ಯವ್ರತವಾಗಿದ್ದ ತಿಕ್ಕಯ್ಯನವರಿಗೆ ಅವರಿಗೊಂದು ಮಠಕಟ್ಟಬೇಕೆಂಬ ಆಸೆ ಮೂಡಿತು. ಕೆಲದಿನಗಳ ತರುವಾಯ ಗ್ರಾಮದ ಹಿರಿಯರ ಮುಂದೆ ಈ ವಿಷಯ ಪ್ರಸ್ತಾಪಿಸಿ, ಒಪ್ಪಿಗೆಯನ್ನು ಪಡೆದುಕೊಂಡರು. ಭಕ್ತರ ಹತ್ತಿರ ಮಠ ಕಟ್ಟುವ ವಿಷಯ ಪ್ರಸ್ತಾಪಿಸಿದಾಗ ಎಲ್ಲರೂ ತಮ್ಮ ಕೈಲಾದ ಸಹಾಯ ಮಾಡಿದರು. ಗ್ರಾಮಸ್ಥರ, ಭಕ್ತರ ಸ್ನೇಹ ಸಹಕಾರದಿಂದ ಇಂದು ನಮಗೆ ಕಾಣುವ ಶಿಲಾಮಂಟಪವನ್ನು ತಿಕ್ಕಯ್ಯನವರು ಕಟ್ಟಿಸಿದ್ದಾರೆ. ಈಗ ಕಟ್ಟಿರುವ ಮಠದ ಜಾಗವನ್ನು ತಾತನವರು ಚೇಳುಗುರ್ಕಿಗೆ ಬರುವುದಕ್ಕಿಂತ ಮುಂಚೆಯೇ ಮಹಿಮಾಶಾಲಿಗಳಾದ ಬಳಗಾನೂರು ಮರಿಸ್ವಾಮಿಗಳು ಒಮ್ಮೆ ಇಲ್ಲಿಗೆ ಬಂದಾಗ "ಮೂರು ಕಲ್ಲುಗಳನ್ನು ಮಂಟಪದಾಕಾರದಲ್ಲಿಟ್ಟು ಇಲ್ಲೊಂದು ದೊಡ್ಡಮಠವಾಗುತ್ತದೆ. ಮಹಾಪುರುಷರೊಬ್ಬರು ಇಲ್ಲಿ ನೆಲೆಸುತ್ತಾರೆ" ಎಂದು ಭವಿಷ್ಯ ನುಡಿದಿದ್ದರಂತೆ. ಅದರಂತೆ ಅದೇ ಸ್ಥಳದಲ್ಲಿ ತಿಕ್ಕಯ್ಯನವರ ಅವಿರತ ಶ್ರಮದ ಫಲವಾಗಿ ಮಠ ನಿರ್ಮಾಣವಾಯಿತೆಂದು ಇಂದಿಗೂ ಭಕ್ತರು ನೆನೆಯುತ್ತಾರೆ.

ವೈರಾಗ್ಯ, ಸತ್ಯ, ಗುರುಭಕ್ತಿ, ವಿನಯಭಾವಗಳು ತಿಕ್ಕಯ್ಯನವರಲ್ಲಿ ಮನೆಮಾಡಿಕೊಂಡಿದ್ದವು. ಗುರುಸೇವೆಗಾಗಿ ಮಠ ಕಟ್ಟುವ ಕಾರ್ಯದಲ್ಲಿ ಸುತ್ತಲ್ಲೆಲ್ಲಾ ಅಲೆದಾಡಿ ದೇಹಿ ಎಂದು ಬೇಡಿ ಮಠದ ಕಾರ್ಯವನ್ನು ಪೂರ್ಣಗೊಳಿಸಿದ್ದಾರೆ. ಊರಿಂದೂರಿಗೆ ಕಾಣಿಕೆ ಬೇಡಲು ಕುದುರೆಯೊಂದನ್ನು ಉಪಯೋಗಿಸುತ್ತಿದ್ದು, ಅವರ ಸವಾರಿ ಮಾತ್ರ ಎಲ್ಲರಂತಿರದೆ, ಬಾಲದ ಕಡೆಗೆ ಮುಖಮಾಡಿ ಸವಾರಿ ಮಾಡುತ್ತಿದ್ದರೆಂಬುದು ವೈಶಿಷ್ಟ್ಯವಾಗಿದೆ.

ಮಠದ ಕಾರ್ಯವನ್ನು ಪೂರ್ಣಗೊಳಿಸಿದ ಮೇಲೆ ಊರ ಪ್ರಮುಖರಲ್ಲಿ ಭಿನ್ನಾಭಿಪ್ರಾಯ ಮೂಡಿತು. ಕೆಲವು ಜನ ತಾತನು ಈಗಿರುವ ಚಿಕ್ಕ ಮನೆಯಲ್ಲಿಯೇ ಇರಲೆಂದೂ, ಹೊಸಮಠದಲ್ಲಿರಬೇಕೆಂದು ಕೆಲವರೂ ವಾದ-ವಿವಾದ ಮಾಡತೊಡಗಿದರು. ಊರಲ್ಲಿ ಎರಡು ಪ್ರಮುಖ ಗುಂಪುಗಳೇ ಹುಟ್ಟು ಹಾಕಿದ ಈ ವಿವಾದವು ೧೯೦೭ ರಷ್ಟೊತ್ತಿಗೆ ಬಳ್ಳಾರಿಯ ಪೊಲೀಸ್ ಸ್ಟೇಷನ್ನಿಗೂ, ಜಿಲ್ಲಾ ಕೋರ್ಟಿಗೂ ಹೋಗುತ್ತದೆ. ಏನೂ ತಿಳಿಯದಾದ ತಿಕ್ಕಯ್ಯನು ಕೆಲ ಪ್ರಮುಖರೊಂದಿಗೆ ಬಂದು 'ಇದೇನಪ್ಪಾ ಹೀಗಾಯಿತು' ಎಂದು ತಾತನನ್ನು

ಕೇಳಿದ್ದಕ್ಕೆ, 'ರಿಜರ್ವ ಬರಲೇಳಯ್ಯ' ಎಂದರಂತೆ. ಕೋರ್ಟಿನಲ್ಲಿನ ತಕರಾರು ಅರ್ಜಿಯಂತೆ ತಾತನವರ ಅಭಿಪ್ರಾಯ ಕೇಳಲು ಕೋರ್ಟು ಅನುಮೋದನೆ ನೀಡಿತು. ಅದರಂತೆ ಪೋಲಿಸ್ ಬಂದು ತಾತನವರನ್ನು ಕೇಳಿದ್ದಕ್ಕೆ 'ನಡೆಯಯ್ಯ ಹೋಗೋಣ' ಎಂದು ಎದ್ದು ನಿಂತಿದ್ದಾರೆ. ಆಗ ಊರಿನ ಎರಡೂ ಗುಂಪಿನವರು ತಮ್ಮ ಭಿನ್ನಾಭಿಪ್ರಾಯಗಳನ್ನೆಲ್ಲಾ ಮರೆತು ಅತ್ಯಂತ ವೈಭವದಿಂದ ಹೊಸಮಠಕ್ಕೆ ಕರೆತರುತ್ತಾರೆ. ಮುಂದೆ ತಾತನವರು ಐಕ್ಯರಾಗುವವರೆಗೂ ಇದೇ ಮಠದಲ್ಲಿದ್ದು ಬರುವ ಭಕ್ತರ ಸಮಸ್ಯೆಗಳನ್ನು ಪರಿಹರಿಸುತ್ತಾ, ಅವರ ಇಷ್ಟಾರ್ಥಗಳನ್ನು ನೆರವೇರಿಸುತ್ತಿರುತ್ತಾರೆ. ಎಲ್ಲೆಲ್ಲಿಂದಲೋ ತಾತನವರ ದರ್ಶನಾರ್ಥಿಗಳಾಗಿ ಬರುವವರ ಸಂಖ್ಯೆ ಅಧಿಕವಾಗುತ್ತದೆ. ಬರುವ ಭಕ್ತರ ಸಲುವಾಗಿ ತಿಕ್ಕಯ್ಯನವರು ಮತ್ತು ಸಿದ್ಧಲಿಂಗಪ್ಪನೆಂಬ ಮತ್ತೊಬ್ಬ ಭಕ್ತರು 'ದಾಸೋಹ'ದ ವ್ಯವಸ್ಥೆ ಮಾಡುತ್ತಾರೆ. ಹೀಗೆ ತಿಕ್ಕಯ್ಯನವರು ತಾತನವರಿಂದಲೂ, ತಾತನ ಭಕ್ತರಿಂದಲೂ ಮೆಚ್ಚುಗೆಯನ್ನು ಪಡೆದರು. ತಾತನವರ ಮತ್ತು ಮಠದ ಏಳ್ಗೆಗೆ ತಮ್ಮನ್ನೇ ಅರ್ಪಿಸಿಕೊಂಡಿದ್ದ ತಿಕ್ಕಯ್ಯನವರು ಹಲವಾರು ಭಕ್ತಿಗೀತೆಗಳನ್ನು ರಚಿಸಿದ್ದಾರೆ.

"ಹಿಡಿಸಲಾರದ ಹಿಗ್ಗಿನಿಂದಂ
ಬಿಡದೆ ದಿನದಿನದೊಳ್ ನಿಜಾತ್ಮ
ಕ್ಕೊಡೆಯನಾದಾ ತಾತನಂ ಬಣ್ಣಿಸುವ ಗೀತೆಗಳಾ।
ಪಡೆದಿರುವ ಸತ್ಕವನ ಶಕ್ತಿಯೊ
ಳಡಿಗಡಿಗೆ ಮುರೆ ರಚಿಸಿ ಪಾಡುತೆ
ಪಡೆವ ಸುಖದಿಂ ಮರೆಯುತ್ತಿರ್ದನು ಮೈಯ ತಿಕ್ಕಯ್ಯಂ"[೨೩]

ತಿಕ್ಕಯ್ಯನವರ ಮತ್ತು ಸಿದ್ಧಲಿಂಗಪ್ಪನವರ ಮಾರ್ಗದರ್ಶನದಂತೆ ಮಠದ ವ್ಯವಸ್ಥೆ ಎಲ್ಲರಿಗೂ ಒಪ್ಪಿಗೆಯಾಗುವಂತೆ ನಡೆಯುತ್ತಿತ್ತು. ಧನ-ಧಾನ್ಯವು ಕಾಣಿಕೆಯ ರೂಪದಲ್ಲಿ ಮಠಕ್ಕೆ ಬರುತ್ತಿದ್ದರಿಂದ 'ದಾಸೋಹ'ದ ವ್ಯವಸ್ಥೆಯೂ ಸುಗಮವಾಗಿತ್ತು. ಆದರೆ ತಾತನವರು ಮಾತ್ರ ಎಲ್ಲಿದ್ದರೂ ಒಂದೇ, ನಿರ್ಲಿಪ್ತಸ್ಥಿತಿಯಲ್ಲಿದ್ದು ಸದಾ ಧ್ಯಾನಮಗ್ನರಾಗಿರುತ್ತಿದ್ದರು. ಕೊಕ್ಕರಚೇಡು ಈಶ್ವರಪ್ಪನವರು ತಾತನ ಪರಮ ಭಕ್ತರು. ಮಠದ ಏಳ್ಗೆಗೆ ಉದಾರವಾಗಿ ಸಹಾಯಮಾಡುತ್ತಿದ್ದರು. ತಿಕ್ಕಯ್ಯನವರಿಗೂ ಇವರಿಗೂ ಉತ್ತಮ ಸ್ನೇಹವೇರ್ಪಟ್ಟಿತ್ತು. ಆದರೆ ತಿಕ್ಕಯ್ಯನವರ ಕೆಲಸವನ್ನೂ ಕೀರ್ತಿಯನ್ನು ಕಂಡು ಸಹಿಸದ ಜನ ಅವರ ವ್ಯಕ್ತಿತ್ವಕ್ಕೆ ಕಳಂಕ ತರುವಂಥ ಸುದ್ದಿಗಳನ್ನು ಸೃಷ್ಟಿಸಿ ಪ್ರಚಾರ ಮಾಡುತ್ತಾರೆ. ಅವರನ್ನು ಕೊಲೆ ಮಾಡಬೇಕೆಂದು ಯತ್ನಿಸಿ ವಿಫಲರಾದರೆಂದೂ ತಿಳಿಯುತ್ತದೆ. ಇದನ್ನೆಲ್ಲಾ ಅರಿತ ತಾತನು ಒಂದು ದಿನ ಇದ್ದಕ್ಕಿದ್ದಂತೆ "ಇಲ್ಲಿಂದ ನೀನು ಹೊರಟು ಹೋಗಯ್ಯ" ಎಂದರು. ಮರುಮಾತಾಡದೆ ಹೊರಟ ತಿಕ್ಕಯ್ಯನು, ತಾತನ ಮೇಲಿನ ಭಕ್ತಿಯನ್ನು, ಅವರ ಅಗಲಿಕೆಯನ್ನು ಸಹಿಸಿಕೊಳ್ಳಲಾಗದೆ "ಹೇಗೆ ಮರೆಯಲೋ ತಾತನ ಹೇಗೆ ಮರೆಯಲೋ" ಎಂದು ಹಾಡನ್ನು ಹಾಡುತ್ತಾ ಹೋದವರು ಮತ್ತೆ ಮರಳಿ ಬರಲೇ ಇಲ್ಲವೆಂದು ತಿಳಿಯುತ್ತದೆ. ತಿಕ್ಕಯ್ಯನವರ ನಂತರ ಮಠದ ವ್ಯವಸ್ಥೆಯನ್ನು ಸಿದ್ಧಲಿಂಗಪ್ಪನವರು ವಹಿಸಿಕೊಂಡಿದ್ದಾರೆ. ದರ್ಶನಾರ್ಥಿಗಳಾಗಿ ಮಠಕ್ಕೆ ಬರುವ ಭಕ್ತರಿಗೆ ಊಟ ಮತ್ತು ವಸತಿಗಳ ವ್ಯವಸ್ಥೆಯನ್ನು ಇವರೇ ಮಾಡಿರುತ್ತಾರೆ.

[illegible]

ಶಿವರಾಮವಧೂತರ ಆಗಮನ

ತಾತನವರ ಸೇವೆಯನ್ನು ತ್ರಿಕರಣ ಪೂರ್ವಕವಾಗಿ ಮಾಡಿ ಮಠವನ್ನು ಕಟ್ಟಿಸಿ, ತಾತ ಹೋಗೆಂದಾಗ ಹೋಗಿ ಬಿಟ್ಟ ತಿಕ್ಕಯ್ಯನವರು ಸದಾಸ್ಮರಣೀಯರು. ಇವರ ನಂತರ ತಾತನ ಅನುಗ್ರಹಕ್ಕೆ ಪಾತ್ರರಾದವರು ಶಿವರಾಮ ವಧೂತರು.

ಒಂದು ದಿನ ಕಪ್ಪಾದ, ಧಡೂತಿ ವ್ಯಕ್ತಿಯೊಬ್ಬ ಮಠಕ್ಕೆ ಬರುತ್ತಾನೆ. ಆದರೆ ಮಠದವರು ಆತನಿರುವ ಸ್ಥಿತಿಕಂಡು ಒಳಗೆ ಬಿಡಲಿಲ್ಲ. ಆತ ನಿರಾಶನಾಗದೆ ಮಠದ ಆವರಣದಲ್ಲೇ ಇದ್ದು, ಯಾರಾದರೂ ಊಟ ನೀಡಿದರೆ ಉಣ್ಣುತ್ತಿದ್ದ, ಇಲ್ಲದಿದ್ದರೆ ಇಲ್ಲ. ಆದರೆ ಮಠದ ಆವರಣವನ್ನು ಕಸ ಹೊಡೆದು, ನೀರನ್ನು ಹಾಕಿ ಸ್ವಚ್ಛಗೊಳಿಸುತ್ತಿದ್ದ. ರಾತ್ರಿಯ ಸಮಯದಲ್ಲಿ ಎಲ್ಲರೂ ಮಲಗಿದ ಮೇಲೆ ತಾತನವರ ಬಳಿಸಾರಿ ಅವರ ಪಾದಸೇವೆ ಮಾಡುತ್ತಿದ್ದರು. ಈತನ ಸೇವೆ, ವಿನಯ, ನಿಷ್ಠೆಯನ್ನರಿತ ಮಠದವರು, ಮಠದ ಒಳಗಡೆ ಪ್ರವೇಶ ನೀಡಿದರು. ಹಲವು ದಿನಗಳು ಕಳೆದ ಮೇಲೆ ಈತ ಹುಬ್ಬಳ್ಳಿಯ ಸಿದ್ಧಾರೂಢರಲ್ಲಿದ್ದ 'ಹುಚ್ಚು ಲಿಂಗಪ್ಪ' ಎಂಬುದು ಗೊತ್ತಾಯಿತು.

ಮುಂದೆ ತಾತನಲ್ಲಿ ಮತ್ತು ಹುಚ್ಚುಲಿಂಗಪ್ಪನಲ್ಲಿ ಗುರು-ಶಿಷ್ಯ ಸಂಬಂಧ ಬೆಳೆಯಿತು. ಈತನ ಮುಗ್ಧತೆಯನ್ನ, ಸೇವೆಯನ್ನ ಪರೀಕ್ಷಿಸಲೋ ಎನ್ನುವಂತೆ, ತಾತನು "ತುಮಕೂರಿಗೆ ಹೋಗಿ ಚಕ್ಲಿ ತಾರಯ್ಯ" ಎಂದಾಗ, ಯೋಚನೆಯನ್ನೂ ಸಹ ಮಾಡದೆ, ಅರ್ಧರಾತ್ರಿಯಲ್ಲಿ ಎದ್ದು ತುಮಕೂರಿಗೆ ಹೋಗಿ, ಪಡಬಾರದ ಕಷ್ಟಗಳನ್ನನುಭವಿಸಿ, ಕೂಲಿ ಮಾಡಿ ಚಕ್ಕುಲಿ ತಂದು ಕೊಟ್ಟ ಮುಗ್ಧ ಭಕ್ತ. ಶ್ರಮವಹಿಸಿ ತಂದ ಚಕ್ಕುಲಿಯನ್ನು ಅತ್ಯಂತ ನಯ, ವಿನಯ, ಭಕ್ತಿಯಿಂದ ತಾತನ ಮುಂದಿಟ್ಟಾಗ, "ಕಾಶೀತೀರ್ಥ ಬರಲಿರಯ್ಯ" ಎಂದು ಈತನ ಸಹನೆಯನ್ನು ಪರೀಕ್ಷಿಸಿದ್ದಾರೆ. ತಾತನವರ ಸಂಕಲ್ಪದಂತೆ ಕಾಶೀತೀರ್ಥವೂ ಬರುತ್ತದೆ. ಆಗ ತಾತನವರು ಚಕ್ಕುಲಿ ತಿಂದು ಕಾಶೀ ಜಲ ಕುಡಿದು, ಶಿಷ್ಯನ ದೃಢಭಕ್ತಿಯ ಮೆಚ್ಚಿ, ಆತನಿಗೂ ಚಕ್ಕುಲಿ ಮತ್ತು ಕಾಶೀ ಜಲನೀಡಿ ಆಶೀರ್ವದಿಸುತ್ತಾ "ನೀನು ಶಿವರಾಮವಧೂತ"ನೆಂದು ಕರೆದು ಹಂಪಿಯ ಹೇಮಕೂಟಕ್ಕೆ ಕಳುಹಿ ಸುತ್ತಾರೆ. ಗುರುಕೃಪೆಯನ್ನು ಪಡೆದು, ಚಾಕುಬಂಡೆಯಲ್ಲಿ ಕೆಲದಿನಗಳಿದ್ದು, ಕೊನೆಗೆ ಹಂಪಿಯ ಹೇಮಕೂಟಕ್ಕೆ ಬಂದ ಶಿವರಾಮವಧೂತರು ಆಶ್ರಮವನ್ನು ಸ್ಥಾಪಿಸಿ ಅಲ್ಲಿಯೇ ನೆಲೆ ನಿಲ್ಲುತ್ತಾರೆ.

ಕ್ಷೇತ್ರ ದರ್ಶನಕ್ಕೆ ಬಂದ ಮಹಾತ್ಮರು ಮತ್ತು ತಾತನವರ ಲೀಲಾ ವಿಲಾಸ

ತಾತನವರ ಕೀರ್ತಿ ನಾಡನ್ನೆಲ್ಲಾ ವ್ಯಾಪಿಸಲು, ಇವರನ್ನು ನೋಡಲು ಹುಬ್ಬಳ್ಳಿಯ ಸಿದ್ಧಾರೂಢರು, ಸಿರ್ಡಿಯ ಸಾಯಿಬಾಬರು, ಹಾಲ್ವಿಯ ಚರಣಗಿರಿ ಮಠದಪ್ಪಗಳಾದ ರುದ್ರಮುನಿಗಳು ಬಂದು ಅವಧೂತ ಸ್ಥಿತಿಯಲ್ಲಿರುವ ಶಿವಯೋಗಿ ತಾತನನ್ನು ಕಂಡು ಆಶ್ಚರ್ಯ ಹೊಂದಿ ದರ್ಶನ ಭಾಗ್ಯ ಮತ್ತು ಆಶೀರ್ವಾದ ಪಡೆದಿರುತ್ತಾರೆ.

ಉರವಕೊಂಡ ಗವಿಮಠದ ಶ್ರೀ ಚನ್ನಬಸವ ಮಹಾಸ್ವಾಮಿಗಳು ಚೇಳಗುರಿಕೆಗೆ ಅನೇಕ ಸಲ ಬಂದು ಹೋಗುತ್ತಿದ್ದರು. ಆದರೆ ಮಠದ ಪೂಜೆ ಪ್ರಸಾದಗಳನ್ನು ಸ್ವೀಕರಿಸುತ್ತಿರಲಿಲ್ಲ. ಊರವರೆಲ್ಲಾ ಏಕೆಂದು ಕೇಳಿದ್ದಕ್ಕೆ "ಲಿಂಗವಿಲ್ಲದ ಭವಿಯ ಸ್ಥಾನದಲ್ಲಿ ನಾವು ಪೂಜೆ ಮಾಡುವುದು ಹೇಗೆ?" ಎಂದು ವೀರಶೈವ ಧರ್ಮದ ಕಟ್ಟಾಚಾರವನ್ನು ಜನರ ಮುಂದಿಡುತ್ತಾರೆ. ಸಂದೇಹ ಬಂದ ಸ್ವಾಮಿಗಳು ಮತ್ತು ಊರ ಪ್ರಮುಖರು ತಾತನನ್ನು

ಪರೀಕ್ಷಿಸಲು ಮಠಕ್ಕೆ ಬಂದಾಗ ಸ್ವಾಮಿಗಳಿಗೆ ಆಶ್ಚರ್ಯ "ಲಿಂಗವಿದೆಯಲ್ಲಪ್ಪ, ನಾವು ಇಲ್ಲವೆಂದುಕೊಂಡಿದ್ದೆವು" ಎನ್ನುತ್ತಾರೆ. ಸುತ್ತಲಿದ್ದವರಿಗೆಲ್ಲಾ ಆಶ್ಚರ್ಯ. ತಮಗಾರಿಗೂ ಕಾಣದ ಲಿಂಗ ಸ್ವಾಮಿಗಳಿಗೆ ಕಂಡಿತಲ್ಲಾ ಎಂದು ಸಂತೋಷ ಮತ್ತು ಸಮಾಧಾನ ಪಟ್ಟಿರುತ್ತಾರೆ. ತಾತನವರ ಅಂಗವೆ ಲಿಂಗವಾಗಿ ಸ್ವಾಮಿಗಳಿಗೆ ಕಂಡಿದೆಯೆಂದು ಭಕ್ತರು ಅರಿತುಕೊಂಡರು.

ಕುಡಿತಿನಿಯ ಕಾರೇ ಸಿದ್ಧರಾಮಪ್ಪನವರು ಲಿಂಗಪೂಜಾ ನಿಷ್ಠರು. ಒಮ್ಮೆ ತಾತನವರ ದರ್ಶನಕ್ಕೆ ಬಂದು, ಲಿಂಗವಿಲ್ಲದ ತಾತನನ್ನು ನೋಡಿ, ನಮಸ್ಕರಿಸದೇ ಸಂಬಂಧಿಕರ ಮನೆಗೆ ಹೋಗಿರುತ್ತಾರೆ. ಮನೆಯಲ್ಲಿ ಲಿಂಗಪೂಜೆಗೆಂದು ಕುಳಿತಾಗ ಧರಿಸಿದ್ದ ಲಿಂಗವೇ ಕಳೆದು ಹೋಗಿತ್ತು. ಲಿಂಗವಿಲ್ಲದ ತಾತನಿಗೆ ವಂದಿಸಬಾರದೆಂದು ಅಂದುಕೊಂಡಿದ್ದರಿಂದಲೇ ಹೀಗಾಗಿದೆ ಎಂದು ಅರಿತು, ತಾತನಲ್ಲಿ ಬಂದು ಕ್ಷಮೆಯಾಚಿಸಿದರು. ಕಳವಳಗೊಂಡು ಮನೆಗೆ ಹಿಂತಿರುಗಿ ಹೋಗುವಾಗ ಕಳೆದ ಲಿಂಗವು ಮಠದ ಆವರಣದಲ್ಲಿಯೇ ಸಿಕ್ಕಿತು. ಹೀಗೆ ಲಿಂಗ ಸ್ವರೂಪಿಯಾದ ತಾತನು ಸಂದೇಹಪಟ್ಟ ಭಕ್ತರಿಗೆ ತನ್ನ ಮಹಿಮೆತೋರಿ ಸಂದೇಹ ನಿವಾರಿಸಿದ್ದಾರೆ.

ಗುಂತಕಲ್ಲಿನ ಉಮಾಪತಯ್ಯನು ಬಡತನದಿಂದ ಬೇಸತ್ತು ಮಠಕ್ಕೆ ಬಂದು ತಾತನವರ ಸೇವೆಗೈದ ಫಲದಿಂದ ಬಡತನ ನಿವಾರಣೆಯಾಗಿದೆ. ಕೊಪ್ಪಳದ ಅಂತ್ಯಜ ಕುಲದ ಮಾನಮ್ಮನಿಗೆ ಕುಷ್ಠರೋಗ ಬಂದು ಮನೆಯವರಿಂದ ದೂರವಾಗಿ ತಾತನವರ ಮಠಕ್ಕೆ ಬರುತ್ತಾಳೆ. ಮಠದಲ್ಲಿದ್ದು ಮಠದ ಮತ್ತು ತಾತನವರ ಸೇವೆ ಮಾಡಿದ್ದ ಫಲವಾಗಿ ಕುಷ್ಠರೋಗದಿಂದ ಸಂಪೂರ್ಣ ಗುಣಮುಖಳಾಗಿದ್ದಾಳೆ. ಸಿಡಿಗಿನ ಮೊಳದ ರಂಗಯ್ಯನು ಶುದ್ಧ ಮನಸ್ಕನಾಗಿ ತಾತನನ್ನು ನಂಬಿದ್ದರಿಂದ ನ್ಯಾಯಾಲಯದಲ್ಲಿದ್ದ ವಿಷಯ ಬಗೆಹರಿದು ತೀರ್ಪಿನಲ್ಲಿ ಜಯಸಾಧಿಸಿರುತ್ತಾರೆ. ಸಿರಿಗೆರೆಯ ಬಸವಾಂಬಿಕೆಯು ಮಕ್ಕಳಾಗಲಿಲ್ಲವೆಂಬ ಕೊರಗಿನಿಂದ ಬಳಲುತ್ತಿದ್ದಳು. ಮನೆಯವರ ಮತ್ತು ಸಮಾಜದ ನಿಂದನೆಯ ಮಾತುಗಳನ್ನು ಕೇಳಲಾರದೆ ಜೀವನದ ಬಗ್ಗೆ ಬೇಸರ ಪಟ್ಟಿರುತ್ತಾಳೆ. ಮುಂದೆ ತಾತನಲ್ಲಿ ಬಂದು 'ಬಂಜೆಯೆಂಬ ಹೆಸರ ಹೋಗಲಾಡಿಸಿ, ಮಕ್ಕಳಭಾಗ್ಯ ನೀಡೆಂದು' ಬೇಡುತ್ತಾಳೆ. ತಾತನನ್ನು ನಂಬಿ ಆಶೀರ್ವಾದ ಪಡೆದ ಫಲವಾಗಿ ಇಬ್ಬರು ಗಂಡುಮಕ್ಕಳು ಜನಿಸಿರುತ್ತಾರೆ. ಧಾರವಾಡದ ಕರಿವೀರಪ್ಪ ಎಂಬುವವರಿಗೆ ನ್ಯಾಯಾಲಯದಲ್ಲಿ ಜಯ ಲಭಿಸಿದ್ದು, ತಾತನನ್ನು ನಂಬಿ ಪೂಜಿಸಿದ್ದರಿಂದ ಎಂದು ತಿಳಿಯುತ್ತದೆ.

ಚೇಳಗುರ್ಕಿಯಲ್ಲಿ ಪ್ಲೇಗುರೋಗದಿಂದ ನರಳುತ್ತಿದ್ದ ಭಕ್ತನ ಮನೆಯನ್ನು, ಮನೆಯವರು ಯಾರೂ ಇಲ್ಲದಿದ್ದಾಗ, ತಮ್ಮ ಮಹಿಮಾ ಶಕ್ತಿಯಿಂದ ರಕ್ಷಿಸಿರುತ್ತಾರೆ. ಜೋಳದರಾಶಿಯ ಪಂಪನಗೌಡರ ಹೆಂಡತಿ ರುದ್ರಾಂಬಿಕೆಯ ರೋಗವನ್ನು ತಮ್ಮ ಮಹಿಮಾಶಕ್ತಿಯ ಪ್ರಭಾವದಿಂದ ಹೋಗಲಾಡಿಸಿರುತ್ತಾರೆ.

ಈ ರೀತಿ ತಾತನವರು ತಮ್ಮನ್ನು ನಂಬಿದ ಭಕ್ತರ ವೈಯಕ್ತಿಕ ಸಮಸ್ಯೆಗಳನ್ನು, ನೋವುಗಳನ್ನು, ಬಗೆಹರಿಸುವುದರ ಜೊತೆಗೆ, ಊರಿನ ಸಾಮೂಹಿಕ ಸಮಸ್ಯೆಗಳನ್ನು, ಎಡರು-ತೊಡರುಗಳನ್ನು ತಮ್ಮ ಸಾಧನೆಯ ಸಿದ್ಧಿಯಿಂದ ಬಗೆಹರಿಸಿ, ಕಾಪಾಡಿದ್ದಾರೆ. ತಾತನವರ ಮಹಿಮಾಶಕ್ತಿ ಸುತ್ತ ಮುತ್ತಲಿನ ನಾಡನ್ನೆಲ್ಲಾ ವ್ಯಾಪಿಸಿ, ದರ್ಶನಾರ್ಥಿಗಳಾಗಿ ಬರುವ ಯಾತ್ರಿಕರ ಸಂಖ್ಯೆ ದಿನದಿಂದ ದಿನಕ್ಕೆ ಅಧಿಕವಾಗತೊಡಗುತ್ತದೆ.

ಯಾತ್ರಿಕರು ವರ ಚೇಳಗುರ್ಕೆ
ಕ್ಷೇತ್ರಕಾಗಮಿಸುತೆ ಸತತ ಮಾ
ಕ್ಷೇತ್ರದಧಿಪತಿ ತಾತ ದರ್ಶನವೆಸಗಿ ತತ್ಕೃಪೆಗೇ |
ಪಾತ್ರರಾಗುವದಧಿಕಮೆನಿಸಿರೆ
ಚೈತ್ರದಾ ಹುಣ್ಣಿವೆಯೊಳಾತನ
ಜಾತ್ರೆಯಾಗಿಸಲೂರ ಹಿರಿಯರು ನಿರ್ಣಯಿಸೆ ಬಳಿಕ[೨೪]

ಊರ ಪ್ರಮುಖರೆಲ್ಲಾ ಸೇರಿ ನಿರ್ಣಯಿಸಿದಂತೆ ಚೈತ್ರ ಶುದ್ಧ ಪೌರ್ಣಮಿಯಂದು, ತಾತನವರಿಗೆ ಇಷ್ಟವಿರದಿದ್ದರೂ ಒತ್ತಾಯ ಮಾಡಿ, ಎತ್ತಿಕೊಂಡು ಬಂದು ಶೃಂಗರಿಸಿದ ಪಲ್ಲಕ್ಕಿಯಲ್ಲಿ ಕೂರಿಸಿ ಮೆರವಣಿಗೆ ಮಾಡುತ್ತಾರೆ. ಮಠದ ಎದುರುಬಸವಣ್ಣನವರೆಗೂ ಹೋಗಿ ಪಲ್ಲಕ್ಕಿ ಉತ್ಸವವು ತಿರುಗಿ ಮಠಕ್ಕೆ ಬರುವವರೆಗೂ ತಾತನು ಗಂಭೀರವಾಗಿ ಕುಳಿತ್ತಿದ್ದರಂತೆ. ಅಂದು ಪ್ರಾರಂಭವಾದ ಉತ್ಸವ ಮುಂದುವರೆದು ಅವರ ಉತ್ಸವಮೂರ್ತಿಯ ಮೆರವಣಿಗೆ ಅತ್ಯಂತ ವೈಭವದಿಂದ, ವಿಶೇಷ ಅಲಂಕಾರಗಳಿಂದ ಇಂದಿಗೂ ನಡೆದುಕೊಂಡು ಬರುತ್ತಿದೆ.

ಒಮ್ಮೆ ಬೆಂಗಳೂರಿನ ಶಿವಯೋಗಿಗಳಾದ ಶ್ರೀ ನಿರಂಜನ ಸ್ವಾಮಿಗಳು ಚೇಳುಗುರಿಕೆ ಮಠಕ್ಕೆ ಆಗಮಿಸಿ ತಾತನವರ ದರ್ಶನ ಪಡೆದರು. ''ಆ ಸಮಯದಲ್ಲಿ ಯಾರೋ ಭಕ್ತಾದಿಗಳು ತಾತನವರಿಗೆ ರೇಷ್ಮೆ ವಸ್ತ್ರ ಕೊಟ್ಟಿರುತ್ತಾರೆ. ವಸ್ತ್ರದ ಮೇಲೆ ನಿರಂಜನರಿಗೆ ಮೋಹವುಂಟಾಗಿ, ನನಗೆ ಕೊಡಿರೆಂದು ತಾತನವರನ್ನು ಕೇಳುತ್ತಾರೆ. ಅದಕ್ಕೆ ಅವರು ಆತನ ಮೇಲೆ ಸಿಟ್ಟಾಗಿ ಬೆತ್ತಲೆ ಇರು ಎಂದರು. ಅಂದ ಕೂಡಲೆ ನಿರಂಜನಸ್ವಾಮಿಗಳ ಮನಸ್ಸು ವಿಕಾರಕ್ಕೊಳಗಾಗಿ ಮೈಮೇಲಿದ್ದ ಬಟ್ಟೆಗಳನ್ನೆಲ್ಲಾ ಕಿತ್ತುಹಾಕಿ ದಿಗಂಬರನಾಗಿ ಹುಚ್ಚನಂತೆ ವರ್ತಿಸಿದ್ದಾರೆ. ತಾತನವರು ಆಶೀರ್ವದಿಸಿದ ನಂತರವೇ ಮನಸ್ಸು ಸ್ಥಿಮಿತಕ್ಕೆ ಬಂದು ಬಟ್ಟೆಯುಟ್ಟಿದ್ದಾರೆ.''[೨೫] ಶಿವಯೋಗಿಗಳಾದ ಮೇಲೆ ಮೋಹ ಇರಬಾರದೆಂದೂ, ಲೌಕಿಕ ಜಗತ್ತಿನ ವಸ್ತುಗಳನ್ನು ಕಂಡರೆ ನಿರ್ಮೋಹಿಯಾಗಿರಬೇಕೆಂದು ತಾತನವರು ತಿಳಿಹೇಳಿದ್ದಾರೆ.

ತಾತನವರ ಕೃಪೆಗೆ ಪಾತ್ರರಾದ ಭಕ್ತರ ರೋಗ ರುಜಿನಗಳನ್ನು, ಎಡರು-ತೊಡರುಗಳನ್ನು ನಿವಾರಣೆ ಮಾಡುತ್ತಾ, ಅನುಗ್ರಹ ನೀಡಿರುತ್ತಾರೆ. ಯಾವ ರೋಗಿಯೇ ಬರಲಿ ''ಬೆಲ್ಲ ತಿನ್ನು, ಮಜ್ಜಿಗೆ ಕುಡಿ'' ಎನ್ನುತ್ತಿದ್ದರು. ಅದರಂತೆ ರೋಗಿಗಳು ಪಾಲಿಸಿದರೆ ಗುಣಮುಖರಾಗಿರುತ್ತಾರೆ. ಹೀಗೆ ನಾಡಿನಾದ್ಯಂತ ಅವರ ಕೀರ್ತಿ ವ್ಯಾಪಿಸಿ, ಅನುಗ್ರಹಕ್ಕಾಗಿ ಚೇಳಗುರ್ಕಿಗೆ ಬರುವ ಭಕ್ತರುಗಳ ಸಂಖ್ಯೆ ಅಧಿಕವಾಗುತ್ತಿರುತ್ತದೆ. ಬಂದ ಭಕ್ತರುಗಳಲ್ಲಿ ಬೆಂಗಳೂರಿನ ಗುರಪ್ಪ ಮತ್ತು ದೊಡ್ಡ ವೀರಾಂಬೆ ಎಂಬ ಭಕ್ತರು ಪ್ರಮುಖರು. ಇವರ ಮಗ ಶಾಮಣ್ಣನವರು, ಅವರ ಅನುಗ್ರಹಕ್ಕೆ, ವಿಶ್ವಾಸಕ್ಕೆ ಪಾತ್ರರಾದವರು. ಈತ ಬಿ.ಎ. ಓದುತ್ತಿದ್ದಾಗ ಮೈಸೂರಿಗೆ ಹೋಗಲು ಎಲ್ಲಾ ಏರ್ಪಾಡುಗಳನ್ನು ಮಾಡಿಕೊಂಡು ಸಿದ್ಧವಾಗಿದ್ದಾಗ ತಾತನವರು ''ಸ್ವಪ್ನದಲ್ಲಿ ಕಾಣಿಸಿಕೊಂಡು 'ಮೈಸೂರಿಗೆ ಹೋಗಬೇಡಯ್ಯ' ಎಂದರಂತೆ. ಏನಪ್ಪಾ ಎಲ್ಲಾ ತಯಾರು ಮಾಡಿಕೊಂಡಿರುವಾಗ ಬೇಡವೆನ್ನುತ್ತೀರಾ? ಎಂದು ಕೇಳಿದ್ದಕ್ಕೆ ತಾತನವರು 'ಆದರೆ ಹೋಗಿಬಾರಯ್ಯ' ಎಂದರಂತೆ. ಅದರಂತೆ ಮೂರು ತಿಂಗಳಿಗೆ ಅವರ ತಂದೆ ಶಿವಾಧೀನರಾದ ಪ್ರಯುಕ್ತ ವಾಪಸ್ಸು ಬೆಂಗಳೂರಿಗೆ ಬರಬೇಕಾಯಿತೆಂಬ ವಿಷಯವನ್ನು

ಸ್ವತಃ ಶಾಮಣ್ಣನವರೇ ಒಂದೆಡೆ ಹೇಳಿದ್ದಾರೆ.''[೨೬] ಬೆಂಗಳೂರಿನಲ್ಲಿ ರೇಷ್ಮೆ ವ್ಯಾಪಾರ ಮಾಡುತ್ತಿದ್ದರೂ, ಶಾಮಣ್ಣನವರು ಚೇಳಗುರ್ಕಿಯಲ್ಲೆ ನೆಲೆನಿಂತು ಮಠದ ಸರ್ವತೋಮುಖ ಅಭಿವೃದ್ಧಿಗೆ ಕಾರಣರಾಗಿರುವುದನ್ನು ಕಾಣಬಹುದು.

ಸುತ್ತಮುತ್ತಲಿನ ಗ್ರಾಮಗಳಲ್ಲದೆ, ಕರ್ನಾಟಕ, ಆಂಧ್ರ, ಮಹಾರಾಷ್ಟ್ರ ಹೀಗೆ ಅಕ್ಕಪಕ್ಕದ ರಾಜ್ಯದ ಅಪಾರ ಭಕ್ತ ಜನತೆಯನ್ನು ಪಡೆದಿದ್ದ ತಾತನವರಿಗೆ ದೇಹದ ಅಂತ್ಯವು ಸಮೀಪಿಸುತ್ತದೆ.

''ಆಗಿಸುವ ಬಹುಲೀಲೆಗಳ ಜಿತ
ರಾಗಿ ತಾನಾಗಿಯೆ ನಡೆಯಿಸುತ್ತಿರ
ಲಾಗಮಿಸಿ ತಾತನಿಗೆ ಪೂರ್ಣಾಯುಷ್ಯದವಧಿಯು ತಾಂ |
ನೀಗುತಂ ಸ್ಥೂಲಾಂಗಮಂ ಸೊಗ
ಸಾಗಿ ಕಾರಣ ತನವಿನಿಂ ಶಿವ
ಯೋಗದಮಳ ಸಮಾಧಿಯಲ್ಲಿರಲೆಳಸೆ ತದ್ಗುರುವು''[೨೭]

ಒಳಗಿನ ಆಧ್ಯಾತ್ಮಿಕ ಶಕ್ತಿ ಮಾಗಿ, ದೇಹಕ್ಕೆ ಮುಪ್ಪು ಆವರಿಸಿದಾಗ ತಾತನವರಿಗೆ ಸುಮಾರು ನೂರರಷ್ಟು ವಯಸ್ಸು ಆಗಿತ್ತೆಂದು ಭಕ್ತರು ಹೇಳುತ್ತಾರೆ.

ಗ್ರಾಮದಲ್ಲಿ ಹತ್ತು ವರ್ಷ, ಮಠದಲ್ಲಿ ಹದಿನೈದು ವರ್ಷಗಳವರೆಗೆ, ಸುಮಾರು ೨೫ ವರ್ಷಗಳ ಕಾಲ ಚೇಳಗುರ್ಕಿಯಲ್ಲಿದ್ದು, ಶಕೆ ೧೯೨೨ ರ ದುಂದುಭಿನಾಮ ಸಂವತ್ಸರ ಜೇಷ್ಠ ಶುದ್ಧ ೪ರಂದು ಪರಮಸಿದ್ಧಿಯ ಸಮಾಧಿಹೊಂದಿ, ದೈವಾಧೀನರಾಗಿದ್ದಾರೆ. ತಿಕ್ಕಯ್ಯನವರು ಕಟ್ಟಿಸಿದ್ದ ಯೋಗ ಮಂಟಪದಲ್ಲಿ ಅಪಾರ ಭಕ್ತಸಮೂಹದ ಮಧ್ಯೆ ವಿಧಿಯುಕ್ತವಾಗಿ ಸಮಾಧಿಕ್ರಿಯೆ ನಡೆದಿದೆ. ಮರಣದ ಸಮಯದಲ್ಲಿ ದಫೇದಾರರನ್ನು ಕರೆಯಯ್ಯ ನೀರುಬೇಕು ಎಂದಿದ್ದಾರೆ. ದಫೇದಾರನೆಂದರೆ ಚಾಕುಬಂಡೆಯ ಕರಿಬಸಯ್ಯ. ಆತ ನೀರು ತಂದು ಕುಡಿಸಿದ ಮೇಲೆ ನೋವಿಲ್ಲದೆ, ನರಳಿಕೆಯಿಲ್ಲದೆ, ವ್ಯಾಧಿಗೊಳಗಾಗದೆ ಸಮಾಧಿ ಸ್ಥಿತಿ ಹೊಂದಿರುತ್ತಾರೆ.

ತಾತನವರು ಸಮಾಧಿಯಾದ ದಿನದ ಸ್ಮಾರಕವಾಗಿ ಪ್ರತಿವರ್ಷ ಮಹಾರಥೋತ್ಸವ ಅದ್ದೂರಿಯಾಗಿ ನಡೆದುಕೊಂಡು ಬರುತ್ತಿದೆ. ಸಮಾಧಿಯಾದ ಮೇಲೆ ಮಠದ ಏಳ್ಗೆಗೆ ಶ್ರಮಿಸುತ್ತಿದ್ದ ಶಾಮಣ್ಣನವರ ಕನಸಿನಲ್ಲಿ ಬಂದು ''ಜೀವ ಸಮಾಧಿ ಮಾಡಿದರಯ್ಯಾ'' ಎಂದು ಹೇಳಿದರಂತೆ. ಅದರಿಂದ ಇಂದು 'ಚೇಳಗುರ್ಕಿ ಶ್ರೀ ಎರ್ರಿತಾತನವರ ಜೀವ ಸಮಾಧಿಕ್ಷೇತ್ರ' ಎಂದು ಪ್ರಸಿದ್ಧಿ ಪಡೆದಿದೆ. ಕಾಲಾನಂತರವೂ ಶ್ರೀ ಗೌರೀಶಂಕರ ಸ್ವಾಮಿಗಳಿಗೆ ಸಮಾಧಿಯಿಂದ ದರ್ಶನ ನೀಡಿದರೆಂದೂ ಅಲ್ಲೀಪುರದ ಮಹದೇವ ತಾತನವರೊಂದಿಗೆ ಸಮಾಧಿಯೊಳಗಿದ್ದು ಮಾತನಾಡಿದರೆಂದೂ, ಜೋಳದರಾಶಿ ದೊಡ್ಡನಗೌಡರಿಗೆ ಸ್ವಪ್ನದಲ್ಲಿ ಬಂದು ಪಂಚಾಕ್ಷರೀ ಮಂತ್ರ ಹೇಳಿಕೊಟ್ಟರೆಂದೂ, ಇಂಥ ಪ್ರಮುಖ ಘಟನೆಗಳಲ್ಲದೆ ಅನೇಕ ಭಕ್ತರಿಗೆ ಸ್ವಪ್ನದಲ್ಲಿ ದರ್ಶನ ನೀಡುತ್ತಿರುವರೆಂದೂ ಇಂದಿನ ಜನರ ನಂಬಿಕೆಯಾಗಿದೆ.

ಸಮಾಧಿಯ ನಂತರ

ತಾತನವರು ಸಮಾಧಿಯಾದ ಸುಮಾರು ೧೨ ವರ್ಷಗಳ ಕಾಲ ಮಠವು ಸುಪ್ತಾವಸ್ಥೆಯಲ್ಲಿದ್ದು, ನಂತರ ಭಕ್ತರ ಶ್ರದ್ಧೆ, ಸಹಕಾರ ಪ್ರೋತ್ಸಾಹದಿಂದ ನಾನಾಮುಖವಾಗಿ ಬೆಳೆಯಿತು. ಚಾನಾಳಿನ ಅಯ್ಯನಗೌಡ ಎನ್ನುವ ಭಕ್ತರು ತಾತನ ಸಮಾಧಿಯ ಮೇಲೆ ಶಿಲಾವಿಗ್ರಹವನ್ನು ಮಾಡಿಸಿ ಪ್ರತಿಷ್ಠಾಪಿಸಿದ್ದಾರೆ. ಮೌನದ ತಾತನವರು, ಮೂರ್ತಿರೂಪವನ್ನು ತಾಳಿ ಇಂದು ನೋಡುವವರಿಗೆ ಚೇಳಗುರ್ಕೆ ಆಶ್ಚರ್ಯವೂ, ಭಕ್ತಿಯೂ ಮೂಡುವ ಪವಿತ್ರ ಕ್ಷೇತ್ರವಾಗಿದೆ. ತಮಿಳುನಾಡಿನ ಶ್ರೀ ರಾಮಲಿಂಗ ಸ್ವಾಮಿಗಳು ಒಮ್ಮೆ ಇಲ್ಲಿಗೆ ಬಂದಾಗ "ಇದು ಮಹಾಕ್ಷೇತ್ರ ವಾಗುತ್ತದೆ" ಎಂದು ನುಡಿದ ಭವಿಷ್ಯವಾಣಿ ನಿಜವಾಗಿದೆ ಎನ್ನುತ್ತಾರೆ ಇಂದಿನ ಸಮಿತಿಯವರು. ಮಠದ ಪ್ರಗತಿಗೆ ಹಗಲಿರುಳು ದಕ್ಷತೆಯಿದ ಪ್ರಾಮಾಣಿಕತೆಯಿಂದ ಕಾರ್ಯನಿರ್ವಹಿಸಿದ ಸಿದ್ದಲಿಂಗಪ್ಪ, ಬಸವಯ್ಯ, ಬೆಂಗಳೂರಿನ ಶಾಮಣ್ಣನವರನ್ನು ಭಕ್ತವೃಂದ ಈಗಲೂ ಸ್ಮರಿಸುತ್ತದೆ.

ಕ್ಷೇತ್ರದ ಸರ್ವತೋಮುಖ ಬೆಳವಣಿಗೆಗೆ ಕಂಕಣಬದ್ಧರಾಗಿ ನಿಂತಿದ್ದ ಶಾಮಣ್ಣನವರನ್ನು ಜೋಳದರಾಶಿ ದೊಡ್ಡನಗೌಡರು ಸ್ವತಃ ತಿಕ್ಕಯ್ಯನವರೇ ಇವರ ರೂಪದಲ್ಲಿದ್ದಾರೆಂದು ಭಾವಿಸಿದ್ದರೆಂದು ತಿಳಿಯುತ್ತದೆ.

ಕರಸಿಕೊಳ್ಳುತೆ ತಾತನಾ ಸ
ಚ್ಚರಿತರಂತಿಕ್ಕಯ್ಯಗಳನುಳಿ
ದಿರುವ ಕಾರ್ಯವ ಮಾಡಿಸುವನೆಂದೊಮ್ಮೆ ನಗೆಮೊಗದಿಂ |
ಒರೆಯೆ ದೊಡ್ಡನ ಗೌಡನಿದಿರೊಳ್
ಹರಿಸದಿಂ ತಿಕ್ಕಯ್ಯಗಳೆ ನೀ
ವಿರುವಿರೆಂದನು ಗೌಡ ನಾ ಶ್ಯಾಮಣ್ಣನವರಿಗೆ ತಾಂ ||೨೮

ಶ್ಯಾಮಣ್ಣನವರು ಬೆಂಗಳೂರಿನಲ್ಲಿ ಸೀರೆ ವ್ಯಾಪಾರ ಮಾಡುತ್ತಿದ್ದರೂ, ತಾತನವರ ಮೇಲಿನ ಅಪಾರ ಭಕ್ತಿಯಿಂದ ವ್ಯಾಪಾರವನ್ನೇ ಮರೆತು ಕ್ಷೇತ್ರದ ಅಭಿವೃದ್ಧಿಗೆ ನಾಡಿನೆಲ್ಲೆಡೆ ಸಂಚರಿಸಿ, ಭಕ್ತರಿಂದ ಕಾಣಿಕೆಯನ್ನು ಸಂಗ್ರಹಿಸಿ ಮಠದ ಅಭಿವೃದ್ಧಿಗೆ ಶ್ರಮಿಸಿದ್ದಾರೆ.

ಹಿಂದೆ ಒಮ್ಮೆ ಚೇಳಗುರ್ಕೆಯಲ್ಲಿ ನೀರಿನ ಅಭಾವ ಹೆಚ್ಚಾಗಿ ಎಲ್ಲಿ ನೆಲ ಅಗಿದರೂ ನೀರೇ ಬೀಳುತ್ತಿರ ಲಿಲ್ಲವಂತೆ. ಅಕ್ಕ-ಪಕ್ಕದ ಗ್ರಾಮಗಳಿಂದ ನೀರನ್ನು ತರಬೇಕಾದ ಪರಿಸ್ಥಿತಿಯಿದ್ದಾಗ, ಊರ ಜನರೆಲ್ಲಾ ಸೇರಿ ತಾತನವರನ್ನು ಕೇಳಿದ್ದಕ್ಕೆ "ಬಂಗಾರದ ಗುದ್ದಲಿಯವ ಬಂದು ಅಗಿದರೆ ನೀರು ಬೀಳ್ತಾವೆ" ಎಂದಿದ್ದರು. ಕೆಲವು ಕಾಲಾನಂತರ ಬಳ್ಳಾರಿಯ ಪ್ರಸಿದ್ಧ ವರ್ತಕ ವೈ.ಮಹಾಬಲೇಶ್ವರಪ್ಪನವರು ಮಠಕ್ಕೆ ಬಂದಾಗ ತಾವು ಏನಾದರೂ ಸೇವಾರೂಪದಿಂದ ಮಠಕ್ಕೆ ಸೇವೆಸಲ್ಲಿಸಬೇಕೆಂದು ನಿಶ್ಚಯಿಸಿ, ನೀರಿನ ಬವಣೆಯನ್ನರಿತು ಭಕ್ತರಿಗೆ ಅನುಕೂಲವಾಗಲೆಂದು ಮಠದಲ್ಲೆ ಬಾವಿ ತೋಡಿಸಿದ್ದಾರೆ. ಇಂದು ಆ ಬಾವಿಯನ್ನು ಮುಚ್ಚಿಸಲಾಗಿದೆ. ಹಿಂದೆ ತಾತನವರು ಹೇಳಿದಂತೆ, 'ಬಂಡಿ ಅನ್ನ, ಬೊಗಸೆ ನೀರು' ಎನ್ನುವ ಮಾತು ನಿಜವಾಗಿದ್ದು, ದವಸಧಾನ್ಯಗಳ ಕೊರತೆ ಇಲ್ಲದಿದ್ದರೂ ನೀರಿನ ಕೊರತೆ ಇರುವುದನ್ನು ಕಾಣಬಹುದು.

[illegible]

ದಿನದಿಂದ ದಿನಕ್ಕೆ ಮಠ ವಿಸ್ತಾರಗೊಂಡು, ಬರುವ ಯಾತ್ರಿಕರ ಸಂಖ್ಯೆ ಅಧಿಕವಾಗಲು ಅವರ ಸೌಕರ್ಯಕ್ಕಾಗಿ ಶಾಮಣ್ಣನವರು ಮತ್ತು ಊರ ಭಕ್ತರು ಸೇರಿ ಕಟ್ಟಿಸಿದ ಮಂದಿರಗಳನ್ನು ೧೯೬೦ರಲ್ಲಿ ಅಂದಿನ ಮೈಸೂರು ಒಡೆಯರಾದ ಜಯಚಾಮರಾಜೇಂದ್ರ ಒಡೆಯರನ್ನು ಕರೆಸಿ ಆರಂಭಿಸಿದ್ದಾರೆ. ಮಠದ ಪುರೋಭಿವೃದ್ಧಿಗೆ ಶ್ರಮಿಸಿದ ಶಾಮಣ್ಣನವರು ೧೯೬೦ರಲ್ಲಿ ತಾತನಮಠದಲ್ಲೇ ಸಮಾಧಿಯಾಗಿದ್ದಾರೆ. ಇಂದೂ ಸಹ ಶಾಮಣ್ಣನವರ ಮನೆತನದವರು ಮಠಕ್ಕೆ ಆಗಮಿಸಿ ಸೇವಾಕಾರ್ಯ ಮಾಡುತ್ತಿದ್ದಾರೆ. ಊರ ಪ್ರಮುಖರೆಲ್ಲಾ ಸೇರಿ ಅಭಿವೃದ್ಧಿಯಾಗಿರುವ ಮಠದ ಕಾರ್ಯ ಕಲಾಪಗಳು ಸುಗಮವಾಗಿ ನಡೆಯಲು ವ್ಯವಸ್ಥಿತವಾದ ಸಮಿತಿ ಯೊಂದನ್ನು ಮಾಡಿಕೊಂಡಿರುತ್ತಾರೆ.

ದಿನಕ್ಕೊಂದು ರೀತಿಯಲ್ಲಿ ಬೆಳೆಯುತ್ತಿರುವ ಮತ್ತು ಭಕ್ತರನ್ನು ತನ್ನೆಡೆಗೆ ಸೆಳೆದುಕೊಳ್ಳುತ್ತಿರುವ ಶ್ರೀಮಠವು ಇಂದು ಪ್ರೇಕ್ಷಣೀಯ ಕ್ಷೇತ್ರವಾಗಿದೆ. ಮಠದಲ್ಲಿ ಬಣ್ಣಬಣ್ಣದ ಪ್ರತಿಮೆಗಳು, ಆಕರ್ಷಕ ಗೋಪುರ, ಕಳಸ, ಸುಂದರವಾದ ರಥ, ಮಠದಲ್ಲಿ ವಿಶಾಲವಾದ ಹಜಾರ, ತಾತನವರ ವಿಗ್ರಹ, ತೂಗು ಮಂಚ, ನವಗ್ರಹಗಳು, ಪಾಕಶಾಲೆ, ಪ್ರವಾಸಿಮಂದಿರ, ಶಿವಾನುಭವ ಮಂಟಪಗಳು, ಕಲ್ಯಾಣ ಮಂಟಪ, ಧ್ಯಾನಮಂದಿರ, ಭಕ್ತರಿಗೆ ಉಳಿದುಕೊಳ್ಳಲು ಕೊಠಡಿಗಳ ವ್ಯವಸ್ಥೆ ನಿರಂತರವಾಗಿ ಮಧ್ಯಾಹ್ನ, ರಾತ್ರಿ ಅನ್ನದಾಸೋಹದ ವ್ಯವಸ್ಥೆ, ಪ್ರೌಢ ಶಾಲಾ ವಿದ್ಯಾರ್ಥಿಗಳಿಗೆ ಉಚಿತ ಊಟ, ವಸತಿ ವ್ಯವಸ್ಥೆ, ನೀರಿನ ಸೌಕರ್ಯ, ಸ್ನಾನಗೃಹಗಳು, ಶೌಚಾಲಯ ವ್ಯವಸ್ಥೆ, ಹೀಗೆ ಮಠದ ಅಭಿವೃದ್ಧಿ ನಿತ್ಯ ಬೆಳೆಯುತ್ತಿದ್ದು, ಭಕ್ತರಿಗಾಗಿ ಸಾಧ್ಯವಾದಷ್ಟು ಉತ್ತಮ ಸೌಲಭ್ಯವನ್ನು ಸಮಿತಿಯವರು ನೀಡುತ್ತಿದ್ದಾರೆ.

ನಿತ್ಯ ಭಕ್ತರು ಬರುತ್ತಾರೆ, ಹೋಗುತ್ತಾರೆ. ತಾತನವರ ವಿಗ್ರಹಕ್ಕೆ ನಮಸ್ಕರಿಸುತ್ತಾರೆ. ಅವರೇನು ಕೇಳು ತ್ತಾರೋ, ಆತನೇನು ಹೇಳುತ್ತಾನೋ, ಅವರವರ ಬಯಕೆಗಳು ಈಡೇರಿದಾಗ ತಮ್ಮ ಕಾಣಿಕೆಗಳನ್ನು ತಂದು ಪೆಟ್ಟಿಗೆಯಲ್ಲಿ ಹಾಕುತ್ತಾರೆ. ಹೊಲದಲ್ಲಿ ಬೆಳೆದ ಬೆಳೆಯನ್ನು ಮುಡುಪಾಗಿ ದಾಸೋಹದ ವ್ಯವಸ್ಥೆಗೆ ಒಪ್ಪಿಸುತ್ತಾರೆ. ಇತ್ತೀಚೆಗಂತೂ ಪ್ರತಿ ಅಮವಾಸ್ಯೆಯ ಪೂಜೆಗಂತೂ ಸೇರುವ ಭಕ್ತರ ಸಂಖ್ಯೆ ಜಾತ್ರೆಯ ಸ್ವರೂಪ ಪಡೆಯುತ್ತದೆ. ಬಂದ ಭಕ್ತರಿಗೆ ಮಠದವರು ಯೋಗ್ಯ ರೀತಿಯಲ್ಲಿ ಸತ್ಕರಿಸಿ, ದಾಸೋಹದ ವ್ಯವಸ್ಥೆ ಮತ್ತು ತಂಗಲು ಕೊಠಡಿಗಳ ಸೌಲಭ್ಯ ಒದಗಿಸುತ್ತಾರೆ. ಪ್ರತಿ ಸೋಮವಾರ ವಿಶೇಷ ಪೂಜಾ ಕಾರ್ಯಕ್ರಮವಿರುತ್ತದೆ.

ಪ್ರತಿವರ್ಷ ಜೇಷ್ಠ ಶುದ್ಧ ೬ರಲ್ಲಿ ಅತ್ಯಂತ ವೈಭವದಿಂದ ಜಾತ್ರೆಯಾಗುತ್ತದೆ. ಜಾತ್ರೆಯ ಸಮಯದಲ್ಲಿ ಶಿವಾನುಭವ ಸಮ್ಮೇಳನಗಳು ನಡೆಯುತ್ತವೆ. ದಸರಾ ಉತ್ಸವ, ಕಾರ್ತೀಕ ದೀಪೋತ್ಸವ, ಶಂಖಾಭಿಷೇಕ, ಮುತ್ತಿನ ಪಲ್ಲಕ್ಕಿ ಉತ್ಸವ, ಧನುರ್ಮಾಸ ಪೂಜೆ, ಪುರಾಣ ಪ್ರವಚನಗಳು ನಡೆಯುತ್ತಿರುತ್ತವೆ.

ದಿವ್ಯಕ್ಷೇತ್ರವಾಗಿ ಬೆಳೆಯುತ್ತಿರುವ ಚೇಳಗುರಿಕೆ ಗ್ರಾಮವು, ವಿವಿಧ ದರ್ಶನಾರ್ಥಿಗಳಿಂದ ಪವಿತ್ರ ಕ್ಷೇತ್ರ ವಾಗಿದೆ. ತಮಿಳುನಾಡಿನ ಶೈವ ಸನ್ಯಾಸಿಗಳು, ಚಿತ್ರದುರ್ಗದ ಜಗದ್ಗುರು ಜಯದೇವ ಪ್ರಭುಗಳು, ಸುತ್ತೂರು ಮಠದ ಶಿವರಾತ್ರೀಂದ್ರ ಸ್ವಾಮಿಗಳು, ಮೈಸೂರಿನ ಗೌರೀಶಂಕರ ಸ್ವಾಮಿಗಳು, ಧಾರವಾಡದ ಮುರುಘಮಠದ ಮೃತ್ಯುಂಜಯಪ್ಪಗಳ ಶಿಷ್ಯ ಮಹಾಂತ ದೇವರುಗಳು, ರಾಜಕೀಯ ಮಹೋದಯರು ಹೀಗೆ ಸಮಾಜದ ಎಲ್ಲಾ ಕ್ಷೇತ್ರದ ಜನರು ಬಂದಿದ್ದಾರೆ. ಹಾಗೆಯೇ ನಿತ್ಯವೂ ಬರುತ್ತಿದ್ದಾರೆ. ದಿನದಿನಕ್ಕೆ ತಾತನವರ ಭಕ್ತರಲ್ಲಿ

ಪ್ರೇರಣೆಯಾಗುತ್ತಿರುವುದನ್ನು ನೋಡಿದರೆ ತಾತನವರಿಲ್ಲವೆಂದು ಹೇಳಲು ಸಾಧ್ಯವೇ ಇಲ್ಲ. ಆತನಿದ್ದಾನೆ ಎನ್ನುವುದಕ್ಕೆ ನಿತ್ಯ ಮಠಕ್ಕೆ ಬರುವ ಭಕ್ತರ ಬಳಗವೇ ಸಾಕ್ಷಿ. ಎಷ್ಟೋಜನ ಮಹನೀಯರಿಗೆ ಆಂತರಂಗಿಕ ಅನುಭೂತಿಯಾಗಿದೆ. ತಾತನಿದ್ದಾನೆ ಎಂಬ ನಂಬಿಕೆಯಿಂದಲೇ ಮಠವಿಂದು ವೃದ್ಧಿಯಾಗುತ್ತಿದೆ. ಅದಕ್ಕೆ ಇದು ''ಜೀವ ಸಮಾಧಿ'' ಎಂಬ ವಿಶ್ವಾಸ ನಮ್ಮಲ್ಲಿ ನೆಲೆಗೊಂಡಿದೆ. ಇಲ್ಲಿ ನಡೆದಿರುವ, ನಡೆಯುತ್ತಿರುವ, ನಡೆಯಬೇಕಾಗಿರುವ ಎಲ್ಲಾ ಕಾರ್ಯಗಳು ಅವರ ಪ್ರೇರಣೆಯಿಂದಲೇ ನಡೆಯುತ್ತಿವೆ. ಎಲ್ಲೆಲ್ಲಿ, ಯಾರ್‍ಯಾರಲ್ಲಿ ಅವರ ಪ್ರೇರಣೆಯಾಗುವುದೋ ಅಲ್ಲಲ್ಲಿಂದ ಮಠಕ್ಕೆ ಬೇಕಾದ ವಸ್ತು ಸಾಮಗ್ರಿಗಳ ಅನುಕೂಲತೆಗಳು ಆಯಾ ಕಾಲಕ್ಕೆ ಸೂಕ್ತವಾಗಿ ಒದಗಿ ಬರುವುದೇ ನಮ್ಮ ಭಾವನೆಗಳಿಗೆ ಸಾಕ್ಷಿಯಾಗಿವೆ ಎಂಬುದು ಸಮಿತಿ ಸದಸ್ಯರ ಅಭಿಪ್ರಾಯವಾಗಿದೆ.

೪. ೨. ಎಮ್ಮಿಗನೂರಿನ ಜಡೆಪ್ಪತಾತ

ಬಳ್ಳಾರಿ ಜಿಲ್ಲೆಯ ಪ್ರಮುಖ ಅವಧೂತರಲ್ಲಿ ಒಬ್ಬರಾಗಿದ್ದಾರೆ ಎಮ್ಮಿಗನೂರಿನ ಜಡೆಪ್ಪತಾತ. ಮಹಾ ವೈರಾಗ್ಯ ಮೂರ್ತಿಯಾಗಿ ಮೆರೆದ ಇವರ ವೈಯಕ್ತಿಕ ವಿವರಗಳನ್ನು ಹೀಗೆ ಕ್ರೋಢೀಕರಿಸಬಹುದು.

ಜನನ

ಬಳ್ಳಾರಿ ಜಿಲ್ಲೆಯ ಚಿಕ್ಕ ಗ್ರಾಮವಾದ ಹಂದ್ಯಾಳು ಎಂಬಲ್ಲಿ ಕಂಬಾಳಿಮಠದ ಚನ್ನಬಸವಯ್ಯ ಮತ್ತು ನೀಲಮ್ಮರೆಂಬ ದಂಪತಿಗಳಿಗೆ ಶಾಲಿವಾಹನ ಶಕೆ ೧೭೩೨ನೇ ಪ್ರಮೋದೂತ ಸಂವತ್ಸರ ವೈಶಾಖ ಶುಕ್ಲಪಕ್ಷದಂದು ಜಡೆಸಿದ್ಧರ ಜನನವಾಯಿತೆಂದು ತಿಳಿಯುತ್ತದೆ. ಈ ಕಾಲವನ್ನು ಅವರ ಬಗ್ಗೆ ಬಂದಿರುವ ಎಲ್ಲಾ ಕೃತಿಗಳೂ ಖಚಿತಪಡಿಸಿವೆ. ಮಗು ಜನಿಸಿದ್ದಕ್ಕಾಗಿ ದಂಪತಿಗಳಿಗೆ ಸಂತೋಷವಾಗುತ್ತದೆ. ನವಜಾತ ಶಿಶುವನ್ನು ಕಂಡ ಚನ್ನಬಸವಯ್ಯನವರ ಗುರುಗಳಾದ ತೆಕ್ಕಲಕೋಟೆಯ ಕಂಬಾಳಿಮಠದ ಶ್ರೀಗಳು ''ಇವನು ಸಾಮಾನ್ಯ ವ್ಯಕ್ತಿಯಲ್ಲ. ಜಗತ್ತಿನ ಜನರ ಜಡತನವನ್ನು, ಜಡ್ಡುಗಟ್ಟಿದ ಅಂಧಕಾರಮಯ ಮೌಢ್ಯತೆಯನ್ನು ಕಳೆಯಲು ಬಂದವನು. ಆ ಕಾರಣ ಇವನಿಗೆ ಜಡೆಸಿದ್ಧನೆಂದು ನಾಮಕರಣ ಮಾಡಿರಿ'' ಎಂದು ತಿಳಿಸಿದ ಪ್ರಕಾರ ತಂದೆ ತಾಯಿಗಳು ಜಡೆಸಿದ್ಧನೆಂದು ನಾಮಕರಣ ಮಾಡಿದ್ದಾರೆ.[೩೯] ಹಾಗೆಯೆ ಜಡೆಸಿದ್ಧನೆಂದು ನಾಮಕರಣ ಮಾಡಲು ಮತ್ತೆರಡು ಐತಿಹ್ಯಗಳು ಇಂತಿವೆ. ಊರಭಕ್ತರೆಲ್ಲ ನವಜಾತ ಶಿಶುವನ್ನು ಕಂಡು ಹರ್ಷದಿಂದಿರುವಾಗ,

ಎಳೆನಾಗರವೆರಡು ತೊಟ್ಟಿಲದ ಮೇಲೆ ಜಡೆಗಟ್ಟಿರಲ್
ಅಲಲಾ ಚೋದ್ಯಮೆಂದದನೇ ಕುರುಹಾಗಿ ತಿಳಿಯುತ್ತಲೀ
ನಲವಿಂ ಜಡೆಸಿದ್ಧನೆಂದು ನಿನ್ನಂ ಹೆಸರಿಸುತ ನಲಿದಾಡಿದ
ಸುಲಲಿತ ಶುಭನಾಮವಾಯ್ತು ಪರಮ ಗುರುವರಾ ಜಡೆಸಿದ್ಧ[೪೦]

ಮಗು ಹುಟ್ಟಿದಾಗ ನಡೆದ ಈ ಪವಾಡ ಸದೃಶ ಘಟನೆಯಿಂದ ಈ ಹೆಸರು ಬಂತೆಂಬ ಐತಿಹ್ಯವಿದೆ.

ಮತ್ತೊಂದು ಐತಿಹ್ಯ ಹೀಗಿದೆ ''ಚನ್ನಬಸವಯ್ಯನವರದು ದೊಡ್ಡ ಒಕ್ಕಲು ಕುಟುಂಬ. ಜಂಗಮರ ಮನೆಯಾಗಿ ದ್ದರಿಂದ ಭಕ್ತರು ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಮನೆಗೆ ಬರುತ್ತಿರುತ್ತಾರೆ. ಚನ್ನ

ಬಸವಯ್ಯನವರು ಒಂದು ನಾಗರಹಾವನ್ನು ಸಾಕಿದ್ದು, ಆ ಹಾವಿಗೆ ಜಡೆಪ್ಪನೆಂದು ಕರೆಯುತ್ತಿರುತ್ತಾರೆ. ಮನೆಗೆ ಬಂದ ಭಕ್ತರು ತಮ್ಮ ಸಮಸ್ಯೆಯನ್ನು ಮುಂದಿಟ್ಟಾಗ, ಚನ್ನಬಸಯ್ಯನವರು 'ಜಡೆಪ್ಪ' ಎಂದು ಹಾವನ್ನು ಕರೆಯುತ್ತಿದ್ದು, ಆ ಹಾವು ಬಂದು ಹೆಡೆ ಎತ್ತಿದರೆ ಒಳ್ಳೆಯದೆಂದೂ, ಹೆಡೆ ಎತ್ತದಿದ್ದರೆ ಆ ಕೆಲಸ ಮಾಡಬಾರದೆಂದೂ ಹೇಳುತ್ತಿದ್ದರು. ಒಮ್ಮೆ ಮನೆಗೆ ಬಂದ ಭಕ್ತರಿಗೆ ಊಟಕ್ಕೆಂದು ಬಿಳಿಜೋಳದ ಮುದ್ದೆಯನ್ನು ಮಾಡಿದ ಪಾತ್ರೆಯನ್ನು, ಕತ್ತಲಲ್ಲಿ ಕಾಣದೆ ಸುತ್ತಿಹಾಕಿಕೊಂಡು ಮಲಗಿದ್ದ ಹಾವಿನ ಮೇಲೆ ಇಡಲು, ಆ ಹಾವು ಸತ್ತು ಹೋಗುತ್ತದೆ. ಅದರ ಫಲವಾಗಿ ಬಿಳಿ ಜೋಳದ ಮುದ್ದೆ ಅರಿಷಿಣ ಬಣ್ಣಕ್ಕೆ ಬಂದಿರುತ್ತದೆ. ಬಂದವರೆಲ್ಲಾ ಊಟಮಾಡದೆ ಇದೇನೆಂದು ವಿಚಾರಿಸುತ್ತಿರಲಾಗಿ ಆಗ ಅಲ್ಲಿಗೆ ಬಂದ ಚನ್ನಬಸಯ್ಯನವರಿಗೆ ವಿಷಯ ತಿಳಿದು ಪೂಜೆ ಮಾಡಿ ಅರಿಷಿಣ ಬಣ್ಣದ ಮುದ್ದೆಯನ್ನು ತಾವೊಬ್ಬರೇ ಊಟ ಮಾಡಿದರೆಂದು, ಈ ಘಟನೆ ನಡೆದ ಮೇಲೆ ಜನಿಸಿದ ಮಗನಿಗೆ ಹಾವಿನ ಮೇಲಿನ ಭಕ್ತಿ ಮತ್ತು ಪ್ರೀತಿಗಾಗಿ ಜಡೆಪ್ಪನೆಂದು ನಾಮಕರಣ ಮಾಡುತ್ತಾರೆ."[೩೧] ಈ ಎಲ್ಲಾ ಐತಿಹ್ಯಗಳು ಕಾಕತಾಳೀಯವೆಂಬಂತೆ ಜಡೆಪ್ಪನೆಂಬ ಹೆಸರಿಗೆ ಪೂರಕವಾಗಿರುವದನ್ನು ಕಾಣಬಹುದು.

ಜಡೆಸಿದ್ಧರ ಬಾಲಲೀಲೆಗಳು

ಮಗು ಬೆಳೆದಂತೆ ನೋಡಿದವರೆಲ್ಲರೂ ಬಾಚಿ ಎತ್ತಿಮುತ್ತಿಡುವ ಹಾಗೆ ಕಾಣುತ್ತಿರುತ್ತದೆ. ಅವರ ತೊದಲ್ನುಡಿಗಳು, ಓಡಾಡುವುದು, ಬೀಳುವುದು, ಅಳುವುದು ಮೊದಲಾದ ಬಾಲಕ್ರೀಡೆಗಳಿಂದ ಮನೆಯ ವರಿಗಷ್ಟೇ ಅಲ್ಲದೆ ಬಂಧುಗಳಿಗೆ, ನೆರೆಹೊರೆಯವರಿಗೆ, ಊರವರಿಗೆ ಸಂತೋಷ ನೀಡುತ್ತಿರುತ್ತದೆ. ಜಡೆಪ್ಪನು ಬೆಳೆದಂತೆ ಅಕ್ಷರಭ್ಯಾಸ ಕಲಿಯಲು ಶಾಲೆಗೆ ಕಳುಹಿಸಿದರೆ, ಅಲ್ಲಿ ಯಾರೊಂದಿಗೂ ಸೇರದೆ ಏನೊಂದೂ ಮಾತನಾಡದೆ ಮೌನಿಯಾಗಿರುತ್ತಾನೆ. ಮನೆಯಲ್ಲಿಯೂ ಹಾಗೆಯೇ ಸದಾ ಮೌನಿ, ಧ್ಯಾನ ಮಾಡುತ್ತಿರುವಂತೆ ನಿರ್ಜನ ಪ್ರದೇಶದಲ್ಲಿ ಕುಳಿತು ಕಾಲಹರಣ ಮಾಡುವುದೇ ಅಭ್ಯಾಸವಾಗುತ್ತದೆ. ಏಕಾಂಗಿಯಾಗಿದ್ದು, ಮೌನವಾಗಿದ್ದರೂ ಓದಿನಲ್ಲಿ ಮಾತ್ರ ಮುಂದಿರುತ್ತಿದ್ದನು. ಗುರುಹಿರಿಯರು ಮೆಚ್ಚೋ ಹಾಗೆ ಅಧ್ಯಯನ ಮಾಡುತ್ತಿದ್ದನು.

> ಹಗಲಿರುಳು ಬಿಡದೋದುತಲಿ ತಾ
> ಬಗೆ ಬಗೆಯ ಶಾಸ್ತ್ರಾರ್ಥ ತತ್ವವ
> ಸೊಗಸಿನಿಂದರಿಯಲ್ಕೆ ಗುರು ಶುಶ್ರೂಷೆಗೈಯ್ಯುವನು[೩೨]

ತನ್ನ ದೇಶದ, ಭಾಷೆಯ, ಧರ್ಮದ, ಕರ್ಮದ, ಗುರುಗಳ, ಮಾತಾಪಿತರ ಬಂಧು-ಬಾಂಧವರ, ಹಿರಿಯ ಶರಣರ ನಡೆನುಡಿಗಳನ್ನು ಸ್ಮರಿಸುತ್ತಾ ಹಾಗೆ ಅನುಸರಿಸುತ್ತಾ ದಿನ ಕಳೆಯುತ್ತಿದ್ದನು.

ದಿನ ಕ್ರಮೇಣ ಬಾಲಕನಲ್ಲಿ ದಿವ್ಯಜ್ಞಾನ ಪ್ರಭೆಯು ಬೆಳೆಯಲಾರಂಭಿಸುತ್ತದೆ. ಕರುಣೆ, ಸೇವಾಸಕ್ತಿ, ಧೃತಿಮತಿ, ಔದಾರ್ಯ, ಕ್ಷಮಾಗುಣ, ನಿಸ್ವಾರ್ಥತೆ, ಸರಳತನ, ಸದ್ಗುಣಗಳಿಂದ ಮನೆಯವರಿಗಷ್ಟೇ ಅಲ್ಲದೆ ಊರವರಿಗೂ ಪ್ರಿಯವಾಗುತ್ತಾನೆ. ಎಂಟು ವರ್ಷದ ಬಾಲಕನಾದಾಗ ಕುಲಗುರುಗಳಾದ ತೆಕ್ಕಲಕೋಟೆಯ

ಸಂಗಮೇಶ್ವರ ಸ್ವಾಮಿಗಳಿಂದ ದೀಕ್ಷಾಸಂಸ್ಕಾರವನ್ನು ಕೊಡಿಸಲು ನಿರ್ಧರಿಸಿ, ಅದರಂತೆ ಗುರುಗಳನ್ನು ಹಂದ್ರಾಳು ಗ್ರಾಮಕ್ಕೆ ಚನ್ನಬಸವಯ್ಯನವರು ಕರೆಸುತ್ತಾರೆ.

ದೀಕ್ಷಾಬೋಧೆ

ಚನ್ನಬಸವಯ್ಯನು ತನ್ನೆಲ್ಲಾ ಮಕ್ಕಳಿಗೆ ದೀಕ್ಷಾಬೋಧೆ ಕೊಡಿಸಿದನು. ಆ ಪ್ರಕಾರ ಮಕ್ಕಳೆಲ್ಲರೂ ಸ್ನಾನ, ಶಿವಾರ್ಚನೆ, ಮುಂತಾದ ಕ್ರಮಗಳನ್ನು, ಸದಾಭಸಿತ, ರುದ್ರಾಕ್ಷಧಾರಣ, ಸದಾಚಾರ, ಸುಶೀಲತಾ ಮುಂತಾದ ಕರ್ಮಗಳನ್ನು, ಗುರು-ಲಿಂಗ-ಜಂಗಮಗಳ ಮಹಿಮೆಯನ್ನು, ಅಷ್ಟಾವರಣಗಳ ಮಹತ್ವವನ್ನು, ಪಂಚಾಚಾರ, ಷಟ್‌ಸ್ಥಲಗಳ ನೆಲೆಯನ್ನು, ಬಸವಾದಿ ಪ್ರಮಥರ ಇತಿಹಾಸವನ್ನೂ, ಶರಣರ ಮಹತ್ವವನ್ನೂ ತಿಳಿದುಕೊಳ್ಳುತ್ತಾರೆ. ಜಡೆಸಿದ್ಧನು ಗುರುಗಳಿಂದ ದೀಕ್ಷೆ ಪಡೆಯುತ್ತಿರುವಾಗಲೇ ಊರ ಜನರಿಗೆ ಆಚಾರ-ವಿಚಾರಾದಿಗಳನ್ನು, ಧರ್ಮ ಮಹತ್ವವನ್ನು, ಶಿವಶರಣರ ಕಥೆಗಳನ್ನು, ಪುರಾಣಪುರುಷರ ಕಥೆಗಳನ್ನು ಓದಿ ಹೇಳುತ್ತಾ ಮೈಮರೆಯುತ್ತಿದ್ದನು. ಕೆಲವೊಮ್ಮೆ ತನ್ನನ್ನೇ ತಾನು ಮರೆತು ಧ್ಯಾನಾಸಕ್ತನಾಗುತ್ತಿದ್ದುದನ್ನು ಕಂಡ ಜನ ಈತನು ಸಾಮಾನ್ಯನಲ್ಲ ಮಹಾಪುರುಷನಾಗುತ್ತಾನೆಂದು ಮಾತನಾಡಿಕೊಳ್ಳುತ್ತಿದ್ದರು.

ಗುರು-ಹಿರಿಯರಿಂದ ವಿದ್ಯೆ ಬುದ್ಧಿಗಳನ್ನು ಕಲಿತು ಶುದ್ಧ ಮನಸ್ಕನಾಗಿ ಸುಸಂಸ್ಕೃತನಂತೆ ಇದ್ದು, ಯಾವ ಕೆಲಸಗಳಲ್ಲಿಯೂ ಆಸಕ್ತಿಯಿಲ್ಲದವನಾಗಿ ಸದಾ ಮೌನಿಯಾಗಿರುತ್ತಿದ್ದನು.

ಯಾರ ಸಂಗಡ ಮಾತನಾಡನು
ಸೇರಿ ಸೋದರರೊಡನೆ ಹೊಲಮನೆ
ಹೋರೆಗಳ ತೊರೆದವನು ಏಕಾಂತವನೆ ಸೇರುವನೂ ||
ಊರ್ ಜನರು ನೋಡಿವನ ರೀತಿಯ
ನಾರು ಮಾಡುವುದೇನ್ ಸ್ವಭಾವಕೆ
ಪಾರು ಗಾಣುವದಾಗದಿಂಥವರೊಡನೆ ಮನೆಯೊಳಗೇ[೩೩]

ಈತನು ಬೆಳೆದಂತೆ ನಡೆ-ನುಡಿ-ಸ್ವಭಾವಗಳು ಲೋಕಕ್ಕೆ ಭಿನ್ನವಾಗಿ ತೋರಲು, ತಂದೆ-ತಾಯಿಗಳು ಈ ವರ್ತನೆಗೆ ಬೇಸತ್ತು, ಓದು ಬರಹ ಬಿಡಿಸಿ ದನ ಕಾಯಲು ಕಳಿಸಿದರು. ಅಲ್ಲಿ ಒಂಟಿಯಾಗಿ ಕುಳಿತು ಮನದಲ್ಲೆ ಶಿವಧ್ಯಾನ ಮಾಡುತ್ತಾ ಸಗಣಿಯನ್ನು ಕೂಡಿಹಾಕಿ, ಸುಟ್ಟು ಭಸ್ಮ ಮಾಡಿ ಮಠಕ್ಕೆ ತಂದು ಬರುವ ಭಕ್ತರಿಗೆ ಅದರ ಮಹತ್ವ ತಿಳಿಸುತ್ತಾ ಅದನ್ನು ಹಂಚುತ್ತಿದ್ದನು. ದನ ಕಾಯುವ ಜೊತೆಹುಡುಗರನ್ನು ಕೂಡಿ ಹಾಕಿಕೊಂಡು ಮಠದ ಮುಂದೆ ಬಿಲ್ವಪತ್ರೆಯ ಸಸಿಗಳನ್ನು ನೆಡುತ್ತಾನೆ. ಇದರಿಂದಲೂ ಬೇಸತ್ತ ತಂದೆ ತಾಯಿಗಳು ಮತ್ತು ಊರ ಪ್ರಮುಖರು ಸೇರಿಕೊಂಡು ಇವನ ಬುದ್ಧಿವಂತಿಕೆಯನ್ನು ಅರಿತಿದ್ದರಿಂದ ಊರ ಮಕ್ಕಳಿಗೆ ಅಕ್ಷರ ಕಲಿಸಲೆಂದು ತೀರ್ಮಾನಿಸುತ್ತಾರೆ. ಆದರೆ ಇಲ್ಲಿಯೂ ಮಕ್ಕಳಿಗೆ ಪಾಠ ಹೇಳಿಕೊಡದೆ ಮೌನಿಯಾಗಿದ್ದು, ಹಸಿವು-ನಿದ್ರೆ-ಬಾಯಾರಿಕೆಗಳ ಬಗ್ಗೆ ನಿರಾಸಕ್ತನಾಗಿರುತ್ತಾನೆ. ಇವನ ಸ್ಥಿತಿಗೆ ಸಿಟ್ಟುಗೊಂಡ ಅಣ್ಣ ಕಾಳಿನ ಕಣಜದಲ್ಲಿ ಹಾಕಿ ಮುಚ್ಚುತ್ತಾನೆ. ಎರಡು ದಿನಗಳಾದ ಮೇಲೆ ಅರಿತು ಬಂದು ನೋಡಿದರೆ ಕಾಳಿನಲ್ಲಿ ಪಂಚಾಕ್ಷರಿ ಮಂತ್ರ

ಬರೆಯುತ್ತಾ ಕುಳಿತಿದ್ದನಂತೆ. ಹೀಗೆ ಎಲ್ಲದರಲ್ಲೂ ವಿಚಿತ್ರವಾಗಿ ವರ್ತಿಸುವ ಈತನಿಗೆ ಮದುವೆ ಮಾಡಿದರೆ ಸರಿಹೋಗಬಹುದೆಂದು ಊಹಿಸಿ ಮದುವೆ ಮಾಡಲು ನಿರ್ಧರಿಸುತ್ತಾರೆ.

ವೈವಾಹಿಕ ಬಂಧನ

ಬಾಲ್ಯದ ವರ್ತನೆಗಳೆ ಸಂಪೂರ್ಣ ಲೌಕಿಕಾನುಭವಕ್ಕೆ ಭಿನ್ನವಾಗಿದ್ದು, ಮೌನ, ಧ್ಯಾನ, ನಿರಾಸಕ್ತಿ, ಏಕಾಂಗಿತನ ಇಂಥ ವಿಚಿತ್ರ ವರ್ತನೆಯಲ್ಲಿ ಬೆಳೆದ ಜಡೆಸಿದ್ಧರಿಗೆ ಮದುವೆ ಮಾಡಲು ಮುಂದಾದಾಗ ಅದನ್ನು ತಿರಸ್ಕರಿಸುತ್ತಾನೆ. ಸುಮಾರು ೨೫ ವರ್ಷಗಳ ಇಂಥ ವರ್ತನೆಗಳಿಗೆ ಬೇಸತ್ತು, ಇವನನ್ನು ಯಾರು ಬದಲಿಸ ಬಹುದು, ಯಾರು ಸದ್ಬೋಧೆಯನ್ನು ಹೇಳಬಹುದು ಎಂದು ಚಿಂತಿಸಿ ಕೊನೆಗೆ ಗೂಳ್ಯದ ಗಾದಿಲಿಂಗಪ್ಪನವರ ಹತ್ತಿರ ಕರೆದುಕೊಂಡು ಹೋಗಿ -

ಯಾರ ಸಂಗಡ ಮಾತನಾಡಿವ
ನಾರೊಡನೆ ಸಹಕರಿಸನೆಂದಿಗು
ತೋರನಿವ ತನ್ನಣ್ಣ ತಮ್ಮಂದಿರೊಳು ಪ್ರೇಮವನೂ।
ಮೀರುತಿಹ ತಾರಣ್ಯವದರಿಂ
ದೂರುವನು ನಾವ್‌ಲಗ್ನ ಮಾಡಲು
ದಾರಿ ಕಾಣದೆ ನಿಮ್ಮ ಬಳಿ ಸಾರಿರುವೆ ಬಯಕೆಯಲೀ॥[೩೪]

ಎಂದೇಳಲು ಚನ್ನಬಸಯ್ಯನ ಮನೋವ್ಯಥೆಯನ್ನರಿತ ಗುರುಗಳು ನಿಶ್ಚಿಂತೆಯೊಳು ಮಗನನ್ನು ಇಲ್ಲೇ ಬಿಟ್ಟು ಹೋಗಿ ಎಂದು ಹೇಳಿ ಕಳಿಸುತ್ತಾರೆ. ತನ್ನಲ್ಲೇ ಉಳಿದ ಜಡೇಸಿದ್ಧರಿಗೆ ನಿತ್ಯವೂ ಸತ್ಯ, ಶಾಂತಿ, ದಯೆ, ಶಾಸ್ತ್ರಾಧ್ಯಯನವನ್ನು, ವೇದಾಂತವನ್ನು ತಿಳಿಹೇಳಿ ಸಂಸಾರದಲ್ಲಿದ್ದು ಸದ್ಗತಿಯನ್ನು ಕಂಡ ಹರಶರಣರ ಚರಿತ್ರೆಯನ್ನು ಬೋಧಿಸುತ್ತಾರೆ. ಗುರುಗಳ ಸದ್ಬೋಧೆಯಿಂದ ಮದುವೆಗೆ ಒಪ್ಪಿದ ಜಡೆಸಿದ್ಧನು ಸ್ವಗ್ರಾಮಕ್ಕೆ ಬಂದು ಮದುವೆಯಾಗುವೆನೆಂದು ತಿಳಿಸುತ್ತಾನೆ. ಮಗನ ನಿರ್ಧಾರವನ್ನು ಕೇಳಿದ ತಂದೆ-ತಾಯಿಗಳು ಗೆಣಿಕೆಹಾಳು ಗ್ರಾಮದ ಶಂಕರಯ್ಯನವರ ಪುತ್ರಿ ಗೌರಮ್ಮನನ್ನು ನಿಶ್ಚಯಿಸಿ ಮದುವೆ ಮಾಡುತ್ತಾರೆ. "ಅತ್ಯಂತ ಸಾಧ್ವಿ ಮತ್ತು ಭಕ್ತಳಾಗಿದ್ದ ಗೌರಮ್ಮನು ಅತ್ತೆ-ಮಾವಂದಿರಿಗೆ, ಗಂಡನಿಗೆ, ನೆರೆಮನೆಯವರಿಗೆ ಹೊಂದಿಕೊಂಡು ಮನೆಯ ಕಾರ್ಯಗಳಲ್ಲಿ ನಿರತಳಾಗಿ ಕಾಲಕಳೆಯುತ್ತಿರುತ್ತಾಳೆ. ಕಾಲಕ್ರಮೇಣ ಗೌರಮ್ಮ ಗರ್ಭಿಣಿಯಾಗುತ್ತಾಳೆ. ಗಂಡಾದರೇನು? ಹೆಣ್ಣಾದರೇನು ಯಾವುದಕ್ಕೂ ಹಂಬಲಿಸದ ದಂಪತಿಗಳಿಗೆ ದಿನಗಳು ತುಂಬಿದ ಮೇಲೆ ಹೆಣ್ಣು ಮಗುವಿನ ಜನನವಾಗುತ್ತದೆ. ಹುಟ್ಟಿದ ಮಗುವಿಗೆ "ವೀರಮ್ಮ"ನೆಂದು ನಾಮಕರಣ ಮಾಡಿರುತ್ತಾರೆ."[೩೫]

ಮಾನಸಿಕ ಪರಿವರ್ತನೆ

ಒಲವಿಲ್ಲದ ಸಂಸಾರಕ್ಕೆ ಗುರುಗಳ ಮಾತಿನಂತೆ ಕಟ್ಟುಬಿದ್ದು ಸಂಸಾರವೊಂದಿಗನಾಗಿ ಹಗಲಿರುಳು ಮಾನಸಿಕ ವ್ಯಥೆ ಪಡುತ್ತಿರುತ್ತಾನೆ. ಲೌಕಿಕ ಜೀವನದ ಬಗ್ಗೆ ಜಿಗುಪ್ಸೆ ಮೂಡಿ ವೈರಾಗ್ಯವಂತನಾಗಿ ಸಂಸಾರ ಬಂಧನದ

ಬಿಡುಗಡೆಗೆ, ಜ್ಞಾನಕ್ಕೆ, ಮೋಕ್ಷಸಾಧನೆಗೆ, ಗುರುವಿನ ಆಶ್ರಯಕ್ಕೆ ಹಾತೊರೆಯುತ್ತಿರುತ್ತಾನೆ. ದಿನಕಳೆದಂತೆ ಹೆಂಡತಿ, ಮಕ್ಕಳು ಮನೆ-ತಂದೆ-ತಾಯಿ-ಬಂಧುಗಳ ಮೇಲಿನ ಮಮತೆ ಕ್ಷೀಣಿಸುತ್ತಾ ವಿರಕ್ತನಾಗುತ್ತಾನೆ. ಇದರಿಂದ ಬಿಡುಗಡೆಯಾಗಲು ಗುರು ಗಾದಿಲಿಂಗಪ್ಪನನ್ನು ಕಾಣಲು ಆಗಿಂದಾಗ್ಗೆ ಹೋಗಿ ಬರುತ್ತಿರುತ್ತಾನೆ. ಊಟ, ಉಪಚಾರ, ನಿದ್ರೆ ಇವುಗಳ ಬಗ್ಗೆ ವೈರಾಗ್ಯ ಮೂಡಿ, ಗುರುಗಳಲ್ಲಿ ಹೋಗಿ ಅವರ ವಿಶ್ವಾಸಗಳಿಸಿ, ಪುರಾಣ, ಪ್ರವಚನಗಳನ್ನು ಕೇಳುತ್ತಿರುತ್ತಾನೆ. ಚಿದಾನಂದವಧೂತರ ಜ್ಞಾನಸಿಂಧು ಎಂಬ ಪುರಾಣದ ಸಾರವನ್ನೆಲ್ಲಾ ಗ್ರಹಿಸಿ, ಸುಮಾರು ಹನ್ನೆರಡು ವರ್ಷ ಗುರುಗಳು ಹೇಳಿದ ಜ್ಞಾನ ಬೋಧನೆಯನ್ನು ಕೇಳಿ, ಅವರ ಅನುಗ್ರಹದ ಜ್ಞಾನ ಸಂಪಾದಿಸು ತ್ತಾನೆ. ಗುರುಗಳಿಂದ ಜ್ಞಾನ ಸಂಪಾದಿಸಿದ ನಂತರ ಜಡೆಸಿದ್ಧನಲ್ಲಿ ಸಂಪೂರ್ಣ ಬದಲಾವಣೆಗಳಾಗುತ್ತವೆ. ತಾನೇ ಸಕಲ ಪ್ರೇರಕನೆಂತಲೂ, ಪ್ರಾಣರೂಪಿಯಂತಲೂ, ವ್ಯಾಪಕನೆಂತಲೂ, ಅಮಂಗಲ ಸ್ವರೂಪಿಯಂತಲೂ, ಮುಖ್ಯವಾಗಿ ಕಣ್ಣಿಗೆ ಕಾಣುವುದೆಲ್ಲವೂ ತನ್ನ ಸ್ವರೂಪವೆಂದು ಭಾವಿಸುತ್ತಾನೆ. ಸಮಸ್ತವೂ ಬ್ರಹ್ಮಸ್ವರೂಪ ವೆಂದರಿತು ಸಚ್ಚಿದಾನಂದ ಪರಿಪೂರ್ಣನಾದ ಆತ್ಮನೇ ತಾನೆಂದರಿತು ತಾನೇ ಪರಬ್ರಹ್ಮನೆಂಬ ಅದ್ವೈತ ತತ್ತ್ವವನ್ನು ಅರಿಯುತ್ತಾನೆ.

ಗುರುಬೋಧನೆಯನ್ನು ಪಡೆದ ನಂತರ ಸಾಂಸಾರಿಕ ವ್ಯವಹಾರವ ಸಂಪೂರ್ಣ ತ್ಯಜಿಸಿ, ದೇಹವಾಸನೆ, ಶಾಸ್ತ್ರವಾಸನೆ, ಲೋಕವಾಸನೆಗಳೆಂಬ ವಾಸನ ತ್ರಯಗಳನ್ನು ತಿರಸ್ಕರಿಸಿ ಪರವಶಸ್ಥಿತಿಯಲ್ಲಿರುತ್ತಾರೆ. ಸಿಂಧಿಗೇರಿ ಮಲ್ಲಪ್ಪ, ದಮ್ಮೂರ ಶರಣೆ ಮಲ್ಲಮ್ಮ, ಶರಣ ಬುಗ್ಗೂರಪ್ಪ ಮುಂತಾದವರ ಜೊತೆಯಲ್ಲಿ ಶ್ರೀ ಶೈಲಕ್ಕೆ ಹೋಗುತ್ತಾರೆ. ಅಲ್ಲಿನ ಪಾತಾಳ ಗಂಗೆಯಲ್ಲಿ ಸ್ನಾನ ಮಾಡಿ, ಮಲ್ಲಿಕಾರ್ಜುನನ ಲಿಂಗಕ್ಕೆ ಪೂಜಿಸುತ್ತಾ ಗಿರಿಯಲ್ಲಿರುವ ಪ್ರಕೃತಿ ಸೌಂದರ್ಯವನ್ನು ಸವಿಯುತ್ತಾ ಬಾಹ್ಯ ಪ್ರಪಂಚವನ್ನೇ ಮರೆಯುತ್ತಾರೆ. ಹೀಗೆ ಸುಮಾರು ದಿನಗಳ ಕಾಲ ಪರವಶಸ್ಥಿತಿಯಲ್ಲಿದ್ದವರು, ಎಚ್ಚರ ಗೊಂಡು ಮರಳಿ ಹಂದ್ಯಾಳು ಗ್ರಾಮಕ್ಕೆ ಬರುತ್ತಾರೆ. ಆಗ ಜಡೆಪ್ಪನ ವರ್ತನೆಗಳೇ ವಿಚಿತ್ರವಾಗಿದ್ದು, ಯಾರ ಜೊತೆಗೂ ಮಾತನಾಡದೆ ಮೌನಿಯಾಗಿರುತ್ತಾರೆ. ತಿಳಿದಾಗ ಊಟ, ನಿದ್ರೆ, ಮಾತು ಇಲ್ಲದಿದ್ದರೆ ಯಾವುದೂ ಇಲ್ಲ. ಹೀಗೆ ಲೋಕದ ಸಂಗವನ್ನು ತೊರೆದು ಎಲ್ಲೆಂದರಲ್ಲೆ ತಿರುಗಾಡುವುದು, ಮಲಗುವುದನ್ನು ಮಾಡುತ್ತಿರುತ್ತಾರೆ.

ಭವಿಷ್ಯ ನುಡಿಯುವುದು

ಶ್ರೀಶೈಲಕ್ಕೆ ಹೋಗಿ ಬಂದ ಮೇಲೆ ಸಂಪೂರ್ಣ ವೈರಾಗ್ಯ ಮೂರ್ತಿಯಂತೆ, ಧ್ಯಾನಮೂರ್ತಿಯಂತೆ ಕಾಣುತ್ತಿದ್ದ ಜಡೆಪ್ಪನನ್ನು 'ತಾತ', 'ಸ್ವಾಮಿ' ಎಂದು ಊರವರು ಕರೆಯಲಾರಂಭಿಸುತ್ತಾರೆ. ಅವರ ನಡೆ-ನುಡಿಯಲ್ಲಿ ಆಗುತ್ತಿರುವ ಬದಲಾವಣೆಯನ್ನು ಕಂಡ ಕೆಲವು ಜನ ಈತ ಸಾಮಾನ್ಯನಲ್ಲ ಮಹಿಮಾಪುರುಷನೆಂದು ಗೌರವ ಭಕ್ತಿಯಿಂದ ಕಾಣುತ್ತಿರುತ್ತಾರೆ. ಇಂತಹ ಭಕ್ತರಲ್ಲಿ ಗ್ರಾಮದ ಭೀಮನಗೌಡನೆಂಬುವವನು ತಾತನ ಆಪ್ತ ಭಕ್ತ ಮತ್ತು ನಿಷ್ಠಾವಂತ. ಗ್ರಾಮದಲ್ಲಿ ಮಳೆಯಿಲ್ಲದೆ, ಬೆಳೆಯಿಲ್ಲದೆ ಕಂಗಾಲಾಗಿದ್ದ ಸಮಯದಲ್ಲಿ ಭೀಮನ ಗೌಡನು ತಾತನ ಜೊತೆಯಲ್ಲಿ ಕುಳಿತಿರುತ್ತಾನೆ.

ಹಸು ತೃಷೆಗಳಿವಗಿಲ್ಲವೆಂದಿಗು
ಪುಸಿಯನಾಡನು ಬಂದ ಜನರಿಗೆ
ನಸುನಗುತ ಮುಂದಾಗುತಿಹುದಂ ಮೊದಲಿಗೇಂ ನುಡಿವಂ ||

ಪಶುಪತಿಯ ದಯವಾಯ್ತು ನಿಮ್ಮಗೆ
ಅಸದೃಶದ ಮಳೆ ಬರುವುದೀಕ್ಷಣ
ಅವಸರದಿ ನೀವ್ ನಿಮ್ಮ ಮನೆ ಮಠಗಳಿಗೆ ಪೋಗಿರೆನೆ[೬೬]

ಗೌಡರು ಚಕಿತರಾಗಿ, ಏನಾಶ್ಚರ್ಯವಿದು ಮೋಡವಿಲ್ಲ, ಮಿಂಚಿಲ್ಲ, ಗಾಳಿಯಿಲ್ಲ, ಮಳೆ ಹೇಗೆ ಬರುವುದೆಂದು ಮನದಲ್ಲೆ ತರ್ಕಿಸುತ್ತಾ ಮನೆಗೆ ಹೋದರು. ಇದ್ದಕ್ಕಿದ್ದ ಹಾಗೆ, ಮೋಡ ಕವಿದು ಮಳೆ ಬಂದಿತು. ಇದ ಕಂಡ ಜನ ಬೆರಗಾಗಿ ಈತನು ಸಾಮಾನ್ಯನಲ್ಲ ಮಹಾತ್ಮನೆಂದು ಕೊಂಡಾಡಿ ತಾತನಿಗೆ ನಮಸ್ಕರಿಸುತ್ತಾರೆ.

ಭುವನದೊಳು ಜಡೆಸಿದ್ಧನೆಂಬುವ
ನವ ಪೆಸರಿನಿಂ ನಿನ್ನ ನಾಮವು
ಭುವನ ಪಾವನವಾಗಿ ಶಾಶ್ವತ ನೆಲೆಸುವುದು ಜಗದೀ[೬೭]

ಎಂದು ಊರ ಗ್ರಾಮಸ್ಥರೆಲ್ಲಾ ಸೇರಿ ಕೊಂಡಾಡುತ್ತಾರೆ.

ಗ್ರಾಮದ ಸಮಸ್ತಭಕ್ತಾದಿಗಳನ್ನು ಕರೆದು ನಾವು ಈ ಊರು ಬಿಡುವೆವು. ನೀವುಗಳೆಲ್ಲಾ ದ್ವೇಷ, ಅಸೂಯೆ ಮರೆತು ಒಂದಾಗಿ ಒಕ್ಕಲುತನಗಳನ್ನು ನಡೆಸಿರಿ. ಆ ಪರಮಾತ್ಮ ನಿಮ್ಮನ್ನು ಸಂರಕ್ಷಿಸುವನು. ಹೀಗೆ ಭಾವೈಕ್ಯತೆಯ, ಸೋದರ ಪ್ರೇಮದ ಸಂದೇಶ ನೀಡಿ ಮನೆ, ಮಠ, ಮಡದಿ ಮಕ್ಕಳನ್ನು ತೊರೆದು ವೈರಾಗ್ಯಮೂರ್ತಿಯಂತೆ ಹುಟ್ಟಿದ ಗ್ರಾಮವ ಬಿಟ್ಟು ಸಂಚಾರಕ್ಕೆ ಸಿದ್ಧರಾಗುತ್ತಾರೆ.

ಪರ್ಯಟನೆ

ಜಾತಿ-ಮತಗಳ ಎಲ್ಲೆ ಮೀರಿ ಮಾನವ ಧರ್ಮದ ಸಾರವನ್ನರಿತು, ಸಮಚಿತ್ತದಿಂದ ಸಂಚರಿಸುವ ಜಡೆಸಿದ್ಧರು ಕೆಲವು ವೇಳೆ ಕೋಪಿಷ್ಟರಾಗಿಯೂ ನಡೆದುಕೊಳ್ಳುತ್ತಿದ್ದರು. ಇವರ ಮನಸ್ಥಿತಿಯನ್ನರಿಯಲು ಸಾಮಾನ್ಯರಿಗೆ ಅಸಾಧ್ಯವಾಗಿತ್ತು. ಹುಚ್ಚು ಜನರಿಗೆ ಹುಚ್ಚನಂತೆ, ಭಕ್ತ ಜನರಿಗೆ ದೇವರಂತೆ ಕಾಣುತ್ತಿದ್ದ ಇವರು ಯಾರ ಹಂಗಿಲ್ಲದೆ, ಯಾರ ಆಶ್ರಯವನ್ನೂ ಬಯಸದೆ ಊರೂರು ಅಲೆದು ಹೋದಲ್ಲೆಲ್ಲಾ ಮಾನವೀಯ ಬದುಕಿನ ಬೀಜ ಬಿತ್ತಿದ್ದಾರೆ. ಸದಾಚಾರ, ಸದ್ಗುಣಗಳುಳ್ಳ ಸುಂದರ ಸಮಾಜ ರಚನೆಯಾಗಬೇಕೆಂದು, ಅದರ ಸಾಧನೆಗೆ ತನ್ನ ಜೀವನ ಮೀಸಲೆಂದೇ ತಿಳಿದು ಹಿಂದೂ-ಮುಸ್ಲಿಂ ಭಾವೈಕ್ಯತೆ, ಸರ್ವಧರ್ಮ ಸಮಾನತೆ, ಗಿಡ ಮರಗಳನ್ನು ಬೆಳೆಸುವ ಮೂಲಕ ಪರಿಸರ ರಕ್ಷಣೆ ಸಕಲ ಪ್ರಾಣಿಗಳಲ್ಲಿ ಜೀವದಯೆ, ಸಮಾಜಕ್ಕೆ ಅನಿಷ್ಟವಾಗಿದ್ದ ಅಸ್ಪೃಶ್ಯತೆಯ ನಿವಾರಣೆ ಮುಂತಾದ ಮಾನವೀಯ ಮೌಲಿಕ ತತ್ವಗಳನ್ನು ಸಾರಿ ಏಕತೆಯ ಸಮಾಜ ರಚನೆಗೆ ಶ್ರಮಿಸಿದ್ದಾರೆ.

ಪ್ರಮುಖ ಮಹಿಮೆಯ ಪ್ರಸಂಗಗಳು

ಮಾನ ಅವಮಾನಗಳ ಹಂಗನ್ನಳಿದು, ಹುಚ್ಚನಂತೆ ಊರೂರು ಸಂಚರಿಸುತ್ತಾ ಹಗೆದಾಳು ಗ್ರಾಮಕ್ಕೆ ಬಂದು ಅಲ್ಲಿನ ಸಿಹಿ ನೀರಿನ ಬಾವಿಯಲ್ಲಿ ಸ್ನಾನಮಾಡಲಾರಂಭಿಸುತ್ತಾರೆ. ಇದನ್ನು ಕಂಡ ಊರಜನ ಈತನಾರೋ ಹುಚ್ಚನೆಂದು ಸಿಟ್ಟಿನಿಂದ ಬೈಯುತ್ತಾ, ಕೈಗೆ ಸಿಕ್ಕ ಸಾಮಾನುಗಳಿಂದ ಹೊಡೆಯುತ್ತಾ-ಬಡಿಯುತ್ತಾ ನಾನಾ

ರೀತಿಯಾಗಿ ಗೋಳಾಡಿಸುತ್ತಾರೆ. ಇವರ ಚೇಷ್ಟೆಗಳನ್ನೆಲ್ಲಾ ಸಹಿಸಿಕೊಂಡ ತಾತನು ಸುಮ್ಮನಿದ್ದರೆ, ಇತ್ತ ತಾತನನ್ನು ಹೊಡೆದವರ ಕೈಗಳು ಅಶಕ್ತವಾಗಿ ಬೈದವರಿಗೆ ಮಾತು ಬಾರದಾಗುತ್ತದೆ. ಹೀಗೆ ನಾನಾ ಬಾಧೆಗಳಿಗೆ ತುತ್ತಾದ ಜನಗಳ ಸ್ಥಿತಿ ಕಂಡ ಕೆಲ ಸಜ್ಜನರು ಸ್ನಾನಮಾಡುತ್ತಿದ್ದ ಯೋಗಿಯನ್ನು ನಿಂದಿಸಿ, ಹಿಂಸಿಸಿದ ಫಲವಿದೆಂದು ತಿಳಿಸುತ್ತಾರೆ. ಬಾಧೆಗೊಳಗಾದ ಜನರೆಲ್ಲಾ ತಾತನನ್ನು ಹುಡುಕಿ "ಮಹಾನುಭಾವ ನಮ್ಮದು ತಪ್ಪಾಯಿತು, ಕ್ಷಮಿಸು ನಮ್ಮ ಬಾಧೆಗಳ ನಿವಾರಿಸು" ಎಂದು ಬೇಡಿಕೊಳ್ಳಲು, ಕರುಣಾಮಯಿಯಾದ ತಾತನು ಅವರನ್ನು ಕ್ಷಮಿಸಲು, ಅವರ ನೋವುಗಳೆಲ್ಲಾ ಪರಿಹಾರವಾಗುತ್ತವೆ. ಆದರೆ ತಾತನು ಸ್ನಾನ ಮಾಡಿದ ಸಿಹಿ ನೀರಿನ ಬಾವಿಯು, ದನಕರುಗಳೂ ಸಹ ಕುಡಿಯಲಿಕ್ಕೆ ಬಾರದಂತೆ ಉಪ್ಪುನೀರಿನ ಬಾವಿಯಾಗಿದ್ದು, ಈಗಲೂ ಸಹ ಆ ಬಾವಿ ಹಾಗೆ ಇದೆ. ಯೋಗಿಯ ಜೊತೆ ಸರಸ-ಹುಡುಗಾಟ ಒಳ್ಳೆಯದಲ್ಲವೆಂಬುದನ್ನು ಈ ಊರಿನ ಜನ ಅರಿತು ತಾತನವರ ಭಕ್ತರಾಗಿದ್ದಾರೆ. ಮೈಮೇಲೆ ಸರಿಯಾಗಿ ಬಟ್ಟೆಯಿಲ್ಲದೆ ಹುಚ್ಚನಂತೆ ಏಕಾಂಗಿಯಾಗಿ ಊರೂರು ತಿರುಗುತ್ತಿರುವಾಗ ಕೆಲವು ಡಾಂಭಿಕರು ಅಪಹಾಸ್ಯ ಮಾಡುತ್ತಿದ್ದರೆ, ಕೆಲ ತುಂಟ ಹುಡುಗರು ಕಲ್ಲು-ಸಗಣಿ ಎಸೆಯುತ್ತಿರುತ್ತಾರೆ. ಇದೆಲ್ಲವನ್ನು ಸಹಿಸಿಕೊಂಡು ಯಾರಿಗೂ ಏನೊಂದೂ ನುಡಿಯದೆ ಊರಿಂದೂರಿಗೆ ಹೋಗುತ್ತಿರುತ್ತಾರೆ.

ನೌಲಿಗ್ರಾಮದಲ್ಲಿ ತೋರಿದ ಮಹಿಮೆ

ನೋಡಲು ಹುಚ್ಚನಂತೆ ಅಲೆದಾಡುತ್ತಿರುವ ಈತನಲ್ಲಿ ಜ್ಞಾನ ಹೇಗಿರಬೇಕೆಂದು ನೌಲಿಗ್ರಾಮದ ಜನರು "ತಾತ ನಿಮ್ಮ ವಾಣಿಯಿಂದ ಏನಾದರೊಂದು ವಿಷಯ ಕೇಳಬೇಕೆಂಬ ಆಸೆಯಾಗಿದೆ ತಿಳಿ ಹೇಳಬೇಕೆಂದು ವಿನಂತಿಸುತ್ತಾರೆ." ಆಗ ತಾತನು,

"ಪರವಸ್ತು ನೀನೆಂದು ಪೊರದೆ ಎನ
ಗೊರೆದ ಕಾರಣದಿಂದ ನಾನಿನ್ನರಿದೆ
ಅರಿಯಲೆನ್ನೊಳಗೆ ನೀ ಬೆರೆದೆ | ದೇವಾ
ಬೆರೆದಾಕ್ಷಣವೆ ಎನ್ನ ಭವಬೀಜ ಹುರಿದೆ ||[೩೮]

ಎಂದು ಲಿಂಗಾಂಗ ಸಾಮರಸ್ಯವನ್ನು ನರರು ತಮ್ಮೊಳು ತಾವು ತಿಳಿದರೆ ಭವದ ಮೂಲವು ನಾಶವಾಗುವುದೆಂದು ತಿಳಿಸುತ್ತಾರೆ. ತಾತನವರ ಈ ತತ್ತ್ವವನ್ನು ಕೇಳಿ ಎಲ್ಲರೂ ಸಂತೋಷಗೊಳ್ಳುತ್ತಾರೆ.

ಒಮ್ಮೆ ತಾತನು ಊರಹಳ್ಳ ದಾಟುವಾಗ ಇದ್ದಕ್ಕಿದ ಹಾಗೆ ಹಳ್ಳದ ನೀರು ತುಂಬಿ ಬರುತ್ತದೆ. ಆಗ ತಾತನ ಜೊತೆಯಲ್ಲಿದ್ದ ಕೆಲ ಜನರು ಹೆದರಲು, 'ತಾತನು, ಎಲೈ ಮಕ್ಕಳೆ, ಏಕೆ ಅಂಜುವಿರಿ ಇತ್ತ ಬನ್ನಿ ಎಂದು ತನ್ನೆಡೆಗೆ ಕರೆಯುತ್ತಾರೆ. ಬಂದ ಹಳ್ಳದ ಪ್ರವಾಹವು ತಾತನು ಕುಳಿತಿರುವ ಗಡ್ಡೆಯನ್ನು ಬಿಟ್ಟು ಎರಡು ಭಾಗವಾಗಿ ಹರಿದು ಹೋಗುತ್ತದೆ. ಇದನ್ನು ಕಂಡ ಜನರು ಎಂಥಾ ಮಹಾನುಭಾವನೆಂದು ತಾತನನ್ನು ಕೊಂಡಾಡಿದರು. ಈಗಲೂ ನೌಲಿಹಳ್ಳಿಯ ಹಳ್ಳದಲ್ಲಿರುವ ಗಡ್ಡೆಗೆ 'ಜಡೆಗಡ್ಡೆ' ಎಂದು ಕರೆಯುತ್ತಾರೆ.

ನಾಗರ ಬೆಂಚಿಯಲ್ಲಿ ತೋರಿದ ಮಹಿಮೆ

ಊರೂರು ತಿರುಗುತ್ತಾ ನಾಗರಬೆಂಚಿಗೆ ಬಂದ ತಾತನು ಊರ ಮುಂದಿನ ಗುಡಿಯಲ್ಲಿ ಒಂದು ದಿನ

ಯಾರೊಂದಿಗೂ ಮಾತನಾಡದೆ ಮೌನವಾಗಿ ಕುಳಿತಿರುತ್ತಾರೆ. ಇದನ್ನು ಕಂಡ ಕೆಲವು ಜನ ಈತ ಕಳ್ಳನಿರಬೇಕೆಂದು ಕಲ್ಲು ಎಸೆಯುತ್ತಾ, ಬೈಯುತ್ತಾ ಗುಡಿಯ ಬಿಡಿಸುತ್ತಾರೆ. ಈ ಕ್ಷುಲ್ಲಕರ ಕಾಟತಾಳಲಾರದೆ ಹಗಲಿನಲ್ಲಿ ತಿಪ್ಪೆ ಗುಂಡಿಯ ಮಡುವಿನಲ್ಲಿದ್ದು ರಾತ್ರಿಯಲ್ಲಿ ಗುಡಿ ಸೇರುತ್ತಿದ್ದರು.

ಒಮ್ಮೆ ಇವರಿಂ ಸೇವೆಗೊಳ್ಳುವ
ನೊಮ್ಮೆ ಮನೆ ಮನೆ ತಿರುಗುತಲಿ ಮ
ತ್ತೊಮ್ಮೆ ಯಾರ‍್ಯಾರಿಲ್ಲದಿರುತಿಹ ಸ್ಥಾನದೊಳು ಕುಳಿತು ||
ಬ್ರಹ್ಮ ಚಿಂತೆಯಲ್ಲಿ ಮೈಮರೆ
ತೊಮ್ಮೆ ಭಿಕ್ಷುಕರಂತೆ ಯಾಚಿಸು
ತೊಮ್ಮೆ ನೀಡಲು ಬಂದರದಿನಂ ಗ್ರಹಿಸದಿರುತಿಹನು[೬೯]

ಹೀಗೆ ಮನೆ ಮನೆಯಲ್ಲಿ ಭಿಕ್ಷೆ ಬೇಡುತ್ತಿದ್ದಾಗ ಪ್ರೀತಿಯಿಂದ ಭಿಕ್ಷೆ ಕೊಟ್ಟ ಮನೆಗಳು ಉದ್ಧಾರವಾಗಿಯೂ, ನಿಂದಿಸಿದ ಮನೆಗಳು ಹಾಳಾಗಿರುವುದಾಗಿ ತಿಳಿಯುತ್ತದೆ.

ಗ್ರಾಮದ ಮಡಿವಾಳ ಮಲ್ಲೇಶಪ್ಪನ ಮನೆಯಲ್ಲಿದ್ದಾಗ ಹಳ್ಳದ ಕಡೆ ಹೋದ ತಾತನು ''ಅರಿವೆಯೊಂದನು ನುಂಗಿ ಗುದದಿಂದ ಹೊರಗೆಳೆಯುತ್ತಿದ್ದರು. ಇದನ್ನು ಕಂಡ ಊರ ಭಕ್ತರು ಭಕ್ತಿಗೆ ಬಾಹ್ಯ ಶುದ್ಧತೆಗಿಂತ ಮಾನಸಿಕ ಶುದ್ಧತೆಯೆ ಮುಖ್ಯವೆಂದು ಅರಿಯುತ್ತಾರೆ. ಈ ರೀತಿ ಭಕ್ತಿಯ ಸಾಧನವನ್ನು ಅದಕ್ಕೆ ಬೇಕಾದ ಮಾರ್ಗವನ್ನು ತೋರಿಸುತ್ತಾ ಮುಂದಿನೂರಿಗೆ ನಡೆಯುತ್ತಿದ್ದರು.

ತಾವರಗೇರಿಯಲ್ಲಿ ತೋರಿದ ಮಹಿಮೆ

ಹಸಿವು, ತೃಷೆಗಳಿಲ್ಲದೆ ಹುಚ್ಚನಂತೆ ಮೌನಿಯಾಗಿ ಅಲೆದಾಡುತ್ತಾ ತಾವರಗೆರೆಗೆ ಬರುತ್ತಾರೆ. ಜನ ಮಾತನಾಡಿಸಿದರೆ ಯಾರೊಂದಿಗೂ ಮಾತನಾಡದೆ ಸುಮಾರು ಐದಾರು ದಿನಗಳು ಏಕಾಂಗಿಯಾಗಿ ಕುಳಿತಿರುತ್ತಾರೆ. ಊರ ಗೌಡ ಬಂದು ಒತ್ತಾಯ ಮಾಡಿ ಮನೆಗೆ ಕರೆದುಕೊಂಡು ಹೋಗಿ ಉಣಲು ಬಡಿಸಿದರೆ ಹಾಲು ಬೇಕೆಂದು ಕೇಳುತ್ತಾರೆ. ಗೌಡನ ಮನೆಯಲ್ಲಿ ಎಮ್ಮೆಗಳಿದ್ದರೂ ಬರಡಾಗಿದ್ದವು. ಈ ಚಿಂತೆಯಲ್ಲಿದ್ದ ಗೌಡನಿಗೆ ''ಎಮ್ಮೆ ಹಾಲು ಕೊಡುತ್ತದೆ ಹಿಂಡಿಕೋ'' ಎಂದು ತಾತನು ಹೇಳಲು ಅದರಂತೆ ಬರಡೆಮ್ಮೆ ಹಾಲು ಕರೆಯುತ್ತದೆ. ''ನೀ ನೊಲಿದರೆ ಕೊರಡು ಕೊನರುವುದು'' ಎಂಬ ವಚನವಾಣಿಯಂತೆ ಮಹಾತ್ಮನ ಅನುಗ್ರಹದಿಂದ ಬರಡೆಮ್ಮೆ ಹಾಲು ಕೊಡುತ್ತದೆ. ತನಗಿಷ್ಟ ಬಂದ ಶುದ್ಧ ಮನಸ್ಕ ಭಕ್ತರನ್ನು ಸಂತೋಷಗೊಳಿಸುತ್ತಾ ಮತ್ತೊಂದೂರಿಗೆ ಹೋಗುತ್ತಿದ್ದರು.

ಚಿಕ್ಕೇನಕೊಪ್ಪದಲ್ಲಿದ್ದಾಗ ಮೊಹರಂ ಹಬ್ಬದಂದು ಹಾಕಿದ ಬೆಂಕಿಯನ್ನು ತುಳಿದು ಧಾರ್ಮಿಕ ಸಮನ್ವಯತೆಯನ್ನು ಸಾರಿದ್ದಾರೆಂದು ಭಕ್ತರು ತಿಳಿಸುತ್ತಾರೆ.

ಮೆಣೆದಾಳು ಗ್ರಾಮದಲ್ಲಿ ತೋರಿದ ಮಹಿಮೆ

ಹುಚ್ಚನಂತೆ ದಿಗಂಬರನಾಗಿ ತಿರುಗಾಡುತ್ತಾ ಮೆಣೆದಾಳು ಗ್ರಾಮಕ್ಕೆ ಬರಲು, ಅಲ್ಲಿ ಈಜಲು ಬಾರದ

ಹುಡುಗನೊಬ್ಬ ಬಾವಿಯಲ್ಲಿ ಬಿದ್ದು ಸತ್ತಿರುತ್ತಾನೆ. ತಂದೆ-ತಾಯಿಗಳ ದುಃಖವಂತೂ ಹೇಳತೀರದು. ನೆರೆದವರ ದುಃಖವನ್ನು ಕಂಡು ಅಲ್ಲಿಗೆ ಬಂದ ತಾತನು ಕನಿಕರಗೊಂಡು ಮೃತ ದೇಹಕ್ಕೆ ತನ್ನ ಬೆತ್ತವ ಸ್ಪರ್ಶಿಸಲು, ಮಲಗಿದ್ದವ ಎಚ್ಚರಗೊಂಡವನಂತೆ, ಸತ್ತ ಬಾಲಕ ಎದ್ದು, ತಂದೆ ತಾಯಿಗಳನ್ನು ಅಪ್ಪಿಕೊಳ್ಳುತ್ತಾನೆ. ಹರಕು ಬಟ್ಟೆಯ ಮಲಿನ ಮೂರ್ತಿಯಲ್ಲಿದ್ದ ಇಂಥ ಶಕ್ತಿಯನ್ನು ಕಂಡು ನೆರೆದವರೆಲ್ಲಾ ಆಶ್ಚರ್ಯಗೊಂಡು ತಾತನಿಗೆ ವಂದಿಸುತ್ತಾರೆ. ಹೀಗೆ ತಾವು ಪಡೆದ ಸಾಧಕಶಕ್ತಿಯನ್ನು ಮಹಾತ್ಮರು ಇಂತಹ ಲೋಕ ಕಲ್ಯಾಣಕ್ಕೆ ಉಪಯೋಗಿಸಿ, ಸಜ್ಜನರಿಗೆ ಬಂದ ಕಷ್ಟಗಳನ್ನು ದುಃಖಗಳನ್ನು ದೂರ ಮಾಡಿರುವುದು ಇತಿಹಾಸದಿಂದ ಸ್ಪಷ್ಟ.

ಮತ್ತೊಂದು ಊರಿನಲ್ಲಿ ಒಣಗಿದ್ದ ಬಿಲ್ವಪತ್ರೆಯ ಮರವನ್ನು ತನ್ನ ಕೈಯಿಂದ ಮುಟ್ಟಿ ಚಿಗುರುವಂತೆ ಮಾಡಿರುತ್ತಾರೆ. ಕುಡಿಯಲು ನೀರಿಲ್ಲದ ಮತ್ತೊಂದು ಗ್ರಾಮದಲ್ಲಿ ಬತ್ತಿದ ಬಾವಿಯಲ್ಲಿಳಿದು ಜಲ ಭರಿಸುತ್ತಾರೆ. ಹೀಗೆ ತಾತನವರು ಭಕ್ತ ಜನರ ವೈಯಕ್ತಿಕ ಮತ್ತು ಸಾಮೂಹಿಕ ಸಮಸ್ಯೆಗಳನ್ನು ಅವರ ದುಃಖಗಳನ್ನು ಪರಿಹರಿಸಿರುವುದು ತಿಳಿಯುತ್ತದೆ.

ಹೀಗೆ ಹೋದಕಡೆಯೆಲ್ಲಾ ತಾತನವರ ಮಹಿಮೆ ಮತ್ತು ಅವರ ಹೆಸರು ಜನಪ್ರಿಯವಾಗುತ್ತಿತ್ತು. ಇದನ್ನೆಲ್ಲಾ ಕೇಳಿದ ಒಬ್ಬ ವೈಶ್ಯನು ತಾತನವರ ಬಗ್ಗೆ ಅವಹೇಳನ ಮತ್ತು ಅಪಹಾಸ್ಯ ಮಾಡಿದ್ದರ ಪರಿಣಾಮವಾಗಿ ಅವನ ಆಸ್ತಿಯೆಲ್ಲಾ ನಾಶವಾಗಿ, ಮನೆಯವರೆಲ್ಲಾ ಅಂಧರಾಗುತ್ತಾರೆ. ತುಂಬಾ ತೊಂದರೆಗೊಳಗಾದ ಶೆಟ್ಟಿಗೆ, ಆ ಯೋಗಿಯನ್ನು ಅವಹೇಳನ ಮಾಡಿದ್ದಕ್ಕೆ ತನಗೆ ಈ ಸ್ಥಿತಿ ಬಂತೆಂದು ಅರಿವಾಗುತ್ತದೆ. ಆಗ ತಾತನವರನ್ನು ಹುಡುಕಿ ಮಹಾಪರಾಧವಾಯಿತು ನನ್ನ ತಪ್ಪನ್ನು ಕ್ಷಮಿಸಬೇಕೆಂದು ಬೇಡಿಕೊಳ್ಳಲು ಆಗ ವೈಶ್ಯನಲ್ಲಡಗಿದ್ದ ಅಂಧಕಾರವನ್ನು ಹೋಗಲಾಡಿಸಿ ಜ್ಞಾನವನ್ನು ಬೆಳಗಿಸುತ್ತಾ ಆಶೀರ್ವದಿಸುತ್ತಾರೆ. ಅದರ ಫಲವಾಗಿ ವೈಶ್ಯನ ಮನೆಯಲ್ಲಿ ಅಂಧರಾದವರಿಗೆಲ್ಲಾ ಕಣ್ಣು ಬಂದು, ಎಲ್ಲರೂ ತಾತನವರ ಭಕ್ತರಾಗಿ ಸುಖವಾಗಿ ಬಾಳುತ್ತಾರೆ.

ಹೀಗೆ ಮೈಸೂರು, ದಾವಣಗೆರೆ, ಹರಿಹರ, ಚಿತ್ರದುರ್ಗ, ಬೆಂಗಳೂರು ಮುಂತಾದ ನಗರಗಳನ್ನೆಲ್ಲಾ ಸುತ್ತಿ ನೀಲಗಿರಿ ಬೆಟ್ಟದಲ್ಲಿ ಕಾಡು ಪ್ರಾಣಿಗಳೊಂದಿಗೆ ಪ್ರೀತಿಯಿಂದ ಆಟವಾಡುತ್ತಿದ್ದರೆಂದೂ ತಿಳಿಯುತ್ತದೆ. ತಾತನವರನ್ನು ಕಣ್ಣಾರೆ ಕಂಡ ಜನರು ಈತನು ಸಾಮಾನ್ಯನಲ್ಲ ಮಹಾಯೋಗಿ, ಮಹಾಜ್ಞಾನಿ ಸರ್ವಸಂಗ ತ್ಯಾಗಮಾಡಿದ ವೈರಾಗ್ಯಮೂರ್ತಿ, ದೇವಮಾನವನೆಂದು ಸ್ತುತಿಸಿರುತ್ತಾರೆ.

ಎಮ್ಮಿಗನೂರಿನಲ್ಲಿ ನೆಲೆನಿಂತ ಜಡೆತಾತ

ಮಹಿಮಾಶಾಲಿಯಾದ ತಾತನು ಹಲವಾರು ಪ್ರಾಂತಗಳಲ್ಲೆಲ್ಲಾ ಸಂಚಾರ ಮಾಡಿ ಎಮ್ಮಿಗನೂರಿಗೆ ಬರುತ್ತಾರೆ. ಆಗ ತಾತನವರಿಗೆ ೯೦ ವರ್ಷಗಳಾಗಿದ್ದವೆಂದು ತಿಳಿದುಬರುತ್ತದೆ. ಎಮ್ಮಿಗನೂರಿನಲ್ಲಿ ಯಾರ ಮನೆಗೂ ಹೋಗದೆ, ಶಿವಸಿಂಪಿಗರ ಮನೆಯ ಮುಂಭಾಗದ ಕಟ್ಟೆಯಲ್ಲಿ ಕುಳಿತಿರುತ್ತಾರೆ. ಹಗಲೆಲ್ಲಾ ತಿರುಗಾಡುವುದು, ರಾತ್ರಿ ಆ ಕಟ್ಟೆಯಲ್ಲಿ ತಂಗುವುದು. ಅಲ್ಲಿಗೆ ಬಂದ ಶುದ್ಧ ಮನಸ್ಸಿನ ಭಕ್ತರ ಬಯಕೆಗಳನ್ನು ನೆರವೇರಿಸುವುದು ಇದು ದಿನ ನಿತ್ಯದ ಕಾರ್ಯವಾಗಿತ್ತು. ಹೀಗೆ ಸುತ್ತ ಮುತ್ತಣ ಗ್ರಾಮದಲ್ಲಿ ತಾತನವರ ಮಹಿಮೆ ಪ್ರಚಾರವಾಗಿ, ತಾತನ ದರ್ಶನಕ್ಕೆ ಬರುವ ಭಕ್ತರ ಸಂಖ್ಯೆ ದಿನದಿಂದ ದಿನಕ್ಕೆ ಅಧಿಕವಾಗುತ್ತಿತ್ತು. ಆಗಿನ ತಾತನ ಸ್ಥಿತಿಯು

ಅರಿವೆಗಳನವನೆಂದಿಗೂ ತೊಡ
ದಿರುವ ಸ್ವಚ್ಛತೆ ತನ್ನ ದೇಹದ
ಪರಿವೆಯದು ಮೊದಲಿಲ್ಲ ಹಸುತೃಷಿ ಇಲ್ಲದಿರುತಿಹನೂ।
ನಿರುತ ಒಟಗುಡುತಿಹನು ಮನದೊಳು
ಬರುವ ಭಕ್ತರ ಬಯಕೆಯನು ತಾ
ನರುಹುವನು ಬರಬರುತ ಭವಿಷವ ನುಡಿಯುವನು ಮೊದಲೂ ॥[೬೦]

ದೇಹ ಮಲಿನವಾಗಿದ್ದರೂ, ಮನಸ್ಸು ಪರಿಶುದ್ಧ, ಹೊರನೋಟಕ್ಕೆ ಹುಚ್ಚನಂತಿದ್ದರೆ, ಮನಸ್ಸಿನಲ್ಲಿ ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಂಡವರು. ಪೂರ್ಣಾವಧೂತ ಸ್ಥಿತಿಯಲ್ಲಿ ಭೇದ-ಭಾವಗಳಿಲ್ಲದೆ ಸಂಗದಲ್ಲಿದ್ದು ನಿಸ್ಸಂಗಿಯಾಗಿದ್ದು, ತರತಮ ಭೇದವೆ ಗೊತ್ತಿಲ್ಲದ ತಾತನು ಆ "ಊರಿನಲ್ಲಿ ಮೇಲುಕೀಳು, ಸ್ಪೃಶ್ಯ-ಅಸ್ಪೃಶ್ಯ ಎಂಬ ಕ್ಷುಲ್ಲಕ ಭಾವನೆಗಳನ್ನು ಜನರ ಮನಸ್ಸಿನಿಂದ ದೂರಮಾಡುವ ಸಲುವಾಗಿ ಗ್ರಾಮದ ಹರಿಜನ ಕೇರಿಯ ಮನೆ ಮನೆಗೂ ಹೋಗಿ ಪ್ರಸಾದ ಸ್ವೀಕರಿಸಿ ಅವರಿಗೆ ಕುಡಿತದಂತಹ ದುಃಶ್ಚಟಗಳನ್ನು ಬಿಡುವಂತೆ ಪರಿವರ್ತಿಸಿ, ನಾರು ತೆಗೆದು ಹಗ್ಗ ಮಾಡುವ ರೀತಿಯನ್ನು ಬೋಧಿಸಿರುತ್ತಾರೆ. ಅದರಂತೆ ಈ ಕೆಲಸಕ್ಕೆ ತೊಡಗಿ, ಇಂದಿಗೂ ಹಗ್ಗ ಮಾಡುವ ಕಾಯಕದಲ್ಲಿ ಕೆಲವರು ತೊಡಗಿದ್ದಾರೆ. ಹೀಗೆ ವರ್ಗರಹಿತ, ವರ್ಣರಹಿತ ಮಾನವೀಯತೆಯನ್ನು ಮೈಗೂಡಿಸಿಕೊಂಡು ಸಮಾಜದ ರಚನೆಯನ್ನು ಕಳಕಳಿಯ ದೃಷ್ಟಿಯಿಂದ ಮಾಡಿದ್ದು ಈತನ ಚರಿತ್ರೆಯಿಂದ ತಿಳಿಯುತ್ತದೆ."[೬೧] ತಾತನವರ ಸಾಮಾಜಿಕ ಪರಿವರ್ತನೆಯ ಹೊಸ ಸಮಾಜ ರಚನೆಯ ವಿಷಯ ತಿಳಿದು ಅವರ ಮಹಿಮೆಯನ್ನು ಕೇಳಿ, ಕಣ್ಣಾರೆ ಕಾಣಲು ಕಾಕ್ಬಾಳು, ಮೆಟ್ರಿ, ಸಿದ್ದಾಪುರ, ಸಿಂಧಿಗೇರಿ ಗ್ರಾಮದ ಭಕ್ತರು ಬಂದು ತಮ್ಮೂರಿಗೆ ಕರೆಯುತ್ತಾರೆ. ಯಾವ ಆಸೆ-ಆಕಾಂಕ್ಷೆಗಳಿಲ್ಲದ ತಾತನು ನಸುನಗುತ ರೂಢಿಸುತ್ತುವುದೆಲ್ಲ ಮುಗಿದು, ಇದುವೆ ಮುಕ್ತ ಸ್ಥಳವೆಂದು ಎಮ್ಮಿಗನೂರಿನಲ್ಲಿಯೇ ನೆಲೆ ನಿಲ್ಲುತ್ತಾರೆ. ಕರೆಯಲು ಬಂದ ಭಕ್ತರಿಗೆ ಮುಂದೆ ಎನ್ನಯ ವಂಶಸ್ಥರು ಬಂದು ನಿಮ್ಮ ಊರುಗಳಲ್ಲಿ ನೆಲೆ ನಿಲ್ಲುವರೆಂದು ಭವಿಷ್ಯ ನುಡಿಯಲು ಅದರಂತೆ ಕಾಕ್ಬಾಳು-ಮೆಟ್ರಿ-ಸಿದ್ದಾಪುರ-ಸಿಂಧಿಗೇರಿಗಳಲ್ಲಿ ಯೋಗಿಗಳಿರುವುದನ್ನು ಇಂದು ಕಾಣಬಹುದು.

ಎಮ್ಮಿಗನೂರಿನಲ್ಲಿ ಮಹಿಮೆ

ಒಮ್ಮೆ ತಾತನವರ ಸುತ್ತ ನೂರಾರು ಭಕ್ತರು ಆತನ ಪ್ರಸಾದವನ್ನು ಕೈಗೊಳ್ಳುತ್ತಾ ಆತನು ಕೇಳಿದ ಪದಾರ್ಥಗಳನ್ನು ಸಾಧ್ಯವಿದ್ದಷ್ಟು ಕೊಡುತ್ತಾ ಆತನ ಶಾಪಾನುಗ್ರಹ ವಾಕ್ಯಗಳನ್ನು ಭಕ್ತಿಯಿಂದ ಕೇಳುತ್ತಾ ಸುತ್ತುವರೆದಿರುತ್ತಾರೆ. ಅಲ್ಲೇ ಚಾವಡಿಯಲ್ಲಿ ಕುಳಿತ ಬ್ರಿಟೀಷ್ ಆಡಳಿತದ ಒಬ್ಬ ಪೊಲೀಸ್ ಅಧಿಕಾರಿ ಇದನ್ನೆಲ್ಲಾ ನೋಡಿ ಬಳಿಯಿದ್ದ ಊರ ಪ್ರಮುಖರಿಗೆ ಏನಿದು ವಿಕಾರ, ಈ ಹುಚ್ಚನು ಮೈಯೆಲ್ಲಾ ಹೊಲಸು ಮಾಡಿಕೊಂಡು ಥೂ, ಥೂ ಎಂದು ಉಗಿಯುವುದು, ಉಗಿದ ಅಡಿಕೆ ಎಲೆ ಚೂರುಗಳನ್ನು ಈ ಭ್ರಾಂತರಾದ ಜನರು ಕೆಳಗೆ ಬೀಳದಂತೆ ತೆಗೆದುಕೊಳ್ಳುವುದು, ಸೇವಿಸುವುದು, ಅವನನ್ನು ಹಿಂಬಾಲಿಸುವುದು ಅವನಾಡಿದ ಮಾತುಗಳನ್ನು ಕೇಳಿ ಅದರಂತೆ ನಟಿಸುವುದು. ಛೀ ಛೀ, ಇದೇತರ ನಡತೆ, ಇವನು ಕುಲಗೇಡಿ, ವ್ರಾತ್ಯ, ಭ್ರಷ್ಟ, ದುರಾಚಾರಿ, ಇಂತಹ ಉನ್ಮತ್ತನನ್ನು ಮಹಾತ್ಮನೆಂದು ಭಯಭಕ್ತಿಯಿಂದ ಕರೆಯಬೇಕಾದರೆ ಜನರೆಂಥ

ಮೂಢರು ಎಂದು ನುಡಿಯುತ್ತಾನೆ. ಈ ರೀತಿ ಮಾತನಾಡುತ್ತಿರುವಾಗ ಕೋಲೂರುತ್ತಾ ಆ ಅಧಿಕಾರಿಯ ಬಳಿ ತಾತನು ಬರಲು ಅಧಿಕಾರಿಯು ಕೋಪಿಷ್ಟನಾಗಿ ಎಲವೋ ಹುಚ್ಚ, ಆಚೆ ಹೋಗು ನಿನಗೆ ಬುದ್ಧಿಯಿಲ್ಲ, ಜ್ಞಾನವಿಲ್ಲ, ಮೈಮೇಲೆ ಎಚ್ಚರವಿಲ್ಲ, ತೊಲಗು ತೊಲಗೆಂದು ಗದರಿಸುತ್ತಾನೆ. ತಾತನು ಅವನ ಗರ್ವದ ಮಾತುಗಳನ್ನಾಲಿಸಿ 'ಹೋಗುತ್ತದೆ ಹೋಗು' ಎಂದು ನುಡಿಯುತ್ತಾರೆ.[೪೨] ತಾತನ ಮಾತಿನ ಮರ್ಮವನ್ನರಿಯದ ಅಧಿಕಾರಿಗೆ ಕೆಲಗಂಟೆಗಳ ತರುವಾಯ ಮೇಲಾಧಿಕಾರಿಯಿಂದ ಸುದ್ಧಿಯೊಂದು ಬಂದು ನಿನ್ನ ಅಪರಾಧ ರುಜುವಾಗಿದೆ. ನೀನು ತಕ್ಷಣ ಕೆಲಸದಿಂದ ಬಿಡುಗಡೆ ಹೊಂದಬೇಕು. ಆಲಸ್ಯ ಮಾಡಲಾಗದು ಎಂದು ಆದೇಶ ಬರುತ್ತದೆ. ಜೊತೆಗೆ ಆತನು ಸವಾರಿ ಮಾಡಿಕೊಂಡು ಬಂದ ಕುದುರೆ ದೊಪ್ಪನೆ ನೆಲಕ್ಕೆ ಬಿದ್ದು ಹೊರಳಾಡ ತೊಡಗುತ್ತದೆ. ಆತನ ಕಳವಳ ಹೆಚ್ಚಾಗಿ ಜೊತೆಯಲ್ಲಿದ್ದವರನ್ನು ಹೀಗೇಕೆಂದು ಕೇಳಲು, ಹುಚ್ಚನೆಂದು ನಿಮ್ಮಿಂದ ತಿರಸ್ಕರಿಸಲ್ಪಟ್ಟವನು ಸಾಮಾನ್ಯನಲ್ಲ, ಅಸಾಮಾನ್ಯ ಮಹಿಮಾ ಶಾಲಿ, ಒಲಿದವರಿಗೆ ಇಷ್ಟಾರ್ಥಗಳನ್ನು ನೀಡುವ ಪರಮಾತ್ಮ, ದುಷ್ಟರಿಗೆ ಕೋಪಿಷ್ಟನೆಂದು ಹೇಳುತ್ತಾರೆ. ಅಧಿಕಾರಿಗೆ ಇದೆಲ್ಲಾ ಅವರಿಂದಲೇ ಆದದ್ದು ಎಂದರಿತು ತಾತನಲ್ಲಿ ಪರಿಪರಿಯಾಗಿ ಕ್ಷಮೆ ಕೇಳುತ್ತಾನೆ. ತಾತನು ಅಧಿಕಾರಿಯ ವೇದನೆಯನ್ನರಿತು ತನ್ನ ಬೆತ್ತದಿಂದ ಆಶೀರ್ವದಿಸಿ 'ಬರುತ್ತದೆ ಹೋಗು' ಎಂದು ಅಪ್ಪಣೆ ನೀಡುತ್ತಾರೆ. ಅಧಿಕಾರಿಯು ನಮಸ್ಕರಿಸಿ ಆಶೀರ್ವಾದ ಪಡೆದು ಮರಳಿ ತನ್ನ ಸ್ಥಳಕ್ಕೆ ಹೋಗಲು ಕೆಲ ದಿನಗಳಲ್ಲಿ ಕಳೆದುಕೊಂಡ ಹುದ್ದೆಯು ಮತ್ತೆ ಪ್ರಾಪ್ತವಾಗುತ್ತದೆ. ಹೀಗೆ ಅಹಂಕಾರಿಗಳಿಗೆ ಬುದ್ಧಿಯನ್ನು ಕಲಿಸಿ ಮಾನವತಾವಾದಿಯಾಗಿ ಬಾಳಲು ತಿಳಿ ಹೇಳಿರುತ್ತಾರೆ.

ಉಂತಕಲ್ಲು ಮಠದ ವಿರೂಪಾಕ್ಷ ಶಾಸ್ತ್ರಿಗಳಿಗೆ ಶಾಪ

ವೇದ, ಶಾಸ್ತ್ರ, ಪುರಾಣಗಳ ನಿಷ್ಣಾತರು, ರಾಜಸನ್ಮಾನಗಳನ್ನು ಪಡೆದವರು, ತಮ್ಮ ಪ್ರತಿಭಾಶಕ್ತಿಯಿಂದ ಚರ್ಚಿಸುವ ವಿಷಯಗಳಲ್ಲಿ ಅದ್ವಿತೀಯರೆಂದೂ ಹೆಸರು ಪಡೆದ ವಿರೂಪಾಕ್ಷಶಾಸ್ತ್ರಿಗಳು ಒಮ್ಮೆ ಎಮ್ಮಿಗನೂರಿಗೆ ಬರುತ್ತಾರೆ. ಗ್ರಾಮದ ಭಕ್ತರ ಒತ್ತಾಯದ ಮೇರೆಗೆ ಶಾಸ್ತ್ರಿಗಳು ಊರ ದೇವಾಲಯದಲ್ಲಿ ಪ್ರವಚನ ನೀಡುತ್ತಿರುವಾಗ ಅಲ್ಲಿಗೆ ಮೆಲ್ಲನೆ ಕೋಲನ್ನೂರುತ್ತಾ ಬಂದ ತಾತನನ್ನು -

ನೋಡಿ ಶಾಸ್ತ್ರಿಗಳಿವನ ಮಲಿನತೆ
ಯೊಡಲಸದಳ ಹುಚ್ಚನಿವಗೇನ್
ದಾಡಿಯಾಗಿದೆ ನರಕವಾಸನೆ ನಾರುತಿಹ ತಾನೂ ||
ನೋಡನಿವತಾ ಜನರ ತುಳಿಯುತ
ನೋಡ ಬಂದಿಹನೇನ್ ಕುರೂಪಿಯು
ಮೂಢಮತಿ ನೀನಾಚೆ ನಡೆ ನಡೆಯೆಂದು ದೂಷಿಸಲು[೪೩]

ಇವನನ್ನು ಹಿಂಬಾಲಿಸಿ ಬಂದ ಈ ಮರುಳು ಜನರು ಅವನು ಉಗಿದ ಉಚ್ಚಿಷ್ಟಗಳನ್ನು ಸೇವಿಸುತ್ತಾ ತಮ್ಮ ಅವಿವೇಕವನ್ನು ಪ್ರದರ್ಶಿಸುತ್ತಿರುವರೆಂದು ಜನರನ್ನು ದೂಷಿಸಿ, ಎಲವೋ ಸಮೀಪಕ್ಕೆ ಬರಬೇಡ. ನಡೆ ಆಚೆ ಎಂದು ದೂಷಿಸಿದ ಶಾಸ್ತ್ರಿಗಳಿಗೆ ತಾತನು ತನ್ನನ್ನು ಹೊಲಸು ಎಂದು ನಿಂದಿಸಿದ್ದರಿಂದ 'ಹೊಲಸಿನಲ್ಲೆ ಬಿದ್ದು ಸಾಯಿ' ಎಂದು ಶಪಿಸುತ್ತಾರೆ.

ಮುಂದೆ ಶಾಸ್ತ್ರಿಗಳು ಬಳ್ಳಾರಿಯ ಮರಿಸ್ವಾಮಿಗಳ ಮಠದಲ್ಲಿ ಎಂಟು ರಾತ್ರಿಗಳು ಅಖಂಡ ಪುರಾಣ ಪ್ರವಚನ ನೀಡಿ, ಒಂಭತ್ತನೇ ದಿನ ಬೆಳಿಗ್ಗೆ ನಿತ್ಯ ಕರ್ಮವನ್ನು ಮಾಡುವಾಗ ದೇಹ ನಡುಗಿ, ತತ್ತರಿಸುತ್ತಾ,

ಶರೀರದೊಳಗಿನ ಅರವು ತಪ್ಪಲು
ಉರುಳಿದರು ಶಾಸ್ತ್ರಿಗಳು ಮಲಿನದಿ
ಪರಿಪರಿಯ ಪರಿತಾಪ ಪಡಿಸುತ್ತಿರಲು ತದ್ಭಾದೇ''

ಕೈಕಾಲುಗಳು ಅಸ್ತವ್ಯಸ್ತವಾಗಿ ಬಿದ್ದು ಅಸುನೀಗುತ್ತಾರೆ. ಇದ್ದಕ್ಕಿದ್ದಂತೆ ಸತ್ತ ಶಾಸ್ತ್ರಿಗಳ ಬಗ್ಗೆ ಭಕ್ತರು ನಾನಾ ವಿಧವಾಗಿ ಮಾತನಾಡುತ್ತಾರೆ. ಈ ರೀತಿ ದುಷ್ಟ ನಿಗ್ರಹ, ಶಿಷ್ಟ ರಕ್ಷಕ ಕಾರ್ಯ ಮಾಡುತ್ತಾ, ಬಾಹ್ಯವನ್ನು ಮರೆತು, ಅಂತರಂಗದಲ್ಲಿ ಪರಿಶುದ್ಧನಾಗಿದ್ದು ಸೃಷ್ಟಿ, ಸ್ಥಿತಿ, ಲಯವನ್ನು ಮೀರಿ ಭಕ್ತ ಜನರ ಇಷ್ಟಾರ್ಥಗಳನ್ನು ನೆರವೇರಿಸುತ್ತಿದ್ದರೆಂದು ತಿಳಿಯುತ್ತದೆ.

ಮಕ್ಕಳಿಲ್ಲದ ಯುವತಿಯೋರ್ವಳು ತಾತನಲ್ಲಿ ವರವ ಬೇಡಲು, ತಾತನು ಹರಿಜನರ ಮನೆಯಿಂದ ಅಂಬಲಿಯ ತರಿಸಿ, ಅವಳ ಸೆರಗಿಗೆ ಹಾಕುತ್ತಾರೆ. ಅವಳು ಮನದಲ್ಲೆ ಹೇಸಿಕೆಪಟ್ಟು ಹೋಗುವಾಗ ಮಡಿಲಲ್ಲಿದ್ದ ಅಂಬಲಿಯು ಸೋರುತ್ತಿರಲು, ಆ ಅಂಬಲಿಯನ್ನು ತೆಗೆದು ಹೊಲದಲ್ಲಿ ಹೂಳಿ ನಡೆಯುತ್ತಾಳೆ. ಅದರ ಪರಿಣಾಮವಾಗಿ ಹುಟ್ಟುವ ಮಕ್ಕಳೆಲ್ಲಾ ಸಾಯುತ್ತಿರುತ್ತವೆ. ಮತ್ತೆ ತಾತನಲ್ಲಿ ಮೊರೆಹೋದಾಗ ತಾತನು ಅವಳು ಹೂತಿಟ್ಟ ಅಂಬಲಿಯ ಜಾಗ ತೋರಿಸಲು, ಅಲ್ಲಿ ಒಣಗಿದ ಕೂಸಿನಾಕೃತಿಯಂತೆ ಕಾಣುತ್ತಿರುತ್ತದೆ. ಇಂಥ ಹೇಯ ಕೃತ್ಯಮಾಡಿದ ಹೆಂಗಸನ್ನು ತಿರಸ್ಕರಿಸಿ ಗಂಡನಿಗೆ ಮತ್ತೊಂದು ಮದುವೆ ಮಾಡಿಕೊಳ್ಳಲು ಆಶೀರ್ವದಿಸುತ್ತಾರೆ. ಅಜ್ಞಾನಿಗಳಿಗೆ, ಅಹಂಕಾರಿಗಳಿಗೆ ತಾತನವರ ಮಹಿಮೆ ಅರ್ಥವಾಗದೆ ತಮ್ಮ ಬಾಳನ್ನೆ ಎಷ್ಟೋ ಜನ ನಾಶಮಾಡಿಕೊಂಡಿದ್ದಾರೆ. ಮನಸಾರೆ ನಂಬಿದವರು ಸಂಕಷ್ಟಗಳಿಂದ ಪಾರಾಗಿರುವುದು ತಿಳಿಯುತ್ತದೆ.

ಪ್ರಸಾದದ ಮಹಿಮೆ

ನಿತ್ಯ ಮನೆಮನೆಗೆ ತಿರುಗುತ್ತಿದ್ದ ತಾತನು ರೊಟ್ಟಿ ತಾ, ಬೇಳೆ ತಾ, ಮೊಸರು ತಾ, ಕಡುಬು ತಾ ಎಂದು ಭಕ್ತರನ್ನು ಕೇಳುವುದು ಅಭ್ಯಾಸವಾಗಿತ್ತು. ಇದನ್ನು ನೋಡಿದ ಪರಸ್ಥಳದ ಭಕ್ತನೊಬ್ಬ ವಿವಿಧ ರುಚಿಗಳ ಅಡುಗೆಯನ್ನು ತಂದು, ತಾತ ನಿನಗೆ ಇಷ್ಟವಾಗುವ ಅಡಿಗೆಯನ್ನೆಲ್ಲಾ ತಂದಿರುವೆ ತೆಗೆದುಕೋ ಎನಲು, ಅವನ ಬಿಗುವಿನ ಮಾತನ್ನು ಕೇಳಿದ ತಾತನು ಆತನು ತರದೇ ಬಿಟ್ಟಿದ್ದ ರೊಟ್ಟಿ ಪಲ್ಯವನ್ನು ಕೇಳುತ್ತಾರೆ. ಎಲ್ಲವನ್ನೂ ತಂದು ಅದನ್ನು ಮಾತ್ರ ಬಿಟ್ಟಿದ್ದ ಭಕ್ತನಿಗೆ ತನ್ನ ಅಹಂಕಾರದ ಅರಿವಾಗಿ, ಹೆದರಿ ತಾತನಿಗೆ ವಂದಿಸುತ್ತಾನೆ. ಆತನನ್ನು ತಾತನೇ ಸಮಾಧಾನ ಮಾಡಿ, ತಂದಿರುವ ಎಲ್ಲಾ ಅಡುಗೆಯನ್ನು ಪ್ರಸಾದವೆಂದು ನೆರೆದ ಭಕ್ತರಿಗೆ ಹಂಚಲು ತಿಳಿಸುತ್ತಾರೆ. ಆದರೆ ಅಡಿಗೆ ನೋಡಿದರೆ ಸ್ವಲ್ಪ, ಜನ ನೋಡಿದರೆ ಹೆಚ್ಚು ಹೇಗೆ ಹಂಚುವುದೆಂದು ಚಿಂತಿಸುತ್ತಿರಲು ತಾತನವರು ತನ್ನ ಬೆತ್ತದಿಂದ ಚೀಲವನ್ನು ಸ್ಪರ್ಷಿಸುತ್ತಾರೆ.

ಗುರುವರನ ಹಸ್ತವದು ಸೋಂಕಲು
ವರ ಪ್ರಸಾದವು ವೃದ್ಧಿಯಾಗುತ

[illegible]

[illegible]

[illegible]

[illegible]

[illegible]

[illegible]

[illegible]

ಬರುವ ಜನಸಂದಣಿಗೆ ತೃಪ್ತಿಯು ಭರದಿ ಸಾಗಿರಲೂ ||
ಚಿರ ಪ್ರಸಾದದ ಮಹಿಮೆ ತೋರಿದ
ಗುರುವು ಎಮ್ಮಿಗನೂರು ಜಡೆಯತಿ
ವರನ ಸಮರಾರಿಲ್ಲ ಸಿದ್ಧಪ್ರಸಿದ್ಧನೆಂದು ಜನ ||[೪೫]

ಹೀಗೆ ವಿಧವಿಧವಾಗಿ ತಾತನ ಮಹಿಮೆ ಕಂಡು ಕೊಂಡಾಡಿದ್ದಾರೆ.

ಲಿಂಗದ ಕುರುಹು ತೋರಿದ ಮಹಿಮೆ

ಹಾನಗಲ್ಲ ಕಮಾರಸ್ವಾಮಿಗಳಿಗೆ ಆರೂಢರಂತೆ ತಾವೂ ಇಷ್ಟಲಿಂಗ ಪರಿತ್ಯಾಗ ಮಾಡಬೇಕೆಂಬ ಕುತೂಹಲವು ಮೂಡಿ ಲಿಂಗವನ್ನು ದೇಹದ ಮೇಲೆ ಧರಿಸಬೇಕೋ ಬೇಡವೋ ಎಂಬ ಗೊಂದಲದಲ್ಲಿರುತ್ತಾರೆ. ಹುಬ್ಬಳ್ಳಿಯ ಎರಡೆತ್ತಿನ ಮಠದ ಸ್ವಾಮಿಗಳಲ್ಲಿ ಒಂದು ತಿಂಗಳವರೆಗೆ ಈ ವಿಷಯದ ಬಗ್ಗೆ ಚರ್ಚಿಸಿದರೂ ಸಂಶಯ ದೂರವಾಗಲಿಲ್ಲ. ಅಪರೋಕ್ಷ ಜ್ಞಾನಿಗಳಾದ ಜಡೆಯೋಗಿಗಳಲ್ಲಿ ಈ ಸಂಶಯವನ್ನು ಬಗೆಹರಿಸಿಕೊಳ್ಳಬೇಕೆಂಬ ಸೂಚನೆಯಂತೆ ಕುಮಾರಸ್ವಾಮಿಗಳು ಎಮ್ಮಿಗನೂರಿಗೆ ಬರುತ್ತಾರೆ.

ತಮ್ಮ ಲಿಂಗದರ್ಪಣದ ಮೂಲಕ ಕುಮಾರಸ್ವಾಮಿಗಳ ಆಗಮನವನ್ನರಿತ ತಾತನು 'ನೋಡ್ರಪ್ಪ ನಾಳೆ ಇಲ್ಲಿಗೆ ಒಬ್ಬ ಮಹಾಪುರುಷ ಬರ್ತಾರೆ, ನೆಲಸಾರಣೆಮಾಡಿ, ಶುದ್ಧಗೊಳಿಸಿ' ಎನ್ನುತ್ತಾರೆ. ಅಂತೆಯೆ ಮರುದಿನ ಕುಮಾರಸ್ವಾಮಿಗಳ ಆಗಮನವಾಗುತ್ತದೆ. ಸ್ವಾಮಿಗಳು ಬರುವಾಗ ಭಕ್ತವೃಂದದ ಜೊತೆಯಲ್ಲಿ ಸಿಂಪಿಗರ ಕಟ್ಟೆಯ ಮೇಲೆ ಕುಳಿತಿದ್ದ ತಾತನು, ತಕ್ಷಣ ಪಕ್ಕದಲ್ಲಿದ್ದ ವ್ಯಕ್ತಿಯ ಹೆಗಲ ಮೇಲಿನ ವಸ್ತ್ರ ತೆಗೆದುಕೊಂಡು ಲಿಂಗಾಕಾರದ ಸಜ್ಜಿಕೆಯನ್ನು ಮಾಡಿ ಕೊರಳಲ್ಲಿ ಕಟ್ಟಿಕೊಂಡು ಸ್ವಾಮಿಗಳಿಗೆ ಕೈಜೋಡಿಸಿ ನಿಂತುಕೊಳ್ಳುತ್ತಾರೆ. ಆಗ ತಾತನವರ ಕೊರಳಲ್ಲಿದ್ದ ಲಿಂಗ ಕಂಡು ಸ್ವಾಮಿಗಳಿಗೆ ಸಂಶಯ ನಿವಾರಣೆಯಾಗುತ್ತದೆ. ಲಿಂಗವೇ ಅಂಗ, ಅಂಗವೇ ಲಿಂಗವೆಂಬ ಲಿಂಗಾಂಗ ಸಮರಸ ಭಾವ ಬರುವವರೆಗೆ ಲಿಂಗಧಾರಣೆ ಬೇಕು. ಎಲ್ಲವೂ ಲಿಂಗಮಯವಾಗಿ ಲಿಂಗಾಂಗಿಯಾದ ಲಿಂಗದೇಹಿಯು ಉದಾತ್ತ ಸ್ಥಿತಿಗೇರಿದಾಗ ಬಾಹ್ಯದ ಇಷ್ಟಲಿಂಗಧಾರಣೆ ಅವಶ್ಯವಿಲ್ಲವೆಂಬುದನ್ನು ಸ್ವಾಮಿಗಳು ಅರಿಯುತ್ತಾರೆ.

ತೊಲಗಿತ್ತೈ ಮಹಾಮಹಿಮ ನಿನ್ನಯ
ಚಲುವ ದರ್ಶನದಿಂದ ಮನಸಿನ
ಹೊಲಸು ಹರಿಯಿತು ವೀರಶೈವಾಚರಣೆ ಸ್ಥಿರವಾಯ್ತು ||
ನೆಲಸಿತೆನ್ನಯ ಹೃದಯದೊಳ್ ಮನ
ಮಲತ್ರಯಂಗಳು ದೂರವಾದವು
ವಿಲಸಿತಾನಂದವನು ಪೊಂದಿದೆ ನಿನ್ನ ದರ್ಶನದೀ ||[೪೬]

ಮನದಲ್ಲುಂಟಾದ ಸಂಶಯಗಳು ನಿವಾರಣೆಯಾಗಿ, ನಿಮ್ಮ ದರ್ಶನದಿಂದ ನನ್ನ ಜನ್ಮ ಸಾರ್ಥಕವಾಯಿತು. ನನ್ನ ಉಸಿರಿರುವವರೆಗೂ ನಿಮ್ಮ ಸ್ಮರಣೆಯ ಮರೆಯಲಾರೆನು ಎಂದು ತಾತನವರ ಮಹಿಮೆಯನ್ನು ಹೊಗಳಿ ತಮ್ಮ ತಾಣಕ್ಕೆ ಮರಳುತ್ತಾರೆ.

ತಾತನವರ ಮಹಿಮೆಗಳನ್ನು ಕೇಳಿ ಅವರ ದರ್ಶನಕ್ಕಾಗಿ ಎಮ್ಮಿಗನೂರಿಗೆ ಬರುವವರ ಸಂಖ್ಯೆ ಅಧಿಕವಾಗುತ್ತದೆ. ಬಡವರು, ಶ್ರೀಮಂತರು, ರೋಗಿಗಳು, ಅಂಧರು, ಶರಣರು, ಪಂಡಿತರು, ವ್ಯಾಪಾರಿಗಳು ಹೀಗೆ ಸಮಾಜದ ಎಲ್ಲಾ ವರ್ಗದವರು ಬರುತ್ತಿರುತ್ತಾರೆ. ಯಾವ ಭೇದ-ಭಾವವಿಲ್ಲದೆ ಬಂದವರ ಕಷ್ಟಗಳನ್ನು, ನೋವುಗಳನ್ನು, ತೊಂದರೆಗಳನ್ನು ತಾತ ಪರಿಹರಿಸಿದ್ದಾರೆ.

ಗದುಗಿನ ಶಾಂತಪ್ಪನೆಂಬುವನು ಕುಷ್ಠರೋಗದಿಂದ ಬಳಲುತ್ತಿದ್ದು ಮನೆಯವರಿಂದ, ಬಂಧುಗಳಿಂದ ದೂರ ತಳ್ಳಲ್ಪಟ್ಟಿರುತ್ತಾನೆ. ಯಾವ ವೈದ್ಯರಲ್ಲಿ ತೋರಿಸಿದರೂ ಗುಣವಾಗದಿದ್ದಾಗ ತಾತನ ಮಠಕ್ಕೆ ಬಂದು ತಾತನ ಮತ್ತು ಮಠದ ಸೇವೆ ಮಾಡುತ್ತಾನೆ. ಆತನ ಮೇಲೆ ಕರುಣೆ ತೋರಿದ ತಾತನು ಕೂಡಲೇ ಹಿಡಿಕೆ ತುಂಬ ಕಣಕ ಮುದ್ದೆಯ ತರಿಸಿ ತಿನ್ನಲು ಕೊಟ್ಟು ಆಶೀರ್ವದಿಸುತ್ತಾರೆ. ಅಂದಿನಿಂದ ಕ್ರಮೇಣ ರೋಗದಿಂದ ಗುಣಮುಖನಾಗದ ಶಾಂತಪ್ಪನು ಗದುಗಿಗೆ ಬರುವಂತೆ ತಾತನಲ್ಲಿ ಬಿನ್ನಹ ಮಾಡಿದ್ದರಿಂದ ಬರುವುದಾಗಿ ತಿಳಿಸುತ್ತಾರೆ. ಇಳಿ ವಯಸ್ಸಿನ ತಾತನು ಎಮ್ಮಿಗನೂರನ್ನು ಬಿಡಬಾರದೆಂದು ಊರ ಮುಖಂಡ ದೊಡ್ಡನಗೌಡರು ನಿರ್ಬಂಧ ವಿಧಿಸಿದ್ದರಿಂದ ಊರನ್ನು ಬಿಡುವ ಹಾಗಿರಲಿಲ್ಲ. ಅತ್ತ ಗದುಗಿನಲ್ಲಿ ಗಣಾರಾಧನೆ ಹಮ್ಮಿಕೊಂಡಿದ್ದ ಶಾಂತಪ್ಪ ತಾತನನ್ನು ಕಾಯುತ್ತಿರುತ್ತಾನೆ. ಎಷ್ಟೊತ್ತಾದರೂ ಬರದೇ ಇದ್ದ ತಾತನನ್ನು ಸ್ಮರಿಸುತ್ತಾ ನೆರೆದವರೆಲ್ಲಾ ಪ್ರಸಾದ ಸ್ವೀಕರಿಸಲು ಜಯಘೋಷ ಮಾಡುವ ವೇಳೆಗೆ ತಾತನು ಕೋಲೂರುತ್ತಾ ಬಂದು ಪ್ರಸಾದ ಸ್ವೀಕರಿಸಿ, ಭಕ್ತರಿಗೆ ಆಶೀರ್ವದಿಸುತ್ತಾರೆ. ಹಾಗೆಯೇ ಇತ್ತ ಭಕ್ತವೃಂದದ ಮಧ್ಯೆ ಎಮ್ಮಿಗನೂರಿನಲ್ಲಿಯೂ ಇದ್ದರಂತೆ. ಹೀಗೆ ಏಕ ಕಾಲದಲ್ಲಿ ಎರಡೂ ಕಡೆ ದರ್ಶನವಿತ್ತ ಮಹಾನುಭಾವರಿವರೆಂದು ಭಕ್ತರು ತಿಳಿಸುತ್ತಾರೆ.

ಗ್ರಾಮದ ಚನ್ನಯ್ಯಸ್ವಾಮಿಯ ಮನೆಯಲ್ಲಿ ಹಾಲು ಕೇಳಲು, ಹಾಲನ್ನು ಕೊಡದೆ ತಾತನನ್ನು ನಿಂದಿಸಿದ ಫಲವಾಗಿ ಹಾಲು ಕರೆವ ಎಮ್ಮೆಗಳೆಲ್ಲಾ ಬರಡಾಗಿರುವುದು ಇಂದಿಗೂ ಸತ್ಯವಾಗಿದೆ.

ಜಾತಿ ಭೇದಗಳಿಲ್ಲದೆ, ಮೇಲು-ಕೀಳುಗಳೆಂಬ ತಾರತಮ್ಯವಿಲ್ಲದೆ, ಎಲ್ಲಾ ಕೇರಿಗೂ, ಎಲ್ಲಾ ವರ್ಗದ ಮನೆಗಳಿಗೂ, ತೆರಳುತ್ತಿದ್ದರು. ಸಮಾಜದ ಅನಿಷ್ಟವಾಗಿರುವ ಅಸ್ಪೃಶ್ಯತಾ ನಿವಾರಣೆ, ಸರ್ವಧರ್ಮ ಸಮಾನತೆ, ಸಕಲ ಪ್ರಾಣಿಗಳಲ್ಲಿ ದಯೆ, ಸಮಾಜದ ದುಶ್ಚಟಗಳಾದ ಮಾಂಸ-ಮದ್ಯ ಕುಡಿಯದಂತೆ ನೀತಿಬೋಧನೆ, ಕಾಯಕದ ಮಹತ್ವ, ಗಿಡ-ಮರ ಬೆಳೆಸುವ ಪರಿಸರ ಕಾಳಜಿ ಮತ್ತು ರಕ್ಷಣೆ ಇವೇ ಮೊದಲಾದ ಮಾನವೀಯ ತತ್ವಗಳನ್ನು ಅದಕ್ಕಾಗಿ ಕೆಲವೊಮ್ಮೆ ಕ್ರಾಂತಿಕಾರಿ ಘಟನೆಗಳನ್ನು ಜರುಗಿಸುವ ಮೂಲಕ ಸಮಾಜದ ಏಳ್ಗೆಗೆ ಶ್ರಮಿಸಿದ ಮಹಾ ಮಾನವತಾವಾದಿಯಾಗಿ ಬಾಳಿದ್ದಾರೆ.

ಅಂತ್ಯ

ನಿತ್ಯವೂ ಎಮ್ಮಿಗನೂರಿಗೆ ಬರುವ ಭಕ್ತರ ಸಂಖ್ಯೆ ಅಧಿಕವಾಗುತಿತ್ತು. ಪುತ್ರಾಪೇಕ್ಷಿಗಳು, ರೋಗಿಗಳು, ದರಿದ್ರರು, ವಿವಾಹವಾಗಲಿಚ್ಛಿಸುವವರು, ಗ್ರಹಬಾಧೆಯಿಂದ ನರಳುವವರು, ಹೀಗೆ ಹಲವಾರು ಜನ ಬಂದು ದರ್ಶನಾಶೀರ್ವಾದಗಳನ್ನು ಹೊಂದಿ ತಮ್ಮ ಸಂಕಲ್ಪಗಳನ್ನು ನೆರವೇರಿಸಿಕೊಳ್ಳುತ್ತಿದ್ದರು. ಬಂದ ಭಕ್ತರಲ್ಲಿ ದೇವ್ರೆಡ್ಡಿಗೌಡನನ್ನು ತಾತನು ತನ್ನ ಅಂತ್ಯಕಾರ್ಯಕ್ಕೆ ಭೂಮಿಯನ್ನು ಕೇಳಲು, ಅದಕ್ಕೆ ಗೌಡನು ತಾನು ತಂದಿರುವ ಕಾಯಿಪಲ್ಯೆಗಳ ಹೆಸರು ಹೇಳಿದರೆ ಕೊಡುವೆನೆನಲು, ಅದರಂತೆ ಆತ ತಂದಿರುವ ಎಲ್ಲಾ

ಕಾಯಿಪಲ್ಯೆಗಳ ಹೆಸರನ್ನು ತಾತನು ಹೇಳಿದ್ದಾರೆ. ಮಾತಿನಂತೆ ಊರಮುಂದಿನ ಭೂಮಿಯನ್ನು ಗೌಡನು ತಾತನಿಗೆ ದಾನ ಮಾಡುತ್ತಾನೆ. ತನ್ನ ಅಂತ್ಯ ಕಾಲದಲ್ಲಿ ತಾತನು,

ಮಳೆಯೊಳಗೆ ಛಳಿಯೊಳಗೆ ಉರಿಬಿಸಿ
ಲೊಳಗೆ ತಿರುಗುವ ಬರಿಯಗಾಲಲಿ
ಬಲುಹರುಕು ಮಲಿನಾದ ವಸ್ತ್ರಗಳನು ಎಳೆಯುತಲೀ ||
ತುಳಿಯುತಲಿ ಕಲ್ಮುಳ್ಳುಗಳನಿವ
ನಳುಕದಲೆ ಧೃತಿಗೆಡದೆ ತಿರುಗುವ
ಚಲುವ ಜಡೆ ಶಿವಯೋಗಿ ಶಿವಸಿಂಪಿಗರ ಕಟ್ಟೆಯೊಳು[೪೭]

ನೆಲವೇ ಹಾಸಿಗೆಯಾಗಿ, ಅಂಬರವೇ ಹೊದಿಕೆಯಾಗಿ, ಜಡೆಗಟ್ಟಿದ ಕೇಶವೇ ದಿಂಬಾಗಿ ಮಲಗಿರುತ್ತಿದ್ದನು. ಎಚ್ಚರವಾದಾಗ ಬಾಹ್ಯವ ಮರೆತು ಧ್ಯಾನದಲ್ಲಿರುತ್ತಿದ್ದನು. ಜಾಗ್ರತೆಯಲ್ಲಿದ್ದಾಗ ಊರ ಪ್ರಮುಖರ ಕರೆಸಿ ನನಗೆ ಇಳಿ ವಯಸ್ಸಾಯಿತು. ಇನ್ನೊಂದು ತಿಂಗಳು ಮಾತ್ರ ನಾನಿರುವೆ ನೀವೆಲ್ಲಾ ಆ ದೈವವ ನಂಬಿ ಜೀವನ ಸಾಗಿಸಿ-ಎಂದು ಹೇಳುತ್ತಾರೆ. ಈ ವಿಷಯ ನಾಡಿನಾದ್ಯಂತ ಹರಡಿ ಜನ ಭಯ-ಭಕ್ತಿಯಿಂದ ಕುತೂಹಲಿಗಳಾಗಿ ತಂಡೋಪತಂಡವಾಗಿ ಆಗಮಿಸುತ್ತಾರೆ. ತಾತನ ಜೊತೆಗಾರರಾಗಿದ್ದ ಸಿಂಧಿಗೇರಿ ಮಲ್ಲಪ್ಪ ತಾತ, ಕೊರ್ಲಗುಂದಿ ಸೂರಪ್ಪ, ರಾಂಪುರದ ಶರಣತಾತಪ್ಪ, ಹಂದ್ಯಾಳು ಬಗ್ಗೂರಪ್ಪ, ದಮ್ಮೂರು ವೀರಮ್ಮ ಮುಂತಾದ ಶರಣರು ಆಗಮಿಸುತ್ತಾರೆ. ಮೆಟ್ರಿ, ಮುದ್ದಾಪುರ, ಕಾಕ್ಬಾಳು ಭಕ್ತರು ಬಂದು ತಾತನ ಪಾದವಿಡಿದು ನಮ್ಮಯ ಗ್ರಾಮಗಳನ್ನು ಉದ್ಧಾರ ಮಾಡಬೇಕೆಂದು ಬೇಡಿಕೊಳ್ಳುತ್ತಾರೆ. ಭಕ್ತರ ಅಪೇಕ್ಷೆಯಂತೆ ತಾತನು ಬರುವೆ ನಿಮ್ಮಯ ಗ್ರಾಮಕ್ಕೆ ಇದು ಸತ್ಯ ಎಂದು ಕರುಣಾದೃಷ್ಟಿಯಿಂದ ಕೈಮಾಡುತ್ತಾ ಎಲ್ಲರನ್ನು ಆಶೀರ್ವದಿಸುತ್ತಾರೆ. ಹಾಗೆಯೇ ಸಮಾಧಿ ಸ್ಥಿತಿಯಲ್ಲಿದ್ದು ಭಕ್ತರು ಮಾಡುವ ಭಜನೆ ಕೇಳುತ್ತಾ ಪರವಶರಾಗಿ, ಶಾರ್ವರಿ ಸಂವತ್ಸರ ಮಾರ್ಗಶಿರ ಶುದ್ಧ ಪಂಚಮಿ ೧೮೭೭ರಂದು ದೇಹತ್ಯಾಗ ಮಾಡಲು ಅವರ ಬಯಕೆಯಂತೆ ಭಕ್ತರೆಲ್ಲಾ ಸೇರಿ ದಾನವಾಗಿ ನೀಡಿದ್ದ ಭೂಮಿಯಲ್ಲಿ ಸಂಸ್ಕಾರ ಕ್ರಿಯೆಗಳನ್ನು ವಿಧಿವತ್ತಾಗಿ ನೆರವೇರಿಸಿದ್ದರೆ. ಮುಂದೆ ಭಕ್ತರು ಕೊಟ್ಟ ಭೂಮಿ, ಧನ ಧಾನ್ಯಗಳ ಸಹಾಯದಿಂದ ಗದ್ದುಗೆಯ ಮೇಲೆ ಭವ್ಯಾಕೃತಿಯ ಮಂಟಪವನ್ನು ಶಿಲಾಮೂರ್ತಿಯನ್ನು ಕಟ್ಟಿಸಿರುತ್ತಾರೆ.

ತಾತನವರ ಪ್ರೇರಣೆಯಂತೆ ತದ್ವಂಶೀಯರಾದ ಮಹದೇವಯ್ಯ ತಾತ ಮತ್ತು ಶಿವಲಿಂಗಸ್ವಾಮಿಯವರಿಂದ ಮೆಟ್ರಿ, ಹಂದ್ಯಾಳು, ಕಾಕುಬಾಳು ಈ ಮೂರು ಗ್ರಾಮಗಳಲ್ಲಿ ಅವರ ಸ್ಮರಣಾರ್ಥ ಪ್ರಣವ ಜ್ಯೋತಿಯನ್ನು ಸ್ಥಾಪಿಸಲಾಗಿದೆ.

೪. ೩. ದಮ್ಮೂರು ವೆಂಕಾವಧೂತ

ಅಸಹಾಯಕತೆ, ಅಶಾಂತಿ, ಅತೃಪ್ತಿ, ಬಡತನಗಳಿಂದ ಜೀವನದ ಬಗ್ಗೆ ಬೇಸರವಾಗಿ, ಲೌಕಿಕ ಬಂಧನವನ್ನು ತೊರೆದು, ಸಾಧನೆಯ ಸಿದ್ಧಿಯಿಂದ ಅವಧೂತನಾಗಿ ಅವತರಿಸಿದ ದಮ್ಮೂರು ವೆಂಕಾವಧೂತರ ಜೀವನ ಚರಿತ್ರೆ, ಆಧುನಿಕ ಜಗತ್ತಿಗೆ ಆಶ್ಚರ್ಯ ಮೂಡಿಸುವಂಥದ್ದು. ಸಂಸಾರಿಯಾಗಿ, ಸಾಧುವಾಗಿ, ಸಂತನಾಗಿ,

[illegible]

ಸಿದ್ಧನಾಗಿ, ಭಕ್ತಿ-ಜ್ಞಾನ ವೈರಾಗ್ಯದಲ್ಲಿ ತಲ್ಲೀನನಾಗಿ, ಯೋಗಮಾರ್ಗದ ಅವಧೂತನಾಗಿ, ತನ್ನನ್ನು ಶ್ರದ್ಧಾ ಭಕ್ತಿಯಿಂದ ನಂಬಿದ ಶುದ್ಧಮನಸ್ಸಿನ ಭಕ್ತರಿಗೆ ಕೃಪೆತೋರಿ ಭಕ್ತಿಯಿಂದ ಸಕಲವೂ ಸಾಧ್ಯವೆಂದು ಸಾರಿದವರು. ವೆಂಕಪ್ಪನ ಜೀವನದಲ್ಲಿ ಘಟಿಸಿದ ಘಟನೆಗಳೇ ಅವರ ಬಗ್ಗೆ ಭಕ್ತಿ ಗೌರವ ಮೂಡಿಸುತ್ತವೆ. ದಿನದಿಂದ ದಿನಕ್ಕೆ ಅಪಾರಭಕ್ತ ಜನತೆಯನ್ನು ತನ್ನೆಡೆಗೆ ಸೆಳೆದುಕೊಳ್ಳುತ್ತಿರುವ ದಮ್ಮೂರ ವೆಂಕಾವಧೂತರ ಮಠವು ನಿತ್ಯವೂ ಯಾತ್ರಾಸ್ಥಳವಾಗಿದೆ. ಮಠದಲ್ಲಿ ನಡೆಯುವ ಪೂಜೆ, ಆಚರಣೆ, ಜಾತ್ರೆ, ಉತ್ಸವ, ಮದುವೆ ಕಾರ್ಯಗಳು, ಇಂಥ ಕಾರ್ಯಗಳಿಗೆ ವರ್ಣ, ವರ್ಗ, ಲಿಂಗಭೇದ ಮರೆತು ಎಲ್ಲೆಲ್ಲಿಂದಲೋ ಆಗಮಿಸುತ್ತಿರುವ ಅಪಾರ ಭಕ್ತ ಜನತೆ, ಇವೆಲ್ಲವೂ ವೆಂಕಾವಧೂತರ ಮೇಲಿನ ಭಕ್ತಿಯನ್ನು ಆರಾಧನಾ ಮನೋಭಾವನೆಯನ್ನು ವೃದ್ಧಿಗೊಳಿಸುತ್ತವೆ. ಭಕ್ತರ ಇಷ್ಟಾರ್ಥವನ್ನು ನೆರವೇರಿಸುವ ಸಾಧುವಾದಾಗ, ಯಂಕಪ್ಪ ಅಥವಾ ವೆಂಕಪ್ಪನನ್ನು ಪ್ರೀತಿ ಮತ್ತು ಭಕ್ತಿಯಿಂದ ಯಂಕಪ್ಪ "ತಾತಾ" ಎಂದು ಕರೆಯಲಾರಂಭಿಸಿದ್ದಾರೆ.

ವೆಂಕಪ್ಪತಾತನನ್ನು, ಅವರ ಯೋಗದ ಸಾಧನೆಯ ಸಿದ್ಧಿ ಮಾರ್ಗವನ್ನು ನೋಡಿದವರು ಇಂದಿಗೂ ಅನೇಕ ಮಂದಿ ಇದ್ದಾರೆ. ಕ್ಷೇತ್ರಕಾರ್ಯದಲ್ಲಿ ಅವರಿಂದ ದೊರೆತ ಮಾಹಿತಿಯ ಜೊತೆಗೆ ಅವರ ಚರಿತ್ರೆ, ಪುರಾಣಗಳನ್ನು ಆಧಾರವಾಗಿಟ್ಟುಕೊಂಡು ವೆಂಕಪ್ಪ ತಾತನವರ ಜೀವನ ಚರಿತ್ರೆಯನ್ನು ಈ ರೀತಿ ಸಂಗ್ರಹಿಸಬಹುದಾಗಿದೆ.

ಬಳ್ಳಾರಿ ಜಿಲ್ಲೆಯ ಒಂದು ಕುಗ್ರಾಮ ದೇವಲಾಪುರ. ಅಲ್ಲಿ ಯಾದವ ಮತದ ಬಡ ರೈತ ಕುಟುಂಬದ ನರಸಿಂಹಪ್ಪ ಮತ್ತು ಮಂಗಮ್ಮ ಎಂಬ ದಂಪತಿಗಳ ಮಗನೇ ವೆಂಕಪ್ಪನು. ಮಳೆ ಬೆಳೆಯನ್ನೇ ನಂಬಿ ಜೀವನ ಸಾಗಿಸುತ್ತಿದ್ದ ಈ ಕುಟುಂಬಕ್ಕೆ ಬದುಕು ಕಡು ಕಷ್ಟ. ಈವರೆಗೆ ಓದು ಬರಹ ಕಲಿಯದ ಕುಟುಂಬ. ಮಕ್ಕಳಾದರೂ ಅಕ್ಷರ ಜ್ಞಾನ ಕಲಿಯಲಿ ಎಂದರೆ ಬಡತನ. ಆದರೂ ವೆಂಕಪ್ಪನನ್ನು ಓದಲಿ, ಬರೆಯಲಿ ಎಂದು ಶಾಲೆಗೆ ಕಳಿಸುತ್ತಾರೆ. ಆದರೆ ವೆಂಕಪ್ಪನ ಬಾಲ್ಯ ಸ್ವಭಾವವೇ ವಿಚಿತ್ರ. ಶಾಲೆಯಲ್ಲಿ ಯಾರೊಂದಿಗೂ ಬೆರೆಯದೆ, ಮಾತನಾಡದೆ, ಏಕಾಂಗಿಯಾಗಿದ್ದು ಧ್ಯಾನ ಮಾಡುವವನಂತೆ ಮೌನಿಯಾಗಿರುತ್ತಿದ್ದ. ಶಾಲೆಗೆ ಹೋಗದೆ ಮನೆಯಲ್ಲಿದ್ದಾಗಲೂ ಸಹ ಯಾರೊಂದಿಗೂ ಮಾತಿಲ್ಲ. ಒಂಟಿಯಾಗಿ ಕುಳಿತು ಬಯಲನ್ನು ವೀಕ್ಷಿಸುತ್ತಿದ್ದ. ಅಕ್ಷರ ಕಲಿಯದಿದ್ದರೇನು, ಮೌನವಾಗಿದ್ದರೇನು, ಹೊಲ, ಮನೆಯ ಕೆಲಸಗಳಲ್ಲಿ ಆಸಕ್ತಿ ತೋರಿಸುತ್ತಾ ದನ, ಕುರಿಗಳನ್ನು ಕಾಯುತ್ತಾ ಮನೆಯವರಿಗೆ ದುಡಿಯುವುದರಲ್ಲಿ ಸಹಾಯ ಮಾಡುತ್ತಿರುತ್ತಿದ್ದನು. ಬಡತನ ದುಡಿಯಲೇಬೇಕು. ಮನೆಯ ಹಿರಿಯರು ಉತ್ತಿ-ಬಿತ್ತಿ ಬೆಳೆಯುತ್ತಿದ್ದ ಸ್ವಲ್ಪ ಭೂಮಿಯನ್ನೇ ಹಸನು ಮಾಡಿ, ದವಸ-ಧಾನ್ಯ ಬೆಳೆಯುತ್ತಿದ್ದರು. ವಯಸ್ಸಿಗೆ ಬಂದ ವೆಂಕಪ್ಪನು ಇರೋ ಭೂಮಿಯಲ್ಲೇ ಕೃಷಿಮಾಡಿ, ಮನೆಯವರನ್ನು ಸಾಕುವುದರ ಜೊತೆಗೆ, ಬಡವರಿಗೆ, ಹಸಿದವರಿಗೆ, ನೊಂದವರಿಗೆ ಇರುವುದರಲ್ಲೇ ದಾನ ಮಾಡುತ್ತಿರುತ್ತಾನೆ. ಮನೆಯಲ್ಲಿ ಬಡತನವಿದ್ದರೂ ಮತ್ತೊಬ್ಬರ ಬಡತನ ಕಂಡು ಕನಿಕರ ಪಡುವ ವ್ಯಕ್ತಿತ್ವ ವೆಂಕಪ್ಪನದು. ಪರೋಪಕಾರಿಯೂ, ದಯಾಮಯನೂ ಆಗಿದ್ದ ವೆಂಕ್ಕಪ್ಪನನ್ನು ಊರಿನ ಜನತೆ ಪ್ರೀತಿ ಗೌರವದಿಂದ ಕಾಣುತ್ತಿದ್ದರು.

ದೇವಲಾಪುರದವರು ಮೀತನ
ಭಾವನೆಯ ತಾವ್ಕಂಡು ಪರಮನ
ಸಾತಿಶಯ ಸತ್ಕೃಪೆಯೊಳಿವನಂ ಪಡೆದವರು ಪಿಂದೆ ||

ಓತು ಪುಣ್ಯವಗೈದ ಫಲವೆಂ
ದೀತರದಿ ಹಿರಿಕಿರಿಯರೆಲ್ಲರೂ
ಪ್ರೀತಿಯಿಂ ಮಾತಾಡುತಿರ್ದರಭೇದ ಭಾವದಲ್ಲಿ[೪೮]

ಸರ್ವ ಜೀವಿಗಳಲ್ಲೂ ಲೇಸನ್ನು ಬಯಸುವುದೇ ಸದ್ಧರ್ಮ ಎಂಬ ಸ್ವಭಾವವನ್ನು ಹೊಂದಿ ಪಶು-ಪಕ್ಷಿಗಳಲ್ಲೂ ದಯಾಪರನಾಗಿದ್ದನು.

ವೈವಾಹಿಕ ಸಂಬಂಧ : ಯಂಕಪ್ಪನು ಪ್ರೌಢಾವಸ್ಥೆಗೆ ಬಂದಾಗ ತಂದೆ ತಾಯಿಗಳು ಮದುವೆ ಮಾಡಲು ತೀರ್ಮಾನಿಸಿ, ಕನ್ಯಾನ್ವೇಷಣೆ ಮಾಡುತ್ತಾರೆ. ಸಂಸಾರ ಬಂಧನವನ್ನು ಇಷ್ಟಪಡದ ವೆಂಕಪ್ಪನು ಮದುವೆ ಪ್ರಸ್ತಾಪವನ್ನು ತಿರಸ್ಕರಿಸುತ್ತಾನೆ. ಜೊತೆಗೆ ವೆಂಕಪ್ಪನು ಜಡ ಬುದ್ಧಿಯವನೆಂದೂ, ವಿವೇಕರಹಿತನೆಂದೂ ಕೆಲವರು ಹೆಣ್ಣುಕೊಡಲು ಹಿಂಜರಿಯುತ್ತಾರೆ. ಕೊನೆಗೆ ತಂದೆ ತಾಯಿಗಳ ಒತ್ತಾಯಕ್ಕೆ ಮಣಿದು ಮನಸ್ಸಿಲ್ಲ ದಿದ್ದರೂ ಮದುವೆಗೆ ಒಪ್ಪಿಕೊಳ್ಳುತ್ತಾನೆ. ಅದರಂತೆ ಬಳ್ಳಾರಿ ಜಿಲ್ಲೆಯ ಕೋಳೂರು ಗ್ರಾಮದ ತೊದಲಪ್ಪನ ಮಗಳಾದ ಹನುಮಂತಮ್ಮಳನ್ನು ಮದುವೆಯಾಗಿರುವುದು ತಿಳಿಯುತ್ತದೆ. ಕೃಷಿಕ ಜೀವನ ಸಾಗಿಸುತ್ತಾ ಸಂಸಾರಿಗನಾದ ವೆಂಕಪ್ಪನಿಗೆ ಕ್ರಮೇಣ ಆರು ಜನ ಪುತ್ರ-ಪುತ್ರಿಯರು ಜನಿಸುತ್ತಾರೆ. ಕುಟುಂಬದ ಜನಸಂಖ್ಯೆ ಬೆಳೆದಂತೆ ಸಂಸಾರದ ಖರ್ಚು-ವೆಚ್ಚಗಳು ಹೆಚ್ಚಾಗಿ ಮನೆಗೆ ಬರುವ ಆದಾಯವೇ ಇಲ್ಲದಂತಾಗುತ್ತದೆ. ಬಡತನದ ಬವಣೆ ಹೆಚ್ಚಾಗಿ ಜೀವನ ಬೇಸರವಾಗುತ್ತದೆ. ಇದ್ದ ಹೊಲ-ಮನೆಗಳೂ ಸಾಲದವರ ಪಾಲಾಗುತ್ತವೆ. ಇಂಥ ಸಂಕಷ್ಟ ಪರಿಸ್ಥಿತಿಯಲ್ಲಿ ಮಾವನ ಸಹಾಯದಿಂದ ಎಲ್ಲರೂ ಕೋಳೂರು ಸೇರುತ್ತಾರೆ. ತನ್ನ ಅಸಹಾಯಕತೆ ಬಗ್ಗೆ ಮನಸ್ಸಿನಲ್ಲೇ ವೇದನೆ ಅನುಭವಿಸುತ್ತಿದ್ದು, ಯಾರ ಹತ್ತಿರವೂ ತನ್ನ ಅಳಲನ್ನು ಹೇಳಿಕೊಳ್ಳಲಾಗದೆ ತನ್ನಲ್ಲೇ ನಾನಾ ರೀತಿಯ ಪ್ರಶ್ನೆಗಳನ್ನು ಹಾಕಿಕೊಳ್ಳುತ್ತಾ, ಉತ್ತರಕ್ಕಾಗಿ ಆತ್ಮಶೋಧನೆ ಮಾಡಿಕೊಳ್ಳಲಾರಂಭಿಸಿದನು. ಮಾವನ ಮನೆಯಲ್ಲಿದ್ದರೂ ತನ್ನ ಸ್ವಭಾವದಲ್ಲಿ, ವರ್ತನೆಯಲ್ಲಿ ಬದಲಾವಣೆಯಾಗದ ವೆಂಕಪ್ಪನು ಇನ್ನೊಬ್ಬರ ಕಷ್ಟ-ಸುಖದಲ್ಲಿ, ನೋವು-ನಲಿವುಗಳಲ್ಲಿ ಭಾಗಿಯಾಗುತ್ತಿದ್ದನು. ಈ ವರ್ತನೆಯಿಂದ ಬೇಸತ್ತ ಹೆಂಡತಿ ಮಕ್ಕಳು ವೆಂಕಪ್ಪನನ್ನು ನಿಂದಿಸುತ್ತಾರೆ. ಬಡತನ, ಅಸಹಾಯಕತೆ, ಮಾನಸಿಕ ಅತೃಪ್ತಿ, ಅಶಾಂತಿ ಜೊತೆಗೆ ತನ್ನವರಿಂದಲೇ ನಿಂದನೆಯ ಮಾತುಗಳು. ಇವುಗಳ ಒತ್ತಡದಿಂದ ಮಾನಸಿಕ ಹಿಂಸೆ ಅನುಭವಿಸುತ್ತಾ ಜೀವನದ ಬಗ್ಗೆ ಜಿಗುಪ್ಸೆ ಮೂಡಿ ವೈರಾಗ್ಯ ಬೆಳೆಯಲಾರಂಭಿಸುತ್ತದೆ. ಮಾನಸಿಕ ಸಂಘರ್ಷದಿಂದ ಹೊರ ಬರಬೇಕೆಂದು, ಯಾರ ಹಂಗಿಲ್ಲದೆ ಏಕಾಂಗಿಯಾಗಿ, ನೆಮ್ಮದಿಯಾಗಿರಬೇಕೆಂದು ಮನಸ್ಸಿನಲ್ಲೆ ನಿರ್ಧರಿಸುತ್ತಾನೆ.

ವೆಂಕಪ್ಪನಲ್ಲಿ ಮೂಡಿದ ಈ ವೈರಾಗ್ಯಕ್ಕೆ ಪೂರಕವೆಂಬಂತೆ ಒಂದು ಘಟನೆ ನಡೆದಿದೆ. ಒಮ್ಮೆ ಕೆಲಭಕ್ತರ ಜೊತೆಯಲ್ಲಿ ಹಂಪಿಯ ವಿರೂಪಾಕ್ಷೇಶ್ವರ ಜಾತ್ರೆಗೆ ಹೋಗಿ ಬರುವಾಗ ಮಾರ್ಗ ಮಧ್ಯದ ಮಾವಿನ ತೋಪಿನಲ್ಲಿ ಎಲ್ಲರೂ ವಿಶ್ರಮಿಸುತ್ತಿರುತ್ತಾರೆ. ಆ ಗುಂಪಿನಲ್ಲಿದ್ದ ಬಸವಪ್ಪಸ್ವಾಮಿಯು ಶಿವಪೂಜೆಗೆಂದು ವಿಭೂತಿ ಧರಿಸುವುದನ್ನು ಕಂಡ ವೆಂಕಪ್ಪನು, ತನಗೂ ವಿಭೂತಿಯನ್ನು, ಪೂಜೆಯ ವಿಧಾನವನ್ನು ಕಲಿಸಬೇಕೆಂದು ಕೇಳುತ್ತಾನೆ. ಅದಕ್ಕೆ ಆ ಸ್ವಾಮಿಯು ವೆಂಕಪ್ಪನನ್ನು ನಿಂದಿಸುತ್ತಾನೆ.

ಭವಿಗಳ್ಳೆ ನಿಮಗೆಂತು ಭಕ್ತಿಯು
ಸವನಿಪುದು ಶಿವಪದದಿ ಕಡೆಗಾ
ಜವನ ಲೋಕದಿ ಬೆಂದು ಕುಂದುವುದೆಂತು ತಪ್ಪುವುದು ।
ಭವಹರನ ದೀಕ್ಷೆಯಲಿ ಚಿನ್ಮಯ
ಶಿವಮತವನಾಂತವಗೆ ಭಸಿತವು
ಜವನ ಬಾಧೆಯನಳಿದು ತೋರ್ಪುದು ಶಿವಪದವನದರಿಂ ॥೬೯

ಭಸಿತವ ಕೊಡದೆ ನಿರಾಕರಿಸಿದ್ದರಿಂದ "ನಾನೇಕೆ ಅದನ್ನು ಪಡೆಯ ಬಾರದು" ಎಂಬ ಬಯಕೆ ಮೂಡುತ್ತದೆ. ಬಡತನ, ಮನೆಯಲ್ಲಿ ಕಿರಿಕಿರಿ, ಅತೃಪ್ತಿ, ಜಿಗುಪ್ಸೆಗಳಿಂದ ನೊಂದ ವೆಂಕಪ್ಪನಿಗೆ 'ಭಸಿತವ' ಪಡೆಯುವ ಆಸೆ ಯಾಗುತ್ತದೆ. ಆದಷ್ಟು ಬೇಗ ಬಂಧನದಿಂದ ಬಿಡುಗಡೆಯಾಗಿ, ಅವ್ಯಕ್ತವಾದ ಆನಂದವನ್ನು, ನೆಮ್ಮದಿ ಯನ್ನು ಪಡೆಯಬೇಕೆಂದು ನಿರ್ಧರಿಸುತ್ತಾನೆ. ಹೀಗೆ ಲೋಕ ವ್ಯವಹಾರದಿಂದ ನೊಂದು ಬೆಂದಿದ್ದ ವೆಂಕಪ್ಪನಿಗೆ ಆತ್ಮ ಸುಖದ, ನಿಜಾನಂದದ, ಆಧ್ಯಾತ್ಮದ ಕಡೆ ಮನಸ್ಸು ಸೆಳೆಯುತ್ತದೆ. ಅರಿವಿನ ಆನಂದವನ್ನು ತೋರಲು ಗುರು ಬೇಕು, ಗುರುವಿಲ್ಲದೆ ಗುರಿ ಮುಟ್ಟಲು ಸಾಧ್ಯವಿಲ್ಲವೆಂದು ಗುರುವನ್ನು ಅರಸಲು ಸಿದ್ಧನಾಗುತ್ತಾನೆ.

ಗುರುಶೋಧ : ಈಗಿನ ಆಂಧ್ರ ಪ್ರದೇಶದ ಆದವಾನಿ ತಾಲೂಕಿಗೆ ಸೇರಿದ ಒಂದು ಹಳ್ಳಿ ರೌಡೂರು. ಅತ್ಯಂತ ಹಿಂದುಳಿದ ಮತ್ತು ಚಿಕ್ಕ ಹಳ್ಳಿಯಾದರೂ ಹೆಚ್ಚು ರಾಜಕೀಯ ಚಟುವಟಿಕೆಯಿಂದ ಕೂಡಿರುವ ಗ್ರಾಮ. ಈ ಹಳ್ಳಿಯ ಗೌಡಿಕೆ ಮಾಡಿಕೊಂಡಿದ್ದ ಅಣ್ಣಾಜಿ ಗೌಡರು, ಜೀವನದಲ್ಲಿ ಘಟಿಸಿದ ಕೆಲವಾರು ಘಟನೆಗಳಿಂದ ಜಿಗುಪ್ಸೆಹೊಂದಿ, ಮಾನಸಿಕ ಪರಿವರ್ತನೆಯಿಂದ ವೈರಾಗ್ಯ ತಾಳಿರುತ್ತಾರೆ. ಲೋಕಬಂಧನವನ್ನು ತ್ಯಾಗ ಮಾಡಿ ಯೋಗಮಾರ್ಗವನ್ನನುಸರಿಸಿ, ಅವಧೂತ ಸ್ಥಿತಿಯನ್ನು ತಲುಪಿ, 'ಅಣ್ಣಾಜಿ ಅವಧೂತ'ರೆಂದು ಹೆಸರು ಪಡೆದಿರುತ್ತಾರೆ. ಹಠಯೋಗದಂತಹ ಯೋಗಸಾಧನೆಯಿಂದ ಇಂದ್ರಿಯಗಳನ್ನು ಬಂಧಿಸಿ, ವೃತ್ತಿಗಳನ್ನು ತಿರುಗಿಸಿ, ಚಿತ್ತದ ಚಾಂಚಲ್ಯವನ್ನು ಬಿಡಿಸಿ, ನಿರ್ವಾತ ದೀಪದಂತೆ ಪ್ರಜ್ವಲವಾಗಿ, ಸಮಾಧಿಸ್ಥಿತಿಯಲ್ಲಿ ಸೇರಿ ಗುರುಪದವಿ ಪಡೆದಿರುತ್ತಾರೆ. ತತ್ವಜ್ಞಾನ ಬಯಸಿ ಬರುವ, ಜ್ಞಾನಜಿಜ್ಞಾಸುಗಳ ಮಾನಸಿಕ ಸ್ಥಿತಿಯನ್ನು ಪರೀಕ್ಷಿಸಿ, ಸಮಾಧಾನವಾದ ಮೇಲೆ ವಿವೇಕ, ವೈರಾಗ್ಯ, ಶಮೆ, ದಮೆ, ಉಪರತಿ, ತಿತಿಕ್ಷೆ, ಸಮಾಧಾನ, ಶ್ರದ್ಧೆ ಮತ್ತು ಮುಮುಕ್ಷುತ್ವವನ್ನು ಬೋಧಿಸುತ್ತಿರುತ್ತಾರೆ. ತನ್ನನ್ನೇ ನಂಬಿ ತನಗೂ ಅರಿವಿಲ್ಲದೆ ಪರಮಾತ್ಮನನ್ನು ಕೊಂಡಾಡುತ್ತಾ ತನ್ನ ಸನ್ನಿಧಿಗೆ ಬರುವವರಿಗೆ ಆತ್ಮಾನಂದವನ್ನು ನೀಡುತ್ತಿರುತ್ತಾರೆ.

ಜೀವನದಲ್ಲಿ ಜಿಗುಪ್ಸೆ ಹೊಂದಿ, ಮಾನಸಿಕ ವೈರಾಗ್ಯ ತಾಳಿರುವ ವೆಂಕಪ್ಪನಿಗೆ ಗುರುವಿನ ಅನುಗ್ರಹ ಮತ್ತು ಬೋಧನೆ ಬೇಕಾಗಿದ್ದು, ಅಣ್ಣಾಜಿ ಅವಧೂತರ ಬಗ್ಗೆ ಕೇಳಿರುತ್ತಾನೆ.

ಸಾತಿಶಯ ರೌಡೂರೊಳಗೆ ಪರಿ
ಪೂತ ಗುರುವಣ್ಣಾಜಿ ಗೌಡರ
ನೋತು ದರ್ಶನ ಪಡೆದು ಧನ್ಯತೆಯಾನುವೆವು ಎನುತ ।
ಆತುರದೊಳೈತಂದ ಭಕ್ತರ

ತೀತ ಸದ್ಗುರು ಚರಣಗಳ ಹ

ರ್ಷಾತಿರೇಕದಿಂ ಕಂಡು ಪುಲಕಿತರಾಗಿ ನಿಂದಿರಲು ||೫೦

ಗುರುಬೋಧಕ್ಕಾಗಿ ಹಂಬಲಿಸುತ್ತಾ ಅಣ್ಣಾಜಿ ಅವಧೂತರನ್ನು ಕಾಣಲು ರೌಡೂರಿಗೆ ಬಂದು, ಗುರುವಿನಲ್ಲಿ ತನ್ನ ಮಾನಸಿಕ ವೇದನೆಯನ್ನು ಹೋಗಲಾಡಿಸಿ, ನಿಜಾನಂದದ ಜ್ಞಾನ ನೀಡಬೇಕೆಂದು ನಿವೇದಿಸಿಕೊಳ್ಳುತ್ತಾನೆ.

ಆಧ್ಯಾತ್ಮಿಕ ಜೀವನದಲ್ಲಿ ಜಾಗ್ರತೆಗೆ ಮತ್ತೊಂದು ವ್ಯಕ್ತಿಯಿಂದಲೇ ಉತ್ತೇಜನ ದೊರಕಬೇಕು. ಯಾರಿಂದ ಇಂಥ ಉತ್ತೇಜನ ಬರುವುದೋ ಅವನೇ ಗುರು. ಯಾರಿಗೆ ಇದು ನೀಡಲ್ಪಡುವುದೋ ಅವನೇ ಶಿಷ್ಯ. ಮಾನವನು ಭವಬಂಧನಕ್ಕೊಳಗಾಗಿ ಮುಂದಿನ ದಾರಿ ತಿಳಿಯದೆ ಕತ್ತಲೆಯಲ್ಲಿ ಕಾಲಾಡಿಸುವುದು ಸ್ವಾಭಾವಿಕ. ಅಂತಹ ವ್ಯಕ್ತಿಗೆ ಸನ್ಮಾರ್ಗವನ್ನು ತೋರಿಸಿ ಮುಕ್ತಿಗೆ ದ್ವಾರವನ್ನು ಕಲ್ಪಿಸುವವನು ಗುರು. ಗುರುವಿನ ಸ್ಥಾನ ಹಿರಿದು ಅವನಿಲ್ಲದೆ ಯಾವುದೂ ಇಲ್ಲ. ಅದಕ್ಕಾಗಿಯೇ ಜ್ಞಾನಾಕಾಂಕ್ಷಿಯು ಗುರುವನ್ನು ಅರಸುತ್ತಾ ನಡೆಯುತ್ತಾನೆ. ಗುರುವಿನ ಮೇಲೆ ಶ್ರದ್ಧೆ, ಭಕ್ತಿ, ದೈನ್ಯ, ಗೌರವಗಳಿಲ್ಲದೆ ಇದ್ದರೆ ಯಾವ ಅರಿವೂ ಜ್ಞಾನದ ವಿಕಾಸವೂ ಶಿಷ್ಯನಲ್ಲಿ ಆಗುವುದಿಲ್ಲ.

ಗುರುವಿನ ಅನುಗ್ರಹ ಪಡೆಯಲು ವೆಂಕಪ್ಪನು ಗುರುಸೇವೆಯಲ್ಲಿ ನಿರತನಾಗಿ, ಸುಮಾರು ದಿನಗಳ ಕಾಲ ರೌಡೂರಿನಿಂದ ಕೋಳೂರಿಗೆ, ಕೋಳೂರಿನಿಂದ ರೌಡೂರಿಗೆ ಅಲೆದಾಡುತ್ತಾ ಗುರುಸೇವೆಯನ್ನು ಮಾಡುತ್ತಿರುತ್ತಾನೆ. ಕಾಯಾ, ವಾಚಾ, ಮನಸಾ ಪರಿಶುದ್ಧನಾದ ವೆಂಕಪ್ಪನ ಸಂಯಮ, ಶ್ರದ್ಧೆಯನ್ನರಿತ ಗುರು ಅಣ್ಣಾಜಿಅವಧೂತರು ಅನುಗ್ರಹ ತೋರಿ ಶಿಷ್ಯನನ್ನಾಗಿ ಸ್ವೀಕರಿಸುತ್ತಾರೆ. ''ಜಗತ್ತು ಹುಸಿ, ಪರಬ್ರಹ್ಮವೊಂದೇ ನಿತ್ಯ ಸತ್ಯ. ಆ ಪರವಸ್ತುವನ್ನು ಕಾಣಲು ತವಕಿಸುವುದೇ ಆತ್ಮ. ಈ ಆತ್ಮವೇ ಪರಮಾತ್ಮ'' ಎನ್ನುವ ತತ್ತ್ವೋಪದೇಶವನ್ನು ನೀಡುತ್ತಾರೆ. ಗುರುವಿನಿಂದ ತತ್ತ್ವೋಪದೇಶವನ್ನು ತಿಳಿದ ವೆಂಕಪ್ಪನು ಮನದ ಜಿಜ್ಞಾಸೆಗಳ ಪೇಚಾಟವನ್ನು ಕಳೆದುಕೊಂಡು ತನಗರಿವಿಲ್ಲದೆ ಆನಂದದಲ್ಲಿ ಸುಖಿಸುತ್ತಾನೆ. ನಿತ್ಯ ಗುರು ಸೇವೆ ಮಾಡುತ್ತಾ, ಗುರೂಪದೇಶ ಪಡೆಯುತ್ತಾ ಸನ್ಮಾರ್ಗದಲ್ಲಿ ನಡೆಯುತ್ತಿರುತ್ತಾನೆ. ವೆಂಕಪ್ಪನ ನಿರಂತರ ಶ್ರಮ, ಅವಿಶ್ರಾಂತ ಹೋರಾಟ ಜ್ಞಾನಾಕಾಂಕ್ಷಿಯನ್ನು ಕಂಡ ಗುರು

..... ನೀ ನಿಂದು ಸದ್ಗುರು

ಸದಯವನು ಪಡೆದಿರುವಿ ನಿನ್ನಯ

ಮಡದಿ ಮಕ್ಕಳ ಮೋಹದಿಂ ಕಡೆಗಿರ್ದು ವಿರತಿಯನು ||

ಬಿಡದೆ ಸಾಧಿಸುತಿರ್ದೊಡಾ ಮೃಡ

ನಡಿಯ ಸತ್ಕೃಪೆಯಹುದು ಚಿಂತೆಯ

ಬಿಡು ಮಗನೆ ವೆಂಕಪ್ಪ ನಡೆಯೈ ನಿನ್ನ ತಲಕೆನಲು ||೫೧

ಲಾಭ, ಕೀರ್ತಿ, ಸ್ವಾರ್ಥಲಾಲಸೆ ಮುಂತಾದ ಯಾವ ಸ್ವಾರ್ಥ ಆಸೆಗಳೂ ಇಲ್ಲದೆ ಗುರುಬೋಧನೆಯನ್ನು ನೀಡುತ್ತಾರೆ. ದೇಹ, ಸಂಸಾರ ಹೇಯವೆಂದರಿತು ವಿಷಯಾದಿಗಳನ್ನು ನಿಗ್ರಹಿಸಿ, ಆತ್ಮನಲ್ಲಿ ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಳ್ಳಬೇಕೆಂದು ಉಪದೇಶಿಸುತ್ತಾರೆ. ಗುರುವಿನ ಕೃಪಾದೃಷ್ಟಿಯನ್ನು ಪಡೆದುಕೊಂಡು ಮೋಕ್ಷ

[illegible]

[illegible]

[illegible]

[illegible]

[illegible]

[illegible]

ಸ್ವರೂಪದ ಜ್ಞಾನವನ್ನು ಸಂಪಾದಿಸಲು ಸಿದ್ಧನಾಗುತ್ತಾನೆ. ನಂತರ ಮನೆ, ಮಡದಿ, ಮಕ್ಕಳು, ಬಂಧು, ಬಳಗ ಮುಂತಾದ ಸಂಬಂಧಗಳಿಂದ ನಿರ್ಲಿಪ್ತನಾಗಿ, ಹಾಳು ದೇಗುಲ, ಬೆಟ್ಟ, ದೊಡ್ಡಕಲ್ಲು-ಬಂಡೆಗಳ ಗವಿ ಹೀಗೆ ನಿರ್ಜನ ಪ್ರದೇಶಗಳಲ್ಲಿ ವಾಸಿಸುತ್ತಾ, ಬೈರಾಗಿಯಾಗಿ ತಿರುಗಾಡುತ್ತಿರುತ್ತಾನೆ. ಹೀಗಿರುವಾಗ ಒಮ್ಮೆ ಇವರಿರುವ ವಿಷಯ ಹೆಂಡತಿ ಮಕ್ಕಳಿಗೆ ಗೊತ್ತಾಗಿ ಮನೆಗೆ ಕರೆತಂದು ಸ್ನಾನಾದಿಗಳನ್ನು ಮಾಡಿಸಿ, ಮತ್ತೆ ಹೊರಗೆ ಹೋಗದಿರಲೆಂದು ಮನೆಯಲ್ಲಿ ಕೂಡಿ ಹಾಕುತ್ತಾರೆ. ಬಂಧನದಿಂದಲೇ ಬಿಡುಗಡೆಯಾದ ಎಂದವನಿಗೆ ಮತ್ತೊಮ್ಮೆ ಬಂಧನದಲ್ಲಿರುವ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಹೇಗಾದರೂ ಇದರಿಂದ ತಪ್ಪಿಸಿಕೊಳ್ಳಬೇಕೆಂದು ಕಾಯುತ್ತಿದ್ದ ವೆಂಕಪ್ಪನಿಗೆ, ಇದನ್ನು ಪೂರೈಸಲೋ ಎನ್ನುವಂತೆ ಅಣ್ಣಾಜಿ ಅವಧೂತರು ಕೋಳೂರು ಗ್ರಾಮಕ್ಕೆ ಬರುತ್ತಾರೆ. ಗುರು ಬಂದಿರುವನೆಂಬ ಸಂತಸದಲ್ಲಿ ಏನಾದರೊಂದು ನೈವೇದ್ಯರೂಪದಲ್ಲಿ ನೀಡಬೇಕೆಂದು ಯೋಚಿಸಿದರೆ ಮನೆಯಲ್ಲಿ ಏನೂ ಇಲ್ಲ. ಕಡು ಬಡತನ. ಕೊನೆಗೆ ಕಾಫಿಯನ್ನಾದರೂ ಕಾಸಿ ಕೊಡೋಣವೆಂದರೆ ಮನೆಯಲ್ಲಿ ಕಟ್ಟಿಗೆ ಇಲ್ಲ. ಮನೆಯ ಮುಂದಿನ ಗಾಡಿಯ ನೊಗವನ್ನು ಮುರಿದು ಕಾಫಿ ಕಾಸಿ ಕೊಡುತ್ತಾನೆ. ಭಕ್ತನ ಸೇವೆಯನ್ನು ಸಂತಸದಿ ಸ್ವೀಕರಿಸಿದ ಗುರುಗಳು ಶಿಷ್ಯನ ಮೇಲೆ ಕೃಪಾದೃಷ್ಟಿಯನ್ನು ಬೀರಿ ಆಶೀರ್ವದಿಸಿ ಹೊರಡುತ್ತಾರೆ.

ವಡಬ ಜಡಂ ಗುಣಮಹಿ ಸಂತಾನ
ಸುಡುವ ವಿಷಂ ಪೀಯೂಷ ಸಮಾನ
ಪೊಡೆವ ಸಿಡಿಲ್ಮಿಂಚುಗಳ ವರಗಾನ
ಮೃಡ ಗುರುಕರುಣ ಕಟಾಕ್ಷದ ಭಾನ ||[೨೨]

ಗುರುವಿನ ಕರುಣದಿಂದ ವಡಬಾಗ್ನಿಯು ಜಲವಾದಂತೆ, ಹಾವು ಹಗ್ಗವಾದಂತೆ, ವಿಷವು ಅಮೃತವಾದಂತೆ, ಸಿಡಿಲು ಮಂಜುಳವೂ, ಶಾಂತವೂ ಆಹ್ಲಾದಕರವಾದಂತೆ ಇಂಥ ಗುರುಕೃಪಾದೃಷ್ಟಿಯನ್ನು ಪಡೆದ ವೆಂಕಪ್ಪನು ಸಂತೋಷದಲ್ಲಿ ಸುಖಿಸುತ್ತಿರುತ್ತಾನೆ. ಆದರೆ ಕೆಲಸಕ್ಕೆಂದು ಹೋಗಿದ್ದ ಹೆಂಡತಿ ಮಕ್ಕಳು ಮನೆಗೆ ಬಂದು ಅಲ್ಲಿನ ವಾತಾವರಣವನ್ನು ಕಂಡು ವೆಂಕಪ್ಪನ ಮೇಲೆ ಕೋಪಿಷ್ಠರಾಗಿ "ನೀನೆ ಮನೆಗೆ ಭಾರ ಅದರಲ್ಲಿ ಇದು ಬೇರೆ, ಯಾಕಿದ್ದೀಯ ಮನೆ ಬಿಟ್ಟು ಹೋಗೆಂದು" ಸಿಟ್ಟಿನಲ್ಲಿ ನಿಂದಿಸುತ್ತಾರೆ. ಬಂಧನದ ಬಿಡುಗಡೆ ಗಾಗಿಯೇ ಕಾಯುತ್ತಿದ್ದ ವೆಂಕಪ್ಪನಿಗೆ ಜ್ಞಾನೋದಯವಾದಂತೆ ಎಚ್ಚರಗೊಂಡು ಎಲ್ಲವನ್ನೂ ತ್ಯಜಿಸಿ, ಲೌಕಿಕ ಬಂಧನದಿಂದ ಬಿಡುಗಡೆಯಾದನು.

ಮನದಲ್ಲಿ ವ್ಯಾಕುಲತೆ, ವಿಷಾದ ಮೂಡಿದಾಗಲೆ ವೈರಾಗ್ಯ. ಈ ವೈರಾಗ್ಯಭಾವನೆಯಿಂದ ಮನೆ ಮಡದಿ ಮಕ್ಕಳನ್ನು ತ್ಯಜಿಸಿ ಬಂಡ್ರಾಳು ಗ್ರಾಮಕ್ಕೆ ಬರುತ್ತಾನೆ. ಅಲ್ಲಿ ಊರ ಹೊರಗಿನ ಹಾಳು ದೇವಾಲಯದಲ್ಲಿ ಯಾರೊಂದಿಗೂ ಮಾತನಾಡದೆ ಏಕಾಂಗಿಯಾಗಿ ವಾಸಮಾಡುತ್ತಾ ಹಠಯೋಗದಂತಹ ಯೋಗ ಮಾರ್ಗದ ಸಾಧನೆ ಮಾಡುತ್ತಿರುತ್ತಾನೆ. ಜಠರಾಗ್ನಿಯ ಪರಿವೇ ಇಲ್ಲದೆ ದೇಹ ದಂಡನೆಯ ಅರಿವಿಲ್ಲದೆ, ವಿಷಯಾದಿಗಳಿಂದ ನಿರ್ಲಿಪ್ತನಾಗಿ, ಊಟ, ನಿದ್ರೆ, ಬಾಯಾರಿಕೆ, ಹಗಲು, ರಾತ್ರಿಗಳ ಗಮನವಿಲ್ಲದೆ ಒಂಟಿಯಾಗಿ ವಿಚಿತ್ರ ವೇಷದಲ್ಲಿ ತಿರುಗಾಡುತ್ತಿದ್ದನು. ಕೆಲ ಕುಹಕಿಗಳು, ಕುಚೋದ್ಯರು, ಅಜ್ಞಾನಿಗಳು ಈತ ಹುಚ್ಚನೆಂದು ಹಿಯ್ಯಾಳಿಸಿ ಅಪಹಾಸ್ಯ ಮಾಡುತ್ತಿರಲು, ಇದಾವುದನ್ನು ಲೆಕ್ಕಿಸದ ವೆಂಕಪ್ಪನು ತನ್ನಲ್ಲೆ ತಾನು ವಿಹರಿಸುತ್ತಿರುತ್ತಾನೆ.

[illegible]

> [illegible]

[illegible]

[illegible]

ತ್ರಿತಯ ತುರೀಯಂ ನಹಿ ನಹಿ ಯತ್ರ
ವಿಂದತಿ ಕೇವಲ ಮಾತ್ಮನಿ ತತ್ರ
ಧರ್ಮಾ ಧರ್ಮಾ ನಹಿ ನಹಿಯತ್ರ
ಬಂಧೋ ಮುಕ್ತ ಕಥಮಿಹ ತತ್ರ ॥[೫೩]

ಎಲ್ಲಿ ಜಾಗೃತ್, ಸ್ವಪ್ನ, ಸುಷಿಪ್ತಿಗಳೆಂಬ ಮೂರು ಅವಸ್ಥೆಗಳೊಂದಿಗೆ ತುರೀಯವು ಇಲ್ಲವೋ, ಅಲ್ಲಿ ಜ್ಞಾನಿ ತತ್ವವನ್ನು ತನ್ನ ಆತ್ಮನಲ್ಲೇ ಕಾಣುವನು. ಎಲ್ಲಿ ಧರ್ಮ ಅಧರ್ಮಗಳಿಲ್ಲವೋ ಅಲ್ಲಿ ಬಂಧಮುಕ್ತ ಗಳಿಲ್ಲ. ಹೀಗೆ ತುರೀಯಾತೀತನಾಗಿ ಕಾಣುತ್ತಿದ್ದ ಅವಧೂತ ವೆಂಕಪ್ಪನು ಜಗತ್ತೆಲ್ಲಾ ಆಕಾರಹೀನವೆಂದೂ ಜಗತ್ತೆಲ್ಲಾ ಅಶಾಶ್ವತವೆಂದೂ, ಜಗವೆಲ್ಲಾ ಶಿವೈಕರೂಪವೆಂಬ ಅದ್ವೈತ ಭಾವನೆಯಲ್ಲಿರುತ್ತಾನೆ.

ಭೂತ ಪ್ರೇತ ಪಿಶಾಚಿ ರಕ್ಕಸಿ
ಖ್ಯಾತಿವೆತ್ತ ಜಲಾಗ್ನಿಸ್ತಂಭವು
ಪೂತ ಮಂತ್ರಾಕ್ಷಾದಿ ಯಂತ್ರವು ಸಕಲ ವಿದ್ಯೆಗಳು ।
ಸಾತಿಶಯದಿಂ ಸಿದ್ಧಿಸಲು ಗುರು
ನಾಥನಿಚ್ಛೆಯಿದೆಂದು ತಿಳಿಯುತ
ಲೀತ ವೆಂಕಪ್ಪತಾತಾ ಪಾಳ್ದೇಗುಲದೊಳಿರುತಿರಲು ॥[೫೪]

ದೇಗುಲದಲ್ಲಿದ್ದು, ಆತ್ಮಾನಂದದಲ್ಲಿ ವಿಹರಿಸುತ್ತಿದ್ದ ವೆಂಕಪ್ಪನನ್ನು ಊರಿನ ಕೆಲ ಸಜ್ಜನರು ಈತ ಸಾಮಾನ್ಯ ನಲ್ಲ, ಸಾಧು, ಸನ್ಯಾಸಿಯೇ ಇರಬೇಕೆಂದು ಊಹಿಸಿ ಭಯ-ಭಕ್ತಿ ಮತ್ತು ಪ್ರೀತಿಯಿಂದ 'ತಾತ' ಎಂದು ಕರೆಯಲಾರಂಭಿಸುತ್ತಾರೆ. ಹಸಿವು, ತೃಷೆ, ನಿದ್ರೆ, ಬಿಸಿಲು, ಮಳೆ, ಚಳಿ ಇವುಗಳ ಪರಿವಿಲ್ಲದೆ ಯೋಗ ಸಾಧನೆ ಯಲ್ಲಿದ್ದು ಬ್ರಹ್ಮವೊಂದೇ ಸತ್ಯ, ಉಳಿದುದೆಲ್ಲಾ ಮಿಥ್ಯ. ಸತ್ಯವೇ ಪರಬ್ರಹ್ಮ ಕ್ಷಣಕ್ಷಣಕ್ಕೆ ಬದಲಾಗುತ್ತಿರುವ ಜಗತ್ತು ಮಿಥ್ಯ ಮತ್ತು ಅಶಾಶ್ವತವೆಂಬ ಅದ್ವೈತ ತತ್ವವ ಅರಿತು ವೆಂಕಪ್ಪ ಪೂರ್ಣಾವಧೂತ ಸ್ಥಿತಿಮುಟ್ಟಿ 'ವೆಂಕಾವಧೂತ'ರಾದರು.

ಯೋಗದ ಮಹಿಮೆ : ಅಸಾಧ್ಯವಾದ ಹಠಯೋಗದಂತಹ ಸಾಧನೆಯ ಮಾಡಿ ತನ್ನ ಭೌತಿಕ ಶರೀರದ ಮೇಲೆ ಸಂಪೂರ್ಣ ಹಿಡಿತ ಸಾಧಿಸಿರುತ್ತಾರೆ. ಭಂಡ್ರಾಳು ಗ್ರಾಮದ ಬಾವಿಯ ಮೇಲಿದ್ದ ಕಬ್ಬಿಣದ ಪಟ್ಟಿಯ ಮೇಲೆ ಸತತವಾಗಿ ಮೂರುದಿನ ದೇಹದ ಅರಿವಿಲ್ಲದೆ ಯೋಗನಿದ್ರೆಯಲ್ಲಿದ್ದು, ಎಷ್ಟೇ ಮಾತನಾಡಿಸಿದರು ದೃಷ್ಟಿಯನ್ನೂ ಬೀರದೆ ಧ್ಯಾನಮಗ್ನರಾಗಿದ್ದರೆಂದು ತಿಳಿಯುತ್ತದೆ.

ಭಂಡ್ರಾಳು ಗ್ರಾಮವನ್ನು ಬಿಟ್ಟು ಉಪ್ಪಾರ ಹೊಸಳ್ಳಿ ಎಂಬ ಗ್ರಾಮದ ಶ್ರೀ ಆಂಜನೇಯ ದೇವಸ್ಥಾನದ ಮುಂಭಾಗದಲ್ಲಿರುವ ಎತ್ತರದ ಗರುಡ ಗಂಭದ ಮೇಲೆ ತಪಸ್ಸು ಮಾಡುವವರಂತೆ ಒಂಟಿಕಾಲಿನ ಮೇಲೆ ನಿಂತಿರುತ್ತಾರೆ. ಇದರ ನೆನಪಿಗೆ ಉಪ್ಪಾರ ಹೊಸಳ್ಳಿ ಗ್ರಾಮದಲ್ಲಿ ಇಂದೂ ವೆಂಕಪ್ಪತಾತನ ಮಠವಿದ್ದು, ಶಿಲಾಮೂರ್ತಿಯನ್ನು ಪ್ರತಿಷ್ಠಾಪಿಸಿದ್ದಾರೆ. ತಾತನ ವಂಶಜರಾದ ನಾರಾಯಣಪ್ಪ ತಾತನು ಈ ಪರಂಪರೆಯನ್ನು ಇಲ್ಲಿ ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. ದಿನನಿತ್ಯ ತಾತನವರ ವಿಚಿತ್ರ ವೇಷಭೂಷಣಗಳನ್ನು, ವಿಚಿತ್ರ

ನಡವಳಿಕೆಗಳನ್ನು ಗ್ರಾಮದ ಸುತ್ತಮುತ್ತಲಿನ ಜನರು ನೋಡಿ, ಭಯಭೀತರಾಗಿ, ತಾತನ ಶಕ್ತಿಯನ್ನು, ಮಹಿಮೆಯನ್ನು ಅರಿಯದವರಾಗುತ್ತಾರೆ. ಜನ್ಮ, ಮೃತ್ಯು, ಚಿತ್ತ, ಬಂಧ, ಮೋಕ್ಷ, ಶುಭ, ಅಶುಭ, ನಾಮ, ರೂಪ, ಇದ್ಯಾವುವೂ ಯಾರಿಗೂ ಇರುವುದಿಲ್ಲ. ಹೀಗಿರುವಾಗ ಭಯ ಭೀತರಾಗಿ ರೋಧಿಸುವ ಅಗತ್ಯವಿಲ್ಲವೆಂದು "ಅವಧೂತ ಗೀತೆ"ಯಲ್ಲಿ ಅವಧೂತನ ಉವಾಚ. "ನಿರ್ಭೀತಿಯನ್ನುಂಟು ಮಾಡುವುದು ಆಂತರಿಕ ಶಕ್ತಿ, ನಿರ್ಭೀತನಾದವನು ಮಾತ್ರ ಸೀಮಿತವಾದ ವ್ಯಕ್ತಿಗತ ಪ್ರಜ್ಞಾಮಿತಿಯನ್ನು ದಾಟುತ್ತಾನಲ್ಲದೆ ವಿಶ್ವ ಪ್ರಜ್ಞೆಯಲ್ಲಿ ಒಂದಾಗುತ್ತಾನೆ" ಎನ್ನುವ ವಿವಿಧ ಪಂಥದ ಅನುಭಾವಿಗಳ ನಂಬಿಕೆಯಂತೆ ವೆಂಕಪ್ಪತಾತನು ಆಂತರಿಕ ಶಕ್ತಿ ಪಡೆದು ಆತ್ಮಜ್ಞಾನ ಮತ್ತು ಆತ್ಮಾನಂದದಲ್ಲಿ ಮಾನಸಿಕ ತೃಪ್ತಿ ಪಡೆದವರಂತೆ ತೇಜೋಮಯನಾಗಿ ವಿಹರಿಸುತ್ತಿರುತ್ತಾರೆ. ದಿನ ದಿನಕ್ಕೆ ವೆಂಕಪ್ಪತಾತನ ವರ್ತನೆ, ಶಕ್ತಿ, ಮಹಿಮೆಯನ್ನರಿತ ಜನರು ಈತ ಸಾಮಾನ್ಯ ನಲ್ಲ, ಮಹಾಮಹಿಮನೆಂದು ತಮ್ಮ ಸಂಕಷ್ಟಗಳನ್ನು, ಎಡರು-ತೊಡರುಗಳನ್ನು ನಿವೇದಿಸಿಕೊಳ್ಳುತ್ತಾ ಭಕ್ತಿ-ಗೌರವದಿಂದ ಕಾಣತೊಡಗುತ್ತಾರೆ.

ಘನ ಮಹಿಮ ವೆಂಕಪ್ಪ ನಿನ್ನಯ
ಘನವನರಿಯದೆ ಲೋಕದೊಳಗಿಹ
ಜನರೊಳಗೆ ನೀನೋರ್ವನೆಂದರಿದಿರ್ದೆವೈ ನಾವು।
ಮನಸಿಜಾರಿಯ ಶರಣ ನಿನ್ನನು
ಮನುದಿನವು ವೆಂಕಪ್ಪನೆಂದೆವು
ಸಮಮತದಿ ವೆಂಕಪ್ಪತಾತನು ದಾತ ನೀನೆಮಗೆ ॥[೨೫]

ವೆಂಕಪ್ಪನ ಅಸಾಮಾನ್ಯ ಮಹಿಮೆಯ ಕಂಡ ಜನರಿಗೆ ಭಕ್ತಿ-ಗೌರವಗಳು ಮೂಡಿ ದೇವರಂತೆ ಪೂಜಿಸ ತೊಡಗುತ್ತಾರೆ. ದರ್ಶನಕ್ಕಾಗಿ ಎಲ್ಲೆಲ್ಲಿಂದಲೋ ಭಕ್ತ ಜನತೆ ಬರಲಾರಂಭಿಸುತ್ತದೆ. ಸುತ್ತ ಮುತ್ತಲಿನ ಗ್ರಾಮಗಳಿಗೆಲ್ಲಾ ಈ ವಿಷಯ ಹರಡಿ ದರ್ಶನಾರ್ಥಿಗಳಾಗಿ ಬರುವ ಭಕ್ತರ ಸಂಖ್ಯೆ ದಿನದಿಂದ ದಿನಕ್ಕೆ ಅಧಿಕವಾಗುತ್ತದೆ. ನಂಬಿ ಬಂದ ಭಕ್ತರ ಎಡರು-ತೊಡರುಗಳನ್ನು ನಿವಾರಿಸಿ ಆಶೀರ್ವದಿಸುತ್ತಿರುತ್ತಾರೆ. ಹೀಗೆ ತಾತನನ್ನು ನಂಬಿ ಭಕ್ತಿಯಿಂದ ಪೂಜಿಸತೊಡಗಿದ್ದರಿಂದ ತಮ್ಮ ಸಮಸ್ಯೆಗಳು ಪರಿಹಾರವಾದವೆಂದು ಭಕ್ತ ನೋರ್ವನು ಕಾಣಿಕೆಯಾಗಿ ಕುದುರೆಯೊಂದನ್ನು ಸಲ್ಲಿಸುತ್ತಾನೆ. ತಾತನು ಎಲ್ಲಿಗೆ ಹೋದರೂ ಆ ಕುದುರೆಯ ಮೇಲೆಯೇ ಹೋಗಿ ಬರುತ್ತಿದ್ದರು. ಅದಕ್ಕಾಗಿ ಆ ಕುದುರೆಗೆ 'ತಾತನ ಕುದುರೆ' ಎಂದೇ ಹೆಸರಾಗಿತ್ತೆಂದು ಅವರನ್ನು ನೋಡಿದವರು, ಅವರ ಜೊತೆಯಲ್ಲಿದ್ದವರು ಹೇಳುತ್ತಾರೆ. ತನಗಿಷ್ಟ ಬಂದಾಗ ತನ್ನ ಭಕ್ತರ ಮನೆಗೆ ತಾವೇ ಹೋಗಿಬರುತ್ತಿದ್ದರು. ಆಗ ಭಕ್ತರ ಸಮಸ್ಯೆಗಳು ಪರಿಹಾರವಾಗುತ್ತಿದ್ದವು ಮತ್ತು ಇಷ್ಟಾರ್ಥಗಳು ನೆರವೇರುತ್ತಿದ್ದವು. ಈ ವಿಷಯ ಪ್ರಚಾರವಾಗಿ ತಾತನ ಭಕ್ತರ ಸಂಖ್ಯೆ ಹೆಚ್ಚಾಗ ತೊಡಗುತ್ತದೆ. ಬಡವ-ಬಲ್ಲಿದ, ಮೇಲು-ಕೀಳು ಎನ್ನದೆ ಸರ್ವವರ್ಗದವರನ್ನೂ, ಸರ್ವ ಧರ್ಮದವರನ್ನೂ ಸಮಾನವಾಗಿ ಕಾಣು ತ್ತಿದ್ದರು.

ಭಂಡ್ರಾಳು ಗ್ರಾಮದಲ್ಲಿದ್ದಾಗ ಒಮ್ಮೆ ತಾತನು ಭಕ್ತ ಜನತೆಯನ್ನು ಕರೆದು ನೀವೆಲ್ಲಾ ಈ ದೇವಾಲಯದಲ್ಲಿ ಭಜನೆ ಮಾಡುತ್ತಿರಿ ನಾನು ದೇವಾಲಯದ ಗರ್ಭಗುಡಿಯಲ್ಲಿರುವೆ ನನ್ನ ಅಪ್ಪಣೆಯಾಗುವವರೆಗೂ ಯಾರೂ ಬಾಗಿಲ ತೆರೆಯಬಾರದೆಂದು ಹೇಳಿ, ಒಳಗೆ ಹೋಗಿ ಬಾಗಿಲು ಹಾಕಿ ಬೀಗ ಹಾಕಿಸಿಕೊಂಡರು. ಸುಮಾರು ಒಂದು ವಾರಗಳ ಕಾಲ ಹಠಯೋಗ ಸಾಧನೆಯಲ್ಲಿದ್ದ ತಾತನು ದೇವಾಲಯದಿಂದ ಹೊರ ಬರಲೇ ಇಲ್ಲ. ಆ ಸಮಯದಲ್ಲಿ ಸದರಿ ಗ್ರಾಮದ ಜನರು ಬಲಕುಂದಿ ಗ್ರಾಮಕ್ಕೆ ಹೋದಾಗ ಆ ಊರಿನ ಕಾಳಿದೇವಾಲಯದಲ್ಲೂ ತಾತನವರು ಕುಳಿತಿದ್ದರು. ಇಂಥ ವಿಚಿತ್ರ ಸನ್ನಿವೇಶವನ್ನು ಕಂಡು ಆಶ್ಚರ್ಯ ಮತ್ತು ಅನುಮಾನಗಳಿಂದ ಭಂಡ್ರಾಳು ಗ್ರಾಮಕ್ಕೆ ಬಂದು ನೋಡಿದರೆ ಇಲ್ಲಿಯೂ ಇದ್ದರು. ಹೀಗೆ ಏಕಕಾಲದಲ್ಲಿ ಎರಡೂ ಕಡೆ ತನ್ನ ಭಕ್ತರಿಗೆ ದರ್ಶನ ನೀಡಿದ್ದಾರೆಂದು ಭಕ್ತರು ತಿಳಿಸುತ್ತಾರೆ.

ಭಂಡ್ರಾಳು ಗ್ರಾಮದ ಕೆಲಭಕ್ತರನ್ನು ಕರೆದುಕೊಂಡು ಒಮ್ಮೆ ಕೆಂಚನ ಗುಡ್ಡಕ್ಕೆ ಹೋಗಲು, ಗುಡ್ಡ ಹತ್ತಲಾರದೆ ಎಲ್ಲರೂ ಕೆಳಗಡೆ ನಿಂತಿರುತ್ತಾರೆ. ತಾತನೊಬ್ಬನೇ ಗುಡ್ಡದ ಮೇಲೇರಿ ಅಲ್ಲಿದ್ದ ಈಶ್ವರಲಿಂಗ ಮತ್ತು ಬಸವಣ್ಣನ ಮೂರ್ತಿಯನ್ನು ಹೊತ್ತು ತಂದು ಭಂಡ್ರಾಳು ಗ್ರಾಮದಲ್ಲಿ ಪ್ರತಿಷ್ಠಾಪನೆ ಮಾಡಿಸಿದ್ದಾರೆ. ತನ್ನ ಮನಸ್ಸಿಗೆ ಬಂದ ಪ್ರದೇಶಗಳಿಗೆ ರಾತ್ರಿ ವೇಳೆಯಲ್ಲಿ ಸುಮಾರು ಐವತ್ತರಿಂದ ಅರವತ್ತು ಮೈಲಿಗಳಷ್ಟು ಓಡಾಡುತ್ತಿದ್ದರು. ಹೀಗೆ ಓಡಾಡುತ್ತಿರುವಾಗ ಸಾಕ್ಷಾತ್ ದೇವಿಯ ದರ್ಶನ ಪಡೆದು, ದೇವಿಯೊಂದಿಗೆ ಮಾತನಾಡಿದ್ದನ್ನು ಜನ ಈಗಲೂ ಹೇಳುತ್ತಾರೆ.

ಜೋಗಕ್ಕೆ ಪ್ರಯಾಣ : ಬಳ್ಳಾರಿ ಜಿಲ್ಲೆಯ ಸಂಡೂರು ತಾಲೂಕಿನ ಒಂದು ಚಿಕ್ಕ ಹಳ್ಳಿ ಜೋಗ. ಗಿರಿಯಪ್ಪಯ್ಯತಾತನೆಂಬ ಮಹಾ ತಪಸ್ವಿಗಳು ಇಲ್ಲಿ ಜೀವಸಮಾಧಿಯಾಗಿದ್ದಾರೆ. ಅವರು ತಮ್ಮ ಜೀವಿತಾವಧಿಯಲ್ಲಿ

ಘೋರ ಕಮ್ಮರಿಯೊಳಗೆ ನಿರುಕಿಸೆ
ತೋರುವತಿ ಭೀಕರದ ಗುಹೆಯೊಳ
ಗಾರುಮರಿಯದ ತೆರದಿ ಗಿರಿಯಪ್ಪಾರ್ಯ ತಾನಿರ್ದು ।
ಕ್ರೂರ ಪುಲಿ ಚಿರತೆಗಳ ಭಯಮಂ
ಮೀರಿ ಪಿಡಿದಾಡಿಸುತಲವುಗಳ
ಸೇರಿ ಪೋಗುತಲಿರ್ದ ತನ್ನಯ ಮನವೆಳಸಿದತ್ತ ॥[೫೬]

ಕಾಡು ಪ್ರಾಣಿಗಳನ್ನು ಸಾಧುಗೊಳಿಸಿ, ಜೊತೆಯಲ್ಲಿ ಆಟವಾಡುತ್ತಿದ್ದರು. ಇಂಥ ಮಹಾತ್ಮರಿದ್ದ ಊರಿಗೆ ಹೋದ ವೆಂಕಪ್ಪತಾತನು ಕೆಲ ಸಾಧನೆಗಳನ್ನು ಸಾಧಿಸಿ, ಸಿದ್ಧನಾಗಿ, ಅಲ್ಲಿನ ಭಕ್ತರ ಆರಾಧ್ಯರಾದರು. ಗ್ರಾಮವನ್ನು ಕಾಡುತ್ತಿದ್ದ ಬೇತಾಳವನ್ನು ಓಡಿಸಿ, ಕಾಳಿಕಾದೇವಿಯನ್ನು ಪ್ರತಿಷ್ಠಾಪಿಸಿದರು. ನಂಬಿದ ಭಕ್ತರನ್ನು, ಗ್ರಾಮವನ್ನು ಉದ್ಧರಿಸಿ ಮನೆ, ಮನ, ಮಂದಿರಗಳಲ್ಲಿ ದೈವರಾಗಿದ್ದು ಅಲ್ಲಿಂದ ಅಲೆದಾಡುತ್ತಾ ದಮ್ಮೂರು ಗ್ರಾಮಕ್ಕೆ ಆಗಮಿಸಿರುತ್ತಾರೆ.

[illegible]

[illegible]

[illegible]

[illegible]

[illegible]

[illegible]

ದಮ್ಮೂರಿಗೆ ಆಗಮನ : ದಮ್ಮೂರು ಗ್ರಾಮಕ್ಕೆ ಆಗಮಿಸಿದಾಗ ತಾತನವರು ಹೇಗಿದ್ದರೆಂಬುದನ್ನು ಅವರನ್ನು ಕಂಡವರು ಮತ್ತು ಜೊತೆಯಲ್ಲಿದ್ದವರನ್ನು ಸಂದರ್ಶಿಸಿದಾಗ ನೀಡಿದ ಮಾಹಿತಿ ಹೀಗಿದೆ: ''ದಮ್ಮೂರಿಗೆ ಬಂದ ಆರಂಭದಲ್ಲಿ ವೆಂಕಪ್ಪತಾತನು ವೀರಭದ್ರದೇವರ ದೇವಸ್ಥಾನದಲ್ಲಿ ವಾಸವಾಗಿರುತ್ತಿದ್ದರು. ಕೈಯಲ್ಲೊಂದು ಕುಡುಗೋಲು, ಹೆಗಲಮೇಲೊಂದು ಕಂಬಳಿ ಯಾವಾಗಲೂ ಜೊತೆಯಲ್ಲಿ ಇರುತ್ತಿದ್ದವೆಂದೂ, ವಿಚಿತ್ರವಾದ ವೇಷಧರಿಸಿ ಶಿವ, ಶಿವಾ ಎಂದು ಊರಲ್ಲೆಲ್ಲಾ ಓಡಾಡುತ್ತಿದ್ದರು. ತಾತನ ಹಿಂದೆ ಏಳೆಂಟು ಹುಡುಗರು ಯಾವಾಗಲೂ ಸುತ್ತುತ್ತಿದ್ದರು. ಈತನ ಮನೋ ವಿಕಾಸವೋ ಅಥವಾ ಈತನು ಸೇವಿಸಿದ ಆಹಾರದ ಪ್ರಭಾವವೋ ಎನ್ನುವಂತೆ ಕೆಲವೊಮ್ಮೆ ತೇಜೋಮಯನಾಗಿಯೂ, ಕೆಲವೊಮ್ಮೆ ಉಗ್ರವಾಗಿಯೂ ಕಾಣುತ್ತಿದ್ದುದಲ್ಲದೇ ಉಸುಕಿನ ಮೇಲೆ, ಕಳ್ಳಿ, ಮುಳ್ಳು, ಬೇಲಿಗಳ ಸಾಲಿನಲ್ಲಿ, ಬಂಡೆ ಕಲ್ಲುಗಳ ಸಂದುಗಳಲ್ಲಿ, ತಿಪ್ಪೆಗುಂಡಿಗಳಲ್ಲಿ ಮತ್ತು ಸ್ಮಶಾನ ಸಮಾಧಿಗಳ ಮೇಲೆ ಮಲಗಿರುತ್ತಿದ್ದರು.''[೫೭] ಎಂದು ತಿಳಿಸುತ್ತಾರೆ. ಸ್ಮಶಾನದಲ್ಲಿದ್ದ ಕಂಬಳಿಯನ್ನು ಹೊದಿಕೆಯನ್ನಾಗಿ ಮಾಡಿಕೊಂಡು ಎಲ್ಲಿಗೆ ಹೋದರೂ ಆ ಕಂಬಳಿಯನ್ನು ಹೆಗಲ ಮೇಲೆ ಹಾಕಿಕೊಂಡು ಓಡಾಡುತ್ತಾ ''ಕೆಲವೊಮ್ಮೆ ಮಾರಮ್ಮ, ತಾಯಮ್ಮ, ಚೌಡಮ್ಮ, ಗಾಳೆಮ್ಮ ಮುಂತಾದ ಗ್ರಾಮದೇವತೆಗಳ ಉಡುಗೆ ತೊಡುಗೆಗಳನ್ನು ಧರಿಸುತ್ತಿದ್ದರು. ವೈರಾಗಿಯಾಗಿ, ವಿಚಿತ್ರವೇಷದಲ್ಲಿ ವಿವಿಧ ರೂಪಗಳಲ್ಲಿ ಅಲೆದಾಡುತ್ತಿದ್ದು; ಕೆಲವೊಮ್ಮೆ ಡೊವಿಗಳನ್ನು ಉಪಯೋಗಿಸುತ್ತಾ, ಕಾಪಾಲಿಕನಂತೆಯೂ, ಕೆಲವೊಮ್ಮೆ ಬಳೆ ಮುಂತಾದ ಆಭರಣ ಗಳನ್ನು ಧರಿಸುತ್ತಾ, ಸ್ವೇಚ್ಛೆಯಾಗಿ ತಿರುಗಾಡುತ್ತಿದ್ದರು''[೫೮] ಎಂದು ತಿಳಿಸುತ್ತಾರೆ. ಯಾರೊಂದಿಗೂ ಸೇರದೆ, ಯಾರೊಡನೆಯೂ ಮಾತನಾಡದೆ ಕುದುರೆ ಹಾಕಿಕೊಂಡು ಹಗಲೆನ್ನದೆ, ರಾತ್ರಿಯೆನ್ನದೆ ತಿರುಗಾಡುತ್ತಿದ್ದರು. ರಾತ್ರಿಯಲ್ಲಿ ಜನರಿಗೆ ನಿದ್ರೆಯಿಲ್ಲದಂತೆ ಮಾಡಿ ಓಣಿ ಓಣಿಯಲ್ಲಿ ತಿರುಗುತ್ತಾ ನೋಡಿದ ಜನರು ಹೆದರುವಂತೆ ಮಾಡುತ್ತಿದ್ದರು. ಇದನ್ನೆಲ್ಲಾ ಕಂಡ ಗ್ರಾಮಸ್ಥರು 'ಈತನಾರೋ?' ಎಂದು ಅನುಮಾನ ಬಂದು, ಅವರನ್ನು ಗುಡಿಯಲ್ಲಿದ್ದಾಗ ಕಾಣಲು ಬರುತ್ತಾರೆ. ವಿಚಿತ್ರವೇಷ, ಅನುಭಾವದ ನಡೆ-ನುಡಿಗಳು, ಭಿನ್ನವಾದ ನೋಟ, ಇದನ್ನೆಲ್ಲಾ ಕಣ್ಣಾರೆ ಕಂಡ ಗ್ರಾಮಸ್ಥರು 'ಈತನಾರೋ ಸಾಧುವೇ!' ಇರಬೇಕೆಂದು, ಭಯ-ಭಕ್ತಿಯಿಂದ ನಮಸ್ಕರಿಸುತ್ತಾರೆ. ಹೀಗೆ ನಿತ್ಯ ಬಂದು ನಮಸ್ಕರಿಸಿ, ಆಶೀರ್ವಾದ ಪಡೆಯುವುದು ರೂಢಿಯಾಗುತ್ತದೆ. ವಿಷಯ ಸುತ್ತ-ಮುತ್ತಲಿನ ಹಳ್ಳಿಗಳಿಗೆಲ್ಲಾ ಹರಡಿ ದರ್ಶನ, ಆಶೀರ್ವಾದಕ್ಕಾಗಿ ಬರುವವರ ಸಂಖ್ಯೆ ಅಧಿಕವಾಗುತ್ತದೆ. ಬರುವ ಭಕ್ತರಿಗಾಗಿಯೆ ತಾತನು ''ಭಜನೆ ಸಪ್ತಾಹ'' ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತಿದ್ದರು. ಹೀಗೆ ಬರುವ ಭಕ್ತರು ಧನ-ಧಾನ್ಯ ವಸ್ತುಗಳನ್ನು ಕಾಣಿಕೆಯಾಗಿ ನೀಡುತ್ತಾ, ತಮ್ಮ ಕಷ್ಟ-ಸುಖಕ್ಕೆಲ್ಲಾ ತಾತನೇ ಕಾರಣವೆಂದು ನಂಬಿ ಪೂಜಿಸತೊಡಗುತ್ತಾರೆ.

ತಾತನವರ ಮೇಲೆ ನಂಬಿಕೆ, ಗೌರವಗಳು ಅಧಿಕವಾದಾಗ, ಅಂಥ ಭಕ್ತರ ಸಹಾಯದಿಂದ, ಗ್ರಾಮದ ದೇವಾಲಯದ ಆವರಣದಲ್ಲಿ ಭಜನೆ ಸಪ್ತಾಹವನ್ನು ಗುರುವಾದ ಅಣ್ಣಾಜಿಅವಧೂತರ ಅಧ್ಯಕ್ಷತೆಯಲ್ಲಿ ಏರ್ಪಡಿಸಿ ಧನ, ಧಾನ್ಯ ಮುಂತಾದ ವಸ್ತುಗಳನ್ನು ಸಂಗ್ರಹಿಸುತ್ತಾರೆ. ಇಂತಹ ಸಪ್ತಾಹ ಕಾರ್ಯಗಳಿಂದ ತಾತನವರ ಹೆಸರು ಪ್ರಚಾರವಾಗಿ, ಅವರ ವೈರಾಗ್ಯ ಮಹಿಮೆಗಳು ಭಕ್ತರನ್ನು ದಮ್ಮೂರ ಕಡೆಗೆ ಸೆಳೆಯುತ್ತಿದ್ದವು. ವರ್ಣ, ವರ್ಗ, ಲಿಂಗ ಭೇದವಿಲ್ಲದೆ ಭಕ್ತರು ತಾತನಲ್ಲಿಗೆ ಬರುತ್ತಿದ್ದರು. ಅಂಥವರಲ್ಲಿ ಕಂಚುಗಾರ-ಬೆಳಗಲ್ಲು

[illegible]

ಗ್ರಾಮದ ಸಾಧ್ವಿ ದೇವಕ್ಕಮ್ಮ ತಾತನವರ ಪ್ರಭಾವಕ್ಕೆ ಒಳಗಾಗಿ ವೈರಾಗ್ಯ ತಾಳಿ, ಸರ್ವಸ್ವವನ್ನೂ ತಿರಸ್ಕರಿಸಿ ಅವರ ಶಿಷ್ಯಳಾಗಲು ಬಯಸುತ್ತಾಳೆ.

ದೇವಕಿಯು ತಾನೊಂದು ದಿನ ಮಿಗೆ
ಯಾವರಿಸಿ ಮುಸುಕಿರುವ ನಿಶೆಯೊಳು
ಭಾವ ಜಾರಿಯ ನೆನೆದು ವೆಂಕಾವಧೂತನಂ ಮನದಿಂ |
ತೀವಿ ಮನೆಯವರಾರಿಗೊರೆಯದೆ
ಪಾವನದ ದಮ್ಮೂರು ಪಥವನು
ಭಾವೆ ದೇವಕ್ಕಮ್ಮ ಪಿಡಿದಳು ತೊರೆದು ಪಿತೃಜನರ ||[೫೯]

ದೇವಕ್ಕಮ್ಮನ ನಿಷ್ಠೆಯನ್ನು ಪರೀಕ್ಷಿಸಲು, ತಾತನು ಹಲವು ವಿಧದ ಅಡ್ಡಿ, ಆತಂಕಗಳನ್ನು, ಕಷ್ಟಗಳನ್ನು, ಒಡ್ಡುತ್ತಾರೆ. ಪರಮ ಸಾಧ್ವಿಯಾದ ಈಕೆ ಚಳಿ, ಮಳೆ, ಗಾಳಿ, ಬಿಸಿಲು, ಹಸಿವು, ನಿದ್ರೆಯೆನ್ನದೆ ಅವರು ಹೇಳಿದ ಆಜ್ಞೆಗಳನ್ನೆಲ್ಲಾ ಶಿರಸಾವಹಿಸಿ ಮಾಡುತ್ತಾಳೆ. ಅವಳ ನಿಷ್ಠೆಗೆ, ಭಕ್ತಿಗೆ, ಮೆಚ್ಚಿದ ತಾತನು ಆಕೆಯನ್ನು ಶಿಷ್ಯೆಯನ್ನಾಗಿ ಸ್ವೀಕರಿಸಿರುವುದು ತಿಳಿಯುತ್ತದೆ. ಇಂದು ಮಠದಲ್ಲಿ ದೇವಕ್ಕಮ್ಮನ ಗುಡಿಯಿದ್ದು, ನಿತ್ಯ ಪೂಜಾ ಕಾರ್ಯಗಳು ನಡೆಯುತ್ತಿವೆ.

ಮಂಟಪ ನಿರ್ಮಾಣ : ತಾನಿರುವ ಹಳೇ ಗುಡಿಯನ್ನು ಮಂಟಪವನ್ನಾಗಿ ನಿರ್ಮಾಣ ಮಾಡಬೇಕೆಂದು ಊರ ಪ್ರಮುಖರೊಂದಿಗೆ ತಾತನು ಪ್ರಸ್ತಾಪಿಸಿ, ಅನುಮತಿ ಪಡೆಯುತ್ತಾರೆ. ಅದರಂತೆ ಅಲ್ಲಿದ್ದ ದೊಡ್ಡ ದೊಡ್ಡ ಬಂಡೆಗಳನ್ನು ಮದ್ದು ಬತ್ತಿಗಳಿಂದ ಸೀಳಿ, ಅಂಬಾದೇವಿಯನ್ನು ನೆನೆಯುತ್ತಾ ಮಠದ ಕಾರ್ಯ ಪ್ರಾರಂಭಿಸುತ್ತಾರೆ. ಮಠದ ಕಟ್ಟಡಕ್ಕೆ ತಾವೇ ರೂಪುರೇಷೆಗಳನ್ನು ಹಾಕಿಕೊಂಡು ಅದಕ್ಕೆ ಬೇಕಾದ ಕಲ್ಲು ಬಂಡೆಗಳನ್ನು ತರಲು ಜನರೊಂದಿಗೆ ತಾವೇ ಹೋಗುತ್ತಾರೆ. ರಾಮಸಾಗರದಿಂದ ೧೦೦ ಬಂಡಿ, ಬುಕ್ಕ ಸಾಗರ ದಿಂದ ೧೦೦ ಬಂಡಿ, ತೆಕ್ಕಲಕೋಟೆಯಿಂದ ೨೧೧ ಬಂಡಿ, ಕೊಳಗಲ್ಲು ಗ್ರಾಮದಿಂದ ೨೫೦ ಬಂಡಿ ತಂದಿರುತ್ತಾರೆ. ಜನರಿಂದ ಎತ್ತಲಾಗದ ದೊಡ್ಡ ದೊಡ್ಡ ಬಂಡೆಗಳನ್ನು ತಾತನವರೇ ಎತ್ತಿ ಬಂಡಿಯಲ್ಲಿ ಹಾಕಿಕೊಂಡು ಬರುತ್ತಿದ್ದರಂತೆ. (ಕಲ್ಲುಗಳನ್ನು ಹಾಕಿಕೊಂಡು ಬಂದ ವಿಷಯವನ್ನು ತಾತನವರನ್ನು ಕಂಡ ಗ್ರಾಮಸ್ಥರು ತಿಳಿಸುತ್ತಾರೆ) ಒಮ್ಮೆ ಮುದ್ದಾಪುರದಿಂದ ೧೦೦ ಬಂಡಿ ಕಲ್ಲನ್ನು ತುಂಬಿಕೊಂಡು ಬರುವಾಗ ಮಾರ್ಗದ ಕಬ್ಬಿನ ಗದ್ದೆಯವ, ತನ್ನ ಕಬ್ಬು ಹಾಳಾಯಿತೆಂದು ನೊಂದುಕೊಳ್ಳುತ್ತಾನೆ. "ತಾತನಂತೆ, ಭೂತ" ಎಂದು ತನಗೆ ನಷ್ಟವಾಗಿರುವುದಕ್ಕೆ ರೋಧಿಸತೊಡಗುತ್ತಾನೆ. ಅದಕ್ಕೆ ತಾತನು ಹೊಲದವನನ್ನು ಹತ್ತಿರ ಕರೆದು "ನಿನಗೆ ನಷ್ಟವಾದರೆ ನನ್ನಲ್ಲಿ ಬಾ, ಪ್ರತಿ ವರ್ಷಕ್ಕಿಂತ ಹೆಚ್ಚಾಗಿ ಈ ಸಾರಿ ಬೆಲ್ಲವಾದರೆ ನನಗೆ ಕೊಡು" ಎಂದು ಹೇಳಿ ಬಂದರು. ಅದರಂತೆ ಅವನಿಗೆ ಪ್ರತಿ ವರ್ಷಕ್ಕಿಂತ ಹೆಚ್ಚು ಬೆಲ್ಲ ಆ ವರ್ಷವಾಯಿತು. ಆದ್ದರಿಂದ ಆ ಹೊಲದವ ತಾತನವರ ಭಕ್ತನಾಗಿ ಸುಮಾರು ೧೦ ವರ್ಷಗಳ ಕಾಲ ತಾತನ ಮಠಕ್ಕೆ ಬಂದು ಕಾಣಿಕೆ ಕೊಟ್ಟು ಹೋಗುತ್ತಿದ್ದನೆಂದು ತಿಳಿಸುತ್ತಾರೆ.

[illegible]

ಹೀಗೆ ಮಠಕ್ಕೆ ಬೇಕಾಗುವ ಕಲ್ಲುಗಳನ್ನು ಸುತ್ತ ಮುತ್ತಲಿನ ಹಳ್ಳಿಗಳಿಂದ ತಂದು ಮಠ ಕಟ್ಟಲು ಆರಂಭಿಸಿರುತ್ತಾರೆ. ಮಠವನ್ನು ಕಟ್ಟಲು ಬಂದ ಕೂಲಿಯವರಿಗೆ ಹಣವನ್ನು ನೀಡುವಾಗ ಪೆಟ್ಟಿಗೆಯಲ್ಲಿದ್ದ ಹರಿದ ಕಂಬಳಿಯಿಂದ ಹೊಸ ಹೊಸ ನೋಟುಗಳನ್ನು ತೆಗೆದುಕೊಟ್ಟಿದ್ದಾರೆ.. ಈವರೆಗೆ ಯಾರಿಂದಲೂ ಹಣ ಕೇಳದೇ ಇದ್ದ ತಾತನು ಹಣವನ್ನು ಕೂಲಿಕಾರರಿಗೆ ಹೇಗೆ ಕೊಡುತ್ತಿದ್ದರೆಂಬುದು ಯಾರಿಗೂ ತಿಳಿಯುತ್ತಿರಲಿಲ್ಲವೆಂದು ತಾತನನ್ನು ನೋಡಿದವರು ಹೇಳುತ್ತಾರೆ. ಒಟ್ಟಾರೆ ಶ್ರಮವಹಿಸಿ ತನಗನಿಸಿದ ಹಾಗೆ ಮಂಟಪ ನಿರ್ಮಾಣವನ್ನು ತಾತನೇ ಮಾಡಿಕೊಂಡಿರುವುದು ಮೇಲಿನ ಮಾಹಿತಿಯಿಂದ ತಿಳಿಯುತ್ತದೆ.

ಮಠ ಕಟ್ಟುವುದಕ್ಕಿಂತ ಮುಂಚೆ ಈ ಜಾಗ ಹಾಳು ಭೂಮಿಯಾಗಿದ್ದು, ದನ, ಕುರಿ, ಮೇಕೆಗಳು ಮೇಯುವ ಈ ಜಾಗದಲ್ಲಿ ತಾತ ಬಂದು ನೆಲೆಸಿದ್ದಾರೆ. ಒಮ್ಮೆ ಒಂದು ಕರು ತಗ್ಗಿನಲ್ಲಿ ಬಿದ್ದು ಸತ್ತು ಹೋಗಲು, ಅಲ್ಲಿದ್ದ ತಾತನವರು ಅದನ್ನು ಕೆರೆಯ ದಿನ್ನೆಯಲ್ಲಿ ಸಂಸ್ಕಾರ ಮಾಡಿರುತ್ತಾರೆ. ಆ ಬಸವಣ್ಣನೇ ಇಂದು ಜಾತ್ರೆಯ ರಥೋತ್ಸವಕ್ಕೆ 'ಎದುರು ಬಸವಣ್ಣ'ನಾಗಿರುವುದನ್ನು ಕಾಣಬಹುದು.

ಸಂಡೂರಿನ ಜಾತ್ರೆಗೆ ಪ್ರಯಾಣ : ಕುಮಾರಸ್ವಾಮಿಯ ಜಾತ್ರೆಗೆಂದು ನೂರಾರು ಭಕ್ತರ ಜೊತೆಯಲ್ಲಿ ತಾತನು ಹೋಗುತ್ತಾನೆ. ದೇವಸ್ಥಾನದ ಕಾವಲುಗಾರ ಅವರ ವಿಚಿತ್ರ ವೇಷವ ಕಂಡು ಹುಚ್ಚನಿರಬೇಕೆಂದು ದೇವರ ದರ್ಶನಕ್ಕೆ ಬಿಡುವುದಿಲ್ಲ. ಆದರೂ ಅವರು ಗುಡಿಯಲ್ಲಿರುತ್ತಾರೆ. ಇದನ್ನು ಕಂಡ ಭಕ್ತರು ಈತನು ಸಾಮಾನ್ಯನಲ್ಲ ಮಹಾಮಹಿಮನೆಂದು ಕೊಂಡಾಡುತ್ತಾರೆ.

ಭಕ್ತರ ಜೊತೆಗೂಡಿ ತಾತನು ಸಂಡೂರು ಪಟ್ಟಣಕ್ಕೆ ಬರಲು ಅಲ್ಲಿನ ಭಕ್ತರೆಲ್ಲಾ ಸೇರಿಕೊಂಡು, ಅವರನ್ನು ಮೆರವಣಿಗೆ ಮಾಡುತ್ತಾರೆ. ಅವರ ಮಹಿಮೆಯನ್ನು ಕೇಳಿದ ಸಂಡೂರಿನ ಮಹಾರಾಜರು ತಾತನವರಿಗೆ ಹುಲಿ ಚರ್ಮವನ್ನಿತ್ತು ಆಶೀರ್ವಾದ ಪಡೆದರೆಂದು ತಿಳಿಯುತ್ತದೆ.

ಗಂಧದ ಕುರ್ಚಿ-ಮಂಚಗಳನ್ನು ಮಾಡಿಸಿದ್ದು : ಜಾತ್ರೆಗೆಂದು ಬಂದಿದ್ದ ಜೋಗದ ಭಕ್ತರಿಗೆ ಗಂಧದ ಮರಗಳನ್ನು ಕಡಿದು ತರಲು ಆಜ್ಞಾಪಿಸುತ್ತಾರೆ. ಅದರಂತೆ ತಂದ ಗಂಧದ ಮರಗಳಿಂದ ಕುರ್ಚಿ ಮಂಚಗಳನ್ನು ಮಾಡಿಸಿ ಸಂಡೂರಿನ ಬೀದಿ ಬೀದಿಗಳಲ್ಲಿ ಮೆರವಣಿಗೆ ಮಾಡಿಕೊಂಡು ದಮ್ಮೂರ ಮಠಕ್ಕೆ ತರುತ್ತಾರೆ. ಅರಣ್ಯಾಧಿಕಾರಿಗಳಾಗಲಿ, ಇತರೆ ಅಧಿಕಾರಿಗಳಾಗಲಿ, ಗಂಧದ ಮರಗಳ ಬಗ್ಗೆ ಏನೊಂದೂ ಮಾತನಾಡದೆ, ತಾತನ ದರ್ಶನ ಪಡೆದಿರುತ್ತಾರೆ. ಅವರು ಮಾಡಿಸಿದ ಕುರ್ಚಿ, ಮಂಚಗಳನ್ನು ಇಂದೂ ಸಹ ಮಠದಲ್ಲಿ ನಾವು ಕಾಣಬಹುದು.

ಚಂದದಿಹ ಸಂಡೂರಿನಿಂದಲಿ
ತಂದು ದಮ್ಮೂರ ಗವಿಯೊಳಗೆ ಬಹು
ಸುಂದರದಿ ನೆಲೆಗೊಳಿಸಿದನು ಚಂದನದ ಮಂಚವನು ।
ಇಂದಿಗುಂ ವೆಂಕಾವಧೂತರ
ಅಂದವಹ ಮಂಟಪದಿ ಮಂಚವು
ಬಂದ ಜನಕ್ಕಂ ಭಕ್ತಿಯಾಶ್ಚರ್ಯಗಳು ನೊದವಿಪುದು ॥೬೦

[illegible]

[illegible]

[illegible]

[illegible]

[illegible]

[illegible]

ತಾತನ ಮಹಿಮೆಗಳು : ಮಾರಿರೋಗ ನಿವಾರಣೆ

ದಮ್ಮೂರು ಸುತ್ತ-ಮುತ್ತಲಿನ ಕೆಲಹಳ್ಳಿಗಳಲ್ಲಿ ಮಾರಿ ರೋಗ ಹರಡಿ ಸಾವು ನೋವುಗಳು ಸಂಭವಿಸುತ್ತಿರುತ್ತವೆ. ಭಯಗೊಂಡ ಗ್ರಾಮಸ್ಥರು ಗ್ರಾಮಬಿಡಲು ನಿರ್ಧರಿಸುತ್ತಾರೆ. ವಿಷಯ ತಿಳಿದ ತಾತನು ಅವರನ್ನೆಲ್ಲಾ ಸಮಾಧಾನಗೊಳಿಸಿ, ಊರಲ್ಲಿ ಶಿವಪೂಜೆ, ದೇವಿಪೂಜೆ, ಭಜನೆ ಕಾರ್ಯಕ್ರಮಗಳನ್ನು ಮಾಡುತ್ತಿರಿ ಮಾರಿರೋಗವನ್ನು ನಾನು ನಿವಾರಿಸುತ್ತೇನೆಂದು ಹೇಳುತ್ತಾರೆ. ಅದರಂತೆ ಒಂದು ವಾರದೊಳಗೆ ರೋಗ ನಿವಾರಣೆಯಾಗಿ ಸುಖ-ಶಾಂತಿಗಳು ನೆಲೆಸಿದವೆಂದು ಈಗಲೂ ತಾತನನ್ನು ಭಕ್ತರು ನೆನೆಯುತ್ತಾರೆ.

ಪ್ಲೇಗು, ಕಾಲರಾದಂತಹ ಸಾಂಕ್ರಾಮಿಕ ರೋಗ ಮತ್ತೊಮ್ಮೆ ಕಾಲಿಟ್ಟಾಗ, ತಾತನವರ ಹೇಳಿಕೆಯಂತೆ ಮಠದಲ್ಲಿ ಸಪ್ತಾಹ ಭಜನೆ, ಪೂಜಾದಿ ಕಾರ್ಯಗಳು ನಡೆಯುತ್ತಿರುತ್ತವೆ. ಸಾಂಕ್ರಾಮಿಕ ರೋಗದ ವಿಷಯ ತಿಳಿದ ಆರೋಗ್ಯಾಧಿಕಾರಿಗಳು ಗ್ರಾಮಕ್ಕೆ ಬರುತ್ತಾರೆ. ಆಗ ತಾತನವರು ಆರೋಗ್ಯಾಧಿಕಾರಿಗಳು ತಂದ ಚುಚ್ಚುಮದ್ದು ಮತ್ತು ಔಷಧವನ್ನೆಲ್ಲಾ ತಾನೇ ಸ್ವೀಕರಿಸಿ ಅವರನ್ನು ಹಿಂದಕ್ಕೆ ಕಳಿಸಿದ್ದಾರೆ. ಮಠದಲ್ಲಿ ಪೂಜಾದಿಕಾರ್ಯಗಳು ನಡೆಯುತ್ತಿದ್ದರೆ ತಾತನು ತನ್ನ ಕುದುರೆಯನ್ನೇರಿ 'ಶಾಂಭವಿ' ಎಂದು ದೇವಿ ಸ್ಮರಣೆ ಮಾಡುತ್ತಾ ಗ್ರಾಮವನ್ನು ಸುತ್ತುಹಾಕುತ್ತಿದ್ದರಿಂದ, ಕೆಲದಿನಗಳಲ್ಲಿಯೇ ರೋಗ ಪರಿಹಾರವಾಯ್ತೆಂದು ಭಕ್ತರು ಹೇಳುತ್ತಾರೆ.

ಹೊಸಪೇಟೆಯ ಭಕ್ತ ಲಕ್ಷ್ಮೀಪತಿಶೆಟ್ಟಿಯ ತಂಗಿಯ ಗಂಡನಾದ ಜನ್ನಪ್ಪಶೆಟ್ಟಿಗೆ ಅಂಟಿದ್ದ, ಯಾರಿಂದಲೂ ನಿವಾರಿಸಲಾಗದ ರೋಗವನ್ನು ತಾತನವರು ಒಂದು ವಾರದೊಳಗೆ ತೊಲಗಿಸಿರುವುದು ತಿಳಿಯುತ್ತದೆ.

ಬರಗಾಲ ನಿವಾರಣೆ : ಮಳೆ, ಬೆಳೆಯಿಲ್ಲದೆ ಅನ್ನ ನೀರಿಗೆ ತುಂಬಾ ತೊಂದರೆಯಾಗಿ ದನ ಕರುಗಳಿಗೂ ಸಹ ಮೇವು ನೀರಿಲ್ಲದೆ ಭೀಕರ ಬರಗಾಲ ಬಂದಿರುತ್ತದೆ. ಆತಂಕಕ್ಕೊಳಗಾದ ಗ್ರಾಮಸ್ಥರು ನೀನೇ ಕಾಪಾಡಬೇಕೆಂದು ತಾತನಲ್ಲಿ ಮೊರೆ ಹೋಗಲು, ಅದಕ್ಕೆ ತಾತನು ಊರವರೆಲ್ಲಾ ಸೇರಿ "ದೇವಿ ಪುರಾಣ ಪ್ರಾರಂಭಿಸಿ, ಪುರಾಣ ಮುಗಿಯುವುದರೊಳಗಾಗಿ ಮಳೆ ಬರುತ್ತದೆ" ಎನ್ನುತ್ತಾರೆ. ಅದರಂತೆ ಪುರಾಣ ಮುಗಿಯುವುದ ರೊಳಗಾಗಿ ಮಳೆ ಬಂದು, ಆ ವರ್ಷ ಉತ್ತಮ ಬೆಳೆಯಾಗಿ ರೈತರು ಸುಖ-ಸಂತೋಷದಲ್ಲಿದ್ದರೆಂದು ಅವರನ್ನು ನೋಡಿದವರು ಹೇಳುತ್ತಾರೆ.

ಭವಿಷ್ಯ ನುಡಿಯುವಿಕೆ : ಲೋಕವ್ಯವಹಾರದ ಆಗು-ಹೋಗುಗಳನ್ನು ತಮ್ಮ ದಿವ್ಯ ದೃಷ್ಟಿಯಲ್ಲಿ ಕಂಡು ಭವಿಷ್ಯ ನುಡಿಯು ತ್ತಿದ್ದರು. ಜೋಗದಲ್ಲಿದ್ದು ದಮ್ಮೂರಿನಲ್ಲಿ ನಡೆಯುವುದನ್ನು, ದಮ್ಮೂರಿನಲ್ಲಿದ್ದು ಇನ್ನೆಲ್ಲಿಯೋ ನಡೆಯುವುದನ್ನು ನುಡಿಯುತ್ತಿದ್ದರು. ಅದರಂತೆ ಅವರು ನುಡಿದಿದ್ದೆಲ್ಲಾ ನಡೆದಿದ್ದವೆಂದು ಭಕ್ತ ಜನತೆ ಈಗಲೂ ಹೇಳುತ್ತಾರೆ.

ಈಡಿಗರ ಬಸವಣ್ಣನೆಂಬುವನು ಸರಾಯಿ ವ್ಯಾಪಾರ ಮಾಡುತ್ತಿದ್ದನು. ಒಮ್ಮೆ ತಾತನು ಸರಾಯಿ ಮಡಿಕೆಯನ್ನು ಬೋರಲಾಗಿ ಹಾಕಲು, ಮುಂದೆ ಒಂದು ತಿಂಗಳೊಳಗಾಗಿ ಗಾಂಧೀಜಿಯವರು ಮಧ್ಯಪಾನ ನಿಷೇಧ ಕಾನೂನು ಜಾರಿಗೆ ತರುತ್ತಾರೆ. ಹೀಗೆ ಶುಭ-ಅಶುಭಗಳನ್ನು ತಿಳಿಸುತ್ತಿದ್ದರಿಂದ, ತಾತನ ಮೇಲಿನ ಭಕ್ತಿ ಗೌರವಗಳು ಹೆಚ್ಚಾಗಿ ಭಕ್ತರ ಸಂಖ್ಯೆ ಅಧಿಕವಾಗಿರುವುದನ್ನು ನೋಡಬಹುದು.

[illegible]

ಸಂತಾನ ಪ್ರಾಪ್ತಿ: ಮಕ್ಕಳಿಲ್ಲದವರು ಬಂದು ಮೊರೆಯಿಟ್ಟಾಗ, ಮಠಕ್ಕೆ ಬರುವ ಭಕ್ತರು ನೀಡಿದ ಫಲ-ತಾಂಬೂಲಗಳನ್ನು ತೆಗೆದುಕೊಂಡು "ದುಡಿಯುವವರಿಗೆ ಬಿಟ್ಟು, ದುಡಿಯದವರಿಗೆ ಕೊಡುತ್ತೀಯಲ್ಲ" ಎಂದು ನೀಡಿ ಆಶೀರ್ವದಿಸುತ್ತಿದ್ದರು. ಭಕ್ತರು ಶುದ್ಧ ಮನಸ್ಸಿನಿಂದ ತಾತನನ್ನು ನಂಬಿ ಫಲ-ತಾಂಬೂಲ ಸ್ವೀಕರಿಸಿದವರಿಗೆ ಮಕ್ಕಳಾಗಿರುವುದು ತಿಳಿಯುತ್ತದೆ. ಹೀಗೆ ಎಷ್ಟೋ ಜನರಿಗೆ ತಾತನಿಂದ ಸಂತಾನ ಪ್ರಾಪ್ತಿಯಾಗಿ ಅವರ ಭಕ್ತರಾಗಿರುವುದು ಕಂಡು ಬರುತ್ತದೆ. ಈ ರೀತಿ ಭಕ್ತರ ವೈಯಕ್ತಿಕ ಮತ್ತು ಗ್ರಾಮದ ಸಾಮೂಹಿಕ ಸಮಸ್ಯೆಗಳನ್ನು ಬಗೆಹರಿಸಿರುವುದನ್ನು ಕಾಣಬಹುದು.

ಹೂ ತೋಟವಾದದ್ದು : ತಾತನು ಒಂದೇ ಸಮನೆ ಸಿಗರೇಟು ಸೇದುತ್ತಿದ್ದು, ಯಾರು ತಂದು ಕೊಡುತ್ತಿದ್ದರೋ ಒಬ್ಬರಿಗೂ ಗೊತ್ತಾಗುತ್ತಿರಲಿಲ್ಲ. ಸಿಗರೇಟು ಸೇದಿ ಸೇದಿ ಕೈಯೆಲ್ಲಾ ಕಪ್ಪಾಗಿದ್ದವು. ಜೊತೆಗೆ ಮಠದ ಆವರಣದಲ್ಲಿ ಗಾಂಜಾ ಮತ್ತು ತಂಬಾಕಿನ ಗಿಡಗಳಿದ್ದವು. ಈ ವಿಷಯ ಪೋಲಿಸಿನವರಿಗೆ ಗೊತ್ತಾಗಿ, ಪರೀಕ್ಷಿಸಲೆಂದು ಮಠಕ್ಕೆ ಬಂದರೆ ಗಾಂಜಾ ಮತ್ತು ತಂಬಾಕಿನ ಗಿಡಗಳೆಲ್ಲಾ ಹೂವಿನ ತೋಟವಾಗಿ ಕಂಡುಬಂದಿವೆ. ನಂತರ ತಾತನವರೇ ಈ ಎಲ್ಲಾ ಗಿಡಗಳನ್ನು ಕಿತ್ತು, ಅವು ಮುಂದೆ ಬೆಳೆಯದಂತೆ ಮಾಡಿದರೆಂಬ ವಿಷಯವನ್ನು ತಿಳಿಸುತ್ತಾರೆ.

ಅಂಬಾ ಜಾತ್ರೆಗೆ ಪ್ರಯಾಣ : ಊರ ಭಕ್ತರ ಜೊತೆ ಅತಿ ವೈಭವದಿಂದ ನಡೆಯುವ ಅಂಬಾದೇವಿಯ ಜಾತ್ರೆಗೆ ಹೋಗುತ್ತಾರೆ. ಆದರೆ ಮಾರ್ಗ ಮಧ್ಯದಲ್ಲಿ ತುಂಗಭದ್ರಾ ನದಿಯು ತುಂಬಿ ಹರಿಯುತ್ತಿದ್ದು, ದಾಟಿ ಹೋಗಲು ಅಸಾಧ್ಯವಾಗಿರುತ್ತದೆ. ಆಗ ತಾತನವರು ಮುನ್ನುಗ್ಗಿ ದೇವಿಯನ್ನು ನೆನೆಯುತ್ತಾ ಹೋಗಲು, ಉಳಿದ ಭಕ್ತರೆಲ್ಲಾ ಅವರನ್ನು ಹಿಂಬಾಲಿಸಿ ನದಿ ದಾಟಿದ್ದಾರೆ. ಜಾತ್ರೆಯಲ್ಲಿ ತಾತನವರ ಗುರುಗಳಾದ ಅಣ್ಣಾಜಿ ಅವಧೂತರೂ ಬಂದಿದ್ದು, ಇಬ್ಬರೂ ಸೇರಿ ಆಧ್ಯಾತ್ಮದ ವಿಷಯವನ್ನು ಮಾತಾಡಿಕೊಳ್ಳುತ್ತಿದ್ದರೆಂದು ತಿಳಿಯುತ್ತದೆ.

ವೆಂಕಟಾಪುರದಲ್ಲಿ ವಾಸ : ಹಂಪಿಗೆ ೮ ಮೈಲಿಗಳ ಅಂತರದಲ್ಲಿರುವ ವೆಂಕಟಾಪುರ ತೀರ ಹಿಂದುಳಿದ ಮತ್ತು ಬಡತನದಿಂದ ಕೂಡಿದ ಹಳ್ಳಿ. ಊರವರೆಲ್ಲಾ ಹಳ್ಳಿ ಬಿಟ್ಟು ಬೇರೆ ಕಡೆ ಜೀವನೋಪಾಯಕ್ಕೆ ಹೋಗಲು ಸಿದ್ಧವಾಗಿರುತ್ತಾರೆ. ಊರ ಹೊರಗಿನ ಗವಿಯಲ್ಲಿ ತಾತನು ಬಂದು ನೆಲೆಸಿದ್ದಾನೆಂಬ ವಿಷಯ ತಿಳಿದು ಗ್ರಾಮಸ್ಥರೆಲ್ಲಾ ಹೋಗಿ ಊರು ಬಿಡುವ ವಿಷಯ ಪ್ರಸ್ತಾಪಿಸುತ್ತಾರೆ. ಜನರ ಆತಂಕ ಮತ್ತು ಕಷ್ಟವನ್ನು ತಿಳಿದ ತಾತನು ಅವರನ್ನೆಲ್ಲಾ ಸಮಾಧಾನ ಮಾಡಿ "ಊರು ಬಿಡುವ ಪ್ರಮಾದ ಬೇಡ, ನಾನಿದ್ದೇನೆಂದು" ಆಶೀರ್ವದಿಸಿದ್ದಾರೆ. ಊರವರೆಲ್ಲಾ ತಾತನ ಹೇಳಿಕೆಯಂತೆ ನಡೆದುಕೊಂಡು ಭಕ್ತಿ ಗೌರವದಿಂದ ಪೂಜಾ ಕಾರ್ಯಗಳನ್ನು ನಡೆಸಿ, ಎಲ್ಲರೂ ಒಗ್ಗಟ್ಟಿನಿಂದಿದ್ದು ಸುಖವಾಗಿ ಬಾಳಿದ್ದಾರೆ. ಮುಂದೆ ಆ ಗ್ರಾಮಕ್ಕೆ ಸೋಂಕಿದ ರೋಗವನ್ನೂ ಸಹ ನಿವಾರಣೆ ಮಾಡಿರುವುದು ತಿಳಿದುಬರುತ್ತದೆ.

ತಾತನು ಸ್ನಾನ ಮಾಡಿದ್ದನ್ನು, ಮಡಿ ಬಟ್ಟೆ ಉಟ್ಟಿದ್ದನ್ನು ನಾವ್ಯಾರು ಕಾಣಲೇ ಇಲ್ಲ. ಆದರೂ ಅವರು ಹೂವಿನಂತೆ ಪರಿಮಳದ ಸುವಾಸನೆ ಬರುತ್ತಿದ್ದರು. ನಮಸ್ಕರಿಸಲು ತನ್ನ ಪಾದವನ್ನು ಯಾರಿಗೂ ಕೊಡುತ್ತಿರಲಿಲ್ಲವೆಂದು ಅವರನ್ನು ನೋಡಿದ ಜನ ಹೇಳುತ್ತಾರೆ. ಒಟ್ಟಾರೆ ಅವರ ವೇಷ-ಭೂಷಣ, ಊಟ-ಉಪಚಾರಗಳು

ವಿಚಿತ್ರವಾಗಿದ್ದು, ಸದಾ ದೇವಿಯನ್ನು, ಶಿವನನ್ನು ಸ್ಮರಿಸುತ್ತಿದ್ದರು. ಇಂತಹ ವಿಶಿಷ್ಟ ಸ್ವಭಾವದ ವಿಚಿತ್ರ ನಡೆ-ನುಡಿಯ ತಾತನು ದಮ್ಮೂರಿಗೆ ಬರುವುದನ್ನು ಅನೇಕ ವರ್ಷಗಳ ಮೊದಲೆ ಪರವು ಸಮಾರಂಭದಲ್ಲಿ ವಗ್ಗಪ್ಪತಾತ ಮತ್ತು ಮುದೇನೂರಿನ ಮಲ್ಲಪ್ಪತಾತನು ಈ ರೀತಿ ನುಡಿದಿದ್ದರು. ''ಇಲ್ಲೊಂದು ಕರಿಹುಲಿ ಬಂದು ನೆಲೆಸುತ್ತದೆ. ಅದರಿಂದ ಹೇಳಲಾಗದ, ನೋಡಲಾಗದ ಅಸಾಧ್ಯ ಕಾರ್ಯಗಳು ನಡೆಯುತ್ತವೆ'' ಎಂದು ಭವಿಷ್ಯ ನುಡಿದಿದ್ದರು. ಆ ಮಹಾತ್ಮರ ವಾಣಿಯಂತೆ ವೆಂಕಪ್ಪತಾತನು ದಮ್ಮೂರಿಗೆ ಬಂದು ನೆಲೆಸಿದರೆಂದು ಇಂದಿನ ಭಕ್ತ ಜನತೆಯ ನಂಬಿಕೆಯಾಗಿದೆ.

ತಾತನ ಮತ್ತೊಂದು ವಿಶೇಷವೆಂದರೆ ಯಾರಿಗೂ ಫೋಟೋ ತೆಗೆಯಲು ಅವಕಾಶ ಕೊಡುತ್ತಿರಲಿಲ್ಲ. ಅವರೇನಾದರು ಫೋಟೋ ತೆಗೆದರೆ ಆ ಫೋಟೋವೇ ಬರುತ್ತಿರಲಿಲ್ಲ. ಒಮ್ಮೆ ಬಳ್ಳಾರಿಯ ಮುಂಡ್ಲೂರು ಗಂಗಪ್ಪನವರು ಚುನಾವಣೆಯಲ್ಲಿ ಗೆದ್ದಿದ್ದರ ದ್ಯೋತಕವಾಗಿ, ತಾತನ ಪೂಜೆ ಮಾಡಿ ಫೋಟೋ ಒಂದನ್ನು ತೆಗೆದರು. ಅದೊಂದೇ ಫೋಟೋವಂತೆ ಬಂದಿದ್ದು. ಅದೇ ಮೊದಲು ಮತ್ತು ಕೊನೆಯ ಫೋಟೋವೆಂದು ಮಠದ ಸಮಿತಿಯವರು ತಿಳಿಸುತ್ತಾರೆ.

ಆಸ್ಪತ್ರೆಯಲ್ಲಿ ಗುಣಪಡಿಸಲಾಗದ ಅದೆಷ್ಟೋ ಕಾಯಿಲೆಗಳನ್ನು ತಾತನವರು ಗುಣಪಡಿಸಿದ್ದಾರೆ. ಜ್ವರ ಬಂದವರಿಗೆ, ಕೈ, ಕಾಲು ನಿಶ್ಯಕ್ತಿ ಹೊಂದಿದವರಿಗೆ, ಮಕ್ಕಳಿಲ್ಲದವರಿಗೆ, ದೇಹ ಬಾಧೆ ಬಂದವರಿಗೆ, ಹೀಗೆ ಭಕ್ತರ ಸಾಮೂಹಿಕ ಮತ್ತು ವೈಯಕ್ತಿಕ ಸಮಸ್ಯೆಗಳನ್ನು ಪರಿಹರಿಸಿದ್ದಾರೆ. ತನ್ನ ಜೀವಿತದುದ್ದಕ್ಕೂ ಮೇಲು-ಕೀಳೆನ್ನದೆ, ಬಡವ-ಬಲ್ಲಿದನೆನ್ನದೆ ಸಮಾನ ಗೌರವ ಮತ್ತು ಸಮಾನ ಭಾವನೆಯಿಂದ ಕಂಡಿದ್ದಾರೆ. ತಾತನವರ ಈ ಭಾವನೆಯಿಂದಲೇ ಮಠವಿಂದು ನಾನಾ ವಿಧವಾಗಿ ಅಭಿವೃದ್ಧಿ ಹೊಂದುತ್ತಿದೆ ಎಂಬುದು ಅಲ್ಲಿನ ಭಕ್ತಾದಿಗಳ ನಂಬಿಕೆಯಾಗಿದೆ.

ಕಾಲ ಕಳೆದಂತೆ ತಾತನ ದೇಹ ಸ್ಥಿತಿಯಲ್ಲಿ ಬದಲಾವಣೆ ಕಂಡು ಬಂದು, ಅನ್ನ-ಆಹಾರಾದಿಗಳನ್ನು ಬಿಡುತ್ತಾರೆ. ಬಂದ ಭಕ್ತರುಗಳಿಗೆ ದರ್ಶನವಿಲ್ಲ. ಕುಳಿತ ಸ್ಥಳದ ಬದಲಾವಣೆಯಿಲ್ಲ. ಹೀಗಿರಲಾಗಿ ತಾತನು ತನ್ನ ಆತ್ಮೀಯ ಭಕ್ತರನ್ನು ಕರೆಸಿ, ತಾನು ದೇಹ ತ್ಯಾಗ ಮಾಡುವ ವಿಷಯ ತಿಳಿಸಿದರು. ಅದರಂತೆ ದೇಹತ್ಯಾಗ ಮಾಡುವಾಗ ಒಂದು ಕೊಡದಷ್ಟು ನೀರನ್ನು ಕುಡಿದು, ಯೋಗದ ರೀತಿಯಲ್ಲಿ ಗುದದಿಂದ ವಿಸರ್ಜನೆ ಮಾಡಿ, ಯಾವ ನೋವು ನರಳಿಕೆಯಿಲ್ಲದೆ ಬೇನೆ ವ್ಯಾಧಿಗಳಿಲ್ಲದೆ, ಶ್ರೀ ಶಾಲಿವಾಹನ ಶಕೆ ೧೮೮೩ ಶ್ರೀ ನಂದನನಾಮ ಸಂವತ್ಸರದ ಮಾಘ ಶುದ್ಧ ಚತುರ್ದಶಿಯಂದು ದೈವಾಧೀನರಾಗಿದ್ದಾರೆ. (೨೯-೧-೧೯೫೩) ಆ ಹುಣ್ಣಿಮೆಯ ದಿನದಂದು ಅವರೇ ಕಟ್ಟಿಕೊಂಡ ಮಂಟಪದ ಗವಿಯಲ್ಲಿ ಅವರ ಭೌತಿಕ ದೇಹವನ್ನು ಭಕ್ತರೆಲ್ಲ ಸೇರಿ ಸಮಾಧಿ ಮಾಡಿದ್ದಾರೆ.

ತಾತನವರು ಸಮಾಧಿಯಾದ ಮೇಲೆ ಭಕ್ತಾದಿಗಳೆಲ್ಲಾ ಸೇರಿ ಸಮಿತಿಯೊಂದನ್ನು ಮಾಡಿಕೊಂಡು ಮಠದ ಏಳ್ಗೆಗೆ ಶ್ರಮಿಸುತ್ತಿದ್ದಾರೆ. ತಾತನವರ ಅಮೃತಶಿಲಾಮೂರ್ತಿ, ರಥ, ಮತ್ತು ಕಲ್ಯಾಣ ಮಂಟಪಗಳನ್ನು ಕಟ್ಟಿದ್ದಾರೆ. ಸುತ್ತ ಮುತ್ತಲಿನ ಗ್ರಾಮದ ಭಕ್ತರ ಮನೆಯ ಮದುವೆಗಳು ಮಠದಲ್ಲಿ ಸುಗಮವಾಗಿ ನಡೆಯುತ್ತಿವೆ. ಪ್ರತಿ ಅಮವಾಸ್ಯೆಯ ಪೂಜೆಗಂತೂ ಜಾತ್ರೆಯ ರೀತಿಯಲ್ಲಿ ಭಕ್ತರು ಎಲ್ಲೆಲ್ಲಿಂದಲೋ ಬಂದು ಸೇರುತ್ತಾರೆ. ಬಂದ ಭಕ್ತರ ಅನುಕೂಲಕ್ಕೆ ವಸತಿ ಮತ್ತು ದಾಸೋಹದ ವ್ಯವಸ್ಥೆಯಿದೆ.

ತಾತನವರು ದೈವಾಧೀನರಾದ ನೆನಪಿಗೆ ೧೯೫೫ ರಿಂದ ಪ್ರತಿ ವರ್ಷ ಮಾಘ ಮಾಸದ ಹುಣ್ಣಿಮೆಯ ದಿನದಂದು ಅದ್ದೂರಿಯಾಗಿ ರಥೋತ್ಸವ ನಡೆಯುತ್ತಾ ಬಂದಿದೆ. ಅದೇ ದಿನ ತಾತನು ಅಲೆದಾಡಿದ ಜೋಗ, ಹಂಪಸಾಗರ, ಕೋಣನಾಯ್ಕನ ಹಳ್ಳಿಯಲ್ಲಿಯೂ ರಥೋತ್ಸವ ಜರುಗುತ್ತಲಿವೆ.

೪. ೪. ಕೊಳಗಲ್ಲು ಎರಿಬಸವತಾತ

ಬಳ್ಳಾರಿಯ ವಾಯುವ್ಯ ದಿಕ್ಕಿನಲ್ಲಿ ಸುಮಾರು ೮ ಕಿ.ಮೀ. ದೂರದಲ್ಲಿರುವ ಗ್ರಾಮ ಕೊಳಗಲ್ಲು. ಈ ಗ್ರಾಮವು ಎರಿಬಸವ ತಾತನಿಂದಾಗಿ ಪುಣ್ಯಕ್ಷೇತ್ರವಾಗಿ ಪ್ರಸಿದ್ಧಿಯಾಗಿದೆ. ಇವರ ಜೀವನ ಸಾಧನೆಗಳನ್ನು ಲಭ್ಯವಿರುವ ಆಕರಗಳ ನೆರವಿನಿಂದ ಹೀಗೆ ಕ್ರೋಢೀಕರಿಸಿ ಹೇಳಬಹುದು.

ಕುರಿ-ಮೇಕೆಗಳನ್ನು ಸಾಕುತ್ತಾ, ಕೃಷಿಕ ಜೀವನ ಸಾಗಿಸುತ್ತಿದ್ದ ಸಕ್ರಪ್ಪ ಮತ್ತು ಸಣ್ಣಮ್ಮ ಎಂಬ ಹಾಲುಮತದ ದಂಪತಿಗಳಿಗೆ ಮಕ್ಕಳಿಲ್ಲದ ಕೊರಗು. ತಿಳಿದ ದೇವರಿಗೆಲ್ಲಾ ಸಲ್ಲಿಸಿದ ಹರಕೆ, ಪೂಜಾದಿ ವ್ರತಗಳಿಂದಲೂ ಫಲಕಾಣಲಿಲ್ಲ.

ಸತಿಯು ಸಣ್ಣಮ್ಮಳಿಗೆ ಯವ್ವನ
ಗತಿಸಿ ಪೋಗುತಲಿರ್ದಡಂ ಮತಿ
ಹಿತದ ಸಂತಾನವದು ಪ್ರಾಪ್ತಿಯು ಮಾಗದಿರುತಿರಲು |
ಕ್ಷಿತಿಯೊಳಿಂತೇಕೆಸಪನಾ ಶಿವ
ಗತಿಯದಾರನ್ವಯಕೆ ನಮಗೆಂ
ದತಿಶಯದ ಚಿಂತಾಗ್ನಿಯೊಳು ಬೇಯುತಳಿರ್ದಳನುದಿನದಿ ||[೬೧]

ಅಕ್ಕ-ಪಕ್ಕದ ಮನೆಯವರ, ಕೇರಿಯವರ ಬಂಜೆಯೆಂಬ ನಿಂದನೆಯ ಮಾತುಗಳನ್ನು ಕೇಳಲಾರದೆ ಮನದೊಳಗೇ ಕೊರಗುತ್ತಿದ್ದಳು. ಇವಳ ಕೊರಗನ್ನು, ವ್ಯಥೆಯನ್ನು ಕಂಡ ಜನ, ಆ ದಂಪತಿಗಳಿಗೆ "ಗಂಗಾವತಿ ಬಳಿಯಿರುವ ಕುಂಟೋಜಿ ಕ್ಷೇತ್ರದ ಹುಚ್ಚಪ್ಪತಾತನಲ್ಲಿ ಮೊರೆ ಹೋಗಿರಿ, ನಿಮ್ಮ ಇಷ್ಟಾರ್ಥವನ್ನು ಖಂಡಿತಾ ಅವರು ನೆರವೇರಿಸುವರು" ಇದು ಸತ್ಯ ಎಂದು ಹೇಳುತ್ತಾರೆ. ಜನರ ಮಾತನ್ನು ನಂಬಿ ದಂಪತಿಗಳಿಬ್ಬರು ಕುಂಟೋಜಿ ಕ್ಷೇತ್ರಕ್ಕೆ ಬಂದು ಹುಚ್ಚಪ್ಪತಾತನನ್ನು ಕಂಡು ನಮಸ್ಕರಿಸಿ, ತಮ್ಮ ಮನದ ಕೊರಗನ್ನು ಹೇಳಿಕೊಳ್ಳುತ್ತಾರೆ. ದಂಪತಿಗಳಿಬ್ಬರ ಶುದ್ಧ ನಡೆ ನುಡಿಯನ್ನು, ತಿಳಿ ಮನಸ್ಸಿನ ಮುಗ್ಧ ಭಕ್ತಿಯನ್ನು, ಮೆಚ್ಚಿದ ತಾತನು "ಕೇಳಿರಿ, ನಿಮಗೆ ನಾಲ್ಕು ಮಕ್ಕಳಾಗುತ್ತವೆ. ಅವರಲ್ಲಿ ಇಬ್ಬರು ಇರುವುದಿಲ್ಲ. ಉಳಿದಿಬ್ಬರಲ್ಲಿ ಒಬ್ಬ ನಿಮಗೆ, ಮತ್ತೊಬ್ಬನನ್ನು ನನಗೆ ಕೊಡಿ" ಎಂದು ಹೇಳುತ್ತಾರೆ. ತಾತನವರ ಮಾತನ್ನು ದಂಪತಿಗಳಿಬ್ಬರು ಸಂತೋಷವಾಗಿ ಒಪ್ಪಿ, ಆಶೀರ್ವಾದ ಪಡೆದು ಸ್ವಗ್ರಾಮಕ್ಕೆ ಬರುತ್ತಾರೆ.

ತಾತನಿಂದ ಆಶೀರ್ವಾದ ಪಡೆದು ಬಂದ ಕೆಲದಿನಗಳು ಕಳೆಯುವುದರಲ್ಲೆ ಸಣ್ಣಮ್ಮನು ತಾಯಿಯಾಗುವ ಸೂಚನೆಗಳು ಕಂಡು ಬರುತ್ತವೆ. ಅದರಂತೆ ಎರಡು ವರ್ಷದ ಒಳಗಾಗಿ ಎರಡು ಮಕ್ಕಳು ಜನಿಸುತ್ತವೆಯಾದರೂ ಅವುಗಳು ಉಳಿಯಲಿಲ್ಲ. ಮತ್ತೆ ಕುಂಟೋಜಿ ಕ್ಷೇತ್ರಕ್ಕೆ ಬಂದು ತಾತನವರ ಆಶೀರ್ವಾದ ಪಡೆದು ಬರುತ್ತಾರೆ. ಕ್ರಮೇಣ ಒಂದು ವರ್ಷ ಕಳೆಯುವುದರಲ್ಲಿ ಒಂದು ಗಂಡು ಮಗುವಿಗೆ, ಮತ್ತೊಂದು ವರ್ಷ ಕಳೆಯುವುದರಲ್ಲಿ

ಇನ್ನೊಂದು ಗಂಡು ಮಗುವಿಗೆ ಜನನವಾಯಿತು. ಮೊದಲ ಮಗನಿಗೆ ಎರಿಬಸವನೆಂದೂ, ಎರಡನೇ ಮಗುವಿಗೆ ಲಿಂಗಪ್ಪನೆಂದೂ ನಾಮಕರಣ ಮಾಡಿರುತ್ತಾರೆ.[೬೨] ಇಬ್ಬರು ಮಕ್ಕಳನ್ನು ಕರೆದುಕೊಂಡು ಕುಂಟೋಜಿ ಕ್ಷೇತ್ರಕ್ಕೆ ದಂಪತಿಗಳಿಬ್ಬರು ಬಂದಾಗ, ತಾತನು ಎಲ್ಲರಿಗೂ ಆಶೀರ್ವದಿಸಿ, ಹೇಳಿದ ಮಾತಿನಂತೆ ಮತ್ತೊಮ್ಮೆ ಬಂದಾಗ ಎರಿಬಸವನನ್ನು ಬಿಟ್ಟು ಹೋಗಿರಿ ಎಂದು ಹೇಳಿದರು.

ನಾಲ್ಕೈದು ವರ್ಷಗಳಾದಾಗ ಮಕ್ಕಳು ವಿದ್ಯೆ ಕಲಿಯಲೆಂದು ಶಾಲೆಗೆ ಕಳಿಸುತ್ತಾರೆ. ಆದರೆ ಮಕ್ಕಳಿಬ್ಬರೂ ಶಾಲೆಯಲ್ಲಿ ಓದದೆ, ಬರೆಯದೆ ಮನಸಾ ಇಚ್ಛೆಯಿಂದ ವರ್ತಿಸುತ್ತಿದ್ದರು. ವಿದ್ಯೆ ಹತ್ತದ ಮಕ್ಕಳ ಬಗ್ಗೆ ದಂಪತಿಗಳಿಬ್ಬರು ಚಿಂತಿಸಿ, ಮುಂದಿನ ದಾರಿ ಕಾಣದೆ ಲಿಂಗಪ್ಪನನ್ನು ವ್ಯವಸಾಯಕ್ಕೂ, ಎರಿಬಸವನನ್ನು ಕುರಿ ಕಾಯುವುದಕ್ಕೂ ನೇಮಿಸುತ್ತಾರೆ. ಹೀಗೆ ಕೆಲದಿನಗಳು ಕಳೆಯುತ್ತಿರಲು, ಹುಚ್ಚಪ್ಪಾರ್ಯರ ಮಾತು ನೆನೆದು ಎರಿಬಸವನನ್ನು ಕರೆದುಕೊಂಡು ದಂಪತಿಗಳಿಬ್ಬರೂ ಕುಂಟೋಜಿ ಕ್ಷೇತ್ರಕ್ಕೆ ಬರುವಾಗ, ದಾರಿಯಲ್ಲಿ ತುಂಗಭದ್ರಾ ನದಿಯನ್ನು ದಾಟಿ ಬರಬೇಕಿತ್ತು. ದೋಣಿಯಲ್ಲಿ ತಂದೆ ತಾಯಿ ಮತ್ತು ಎರಿಬಸವ ಬರುವಾಗ, ಎರಿಬಸವನು ದೋಣಿಯಿಂದ ಹಾರಿ ನದಿಯಲ್ಲಿ ಈಜುತ್ತಾ ದಡಸೇರುತ್ತಾನೆ. ಗಾಬರಿಗೊಂಡಿದ್ದ ತಂದೆ, ತಾಯಿಗಳು ಮಗ ದಡ ಸೇರಿದ್ದನ್ನು ಕಂಡು ನಿಟ್ಟುಸಿರು ಬಿಡುತ್ತಾರೆ. ಬಾಲ್ಯದಲ್ಲಿಯೆ ಇಂತಹ ಅಸಮಾನ್ಯ ಸ್ವಭಾವ ಹೊಂದಿದ್ದ ಎರಿಬಸವನನ್ನು ಕರೆದುಕೊಂಡು ತಾತನಲ್ಲಿಗೆ ಬಂದು ದಾರಿಯಲ್ಲಿ ನಡೆದ ಘಟನೆ ಯನ್ನೆಲ್ಲಾ ವಿವರಿಸುತ್ತಾರೆ. ಸುಮಾರು ಮೂರು ದಿನಗಳ ಕಾಲ ತಂದೆ, ತಾಯಿಗಳು ಮಠದಲ್ಲಿದ್ದು ಎರಿಬಸವ ನನ್ನು ತಾತನಲ್ಲಿಯೇ ಬಿಟ್ಟು ಕೊಳಗಲ್ಲಿಗೆ ಹಿಂದಿರುಗಿದರು.

ಮಠದಲ್ಲುಳಿದ ಎರಿಬಸವನು ನಿತ್ಯ ಮುಂಜಾನೆ ಎದ್ದವನೇ ಮಠದ ಆವರಣವನ್ನು ಹಸನುಗೊಳಿಸಿ, ದನದ ಕೊಟ್ಟಿಗೆಯನ್ನು ಸ್ವಚ್ಛಗೊಳಿಸಿ, ಸ್ನಾನ ಮಾಡಿ, ಗುರುಗಳಿಗೆ ನಮಸ್ಕರಿಸಿ, ಗುರು ಸಮ್ಮುಖದಲ್ಲಿ ಕುಳಿತು ಉಳಿದ ಮಠದ ಸ್ನೇಹಿತರೊಡನೆ ಶಾಸ್ತ್ರ, ಭಜನೆ ಮಾಡುತ್ತಿದ್ದನು. ಪ್ರಸಾದ ಸ್ವೀಕರಿಸಿ, ದನಗಳನ್ನು ಮೇಯಿಸಲು ಅಡವಿಗೆ ಹೋಗುವುದು ನಿತ್ಯದ ಕಾಯಕವಾಗಿರುತ್ತದೆ. ಹೀಗಿರಲು ಒಂದು ದಿನ ದನ ಕಾಯಲುಹೋದ ಎರಿಬಸವನಾಗಲಿ, ದನಕರುಗಳಾಗಲಿ, ಸಂಜೆಯಾದರೂ ಮಠಕ್ಕೆ ಬಾರದಿರಲು, ಗಾಬರಿಯಾದ ಗುರು

ಹುಚ್ಚಪ್ಪಾರ್ಯರು ತಿಳಿದು ಮನದೊಳ
ಗಚ್ಚರಿಯನೊಂದುತಲಿ ಶಿಷ್ಯರ
ನೊಚ್ಚತದಿ ಕರೆದೆರಿಬಸವನಿರುಳಾದೊಡುಂ ಬರದೇ।
ಶ್ವೇಚ್ಛೆಯಿಂದೆಲ್ಲಿಪನೋ ಗೋ
ಸಚ್ಚಮೂಹವು ಬಾರದಿರ್ಪುದು
ನಿಚ್ಚದಂದದೊಳಿಂದುಮರಿಯುವ ಬನ್ನಿರೆಂದೆನುತ ॥[೬೩]

ಕೆಲ ಶಿಷ್ಯರನ್ನು ಕರೆದುಕೊಂಡು ಅಡವಿಗೆ ಬರುತ್ತಾರೆ. ಅಲ್ಲಿ ಧ್ಯಾನಾಸಕ್ತನಾಗಿದ್ದ ಎರಿಬಸವನು ಪಕ್ಕದಲ್ಲಿದ್ದ ಹಾವನ್ನೂ ಗಮನಿಸದೆ ಪರವಶನಾಗಿದ್ದನು. ದನಗಳೆಲ್ಲಾ ಗುಂಪುಗೂಡಿ ನಿಂತಿರುತ್ತವೆ. ಈ ಅಸಮಾನ್ಯ

ದೃಶ್ಯ ಕಂಡ ಗುರುಗಳು ಆಶ್ಚರ್ಯಚಕಿತರಾಗಿ, ಶಿಷ್ಯನನ್ನು ಮನಸಾರೆ ಮೆಚ್ಚಿ, ಎಚ್ಚರಗೊಳಿಸಿ ಮಠಕ್ಕೆ ಕರೆತರುತ್ತಾರೆ. ಅಂದಿನಿಂದ ಎರಿಬಸವನನ್ನು ಅಡವಿಗೆ ಕಳಿಸದೆ, ಮಠದ ಸೇವೆಯನ್ನು ಮಾಡಿಸದೆ ತನ್ನ ಬಳಿಯಲ್ಲೆ ಸೇವೆ ಮಾಡಲು ನೇಮಿಸಿಕೊಳ್ಳುತ್ತಾರೆ. ಹೀಗಿರಲು ಒಂದು ದಿನ ತಾತನು ತನ್ನೆಲ್ಲಾ ಶಿಷ್ಯರನ್ನು ಕರೆದು ಸಮ್ಮುಖದಲ್ಲಿ ಕುಳ್ಳಿರಿಸಿಕೊಂಡು 'ಮಾನವ ಜನ್ಮದ ರಹಸ್ಯ ಮತ್ತು ಅದರ ಸಾರ್ಥಕತೆ'ಯ ಬಗ್ಗೆ ಉತ್ತರ ನೀಡಲು ಕೇಳುತ್ತಾರೆ. ಯಾರಿಂದಲೂ ಸರಿಯಾದ ಉತ್ತರ ಬರಲಿಲ್ಲ. ಆಗ ಎರಿಬಸವ ಎದ್ದು ನಿಂತು ಗುರುಗಳಿಗೆ ವಂದಿಸಿ, ಮಾನವ ಜನ್ಮದ ಮಹತ್ವವನ್ನು ತಿಳಿಸುತ್ತಾನೆ. ಅದರಲ್ಲಿ ಗುರುಮಹತ್ವ, ಗುರು ದೀಕ್ಷೆ, ಅಂತ್ಯದಲ್ಲಿ ಗುರುವಿನಲ್ಲೆ ಐಕ್ಯವಾಗುವುದನ್ನು ಹೇಳಿದನು. ಆಗ ಗುರುಗಳು ವಿಸ್ಮಯದಿಂದ ಸಂತೋಷ ಗೊಂಡು ಆತನನ್ನು ಬಿಗಿದಪ್ಪಿ ಆಶೀರ್ವದಿಸಿದರು. ಆತನಿಗೆ ಮುಕ್ತಿಮಾರ್ಗದ ಮಹತ್ವವನ್ನು ಹೇಳಲು ನಿರ್ಧರಿಸಿ, ಗುರುದೀಕ್ಷೆಯ ಸದ್ಬೋಧೆಯನ್ನು, ಮುಕ್ತಿಮಾರ್ಗದ ನೆಲೆಯನ್ನು ತಿಳಿಸುತ್ತಾರೆ. ಗುರುಕೃಪೆ ಮತ್ತು ಗುರು ದೀಕ್ಷೆಯನ್ನು ಪಡೆದ ಎರಿಬಸವನು ದಿವ್ಯಜ್ಞಾನವನ್ನು ಪಡೆದವನಾಗಿ, ಗುರುವಿನಿಂದ ಆಶೀರ್ವಾದ ಪಡೆದು ತನ್ನ ನೆಲೆಗೆ ಬರಲು ಸಿದ್ಧನಾಗುತ್ತಾನೆ.

ಗುರುವಿನಿಂದ ಬೀಳ್ಕೊಂಡು, ಅವರ ಆದೇಶದಂತೆ, ಸಿದ್ಧಪರ್ವತಕ್ಕೆ ಹೋಗುತ್ತಾನೆ. ಚಿಕ್ಕ ವಯಸ್ಸಿನಲ್ಲಿಯೇ ವೈರಾಗ್ಯಮೂರ್ತಿಯಂತೆ ಕಂಗೊಳಿಸುತ್ತಿದ್ದ ಎರಿಬಸವನು ಲೋಕದ ಪರಿವೆಯಿಲ್ಲದೆ, ವಿಲಕ್ಷಣ ಸ್ವಭಾವದ, ಅಸಾಮಾನ್ಯ ವ್ಯಕ್ತಿಯಂತೆ ಕಾಣುತ್ತಿದ್ದನು.

ಬಿಸಿಲು, ಮಳೆ, ಚಳಿ, ಗಾಳಿ, ಗಲಸನು
ಹಸಿವು ತೃಷೆಯಂದೆನ್ನ ಮೈಯೊಳು
ವಸನ ವಶನದ ಪರಿವೆಯರಿಯನು ಹಗಲಿರಳು ಎನನು ।
ಒಸೆಯುತೊಬ್ಬನೆ ನುಡಿಯುತಲಿದರ
ಹಸಿತನಾಗುತ ಬಟ್ಟೆಯಲಿ ಮಿಗೆ
ಮಿಸುಕದೇನನು ಚರಿಸುತಿರ್ದನು ಸಿದ್ಧ ಪರ್ವತಕೆ ॥[೬೪]

ಲೋಕದ ಪರಿವೆಯಿಲ್ಲದೆ ಹಸಿವು, ನಿದ್ರೆ, ಬಾಯಾರಿಕೆಗಳ ಹಂಗಿಲ್ಲದೆ ಸಿದ್ಧಪರ್ವತಕ್ಕೆ ನಡೆದು ಬಂದು ದೇವಿಯ ಸಾಕ್ಷಾತ್ಕಾರ ಪಡೆಯುತ್ತಾನೆ. ಅಲ್ಲಿಂದ ಸಿಂಧಿಗೇರಿಪುರದ ಮಲ್ಲಪ್ಪತಾತನಲ್ಲಿಗೆ ಬರಲು, ಮಲ್ಲಪ್ಪ ತಾತನು ಆ ಹುಡುಗನ ವ್ಯಕ್ತಿತ್ವವನ್ನು ತನ್ನ ದಿವ್ಯ ದೃಷ್ಟಿಯಿಂದಲೇ ಅರಿತು ಆಶೀರ್ವದಿಸುತ್ತಾರೆ. ಕೆಲವು ದಿನಗಳು ಮಲ್ಲಪ್ಪತಾತನ ಸನಿಹದಲ್ಲಿದ್ದು, ಅಲ್ಲಿಂದ ಕುರುಗೋಡು ಗ್ರಾಮಕ್ಕೆ ಬರುತ್ತಾನೆ. ಹೆಗಲ ಮೇಲೊಂದು ಕಂಬಳಿ, ಮಲೀನವಾದ ಬಟ್ಟೆ, ಹುಚ್ಚನಂತೆ ವಿಲಕ್ಷಣವಾಗಿ ಕುರುಗೋಡಿನ ದೊಡ್ಡಬಸವನ ದೇವಾಲಯದಲ್ಲಿ ಕುಳಿತಿದ್ದನು. ಊರಿನ ಕೆಲ ಜನಗಳು "ಯಾರೋ ಹುಚ್ಚು ಹುಡುಗ" ಎಂದು ಹಾಸ್ಯ ಮಾಡುತ್ತಾ ಚೇಷ್ಟೆ ಮಾಡುತ್ತಿರುತ್ತಾರೆ. ಲೌಕಿಕರ ದೃಷ್ಠಿಯಲ್ಲಿ ಹುಚ್ಚನಂತೆ ಕಾಣುತ್ತಿದ್ದ ಈತನ ಅಂತರಂಗದ ಗುಣವನ್ನರಿಯಲು, ಜ್ಞಾನವನ್ನರಿಯಲು, ಸಾಮಾನ್ಯ ಜನತೆಗೆ ಅಸಾಧ್ಯವಾಗಿತ್ತು. ಹುಚ್ಚನೆಂದು ಚೇಷ್ಟೆಮಾಡುತ್ತಿದ್ದ ಹುಡುಗನೊಬ್ಬ, ಎರಿಬಸವನ ಕಂಬಳಿಯನ್ನು ಕಿತ್ತುಕೊಂಡು ಓಡಿಹೋಗುತ್ತಾನೆ. ಸ್ವಲ್ಪ ಹೊತ್ತಿನಲ್ಲೆ ಆ ಹುಡುಗನಿಗೆ ಚಳಿ

ಜ್ವರ ಬಂದು ನಡುಗುತ್ತಿರಲು ಮನೆಯವರೆಲ್ಲಾ ಆತಂಕಪಡುತ್ತಾರೆ. ಹುಡುಗನ ಪಕ್ಕದಲ್ಲೇ ಇದ್ದ ಕಂಬಳಿಯನ್ನು ಹೊದಿಸುವಾಗ, ಇದು ಯಾರ ಕಂಬಳಿ ನಮ್ಮದಲ್ಲವೆಂದುಕೊಂಡು ಮನೆಯವರೆಲ್ಲಾ ವಿಚಾರಿಸಿಕೊಳ್ಳುತ್ತಿರಲು, ಚಳಿ-ಜ್ವರದಿಂದ ನರಳುತ್ತಿದ್ದ ಹುಡುಗ ನಡೆದ ಘಟನೆಯನ್ನೆಲ್ಲಾ ಮನೆಯವರಿಗೆ ತಿಳಿಸುತ್ತಾನೆ. ಆಗ ಹುಡುಗನ ತಂದೆ-ತಾಯಿಗಳು ದೊಡ್ಡ ಬಸವೇಶ್ವರ ದೇವಾಲಯದಲ್ಲಿ ಕುಳಿತಿದ್ದ ಎರಿಬಸವನ ಹತ್ತಿರ ಬಂದು, 'ತಪ್ಪಾಯಿತಪ್ಪಾ, ನಮ್ಮ ಮಗನನ್ನು ಕಾಪಾಡೆಂದು' ನಮಸ್ಕರಿಸಿ ಬೇಡಿಕೊಳ್ಳುತ್ತಾರೆ. ತಂದೆ-ತಾಯಿಗಳ ದುಃಖವನ್ನು ಕಂಡು ಕರುಣೆ ತೋರಿದ ಎರಿಬಸವನು ಆ ಹುಡುಗನ ದೇಹ ಮತ್ತು ತಲೆಯ ಮೇಲೆ ಕೈಯಾಡಿಸಿದಾಗ, ತಕ್ಷಣ ಹುಡುಗನಿಗೆ ಬಂದಿದ್ದ ಚಳಿ-ಜ್ವರ ಕಡಿಮೆಯಾಗಿ ಗುಣಮುಖನಾಗುತ್ತಾನೆ. ಸಂತೋಷಗೊಂಡ ತಂದೆ-ತಾಯಿಗಳು ಮಗ ಸಹಿತ ಎರಿಬಸವನಿಗೆ ನಮಸ್ಕರಿಸಿ, ಮನೆಗೆ ಆಹ್ವಾನಿಸುತ್ತಾರೆ. ಮನೆಗೆ ಹೋಗದೆ ಅವರ ಒತ್ತಾಯಕ್ಕೆ ಮಣಿದು ಹಸುವಿನ ಹಾಲನ್ನು ಮಾತ್ರ ಸ್ವೀಕರಿಸುತ್ತಾನೆ. ಊರವರೆಲ್ಲಾ ಎರಿಬಸವನ ಈ ಲೀಲೆಯನ್ನು ಕಂಡು ಈತ ಸಾಮಾನ್ಯನಲ್ಲ, ಮಹಾಮಹಿಮನೆಂದು ಊರಗೌಡನನ್ನೊಳಗೊಂಡು ಎಲ್ಲರೂ ಕೊಂಡಾಡುತ್ತಾರೆ.

ಕುರುಗೋಡನ್ನು ಬಿಟ್ಟು ಎಮ್ಮಿಗನೂರಿನ ಜಡೇಸಿದ್ಧರನ್ನು ಕಾಣಲು ಬರುತ್ತಾನೆ. ವೇದಾಂತ ರಹಸ್ಯವಾದ ವಿಷಯಗಳನ್ನು, ಮೋಕ್ಷದ ಮಾರ್ಗವನ್ನು ಜಡೇಸಿದ್ಧರೊಂದಿಗೆ ಚರ್ಚಿಸಿ, ಕೆಲದಿನಗಳು ಅವರೊಂದಿಗೆ ಕಳೆದು, ಅಲ್ಲಿಂದ ಕೊಳಗಲ್ಲು ಗ್ರಾಮಕ್ಕೆ ಬರುತ್ತಾನೆ. ಬಂದವನು ಊರೊಳಗಿನ ತನ್ನ ಮನೆಗೆ ಹೋಗದೆ, ಯಾರ ಕಣ್ಣಿಗೂ ಬೀಳದೆ, ಏಕಾಂಗಿಯಾಗಿದ್ದು ಹಠಯೋಗದಂತಹ ಸಾಧನೆ ಮಾಡಲು ಅಲ್ಲಿನ ಬೆಟ್ಟದ ಗವಿಯೊಳಗೆ ಹೋಗಿ ವಾಸ ಮಾಡುತ್ತಾನೆ.

ಮುದದಿ ತಾನಿರ್ದಿರುಳಿನಲಿ ಬಿಡ
ದಡವಿಯೊಳು ಬೆಳಗಾಗುವನಕಂ
ಸಡಗರದಿ ಚರಿಸುತ್ತ ಬಂದಿರುತಿರ್ದ ಗವಿಯೊಳಗೆ |
ಒಡಲ ಹಸಿ ತೃಷೆಗಳನು ನೀಗುತ
ತಡೆದು ನಿದ್ರಾಲಸ್ಯಗಳ ಮೃಡ
ನಡಿಗಳುರುತರ ಧ್ಯಾನ ಸೌಖ್ಯದೊಳೆರಿಬಸವನಿರಲು ||[೬೯]

ಹಸಿವು, ನಿದ್ರೆ, ಬಾಯಾರಿಕೆಗಳನ್ನೆಲ್ಲಾ ತೊರೆದು, ಲೋಕದ ಪರಿವೆ ಇಲ್ಲದೆ ಸಾಧನೆಯಲ್ಲಿರುತ್ತಿದ್ದನು. ತಿಳಿದಾಗೊಮ್ಮೆ ಹೊರಬರುವುದು, ಇಲ್ಲದಿದ್ದರೆ ಇಲ್ಲ. ಹೀಗಿರುವಾಗ ಕೆಲವರು ಈತನನ್ನು ಗುರುತಿಸಿ ನಮ್ಮೂರ ಎರಿಬಸವನೆಂದು ತಿಳಿಯುತ್ತಾರೆ. ("ಈತನ ಮೊದಲ ಹೆಸರು ಬಸವಣ್ಣನೆಂದೂ, ನಂತರ ಶಾಲೆಗೆ ಹೋಗದೆ ಹೊಲ ಮನೆ ಕೆಲಸ ಮಾಡುವಾಗ ಬಸವನೆಂದೂ ನಂತರ ಹುಚ್ಚನಂತೆ ಬೆಟ್ಟ, ಗುಡ್ಡಗಳಲ್ಲಿದ್ದು, ಹರುಕು ಬಟ್ಟೆ, ಮಲಿನ ದೇಹ ಹೊಂದಿ, ವಿಲಕ್ಷಣವಾಗಿದ್ದರಿಂದ ಎರಿಬಸವನೆಂದು ಕರೆದಿದ್ದಾರೆ.") ಸಾಧನೆಯ ಹಾದಿಯಲ್ಲಿದ್ದಾಗ ಕರೆದ ಈ ಹೆಸರೇ ಶಾಶ್ವತವಾಗಿ ಉಳಿದಿದೆ. ಬೆಟ್ಟ, ಗವಿಯಲ್ಲಿ ಅವಿತುಕೊಂಡಿದ್ದ ಎರಿಬಸವನ ವಿಷಯವನ್ನು ಯಾರಿಂದಲೋ ತಿಳಿದ ತಂದೆ-ತಾಯಿಗಳು ಗೌಪ್ಯವಾಗಿ ಬಂದು, ಒತ್ತಾಯ

[illegible]

[illegible]

[illegible]

[illegible]

ಮಾಡಿ ಮನೆಗೆ ಕರೆತರುತ್ತಾರೆ. ಕೆಲದಿನಗಳು ಮನೆಯಿಂದ ಎಲ್ಲಿಗೂ ಕಳಿಸದೆ, ಆತನು ಸ್ಥಿಮಿತಕ್ಕೆ ಬಂದ ಮೇಲೆ ಕುರಿಕಾಯುವ ಕಾಯಕಕ್ಕೆ ಹಚ್ಚುತ್ತಾರೆ. ಹೀಗೆ ಕೆಲವು ದಿನಗಳು ಕಳೆಯಲು ಸಕ್ರಪ್ಪ ಮತ್ತು ಸಣ್ಣಮ್ಮ ತಮ್ಮ ಇಬ್ಬರು ಮಕ್ಕಳ ಸಮೇತ ವಿಠಲಾಪುರದ ದೇವಿಯ ಜಾತ್ರೆಗೆ ಹೋದಾಗ, ಅಲ್ಲಿ ನಡೆಯುತ್ತಿದ್ದ ಸಾಮೂಹಿಕ ಮದುವೆ ಕಾರ್ಯದಲ್ಲಿ ಬಂಧುಗಳೆಲ್ಲಾ ಸೇರಿರುತ್ತಾರೆ. ಮದುವೆ ವಯಸ್ಸಿಗೆ ಬಂದಿದ್ದ ಎರಿಬಸವ ಮತ್ತು ಲಿಂಗಪ್ಪನಿಗೆ ಜಾತ್ರೆಗೆಂದು ಬಂದಿದ್ದ ಮಾರಪ್ಪ ಎಂಬುವರ ಮಕ್ಕಳನ್ನು ಮದುವೆ ಮಾಡಲು ಇದ್ದಕ್ಕಿದ್ದಂತೆ ನಿರ್ಧರಿಸಿ, ಎರಿಬಸವನಿಗೆ ಲಕ್ಷ್ಮಿ ಎಂಬುವವಳನ್ನು ಬಲವಂತವಾಗಿ ಮದುವೆ ಮಾಡಿಸುತ್ತಾರೆ. ಈ ಅನಿರೀಕ್ಷಿತ ಘಟನೆಗೆ ಬೆಚ್ಚಿಬಿದ್ದು, ಮದುವೆಯೇ ಬೇಡವೆಂದು ಎರಿಬಸವನು ತಿರಸ್ಕರಿಸಿದರೂ ಮನೆಯವರ ಮತ್ತು ಬಂಧುಗಳ ಒತ್ತಾಯಕ್ಕೆ ಮಣಿದು ತಾಳಿ ಕಟ್ಟುತ್ತಾನೆ. ಲೌಕಿಕ ಜೀವನದ ಬಗ್ಗೆ ಆಸಕ್ತಿಯಿಲ್ಲದ ಎರಿಬಸವನಿಗೆ ಮದುವೆ, ಸಂಸಾರಗಳ ಬಂಧನದಲ್ಲಿ ಸಿಲುಕಿಸುತ್ತಾರೆ. ಸಂಸಾರದ ಬಗ್ಗೆ ಏನು ಹೇಳಿದರೂ ಪ್ರತಿಕ್ರಿಯೆಯಿಲ್ಲದೆ ಸದಾ ಮೌನಿಯಾಗಿರುತ್ತಿದ್ದನು. ಹೆಣ್ಣೆಂದರೆ ತಾಯಿ, ಮಾತೆ ಎಂಬೆಲ್ಲಾ ಮಾತೃಭಾವನೆ ಹೊಂದಿದ್ದ ಎರಿಬಸವ ಹೆಂಡತಿಯನ್ನು ಮನೆಗೆ ಕರೆತರಲು ನಿರಾಕರಿಸುತ್ತಾನೆ. ತಾಳಿ ಕಟ್ಟಿದ್ದೇ ತಪ್ಪು ಎಂದು ತಿಳಿದಿದ್ದ ಈತ ಕೊನೆಯ ವರೆಗೂ ಸಂಸಾರದ ಬಂಧನದಲ್ಲಿ ಸಿಲುಕಲಿಲ್ಲ. ಮಗನ ಇಂತಹ ವರ್ತನೆ ಕಂಡು, ಅದೇ ಕೊರಗಿನಲ್ಲಿ ತಂದೆ-ತಾಯಿಗಳು ಊಟ, ನಿದ್ರೆಬಿಟ್ಟು, ಹಾಸಿಗೆ ಹಿಡಿದು ಕಾಯಿಲೆಯಿಂದ ನರಳುತ್ತಾ ಕೊನೆಯುಸಿರೆಳೆದರು. ನಂತರ ಹೊಲ-ಮನೆಗಳನ್ನೆಲ್ಲಾ ಸೋದರನಿಗೆ ನೀಡಿದ ಎರಿಬಸವನು ಕುರಿಗಳನ್ನು ಕಾಯುತ್ತಾ, ಕಾಲ ಕಳೆಯುತ್ತಿದ್ದನು.

ಕುರಿಕಾಯಲು ಅಡವಿಗೆ ಹೋದಾಗ ಏಕಾಂತವಾದ ಸ್ಥಳದಲ್ಲಿ ಕುಳಿತು ಧ್ಯಾನ ಮಾಡುತ್ತಿದ್ದನು. ಎಚ್ಚರವಾದಾಗ ಎಲ್ಲೆಂದರಲ್ಲೆ ವರ್ತಿತೋಡಿ, ನೀರು ತೆಗೆದು ಕುರಿಗಳಿಗೆ ನೀರುಣಿಸುತ್ತಿದ್ದನು. ಈ ವಿಷಯ ಪ್ರಚಾರವಾಗಿ, ಯಾರು ಎಲ್ಲೇ ಕೇಳಿದರೂ ಅವರೆದುರಿಗೇ ವರ್ತಿತೋಡಿ, ನೀರು ತರಿಸುತ್ತಿದ್ದನು. ಬೇಸಿಗೆ ಯಲ್ಲಿಯೂ ಈ ರೀತಿ ಮಾಡುತ್ತಿದ್ದ. ಈತನ ಮಹಿಮೆ ಕಂಡು, ಈತ ಸಾಮಾನ್ಯನಲ್ಲ ಮಹಿಮಾಪುರುಷನೆಂದು ಜನ ಕರೆಯಲಾರಂಭಿಸುತ್ತಾರೆ. ಸಾಮಾನ್ಯ ಜನರ ಸ್ವಭಾವಕ್ಕಿಂತ, ನಡೆ-ನುಡಿಗಿಂತ ಸಂಪೂರ್ಣ ಭಿನ್ನವಾದ ವರ್ತನೆಯನ್ನು ಹೊಂದಿದ್ದ ಎರಿಬಸವನು ದಿನದಿಂದ ದಿನಕ್ಕೆ ದೈಹಿಕವಾಗಿ ಮಾನಸಿಕವಾಗಿ ಬದಲಾವಣೆಯಾಗ ತೊಡಗಿದನು. ಈತ ನುಡಿದಂತೆ ನಡೆಯುತ್ತಿರುತ್ತದೆ. ನಡೆದಂತೆ ಆಗುತ್ತಿರುತ್ತದೆ. ಕೆಲ ವರ್ತನೆಗಳು ಮುಂದೆ ಆಗಬಹುದಾದ ಘಟನೆಯನ್ನು ಸೂಚಿಸುವ ಸಂಕೇತವಾಗಿಯೂ ಕಾಣುತ್ತಿರುತ್ತವೆ. ಊರಲ್ಲಿ ಕುದುಗೋಲು ಹಿಡಿದು ಓಡಾಡಿದರೆ ಪ್ಲೇಗು, ಕಾಲರಾ ಮುಂತಾದ ಮಾರಿರೋಗಗಳು ಬರುತ್ತಿದ್ದವು. ಆತನ ಹೆಗಲ ಮೇಲಿನ ಕಂಬಳಿಯನ್ನು ಬೀಸಿದರೆ ಮಳೆ ಬರುತ್ತದೆಂದೂ ಜನ ನಂಬಿದ್ದರು. ಒಮ್ಮೆ ಮಳೆಯಿಲ್ಲದೆ ಬೆಳೆಗಳೆಲ್ಲಾ ಒಣಗಿ ಹೋಗುತ್ತಿದ್ದಾಗ ಹೆಗಲ ಮೇಲಿದ್ದ ಕಂಬಳಿಯನ್ನು ಬೀಸಲು, ಅಂದೇ ಒಳ್ಳೆಯ ಮಳೆ ಬಂದು ಜನರೆಲ್ಲಾ ಸಂತೋಷಪಟ್ಟರೆಂದು ಭಕ್ತಜನತೆ ನೆನೆಯುತ್ತಾರೆ.

ಹೀಗೆ ನಿತ್ಯ ಇಂತಹ ಅಸಾಮಾನ್ಯ ಘಟನೆಗಳು ಜರುಗುತ್ತಿದ್ದರಿಂದ, ಮುಂದೆ ಆಗಬಹುದಾದ ಶುಭ-ಅಶುಭಗಳನ್ನು ಹೇಳುತ್ತಿದ್ದರಿಂದ ಎರಿಬಸವನ ಹೆಸರು ಸುತ್ತ ಮುತ್ತಲಿನ ಹಳ್ಳಿಗಳಿಗೆಲ್ಲಾ ಪಸರಿಸುತ್ತದೆ. ತಮ್ಮ ಕಷ್ಟ-ಸುಖಗಳನ್ನು ನೋವು-ನಲಿವುಗಳನ್ನು ಹೇಳಿಕೊಳ್ಳಲು, ಕೊಳಗಲ್ಲು ಗ್ರಾಮಕ್ಕೆ ಬರುವವರ ಸಂಖ್ಯೆ

ದಿನದಿಂದ ದಿನಕ್ಕೆ ಅಧಿಕವಾಗತೊಡಗುತ್ತದೆ. ಹೇಳಿದಂತೆ ನಡೆಯುತ್ತಿರಲು, ನಂಬಿ ಬಂದವರ ಕಷ್ಟ-ನಷ್ಟಗಳು ಪರಿಹಾರವಾಗುತ್ತಿರಲು, ಹೀಗೆ ಇಷ್ಟಾರ್ಥಗಳು ಈಡೇರ ತೊಡಗಿದಾಗ, ಈತ ಸಾಮಾನ್ಯನಲ್ಲ ಮಹಾತ್ಮನೆಂದು ಈತನನ್ನು ಗೌರವಿಸುತ್ತಾರೆ. ಅಲ್ಲದೇ ಪ್ರೀತಿ ಮತ್ತು ಭಕ್ತಿಯಿಂದ 'ತಾತ'ನೆಂದು ಕರೆಯುತ್ತಾ ದೇವರೆಂದು ಪೂಜಿಸತೊಡಗುತ್ತಾರೆ. ನಿತ್ಯ ತಾತನವರ ದರ್ಶನಕ್ಕಾಗಿ ಬರುವವರ ಸಂಖ್ಯೆ ಹೆಚ್ಚಾಗುತ್ತಿರುತ್ತದೆ.

ಮಹಿಮೆಗಳು : ತಾತನವರ ಮಹಿಮೆಯನ್ನು ಕೇಳಿ ಸುತ್ತ ಮುತ್ತಲಿನ ಗ್ರಾಮದವರು, ತಮ್ಮ ರೋಗ-ರುಜಿನಗಳನ್ನು, ಎಡರು-ತೊಡರುಗಳನ್ನು ಪರಿಹರಿಸಿಕೊಳ್ಳಲು ಬರುತ್ತಿರುತ್ತಾರೆ.

ವೇಣಿವೀರಾಪುರದ ದುಗ್ಗಪ್ಪನ ಮಗನಾದ ಜಡೆಪ್ಪನಿಗೆ ನಡೆಯಲಾಗದೆ, ಕುಳಿತುಕೊಳ್ಳಲಾಗದೆ, ಕೈಕಾಲು ಗಳಿಗೆ ಬಾವು ಬಂದಿರುತ್ತವೆ. ಎರಿಬಸವತಾತನ ಮಹಿಮೆಯನ್ನು ಕೇಳಿ ಕೊಳಗಲ್ಲು ಗ್ರಾಮಕ್ಕೆ ಬಂದು ಅವರಲ್ಲಿ ತಮ್ಮ ಸಂಕಷ್ಟವನ್ನು ಹೇಳಿಕೊಳ್ಳುತ್ತಾರೆ. ಕರುಣೆ ತೋರಿದ ತಾತನು ಜಡೆಪ್ಪನ ಮೈ, ಕೈಗೆ, ವಿಭೂತಿ ಹಚ್ಚಿ, ಐದು ದಿನ ದೇವಿಯ ದೇವಾಲಯಕ್ಕೆ ಹೋಗಿ ಧೂಪ-ದೀಪಾರಾಧನೆಯ ಮಾಡಬೇಕೆಂದು ಹೇಳುತ್ತಾರೆ. ಅದರಂತೆ ಜಡೆಪ್ಪನು ಸತತವಾಗಿ ಮಾಡಿದ್ದರಿಂದ ಬಾವು ಇಳಿತವಾಗಿ ಕೈ ಕಾಲುಗಳು ಗುಣವಾಗುತ್ತವೆ. ಗುಣಮುಖನಾದ ಜಡೆಪ್ಪನು ಎರಿಬಸವತಾತನ ಪರಮ ಭಕ್ತನಾಗಿ, ತನ್ನ ಊರಾದ ವೇಣಿವೀರಾಪುರವನ್ನು ಬಿಟ್ಟುಬಂದು ಕೊಳಗಲ್ಲು ಗ್ರಾಮದಲ್ಲಿಯೆ ನೆಲೆಸುತ್ತಾನೆ. ಇಂಥ ಹಲವಾರು ಭಕ್ತರ ಬವಣೆಗಳು ದೂರವಾಗಿ, ಆರೋಗ್ಯ, ಸಂತೋಷ ಲಭಿಸಿದ್ದರಿಂದ, ಸುತ್ತ ಮುತ್ತಲಿನ ಭಕ್ತರೆಲ್ಲಾ ಸೇರಿ ತಾತನಿಗೊಂದು ಮಠವೊಂದನ್ನು ನಿರ್ಮಾಣ ಮಾಡುತ್ತಾರೆ. ಜಡೆಪ್ಪನು ಮಠದ ಏಳ್ಗೆಗೆ ಶ್ರಮಿಸುತ್ತಾ ತಾತನವರ ಮತ್ತು ಮಠದ ಸೇವೆಯನ್ನು ಮಾಡುತ್ತಿರುತ್ತಾನೆ.

ಯರಂಗಳಿಯ ಭೀಮಪ್ಪನೆಂಬ ಪರಮಭಕ್ತ ತಾತನವರ ಕೃಪೆ ಮತ್ತು ಆಶೀರ್ವಾದ ಪಡೆದ ಫಲವಾಗಿ, ತನ್ನ ಊರಲ್ಲಿಯೂ ಭಕ್ತರ ಸ್ನೇಹ ಸಹಕಾರದಿಂದ ಮಠವೊಂದನ್ನು ಕಟ್ಟಿಸುತ್ತಾನೆ. ಹಾಗೆಯೇ ಸೋಮಸಮುದ್ರದ ಭಕ್ತರೆಲ್ಲಾ ಸೇರಿ, ತಾತನ ನೆನಪಿಗೆ ತಮ್ಮ ಊರಲ್ಲಿಯೂ ಮಠವೊಂದನ್ನು ಕಟ್ಟಿಕೊಂಡಿರುತ್ತಾರೆ. ಹೀಗೆ ಮೂರು ಮಠಗಳಲ್ಲಿಯೂ ತನ್ನ ಭಕ್ತರಿಗೆ ದರ್ಶನವನ್ನು ತಾತನು ನೀಡುತ್ತಿದ್ದರೆಂದು ತಿಳಿಯುತ್ತದೆ. ಯರಂಗಳಿಯಲ್ಲಿ ಒಮ್ಮೆ ಭಕ್ತನಾದ ಮುಕ್ಕಣ್ಣನೆಂಬುವನು ತಾತನ ಗದ್ದುಗೆಯ ಮೇಲೆಸೆದ ನಿಂಬೆಹಣ್ಣು ಮಾಯವಾಗಲು. ಇದನ್ನು ಕಂಡ ಭಕ್ತರು ತಾತನ ಶಕ್ತಿಯನ್ನು, ಮಹಿಮೆಯನ್ನು ಕೊಂಡಾಡಿದರು. ಅದರ ನೆನಪಿಗೆ ತಾತನವರ ರಥೋತ್ಸವ ನಿರಂತರವಾಗಿ ಇಂದಿಗೂ ನಡೆಯುತ್ತಾ ಬರುತ್ತಿದೆ.

ಮಕ್ಕಳಿಲ್ಲದ ಭೀಮಕ್ಕ ಎಂಬುವವಳು ತನ್ನ ತವರೂರಾದ ವದ್ದಟ್ಟಿಗೆ ಸೋಮಸಮುದ್ರದಿಂದ ಹೋಗು ತ್ತಿದ್ದಾಗ, ತಾತನ ದರ್ಶನ ಮತ್ತು ಆಶೀರ್ವಾದ ಪಡೆದು ಹೋಗುತ್ತಾಳೆ. ಇದರಿಂದ ಅವಳಿಗೆ ಸಂತಾನ ಪ್ರಾಪ್ತಿಯಾಗಿದೆ.

ಕೊಳಗಲ್ಲು ಗ್ರಾಮದ ಗೌಡನ ರುಜಿನವನ್ನು ಮಜ್ಜಿಗೆ ಮತ್ತು ನುಚ್ಚಿನ ಅನ್ನವನ್ನು ಊಟ ಮಾಡಲು ಹೇಳಿರಲು, ಅದರಂತೆ ಗೌಡರು ಊಟ ಮಾಡಿದ್ದರಿಂದ ಅವರಿಗೆ ಬಂದ ರೋಗ ಪರಿಹಾರವಾಗಿದೆ.

ಗ್ರಾಮದ ಅಯ್ಯಪ್ಪನ ಹೊಲದಲ್ಲಿ ಬಾವಿ ತೋಡಲು ಹೇಳಿ ಜಲವ ತೋರಿಸಲು, ಅದರಂತೆ ಸಿಹಿನೀರು ಬಾವಿಯಲ್ಲಿ ಬಂದಿರುತ್ತದೆ. ಇಂದಿಗೂ ಸಹ ಈ ಬಾವಿಯ ನೀರು ಸಿಹಿಯಾಗಿರುತ್ತದೆಂದು ಹೇಳುತ್ತಾರೆ. ಅದರಿಂದ ಸಂತೋಷಿತನಾದ ಅಯ್ಯಪ್ಪನು ಮಠಕ್ಕೆ ಎರಡು ಎಕರೆ ಭೂಮಿಯನ್ನು ದಾನವಾಗಿ ನೀಡಿರುತ್ತಾನೆ.

ವೇಣಿವೀರಾಪುರದ ಕುರುಬರ ಕೆಂಚಮ್ಮ ಮತ್ತು ಹರಿಜನ ಮಲಿಯಮ್ಮ ಎಂಬುವರಿಗೆ ಮಕ್ಕಳಾಗ ಲಿಲ್ಲವೆಂಬ ಕೊರಗಿನಿಂದ ಇರುವಾಗ, ಭಕ್ತರೊಬ್ಬರು ತಾತನ ಬಗ್ಗೆ ಹೇಳುತ್ತಾರೆ. ಅದರಂತೆ ಇಬ್ಬರೂ ಸೇರಿ ಬುತ್ತಿಯನ್ನು ಕಟ್ಟಿಕೊಂಡು ಕೊಳಗಲ್ಲು ಗ್ರಾಮಕ್ಕೆ ಬರುತ್ತಾರೆ. ಮಠಕ್ಕೆ ಹೋಗಿ ತಾತನಲ್ಲಿ ತಮ್ಮ ಕೊರಗನ್ನು ಹೇಳಿಕೊಳ್ಳಲು, ಅದಕ್ಕೆ ತಾತನು ನಿಮ್ಮ ಬುತ್ತಿಗಳ ಅದಲು-ಬದಲು ಮಾಡಿಕೊಂಡು ಊಟ ಮಾಡಿರಿ. ಮತ್ತು ನಿಮ್ಮ ಊರಿನ ಕಾಳಿಕಾದೇವಿಯ ಪೂಜೆಯನ್ನು ಐದು ದಿನ ಸತತವಾಗಿ ಮಾಡಿರಿ ಎಂದು ಹೇಳುತ್ತಾರೆ. ಅದರಂತೆ ಮಲಿಯಮ್ಮ ನಡೆದುಕೊಳ್ಳಲು ಆಕೆಗೆ ಮಕ್ಕಳಾಗಿವೆ. ತಾತ್ಸಾರ ಮಾಡಿದ ಕೆಂಚಮ್ಮನಿಗೆ ಮಕ್ಕಳಾಗಲಿಲ್ಲವೆಂದು ತಿಳಿಯುತ್ತದೆ.

ಒಮ್ಮೆ ಮಠಕ್ಕೆ ಬರುವ ಭಕ್ತಾದಿಗಳಿಗೆ ಅಡಿಗೆ ಮಾಡುತ್ತಿರುವಾಗ ಓರ್ವ ಅಂಗನೆ ಬಂದು "ನಿನಗೇತಕೆ ಅಡುಗೆ ಮಾಡುವ ಕೆಲಸ, ಬಿಡು ಎನಲು," ಬಂದಿರುವವಳು ಸಾಕ್ಷಾತ್ ಶಾಂಭವಿ ಎಂದರಿತ ಎರಿಬಸವ ತಾತನು ಆಕೆಯನ್ನು ಮನಸಾರೆ ಕೊಂಡಾಡುತ್ತಿರುತ್ತಾರೆ. ಯಾರಿಗೂ ಕಾಣದ ದೇವಿಯ ದರ್ಶನ ತಾತನಿಗೆ ಮಾತ್ರ ಗೋಚರವಾಗಿ ಮಾಯವಾಗಿತ್ತು. ತಾತನು ದೇವಿ ಜೊತೆ ಮಾತನಾಡುವುದನ್ನು ಕಂಡು ಸುತ್ತ ಮುತ್ತಲಿದ್ದ ಭಕ್ತರೆಲ್ಲಾ ಆಶ್ಚರ್ಯಚಕಿತರಾಗಿದ್ದರು. ಊರವರಿಗೆಲಾಚೀ ವಿಷಯ ತಿಳಿದು ಸಾಕ್ಷಾತ್ ದೇವಿಯ ಸುಪುತ್ರ ನಮ್ಮ ಊರಲ್ಲಿರುವುದು ನಮ್ಮ ಪುಣ್ಯವೆಂದು ಪುರದವರೆಲ್ಲಾ ಹರ್ಷಿತರಾಗಿರುತ್ತಾರೆ.

ಕುರುಗೋಡಿನ ದೊಡ್ಡಬಸವೇಶ್ವರ ರಥೋತ್ಸವದಲ್ಲಿ ರಥವು ಮುಂದಕ್ಕೋಗದೆ ಕುಸಿದು ಬೀಳುತ್ತಿರಲು, ಇತ್ತ ಎರಿಬಸವತಾತನು ಕೊಳಗಲ್ಲಿನಲ್ಲಿ ಎರಡು ಮಣ್ಣಿನ ಕುಪ್ಪೆಗಳನ್ನು ಮಾಡಿ, ಬನ್ನಿ ರಥವನ್ನೆಳೆಯುವ ಎಂದು ಮಣ್ಣು ಕುಪ್ಪೆಗಳನ್ನು ನೂಕುತ್ತಿದ್ದರು. ಅತ್ತ ಕುರುಗೋಡಿನಲ್ಲಿ ಕುಸಿದ ರಥವು ಮುಂದಕ್ಕೆ ಚಲಿಸು ತ್ತಿರುತ್ತದೆ. ಹೀಗೆ ಸರ್ವವ್ಯಾಪಕರಾಗಿ ತಾತನು ತನ್ನ ಮಹಿಮೆಯನ್ನು ತೋರಿದ್ದಾರೆಂದು ಭಕ್ತರು ಹೇಳುತ್ತಾರೆ.

ಕೊಳಗಲ್ಲಿನ ಕೋದಂಡ ರಾಮಪ್ಪನೆಂಬುವನು ತಾತನ ಬಗ್ಗೆ ತಾತ್ಸಾರದಿಂದ ಅವಹೇಳನವಾಗಿ ಮಾತ ನಾಡುತ್ತಾನೆ.

ಕೆಲಸ ಬೊಗಸೆಗಳಿಲ್ಲವಿವನಿಗೆ
ಕುಲ ಚಲವು ಮೊದಲಿಲ್ಲ ನಿಲಯದಿ
ಲಲನೆ ಪುತ್ರರುಮಿಲ್ಲಾ ಕೇಳ್ವರು ಹೇಳ್ವರಾರಿಲ್ಲ ।
ಮಲಹರ ಶರಣರ್ಪನೆನುತಲಿ
ಒಲವಿನಿಂ ಜನರಿಂತುಮೀತನ
ನೆಲೆಯ ನರಿಯದೆ ಪೊಗಳಿ ಯಿವನಂ ಮರುಳನಂಗೈದರ್ ॥[೬೬]

ಜಾತಿಹೀನನೆಂದೂ, ಕುಲಹೀನನೆಂದೂ, ಮಲಿನನೆಂದೂ ಸತಿ ಸುತರಿಲ್ಲವೆಂದು ತಾತನನ್ನು, ಆತನ ಭಕ್ತರನ್ನು ನಿಂದಿಸಿದ ಫಲವಾಗಿ, ಮನೆಯಲ್ಲಿ ಬಡತನ ಬಂದು ಮನೆಯವರೆಲ್ಲ ರೋಗ ರುಜಿನಗಳಿಂದ ನರಳುತ್ತಾರೆ. ಮುಂದೆ ರಾಮಪ್ಪನಿಗೆ ತಾತನನ್ನು ನಿಂದಿಸಿದ ತಪ್ಪಿನ ಅರಿವಾಗಿ, ಅವರಲ್ಲಿಗೆ ಬಂದು ಕಾಪಾಡು ಸ್ವಾಮಿ ಎಂದು ಕಾಲಿಗೆ ಬಿದ್ದು ಬೇಡುತ್ತಾನೆ. ಕರುಣಾಮಯನಾದ ತಾತನು ಇನ್ನೆಂದೂ ಪರನಿಂದೆ, ಪರಿಹಾಸ್ಯಗಳನ್ನು ಮಾಡದಿರೆಂದು ಎಚ್ಚರಿಸಿ ಆಶೀರ್ವದಿಸುತ್ತಾರೆ. ಫಲವಾಗಿ ರೋಗಗಳೆಲ್ಲಾ ಗುಣವಾಗಿ ಮನೆಯಲ್ಲಿ ಸುಖ-ಶಾಂತಿಗಳು ನೆಲೆಸಿದವೆಂದು ತಿಳಿಯುತ್ತದೆ.

ಕೊಳಗಲ್ಲಿನ ಪುಲ್ಕುಂ ಮನೆತನದ ಸಿದ್ದಪ್ಪ ಮತ್ತು ಮಂಗಮ್ಮರೆಂಬ ದಂಪತಿಗಳಿಗೆ ಮಕ್ಕಳಿಲ್ಲದೆ ಕೊರಗಿ ತಾತನಲ್ಲಿ ಬೇಡುತ್ತಾರೆ. ತಾತನು ಅವರಿಗೆ ನಾಯ್ಕನಹಟ್ಟಿಯ ವಿರಾಗಿ ತಿಪ್ಪೇಸ್ವಾಮಿಯ ಮಠಕ್ಕೆ ಹೋಗಿ ಆತನ ದರ್ಶನ ಪಡೆಯಿರಿ ಎಂದು ಹೇಳಿಕಳಿಸಿದರು. ಅದರಂತೆ ಆ ದಂಪತಿಗಳು ನಾಯ್ಕನಹಟ್ಟಿ ಸ್ವಾಮಿಯ ದರ್ಶನ ಪಡೆಯುತ್ತಾರೆ. ಪ್ರತಿಫಲವಾಗಿ ಗಂಡು ಮಗು ಜನಿಸುತ್ತದೆ. ಆ ಮಗುವಿಗೆ ತಿಪ್ಪೇಸ್ವಾಮಿಯೆಂದು ನಾಮಕರಣ ಮಾಡಿರುವುದು ತಿಳಿದುಬರುತ್ತದೆ.

ದಮ್ಮು ಕೆಮ್ಮಿನಿಂದ ನರಳುವ ರೋಗಿಗಳಿಗೆ ಪಪ್ಪಾಯಿ ಫಲವನ್ನು, ಚರ್ಮವ್ಯಾಧಿಯಿಂದ ನರಳುವವರಿಗೆ ತಿಲಗುಡವನ್ನು, ಗಂಡಮಾಲೆಯ ರೋಗದಿಂದ ನರಳುವವರಿಗೆ ಕಳ್ಳಿಹಾಲು ಮತ್ತು ಅದರ ಬುಡದ ಮಣ್ಣನ್ನು, ದುಷ್ಟವಾತ ರೋಗ ಬಂದರೆ ಕತ್ತಾಳಿ ಪಟ್ಟಿಯನ್ನು ಬಿಗಿಯುವಂತೆ ಹೇಳುತ್ತಿದ್ದರು. ಹೀಗೆ ನಂಬಿ ಬಂದ ಭಕ್ತ ಜನಗಳ ವ್ಯಾಧಿಗಳನ್ನು, ನೋವುಗಳನ್ನು ಪರಿಹರಿಸುತ್ತಿದ್ದರೆಂದು ಇವುಗಳಿಂದ ತಿಳಿಯುತ್ತದೆ.

ತನ್ನ ದೂಷಿಸುವವರ ಭಕ್ತಿಯೊ
ಳಿನ್ನು ಪೊಗಳುತಲಿಹರ ಸತತವು
ತನ್ನ ಬಳಿ ಬರುವವರನಲ್ಲಿರ್ಪವರ ನೆಲ್ಲರನೂ |
ತನ್ನ ಬಂಧುಗಳೆನ್ನುವ ಭಾವದಿ
ಭಿನ್ನ ವಿಲ್ಲದೆ ಪೊರೆಯುತೆಡರುಗ
ಳನ್ನು ಪರಿಹರಿಸುತಲಿ ಕಳಿಸುತಿರ್ದನವಧೂತ ||[೬೬]

ಹೀಗೆ ಬಡವ-ಬಲ್ಲಿದರೆನ್ನದೆ, ಮೇಲು-ಕೀಳೆನ್ನದೆ, ಜಾತಿ ಮತಗಳ ಸೋಂಕನ್ನು ಮೀರಿ, ಸರ್ವರನ್ನೂ ಸಮಭಾವದಿಂದ ನೋಡುತ್ತಿದ್ದನು. ಭಕ್ತರ ವೈಯಕ್ತಿಕ, ಸಾಮೂಹಿಕ ಸಮಸ್ಯೆಗಳಿಗೆ ಪರಿಹಾರ ದೊರಕಿಸುತ್ತಾ ನಂಬಿದ ಭಕ್ತರ ಆರಾಧ್ಯ ದೈವವಾಗಿದ್ದರು.

ಒಮ್ಮೆ ಎಮ್ಮಿಗನೂರಿನ ಯೋಗಿ ಜಡೇಸಿದ್ಧರಲ್ಲಿಗೆ ಹೋಗಿ ಜ್ಞಾನ, ವೈರಾಗ್ಯ, ಆಧ್ಯಾತ್ಮದ ಬಗ್ಗೆ ಚರ್ಚಿಸಿ, ಅವರಿಂದ ಆಶೀರ್ವಾದ ಪಡೆದು, ವಾಪಸ್ಸು ಬರುತ್ತಿರುತ್ತಾರೆ. ಆಗ ಊರಿನ ಪಾಪಿಯೊಬ್ಬ ತಾತನವರ ವಿಲಕ್ಷಣದ ವೇಷಭೂಷಣವ ಕಂಡು ಅಪಹಾಸ್ಯ ಮಾಡುತ್ತಾನೆ. ಪರಿಣಾಮವಾಗಿ ತಾತನವರ ಕೆಂಗಣ್ಣು ಕೋಪಕ್ಕೆ

ಗುರಿಯಾಗಿ, ಕಣ್ಣು ಕಾಣದೆ ಅಂಧನಾಗುತ್ತಾನೆ. ಅನಿರೀಕ್ಷಿತವಾಗಿ ಕಣ್ಣು ಕುರುಡಾಗಿದ್ದರ ಅರಿವಾಗಿ, ತಾತನ ವರಲ್ಲಿ ಬಂದು ತನ್ನ ತಪ್ಪನ್ನು ಕ್ಷಮಿಸು ತಂದೆ ಎಂದು ಬೇಡುತ್ತಾನೆ. ಆಗ ತಾತನು ಕರುಣೆತೋರಿ ಆಶೀರ್ವದಿಸುತ್ತಾ ಬುದ್ಧಿಹೇಳಿ ಕಳಿಸುತ್ತಾರೆ. ಫಲವಾಗಿ ಆತನ ಕಣ್ಣುಗಳು ಚನ್ನಾಗಿ ಕಾಣುವಂತಾಗುತ್ತವೆ.

ಚಳಿ ಜ್ವರ, ಕೆಮ್ಮು, ಉಬ್ಬಸ, ತಲೆನೋವು, ಜಲೋದರ, ಹೊಟ್ಟೆನೋವು, ಕೈ ಕಾಲು ನೋವು, ವಾತ ಪಿತ್ತ, ಕುಷ್ಠ ಹೀಗೆ ನಾನಾ ರೀತಿಯ ರೋಗ ರುಜಿನಗಳಲ್ಲಿ ನೊಂದವರನ್ನು ಬೆಂದವರನ್ನು ಗುಣಪಡಿಸುತ್ತಿದ್ದರು. ಹಾಗೆಯೆ ಮಕ್ಕಳಿಲ್ಲದವರಿಗೆ ಸಂತಾನ ಭಾಗ್ಯ ಮತ್ತು ಊರಿಗೆ ಹರಡುತ್ತಿದ್ದ ಕಾಲರಾ-ಪ್ಲೇಗುಗಳಂತಹ ಮಾರಿರೋಗಗಳನ್ನು ಹುಚ್ಚು, ಭೂತ, ಹಿಡಿದವರನ್ನು ಗುಣಪಡಿಸಿ, ನಂಬಿದ ಭಕ್ತರ ಸಕಲ ಎಡರು ತೊಡರುಗಳನ್ನು ಪರಿಹರಿಸಿ, ಸರ್ವರನ್ನೂ ನಿರ್ಮಲ ಪ್ರೀತಿ ಮತ್ತು ಕರುಣೆಯಿಂದ ಕಾಣುತ್ತಿದ್ದರು.

ಜಾತಿ ಮತಗಳ ಭಿನ್ನವೆಣಿಸದೆ
ನೀತಿ ರಹಿತರ ಬೆರೆಯಲೊಲ್ಲದೆ
ಪ್ರೀತಿ ನೀತಿಯ ಭಕ್ತಿಯಿಂ ಪರಮಾತ್ಮನೊಲಿಯುವನು |
ಸಾತಿಶಯದಿಂದರಿಯಿರೆನ್ನುತ
ತಾತನೆರಿಯವಧೂತ ಸಂತನ
ದೀತೆರದೊಳೊರೆಯುತ್ತ ಮುದವೆಸಗಿರ್ದನೆಲ್ಲರಿಗೆ ||[೬೮]

ಉಚ್ಚ-ನೀಚನೆನ್ನದೆ, ಜಾತಿ ಮತ್ತು ಮತಾತೀತನಾಗಿದ್ದ ತಾತನು ಎಲ್ಲರಿಂದಲೂ ಭಕ್ತಿ ಗೌರವ ಸ್ವೀಕರಿಸುತ್ತಿದ್ದರು.

ಈ ಸ್ಥಿತಿಯಲ್ಲಿದ್ದ ಬಂದ ಶಿಷ್ಯನನ್ನು ಕಾಣಲು ಸ್ವತಃ ಗುರುವಾದ ಹುಚ್ಚಪ್ಪಾರ್ಯರು ಮತ್ತು ಹೊಸಗೇರಪ್ಪಾವಧೂತರು ಬಂದು ತಾತನವರನ್ನು ಹರಸಿ ಆಶೀರ್ವದಿಸಿ ಹೋಗಿರುತ್ತಾರೆ.

ಒಮ್ಮೆ ಬರಗಾಲ ಬಂದು ಮಳೆ-ಬೆಳೆಗಳಿಲ್ಲದೆ ನೀರು ಮತ್ತು ಅನ್ನದ ಆಹಾಕಾರ ಹೆಚ್ಚಾಗಿರುತ್ತದೆ. ದನಕರು ಗಳೊಂದಿಗೆ ಜನವೆಲ್ಲಾ ಊರು ತೊರೆದು ಬೇರೆ ಬೇರೆ ಊರಿಗೆ ಹೋಗಲು ಆರಂಭಿಸುತ್ತಾರೆ. ಆಗ ತಾತನು ಊರ ಜನರನ್ನು ಮಠಕ್ಕೆ ಕರೆದು ಸಂತೈಸುತ್ತಾ ಆ ಪರಮಾತ್ಮನಿದ್ದಾನೆ, ಒಳ್ಳೆಯ ಮಳೆ-ಬೆಳೆಯಾಗುತ್ತದೆ ಚಿಂತಿಸದಿರಿ ಎಂದು ಸಮಾಧಾನ ಪಡಿಸುತ್ತಾರೆ. ಅದರಂತೆ ವಾರದೊಳಗೆ ಸಮೃದ್ಧಿಯ ಮಳೆ ಬಂತೆಂದು ಜನ ಈಗಲೂ ನೆನೆಯುತ್ತಾರೆ. ಹೀಗೆ ಅಭಾವದ ಸ್ಥಿತಿಯಲ್ಲಿ ತನ್ನ ಭಕ್ತರನ್ನು ಕಾಪಾಡಿರುವುದು ತಿಳಿಯುತ್ತದೆ.

ಹೊಸಗೇರಪ್ಪತಾತನು ಮತ್ತು ಎರಿಬಸವತಾತನು ಕೂಡಿ ಕೆಲ ಶರಣರ ಜೊತೆ ಒಮ್ಮೆ ಗವಿಸಿದ್ದೇಶ್ವರನ ಮಠಕ್ಕೆ ಹೋಗುತ್ತಾರೆ. ಅಲ್ಲಿ ಹೊಸಗೇರಪ್ಪನ ಹೆಗಲ ಮೇಲಿನ ಕಂಬಳಿಯನ್ನು ಹಾಸಿ ಕರ್ಪೂರ ಹಚ್ಚಲು ಅದು ಸುಟ್ಟು ಕರಕು ವಾಸನೆ ಬರುತ್ತದೆ. ಅದರಂತೆ ಎರಿಬಸವತಾತನ ಹೆಗಲ ಮೇಲಿನ ಕಂಬಳಿಯಲ್ಲಿ ಕರ್ಪೂರವ ಸುಡಲು, ಅದು ಸುವಾಸನೆಯ ಪರಿಮಳ ಬೀರುತ್ತದೆ. ಇದನ್ನು ಕಂಡು ಹೊಸಗೇರಪ್ಪತಾತನಿಗೆ ಆಶ್ಚರ್ಯವಾಗಿ ತಾತನನ್ನು ಕೊಂಡಾಡಿರುತ್ತಾರೆ.

ಹೀಗೆ ತನ್ನ ಜೀವಿತ ಅವಧಿಯಲ್ಲಿ ನಾನಾ ರೀತಿಯ ಪವಾಡಗಳನ್ನು, ಮಹಿಮೆಗಳನ್ನು ತೋರುತ್ತಾ ಭಕ್ತ ಜನತೆಯನ್ನು ಕಾಪಾಡಿರುತ್ತಾರೆ. ಇಳಿವಯಸ್ಸಿನಲ್ಲಿ ತನ್ನೆಲ್ಲಾ ಭಕ್ತರ ಕರೆಸಿ, ನೀವೆಲ್ಲಾ ಒಳ್ಳೆಯವರಾಗಿ ಬಾಳಿ, ಪರಮಾತ್ಮನಿದ್ದಾನೆ, ನಿಮ್ಮನ್ನೆಲ್ಲಾ ಕಾಪಾಡುತ್ತಾನೆಂದು ಹರಸಿದರು. ನಂತರ ಸಮಾಧಿ ಸ್ಥಿತಿಯಲ್ಲಿ ಧ್ಯಾನ ಮಾಡುತ್ತಾ ಆನಂದನಾಮ ಸಂವತ್ಸರ ಭಾದ್ರಪದ ಮಾಸ ಬಹುಳ ಸಪ್ತಮಿ, ರೋಹಿಣಿ ನಕ್ಷತ್ರದ ೧೯೧೪ ನೇ ಇಸವಿಯಂದು ದೈವಾಧೀನರಾಗಿರುತ್ತಾರೆ.

ತಾತನವರು ಸಮಾಧಿ ಹೊಂದಿದ ಮೇಲೆ ಪ್ರಮುಖರೆಲ್ಲಾ ಸೇರಿ, ಹಿಂದೆ ಭಕ್ತರು ಕೊಟ್ಟ ತೆಂಗಿನ ಕಾಯಿಗಳ ರಾಶಿಯಿಂದ ಕೊಬ್ಬರಿ ತೆಗೆದು, ಅವೆಲ್ಲವನ್ನೂ ಮಾರಾಯ ಮಾಡಿ ಮಠದ ಗರ್ಭಗುಡಿ ಮತ್ತು ಗೋಪುರವನ್ನು ನಿರ್ಮಾಣ ಮಾಡಿರುತ್ತಾರೆ. ಸುಮಾರು ನಾಲ್ಕೈದು ದಶಕಗಳಿಂದ ಇದ್ದ ತೆಂಗಿನ ಕಾಯಿಗಳು ಕೆಡದೆ ಹಾಗೆ ಇದ್ದವೆಂದು ಹೇಳುತ್ತಾರೆ. ತಾತನವರ ಪರಮ ಭಕ್ತರಾದ ಜಡೆಪ್ಪ ಮತ್ತು ಭೀಮಪ್ಪನೆಂಬುವವರು ಅನೇಕ ಭಕ್ತರ ಸಹಾಯದಿಂದ ಈಗಿರುವ ದೊಡ್ಡ ಮಠವನ್ನು ನಿರ್ಮಾಣ ಮಾಡಿ ಮಠದ ಏಳ್ಗೆಗೆ ಸುಮಾರು ೪೦ ಎಕರೆ ಆಸ್ತಿಯನ್ನು ಮಾಡಿದ್ದಾರೆ.

೪. ೫. ಸಿಂಧಿಗೇರಿ ಮಲ್ಲಪ್ಪತಾತ

ಸಿಂಧಿಗೇರಿ ಮಲ್ಲಪ್ಪತಾತನು ಮಹಿಮಾಪುರುಷರೆಂದು, ಶಿವಯೋಗಿಗಳೆಂದು, ದಿವ್ಯ ತಪಸ್ವಿಗಳೆಂದು, ಯೋಗ ಸಾಧಕರೆಂದೂ ಹೆಸರು ಪಡೆದವರು. ಸಂಗದಲ್ಲಿದ್ದು, ನಿಸ್ಸಂಗಿಯಾಗಿದ್ದುಕೊಂಡು ಗುರು ಗಾದಿಲಿಂಗಪ್ಪ ತಾತನವರ ಅನುಗ್ರಹ ಮತ್ತು ಗುರುಬೋಧೆಯನ್ನು ಪಡೆದವರು. ಯೋಗದಿಂದ ಸಾಧನೆಯನ್ನು ಸಿದ್ಧಿಮಾಡಿ ಕೊಂಡು, ತನ್ನನ್ನು ನಂಬಿದ್ದ ಭಕ್ತರನ್ನು ಉದ್ಧರಿಸಿರುತ್ತಾರೆ. ಮೊದಲು ಸಿಂಧಿಗೇರಿಯಲ್ಲಿ ಸಮಾಧಿಹೊಂದಿ, ನಂತರ ಬೈಲೂರು ಮಠದಲ್ಲಿ ಮರು ಸಮಾಧಿಹೊಂದಿದ ಮಹಾನುಭಾವಿಗಳು. ಇಂಥ ಮಹಾನುಭಾವಿಗಳ ಪೂರ್ವ ಜೀವನ ಚರಿತ್ರೆ ಅಸ್ಪಷ್ಟವಾಗಿದ್ದು; ವಂಶಸ್ಥರಿಂದ, ಭಕ್ತರಿಂದ, ಅವರ ಬಗ್ಗೆ ಬಂದಿರುವ ಕೃತಿಗಳ ಆಧಾರದಿಂದ ಮಲ್ಲಪ್ಪತಾತನ ಜೀವನ ಚರಿತ್ರೆಯನ್ನು ಕಟ್ಟಿಕೊಡಲು ಪ್ರಯತ್ನಿಸಲಾಗಿದೆ.

ಸಿಂಧಿಗೇರಿಯಲ್ಲಿ ನೀಲಮ್ಮ ಮತ್ತು ಗುಂಡಪ್ಪ ಎಂಬ ಕುಂಬಾರ ಮನೆತನದ ದಂಪತಿಗಳು ದೈವಭಕ್ತರು ಮತ್ತು ಸಾತ್ವಿಕ ಮನೋಭಾವದವರು. ಇವರು ಕುಲಕಸುಬಾದ ಮಡಿಕೆ ಮಾಡುವುದರ ಜೊತೆಗೆ, ಕೃಷಿ ಕೆಲಸವನ್ನೂ ಮಾಡುತ್ತಿದ್ದರು. ಮತ್ತೊಬ್ಬರ ನೋವನ್ನು, ಸಂಕಟವನ್ನೂ ಕಂಡು ಮರುಗುವ ಇವರು ತಾವು ಬದುಕುವುದರ ಜೊತೆಗೆ ಇತರರೂ ಬದುಕಲಿ ಎನ್ನುವ ಮನೋಧರ್ಮದವರಾಗಿದ್ದರು. ಹೀಗೆ ನಡೆ-ನುಡಿ, ದಾನ ಧರ್ಮಗಳಿಂದ ಉತ್ತಮ ಹೆಸರು ಪಡೆದ ಈ ದಂಪತಿಗಳಿಗೆ ಮಕ್ಕಳಾಗಿರಲಿಲ್ಲ. ಹೀಗಿರಲು ಒಮ್ಮೆ ಮನೆಗುರುಗಳಾದ ಹಚ್ಚೊಳ್ಳಿ ಬಂಡೆಪ್ಪತಾತನವರು ಮನೆಗೆ ಬಂದಾಗ, ದಂಪತಿಗಳಿಬ್ಬರ ಬಯಕೆ ಯನ್ನರಿತು ಉತ್ತಮ ಗುಣದ ಮಕ್ಕಳನ್ನು ಪಡೆಯುವಿರೆಂದು ಆಶೀರ್ವದಿಸುತ್ತಾರೆ. ಗುರುಗಳ ಆಶೀರ್ವಾದದ ಫಲವೆಂಬಂತೆ ಇಬ್ಬರು ಗಂಡು ಮಕ್ಕಳು ಜನಿಸಿದರು. ಹಿರಿಯವನಿಗೆ ಮಲ್ಲಪ್ಪನೆಂತಲೂ ಕಿರಿಯವನಿಗೆ ಬಗ್ಗೂರಪ್ಪನೆಂತಲೂ ಹೆಸರಿಡುತ್ತಾರೆ. ಬಾಲ್ಯದಲ್ಲಿ ಉತ್ತಮ ವಿದ್ಯೆ, ಬುದ್ಧಿಯನ್ನು ಕಲಿತ ಮಲ್ಲಪ್ಪನು, ನಡೆ-ನುಡಿ, ವಿನಯದಲ್ಲಿ ಉತ್ತಮನೆನಿಸಿಕೊಂಡಿದ್ದನು. ಬಾಲ್ಯದಲ್ಲಿಯೇ ಭಕ್ತಿ-ಧ್ಯಾನ ಯೋಗದಲ್ಲಿ ಮಗ್ನನಾಗಿರುತ್ತಿದ್ದ ಇವನ, ಲೌಕಿಕ ಮತ್ತು ಅಲೌಕಿಕ ನಡೆ ನುಡಿಗಳನ್ನು ಗ್ರಾಮದವರು ವಿಸ್ಮಯದಿಂದ ನೋಡುತ್ತಿದ್ದರು.

ಇಂಥ ವಿಚಿತ್ರ ಸ್ವಭಾವದ ಹುಡುಗನನ್ನು ಕಂಡು ಉರವಕೊಂಡದ ಕರಿಬಸವೇಶ್ವರ ಸ್ವಾಮಿಗಳು ''ಈತ ಸಾಮಾನ್ಯನಲ್ಲ, ಈಗ ಕಿರಿ ಶರಣ, ಮುಂದೆ ಹಿರಿಶರಣ''ನಾಗುತ್ತಾನೆಂದು ಹರಸಿ ಭವಿಷ್ಯ ನುಡಿದಿದ್ದರು. ಸ್ವಾಮಿಗಳು ನುಡಿದಂತೆ ಮಲ್ಲಪ್ಪನಲ್ಲಿ, ದೈಹಿಕವಾಗಿ ಮತ್ತು ಮಾನಸಿಕವಾಗಿ ಸಾಕಷ್ಟು ಬದಲಾವಣೆಗಳಾಗಿದ್ದವು.

ದಾನವನು ಕೊಡುತಿಹನು ಪರರಿಂ
ದೇನನೂ ಕೊಳ್ಳದಲೆ ಬಾಳ್ವನು
ಹೀನ ಸಂಗವ ತೊರೆದು ಶಾಸ್ತ್ರ ಪುರಾಣವ ಕೇಳುವನು |
ಮೌನದಿಂದೇಕಾಂತದಲ್ಲಿರು
ತೇನನೋ ಚಿಂತಿಪನು ಶಿವಗುಣ
ಗಾನಗೈವನು ಮೈಮರೆದು ಸಲೆ ಭಕ್ತಿ ಭಾವದಲಿ ||[೬೯]

ಯಾರೊಂದಿಗೂ ಮಾತನಾಡದೆ, ಸದಾ ಏಕಾಂತದಲ್ಲಿ ಕುಳಿತು, ಏನನ್ನೋ ನೋಡುತ್ತಿರುವವನಂತೆ, ಬಯಲನ್ನು ವೀಕ್ಷಿಸುತ್ತಿದ್ದನು. ಹುಡುಗನ ಮಂದತನವನ್ನು ಕಂಡು ಮದುವೆ ಮಾಡಿದರೆ ಸರಿಹೋಗಬಹುದೆಂದು ತಂದೆ, ತಾಯಿಗಳು ನಿರ್ಧರಿಸಿ, ರೌಡುಕುಂದಾ ಗ್ರಾಮದ ಕುಂಬಾರ ಕಲ್ಲುಮನೆ ಭೀಮಲಿಂಗಪ್ಪನ ಮಗಳಾದ ಗೌರಮ್ಮ ಎಂಬುವವಳನ್ನು ನಿಶ್ಚಯ ಮಾಡಿ ಮದುವೆ ಮಾಡಿದ್ದಾರೆ.

ಸಂಸಾರವಂದಿಗನಾದ ಮಲ್ಲಪ್ಪನು ಕೃಷಿಕಾರ್ಯ ಮಾಡುತ್ತಾ ಕುಲ ಕಸುಬಾದ ಕುಂಬಾರಿಕೆಯನ್ನು ಮಾಡುತ್ತಿದ್ದನು. ಇದರಿಂದ ಬಂದ ಹಣದಲ್ಲಿ ಸುಮಾರು ಮುನ್ನೂರು ಎಕರೆಯಷ್ಟು ಆಸ್ತಿಯನ್ನು ಸಂಪಾದಿಸಿರುತ್ತಾನೆ. ಕಾಯಕ ಮತ್ತು ಸಂಸಾರದಲ್ಲಿ ಸುಖಜೀವನ ಸಾಗಿಸುತ್ತಿದ್ದ ಮಲ್ಲಪ್ಪನಿಗೆ ಲಿಂಗಪ್ಪ ಮತ್ತು ಗುರುಪಾದಪ್ಪ ಎಂಬ ಇಬ್ಬರು ಮಕ್ಕಳಾಗುತ್ತಾರೆ. ಮಕ್ಕಳಾದ ಮೇಲೆ ಮನೆಯಲ್ಲಿ ಹೊಂದಾಣಿಕೆ ಕಾಣದೆ ಅಣ್ಣ ತಮ್ಮಂದಿರಾದ ಮಲ್ಲಪ್ಪ ಮತ್ತು ಬಗ್ಗೂರಪ್ಪ ಬೇರೆಬೇರೆಯಾದರು. ದಿನ ಕಳೆದಂತೆ ಮಲ್ಲಪ್ಪನ ಮಕ್ಕಳು ಮದುವೆ ವಯಸ್ಸಿಗೆ ಬರಲು, ಅದೇ ಸಮಯದಲ್ಲಿ ತಮ್ಮನ ಮಕ್ಕಳಿಗೂ, ತನ್ನ ಮಕ್ಕಳಿಗೂ ಹೆಣ್ಣನ್ನು ನೋಡಿ ತನ್ನ ಖರ್ಚಿನಲ್ಲೇ ಮದುವೆ ಮಾಡುತ್ತಾನೆ. ಊರಲ್ಲಿದ್ದ ಬಡವರು, ಅಸಹಾಯಕರು, ಬಂದು ಏನನ್ನಾದರೂ ಕೇಳಿದರೆ ಧಾರಾಳವಾಗಿ ದಾನ ಧರ್ಮಾಧಿಗಳನ್ನು ಜಾತಿ, ಮತ, ಧರ್ಮಗಳ ಎಲ್ಲೆಯನ್ನು ಮೀರಿ, ಮಾನವೀಯ ಗುಣದಿಂದ ಮಾಡುತ್ತಿರುತ್ತಾನೆ. ಬೇರೆಯವರ ಕಷ್ಟ-ಸುಖಗಳಲ್ಲಿ ಭಾಗಿಯಾಗುವ ಇವರ ವ್ಯಕ್ತಿತ್ವವನ್ನು ಎಲ್ಲರೂ ಕೊಂಡಾಡುತ್ತಿದ್ದರು.

ಭಕ್ತಿಯೋಗ ಜ್ಞಾನ ಕರ್ಮ ವಿ
ರಕ್ತಿಯಂತಹ ತತ್ವ ವಿಷಯಾ
ಸಕ್ತಿಯಿಂಕಾಲವನು ಕಳೆಯುತ ದಾನ ಧರ್ಮಗಳಂ |
ಮುಕ್ತಿ ಮನದಿಂದಾಚರಿಸಲಾ
ವೃತ್ತಿ ಸೇರದ ಮಲ್ಲಪ್ಪಾತ್ಮಜ
ರುಕ್ತಿಯಿಂದಾಗ ತೋರಿದರು ವಿರೋಧವನು ||[೭೦]

ಮಲ್ಲಪ್ಪನ ಸ್ವಭಾವವನ್ನು ಸೇರದಾದ ಮಕ್ಕಳು ಆತನನ್ನು ಮನೆಯಿಂದ ಹೊರಹಾಕುತ್ತಾರೆ. ಇದರಿಂದ ಬೇಸತ್ತ ಮಲ್ಲಪ್ಪ ಜೀವನದಲ್ಲಿ ಜಿಗುಪ್ಸೆ ಹೊಂದಿ, ವೈರಾಗ್ಯ ತಾಳುತ್ತಾನೆ. ತಾನು ಸಂಪಾದಿಸಿದ ಎಲ್ಲಾ ಆಸ್ತಿಯನ್ನು ತ್ಯಜಿಸಿ ಮನೆಯಿಂದ ಹೊರ ನಡೆಯುತ್ತಾನೆ. ಲೌಕಿಕ ಬಂಧನವೇ ತನಗೆ ಬೇಡವೆಂದು, ಮಾನಸಿಕ ಅಶಾಂತಿ ಅತೃಪ್ತಿಯಿಂದ ಹೊರಬಂದು ನಿಜಾನಂದದಲ್ಲಿ ಸೇರಲು ಮನಸ್ಸನ್ನು ಕೇಂದ್ರೀಕರಿಸುತ್ತಾನೆ. ಆದರೆ ಮನೆಯಿಂದ ಹೊರಬಂದ ಮಲ್ಲಪ್ಪನನ್ನು, ತಮ್ಮನಾದ ಬಗ್ಗೂರಪ್ಪನು ತಡೆದು, ತನ್ನ ಮನೆಯಲ್ಲಿಟ್ಟು ಕೊಳ್ಳುತ್ತಾನೆ. ಮಾನಸಿಕವಾಗಿ ಜಿಗುಪ್ಸೆ ಹೊಂದಿದ ಮಲ್ಲಪ್ಪನು, ತಮ್ಮನ ಮನೆಯಲ್ಲಿದ್ದರೂ, ಈ ಬಂಧನ ದಿಂದ ಬಿಡಿಗಡೆಯಾಗಬೇಕೆಂದು, ಯಾರ ಸಂಪರ್ಕವೂ ಇಲ್ಲದೆ ಏಕಾಂಗಿಯಾಗಿರಬೇಕೆಂದು, ನಿಜಮುಕ್ತಿ ಪಡೆಯಬೇಕೆಂದು ಚಿಂತಿಸುತ್ತಿರುತ್ತಾನೆ. ಇತ್ತ ಮಲ್ಲಪ್ಪನು ಮನೆಬಿಟ್ಟ ಕೆಲದಿನಗಳಲ್ಲಿಯೇ ಮಕ್ಕಳ ಮನೆಗಳು ಏಳ್ಗೆಯಾಗದೆ ದಿನದಿಂದ ದಿನಕ್ಕೆ ಹಾಳು ಬೀಳುತ್ತವೆ. ಈಗಲೂ ಹಾಳಾಗಿರುವ ಮನೆಯನ್ನು ನಾವು ಸಿಂಧಿಗೇರಿಯಲ್ಲಿ ನೋಡಬಹುದು. ಮಲ್ಲಪ್ಪನು ತಮ್ಮನ ಮನೆಯಲ್ಲಿ ನೆಲೆಸಿದ್ದರಿಂದ ಆತನ ಮನೆ ಏಳ್ಗೆಯಾಗಿ ಸಮೃದ್ಧಿಯಾಗಿ ಬೆಳೆದಿರುತ್ತದೆ.

ತಮ್ಮನ ಮನೆಯಲ್ಲಿದ್ದರೂ ಏನಾದರೊಂದು ಕಾಯಕವನ್ನು ಮಾಡುತ್ತಿದ್ದ ಮಲ್ಲಪ್ಪನಿಗೆ ಮನಸ್ಸಿನಲ್ಲಿ ನೆಮ್ಮದಿಯಿಲ್ಲ. ಏಕಾಂಗಿತನ, ಮೌನವಾಗಿಯೇ ಕಾಲ ಕಳೆಯುತ್ತಿದ್ದ ಈತನಿಗೆ ಜೀವನ ಬೇಸರವಾಗಿತ್ತು. ನಿತ್ಯ ದುಡಿಯುವುದು, ಸಂಪಾದಿಸುವುದು, ಉಣ್ಣುವುದು, ಉಡುವುದು, ಕ್ಷಣಿಕ ತೃಪ್ತಿಗೆ ಆಸೆ ಪಡುವುದು, ಸತಿ-ಸುತರ ಬಂಧನದಲ್ಲಿ ಬೀಳುವುದು, ಇವೆಲ್ಲಾ ಅಶಾಶ್ವತವಾದವುಗಳು. ಇವುಗಳಿಂದ ಬಿಡುಗಡೆಯಾಗಲು ಗುರು ಮುಖ್ಯ. ಗುರುವಿಲ್ಲದೆ ನಿಜಜ್ಞಾನ ಸಾಧ್ಯವಿಲ್ಲ, ಅದಕ್ಕಾಗಿ ಗುರುಬೇಕು, ಗುರುವೇ ದಾರಿ, ಗುರುವೇ ದೇವರು ಎಂದರಿತು ಗುರುಶೋಧದಲ್ಲಿ ತೊಡಗುತ್ತಾನೆ. ಇದಕ್ಕೆ ಗುರು ಗಾದಿಲಿಂಗಪ್ಪನವರೇ ಸೂಕ್ತರೆಂದು ತಿಳಿದು ಅವರನ್ನು ಕಾಣಲು ಗೂಳ್ಯಂಗೆ ಬರುತ್ತಾನೆ.

ಗುರುವಿನ ಅನುಗ್ರಹ ಪಡೆಯಲು ಸುಮಾರು ಹನ್ನೆರಡು ವರ್ಷಗಳ ಕಾಲ ಹಸಿವು, ನಿದ್ರೆ, ಬಾಯಾರಿಕೆಗಳ ಹಂಗನ್ನು ತೊರೆದು, ಗಾಳಿ, ಮಳೆ, ಚಳಿಯೆನ್ನದೆ ಸಿಂಧಿಗೇರಿಯಿಂದ ಗೂಳ್ಯಂಗೆ ಅಲೆದಾಡುತ್ತಿದ್ದನು. ನಿತ್ಯ ಗುರುಸೇವೆಯನ್ನು ಮಾಡುತ್ತಾ ಮಠದಲ್ಲಿ ನಡೆಯುವ ಆಧ್ಯಾತ್ಮಿಕ ಪ್ರವಚನಗಳನ್ನು ಕೇಳುತ್ತಿದ್ದನು. ಯಾವಾಗಲು ಹನುಮಂತಪ್ಪ ಎಂಬುವವನನ್ನು ಜೊತೆಯಲ್ಲೆ ಕರೆದುಕೊಂಡು ಹೋಗುತ್ತಿದ್ದ ಮಲ್ಲಪ್ಪನು, ಎಲ್ಲಿಗೆ ಹೋದರೂ ಎತ್ತಿನ ಮೇಲೆ ಹೋಗಿ ಬರುತ್ತಿರುತ್ತಾನೆ. ನಿತ್ಯ ಗಾದಿಲಿಂಗಪ್ಪನ ಬಳಿ ಹೋಗಿ ಬರುವ ಮಲ್ಲಪ್ಪ ನನ್ನು ಕಂಡು, ಅಸೂಯೆಪಟ್ಟ 'ಗೂಳ್ಯಂ' ಗ್ರಾಮದ ಕೆಲ ದುಷ್ಟಜನ, ಮಲ್ಲಪ್ಪನ ಎತ್ತು ನಡೆಯದ ಹಾಗೆ ಮಾಟ ಮಂತ್ರ ಮಾಡಿಸುತ್ತಾರೆ. ಇದನ್ನರಿತ ಮಲ್ಲಪ್ಪನು "ಈ ಊರು, ಈ ಹೊಲ ಹಾಳಾಗಲಿ, ಇದರಲ್ಲಿ ಬರೀ ಔಡಲ ಬೆಳೆಯಲಿ, ಅದರ ಎಣ್ಣೆಯಿಂದ ಗುರು ಗಾದಿಲಿಂಗಪ್ಪನ ಆಲಯದ ದೀಪ ಬೆಳಗಲಿ" ಎಂದು ಶಪಿಸುತ್ತಾನೆ. ಅದರಂತೆ ಆ ಊರು ಹಾಳಾಗಿ ಹಳೇ ಗೂಳ್ಯಂ ಎಂದು ಇಂದಿಗೂ ಕರೆಯುತ್ತಿದ್ದು, ಆ ಹೊಲದಲ್ಲಿ ಈಗಲೂ ಬರೀ ಔಡಲ ಬೆಳೆಯುತ್ತಾರೆಂದು ಜನರು ಹೇಳುತ್ತಾರೆ.

ಮಲ್ಲಪ್ಪನು ಒಮ್ಮೆ ಗುರುವಿನ ಬಳಿಗೆ ಹೋಗುವಾಗ ಮಾರ್ಗ ಮಧ್ಯದಲ್ಲಿ, ಹಗರಿನದಿಯು ತುಂಬಿ ಹರಿಯುತ್ತಿರುತ್ತದೆ. ಹೊಳೆಯ ರಭಸ ಕಡಿಮೆಯಾದ ಮೇಲೆ ನದಿ ದಾಟಿ ಬಂದು, ತಡವಾದುದಕ್ಕೆ ಕಾರಣವನ್ನು ಗುರುವಿಗೆ ತಿಳಿಸುತ್ತಾನೆ. ಶಿಷ್ಯನ ಶ್ರದ್ಧೆ ಮತ್ತು ನಿಷ್ಠೆಯನ್ನರಿತ ಗುರು ಇನ್ನು ಮುಂದೆ ಈ ರೀತಿಯ ಯಾವುದೇ ತೊಂದರೆಗಳು ಆಗದೆಂದು ಆಶೀರ್ವದಿಸುತ್ತಾರೆ. ಅಂದಿನಿಂದ ಯಾವುದೇ ತೊಂದರೆಯಿಲ್ಲದೆ ನಿತ್ಯವೂ ಬಂದು ಶಾಸ್ತ್ರ, ಪುರಾಣ, ಪ್ರವಚನ, ಭಜನೆ ಮುಂತಾದ ಕಾರ್ಯಕ್ರಮಗಳಲ್ಲಿ ಭಾಗಿಯಾಗಿ ಹೋಗುತ್ತಿದ್ದನು. ಎಷ್ಟೇ ತೊಂದರೆ, ವಿಘ್ನಗಳು ಎದುರಾದರೂ ಲೆಕ್ಕಿಸದೆ ಬಂದು ಹೋಗುವ ಶಿಷ್ಯನ ನಿಷ್ಠೆಯನ್ನರಿತು ಗುರು ಗಾದಿಲಿಂಗಪ್ಪನವರು ಮಲ್ಲಪ್ಪನಿಗೆ ತತ್ವರಹಸ್ಯವನ್ನು, ನಿಜಗುರುಬೋಧೆಯನ್ನು ನೀಡಲು ತೀರ್ಮಾನಿಸುತ್ತಾರೆ.

ನಾನು ಮಾಡಿದೆನೆಂಬ ಹಂಕೃತಿ
ಗಾನು ವಡೆ ಕೃತಕರ್ಮಗಳು ತಾ
ವೇನು ಗೈದೊಡಮವನ ಬಿಡದಲೆ ಜನ್ಮ ಕೆಳೆತಹವು।
ನಾನು ನನ್ನದಿದೇನುಮಿಲ್ಲವು
ನೀನು ನಿನ್ನದಿದಲ್ಲವೆಂದಿರೆ
ತಾನೆ ತಾನಾಗುವ ಸುಮಾರ್ಗವು ಮಗನೆ ತಿಳಿಯೆಂದ ॥[೬೧]

ಊರಹೊರಗಿನ ಹಗರಿ ತೀರದಲ್ಲಿ ಶಿಷ್ಯನನ್ನು ತಮ್ಮ ಸಮ್ಮುಖದಲ್ಲಿ ಕುಳ್ಳಿರಿಸಿಕೊಂಡು ಸಮಚಿತ್ತ, ಸತ್ವಗುಣ, ಮಂತ್ರಯೋಗ, ಧ್ಯಾನಯೋಗ, ಹಠಯೋಗ, ರಾಜಯೋಗ, ಜ್ಞಾನಯೋಗ, ಲಿಂಗಾಂಗ ಸಾಮರಸ್ಯ, ಅದ್ವೈತ ತತ್ವ, ಜೀವನ್ಮುಕ್ತಿಯ ಮಾರ್ಗವನ್ನು ಬೋಧಿಸುತ್ತಾರೆ. ಗುರುವಿನ ಉಪದೇಶ ಪಡೆದು, ಅಷ್ಟಾಂಗಯುತವಾದ ಯೋಗವನ್ನು ಸಾಧಿಸುತ್ತಾ ಮಲ್ಲಪ್ಪನು ನಿತ್ಯ ಕಾಯಕವನ್ನು ಮಾಡುತ್ತಿರುತ್ತಾನೆ. ನಿಜಜ್ಞಾನವನ್ನು ಪಡೆದು ದೈಹಿಕವಾಗಿ, ಮಾನಸಿಕವಾಗಿ ಸಾಕಷ್ಟು ಪರಿವರ್ತನೆ ಹೊಂದಿದ ಮಲ್ಲಪ್ಪನು ಭವಿಷ್ಯ ನುಡಿದಂತೆ ನಡೆಯುತ್ತಿರುತ್ತದೆ. ನೊಂದವರಿಗೆ ಸಾಂತ್ವನ ಹೇಳುತ್ತಾ ಕಷ್ಟಗಳನ್ನು ಪರಿಹರಿಸುತ್ತಿರುತ್ತಾನೆ. ಇಂಥ ವಿಷಯಗಳು ಸುತ್ತ ಮುತ್ತಲಿನ ಗ್ರಾಮಗಳಿಗೆಲ್ಲಾ ಹರಡಿ ರೋಗಿಗಳು, ದುಃಖಿಗಳು, ಬಡವರು, ಜೀವನದಲ್ಲಿ ನೊಂದುಬೆಂದವರು ಮಲ್ಲಪ್ಪ ನನ್ನು ಕಾಣಲು ನಿತ್ಯ ಬರುತ್ತಿರುತ್ತಾರೆ. ಹೀಗೆ ಎಲ್ಲೆಲ್ಲಿಂದಲೋ ಬಂದ ಭಕ್ತರನ್ನು ಸಂತೈಸುತ್ತಾ, ಅವರ ರೋಗ-ರುಜಿನಗಳನ್ನು ಗುಣಪಡಿಸುತ್ತಾ, ಭಕ್ತ ಜನತೆಯ ಸಮುದಾಯವನ್ನು ಪಡೆಯುತ್ತಾರೆ. ಮೇಲು-ಕೀಳು, ಬಡವ-ಬಲ್ಲಿದ, ಜಾತಿ ಮತ, ಧರ್ಮಗಳ ಎಲ್ಲೆಯನ್ನು ಮೀರಿ ನಿಂತು, ಭಕ್ತರನ್ನು ಸಮಾನವಾಗಿ ಕಾಣುತ್ತಿದ್ದರು. ನಂಬಿ ಬಂದ ಭಕ್ತರೆಲ್ಲಾ ಪ್ರೀತಿ ಮತ್ತು ಭಕ್ತಿಯಿಂದ ಮಲ್ಲಪ್ಪನನ್ನು "ತಾತಾ" ಎಂದು ಕರೆಯಲಾರಂಭಿಸಿದ್ದರಿಂದ ಮಲ್ಲಪ್ಪತಾತನೆಂಬ ಹೆಸರು ಪ್ರಸಿದ್ಧಿಗೆ ಬರುತ್ತದೆ.

ಮಲ್ಲಪ್ಪತಾತನು ಪ್ರಸಿದ್ಧಿಗೆ ಬಂದು ಗುರು ಗಾದಿಲಿಂಗಪ್ಪನವರನ್ನು ಸಿಂಧಿಗೇರಿಗೆ ಆಹ್ವಾನಿಸುತ್ತಾರೆ. ಅದರಂತೆ ಬಂದ ಗುರು ಮತ್ತು ಶಿಷ್ಯ ಇಬ್ಬರೂ ಸೇರಿ ಸಿಂಧಿಗೇರಿ ಮತ್ತು ಬೈಲೂರು ಗ್ರಾಮಗಳ ಮಧ್ಯದಲ್ಲಿನ ದಿನ್ನೆಯ ಮೇಲೆ ಕುಳಿತು ಮಾತನಾಡುತ್ತಿದ್ದರು. ಹೀಗೆ ಎಷ್ಟೋ ದಿನಗಳು ಆ ಜಾಗದಲ್ಲಿ ಕುಳಿತು ಆಧ್ಯಾತ್ಮಿಕ ವಿಷಯವನ್ನು ಚರ್ಚಿಸಿ, ಸಾಧನೆಗೈದ ನೆನಪಿಗೆ ಆ ಜಾಗದಲ್ಲಿ ಇಂದು ಮಠವಿರುವುದನ್ನು ಕಾಣಬಹುದು.

[illegible]

[illegible]

[illegible]

ಮಲ್ಲಪ್ಪತಾತನ ಹೆಸರು ಹೆಚ್ಚು ಜನಪ್ರಿಯವಾಗಲು, ಹಂದ್ಯಾಳಿನ ಜಡಿಯಪ್ಪನು (ಎಮ್ಮಿಗನೂರಿನ ಜಡೆಪ್ಪತಾತ) ಬಂದು ನಿಜಮುಕ್ತಿ ನೀಡಬೇಕೆಂದು ಕೇಳಿಕೊಳ್ಳುತ್ತಾರೆ. ಅದಕ್ಕೆ ಮಲ್ಲಪ್ಪತಾತನು ಅವರನ್ನು ಗುರುಗಾದಿಲಿಂಗಪ್ಪನವರಲ್ಲಿಗೆ ಕರೆತರಲು ಮೂವರೂ ಸೇರಿ ಮೋಕ್ಷದ, ಆತ್ಮಜ್ಞಾನದ, ನಿಜಾನಂದದ ವಿಷಯವನ್ನು ಚರ್ಚಿಸುತ್ತಾರೆ. ನಂತರ ಮೂವರೂ ಸೇರಿ ಶ್ರೀಶೈಲಕ್ಕೆ ಹೋಗಿ ಅಲ್ಲಿನ ಗುರುವಿನಿಂದ ಬ್ರಹ್ಮಜ್ಞಾನವನ್ನು ಪಡೆದು ಬಂದಿರುತ್ತಾರೆ.

ಒಮ್ಮೆ ಗುರುವನ್ನು ಕಾಣಲು ಮಲ್ಲಪ್ಪತಾತನು ಗೂಳ್ಯಂಗೆ ಬಂದಾಗ ಗುರುಗಾದಿಲಿಂಗಪ್ಪನವರು ಊಟ ಮಾಡುತ್ತಿದ್ದರು. ಆಗ ಅದೇ ಸಮಯಕ್ಕೆ ಒಬ್ಬ ಬ್ರಾಹ್ಮಣನೂ ಗುರುವಿನಲ್ಲಿಗೆ ಬರುತ್ತಾನೆ. ಶಿಷ್ಯ ಮಲ್ಲಪ್ಪನಿಗೆ ತಾನು ತಿನ್ನುವ ಊಟವನ್ನು ನೀಡಲು ಅದನ್ನು ಗುರುಪ್ರಸಾದವೆಂದು ಪ್ರೀತಿಯಿಂದ ಸ್ವೀಕರಿಸಿದನು. ಇದನ್ನು ಕಂಡ ಬ್ರಾಹ್ಮಣನು ಎಂಜಲೆಂದು ಅಸಹ್ಯಪಟ್ಟುಕೊಳ್ಳುತ್ತಾನೆ. ಬ್ರಾಹ್ಮಣನ ಮನಸ್ಥಿತಿಯನ್ನು ಅರಿತ ಗುರು "ಹಾರುವ ಬಿದ್ದ, ಕುಂಬಾರ ಗೆದ್ದ" ಎನ್ನುತ್ತಾರೆ. ಅದರಂತೆ ಬ್ರಾಹ್ಮಣನು ಹಾಳಾಗಿ ಹೋಗಿ, ಮಲ್ಲಪ್ಪತಾತನು ಬೆಳಗಿದನೆಂದು ಭಕ್ತ ಜನತೆ ಹೇಳುತ್ತಾರೆ. ಗುರುವಿನಿಂದ ಸಂಪೂರ್ಣ ಅನುಗ್ರಹವನ್ನು ಪಡೆದ ಮಲ್ಲಪ್ಪತಾತನನ್ನು ಕಾಣಲು ಬಂದ ಭಕ್ತರಿಗೆ ತಾನು ಮಾಡುತ್ತಿರುವ ಕಾಯಕವನ್ನು ಮಾಡುತ್ತಲೇ ಅವರ ಸಮಸ್ಯೆಗಳನ್ನು ಪರಿಹರಿಸಿ, ಇಷ್ಟಾರ್ಥಗಳನ್ನು ನೆರವೇರಿಸಿ, ಹರಸಿ ಕಳುಹಿಸುತ್ತಿದ್ದರು. ಬಿಡುವಾದಾಗಲೆಲ್ಲಾ ಏಕಾಂತವಾದ ಸ್ಥಳದಲ್ಲಿದ್ದು ಹಠಯೋಗದಂತಹ ಸಾಧನೆಯನ್ನು ಮಾಡುತ್ತಿದ್ದರು.

ಮಹಿಮೆಗಳು

ಭಕ್ತರಿಗೆ ಕುಳಿತಲ್ಲೆ ಹಂಪಿ ತೋರಿಸಿದ್ದು : ನಿತ್ಯ ಪರಮಯೋಗದ ಸಾಧನೆಯನ್ನು ಸಾಧಿಸುತ್ತಾ, ಕಾಯಕವನ್ನು ಮಾಡುತ್ತಿರುವ ಮಲ್ಲಪ್ಪತಾತನಲ್ಲಿಗೆ ನಿಟ್ರವಟ್ಟಿಗ್ರಾಮದ ಭಕ್ತರು ಬಂದು, "ತಾತ, ಪಂಪಾಕ್ಷೇತ್ರದ ದರ್ಶನವನ್ನು ಪಡೆಯಲು ಹಂಪಿ ಜಾತ್ರೆಗೆ ಹೋಗುತ್ತಿದ್ದೇವೆ ನೀವೂ ಜೊತೆಯಲ್ಲಿ ಬಂದರೆ ಒಳ್ಳೆಯದೆಂದು ಕರೆಯುತ್ತಾರೆ. ಆಗ ತಾತನು ಜಾತ್ರೆಗೆ ಇನ್ನೂ ಸಮಯವಿದೆ. ಊಟಮಾಡಿ, ನಂತರ ಈ ಹೊಲದ ಕೆಲಸ ಮಾಡಿರಿ ಎಂದಾಗ, ಭಕ್ತರಿಗೆ ಗಾಬರಿಯಾಗುತ್ತದೆ. ನಿರಾಸೆಯಾದ ಭಕ್ತರು, ಈಗಾಗಲೆ ಸಾಯಂಕಾಲವಾಗುತ್ತಿದೆ ಇನ್ನೆಲ್ಲಿಯ ಜಾತ್ರೆಯೆಂದು, ತಾತನು ಹೇಳಿದ ಮಾತನ್ನು ಮೀರಲಾರದೆ ಹೊಲದ ಕೆಲಸ ಮಾಡುತ್ತಾರೆ. ಕೆಲಸ ಮುಗಿದಾಗ ಎಲ್ಲರನ್ನೂ ಹತ್ತಿರ ಕರೆದು, ಇನ್ನು ಹಂಪಿಯ ಜಾತ್ರೆಗೆ ಹೋಗೋಣವೆಂದರು. ಇಲ್ಲಿಯೇ ನೀವೆಲ್ಲಾ ಸಾಲಾಗಿ ನಿಂತು ಕಣ್ಮುಚ್ಚಿ ಶಿವನನ್ನು ನೆನೆಯಿರಿ, ನಾನೇಳುವ ತನಕ ಯಾರೂ ಕಣ್ಣು ಬಿಡಬಾರದೆಂದು ಹೇಳಿ ಸ್ವಲ್ಪ ಸಮಯದ ನಂತರ ಕಣ್ಣು ಬಿಡಲು ಹೇಳಿದರು. ಆಶ್ಚರ್ಯ ಎಲ್ಲರೂ ತಾತನ ಜೊತೆಯಲ್ಲಿ ಜಾತ್ರೆಯಲ್ಲಿದ್ದು, ಸುತ್ತಾಡಿ ಬೇಕಾದ ಪದಾರ್ಥಗಳನ್ನೆಲ್ಲಾ ತೆಗೆದುಕೊಂಡರು. ರಥೋತ್ಸವದ ನಂತರ ಅವರನ್ನೆಲ್ಲಾ ಮತ್ತೆ ಅದೇ ರೀತಿ ಕಣ್ಣು ಮುಚ್ಚಿಸಿ ತನ್ನ ಹೊಲದಲ್ಲಿ ತಂದು ನಿಲ್ಲಿಸಿದ್ದಾರೆ. ಹೀಗೆ ಇದ್ದಲ್ಲಿಯೇ ಹಂಪಿಯನ್ನು ತೋರಿಸಿದ ಮಹಾನುಭಾವನೆಂದು ಇಂದಿಗೂ ಭಕ್ತರು ನೆನೆಯುತ್ತಾರೆ.

ಹಾವಿಗೆ ಹಾಲೆರದಿದ್ದು : ನಾಗರಪಂಚಮಿಯಂದು ಊರವರು ಮತ್ತು ಮನೆಯವರು ಕಲ್ಲುನಾಗರಕ್ಕೆ ಹಾಲೆರೆಯುತ್ತಿದ್ದರು. ತಾತನು ಅದು ತಪ್ಪೆಂದು ತಡೆದು, ನಿಜದ ಹಾವಿಗೆ ಹಾಲೆರೆದು ಎಲ್ಲರನ್ನು ಆಶ್ಚರ್ಯ

ಗೊಳಿಸಿದ್ದಾರೆ. ಹಾಗೆಯೇ ಗೌರಿ ಹಬ್ಬದಂದು ಕರ್ಚೇಡು ಮತ್ತು ಸಿಂಧಿಗೇರಿ ಎರಡೂ ಗ್ರಾಮಗಳಲ್ಲಿ ಏಕಕಾಲದಲ್ಲಿಯೇ ಹಬ್ಬ ಮಾಡಿ, ಸರ್ವವ್ಯಾಪಕನಾಗಿ ತನ್ನ ಶಕ್ತಿಯನ್ನು ತೋರಿದ್ದಾರೆಂದು ಭಕ್ತರು ನಂಬಿದ್ದಾರೆ.

ಗುರುವಿನಿಂದ ಉಪದೇಶ ಪಡೆದು, ಗುರು ಸಮನಾಗಿ ತನ್ನೂರ ಭಕ್ತರಿಗೆ ಪರಮ ತತ್ವಾನುಭವವನ್ನು ಹೇಳುತ್ತಾ, ಯೋಗ ಸಾಧನೆಯ ಸಿದ್ಧಿಯಿಂದ ತನ್ನ ಮಹಿಮೆಯನ್ನು ಪ್ರದರ್ಶಿಸುತ್ತಿದ್ದರು. ಇವರ ಮಹಿಮೆಯ ವಿಷಯ ಎಲ್ಲೆಡೆ ಪ್ರಸಾರವಾಗಿ, ಎಲ್ಲೆಲ್ಲಿಂದಲೋ ದರ್ಶನಾಕಾಂಕ್ಷಿಗಳಾಗಿ ತಮ್ಮ ಸಮಸ್ಯೆಗಳನ್ನು, ಸಂಕಟಗಳನ್ನು ಹೊತ್ತು ಬರುತ್ತಿರುತ್ತಾರೆ.

ಕೆಲವರು ಸಂತಾನವನು ಕೇಳಲು
ಕೆಲರು ಸಂಪತ್ತನ್ನು ಪಡೆಯಲು
ಕೆಲರು ಭೂತಾದಿಗಳ ಕಾಟವ ಕಳೆದುಕೊಳ್ಳಲು ಮೇಣ್ ।
ಕೆಲರು ರೋಗದಿ ಮುಕ್ತರಾಗಲು
ಕೆಲರು ವ್ಯವಹಾರದಲಿ ಗೆಲ್ಲಲು
ಕೆಲರು ಸುಜ್ಞಾನವನು ಪಡೆಯಲು ನಿತ್ಯ ಬರುತಿರ್ದರ್ ॥೭೨

ಹೀಗೆ ಬಂದ ಭಕ್ತರ ಸಮಸ್ಯೆಗಳನ್ನು ಪರಿಹರಿಸುತ್ತಾ, ಭಕ್ತರಿಂದ ಭಕ್ತಿ ಗೌರವ ಸ್ವೀಕರಿಸಿ ಆಶೀರ್ವದಿಸಿ ಕಳಿಸುತ್ತಿದ್ದರು.

ಬತ್ತದ ಬಾವಿ ತೋಡಿದ್ದು : ಒಮ್ಮೆ ಗುರುಗಾದಿಲಿಂಗಪ್ಪತಾತನವರೇ ಶಿಷ್ಯ ಮಲ್ಲಪ್ಪತಾತನನ್ನು ಕಾಣಲು ಸಿಂಧಿಗೇರಿಗೆ ಬರುತ್ತಾರೆ. ಗುರು ಮತ್ತು ಶಿಷ್ಯ ಇಬ್ಬರೂ ಸೇರಿ ಬೈಲೂರು ಮತ್ತು ಸಿಂಧಿಗೇರಿ ಮಧ್ಯದ ದಿನ್ನೆಯ ಮೇಲೆ ಕುಳಿತು ಮಾತನ್ನಾಡುತ್ತಿರುವಾಗ, ಈ ಜಾಗದಲ್ಲಿ ಒಂದು ಮಠವನ್ನು ಕಟ್ಟಿಕೋ ಎಂದು ಗುರುಗಳು ಹೇಳುತ್ತಾರೆ. ಇಲ್ಲಿ ನೀರಿಲ್ಲ ನೀರು ಕೊಡುವುದಾದರೆ ಮಠವ ಕಟ್ಟಿಕೊಳ್ಳುವೆನೆಂದು ಶಿಷ್ಯನು ಕೇಳುತ್ತಾನೆ. ಅದಕ್ಕೆ ಸಮ್ಮತಿಸಿದ ಗುರುವು ಬಾವಿಯನ್ನು ತೋಡಲಿಕ್ಕೆ ಸ್ಥಳವನ್ನು ತೋರಿಸಿದರು. ಅದರಂತೆ ಗುರು ತೋರಿದ ಜಾಗದಲ್ಲಿ ಭಕ್ತರ ಸಹಾಯದಿಂದ ಬಾವಿಯನ್ನು ಅಗಿಯಲು ಪ್ರಾರಂಭಿಸುತ್ತಾರೆ. ಎಷ್ಟು ಆಳವಾಗಿ ತೋಡಿದರೂ ನೀರು ಬೀಳುವುದೇ ಇಲ್ಲ. ಆಗ ಮಲ್ಲಪ್ಪತಾತನು ಗುರುವನ್ನೂ ಗಂಗಾಮಾತೆಯನ್ನೂ ಧ್ಯಾನಿಸುತ್ತಾ ತಾನೆ ಹಾರೆಯಿಂದ ನೆಲವನ್ನು ಅಗಿಯುತ್ತಾರೆ. ಆಗ ಒಮ್ಮಿಂದೊಮ್ಮಿಗೆ ಜಲವು ಚಿಮ್ಮಲು ಸಂತೋಷಗೊಂಡ ತಾತನು ಗುರುವನ್ನು ಸ್ಥಳಕ್ಕೆ ಕರೆತರುತ್ತಾರೆ. ಗುರುವು ಗಂಗಾಪೂಜೆಯನ್ನು ಮಾಡುವಾಗ "ಗಂಗೆಯೆ ಈ ನೆಲದಲ್ಲಿ ಹಿಂಗದೆ ಇರು, ನಿನ್ನನ್ನು ಮುಟ್ಟಿದವರಿಗೆ (ಸ್ನಾನ-ಪಾನ) ರೋಗ-ರುಜಿನಗಳು ಪರಿಹಾರವಾಗುವುದಲ್ಲದೆ ಅವರ ಮನದ ಇಷ್ಟಾರ್ಥಗಳು ಈಡೇರುವವು" ಎಂದು ಹರಸಿರುತ್ತಾರೆ. ಅದರಂತೆ ಇಂದಿಗೂ ಆ ಬಾವಿಯಲ್ಲಿ ನೀರಿದ್ದು, ಮಠಕ್ಕೆ ಬಂದವರು ಬಾವಿಯ ನೀರನ್ನು ಸೇವಿಸುತ್ತಾರೆ. ಜೊತೆಗೆ ಯಾವ ಕಾಲದಲ್ಲಿಯೂ ನೀರು ಬತ್ತದೆ ಇರುತ್ತದೆಂದು ಮಠದವರು ಹೇಳುತ್ತಾರೆ. ಬಾವಿಯಲ್ಲಿ ನೀರು ಬಂದ ಮರುದಿನವೇ ಮಲ್ಲಪ್ಪತಾತನ ಹೆಂಡತಿ ಸಾವನ್ನಪ್ಪಿದರು. ತಾತನವರನ್ನು ಕಂಡರೆ ಆಗದ ಕೆಲ ಕುಹುಕಿಗಳು ಗಂಗೆಗೆ ಹೆಂಡತಿಯನ್ನು ಬಲಿಕೊಟ್ಟನೆಂದು ಅಪವಾದ ಹಬ್ಬಿಸಿದ್ದಾರೆಂಬ ವಿಷಯ ತಿಳಿಯುತ್ತದೆ.

ಮಠ ನಿರ್ಮಾಣ : ಬಾವಿಯ ಕೆಲಸ ಪೂರ್ಣಗೊಂಡ ನಂತರ, ಆ ಸ್ಥಳದಲ್ಲಿ ಗುರು ಹೇಳಿದಂತೆ ಮಠವನ್ನು ಕಟ್ಟಲು ತೀರ್ಮಾನಿಸುತ್ತಾರೆ. ಸಿಂಧಿಗೇರಿ ಮತ್ತು ಬೈಲೂರು ಗ್ರಾಮದ ಭಕ್ತರೆಲ್ಲಾ ಸೇರಿ ಕೆಲಸ ಆರಂಭಿಸಿದಾಗ ತಾತನವರು ಮಠದ ಮುಂಭಾಗವನ್ನು ಮಾತ್ರ ಕಟ್ಟಿಸಿ, ಗರ್ಭಗುಡಿಯನ್ನು ಕಟ್ಟದೆ ಬಾಗಿಲನ್ನು ಮಾತ್ರ ನಿಲ್ಲಿಸಿರುತ್ತಾರೆ. ಭಕ್ತರೆಲ್ಲಾ ಆಶ್ಚರ್ಯದಿಂದ ಹೀಗೇಕೆಂದು ಕೇಳಲು, ಅದಕ್ಕೆ ತಾತನು "ಸಿಂಧಿಗೇರಿಯಲ್ಲಿ ಮುಳುಗಿ, ಬೈಲೂರಲ್ಲಿ ತೇಲುವನು" ಎಂದಷ್ಟೇ ಹೇಳುತ್ತಾರೆ. ಅದರಂತೆ ಮುಂದೆ ತಾತನೆ ಸಿಂಧಿಗೇರಿಯಲ್ಲಿ ಸಮಾಧಿಯಾಗಿ ಕೆಲ ತಿಂಗಳನಂತರ ಬೈಲೂರು ಮಠದಲ್ಲಿ ಮರುಸಮಾಧಿ ಹೊಂದಿರುವುದನ್ನು ಕಾಣಬಹುದು.

ಸಿಂಧಿಗೇರಿ ಗ್ರಾಮದ ಭಕ್ತರ ಅಪೇಕ್ಷೆಯ ಮೇರೆಗೆ ಊರಲ್ಲಿಯೂ ಒಂದು ಮಠವನ್ನು ಕಟ್ಟುತ್ತಾರೆ. ಹಾಗೆಯೇ ಗುರುವನ್ನು ಕಾಣಲು ಹೋಗಿ, ಗೂಳ್ಯಂ ಗ್ರಾಮದಿಂದ ಸಿಂಧಿಗೇರಿಗೆ ಬರುವಾಗ ಕರ್ಚೇಡು ಗ್ರಾಮದಲ್ಲಿ ಕೆಲಹೊತ್ತು ವಿಶ್ರಮಿಸಿ ಬರುತ್ತಿದ್ದರು. ತಾತನವರು ಸಾಧನೆಯ ಸಿದ್ಧಿಯಿಂದ ಪ್ರಸಿದ್ಧಿಗೆ ಬಂದ ಮೇಲೆ, ಅವರು ಕುಳಿತಿದ್ದ ಜಾಗದಲ್ಲಿ ಕರ್ಚೇಡು ಗ್ರಾಮದವರೆಲ್ಲಾ ಸೇರಿ, ಕಟ್ಟೆಕಟ್ಟಿ ಒಂದು ಗಿಡವನ್ನು ನೆಡುತ್ತಾರೆ. ಮುಂದೆ ಅದೇ ಜಾಗದಲ್ಲಿ ಒಂದು ದೊಡ್ಡ ಮಠವನ್ನು ಕಟ್ಟಿದ್ದಾರೆ. ಹೀಗೆ ಮಲ್ಲಪ್ಪತಾತನು ಮೂರು ಮಠಗಳನ್ನು ಹೊಂದಿದ್ದು, ಅವರ ಸ್ಮರಣಾರ್ಥ ಮೂರು ಮಠಗಳಲ್ಲಿಯೂ ಜಾತ್ರೆ-ರಥೋತ್ಸವಗಳು ಇಂದಿಗೂ ನಡೆಯುತ್ತಿವೆ.

ನೀರನ್ನು ತುಪ್ಪ ಮಾಡಿದ್ದು : ನಿಟ್ರವಟ್ಟಿ ಗ್ರಾಮದ ಭಕ್ತ ಜನತೆಯ ಒತ್ತಾಯದ ಮೇರೆಗೆ ಗ್ರಾಮದೇವತೆಯ ಹಬ್ಬಕ್ಕೆ ಬರುತ್ತಾರೆ. ದಾಸೋಹದಲ್ಲಿ ಎಲ್ಲರೂ ಸೇರಿ ಊಟಮಾಡುವಾಗ ತುಪ್ಪ ಕಡಿಮೆಯಾಗುತ್ತದೆ. ವ್ಯವಸ್ಥೆ ಮಾಡಿದ ಜನ ಚಿಂತಿಸುತ್ತಿರುವಾಗ, ಅವರ ಕಳವಳವನ್ನರಿತ ತಾತನು ಕೊಡವನ್ನು ತೆಗೆದುಕೊಂಡು ಎಲ್ಲರೆದುರಿಗೇ ಬಾವಿಯಲ್ಲಿ ಬಿಟ್ಟು ಮೇಲೆಳೆಯಲು, ಕೊಡದ ತುಂಬಾ ತುಪ್ಪ ತುಂಬಿರುತ್ತದೆ. ಎಲ್ಲರೂ ತಾತನನ್ನು ಗುಣಗಾನ ಮಾಡುತ್ತಾ ಸಂತೋಷವಾಗಿ ಊಟ ಮಾಡುತ್ತಾರೆ. ಹಬ್ಬ ಮುಗಿದ ಮೇಲೆ ಊರ ಜನರಿಂದ ತುಪ್ಪ ಸಂಗ್ರಹಿಸಿ, ಕೊಡದಲ್ಲಿ ತುಂಬಿ ಮತ್ತೆ ಬಾವಿಯಲ್ಲಿ ಬಿಟ್ಟಿದ್ದಾರೆ. ಗ್ರಾಮದ ಭಕ್ತರೆಲ್ಲಾ ಕುತೂಹಲದಿಂದ ಕೇಳಿದ್ದಕ್ಕೆ ಸಾಲವಾಗಿ ತಂದಿದ್ದನ್ನು ಮರಳಿ ಕೊಡಬೇಡವೆ ಎಂದು ಹೇಳಿದ್ದಾರೆ. ಹೀಗೆ ಭಕ್ತರಿಗೆ ಆಕಸ್ಮಿಕವಾಗಿ ಬಂದ ಸಮಸ್ಯೆಗಳನ್ನು ತಮ್ಮ ಸಾಧನೆಯ ಸಿದ್ಧಿಯಿಂದ ಪರಿಹರಿಸಿದ್ದಾರೆ.

ಮಳೆ ತರಿಸಿದ್ದು: ಒಮ್ಮೆ ಬಳ್ಳಾರಿಗೆ ಬಂದಾಗ ಕೆಲವು ಜನಸೇರಿ "ತಾತ ಮಳೆಯಿಲ್ಲ, ಬೆಳೆಗಳೆಲ್ಲಾ ಒಣಗುತ್ತಿವೆ. ದಯಮಾಡಿ ಮಳೆ ತರಿಸು" ಎಂದು ಬೇಡುತ್ತಾರೆ. ಅದಕ್ಕೆ ತಾತನು "ಚಿಂತಿಸದಿರಿ, ಇಂದೇ ಮಳೆ ಬರುವುದು" ಎಂದು ಹೇಳುತ್ತಾರೆ. ಆಕಾಶದಲ್ಲಿ ಮೋಡಗಳ ಸುಳಿವಿಲ್ಲ. ಮಳೆ ಹೇಗೆ ಬರುವುದು ನೋಡೋಣವೆಂದು ಕೆಲ ದುರ್ಮತಿಗಳು, "ಮಳೆ ಬಂದರೆ ಮೆರವಣಿಗೆ, ಬಾರದಿದ್ದರೆ ಭಂಗಿಸಿ ಬೈದು ಕಳಿಸೋಣ"ವೆಂದು ಕೋಣೆಯಲ್ಲಿ ಕೂಡಿ ಹಾಕುತ್ತಾರೆ. ತಾತನಿಗೆ ಈ ಸ್ಥಿತಿ ಬಂತಲ್ಲಾ ಎಂದು ಜೊತೆಯಲ್ಲಿ ಬಂದಿದ್ದ ಹನುಮಂತಪ್ಪ ಎತ್ತಿನ ಸಂಗಡ ಬಾಗಿಲ ಹತ್ತಿರ ದುಃಖಿಸುತ್ತಾ ಕುಳಿತಿರುತ್ತಾನೆ. ಅಂದು ರಾತ್ರಿಯೆ ಭಯಂಕರ ಮೋಡ ಕವಿದು ಬಿರುಮಳೆ ಬರುತ್ತದೆ. ಸಂತೋಷಿತರಾದ ಜನರು ಬಂದು ಕೋಣೆಯಲ್ಲಿ ಕೂಡಿ ಹಾಕಿದ್ದ ತಾತನನ್ನು ನೋಡುತ್ತಾರೆ. ಆದರೆ ಹಾಕಿದ ಬೀಗ ಹಾಗೇ ಇರುತ್ತದೆ. ಒಳಗಡೆ ಮಾತ್ರ ತಾತನಿರಲಿಲ್ಲ.

ಭಯಭೀತರಾದ ಜನರು ತಾತನನ್ನು ಹುಡುಕಿಕೊಂಡು ಬಂದು ಕ್ಷಮೆ ಕೇಳುತ್ತಾರೆ. ಅವರನ್ನೆಲ್ಲಾ ಕ್ಷಮಿಸಿ ಆಶೀರ್ವದಿಸಿ ಸುಖವಾಗಿ ಬಾಳಿ ಎಂದು ಹೇಳಿ ಕಳಿಸಿದ್ದಾರೆ.

ಬೈಲೂರು ಗ್ರಾಮದ ಭಕ್ತ ಜನತೆಗೆ ಹಬ್ಬಕ್ಕೆಂದು ಹಸಿದ ಮಡಿಕೆಗಳನ್ನು ಕೊಟ್ಟು ಅವರಿಂದ ಕೊಡುಗೆಯಾಗಿ ಹರಿಯದ ಹಚ್ಚಡ(ಭೂಮಿ)ವನ್ನು ಮಠಕ್ಕೆ ಪಡೆದಿದ್ದಾರೆ.

ಚಾನಾಳಿನ ಬಡರೈತನ ಗೊಡ್ಡು ಆಕಳುಗಳಿಂದ ಹಾಲನ್ನು ಕರೆದು, ತಾನೂ ಕುಡಿದು, ಮಿಕ್ಕಿದ್ದ ಹಾಲನ್ನು ಅವರಿಗೆ ನೀಡಿ, ಅವರ ಬಡತನ ಹೋಗಲಾಡಿಸಿದ್ದಾರೆ.

ಸಿಂಧಿಗೇರಿಯಲ್ಲಿ ಒಮ್ಮೆ ಹಸಿ ಮಡಿಕೆಗಳನ್ನು ಆವಿಗೆಯಲ್ಲಿ ಹಾಕಿ ಸುಡುತ್ತಿರುವಾಗ ಮಳೆ ಬರುತ್ತದೆ. ಆಗ ತಾತನು ಮಡಿಕೆಗಳೆಲ್ಲಾ ಹಾಳಾಗುತ್ತವೆಯೆಂದು ಆವಿಗೆಯ ಸುತ್ತ ಒಂದು ಗೆರೆ ಹಾಕುತ್ತಾರೆ. ಎಲ್ಲಾ ಕಡೆ ಮಳೆ ಬಂದು ಆವಿಗೆಗೆ ಮಾತ್ರ ಒಂದು ಹನಿಯೂ ಸಹ ಬೀಳದೆ ಮಡಿಕೆಗಳನ್ನು ಸುಟ್ಟಿದ್ದಾರೆಂದು ತಿಳಿಯುತ್ತದೆ.

ಹಾವಿನಹಾಳಿನ ಗೊಲ್ಲರ ಕಾಳಪ್ಪನ ಕುರಿಗಳು ರೋಗ ಬಂದು ಒಂದೇ ಸಮನೆ ಸಾಯುತ್ತಿದ್ದವು. ಯಾವ ಔಷಧ ನೀಡಿದರೂ ಗುಣವಾಗದೆ ಇದ್ದಾಗ, ತಾತನಲ್ಲಿ ಬಂದು ತಮ್ಮ ಸಂಕಟವನ್ನು ಹೇಳಿಕೊಳ್ಳುತ್ತಾನೆ. ಕರುಣೆ ತೋರಿದ ತಾತನು ಒಂದು ಕೋಲನ್ನು ಕೊಟ್ಟು ಇದನ್ನು ಕುರಿಗಳ ಗುಂಪಿನ ಮಧ್ಯೆ ನೆಲದಲ್ಲಿ ನಿಲ್ಲಿಸು ಎಂದು ಹೇಳಿ ಆಶೀರ್ವದಿಸಿ ಕಳಿಸುತ್ತಾರೆ. ಅದರಂತೆ ಆತನು ಕುರಿಮಂದೆಯ ಮಧ್ಯೆ ಕೋಲನ್ನು ನೆಟ್ಟಿದ್ದರಿಂದ, ಕುರಿಗಳಿಗೆ ಬಂದಿದ್ದ ರೋಗ ಇಲ್ಲದಂತಾಗಿ ಕುರಿಗಳು ವೃದ್ಧಿಯಾದವೆಂದು ತಿಳಿಯುತ್ತದೆ.

ಒಮ್ಮೆ ಬಳ್ಳಾರಿಗೆ ಹೋಗುತ್ತಿರುವಾಗ ಮಾರ್ಗಮಧ್ಯದಲ್ಲಿ ಕೆಲವರು ಬಂಡಿಯಲ್ಲಿ ಎಮ್ಮೆ ಸತ್ತಿದೆ ಎಂದು ಹೇರಿಕೊಂಡು ಹೋಗುತ್ತಿದ್ದರು. ತಾತನು ಅವರನ್ನು ತಡೆದು "ಎಮ್ಮೆ ಸತ್ತಿಲ್ಲ, ಸುಳ್ಳು ಹೇಳುತ್ತಿ ರುವಿರಿ" ಎಂದು ತನ್ನ ಕೈಯಲ್ಲಿದ್ದ ಕೋಲಿನಿಂದ ತಿವಿಯಲು, ಸತ್ತಂತೆ ಮಲಗಿದ್ದ ಎಮ್ಮೆ ತಕ್ಷಣ ಎದ್ದು ನಿಲ್ಲುತ್ತದೆ.

ಮಕ್ಕಳಿಲ್ಲದವರಿಗೆ, ಗಾಳಿ-ಭೂತದ ಸೋಂಕು ತಗುಲಿದವರಿಗೆ, ಕೈ-ಕಾಲು ನಿಶ್ಯಕ್ತಿ ಹೊಂದಿದವರಿಗೆ, ಕುರುಡರಿಗೆ, ರೋಗ ರುಜಿನಗಳಿಂದ ನರಳುವವರಿಗೆ, ಮಠದಲ್ಲಿನ ಬಾವಿಯ ನೀರನ್ನು ಹಾಕಿ, ಅಂಬಲಿ, ರೊಟ್ಟಿ, ಚಟ್ನಿ, ಪುಂಡಿಪಲ್ಲೆಯ ಊಟನೀಡಿ ಗುಣಮುಖರನ್ನಾಗಿ ಮಾಡಿದ್ದಾರೆ. ಅಜ್ಞಾನಿಗಳಿಗೆ ಜ್ಞಾನ, ಹಸಿದವರಿಗೆ ಅನ್ನ, ಹೀಗೆ ಜ್ಞಾನ ಮತ್ತು ಅನ್ನದ ದಾಸೋಹ ನೀಡುತ್ತಿದ್ದರು. ಒಟ್ಟಾರೆ ಭಕ್ತರ ವೈಯಕ್ತಿಕ ಮತ್ತು ಸಾಮೂಹಿಕ ಸಮಸ್ಯೆಗಳನ್ನು ಪರಿಹರಿಸುತ್ತಾ, ಅವರ ಇಷ್ಟಾರ್ಥವನ್ನು ನೆರವೇರಿಸುತ್ತಾ, ಅಪಾರ ಭಕ್ತರ ಆರಾಧ್ಯ ದೇವರಾಗಿ ಪೂಜಿಸಿಕೊಳ್ಳುತ್ತಿದ್ದರು. ಗುರು ಜ್ಞಾನವನ್ನು ಪಡೆದು, ಸಾಧನೆಯನ್ನು ಯೋಗದಿಂದ ಸಾಧಿಸಿ, ಅದರ ಫಲವನ್ನು ಲೋಕ ಕಲ್ಯಾಣಕ್ಕಾಗಿ ಉಪಯೋಗಿಸುತ್ತಿದ್ದು, ಎಲ್ಲರನ್ನೂ ಯಾವುದೇ ಭೇದ - ಭಾವವಿಲ್ಲದೆ ಸಮಾನತೆಯಿಂದ ಕಾಣುತ್ತಿದ್ದರು.

ಸುಮಾರು ನೂರು ವರ್ಷಗಳ ಕಾಲ ಬದುಕಿದ ತಾತನು, ತನ್ನ ಭಕ್ತರನ್ನೆಲ್ಲಾ ಕರೆಸಿ, ತನ್ನ ಅಂತ್ಯದ ವಿಷಯವನ್ನು ಪ್ರಸ್ತಾಪಿಸುತ್ತಾರೆ. ತಾತನು ಸಮಾಧಿಯಾಗುವ ವಿಷಯ ಎಲ್ಲಾ ಕಡೆ ಹರಡಿ ಅಂತಿಮ ದರ್ಶನಕ್ಕಾಗಿ

ಭಕ್ತರೆಲ್ಲಾ ಬಂದು ಸೇರುತ್ತಾರೆ. ತಾತನವರು ಸಮಾಧಿಯಾಗುವ ವಿಷಯವನ್ನು ಗುರು ಗಾದಿಲಿಂಗಪ್ಪನವರು ಹಿಂದೆಯೆ ಹೇಳಿದ್ದರು. ಅವರು ತಿಳಿಸಿದ್ದ ದಿನದಂತೆ ಈಶ್ವರನಾಮ ಸಂವತ್ಸರ ಪಾಲ್ಗುಣ ಶುದ್ಧ ದಶಮಿಯಂದು ಅಂದರೆ ೧೮೭೫ರಲ್ಲಿ ದೈವಾಧೀನರಾಗುತ್ತಾರೆ. ಅಪಾರ ಭಕ್ತರು ಸೇರಿ ಸಿಂಧಿಗೇರಿಯಲ್ಲಿ ಸಮಾಧಿ ಮಾಡಿರುತ್ತಾರೆ. ಆ ಸ್ಥಳದಲ್ಲೆ ಇಂದು ಉತ್ತಮ ಮಠ ನಿರ್ಮಾಣವಾಗಿದ್ದು, ಪೂಜಾದಿ ಕಾರ್ಯಕ್ರಮಗಳ ಜೊತೆ ಗ್ರಾಮದ ಶುಭಕಾರ್ಯಗಳು ನಡೆಯುತ್ತಿವೆ.

ತಾತನವರು ಸಮಾಧಿಯಾಗಿ ಮೂರು ತಿಂಗಳಾದರೂ ಸೊಸೆಯಾದ ಮಲ್ಲಮ್ಮನು ತಾತನವರ ಧ್ಯಾನದಲ್ಲಿಯೇ ದುಃಖಿತಳಾಗಿರುತ್ತಾಳೆ. ದುಃಖತಪ್ತಳಾಗಿದ್ದ ಸೊಸೆಗೆ, ತಾತನು ಯಾರಿಗೂ ಗೊತ್ತಾಗದ ಹಾಗೆ ರಾತ್ರಿಯ ಸಮಯದಲ್ಲಿ ಬಂದು ದರ್ಶನವನ್ನು ಕೊಟ್ಟು, ಸೇವೆ ಪಡೆದು ಹೋಗುತ್ತಿದ್ದರು. ನಾನು ಬರುವುದನ್ನು ಯಾರಿಗೂ ಹೇಳಬಾರದು. ಹೇಳಿದರೆ ಅಂದೇ ಬರದಂತಾಗುವೆನೆಂದು ಹೇಳಿರುತ್ತಾರೆ. ಹೀಗೆ ಸುಮಾರು ಮೂರು ತಿಂಗಳ ಕಾಲ ಈ ರೀತಿ ಬಂದು ಸೊಸೆಯ ಸೇವೆ ಪಡೆದು ಹೋಗುತ್ತಿದ್ದರು. ನಂಬಿದವರಿಗೆ ಸತ್ತ ಮೇಲೆಯೂ ದರ್ಶನ ಕೊಟ್ಟು ಕಾಪಾಡಿದ ಮಹಾನುಭಾವನೆಂದು ಭಕ್ತರು ಈಗಲೂ ನೆನೆಯುತ್ತಾರೆ. ರಾತ್ರಿಯಲ್ಲಿ ತಾತನ ಸೇವೆ ಮಾಡುವ ಮಲ್ಲಮ್ಮನ ಗಂಡನಿಗೆ ಹೆಂಡತಿ ಮೇಲೆ ಸಂಶಯ ಬಂದು, ಹೊಡೆದು ಬಡಿದು ಯಾರ ಜೊತೆಯಲ್ಲಿರುತ್ತೀಯೆಂದು ಹಿಂಸಿಸಿ ಕೇಳುತ್ತಾನೆ. ಗಂಡನ ಒತ್ತಡಕ್ಕೆ ಸಿಲುಕಿದ ಮಲ್ಲಮ್ಮನು ಅಂದು ರಾತ್ರಿ ತಾತನನ್ನು ತೋರಿಸಿದಳು. ಅಂದಿನಿಂದ ತಾತನವರು ಬರುವುದನ್ನೇ ಬಿಟ್ಟರೆಂಬ ಸಂಗತಿಯನ್ನು ಭಕ್ತರು ತಿಳಿಸುತ್ತಾರೆ.

ಸಮಾಧಿಯಾದ ಒಂಭತ್ತು ತಿಂಗಳ ನಂತರ ವೈಶ್ಯಕುಲದ ಶರಭಣ್ಣನ ಕನಸಿನಲ್ಲಿ ಬಂದು, ನನ್ನನ್ನು ಸಿಂಧಿಗೇರಿಯ ಸಮಾಧಿಯಿಂದ ಹೊರತೆಗೆದು, ಬೈಲೂರು ಮಠದೊಳಗೆ ಸಮಾಧಿ ಮಾಡಿರೆಂದು ಹೇಳುತ್ತಾರೆ. ಶರಭಣ್ಣ ಇದು ಕನಸ್ಸೆಂದು ಉದಾಸೀನ ಮಾಡಿದ್ದಕ್ಕೆ, ಮತ್ತೆ ಕನಸಿನಲ್ಲಿ ಕಾಣಿಸಿಕೊಂಡು ತಾತ್ಸಾರ ಮಾಡ ಬೇಡೆಂದು ಎಚ್ಚರಿಸಿದರು. ಆಗ ಶರಭಣ್ಣನು ತಾತನ ಮಗನಾದ ಲಿಂಗಣ್ಣನಿಗೆ ಈ ವಿಷಯ ತಿಳಿಸುತ್ತಾನೆ. ನಿನಗೇಳಿದಂತೆ ನನಗೂ ಹೇಳಿದರೆ ನೋಡೋಣವೆಂದು ಲಿಂಗಣ್ಣನು ಹೇಳುತ್ತಾನೆ. ಅದೇ ರಾತ್ರಿ ಲಿಂಗಣ್ಣನ ಕನಸಿನಲ್ಲಿಯೂ ಕಾಣಿಸಿಕೊಂಡು ಅದೇ ರೀತಿ ಹೇಳಿದರು. ಅದರಂತೆ ಶರಭಣ್ಣನು ಊರ ಪ್ರಮುಖರನ್ನೆಲ್ಲಾ ಸೇರಿಸಿ ತಾತನವರ ಮರು ಸಮಾಧಿಯ ವಿಷಯ ಪ್ರಸ್ತಾಪಿಸುತ್ತಾನೆ. ಎಲ್ಲರೂ ಇದಕ್ಕೆ ಸಮ್ಮತಿಸಿ, ಮೊದಲು ಈ ವಿಷಯವನ್ನು ಪೋಲಿಸಿನವರಿಗೆ ತಿಳಿಸಬೇಕೆಂದು, ಕರಣಿಕನ ಕೈಲಿ ಪತ್ರ ಬರೆದು ಕಳಿಸುತ್ತಾರೆ. ಕರಣಿಕ ಬರುವುದಕ್ಕಿಂತ ಮೊದಲೆ ಆತನ ರೂಪದಲ್ಲಿ ತಾತನೇ ಬಂದು ಪೋಲಿಸಿನವರಿಗೆ ವಿಷಯ ತಿಳಿಸಿರುತ್ತಾರೆ. ಅದರಂತೆ ಪೋಲಿಸಿನವರು ಸಿಂಧಿಗೇರಿಗೆ ಬಂದು ಗ್ರಾಮದ ಮುಖಂಡರೊಡನೆ ಚರ್ಚಿಸಿ ಅನುಮತಿ ನೀಡುತ್ತಾರೆ. ವಿಷಯ ಸುತ್ತ ಮುತ್ತಲಿನ ಗ್ರಾಮದ ಭಕ್ತರಿಗೆಲ್ಲಾ ತಿಳಿದು, ಎಲ್ಲರೂ ಸಮಾಧಿಯ ಬಳಿ ಸೇರುತ್ತಾರೆ. ಹೀಗೆ ಪೋಲಿಸರ ಸಮ್ಮುಖದಲ್ಲಿ ಭಕ್ತರೆಲ್ಲಾ ಸೇರಿ, ಸಮಾಧಿಯಾದ ಒಂಭತ್ತು ತಿಂಗಳ ನಂತರ ತಾತನವರ ದೇಹವನ್ನು ಸಮಾಧಿಯಿಂದ ಹೊರ ತೆಗೆಯುತ್ತಾರೆ.

ನೆಲ ಸಮಾಧಿಯೊಳಿಟ್ಟ ತನುವ
ಚ್ಚಳಿಯದಿದೆ ನಖರೋಮಗಳು ಸಲೆ
ಬೆಳೆದಿಹವಿದಚ್ಚರಿಯು ವಾಯು ಸ್ಪರ್ಷವಿಲ್ಲದಲೆ।
ಮಲಿನಮತಿ ನಮ್ಮಂಥ ಜನರಿಗೆ
ತಿಳಿಯದೊಗಟಾಗಿಹುದು ತಾತನ
ಕಲಿಯ ಪಾವನಗೈವ ಚರಿತೆಯಿದೆಂದು ಜನರೆಂದರ್ ॥[೭೩]

ಹಿಂದೆ ಸಮಾಧಿ ಮಾಡುವಾಗ ಇಟ್ಟಿದ್ದ ದೀಪ, ದೇಹದ ಮೇಲಿನ ವಿಭೂತಿ, ಗಂಧ, ಹೂಗಳು ಕೆಡದೆ ಹಾಗೆ ಇದ್ದವಂತೆ. ಉಗುರು, ಕೂದಲು ಬೆಳೆದಿದ್ದು, ಸತ್ತರೂ ಜೀವಂತವಾಗಿರುವ ಮಹಾತ್ಮನೆಂದು ತಿಳಿದ ಭಕ್ತರು ಪೂಜಾದಿ ಕಾರ್ಯಗಳನ್ನು ಮಾಡುತ್ತಾ ಸಿಂಧಿಗೇರಿಯ ಸಮಾಧಿಯಿಂದ ಹೊರ ತೆಗೆದು ಬೈಲೂರು ಮಠದಲ್ಲಿ ಮರು ಸಮಾಧಿ ಮಾಡಿರುತ್ತಾರೆ. ಹಿಂದೆ ಬೈಲೂರ ಮಠವನ್ನು ಕಟ್ಟುವಾಗ ತಾತನವರು ಗರ್ಭಗುಡಿ ಯನ್ನು ಕಟ್ಟದೆ, ಕೇವಲ ಬಾಗಿಲು ಮಾತ್ರ ಇಟ್ಟು ಹಾಗೆ ಬಿಟ್ಟಿದ್ದರು. ಆಶ್ಚರ್ಯಗೊಂಡ ಭಕ್ತರು ಇದೇಕೆಂದು ತಾತನನ್ನು ಕೇಳಿದ್ದಕ್ಕೆ 'ಸಿಂಧಿಗೇರಿಯಲ್ಲಿ ಮುಳುಗಿ ಬೈಲೂರು ಮಠದಲ್ಲಿ ತೇಲುತ್ತಾ'ನೆಂದು ಹಿಂದೆ ಹೇಳಿದ ಮಾತು ಈಗ ನಿಜವಾಯ್ತೆಂದು ಭಕ್ತರು ತಿಳಿಯುತ್ತಾರೆ. ಭಕ್ತರೆಲ್ಲಾ ಸೇರಿ ಮರುಸಮಾಧಿ ಮಾಡಿ, ಆ ಜಾಗದಲ್ಲಿ ಗರ್ಭಗುಡಿಯನ್ನು ಕಟ್ಟುತ್ತಾರೆ. ಸಿಂಧಿಗೇರಿ, ಬೈಲೂರು, ಕರ್ಚೇಡು ಮೂರೂ ಮಠಗಳಲ್ಲಿಯೂ ತಾತನವರ ನೆಲೆಯಿದ್ದು ಪೂಜಾಕಾರ್ಯಗಳು ಮತ್ತು ಜಾತ್ರೋತ್ಸವಗಳು ನಡೆಯುತ್ತಿವೆ.

ಲೋಕದಲ್ಲಿ ಮರು ಸಮಾಧಿ ಹೊಂದಿದ ವೈಶಿಷ್ಟ್ಯವಿರುವ ತಾತನವರ ವಿಗ್ರಹ ಮಾಡಲು ಸಿದ್ದಪ್ಪ ಎಂಬ ಶಿಲ್ಪಿಗೆ ಭಕ್ತರು ಮತ್ತು ಸಮಿತಿಯವರು ಹೇಳುತ್ತಾರೆ. ಆದರೆ ಎಂದೂ ತಾತನವರನ್ನು ನೋಡಿರದ ಸಿದ್ದಪ್ಪನಿಗೆ ಅವರ ಮೂರ್ತಿ ಕೆತ್ತಲು ಕಷ್ಟವಾಗುತ್ತದೆ. ಸುಮಾರು ತಿಂಗಳ ಕಾಲ ಇದೇ ಚಿಂತೆಯಲ್ಲಿ, ಮೂರ್ತಿ ಕೆತ್ತಲಾಗದೆ ಕಂಗಾಲಾಗಿರುತ್ತಾನೆ. ಸಮಿತಿಯವರ ಒತ್ತಾಯದಿಂದ ಏನು ಮಾಡಬೇಕೆಂಬುದೇ ತಿಳಿಯದಾದಾಗ ಒಂದು ರಾತ್ರಿ ಸಿದ್ದಪ್ಪನ ಕನಸ್ಸಿನಲ್ಲಿ ತಾತನವರು ಬಂದು, ಬರೆದುಕೋ ನನ್ನ ರೂಪವನ್ನು ಎಂದು ದರ್ಶನವಿತ್ತಿದ್ದಾರೆ. ಅದರಂತೆ ಸಿದ್ಧಪ್ಪನು ಕನಸಿನಲ್ಲಿ ಕಂಡ ತಾತನ ರೂಪವನ್ನು ನೆನೆಯುತ್ತಾ ಮಾರನೆಯ ದಿನದಿಂದಲೇ ವಿಗ್ರಹ ಮಾಡಲು ಪ್ರಾರಂಭಿಸಿದ್ದಾರೆ. ಹೀಗೆ ಮೂರ್ತಿಯನ್ನು ಪೂರ್ಣಗೊಳಿಸಿ ಮಠಕ್ಕೆ ತಂದೊಪ್ಪಿಸಿದ್ದು, ಈಗ ಇದೇ ಮೂರ್ತಿಗೆ ದಿನಾಲು ಪೂಜೆ ಸಲ್ಲುತ್ತಿದೆ.

ನಿರ್ಮಾಣವಾದ ಮಠದಲ್ಲಿ ಮೂರ್ತಿಯನ್ನು ಪ್ರತಿಷ್ಠಾಪಿಸಲಾಯಿತು. ನಂತರ ಎಲ್ಲಾ ಭಕ್ತರು ಸೇರಿ ತಾತನವರ ಜಾತ್ರೆ ಮಾಡಬೇಕೆಂದು ತೀರ್ಮಾನಿಸುತ್ತಾರೆ. ಆ ಜಾತ್ರೆಗೆ ಕರ್ಚೇಡು ಗ್ರಾಮದ ಮಲ್ಲಪ್ಪನವರು ಸ್ವಂತ ಖರ್ಚಿನಲ್ಲಿ ತೇರನ್ನು ಮಾಡಿಸಿಕೊಟ್ಟಿದ್ದಾರೆ. ಅಂದಿನಿಂದಲೂ ಬೈಲೂರು ಮತ್ತು ಸಿಂಧಿಗೇರಿಯ ಮಠಗಳಲ್ಲಿ ಪಾಲ್ಗುಣ ಶುದ್ಧ ದಶಮಿಯಂದು ಏಕಕಾಲದಲ್ಲಿ ರಥೋತ್ಸವ ಜರುಗುತ್ತಿವೆ. ಜೊತೆಗೆ ತಾತನವರು ಸಮಾಧಿಹೊಂದಿದ ಪುಣ್ಯತಿಥಿಯ ನೆನಪಿಗಾಗಿ ಕರ್ಚೇಡು ಗ್ರಾಮದಲ್ಲಿ ಪ್ರತಿ ಹಂಪಿ ಹುಣ್ಣಿಮೆಗೆ ಉತ್ಸವ ನಡೆಯುತ್ತಿದೆ.

[illegible]

ಈಗ ಸಿಂಧಿಗೇರಿ ಮಠದಲ್ಲಿ ತಾತನ ವಂಶಜರಾದ ಗಿರಿಮೊಮ್ಮಗ ಗುರುಪಾದಪ್ಪನವರು ಪೂಜಾಕಾರ್ಯಗಳನ್ನು ನಡೆಸುತ್ತಿದ್ದರೆ, ಬೈಲೂರು ಮಠದಲ್ಲಿ ಅವರ ವಂಶಜರೇ ಆದ ಜ್ಞಾನಮಲ್ಲಪ್ಪನು ಪೂಜಾಕಾರ್ಯಗಳನ್ನು ನೋಡಿಕೊಳ್ಳುತ್ತಿದ್ದಾರೆ. ಹಾಗೆಯೇ ಕರ್ಚೇಡು ಗ್ರಾಮದ ಮಠವನ್ನು ಮಲ್ಲಪ್ಪನವರು ನೋಡಿಕೊಳ್ಳುತ್ತಿದ್ದಾರೆ.

ನಿತ್ಯವೂ ನಾನಾ ಕಡೆಗಳಿಂದ ಬಂದ ಭಕ್ತರು ತಮ್ಮ ನೋವು-ನಲಿವುಗಳನ್ನು, ಸುಖ-ದುಃಖಗಳನ್ನು ತಾತನವರಲ್ಲಿ ಹೇಳಿಕೊಳ್ಳಲು ಅಥವಾ ಪರಿಹರಿಸಿಕೊಳ್ಳಲು ಮಠಗಳಿಗೆ ಆಗಮಿಸುತ್ತಿದ್ದಾರೆ. ಬಂದವರು ತಾತನವರ ಗದ್ದುಗೆಯ ದರ್ಶನ ಪಡೆದು ಬಾವಿಯ ನೀರಿನಲ್ಲಿ ಸ್ನಾನ-ಪಾನಗಳನ್ನು ಮಾಡಿ, ತೃಪ್ತರಾಗುತ್ತಿದ್ದಾರೆ. ಬೇರೆ ಕಡೆಯಿಂದ ಬಂದ ಭಕ್ತರುಗಳಿಗೆ ನಿತ್ಯ ದಾಸೋಹದ ವ್ಯವಸ್ಥೆಯಿದೆ.

೪. ೬. ಹಂಪಿ ಶಿವರಾಮವಧೂತರು

ಲೋಕದಲ್ಲಿ ಆಗಿಂದಾಗ್ಗೆ ಅವತರಿಸುತ್ತಿರುವ ಮಹಾನುಭಾವಿಗಳು ಸಾಮಾನ್ಯ ಜನತೆಯಲ್ಲಿ ಜಾಗೃತಿಯನ್ನುಂಟು ಮಾಡುವುದರ ಜೊತೆಗೆ ಅವರಲ್ಲಿದ್ದ ಅಜ್ಞಾನ, ಅಂಧಕಾರವನ್ನು ಹೋಗಲಾಡಿಸಿ, ವಿವೇಕ, ತಿಳುವಳಿಕೆಯನ್ನಿತ್ತು ಸತ್ಪಥದಲ್ಲಿ ನಡೆಸಿದ್ದಾರೆ. ಜೊತೆಗೆ ಸಮಾಜದಲ್ಲಿ ಸರ್ವಸಮನ್ವಯತೆಯನ್ನು, ಭಾವೈಕ್ಯತೆಯನ್ನು, ಜಾತಿ, ಮತಗಳ ಭೇದವನ್ನು ಮರೆತು ಸಾರಿದ್ದಾರೆ. ವಿಶಿಷ್ಟ ಗುಣಗಳುಳ್ಳ ಹಂಪಿಯ ಹೇಮಕೂಟದ ಶಿವರಾಮವಧೂತರು ಮಹಿಮಾ ಪುರುಷರೆಂದು, ದಿವ್ಯ ತಪಸ್ವಿಗಳೆಂದು ಮತ್ತು ಮಹಾ ವೈರಾಗ್ಯಶಾಲಿಗಳೆಂದು ಹೆಸರು ಪಡೆದಿದ್ದವರು. ಚೇಳಗುರ್ಕಿಯ ಶ್ರೀ ಎರ್ರಿತಾತನವರ ಶಿಷ್ಯರಾಗಿ ಅವರಿಂದ ಅನುಗ್ರಹ ಆಶೀರ್ವಾದ ಪಡೆದು, ಅವರು ನೀಡಿದ ಆದೇಶದಂತೆ ಹಂಪಿಯ ಹೇಮಕೂಟದಲ್ಲಿ ನೆಲೆನಿಂತಿರುವುದನ್ನು ಅವರ ಇತಿಹಾಸದಿಂದ ತಿಳಿಯುತ್ತದೆ. ಇಂಥ ಮಹಾತ್ಮರ ಪೂರ್ವದ ಇತಿಹಾಸ ಅಸ್ಪಷ್ಟವಾಗಿದ್ದು, ದಾಖಲೆಗೊಳ್ಳದ ಜೀವನವಾಗಿದೆ. ಕಾರಣ ಅವರು ಸಾಮಾನ್ಯ ಮಾನವರಂತೆಯೇ ಬಾಳಿ, ಮುಂದೆ ಸಾಧನೆಗೈದು, ತಮ್ಮ ಮಹಿಮಾಶಕ್ತಿಯಿಂದ ಭಕ್ತ ಜನತೆಯ ಮನದಲ್ಲಿ, ಅವರ ಮನೆಗಳಲ್ಲಿ ದೇವರಾಗಿದ್ದವರು. ಹಾಗಾಗಿ ಮಹಾತ್ಮರಾಗುವುದಕ್ಕಿಂತ ಪೂರ್ವದ ಜೀವನಚರಿತ್ರೆ ಕಟ್ಟುವುದು ಕಷ್ಟ, ಆದರೂ ಲಭ್ಯವಿರುವ ಆಧಾರಗಳಿಂದ ಅವರ ಇತಿಹಾಸವನ್ನು ಈ ರೀತಿ ಸಂಗ್ರಹಿಸಲಾಗಿದೆ.

ಬಳ್ಳಾರಿ ಜಿಲ್ಲೆಯ ಹೂವಿನಹಡಗಲಿ ತಾಲೂಕಿನ ಒಂದು ಚಿಕ್ಕಹಳ್ಳಿ ಮೈಲಾರ. ಈ ಹಳ್ಳಿಯಲ್ಲಿನ ವಾಲ್ಮೀಕಿ (ಬೇಡ) ಜನಾಂಗದ ಮಾಳವ್ವ ಎಂಬುವವಳು ತನಗೆ ಜನಿಸಿದ ಮಗನಿಗೆ, ಊರ ದೇವರಾದ ಮೈಲಾರಲಿಂಗನ ಹೆಸರನ್ನು ಇಟ್ಟಿರುತ್ತಾಳೆ. ಈಕೆಯ ಗಂಡನ ಹೆಸರು ತಿಳಿದಿಲ್ಲ. ಸಾತ್ವಿಕ ಸ್ವಭಾವದ ಮಾಳವ್ವ ತನ್ನ ಮಗನನ್ನು ಒಳ್ಳೆಯ ಪರಿಸರದಲ್ಲಿ, ಒಳ್ಳೆಯ ಬುದ್ಧಿ, ಗುಣಗಳು ಬೆಳೆಯಲೆಂದು ಬಯಸಿರುತ್ತಾಳೆ. ಅದರಂತೆ ಐದಾರು ವರ್ಷದ ಮೈಲಾರನಿಗೆ ಊರಿನ ಮಠದ ಗುರುಗಳಿಂದ ವಿದ್ಯಾಭ್ಯಾಸವನ್ನು ಕಲಿಸಲು ಪ್ರಾರಂಭಿಸುತ್ತಾಳೆ. ಓದುವುದರಲ್ಲಿ, ಬರೆಯುವುದರಲ್ಲಿ, ಹಾಡುವುದರಲ್ಲಿ ಎಲ್ಲಾ ಹುಡುಗರಿಗಿಂತ ಈತ ತುಂಬಾ ಆಸಕ್ತಿವಹಿಸುತ್ತಿದ್ದನು. ಗುರುಗಳ ಕೃಪೆಯಿಂದ ವಿದ್ಯಾಬುದ್ಧಿಯನ್ನು ಕಲಿತ ಮೈಲಾರನು, ಮನೆಯ ಪೂರ್ವಿಕರು ನಡೆಸುತ್ತಿದ್ದ ಕೃಷಿಕ ಜೀವನವನ್ನು ಮುನ್ನೆಡಿಸಿದನು. ವ್ಯವಸಾಯ ಮಾಡುವುದರಲ್ಲಿಯೂ ಆಸಕ್ತಿವಹಿಸಿದ್ದ ಮೈಲಾರನು

ಯೌವ್ವನಕ್ಕೆ ಬರಲು, ತಾಯಿಯು ಮಗನಿಗೆ ಮದುವೆ ಮಾಡಲು ನಿರ್ಧರಿಸಿ, ತನ್ನ ಸೋದರನ ಮಗಳಾದ ಯಮುನೆಯನ್ನು ತನ್ನ ಮಗನಿಗೆ ಮದುವೆ ಮಾಡಿಕೊಂಡಳು. ಗೃಹಸ್ಥಾಶ್ರಮ ಸೇರಿದ ಮೈಲಾರನು ಕೃಷಿಕ ಜೀವನ ಸಾಗಿಸುತ್ತಾ, ಸಂಸಾರವನ್ನು ಸಾಗಿಸುತ್ತಿರುತ್ತಾನೆ. ಕಾಲ ಕಳೆದಂತೆ ಯುಮುನೆಯು ಗರ್ಭವತಿಯಾಗಿ ಗಂಡು ಮಗುವಿಗೆ ಜನ್ಮ ನೀಡಿದಳು. ಆದರೆ ಮಗು ಬಾಲಗ್ರಹಪೀಡೆಯಿಂದ ಸತ್ತು ಹೋಗುತ್ತದೆ. ಇದೇ ರೀತಿಯಲ್ಲಿ ನಾಲ್ಕು ಮಕ್ಕಳು ಹುಟ್ಟಿ ಸಾಯುತ್ತವೆ. ಮೊಮ್ಮಕ್ಕಳು ಸಾಯುವ ಕೊರಗಿನಲ್ಲಿ ಮಾಳವ್ವಳೂ ಸಾವನ್ನಪ್ಪುತ್ತಾಳೆ. ಈ ಆಘಾತದಿಂದ ಮೈಲಾರನಿಗೆ ಚೇತರಿಸಿಕೊಳ್ಳಲಾಗಲಿಲ್ಲ. ಜೀವನದಲ್ಲಿ ಜಿಗುಪ್ಸೆ ಮೂಡಿ ಹೊಲ, ಮನೆ, ಕೆಲಸಗಳಲ್ಲಿ ಆಸಕ್ತಿಯಿಲ್ಲದಾಯಿತು. ಬದುಕು ಬೇಸರವಾಗಿ ಮನದಲ್ಲಿ ಅತೃಪ್ತಿ, ಅಶಾಂತಿ, ನೆಲೆಸಿತು. ಯಾವಾಗಲೂ ಚಿಂತಾಮಗ್ನನಾಗಿದ್ದ ಮೈಲಾರನಿಗೆ ವಿರಕ್ತಿಮೂಡಿ, ಲೋಕ ಜೀವನವೇ ಬೇಡವೆನಿಸುತ್ತದೆ.

ದುಡಿದು ತಿನ್ನದೆ ಬದುಕು ಬೇಡವಾಗಿ, ಅಸಹಾಯಕನಾದ ಮೈಲಾರನಿಗೆ ದುರ್ಜನರ ಸಹವಾಸವಾಗುತ್ತದೆ. ''ಶ್ರಮಪಟ್ಟು ದುಡಿಯುವುದು ನಿಲ್ಲುತ್ತದೆ. ಕುಡಿತ ಹೆಚ್ಚಾಗಿ, ಜೂಜಾಟ ಕಲಿಯುತ್ತಾನೆ. ಮಿತಿಮೀರಿ ಸಾಲ ಮಾಡುತ್ತಾನೆ. ಸಾಲ ಕೊಟ್ಟವರು ಗಂಡ ಹೆಂಡಿರನ್ನು ಮನೆ ಬಿಡಿಸಿ, ಹೊರಗೆ ಹಾಕುತ್ತಾರೆ. ವಾಸ ಮಾಡಲು ಯಾರೂ ಜಾಗ ಕೊಡುವುದಿಲ್ಲ. ಇದ್ದ ಹೊಲಮನೆಯೆಲ್ಲಾ ಸಾಲಗಾರರ ವಶವಾಗಿರಲು ನೆಲೆಯಿಲ್ಲದೆ ಹೆಂಡತಿಯನ್ನು ಕರೆದುಕೊಂಡು ಹಂಪನೂರು ಸೇರಿದನು.''[೭೪] ಹಂಪನೂರು ಸೇರಿದ ಮೈಲಾರನು ಊರ ದೇವಾಲಯದಲ್ಲಿದ್ದು, ಊರವರ ಸಹಕಾರದಿಂದ ಜೀವನಕ್ಕೊಂದು ಮಾರ್ಗ ಮಾಡಿಕೊಂಡನು.

ಹುಡುಗರಿಗೆ ವಿದ್ಯೆಯನು ಕಲಿಸುತ
ಪಡೆದ ದ್ರವ್ಯದಿ ತಾನು ಸತಿಯಳು
ಕಡು ಮುದದಿ ಕಾಲವನು ಕಳೆಯುತ ಸಾಧು ವೃತ್ತಿಯಲೀ ।
ಬಿಡದೆ ಶಿವನಾಮವನು ಭಜಿಸುತ
ಬಿಡದೆ ದುಷ್ಕರ್ಮಗಳ ಮನದಲಿ
ಮೃಡನ ನಂಬಿಯೇ ಸುಖದೊಳಿರ್ದರು ಯಮನೆ, ಮೈಲಾರಾ ||[೭೫]

ಮಕ್ಕಳಿಗೆ ಪಾಠ ಹೇಳಿಕೊಡುವುದರ ಜೊತೆಗೆ ಬಿಡುವಿನ ಸಮಯದಲ್ಲಿ ಮರಗಳನ್ನು ಕೊಯ್ಯುವ ಕೆಲಸ ಮಾಡುತ್ತಿದ್ದನು. ಈ ಸಮಯದಲ್ಲಿ ಮೈಲಾರ ಕಲಿತ ದುಶ್ಚಟಗಳನ್ನೆಲ್ಲಾ ಮರೆತು ಶಾಸ್ತ್ರ, ಪೂಜೆ, ಧ್ಯಾನ, ಮುಂತಾದ ಆಧ್ಯಾತ್ಮಿಕ ಆಚರಣೆಗಳ ಬಗ್ಗೆ ಆಸಕ್ತಿ ವಹಿಸುತ್ತಾನೆ. ಸತಿ, ಪತಿಯಿಬ್ಬರಲ್ಲೂ ಇಂದ್ರಿಯವಾಸನೆ ಸಂಪೂರ್ಣ ನಾಶವಾಗಿ, ಲೌಕಿಕ ಜೀವನದಲ್ಲಿ ವಿರಕ್ತಿ ಮೂಡುತ್ತದೆ. ದುರಭ್ಯಾಸಗಳಿಂದ ದೂರವಾಗಿದ್ದರಿಂದ, ಊರಲ್ಲಿ ಮಕ್ಕಳಿಗೆ ಪಾಠ ಹೇಳಿಕೊಡುವುದರಿಂದ ಹಣ ಸಂಪಾದನೆಯಾಗಿ ಹಂಪನೂರಿನಲ್ಲೊಂದು ಸರಳವಾದ ಮಠವನ್ನು ಕಟ್ಟಿಕೊಂಡು ಸಾಧುವಿನಂತೆ ಜೀವನಸಾಗಿಸುತ್ತಾನೆ. ಬಿಡುವಿನ ಸಮಯದಲ್ಲಿ ಮಠಕ್ಕೆ ಬಂದ ಭಕ್ತರಿಗೆ ಆಧ್ಯಾತ್ಮದ ಬಗ್ಗೆ ಪ್ರವಚನ ನೀಡುತ್ತಿರುತ್ತಾನೆ. ಹೀಗಿರುತ್ತಿರಲು ಗ್ರಾಮದ ಕೆಲ ಜನಗಳು ಈತನ ವೃತ್ತಿ ಮತ್ತು ವೇಷದ ಬಗ್ಗೆ ನಿಂದನೆಯ ಮಾತುಗಳನ್ನಾಡುತ್ತಾ ಅಪಹಾಸ್ಯ ಮಾಡುತ್ತಾರೆ. ಇದರಿಂದ ತೀವ್ರ

ಬೇಸರಕ್ಕೊಳಗಾದ ಮೈಲಾರನು ಎಲ್ಲಿಗಾದರು ಹೋಗಲೇಬೇಕೆಂದು ತೀರ್ಮಾನಿಸಿ, ಅಂದು ರಾತ್ರಿಯೆ ಯಾರಿಗೂ ಹೇಳದೆ, ಹೆಂಡತಿಯನ್ನು ಬಿಟ್ಟು ಹಂಪಿಗೆ ಬಂದು ವಿರೂಪಾಕ್ಷದೇವಾಲಯದಲ್ಲಿ ಮಲಗಿರುತ್ತಾನೆ. ರಾತ್ರಿ ಮಲಗಿದ್ದಾಗ ಕನಸ್ಸಿನಲ್ಲಿ ವಿರುಪಾಕ್ಷೇಶ್ವರನು ಕಾಣಿಸಿಕೊಂಡು ಮೈಲಾರಜಾತ್ರೆ ಮುಗಿದಿದೆ. ಮೂರು ಗಾತ್ರಗಳುಳ್ಳ ಗುರುವಿಗೆ ಶರಣಾಗತನಾಗಿ ತಾತನ ಸೇವೆಯನ್ನು ಎಡೆಬಿಡದೆ ಪ್ರತಿದಿನವೂ ಮಾಡುತ್ತಲಿರು ಎಂದುಹೇಳಿ ಅದೃಶನಾದಂತಾಗಿದೆ.[೬] ಈ ರೀತಿ ರಾತ್ರಿ ಕನಸುಕಂಡಂತವನಾಗಿ ಮುಂಜಾನೆ ಎದ್ದವನೇ ಗುರುವನ್ನು ಹುಡುಕಲು ಪ್ರಾರಂಭಿಸುತ್ತಾನೆ. ಲೋಕದ ಪರಿವೇ ಇಲ್ಲದೆ, ಅನ್ನ, ನೀರು, ಸ್ನಾನಗಳಿಲ್ಲದೆ ಹುಚ್ಚನಂತೆ ಅಲೆದಾಡುತ್ತಾ, ಊರೂರು ಸುತ್ತುತ್ತಾ ಪರಮ ವಿರಾಗಿಯಾಗಿ ಹುಬ್ಬಳ್ಳಿಯ ಸಿದ್ಧಾರೂಢರಲ್ಲಿಗೆ ಬರುತ್ತಾನೆ. ಮೈಲಾರನ ವಿಲಕ್ಷಣ ವೇಷವನ್ನು, ವಿಚಿತ್ರ ನಡೆ, ನುಡಿಯನ್ನು, ಅವನ ಮನದ ಅಂತರಾಳವನ್ನು ಅರಿತ ಸಿದ್ಧಾರೂಢರು ಮಠದಲ್ಲೇ ಕೆಲವು ದಿನ ಉಳಿಸಿಕೊಳ್ಳುತ್ತಾರೆ. ಸ್ಥಿಮಿತಕ್ಕೆ ಬಾರದ ಅವನ ಸ್ವಭಾವವನ್ನು ಕಂಡು "ಅಯ್ಯಾ ಮಹಾತ್ಮ, ನಿನ್ನ ಗುರು ನಿನ್ನ ಆಗಮನದಲ್ಲೇ ಇರುವನು. ಆ ಗುರು ದಕ್ಷಿಣಮೂರ್ತಿ, ನೀನು ಆ ಮಹಾತ್ಮರ ಸನ್ನಿಧಿಗೆ ತೆರಳು, ಅವರ ಅನುಗ್ರಹಕ್ಕೆ ಪಾತ್ರನಾಗು, ಆ ಮಹಾಮಹಿಮನ ಗುರುಬೋಧೆ ಯಿಂದ ನಿನ್ನ ಜನ್ಮ ಸಾರ್ಥಕವಾಗುವುದು" ಎಂದು ಹೇಳಿ ಆಶೀರ್ವದಿಸಿ, ಕಳಿಸಿಕೊಡುತ್ತಾರೆ.[೬] ಅಲ್ಲಿಂದ ಹೊರಟ ಮೈಲಾರನು ಸಿದ್ಧಪರ್ವತಕ್ಕೆ ನಡೆಯುತ್ತಾನೆ. ಅಲ್ಲಿ ಬಗಳಾಂಬಿಕೆಯನ್ನು ನೆನೆದು, ಮನದಲ್ಲಿ ಸಾಕ್ಷಾತ್ಕರಿಸಿಕೊಳ್ಳುತ್ತಾ, ಬಾಹ್ಯಪ್ರಪಂಚದ ಪರಿವೇ ಇಲ್ಲದೆ ಯೋಗದಲ್ಲಿ ಮಗ್ನನಾಗುತ್ತಾನೆ. ಹಲವು ದಿನಗಳ ಕಾಲ ಯೋಗದಲ್ಲಿದ್ದು, ಅಂತರಂಗದಲ್ಲಿ ದೇವಿಯನ್ನು ಸಾಕ್ಷಾತ್ಕರಿಸಿಕೊಂಡು ಎಚ್ಚೆತ್ತವನಂತೆ ತನ್ನ ಪ್ರಯಾಣ ಪ್ರಾರಂಭಿಸುತ್ತಾನೆ. ಅಲ್ಲಿಂದ ಚೇಳಗುರಿಕೆ ಕ್ಷೇತ್ರದ ಎರ್ರಿತಾತನವರ ಸನ್ನಿಧಿಗೆ ಬರುವಾಗ, ಮಾರ್ಗ ಮಧ್ಯದಲ್ಲಿ ಸಾಧುಗಿರಿಯೆಂದು ಖ್ಯಾತಿಗೊಂಡಿದ್ದ ಚಾಕುಬಂಡೆ ಎಂಬ ಗ್ರಾಮಕ್ಕೆ ಬರುತ್ತಾನೆ. ಅಲ್ಲಿ ರಾಮಣ್ಣ ಎಂಬುವರ ಬಾವಿಯ ಹತ್ತಿರ ಒಬ್ಬಂಟಿಗನಾಗಿ, ಯಾರೊಂದಿಗೂ ಮಾತನಾಡದೆ ಕುಳಿತಿರುತ್ತಾನೆ. ಸರ್ವಸಂಗ ಪರಿತ್ಯಾಗಿಯಾಗಿ, ದಿಗಂಬರನಾಗಿ, ನೋಡುವವರಿಗೆ ಹುಚ್ಚನಂತೆ ಕಾಣುತ್ತಿದ್ದ ಮೈಲಾರನನ್ನು ಯಾರೂ ಮಾತನಾಡಿಸುವುದಿಲ್ಲ. ಹೀಗೆ ಹಲವು ದಿನಗಳು ಹಸಿವು, ನಿದ್ರೆ, ಬಾಯಾರಿಕೆ, ಚಳಿ, ಮಳೆಯೆನ್ನದೆ ಧ್ಯಾನ ಮಗ್ನನಾಗಿ ಕುಳಿತಿರಲು, ಊರಲ್ಲಿ ಕೆಲವರು ಅನ್ನ-ನೀರು ತಂದು ಕೊಡುತ್ತಾರೆ. ತಾವಾಗಿಯೇ ಬಂದು ಈ ರೀತಿ ಸೇವೆ ಮಾಡುತ್ತಿದ್ದ ಜನಗಳಿಗೆ, ಮಾನವ ಜನ್ಮದ ಮಹತ್ವವನ್ನು, ಅದರ ಸಾರ್ಥಕತೆಯನ್ನು ಉಪದೇಶಿ ಸುತ್ತಾನೆ. ಆಧ್ಯಾತ್ಮದ ನಡೆ-ನುಡಿಯುಳ್ಳ, ಈತನ ಸ್ವಭಾವವನ್ನು ಕಂಡ ಜನರಿಗೆ ಭಯ-ಭಕ್ತಿಯಿಂದ ಗೌರವ ಮೂಡಿ, ಸೇವೆ ಮಾಡತೊಡಗುತ್ತಾರೆ. ಹೀಗೆ ಸುಮಾರು ಎರಡುವರ್ಷಗಳ ಕಾಲ ಚಾಕುಬಂಡೆಯಲ್ಲಿದ್ದು, ನಂಬಿ ಬಂದ ಭಕ್ತ ಜನತೆಗೆ ಭಕ್ತಿ, ಜ್ಞಾನ, ವೈರಾಗ್ಯವನ್ನು ಬೋಧಿಸುತ್ತಿದ್ದನು. ಹೀಗಿರಲು ಒಮ್ಮೆ ಯಾರಿಗೂ ಗೊತ್ತಾಗದ ಹಾಗೆ ಮನಸ್ಸಿನ ಮಾರ್ಗದಂತೆ ಚೇಳುಗುರಿಕೆ ಗ್ರಾಮಕ್ಕೆ ಬರುತ್ತಾನೆ.

ಚೇಳುಗುರಿಕೆ ಗ್ರಾಮಕ್ಕೆ ಬಂದಾಗ ಮಠದಲ್ಲಿದ್ದವರು ಈತನಾರೋ ಹುಚ್ಚನೆಂದು, ಮಠದ ಒಳಗಡೆ ಬಿಡದೆ ಕುಹಕದ ಮಾತುಗಳನ್ನಾಡುತ್ತಾರೆ.

ಬಳಿಕೆ ಹುಚ್ಚನ ವೇಷದಿಂದಾ
ಸ್ಥಳಕೆ ಬಂದನದೊರ್ವನಾತನ

[illegible]

ನೊಳಗೆ ಬಿಡದೆಯೆ ಮಠದ ಹೊರಗಿರವೇಳ್ಕುಮೆನೆ ಜನರು।
ತಳೆದನಗೆಯಿಂದವನು ದೂರದ
ನಲೆಯೊಳೇ ಕುಳಿತಿರ್ದು ನಿಜಹೃ
ತ್ತಲದೊಳುರೆ ಜಾನಿಸುತೆ ತಾತನ ರೂಪವಾದಿನದೋಳ್ ॥[೭೮]

ಮಠದ ಬಾಗಿಲಿನಲ್ಲೇ ಇದ್ದು, ಮಠದ ಆವರಣವನ್ನೆಲ್ಲಾ ಸ್ವಚ್ಛಗೊಳಿಸಿ, ತಾತನವರನ್ನು ನೆನೆಯುತ್ತಾ ಧ್ಯಾನ ಮಾಡುತ್ತಿರುತ್ತಾನೆ. ಮಠದಲ್ಲಿ ಎಲ್ಲರೂ ಮಲಗಿದ್ದಾಗ, ತಾನೊಬ್ಬನೇ ತಾತನ ಬಳಿ ಹೋಗಿ ಅವರ ಪಾದಸೇವೆ ಮಾಡಿ ಬರುತ್ತಿದ್ದನು. ಹೀಗೆ ''ಹಲವಾರು ದಿನಗಳು ಕಳೆದವು. ಮಠದ ಆವರಣದ ಕಸವೆಲ್ಲ ವನ್ನು ಗುಡಿಸಿ, ಆ ವ್ಯಕ್ತಿ ತಾನಿರುವ ಸ್ಥಳದಲ್ಲಿ ಹೋಗಿ ಮಲಗುತ್ತಿದ್ದನು. ಈತನು ಮಾಡುವ ಸೇವೆ ಯಾರಿಗೂ ತಿಳಿಯದಿದ್ದರೂ, ಮಠದ ಆವರಣ ಸ್ವಚ್ಛವಾಗುತ್ತಿರುವುದು ಕಂಡುಬರುತ್ತಿತ್ತು . ಇದು ಯಾರಿಂದ, ಎಂದು ಪರೀಕ್ಷಿಸಿದಾಗ ಈತನಿಂದಲೇ ಆ ಮಠದ ಸೇವೆ ನಡೆಯುತ್ತಿದೆಯೆಂದು ತಿಳಿದು ಬಂದಿತು. ಮಠದ ಕಾರ್ಯ ಕರ್ತರಲ್ಲೊಬ್ಬರು ಅವರಿಗೆ ಊಟ, ಬಟ್ಟೆ ಕೊಡುವ ಏರ್ಪಾಟು ಮಾಡಿದರು. ಮಠದೊಳಗೆ ಹೋಗಲು ಅವಕಾಶವನ್ನು ಕೊಟ್ಟರು.[೭೯] ಯಾವಾಗಲೂ ಗುರುಸೇವೆಯನ್ನು ಮಾಡಲು ಹಾತೊರೆಯುತ್ತಿದ್ದ ಈತ, ತನ್ನ ಹೆಸರನ್ನು, ಊರನ್ನು ಹೇಳದೆ, ತಾತನ ಮತ್ತು ಮಠದ ಸೇವೆ ಸಲ್ಲಿಸುತ್ತಿರುತ್ತಾನೆ. ವಿಚಿತ್ರ ಆಕಾರದ, ವೇಷದ, ಈ ವ್ಯಕ್ತಿಯನ್ನು ಎಲ್ಲರೂ ''ಹುಚ್ಚುಲಿಂಗಪ್ಪ'' ಎಂದು ಕರೆಯಲಾರಂಭಿಸುತ್ತಾರೆ. ಮುಂದೆ ಈ ವ್ಯಕ್ತಿ ಹುಬ್ಬಳ್ಳಿಯ ಸಿದ್ಧಾರೂಢರಲ್ಲಿಂದ ಬಂದವನೆಂದು ತಿಳಿದಾಗ ಎಲ್ಲರೂ ಗೌರವ ಮನ್ನಣೆ ನೀಡುತ್ತಾರೆ.

ತಾತನವರ ಸೇವೆಗೆ ಸಂಪೂರ್ಣ ತನ್ನ ನ್ನು ತೊಡಗಿಸಿಕೊಂಡು ಗುರು ಅನುಗ್ರಹಕ್ಕಾಗಿ, ಶಿಷ್ಯಭಾವನೆಯಲ್ಲಿ ಸೇವೆಗೈಯುತ್ತಿರುತ್ತಾನೆ.

ಮೂರು ತಿಂಗಳ ಕೂಸಿನಂದದಿ
ತೋರುತಿಹ ಗುರುವರನ ದೇಹದಿ
ಸೋರುತಿಹ ಮಲ-ಮೂತ್ರವೆಲ್ಲವ ಶುದ್ಧಗೈಯ್ಯುತಲೀ।
ಸಾಲಜಲದಿಂ ಸ್ನಾನ ಮಾಡಿಸಿ
ಮೂರು ಕಾಲದಿ ನಿತ್ಯದೀ ಪರಿ
ಮಾರಹರ ಶಿವನೆಂದು ಮನದಲ್ಲಿ ನಂಬಿ ದೃಢಮಾಗಿ ॥[೮೦]

ಶ್ರದ್ಧೆ, ನಿಷ್ಠೆಯಿಂದ ಸೇವೆಮಾಡುತ್ತಿರುವ ಈತನ ಸೇವಾಮನೋಭಾವನೆಯನ್ನು ಪರೀಕ್ಷಿಸುವ ಕಾಲ ಸನ್ನಿಹಿತವಾಗುತ್ತದೆ. ಹೀಗೆ ಸೇವೆಮಾಡುತ್ತಿರುವಾಗ ಈತನನ್ನು ಹತ್ತಿರಕ್ಕೆ ಕರೆದ ತಾತನು, ''ಏನಯ್ಯ ತುಮಕೂರಿಗೆ ಹೋಗಿ ಚಕ್ಕುಲಿ ತಾರಯ್ಯ ತಿನ್ನುತ್ತೇನೆ'' ಎನ್ನುತ್ತಾರೆ. ಸೇವೆಗೆಂದೇ ಮೀಸಲಾಗಿದ್ದ ಶಿಷ್ಯ ತಾತನವರ ಈ ಬಯಕೆಯನ್ನು ಕೇಳಿದ ತಕ್ಷಣವೆ ರಾತ್ರೋರಾತ್ರಿ ತುಮಕೂರಿಗೆ ಪ್ರಯಾಣ ಆರಂಭಿಸುತ್ತಾನೆ. ಗುರುವಿನ ಮನೋಬಯಕೆಯನ್ನು ಈಡೇರಿಸುವುದಕ್ಕಾಗಿ ಆತುರ ಆತುರವಾಗಿ ಹೋಗುತ್ತಿರಲು, ಮಾರ್ಗದಲ್ಲಿ ಈತನ ವಿಲಕ್ಷಣ ರೂಪವನ್ನು ಕಂಡು ಹುಚ್ಚನೆಂದು ಹಿಂಸಿಸುತ್ತಾರೆ. ಗೇಲಿ ಮಾಡುತ್ತಾ ಕಲ್ಲು ಮಣ್ಣಿನಿಂದೆಸೆ ಯುತ್ತಾರೆ.

ಪುಟ್ಟಗೋಸಿಯದುಳಿದು ಮತ್ತೇಂ
ಬಟ್ಟೆಯಿಲ್ಲದೆ ತೆರಳುವಾತಗೆ
ಬಟ್ಟೆಯೋಳ್ ಬಿದ್ದೊಂದು ವಸನವು ಸಿಕ್ಕುದದ ಗುರುವು।
ಕೊಟ್ಟನೆನಗೆಂದರಿದು ಹಿಗ್ಗುತೆ
ಕಟ್ಟಿ ತದ್ವಸ್ತ್ರದೊಳು ಜೋಳಿಗೆ
ಯಿಟ್ಟು ಚಕ್ಕುಲಿಗಳನದರೊಳೈ ತರಲು ನಿರ್ಧರಿಸಿ ||೮೧

ಲೋಕದ ಜನರ ಚಿಂತೆ ಮರೆತು, ಅವರುಗಳು ಕೊಟ್ಟ ತೊಂದರೆಗಳನ್ನು ಅನುಭವಿಸುತ್ತಾ ಹ್ಯಾಗೊ ತುಮಕೂರನ್ನು ಸೇರುತ್ತಾನೆ. ಆದರೆ ಕೈಯಲ್ಲಿ ದುಡ್ಡಿಲ್ಲ. ಮಾಡುವುದೇನೆಂದು ಚಿಂತಿಸಿ, ಅವರಿವರ ಸಾಮಾನುಗಳನ್ನು ಹೊರುವ ಕೂಲಿ ಕೆಲಸ ಮಾಡಿ ಹಣ ಸಂಪಾದಿಸುತ್ತಾನೆ. ಬಂದ ಹಣದಿಂದ ಚಕ್ಕುಲಿ ತೆಗೆದುಕೊಂಡು ತುಂಡು ಬಟ್ಟೆಯಲ್ಲಿ ಕಟ್ಟಿಕೊಂಡು ಹಿಂದಿರುಗಿದನು. ತನ್ನ ದೇಹದ ಅರಿವಿಲ್ಲದೆ ಗುರುಬಯಕೆಯನ್ನು ಈಡೇರಿಸುವ ಉದ್ದೇಶದಿಂದ ಹಗಲೆನ್ನದೆ, ಇರುಳೆನ್ನದೆ, ಚಳಿ-ಬಿಸಿಲೆನ್ನದೆ, ಅನ್ನ-ನೀರಿಲ್ಲದೆ, ಮೈಮೇಲೆ ಬಟ್ಟೆಯಿಲ್ಲದೆ, ಆತುರವಾಗಿ ಬರುತ್ತಿದ್ದನು. ಆಯಾಸ, ನಿತ್ರಾಣ, ಬಾಯಾರಿಕೆಯಿದ್ದರೂ ಅವುಗಳ ಪರಿವೇ ಇಲ್ಲದೆ ನಡೆದು ಬರುತ್ತಿರುವಾಗ, ಮಾರ್ಗಮಧ್ಯದ ಹಳ್ಳಿಯೊಂದರಲ್ಲಿ ಅನ್ನಕ್ಕಾಗಿ ಭಿಕ್ಷೆಬೇಡಲು ಹೋದರೆ ಯಾರೂ ನೀಡುವುದಿಲ್ಲ. ರಾತ್ರಿಯ ಸಮಯ ನಡೆಯಲಾಗದೆ ಆ ಹಳ್ಳಿಯಲ್ಲೇ ಇರಲು ನಿರ್ಧರಿಸುತ್ತಾನೆ. ಈತನ ವಿಚಿತ್ರ ವೇಷ, ರೂಪವ ಕಂಡ ಗ್ರಾಮಸ್ಥರು ಕಳ್ಳನಿರಬೇಕೆಂದು ಬಂಧಿಸಿ, ಮೈ-ಕೈಯಲ್ಲಿ ರಕ್ತ ಬರುವ ಹಾಗೆ ಹೊಡೆಯುತ್ತಾರೆ. ಎಷ್ಟು ಹೊಡೆದರೂ ತಾನ್ಯಾರೆಂದು ಹೇಳದೆ ಸುಮ್ಮನೇ ಇದ್ದ ಈತನ ಸ್ಥಿತಿಕಂಡು ಊರವರ ಮನಸ್ಸು ಕರಗಿ ಕಟ್ಟಿರುವ ಕೈಗಳನ್ನು ಬಿಚ್ಚಿ ಕಳಿಸುತ್ತಾರೆ. ಹೀಗೆ ದಾರಿ ಯುದ್ದಕ್ಕೂ ನಾನಾ ರೀತಿಯ ಕಷ್ಟಗಳನ್ನು ಅನುಭವಿಸುತ್ತಾ ಚೇಳಗುರಿಕೆಗೆ ಬರುತ್ತಾನೆ.

ಚೇಳಗುರ್ಕಿಗೆ ಬಂದು ತಾತನವರಿಗೆ ನಮಸ್ಕರಿಸಿ, "ಅಪ್ಪಾ ಚಕ್ಕುಲಿ ತಂದಿದ್ದೇನೆ ತಿನ್ನಿ" ಎಂದಾಗ, ತಾತನವರು ಕಾಶಿಯ ಗಂಗಾಜಲ ಬರಲಿ ಇರಯ್ಯ, ತಿನ್ನುವೆನೆನ್ನುತ್ತಾರೆ. ಕಾಶಿಯ ಗಂಗೆ ಬರುವುದೆಂದು, ತರುವವರ್‍ಯಾರು? ಕಷ್ಟಪಟ್ಟು ತಂದ ನನ್ನ ಶ್ರಮವೆಲ್ಲಾ ವ್ಯರ್ಥವೆಂದು ನಿರಾಸೆಯಿಂದ ಚಿಂತಿಸುತ್ತಾನೆ. ಕೆಲದಿನಗಳಲ್ಲೇ ಯಾರೋ ಭಕ್ತರೊಬ್ಬರು ಕಾಶಿಗೆ ಹೋಗಿ, ಗಂಗಾಜಲವನ್ನು ತೆಗೆದುಕೊಂಡು ತಾತನವರ ದರ್ಶನಕ್ಕೆಂದು ಮಠಕ್ಕೆ ಬರುತ್ತಾರೆ. ಇದನ್ನರಿತ ತಾತನು "ತಾರಯ್ಯ ತುಮಕೂರ ಚಕ್ಕುಲಿ" ಎಂದು ತಂದಿದ್ದ ಚಕ್ಕುಲಿಗಳಲ್ಲಿ ಕೆಲವನ್ನು ತಿಂದು, ಗಂಗಾಜಲವನ್ನು ಕುಡಿದು ಉಳಿದ ಚಕ್ಕುಲಿ ಮತ್ತು ಗಂಗಾಜಲವನ್ನು ಶಿಷ್ಯನಾದ ಮೈಲಾರನಿಗೆ ಕೊಡುತ್ತಾ -

ನೊಲಿದು ಶಿವರಾಮಾಭಿಧಾನದೆ ಕರೆದು ಮತ್ತವನಾ
ತಲೆಯೊಳುರೆ ಕರವಿಟ್ಟು ನಿನ್ನಯ
ನೆಲೆಗೆ ಪೋಗಲ್ಲಿರುವೆನಾನಂ
ದಲಘು ಕೃಪೆಯಂ ದೊರೆದ ತಾತನ ಪಾದಯುಗಳಕ್ಕೆ ||೮೨

ಶಿಷ್ಯನ ನಿಷ್ಠೆ, ಸಹನೆಯನ್ನರಿತು ಮೋಕ್ಷದ ಮಾರ್ಗವನ್ನು ಉಪದೇಶಿಸಿ "ನೀನು ಶಿವರಾಮನಯ್ಯ" ಎಂದು ಹೊಸ ಹೆಸರಿನಿಂದ ಕರೆದು ಆಶೀರ್ವದಿಸುತ್ತಾರೆ. ಹೀಗೆ ಮೈಲಾರನು, ಹುಚ್ಚುಲಿಂಗಪ್ಪನಾಗಿ, ಮುಂದೆ ಗುರುಕೃಪೆ ಮತ್ತು ಗುರೂಪದೇಶದಿಂದ ಶಿವರಾಮಯ್ಯನಾಗಿ ತನ್ನ ಸಾಧನೆಯ ಸಿದ್ಧಿಯಿಂದ 'ಶಿವರಾಮವ ಧೂತ'ನೆಂದು ಖ್ಯಾತಿ ಪಡದಿದ್ದಾರೆ.)

ಗುರೂಪದೇಶವನ್ನು ಪಡೆದು, ಕೆಲವು ದಿನ ಮಠದಲ್ಲಿಯೇ ಇದ್ದು ಗುರುವಿನ ಆದೇಶದಂತೆ ಸಾಧುಗಿರಿ ಯೆಂದು ಹೆಸರು ಪಡೆದಿರುವ ಚಾಕುಬಂಡೆಗೆ ಬರುತ್ತಾರೆ. ಅಲ್ಲಿ ಹಿಂದೆ ವಾಸ ಮಾಡಿದ್ದ ರಾಮಣ್ಣ ಎಂಬುವರ ಬಾವಿಯ ಹತ್ತಿರದ ಸ್ಥಳಕ್ಕೆ ಹೋಗಿ ವಾಸಿಸಲು, ಹಿಂದೆ ಬಂದಿದ್ದ ಸ್ವಾಮಿ ಮತ್ತೆ ಬಂದಿದ್ದಾರೆಂದು ಸುತ್ತ ಮುತ್ತಲಿನ ಗ್ರಾಮಸ್ಥರು ಸೇರುತ್ತಾರೆ. ಭಕ್ತರ ಮತ್ತು ಗ್ರಾಮಸ್ಥರ ಸಹಕಾರದಿಂದ ಅಲ್ಲೊಂದು ಗುರು ಎರ್ರಿತಾತನವರ ಮಠ ನಿರ್ಮಾಣ ಮಾಡಿ, ಮಠದಲ್ಲೊಂದು ಮೂರ್ತಿಯನ್ನು ಪ್ರತಿಷ್ಠಾಪಿಸಲು ಭಜನೆ ಸಪ್ತಾಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾರೆ. ಶಿವರಾಮವಧೂತರೆಂದು ಹೆಸರು ಪಡೆದು, ಅವರ ಭಕ್ತಿ, ಜ್ಞಾನ, ವೈರ್ಯಾಗದ ಮಹಿಮೆಯನ್ನು ಕೇಳಿದ್ದ ಅನೇಕ ಸಾಧು-ಸತ್ಪುರುಷರು, ಭಕ್ತರು ಈ ಸಪ್ತಾಹ ಕಾರ್ಯದಲ್ಲಿ ಭಾಗವಹಿಸುತ್ತಾರೆ. ಎಲ್ಲರ ಸಹಕಾರದಿಂದ ಎರ್ರಿತಾತನವರ ಮೂರ್ತಿಯನ್ನು ಪ್ರತಿಷ್ಠಾಪಿಸಿ, ಈ ಸಪ್ತಾಹವನ್ನು ಪ್ರತಿವರ್ಷವೂ ನಡೆಸಲು ತೀರ್ಮಾನಿಸಿದರು. ಸಪ್ತಾಹ ಕಾರ್ಯಕ್ರಮಕ್ಕೆ ಬಂದಿದ್ದ ಉರವಕೊಂಡದ ಭಕ್ತನೊಬ್ಬನು ತಮ್ಮ ಊರಲ್ಲಿಯೂ ಇಂತಹ ಕಾರ್ಯಕ್ರಮವನ್ನು ನಡೆಸಲು ಆಲೋಚಿಸಿ, ಅವಧೂತರನ್ನು ಕರೆದುಕೊಂಡು ಹೋಗಿ ಭಜನೆ ಸಪ್ತಾಹವನ್ನು ಯಶಸ್ವಿಯಾಗಿ ನಡೆಸಿದ್ದಾರೆ. ಹೀಗೆ ಅವಧೂತರ ಮಹಿಮೆ, ಸಾಧನೆ, ಸಿದ್ಧಿಗಳು ಸುತ್ತಮುತ್ತಲಿನ ಗ್ರಾಮಗಳಿಗೆ ಹರಡಿ, ಸಾಧುಗಿರಿಗೆ ಬರುವವರ ಸಂಖ್ಯೆ ದಿನೇದಿನೇ ಅಧಿಕವಾಗುತ್ತದೆ. "ಸಾಧುಗಿರಿಯಲ್ಲಿ ಅನೇಕ ಶಾಸ್ತ್ರಜ್ಞರು, ವಿಚಾರಪರರು ಇದ್ದು, ಶ್ರೀ ಸದ್ಗುರುಗಳ ದರ್ಶನ ಕ್ಕಾಗಿ, ಸ್ಪರ್ಶಕ್ಕಾಗಿ, ಸಂಭಾಷಣಾದಿಗಳಿಂದ ಅನುಭಾವಬೋಧೆಯನ್ನು ಪಡೆದು ಕೃತಾರ್ಥರಾಗುತ್ತಿದ್ದರು. ಇಷ್ಟರಲ್ಲೇ ಕೆಲವು ಮುಮುಕ್ಷುಗಳು ಅವಧೂತರ ಶಿಷ್ಯರಾಗಿ ಸೇರಿದರು. ಹೀಗಿರುವಾಗ್ಗೆ ಸದ್ಗುರುಗಳ ಸಂಕಲ್ಪದಂತೆ, ಸಾಧುಗಿರಿ ಬೆಟ್ಟದಲ್ಲಿ ಅತಿ ವೈಭವದಿಂದಲೂ, ಭಕ್ತ ಸಮೂಹದಿಂದಲೂ, ಶಿವ ಸಪ್ತಾಹವನ್ನು ನೆರವೇರಿಸಿದರು."[೮೩] ಹೀಗೆ ಸುಮಾರು ಐದು ವರ್ಷಗಳ ಕಾಲ ಸಾಧುಗಿರಿಯಲ್ಲಿದ್ದು, ಭಜನೆ, ಆರಾಧನೆಗಳಿಂದ, ಸಪ್ತಾಹ ಕಾರ್ಯಕ್ರಮಗಳನ್ನು ಮಾಡಿ, ಸುತ್ತಮುತ್ತಲಿನ ಹಳ್ಳಿಗಳಲ್ಲಿ ಅಪಾರ ಭಕ್ತ ಜನತೆಯನ್ನು ಪಡೆದರು. ಆ ಸಮಯದಲ್ಲಿ ಇವರನ್ನು ಭಕ್ತರೆಲ್ಲಾ 'ತಾತ' ಎಂದು ಕರೆಯಲಾರಂಭಿಸುತ್ತಾರೆ.

ನಂತರ ಗುರುವಿನ ಆದೇಶದಂತೆ, ಯಾರಿಗೂ ಹೇಳದೆ ಏಕಾಂಗಿಯಾಗಿ ಹಂಪಿಗೆ ಪ್ರಯಾಣ ಆರಂಭಿಸುತ್ತಾರೆ. ಸಾಧುಗಿರಿಯ ಭಕ್ತರು ಬೇಡವೆಂದು ಹಿಂಬಾಲಿಸುತ್ತಿರಲು, ಅವರಿಂದ ತಪ್ಪಿಸಿಕೊಳ್ಳಲು ಸ್ಮಶಾನಕ್ಕೆ ಹೋಗಿ, ಅಲ್ಲಿ ಬಿದ್ದಿದ್ದ ಹೆಣದ ಮೇಲಿನ ಬಟ್ಟೆಯನ್ನು, ಹರಕು ಕಂಬಳಿಯನ್ನು ತಲೆಗೆ ಸುತ್ತಿಕೊಂಡು, ಬೂದಿಯನ್ನು ಮೈತುಂಬಾ ಬಳಿದುಕೊಳ್ಳುತ್ತಾರೆ. ನೋಡುವವರಿಗೆ ಹೆದರಿಕೆ ಬರುವಹಾಗೆ ಇದ್ದ ತಾತನವರು ಹಿಂದೆ ಬಂದ ಭಕ್ತರನ್ನು ತಡೆದು, ನನ್ನನ್ನು ತಡೆಯಬೇಡಿರೆಂದು ಸಮಾಧಾನವಾಗಿ ಉಪದೇಶಿಸಿ ಅವರನ್ನೆಲ್ಲಾ ಹಿಂದಕ್ಕೆ ಕಳುಹಿಸಿ ಹಂಪಿಯ ಮಾರ್ಗವನ್ನು ಹಿಡಿದಿದ್ದಾರೆ.

ಹಂಪಿಯಲ್ಲಿ ನೆಲೆ

ಶಿವರಾಮವಧೂತನೆಂದು ಹೆಸರುಗಳಿಸಿ ಹಂಪಿಗೆ ಬಂದ ತಾತನು ಸೀತಾಸರೋವರದ ಗುಡ್ಡಗಳಲ್ಲಿನ ಗವಿಗಳಲ್ಲಿ ವಾಸಿಸುತ್ತಾ, ಏಕಾಗ್ರತೆಯಿಂದ ಗುರುವನ್ನು ಸ್ಮರಿಸುತ್ತಾ ಯೋಗ ಸಾಧನೆಯಲ್ಲಿ ನಿರತರಾಗುತ್ತಾರೆ.

ದೇಹದ ಪರಿವೇ ಇಲ್ಲದೆ ಊಟ, ಬಾಯಾರಿಕೆ, ನಿದ್ರೆಗಳ ತೊರೆದು ಯಾರಿಗೂ ಗೊತ್ತಾಗದ ಹಾಗೆ ಒಂಟಿಯಾಗಿ ಗವಿಯಲ್ಲಿದ್ದು ತನಗೆ ಬೇಕೆನಿಸಿದಾಗ ಮಾತ್ರ ಹೊರಗಡೆ ಬಂದು ಹೋಗುತ್ತಿರುತ್ತಾರೆ. ರಾಮದೇವರ ಅರ್ಚಕರೊಬ್ಬರು ಇವರನ್ನು ಕಂಡು ಯಾರೋ ಯೋಗಿ ಇರಬಹುದೆಂದು ನಿತ್ಯ ಹಣ್ಣು-ಹಂಪಲುಗಳನ್ನು ನೀಡುತ್ತಾರೆ. ತಾತನವರೊಬ್ಬರು ಗವಿಯಲ್ಲಿದ್ದಾರೆಂಬ ವಿಷಯ ತಿಳಿದು ಹಲವಾರು ಜನ ಬಂದು ಅವರ ಜೊತೆ ಸೇರುತ್ತಾರೆ. ಬಂದ ಜನರನ್ನೆಲ್ಲಾ ಸೇರಿ ರಾಮಭಜನೆ ಮಾಡಲು ತೀರ್ಮಾನಿಸುತ್ತಾರೆ. ಅದರಂತೆ ಭಜನೆಗೆಂದು ಬರುವ ಭಕ್ತರೇ ಭಜನೆ ಸಾಮಗ್ರಿಗಳನ್ನು, ದಾಸೋಹಕ್ಕೆ ಧಾನ್ಯ-ತರಕಾರಿಗಳನ್ನು ತಂದು ಕಾರ್ಯಕ್ರಮವನ್ನು ಯಶಸ್ವಿಗೊಳಿಸುತ್ತಾರೆ. ಜನರೆಲ್ಲಾ ಹೋದಾಗ, ಮತ್ತೆ ಜನ ಸಂಚಾರವಿಲ್ಲದ ಸ್ಥಳವನ್ನು ಸೇರಿ, ಆಹಾರಾದಿ ಗಳನ್ನು, ಶೀತೋಷ್ಣಗಳನ್ನು ಲಕ್ಷಿಸದೆ, ಗುರುವನ್ನು ಧ್ಯಾನಿಸುತ್ತಾ, ಸುಮಾರು ಇಪ್ಪತ್ತೆರಡು ದಿನಗಳ ಕಾಲ ಉಗ್ರ ತಪಸ್ಸನ್ನು ಮಾಡುತ್ತಾ ಯೋಗಮಗ್ನರಾಗಿರುತ್ತಾರೆ. ಹಲವು ದಿನ ಕಾಣದೆ ಇದ್ದ ತಾತನನ್ನು ಹುಡುಕುತ್ತಾ ಬಂದ ಕೆಲ ಜನರು ಗವಿಯಲ್ಲಿರುವುದು ತಿಳಿದು ಅವರನ್ನು ಹೊರತಂದು, ದೇಹದ ಮೇಲೆಲ್ಲಾ ಅಂಟಿಕೊಂಡಿದ್ದ ಕೆಸರನ್ನು ತೊಳೆದು ಶುದ್ಧಗೊಳಿಸುತ್ತಾರೆ. ಮತ್ತೆ ಜನಗಳು ಗವಿಯ ಹತ್ತಿರ ಬರಲಾರಂಭಿಸಿದಾಗ, ವಿಠಲರಾಯನ ಗುಡಿಯ ಭಾಗದ ಅರಣ್ಯದಲ್ಲಿ ಸುಮಾರು ಮೂರು ತಿಂಗಳ ಕಾಲ ಯಾರಿಗೂ ಕಾಣದಂತಿರುತ್ತಾರೆ.

ಅರಣ್ಯದಲ್ಲಿದ್ದಾಗ, ರಂಗಪ್ಪನೆಂಬ ಒಬ್ಬ ಸಾಧುವು ಪರಿಚಯವಾಗಿ ತನ್ನಲ್ಲಿರುವ ಹಣದ ವಿಷಯವನ್ನು ತಾತನವರಿಗೆ ತಿಳಿಸುತ್ತಾನೆ. ತಾತನವರು ಆ ಹಣದಿಂದ ದೇವಸ್ಥಾನದ ಆವರಣದಲ್ಲಿ ಅನ್ನಸಂತರ್ಪಣೆಯನ್ನು ಮಾಡಿಸುತ್ತಾರೆ. ತಾತನವರು ಈ ಸ್ಥಳದಲ್ಲಿರುವ ವಿಷಯವನ್ನು ಕೇಳಿ ಭಕ್ತರು ದರ್ಶನಕ್ಕಾಗಿ ಬರುತ್ತಾರೆ. ಬಂದವರಲ್ಲಿ ಎಷ್ಟೋ ಮಂದಿ ಮರಳಿ ಹೋಗದೆ ಅವರ ಶಿಷ್ಯರಾಗಿ, ಅವರ ಜೊತೆಯಲ್ಲೇ ಉಳಿಯುತ್ತಾರೆ. ಅವರುಗಳಲ್ಲಿ ಮುಖ್ಯವಾಗಿ ಮೈಸೂರು ಕಡೆಯ ಶ್ರೀನಿವಾಸರಾಯನೆಂಬುವನೂ, ಮೋರಿಗೇರಿಯ ಪಟದಪ್ಪ ನೆಂಬುವರೂ, ಗುಲಬರ್ಗಾ ಜಿಲ್ಲೆಯ ಕೊಟನೂರು ಗ್ರಾಮದಿಂದ ಬಂದ ಶಿವಶರಣ ಎಂಬ ಇಪ್ಪತ್ತೆರಡು ವರ್ಷದ ಯುವಕನು ಮುಖ್ಯರಾದವರು. ಹೀಗೆ ಬಂದು ಶಿಷ್ಯರಾಗಿ ನೆಲೆನಿಂತವರಿಗೆ ಒಂದೊಂದು ಹೆಸರನ್ನು ತಾತನವರು ಹೊಸದಾಗಿ ನೀಡುತ್ತಿದ್ದರು.

ಬಂದವರಲ್ಲಿ ಯುವಕನು ಮುಖ್ಯನು. ಶಿವಶರಣ ಎಂಬ ಈತ ತೀವ್ರ ವೈರಾಗ್ಯಹೊಂದಿ, ಭವಸಾಗರದಿಂದ ಮುಕ್ತನಾಗಲು ಜ್ಞಾನೋಪದೇಶವನ್ನು ಬಯಸಿ ಬಂದಿರುತ್ತಾನೆ. ಚಿಕ್ಕವಯಸ್ಸಿನಲ್ಲೇ ಲೌಕಿಕ ಜೀವನದ ಬಗ್ಗೆ ಜಿಗುಪ್ಸೆ ಮೂಡಿ ಎಲ್ಲೆಂದರಲ್ಲೆ ಸಂಚರಿಸುತ್ತಾ, ಕೊನೆಗೆ ಶಿವರಾಮವಧೂತರ ಅನುಗ್ರಹ ಪಡೆದು, ಗುರುಸೇವೆ ಸಲ್ಲಿಸುತ್ತಾ ಗುರುಭಕ್ತಿಯನ್ನು, ಗುರುನಿಷ್ಠೆಯನ್ನು ಮೆರೆದಿದ್ದಾನೆ. ಅವನನ್ನು ಗುರುಗಳು ಆಶೀರ್ವದಿಸಿ ಅವನ ಬಯಕೆಯಂತೆ ಶ್ರೀಶೈಲಕ್ಕೆ ಹೋಗಿ ಬರಲು ಕಳಿಸುತ್ತಾರೆ.

ತನ್ನನ್ನು ನಂಬಿ ಬರುವ ಅಸಹಾಯಕರಿಗೆ, ನೊಂದವರಿಗೆ, ಅಭಯವನ್ನು ನೀಡುತ್ತಾ ಅವರಿಗಾಗುವ ತಾಪತ್ರಯಗಳನ್ನು ಪರಿಹಾರ ಮಾಡುತ್ತಾ ಭಕ್ತ ಜನತೆಯನ್ನು ಕಾಪಾಡುತ್ತಿರುತ್ತಾರೆ. ತನಗಾಗುವ ಬಾಧೆಗಳಿಗೆ ಗಮನಕೊಡದೆ ಸದಾ ಗುರುವನ್ನು ನಿಶ್ಚಲ ಮನಸ್ಸಿನಿಂದ ಧ್ಯಾನಿಸುತ್ತಿರುತ್ತಾರೆ. ಹೀಗಿರುವಾಗ, ''ತಾತನವರು ವಾಸಿಸುತ್ತಿದ್ದ ಪ್ರದೇಶವು ಶೀತಮಯವಾಗಿ ಕಾಯಿಲೆ ಬಂದು ಹೊಟ್ಟೆಯಲ್ಲಿ ಒಂದು ವಿಧವಾದ ಗಂಟು ಬೆಳೆಯಿತು. ಅದರಿಂದ ನಿತ್ರಾಣವಾಗಿ ಎದ್ದು ಹೋಗಲು ಕೂಡ ಸಾಧ್ಯವಿಲ್ಲದಾಯಿತು. ಇಷ್ಟಾದರೂ ಸದ್ಗುರುಗಳು ಇವೆಲ್ಲವೂ ಜಡಮಯವಾದ ದೇಹಕ್ಕೆ ವಿನಃ ನನ್ನೇನು ಮಾಡುವುದೆಂದು ನುಡಿಯುತ್ತಿದ್ದರು.''[೮೪]

ನ ಚಾಸ್ತಿ ದೇಹೋ ನ ಚ ಮೇ ವಿದೇಹೋ
ಬುದ್ಧಿರ್ಮನೋ ಮೇ ನ ಹಿ ಚೇಂದ್ರಿಯಾಣಿ
ರಾಗೋ ವಿರಾಗಶ್ಚ ಕಥಂ ವದಾಮಿ
ಸ್ವರೂಪ ನಿರ್ವಾಣ ಮನಾ ಮಯೋsಹಮ್ ||[೮೫] ಅವಧೂತ ಉವಾಚ

ನನಗೆ ದೇಹವೂ ಇಲ್ಲ, ವಿದೇಹವೂ ಇಲ್ಲ. ನನಗೆ ಬುದ್ಧಿ ಮನಸ್ಸು ಇಂದ್ರಿಯಗಳಿಲ್ಲ. ನನ್ನಲ್ಲಿ ರಾಗ ಅಥವಾ ವಿರಾಗವಿದೆ ಎಂದು ಹೇಗೆ ಹೇಳಬಲ್ಲೆ? ಅನಾಮಯವಾಗಿರುವ ನಿರ್ವಾಣವೇ ನಾನು ಎನ್ನುವ ಅವಧೂತನ ಮಾತಿನಂತೆ ಶಿವರಾಮವಧೂತರ ಸ್ಥಿತಿ ಕಾಣುತ್ತಿತ್ತು. ಶೀತಮಯವಾದ ಪ್ರದೇಶವನ್ನು ಬಿಡಲು ಹಲವು ಭಕ್ತರ ಮತ್ತು ವಿರೂಪಾಕ್ಷಸ್ವಾಮಿಯ ಅರ್ಚಕರಾದ ಸುಬ್ಬಯ್ಯನವರ ಒತ್ತಾಯದ ಮೇರೆಗೆ ಈವರೆಗೆ ವಾಸಮಾಡುತ್ತಿದ್ದ ಪ್ರದೇಶವನ್ನು ಬಿಟ್ಟು ಹೇಮಕೂಟದಲ್ಲಿದ್ದ ನಾಗಲಿಂಗಪ್ಪನವರ ಗವಿಗೆ ಬರುತ್ತಾರೆ. ಭಕ್ತರೆಲ್ಲಾ ಸೇರಿ ಆ ಗವಿಯನ್ನು ಅದರ ಆವರಣವನ್ನು ಸ್ವಚ್ಛಗೊಳಿಸಿ, ವಾಸಮಾಡಲು ಯೋಗ್ಯ ಜಾಗವನ್ನಾಗಿ ಮಾಡಿ ಕೊಳ್ಳುತ್ತಾರೆ.

ಶ್ರೀಶೈಲಕ್ಕೆಂದು ಹೋಗಿದ್ದ ಶಿವಶರಣನು ತಾತನವರಲ್ಲಿಗೆ ಬಂದು ಮಠದ ಮತ್ತು ಅವರ ಸೇವೆ ಮಾಡಲಾರಂಭಿಸುತ್ತಾನೆ. ಅಡಿಗೆ ಮಾಡುವುದು, ಬಟ್ಟೆ ತೊಳೆಯುವುದು ಜೊತೆಗೆ ಆಶ್ರಮದ ಸುತ್ತ ಗಿಡ-ಮರಗಳನ್ನು ಬೆಳೆಸುವುದು ಈತನ ಸೇವೆಯಾಗಿತ್ತು. ಶಿವಶರಣರೊಂದಿಗೆ ಭಕ್ತರೆಲ್ಲಾ ಸೇರಿ -

ಗುಹೆಗಳೊಳಗಡೆಯಿರುವ ಸ್ಥಳದಲಿ
ಬಹಳ ಕಾಲದಲಿಂದ ತುಂಬಿದ
ಬಹು ವಿಧದ ಕಲ್ಮಶವನೆಲ್ಲ ತೆಗೆದು ಹಾಕುತಲೀ |
ಸಹಸದಲಿ ಕಲ್ಗುಂಡು ಮುಳ್ಗಳ
ಸಹಕರಿಸುತಲಾಗ ಸರ್ವರು
ಮಹಶ್ರಮವ ವಹಿಸುತ್ತ ಮಾಡಿದರಾಗ ನಿರ್ಮಲವಾ ||[೮೬]

ನಿಸ್ವಾರ್ಥ ಬುದ್ಧಿಯಿಂದ, ಗುರುಧ್ಯಾನದಿಂದ, ಬಿಸಿಲು, ಮಳೆ, ಚಳಿಯೆನ್ನದೆ ಗುರುಗಳ ಆಶ್ರಮವನ್ನು ಶುದ್ಧಗೊಳಿಸುತ್ತಾರೆ. ಆಶ್ರಮದಲ್ಲಿ ನಿತ್ಯ ಪೂಜೆ, ಪ್ರವಚನ, ಭಜನಾ ಕಾರ್ಯಗಳು ನಡೆಯಲು ವ್ಯವಸ್ಥೆ

ಮಾಡುತ್ತಾರೆ. ಕಾರ್ಯಕ್ರಮಗಳಿಗಾಗಿ ಬಂದ ಜನರು ತೃಪ್ತರಾಗಿ ಬಂದು ಹೋಗುತ್ತಿರುತ್ತಾರೆ. ಉಳಿದುಕೊಳ್ಳಲು ಉತ್ತಮ ವ್ಯವಸ್ಥೆ ಇದ್ದು, ನಿತ್ಯ ಹೋಗಿ ಬರುವವರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿರುತ್ತದೆ.

ಭಜನೆ ಸಪ್ತಾಹ ಕಾರ್ಯಕ್ರಮಗಳು

ಹಡಗಲಿಯ ಭಕ್ತರು ಬಂದು ತಾತನವರನ್ನು ತಮ್ಮ ಊರಿಗೆ ಬರಬೇಕೆಂದು ಕೇಳಿಕೊಂಡ ಮೇರೆಗೆ, ಅನೇಕ ಭಕ್ತರೊಂದಿಗೆ ಮೋರಿಗೇರಿಗೆ ಹೋಗಿ ಭಜನೆ ಸಪ್ತಾಹ, ಪ್ರವಚನ, ದಾಸೋಹ ಕಾರ್ಯಕ್ರಮಗಳನ್ನು ನೆರವೇರಿಸಿ ಬರುತ್ತಾರೆ. ಕೋಡಿಹಳ್ಳಿ, ಐನಳ್ಳಿ, ಬಗ್ಗನಾಳು ಗ್ರಾಮಗಳಿಗೆ ಹೋಗಿ ಶಿವಸಪ್ತಾಹ, ದಾಸೋಹ ಮುಂತಾದ ಕಾರ್ಯಕ್ರಮಗಳನ್ನು ನಡೆಸಿ, ಅಲ್ಲೀಪುರಕ್ಕೆ ಬರುತ್ತಾರೆ. ಅಲ್ಲೀಪುರದಲ್ಲಿ ಭಜನೆ ಸಪ್ತಾಹ ಕಾರ್ಯಕ್ರಮ ನಡೆಯುತ್ತಿದ್ದಾಗ, ಹಾವು ಕಚ್ಚಿದ ಹುಡುಗನ ಪ್ರಾಣವನ್ನು ಉಳಿಸಿದರೆಂದೂ ತಿಳಿಯುತ್ತದೆ. ತಾತನವರು ಮಾಡುತ್ತಿದ್ದ ಇಂಥ ಕಾರ್ಯಗಳಿಂದ ಊರವರೆಲ್ಲಾ ಜಾತಿ, ಮತ, ಧರ್ಮಗಳ ಭೇದಭಾವವಿಲ್ಲದೆ ಸೇರಿ ಧಾರ್ಮಿಕ ಸಮನ್ವಯತೆಯನ್ನು ಮೂಡಿಸುತ್ತಿದ್ದರೆಂದು ತಿಳಿಯುತ್ತದೆ.

ಹೊಸಪೇಟೆಯ ಭಕ್ತರು ಸೇರಿ ನಗರದಲ್ಲಿ ಸಪ್ತಾಹಕಾರ್ಯಕ್ರಮವನ್ನು ಏರ್ಪಡಿಸಿರೆಂದು ಕೇಳಿಕೊಳ್ಳಲು, ಅದರಂತೆ ಹೊಸಪೇಟೆಗೆ ಹೋಗಿ, ಮಲ್ಲಿಕಾರ್ಜುನ ಮಠದಲ್ಲಿ ಕಾರ್ಯಕ್ರಮ ಏರ್ಪಡಿಸುತ್ತಾರೆ. ಶಿವರಾಮವಧೂತರ ಪ್ರಭಾವವನ್ನು ಅರಿತಿದ್ದ ಅನೇಕ ಭಕ್ತರು ದೂರದ ಊರುಗಳಿಂದ ಆಗಮಿಸುತ್ತಾರೆ. ''ಹಲವಾರು ಸ್ವಾಮಿಗಳು-ಕೀರ್ತನಕಾರರು-ಶಾಸ್ತ್ರಜ್ಞರು-ಸನ್ಯಾಸಿಗಳು-ಸಾಧುಗಳು, ಭಕ್ತರುಗಳ ಸಮಾವೇಶವಾಗಿ ಆನಂದದಿಂದಲೂ, ಶಿವಭಜನಾ ಹಾಡುಗಳಿಂದಲೂ ಮೈಮರೆತು ಹಾಡುತ್ತಾ, ಕುಣಿಯುತ್ತಾ, ಶ್ರೀ ಗುರುಗಳ ಸೇವೆ ಸಲ್ಲಿಸಿ ಕೃತಾರ್ಥರಾಗಿರುತ್ತಾರೆ. ಏಳು ದಿನಗಳವರೆಗೂ ಭಕ್ತರ ಸಹಕಾರದಿಂದ ಜ್ಞಾನದಾಸೋಹ ಮತ್ತು ಅನ್ನದಾಸೋಹ ಕಾರ್ಯಕ್ರಮವಿರುತ್ತದೆ. ಸಪ್ತಾಹ ಮುಗಿದ ಮೇಲೆ ಅವಧೂತರನ್ನು ಪೂಜಾದಿ ಪುಷ್ಪಗಳಿಂದ ಅಲಂಕರಿಸಿ, ಅನೇಕ ಭಕ್ತ ಸಮೂಹದಿಂದ ಭಜನೆ ಮಾಡುತ್ತಾ ಜೈಕಾರ ಹಾಕುತ್ತಾ ನಾನಾ ರೀತಿಯ ವಾದ್ಯಗಳಿಂದ ಉತ್ಸವ ನಡೆಸಿದ್ದಾರೆ.''[೮೭] ಅದರ ನೆನಪಿಗೆ ಹೊಸಪೇಟೆಯಲ್ಲೊಂದು ಮಠವನ್ನು ಕಟ್ಟಿ ಶಿವರಾಮವಧೂತರ ಮೂರ್ತಿಯನ್ನು ಪ್ರತಿಷ್ಠಾಪಿಸಿದ್ದಾರೆ. ಇಂದು ಈ ಮಠವು ಬಹು ವಿಶಾಲವಾಗಿ, ಆಕರ್ಷಕ ವಾಗಿರುವುದನ್ನು ಕಾಣಬಹುದು. ಅವಧೂತರು ಎಲ್ಲಿಗೇ ಹೋದರೂ ದಿಗಂಬರರಾಗಿಯೇ ಹೋಗುತ್ತಿದ್ದರಂತೆ. ಲೋಕದ ಪರಿವೇ ಇಲ್ಲದೆ ಪರವಶರಾಗಿ, ಭಜನೆಯಲ್ಲಿ ಪಾಲ್ಗೊಂಡು ಹಾಡುತ್ತಾ ಕುಣಿಯುತ್ತಿದ್ದರು. ಹೀಗೆ ಮೈಲಾರ, ಬೆಟಗೇರಿ, ಬಳ್ಳಾರಿ ಸ್ಥಳಗಳಲ್ಲಿಯೂ ಇಂತಹ ಕಾರ್ಯಕ್ರಮಗಳನ್ನು ನಡೆಸಿರುವುದು ತಿಳಿಯುತ್ತದೆ.

ಶಿವರಾಮವಧೂತರ ಸಪ್ತಾಹ ಭಜನೆ ಕಾರ್ಯಕ್ರಮ ನಡೆಸುತ್ತಿರುವ ವಿಷಯ ತಿಳಿದ ಕೊಳಗಲ್ಲು ಗ್ರಾಮಸ್ಥರು ತಮ್ಮ ಗ್ರಾಮಕ್ಕೂ ಬರಬೇಕೆಂದು ಕೇಳಿಕೊಳ್ಳುತ್ತಾರೆ. ಗ್ರಾಮದ ಭಕ್ತ ಜನತೆಯ ಒತ್ತಾಯದ ಮೇರೆಗೆ ತನ್ನ ಭಕ್ತ ಸಮೂಹದೊಡನೆ ಕೊಳಗಲ್ಲು ಗ್ರಾಮಕ್ಕೆ ಬಂದು ಯಶಸ್ವಿಯಾಗಿ ಭಜನೆ ಸಪ್ತಾಹ ಕಾರ್ಯಕ್ರಮ ನಡೆಸಿದ್ದಾರೆ. ಅದರ ನೆನಪಿಗೆ ಗ್ರಾಮದ ಭಕ್ತರೆಲ್ಲಾ ಸೇರಿ ಶಿವರಾಮವಧೂತರ ಮಠ ಕಟ್ಟಿರುವುದನ್ನು ಈಗಲೂ ಕೊಳಗಲ್ಲು ಗ್ರಾಮದಲ್ಲಿ ನೋಡಬಹುದು.

ಅವಧೂತರು ಮಠದಲ್ಲಿದ್ದಾಗ ನಿತ್ಯವೂ ಬೆಳಿಗ್ಗೆ ಮತ್ತು ಸಾಯಂಕಾಲ ಭಾಗವತ, ರಾಮಾಯಣ ಮತ್ತು ಮುಮುಕ್ಷುಗಳಿಗೆ ಸಂಶಯ ನಿವೃತ್ತಿದಾಯಕವಾದ ವೇದಾಂತಸಾರವಾದ ಅನುಭವಾಮೃತಗಳನ್ನು ಉಪದೇಶಿಸುತ್ತಿದ್ದರು. ಜೊತೆಗೆ ಮಾನವರಾಗಿ ಹುಟ್ಟಿ, ಸಾಧನೆಯಿಂದ ದೈವತ್ವಕ್ಕೇರಿದ ಮಹಾತ್ಮರುಗಳ ಜೀವನ ಕಥೆಗಳನ್ನು, ಅವರ ಸಾಧನೆ ಸಿದ್ಧಿಗಳನ್ನು ಸೋದಾರಣವಾಗಿ ತನ್ನ ಶಿಷ್ಯವೃಂದಕ್ಕೆ ಭಕ್ತ ಜನತೆಗೆ ಉಪದೇಶಿಸುತ್ತಿರುತ್ತಾರೆ. ಇದ್ದಕ್ಕಿದ್ದಂತೆ ಯಾರಿಗೂ ಗೊತ್ತಾಗದ ಹಾಗೆ ಒಬ್ಬರೇ ಏಕಾಂತ ಸ್ಥಳಕ್ಕೆ ಹೋಗಿ ಯೋಗ ಸಾಧನೆ ಮಾಡಿಬರುತ್ತಿದ್ದರಂತೆ. "ಒಮ್ಮೆ ಯಾರಿಗೂ ಗೊತ್ತಾಗದ ಹಾಗೆ ಗುಡ್ಡಗಾಡು ಪ್ರದೇಶದ ಏಕಾಂತ ಸ್ಥಳಕ್ಕೆ ಹೋಗಿ ಹಲವಾರು ದಿನಗಳ ಯೋಗಸಾಧನೆ ಮಾಡಿ ಬಂದ ಇವರನ್ನು ಭಕ್ತರು ಮತ್ತು ಶಿಷ್ಯರು ಸ್ನಾನಾರ್ಥವಾಗಿ ಕರೆತಂದು ಅಭ್ಯಂಗಸ್ನಾನ ಮಾಡಲೋಸುಗ, ಸ್ವಾಮಿಯ ಲಂಗೋಟಿಯನ್ನು ಬಿಚ್ಚಿದೊಡನೆಯೇ ಚೇಳು ವಕ್ಷಸ್ಥಳದ ಕೆಳಗೆ ವಾಸವಾಗಿರುವುದನ್ನು ಕಂಡು ಎಲ್ಲರೂ ಗಾಬರಿಯಾಗುತ್ತಾರೆ. ಆಗ ತಾತನವರು ಭಕ್ತವೃಂದಕ್ಕೆ ಗಾಬರಿಪಡಬೇಡಿ, ನಮ್ಮಲ್ಲಿ ಜೀವಾತ್ಮನು ಇರುವ ಹಾಗೆ ಅದರಲ್ಲಿಯೂ ಜೀವಾತ್ಮವಿದೆ. ಹೆದರಬೇಡಿ ಎಂದು ಜೀವದಯೆಯ ಮಹತ್ವವನ್ನು ಹೇಳಿದ್ದಾರೆ.[೮೮] ಹೀಗೆ ವಿಚಿತ್ರ ಸ್ವಭಾವದ ತಾತನು ದರ್ಶನಕ್ಕೆಂದು ಬಂದ ಭಕ್ತ ಸಮೂಹಕ್ಕೆ ಒಮ್ಮೆ ಮೌನಿಯಾಗಿ, ಒಮ್ಮೆ ಹುಚ್ಚರಂತೆ, ಮತ್ತೊಮ್ಮೆ ಮಹಾಜ್ಞಾನಿಯಂತೆ ಕಾಣುತ್ತಾ ತಮ್ಮ ಅದ್ಭುತ ಲೀಲೆಗಳನ್ನು ತೋರಿದ್ದಾರೆ. ಶಿಷ್ಯರಾಗಿ ಸೇವೆ ಸಲ್ಲಿಸುತ್ತಿದ್ದ ಶಿವಶರಣಾನಂದರು, ಪಟದಪ್ಪನವರು, ಶಂಕರಾನಂದರು ಶ್ರಮವಹಿಸಿ, ಆಶ್ರಮದ ಮತ್ತು ತಾತನವರ ಸೇವೆ ಮಾಡುತ್ತಾ ತಮ್ಮ ಗುರುನಿಷ್ಠೆಯನ್ನು ತೋರುತ್ತಿದ್ದರು.

ಆಶ್ರಮದಲ್ಲಿ ನಿರಂತರವಾಗಿ ಶಿವಭಜನೆ, ರಾಮಭಜನೆ, ಅನ್ನ ಸಂತರ್ಪಣೆ ಮುಂತಾದ ಕಲ್ಯಾಣ ಕಾರ್ಯಗಳನ್ನು ಯಾವ ಭೇದಭಾವವಿಲ್ಲದೆ ನೆರವೇರಿಸುತ್ತಿದ್ದರು. ತಮ್ಮನ್ನು ನಂಬಿ ಬಂದ ಭಕ್ತರ ಕಷ್ಟಗಳನ್ನು ಸಮಸ್ಯೆಗಳನ್ನು ಬಗೆಹರಿಸುತ್ತಾ ಸಮಾಜದ ಎಲ್ಲಾ ವರ್ಗದ ಜನರಿಂದಲೂ ಭಕ್ತಿ ಗೌರವಗಳನ್ನು ಸ್ವೀಕರಿಸುತ್ತಿದ್ದರು. ರೋಗಿಗಳಿಗೆ, ಅಶಕ್ತರಿಗೆ, ಅಸಹಾಯಕರಿಗೆ ಅಭಯವನ್ನಿತ್ತು, ಆಶೀರ್ವದಿಸಿ ಅವರನ್ನು ರಕ್ಷಿಸುತ್ತಿದ್ದರು.

ಕಾಲ ಕಳೆದಂತೆ ಆಯುಷ್ಯದ ಅಂಚಿನಲ್ಲಿದ್ದ ತಾತನು, ತನ್ನ ಎಲ್ಲಾ ಭಕ್ತರನ್ನು, ಶಿಷ್ಯರನ್ನು ಕರೆದು ನಾನು ಭುವಿಗೆ ಬಂದ ಕಾರ್ಯವು ಮುಗಿಯಿತು. ಇಂದಿಗೆ ಈ ದೇಹದ ಸಹವಾಸ ಸಾಕಾಯಿತು. ಇನ್ನು ಮುಂದೆ ನಿರ್ಗುಣ ನಿರಾಕಾರ ಸ್ವರೂಪನಾದ ಪರಬ್ರಹ್ಮನಲ್ಲಿ ಸುಖವನ್ನು ಹೊಂದುತ್ತಾ ಕೈವಲ್ಯವನ್ನು ಪಡೆಯುತ್ತೇನೆಂದು ಹೇಳುತ್ತಾರೆ. ತಾತನವರು ಐಕ್ಯರಾಗುವ ವಿಷಯ ತಿಳಿದು ದುಃಖಿತರಾದ ಶಿಷ್ಯರಿಗೆ ಸಮಾಧಾನ ಮಾಡುತ್ತಾ ನೀವೆಲ್ಲಾ ನಿತ್ಯ ಭಜನೆ, ಪ್ರಾರ್ಥನೆ, ಸತ್ಯ ಕಾರ್ಯಗಳನ್ನು ಬಿಡದೆ ಮಾಡುತ್ತಿರಿ. ನಿಮಗೆ ಶಾಶ್ವತವಾದ ಸುಖ ದೊರೆಯುತ್ತದೆ ಎಂದು ಉಪದೇಶಿಸುತ್ತಾರೆ. ಶಿಷ್ಯನಾದ ಶಿವಶರಣಾನಂದರನ್ನು ಹತ್ತಿರ ಕರೆದು, ನಿನ್ನ ಮನಸ್ಸು ಗುರುಸೇವೆಯಲ್ಲಿ ಹಾಗೂ ಆತ್ಮಾನುಸಂಧಾನದಲ್ಲಿ ಸ್ಥಿರವಾಗಿರುವುದು. ಸದ್ಗುರುವಿನ ಶ್ರೇಷ್ಠ ಕರುಣೆಯನ್ನು ನೀನು ಪಡೆದಿರುವೆ. ಈ ಆಶ್ರಮದ ಜವಾಬ್ದಾರಿಯನ್ನು ನಿನಗೆ ವಹಿಸಿ ಕೊಡುತ್ತೇನೆ ಎಂದು ಆಶೀರ್ವದಿಸುತ್ತಾರೆ. "ತಾತನವರು ಐಕ್ಯರಾಗುವ ವಿಷಯ ತಿಳಿದು ಅನೇಕ ಸಾಧು ಸತ್ಪುರುಷರು, ಸಂತರು,

ಶರಣರು, ಸೇರಿ ಪುರಾಣ ಪ್ರವಚನ, ಕೀರ್ತನೆ, ಭಜನೆಗಳನ್ನು ನಡೆಸುತ್ತಾರೆ. ಮಂಗಳ ಘೋಷಣೆ ಯನ್ನು ಕೇಳುತ್ತಾ ಸಮಾಧಿಸ್ಥಿತಿಯಲ್ಲಿ ಧ್ಯಾನ ಮಾಡುತ್ತಾ ಶಾಲಿವಾಹನ ಶಕೆ ೧೮೫೬ ಅಂದರೆ ೧೯೩೪ರ ಭಾವನಾಮ ಸಂವತ್ಸರ ಶರದೃತು ಆಶ್ವೀಜಮಾಸ ದುರ್ಗಾಷ್ಟಮಿಯಂದು ಐಕ್ಯರಾಗಿರುವುದು ತಿಳಿದು ಬರುತ್ತದೆ.[೮೯] ಅವಧೂತರು ಐಕ್ಯರಾದ ವಿಚಾರ ತಿಳಿದು ಅಪಾರ ಸಂಖ್ಯೆಯಲ್ಲಿ ಸಾಧು-ಸಂತರು ಭಕ್ತರು, ದುಃಖಿತರಾಗಿ ಅಂತ್ಯ ಸಂಸ್ಕಾರದಲ್ಲಿ ಪಾಲ್ಗೊಂಡಿರುತ್ತಾರೆ.

ಶಿವರಾಮವಧೂತರ ನಂತರ ಆಶ್ರಮದ ಜವಾಬ್ದಾರಿ ಸ್ವೀಕರಿಸಿದ ಶಿವಶರಣಾನಂದರು ಗುರು ಆದೇಶದಂತೆ ಆಶ್ರಮಕ್ಕೆ ಬರುತ್ತಿದ್ದ ಭಕ್ತರನ್ನು ಆನಂದದಿಂದ ಉಪಚರಿಸುತ್ತಿದ್ದರು. ಇವರ ಮಹಿಮೆಯನ್ನು ಕೇಳಿ ಅನೇಕ ಭಕ್ತರು ಶಿಷ್ಯರಾದರು. "ಶಿವಶರಣಾನಂದರು ತನ್ನ ಎಲ್ಲಾ ಭಕ್ತರಿಗೆ, ಶಿಷ್ಯರಿಗೆ ಚೈತ್ರ, ವೈಶಾಖ, ಜೇಷ್ಠ, ಆಷಾಢ ಮಾಸಗಳಲ್ಲಿ ಕ್ರಮವಾಗಿ ಹಂಪಿ, ಹೊಸಪೇಟೆ, ಕೊಳಗಲ್ಲು, ಚಾಕುಬಂಡೆ ಗ್ರಾಮಗಳಲ್ಲಿ ತಪ್ಪದೆ ಸಪ್ತಾಹ ಭಜನಾ ಕಾರ್ಯವನ್ನು ನೆರವೇರಿಸುವಂತೆ ಆದೇಶಿಸುತ್ತಾರೆ. ವೇದಾಂತ ಶ್ರವಣ ಸಪ್ತಾಹ ತಪ್ಪದೆ ನಡೆಯಬೇಕು. ಇದರಿಂದ ಸರ್ವ ಮಾನವರ ಕಲ್ಯಾಣವಾಗುವುದೆಂದು ಆಜ್ಞೆ ಮಾಡುತ್ತಾರೆ.[೯೦] ಹೀಗೆ ಶಿವಶರಣಾನಂದರು ಗುರುಗಳಂತೆ ತಾವೂ ಸಹ ಆಶ್ರಮಕ್ಕೆ ಬರುವ ಭಕ್ತರ ನೋವು-ಕಷ್ಟಗಳನ್ನು ಪರಿಹರಿಸಿ, ಗುರುವಿನ ಹೆಸರಿನಲ್ಲಿ ನಡೆಯುವ ಸಪ್ತಾಹ ಭಜನಾ ಕಾರ್ಯಕ್ರಮಗಳಿಗೆ ಹೋಗಿ ಬರುತ್ತಿದ್ದರು. ಹೀಗೆ ಭಕ್ತರ ಸಹಕಾರದಿಂದ ಹಂಪಿಯಲ್ಲಿ ಶಿವರಾಮವಧೂತರ ಸಮಾಧಿಯ ಮೇಲೆ ಅಮೃತಶಿಲೆಯ ಮೂರ್ತಿಯನ್ನು ಪ್ರತಿಷ್ಠಾಪಿಸಿ, ನಿತ್ಯ ಪೂಜೆ ಮತ್ತು ಅಮಾವಾಸ್ಯೆಯ ದಿನದಂದು ವಿಶೇಷ ಪೂಜೆಗಳು ನಡೆಯುವಂತೆ ವ್ಯವಸ್ಥೆ ಮಾಡಿರುತ್ತಾರೆ. ನಂತರ ಮಠದ ಅಧಿಕಾರವನ್ನು ಅವರ ಶಿಷ್ಯರಾದ ಕಟ್ಟೆ ಬಸವರಾಜಸ್ವಾಮಿಯವರು ವಹಿಸಿ ಕೊಂಡಿರುತ್ತಾರೆ. ಇವರಿಬ್ಬರ ಸಮಾಧಿಗಳನ್ನು ಹಂಪಿಯ ಹೇಮಕೂಟದ ಮಠದಲ್ಲಿ ಕಾಣಬಹುದು.

ಮುಂದೆ ಇಂಚಲ ಸಾಧು ಸಂಸ್ಥಾನ ಮಠದ ಪೀಠಾಧಿಕಾರಿಗಳಾದ ಶ್ರೀ ಶಿವಾನಂದಭಾರತಿ ಮಹಾಸ್ವಾಮಿಗಳು ಅಧಿಕಾರವಹಿಸಿಕೊಂಡರು. ನಂತರದಲ್ಲಿ ವಿದ್ಯಾನಂದ ಭಾರತಿಸ್ವಾಮಿಗಳು ಮಠದ ಅಧಿಕಾರವನ್ನು ವಹಿಸಿಕೊಂಡು, ಆಶ್ರಮದಲ್ಲಿ ಪೂಜೆ, ಪ್ರವಚನ ಕಾರ್ಯಕ್ರಮಗಳ ಜೊತೆ ಶಿವರಾಮವಧೂತರ ಹೆಸರಿನಲ್ಲಿ ರಥೋತ್ಸವ ಕಾರ್ಯಗಳನ್ನು ನಡೆಸುತ್ತಿದ್ದಾರೆ. ಇಂದು ಆಶ್ರಮ ವೈವಿಧ್ಯಮಯವಾಗಿ ಬೆಳೆಯುತ್ತಿದ್ದು, ಬಂದು ಹೋಗುವ ಭಕ್ತರಿಗೆ ಸಕಲ ಸೌಕರ್ಯಗಳ ವ್ಯವಸ್ಥೆ ಮಾಡಿದ್ದಾರೆ. ಕಲ್ಯಾಣ ಮಂಟಪ, ಭೋಜನಶಾಲೆ ಮತ್ತು ಅಡುಗೆ ಮನೆಗಳನ್ನು ಕಟ್ಟಿಸಿ ಸಾರ್ವಜನಿಕರ ಅನುಕೂಲಕ್ಕೆ ಅನುವು ಮಾಡಿಕೊಟ್ಟಿದ್ದಾರೆ.

೪. ೭. ಹೇರೂರು ವಿರುಪಾವಧೂತರು

ವಿರುಪಾವಧೂತರೆಂದು ಹೆಸರು ಪಡೆದ ಹೇರೂರಿನ ವಿರುಪಣ್ಣಗೌಡರು ಅವಧೂತರಾಗಿ ಅಲೆದಾಡು ತ್ತಿರುವಾಗ, ತನ್ನ ಕೊನೆಯ ದಿನಗಳನ್ನು ಕಂಪ್ಲಿಯಲ್ಲಿ ಕಳೆದರೆಂದೂ, ಅಲ್ಲಿರುವ ಜೋಗಿ ಕಾಲುವೆಯ ಹತ್ತಿರ ಕೊಪ್ಪರಿಗೆ ಕೆಳಗೆ ಲಿಂಗೈಕ್ಯರಾದರೆಂದೂ ತಿಳಿದು ಬರುತ್ತದೆ. ಇಂದು ಅದೇ ಜಾಗದಲ್ಲಿಯೇ ವಿರುಪಾವಧೂತರ ಸಮಾಧಿಯಿದೆ.

ಗಂಗಾವತಿ ತಾಲೂಕಿನ ಹೇರೂರು ಇವರ ಜನ್ಮ ಸ್ಥಳ. ಇಲ್ಲಿನ ಬಸವನಗೌಡ (ರೆಡ್ಡಿ) ಮತ್ತು ಮುದ್ದಮ್ಮ ಎಂಬ ದಂಪತಿಗಳ ಮಗನಾಗಿ ಜನಿಸಿದ ಇವರು, ಶಾಲಾ ಶಿಕ್ಷಣವನ್ನು ಪಗಡದಿನ್ನಿ ಹಿರೇಮಠದ ಪಟದಪ್ಪ ನವರಿಂದ ಪಡೆದಿದ್ದಾರೆ. ಅಕ್ಷರವಿದ್ಯೆಯನ್ನಲ್ಲದೆ, ಭಜನೆ ಮಾಡುವುದು, ಭಜನೆ ಪದ ಹಾಡುವುದು, ಹಲಗೆ ಡೊಳ್ಳು ಬಡಿಯುವುದು, ಕೋಲಾಟ, ಸಂಗೀತ, ಸಾಹಿತ್ಯ ರಚನೆ, ಹೀಗೆ ವಿವಿಧ ಅಭಿರುಚಿ ಹೊಂದಿದ್ದ ಇವರು ಎಲ್ಲೇ ಹೋದರೂ ಭಜನೆ ಮಾಡುವುದನ್ನು ತಪ್ಪಿಸುತ್ತಿರಲಿಲ್ಲ. ವಿರುಪಣ್ಣನ ಭಜನೆ ಎಂದರೆ ಜನರ ಗಂಪೇ ಸೇರುತ್ತಿದ್ದು, ಅವರು ಹಾಡುತ್ತಿದ್ದ ತತ್ತ್ವಪದಗಳ ಸವಿಯನ್ನು ಸವಿಯುತ್ತಿದ್ದುದನ್ನು ಜನ ಈಗಲೂ ನೆನಪಿಸಿಕೊಳ್ಳುತ್ತಾರೆ. ರಂಗಭೂಮಿಯಲ್ಲೂ ಆಸಕ್ತಿ ತಳೆದು, ಬಯಲಾಟ, ದೊಪ್ಪಿನಾಟಗಳಲ್ಲಿ ನಟನೆಯನ್ನು ತೋರುವುದರ ಜೊತೆಗೆ, ಹಿನ್ನಲೆಗಾಯಕರೂ ಆಗಿದ್ದರು. ಯೌವ್ವನಾವಸ್ಥೆಗೆ ಬರುವಷ್ಟರಲ್ಲಿ ಈ ಕಲೆಗಳ ಜೊತೆಗೆ ಕೃಷಿಕಾರ್ಯವನ್ನೂ, ಊರಲ್ಲಿ ನಡೆಯುವ ಜಗಳ, ವೈಷಮ್ಯಗಳನ್ನೂ ಬಗೆಹರಿಸುತ್ತಾ ಎಲ್ಲರ ಮೆಚ್ಚುಗೆ ಪಡೆದಿದ್ದರು.

ಒಮ್ಮೆ ಕಾಯಿಲೆಯಿಂದ ನರಳುತ್ತಿದ್ದ ವಿರುಪಣ್ಣನು ಆರ್ಹಾಳಿನ ರುದ್ರಮುನಿ ತಾತನವರ ಆಶೀರ್ವಾದದಿಂದ ಗುಣಮುಖನಾಗಿದ್ದನು. ಅದರಿಂದ ಉತ್ತೇಜಿತನಾಗಿ ಅವರಿಂದ ಅನುಗ್ರಹ ಮತ್ತು ಉಪದೇಶ ಪಡೆಯಬೇಕೆಂಬ ಹಂಬಲವುಂಟಾಗುತ್ತದೆ. ಅದರಂತೆ ಗುರುಗಳನ್ನು ಭೇಟಿಯಾಗಿ ಆತ್ಮ, ಪರಮಾತ್ಮ, ಅನುಭಾವ, ಯೋಗ ಮುಂತಾದ ವಿಷಯಗಳನ್ನು ಚರ್ಚಿಸಿ, ಅವರ ಶಿಷ್ಯನಾಗುತ್ತಾನೆ. ಶಿಷ್ಯನ ನಿಷ್ಠೆ ಮತ್ತು ಬುದ್ಧಿಯನ್ನರಿತ ರುದ್ರಮುನಿತಾತನವರು ಗುರೂಪದೇಶ ನೀಡುತ್ತಾರೆ. ಕ್ರಮೇಣ ವಿರುಪಣ್ಣನ ನಡೆ-ನುಡಿಗಳು ಭಿನ್ನವಾಗಿದ್ದು, ನೋಡುಗರಿಗೆ ವಿಚಿತ್ರ ವ್ಯಕ್ತಿಯಂತೆ ಕಾಣುತ್ತಿದ್ದನು. ಇದನ್ನು ಗಮನಿಸಿದ ತಂದೆ-ತಾಯಿಗಳು ಮದುವೆ ಮಾಡಲು ನಿರ್ಧರಿಸಿ, ವಿರುಪಣ್ಣನಿಗೆ ಇಷ್ಟವಿರದಿದ್ದರೂ ಸೋದರಮಾವ ಅಡಿವೆಪ್ಪಗೌಡನ ಮಗಳಾದ ಸಿದ್ದಮ್ಮನನ್ನು ಮದುವೆ ಮಾಡಲು ನಿರ್ಧರಿಸುತ್ತಾರೆ. ಸಂಸಾರದಲ್ಲಿ ನಿರಾಸಕ್ತಿ, ಮನದ ತುಂಬಾ ವಿರಕ್ತಿಹೊಂದಿ, ನಿರ್ಲಿಪ್ತನಂತಿದ್ದರೂ ಗುರುಗಳ, ತಂದೆ -ತಾಯಿಗಳ ಒತ್ತಾಯಕ್ಕೆ ಮಣಿದು ಮದುವೆಯಾಗುತ್ತಾನೆ. ಇದರಿಂದ ಮಾವನ ಪೋಲೀಸ್ ಗೌಡಿಕೆಯೂ ಸಿಗುತ್ತದೆ. ಸಂಸಾರವಂದಿಗನಾದ ವಿರುಪಣ್ಣನು ಯಾವಾಗಲೂ ಸತ್ಯ, ನ್ಯಾಯ, ನೀತಿವಂತನಾಗಿದ್ದು, ಜಾತೀಯತೆ, ಮೂಢನಂಬಿಕೆಗಳನ್ನು ವಿರೋಧಿಸುತ್ತಿರುತ್ತಾನೆ. ಎಲ್ಲಾ ವರ್ಗದ ಜನರನ್ನು ಸಮಾನ ಮನೋ ಭಾವದಿಂದ ಕಾಣುತ್ತಿದ್ದ ವಿರುಪಣ್ಣನ ನಡೆ-ನುಡಿ ವ್ಯಕ್ತಿತ್ತ್ವವನ್ನು ಸಹಿಸದ ಕೆಲವರು ವಿರೋಧಿಗಳಾಗುತ್ತಾರೆ. ಇಲ್ಲದ ಅಪವಾದಗಳನ್ನು ಕಟ್ಟುತ್ತಾರೆ. ಅಂತಹ ಜನಗಳಿಗೆ ''ಬಿಂಕಬಿಟ್ಟು ಶಂಕರನ ನೆನೆದರೆ ಕಿಂಕರಭಾವದಿಂದ ಶಂಕರನೆ ನೀನಾಗುವೆ'' ಎಂದು ಆಧ್ಯಾತ್ಮ, ಸತ್ಯ ಹಾಗೂ ಮೋಕ್ಷದ ಮಾರ್ಗವನ್ನು ಹೇಳಿಕೊಡುತ್ತಿದ್ದರು.

ಸಂಸಾರದಲ್ಲಿ ಆಸಕ್ತಿಯಿಲ್ಲದೆ ಆರ್ಹಾಳಿನ ಗುರು ರುದ್ರಮುನಿ ತಾತನವರ ಪ್ರಭಾವಕ್ಕೊಳಗಾಗಿ ಆಧ್ಯಾತ್ಮದ ಮಾರ್ಗಹಿಡಿದು, ಜನರು ಆಚರಿಸುತ್ತಿದ್ದ ಮೂಢನಂಬಿಕೆಗಳ ವಿರುದ್ಧ ಧ್ವನಿಯೆತ್ತಿದ ವಿರುಪಣ್ಣನು ಒಮ್ಮೆ ನಾಗರ ಹಬ್ಬದಂದು ಎಲ್ಲರೂ ಕಲ್ಲು-ಮಣ್ಣಿನ ಮೂರ್ತಿಗೆ ಹಾಲೆರೆಯುತ್ತಿದ್ದರೆ, ಅದು ಮೂಢನಂಬಿಕೆಯೆಂದು ಹೇಳಿ, ನಿಜದ ಹಾವಿಗೆ ಹಾಲೆರೆದಿದ್ದಾರೆ.

ಹಂಪಿ ಹುಣ್ಣಿಮೆಯ ದಿನದಂದು ವಿರುಪಾಕ್ಷೇಶ್ವರ ಜಾತ್ರೆಯ ರಥೋತ್ಸವವನ್ನು ತನ್ನ ಮನೆಯ ಮೇಲೆ ನಿಂತು ತಾಯಿಗೆ ದರ್ಶನ ಮಾಡಿಸಿದ್ದಾರೆ. ಹಾಗೆಯೇ ಮುಂದೆ ಆಗುವುದನ್ನು ಭವಿಷ್ಯ ನುಡಿಯುತ್ತಿದ್ದು, ಅದರಂತೆ ಅವರು ಹೇಳುವುದು ನಡೆಯುತ್ತಿದ್ದವೆಂದು ತಿಳಿಯುತ್ತದೆ. ಜೊತೆಗೆ ಸಮಯ ಸನ್ನಿವೇಶಕ್ಕೆ ತಕ್ಕಂತೆ ತತ್ತ್ವಪದವನ್ನು ಹಾಡಿ ಎಲ್ಲರನ್ನು ಬೆರಗುಗೊಳಿಸುತ್ತಿದ್ದರು. ಈ ರೀತಿಯ ನಡೆ, ನುಡಿಗಳಿಂದ ಮಾನಸಿಕ ಪರಿವರ್ತನೆಯಾಗಿ, ಮನೆ, ಮಡದಿ, ಊಟ, ನಿದ್ದೆ ಮುಂತಾದವುಗಳ ಮೋಹವ ಬಿಟ್ಟು, ತುಂಡು ಬಟ್ಟೆ ಹೊದ್ದು, ಗಡ್ಡಮೀಸೆ ಬಿಟ್ಟು ವಿಕಾರರೂಪದಲ್ಲಿ ಓಡಾಡುತ್ತಿರುತ್ತಾರೆ. ಇವರನ್ನು ಕಂಡ ಕೆಲವರು ಹುಚ್ಚನೆಂದು ಕರೆದರೆ, ಕೆಲವರು ದೇಹಭಾವ ಬಿಟ್ಟ ಅವಧೂತನೆಂದು ಕರೆಯಲಾರಂಭಿಸುತ್ತಾರೆ. ಇವರನ್ನು ಕಂಡರೆ ಆಗದ ಕೆಲವರು ಇಲ್ಲ ಸಲ್ಲದ ಅಪವಾದಗಳನ್ನು ಸೃಷ್ಟಿಸುತ್ತಾರೆ. ಹುಚ್ಚನೆಂದೂ ಹೆಂಡ, ಗಾಂಜಾ, ಉಪಯೋಗಿಸು ತ್ತಾನೆಂದೂ ಜಾತಿ ಭ್ರಷ್ಟನೆಂದೂ ಕರೆಯುತ್ತಾರೆ. ಇದ್ಯಾವುದಕ್ಕೂ ಮನಸ್ಸುಗೊಡದ ಅವಧೂತರು ಭವ ಬಾಧೆಗೆಟ್ಟು, ದೇಹದ ಮೋಹ ಬಿಟ್ಟು ಆತ್ಮದ ಮೋಹದಲ್ಲಿರುತ್ತಿದ್ದ ಇವರು ವಿರುಪಾವಧೂತರೆಂದೇ ಪ್ರಸಿದ್ಧಿ ಹೊಂದುತ್ತಾರೆ.

ಸಿದ್ಧಪರ್ವತಕ್ಕೆಂದು ಒಮ್ಮೆ ಹೋಗಿ ಅಲ್ಲಿನ ಚಿದಾನಂದವಧೂತರ ಗುಡಿಯೊಳಗೆ ಕುಳಿತಿರಲು, ಅಲ್ಲಿ ಕೆಲ ಸಾಧುಗಳು ಗಾಂಜಾದ ನಿಶಾದೊಳಗಿರುತ್ತಾರೆ. ಅವರನ್ನು ಕುರಿತು ಗೌಡರು "ಇದು ಸಿದ್ಧಪರ್ವತ, ಅದರಾಗ ಶಿವಶಕ್ತಿ ಸ್ವರೂಪಿಣಿ ಅಂಬಾ ಇದ್ದಾಳೆ. ಶುದ್ಧವಾದ ಸಿದ್ಧ ಇಲ್ಲಿ ಪ್ರಸಿದ್ಧಿಯಾಗುತ್ತಾನೆ. ಚಿದಾನಂದ ವಧೂತರಿಗೆ ತನ್ನ ನಿಜರೂಪ ಕೊಟ್ಟಾಳ, ಆದ್ರೆ ನಿಮ್ಮ ಹಾದಿ ಯಾಕ ಹೀಗಾತು" ಎಂದು ಪ್ರಶ್ನಿಸಿ ಅವರ ಮನಸ್ಸನ್ನು ಪರಿವರ್ತಿಸಿರುತ್ತಾರೆ. ಹೇರೂರು ಮತ್ತು ಸುತ್ತ-ಮುತ್ತಲಿನ ಕೆಲವರಂತೂ ಈತ ಮಹಾತ್ಮನೆಂದು ಗೌರವಿಸುತ್ತಿದ್ದರೆ, ಕೆಲವರು ಕುಲಗೇಡಿ, ಗಾಂಜಿಬುರುಕ, ಮನೆ-ಮಠ ಮಡದಿ ಬಿಟ್ಟವನೆಂದು ಮಾತಾಡಿಕೊಳ್ಳು ತ್ತಿರುತ್ತಾರೆ.

ವಿರಕ್ತನಾಗಿ ಊರೂರು ಅಲೆಯುತ್ತಾ, ಮಲಿನ ದೇಹಹೊಂದಿ ಯಾರಾದರು ಬಟ್ಟೆ ಕೊಟ್ಟರೆ ಅದನ್ನು ಎರಡು ಭಾಗ ಮಾಡಿ, ಒಂದನ್ನು ಹೊದೆದು, ಮತ್ತೊಂದನ್ನು ಉಟ್ಟು, ಹೋದಲೆಲ್ಲಾ ತನ್ನ ಮಹಿಮಾ ಶಕ್ತಿಯಿಂದ ಪವಾಡಗಳನ್ನು ನಡೆಸುತ್ತಾ, ಭಜನೆ ಮಾಡುತ್ತಾ ತಿರುಗುತ್ತಿದ್ದರು. ಹೀಗೆ ರಾಯಚೂರು, ಗಂಗಾವತಿ, ಕನಕಗಿರಿ, ಬಳಗಾನೂರು, ಹುಲಿಹೈದರ ಮುಂತಾದ ಸ್ಥಳಗಳಲ್ಲಿ ಸುತ್ತಾಡಿ, ಅಲ್ಲೆಲ್ಲ ತನ್ನ ಮಹಿಮೆ ಮೆರೆದು ಕಂಪ್ಲಿಗೆ ಬರುತ್ತಾರೆ.

ಕಂಪ್ಲಿಯಲ್ಲಿ ತೋರಿದ ಮಹಿಮೆ ಮತ್ತು ಐಕ್ಯರಾಗಿದ್ದು

ಕಂಪ್ಲಿ ಒಂದು ವ್ಯಾಪಾರ ಕೇಂದ್ರ. ಇಲ್ಲಿ ಶಿವಶರಣಪ್ಪ ಎಂಬ ತೆಂಗಿನಕಾಯಿ ವ್ಯಾಪಾರಿಯು ಗುರು-ಲಿಂಗ-ಜಂಗಮ-ಸಾಧು-ಸಂತರನ್ನು ಗೌರವದಿಂದ ಕಾಣುತ್ತಿದ್ದನು. ಸ್ನೇಹ, ಸಹಕಾರ, ಕರುಣೆ ಸ್ವಭಾವದ ಈತನ ಅಂಗಡಿಗೆ ಆಗಾಗ್ಗೆ ವಿರುಪಾವಧೂತರು ಬರುತ್ತಿದ್ದರು. ಹುಚ್ಚನಂತೆ, ಮೈಮೇಲೆ ಬಟ್ಟೆಯಿಲ್ಲದ ಇವರನ್ನು ಕಂಡ ಶಿವಶರಣಪ್ಪನು ಅಂಗಿ, ಧೋತ್ರ ನೀಡಿದರೆ ಕೊಟ್ಟ ಬಟ್ಟೆಯನ್ನು ಇವರು ಯಾರಿಗೋ ದಾನ ಮಾಡಿ ಬರುತ್ತಿದ್ದರು. ಒಮ್ಮೆ ನಾನೂ ಸಾಹುಕಾರನಾಗುತ್ತೇನೆ, ನಿನ್ನ ಧೋತ್ರ, ಅಂಗಿ, ರುಮಾಲು,

ಶಲ್ಯ, ಉಂಗುರ, ಸರ, ಕಿವಿಯೋಲೆ, ನೀಡೆಂದು ಶಿವಶರಣಪ್ಪನಿಂದ ಪಡೆದು ಅವುಗಳನ್ನು ಯಾರ್‍ಯಾರಿಗೋ ದಾನಮಾಡಿ ಬಂದಿರುತ್ತಾರೆ. ಶಿವಶರಣಪ್ಪನ ಮನೆಯವರೆಲ್ಲರಿಂದ ನಿಂದನೆಯ ಮಾತುಗಳನ್ನು ಕೇಳಿ, ಕೊನೆಗೆ ಮನೆಯಲ್ಲಿದ್ದ ಹಳೇ ಪೆಟ್ಟಿಗೆಯಲ್ಲಿ ಅವರು ಕೊಟ್ಟಿದ್ದ ವಸ್ತು-ಒಡವೆಗಳನ್ನು ತೋರಿಸಿ ತನ್ನ ಮಹಿಮೆಯನ್ನು ತೋರಿದ್ದಾರೆ.

ಸೀತಾಫಲ ಹಣ್ಣು ಮಾರುತ್ತಿದ್ದ ಮುದುಕಿಗೆ ತಾನು ತಿಂದ ಹಣ್ಣಿನ ಬೀಜಗಳನ್ನು ಕೊಟ್ಟು ಬೆಳ್ಳಿನಾಣ್ಯಗಳನ್ನಾಗಿ ಮಾಡಿ, ತಮ್ಮ ಸಾಧನೆಯ ಶಕ್ತಿಯನ್ನು ತೋರಿದ್ದಾರೆ. ಇಂಥ ಕೆಲವಾರು ಮಹಿಮೆಗಳನ್ನು ಕಂಡ ಕಂಪ್ಲಿ ಜನತೆ ಇವರಿಗೆ ಗೌಡರೆಂದೂ ಅವಧೂತರೆಂದೂ ಗೌರವ-ಮರ್ಯಾದೆಗಳನ್ನು ನೀಡುತ್ತಾ, ಭಯ ಭಕ್ತಿಯಿಂದ ಕಾಣಲಾರಂಭಿಸುತ್ತಾರೆ.

> ಅರುವೆ ಕಾರಣವಯ್ಯ ತಿಳಿಯಲಿಕೆ
> ಅರುವೆ ಗುರುದಾಗಿಹುದು ಎಲ್ಲಕೆ
> ಅರುವೆ ಹರನನು ತೋರಿಕೊಡುವದು ಶರಣ ನೀ ತಿಳಿಯಾ ||

ಎಂದು ತತ್ತ್ವಪದವ ಹಾಡುತ್ತಾ ಊರಲ್ಲಿ ಅಲೆದಾಡುತ್ತಿರುತ್ತಾರೆ.

ಬ್ರಾಹ್ಮಣ ಶಾಸ್ತ್ರಿ ಮನೆತನದ ವೆಂಕೋಬಯ್ಯನವರು ಬೆಲ್ಲದ ವ್ಯಾಪಾರಿಗಳು. ವ್ಯಾಪಾರದಿಂದ ನಷ್ಟಕ್ಕೊಳಗಾಗಿ ಮಾನ ಮರ್ಯಾದೆಗೆ ಅಂಜಿ, ಮಧ್ಯರಾತ್ರಿ ತುಂಗಭದ್ರಾ ನದಿಗೆ ಹಾರಿ ಪ್ರಾಣಕಳೆದುಕೊಳ್ಳಲು ಹೋದಾಗ, ಅದೆಲ್ಲಿದ್ದರೋ ವಿರುಪನಗೌಡರು, ಇದ್ದಕ್ಕಿದ್ದಂತೆ ಪ್ರತ್ಯಕ್ಷರಾಗಿ "ಸರಿ ಹಿಂದಕ್ಕೆ, ಮರಣ ಇನ್ನಿಲ್ಲ, ದುರ್ಮರಣ ಬೇಡ. ಅದು ಬಹುಪಾಪ, ನಿಲ್ಲು ನಿಲ್ಲು" ಎನ್ನುತ್ತಾರೆ. ಸಾಯಲು ಬಂದ ಶಾಸ್ತ್ರಿಗಳ ಮನಃ ಪರಿವರ್ತನೆಯಾಗಿ, ತನ್ನೆಲ್ಲಾ ಕಷ್ಟಗಳನ್ನು ಗೌಡರ ಮುಂದೆ ಹೇಳಿಕೊಳ್ಳುತ್ತಾರೆ. ಆ ಸಮಯದಲ್ಲಿ ಗೌಡರು ಹುತ್ತದೊಳಗಿನ ಹಾವೊಂದನ್ನು ತೆಗೆದು ಅವರ ಉಡಿಯಲ್ಲಿ ಹಾಕಿ ಮನೆಯಲ್ಲಿ ನೋಡು ಎಂದಿದ್ದಾರೆ. ಅದರಂತೆ ಶಾಸ್ತ್ರಿಗಳು ಮನೆಗೆ ಬಂದು ನೋಡಿದಾಗ ಬಂಗಾರದ ನಾಣ್ಯಗಳಾಗಿದ್ದವೆಂದು ತಿಳಿಯುತ್ತದೆ. ಹೀಗೆ ಸಜ್ಜನರ ಕಷ್ಟಗಳನ್ನು ಪರಿಹರಿಸಿ ಅವರ ಆರಾಧ್ಯ ದೈವವಾಗಿದ್ದಾರೆ.

ಒಮ್ಮೆ ಶಾಸ್ತ್ರಿಗಳ ಸಂಬಂಧಿಕರ ಮನೆಯಲ್ಲಿ ಭೋಜನಕೂಟ ಏರ್ಪಟ್ಟಿರುತ್ತದೆ. ಬೇರೆ ಬೇರೆ ಶಾಸ್ತ್ರಗಳ ಪಂಡಿತರು ಸೇರಿದ್ದ ಈ ಕೂಟದಲ್ಲಿ ಕೊಳಕುಬಟ್ಟೆಯ, ಗಂಟುಗಂಟಾದ ಕೂದಲಿನ ಎಂದೂ ಸ್ನಾನವನ್ನೇ ಮಾಡದ ವಿರುಪಾವಧೂತರನ್ನು ಕಂಡು, ಬಂದಿದ್ದ ಪಂಡಿತರುಗಳು, ಗಾಂಜಾಸೇದುವ ಸಾಧುಗಳ ಜತೆಗಿರುವ, ಕೆಳ ಜಾತಿಯ ಮನೆಗಳಲ್ಲಿ ಊಟಮಾಡುವ ಜಾತಿಭ್ರಷ್ಟರನ್ನು ತಮ್ಮ ಜೊತೆ ಭೋಜನಕ್ಕೆ ಕೂರಿಸಬಾರದೆಂದು ತಕರಾರು ಪ್ರಾರಂಭಿಸುತ್ತಾರೆ. ಇದನ್ನೆಲ್ಲಾ ಕಂಡ ಗೌಡರು ವಿದ್ಯಾಬುದ್ಧಿ ಕಲಿತ ನೀವುಗಳೇ ಈ ರೀತಿ ಮಾತನಾಡುವುದೇ ಎಂದು ಅವರ ಗರ್ವ, ಮಡಿವಂತಿಕೆಯನ್ನು ಅರಿತು ತನಗೆ ನೀಡಿದ್ದ ಅನ್ನವನ್ನು ಕಲಿಸಿ, ಮುಸುರೆ ಮಾಡಿ ಚೆಲ್ಲುತ್ತಾರೆ. ನೊಣಗಳೆಲ್ಲಾ ಮುತ್ತಿ ಅಸಹ್ಯವಾಸನೆ ಬರುತ್ತದೆ. ಈಗ ನೀವುಗಳೆಲ್ಲಾ ಊಟ ಮಾಡಿರೆಂದು ಹೇಳಿ ನಗಲು ಬಂದ ಆಚಾರ್ಯರು ಉಣಲು, ತಮ್ಮ ಎಲೆಗಳಿಗೆ ಕೈ ಹಾಕಲು,

ಅನ್ನವು ಹುಳುಗಳ ರೀತಿಯಲ್ಲಿ ಕಂಡಿತಂತೆ, ಅವಮಾನಕೊಳ್ಳಗಾದ ಆಚಾರ್ಯರು ಊಟ ಮಾಡದೆ ಹಾಗೆ ಎದ್ದು ಹೋಗುತ್ತಾರೆ. ಮಾಡಿರುವ ಅಷ್ಟೊಂದು ಅನ್ನ ವ್ಯರ್ಥವಾಯಿತೆಂದು ಚಿಂತಿಸುತ್ತಿರುವಾಗ, ದಾರಿಯಲ್ಲಿ ಹೋಗುತ್ತಿದ್ದ ಮದುವೆ ಜನವನ್ನು ಕರೆಸಿ ಗೌಡರು ಊಟ ಮಾಡಿಸಿರುವುದು ತಿಳಿಯುತ್ತದೆ.

ಕಂಪ್ಲಿಕೋಟೆಯಲ್ಲಿ ಬೋರೆಗಂಗಮ್ಮ ಎನ್ನುವ ಶುದ್ಧಮನಸ್ಸಿನ ಭಕ್ತಳ ಮನೆಗೆ ಗೌಡರು ಆಗಾಗ್ಗೆ ಬರುತ್ತಿದ್ದು, ಅಲ್ಲಿ ಭಜನೆ, ತತ್ತ್ವಪದಗಳನ್ನು ಹಾಡಿ ಅವುಗಳ ಅರ್ಥಬಿಡಿಸಿ ಹೇಳುತ್ತಿದ್ದರು.

ಆದಿ ಪೂರ್ವದಲಿಂದಲಿ ಅವನು ಮೇಧಿನಿಗಿಳಿದು ಬಂದಾನೊ ‖ ಅ ‖
ನಾದಿ ಮೂರುತಿ ಕಳುಹಿಸಿ ಕೊಟ್ಟನು ಸುನಾಯ್ಸಿನಿಂದ ತಿಳಕೊಳ್ಳಿರೋ ‖ ಪ ‖

ಪೃಥ್ವಿ ಅಪ್ಪು ತೇಜುವಾಯು ಆಕಾಶ ಪಂಚ ಘಟ ಧರಿಸಿಕೊಂಡಾನೊ ।
ಪಂಚೇಂದ್ರಿಯಗಳು ಹಂಚಿ ಹಾಕಿದವು ಹಿಂಚು ಮುಂಚು ನೀವು ತಿಳಕೊಳ್ಳಿರೊ ‖ ೧ ‖

ಪೂರ್ವ ದಿಕ್ಕಿನಿಂದ ಮಾರುದ್ದ ಮ್ಯಾಲೇರಿ ವೀರಭದ್ರನಾಗಿ ಬಂದಾನೊ
ಅಪಾರ ಮತ್ತು ಯಾಪಾರ ಮಾಡೋದು ಹ್ಯಾಗೆಂದು ನೀವು ತಿಳಕೊಳ್ಳಿರೋ ‖ ೨ ‖

ನಾ ಗುರು ನೀ ಗುರು ಎಂಬುವ ಬಾಯಿಗಳ ಹಲ್ಲು ಕಳೆದು ಅಂವಾ ನಿಂತಾನೊ
ಭೋಗಾದಿ ಗುರು ತಾ ಬ್ಯಾರೆ ಇರುವನು ಬೇಗಾದಿ ನೀವು ತಿಳಕೊಳ್ಳಿರೊ ‖ ೩ ‖

ತೊಡಕು ಪಿಡಿಕುಗಳೆಲ್ಲವ ಬಿಡಿಸಿ ಧಡಿಕೆಲಿ ಅವನು ಬಂದಾನೊ ।
ಕಡೆ ದೇಹವಿದು ಪಡೆದು ಬಂದಾದೆ ಬಢಾಗೆ ನೀವು ತಿಳಕೊಳ್ಳಿರೊ ‖ ೪ ‖

ಧರೆಯೊಳು ಹರನಾಗಿ ವರವ ಕೊಡುತಲಿ ಸಿದ್ಧರೂಪನಾಗಿ ನಿಂತಾನೊ
ಮರಣವ ಮೀರುವ ಜನನದಿ ಸಾರುವ ವಿದ್ಯೆಯ ನೀವು ಪಡಕೊಳ್ಳಿರೊ ‖ ೫ ‖

ಗಂಗಮ್ಮ ಎಂಬುವಳ ಮನೆಗೆ ಗೌಡರು ಬಂದ ಸುದ್ದಿ ತಿಳಿದು ಹಲವಾರು ಮಹಿಳೆಯರು ಸೇರಿ, ಗೌಡರೊಂದಿಗೆ ಭಜನೆ ಮಾಡುತ್ತಾ, ಅವರು ಹೇಳಿಕೊಡುವ ಹಾಡುಗಳನ್ನು ಹಾಡುತ್ತಿದ್ದರು.

ದೇವ ದೇವರ ದೇವರ ಮಗನು । ದೇವಲೋಕದ ಬುಡುಬುಡುಕ್ಯಾ ನಾನು ।
ದೇಹ ಮರ್ಮವುಯಲ್ಲವು ಬಲ್ಲೆ । ಭಾವಶುದ್ಧಳಾಗಿ ಕೇಳವ್ವ ತಂಗಿ
ನಿನಗೇಳುವೆನವ್ವ ಉಪಾಯವೊಂದು ನಿನಗೇಳುವೆನವ್ವ ‖
ಕಾಯಕದೊಳಗೊಂದು ದೇವರುಂಟೆ
ಪೊಡುವಣ ದಿಕ್ಕಿನ ಬುಡು ಬುಡುಕ್ಯಾ ನಾನು ‖

ಹೀಗೆ ಬುಡು ಬುಡುಕ್ಯಾನ ಪದವನ್ನು ನಿರರ್ಗಳವಾಗಿ, ಸರಳವಾಗಿ, ತಿಳಿಹೇಳುತ್ತಿದ್ದರು. ಮಾನವನಿಗೆ ಅಗತ್ಯವಾದ ನಿಜಶಾಂತಿಯ ಮಹತ್ವವನ್ನು ಅದರ ಪದ್ಧತಿಯನ್ನು ತಿಳಿಸುತ್ತಾ

ಅರ್ದ್ಹಾಳಿಗೆ ಬರುವ ಹೇರೂರಿನ ದೈವವೆ | ಜೋರುತನ
ನಿಮದೇನಾಯ್ತೋ | ಆರಾರು ಮ್ಯಾಲ್ಯಾರು | ಧೀರಸಿದ್ಧನ
ಕೂಸ ಗುರ್ತು ನಿಮಗೆ ತಿಳಿಯದೋಯ್ತು ||

ಗುರುವಿನ ಮಹತ್ವವನ್ನು, ಅವರ ಮಹಿಮೆಯನ್ನು ಸಾರುತ್ತಾ ಜೀವನದ ನಿಜಶಾಂತಿಯನ್ನು ಬೋಧಿಸುತ್ತಿದ್ದ ರೀತಿಯಿಂದಾಗಿ ಸುತ್ತು ಮುತ್ತಲಿನ ಊರಿನ ಜನರ ಗೌರವಕ್ಕೆ ಪಾತ್ರರಾಗುತ್ತಾರೆ.

ಕಾಲಾನಂತರ ತಾನು ಕಾಯ ಬಿಡುವ ವಿಷಯವನ್ನು ಗೌಡರು ಕಂಪ್ಲಿಯ ಭಕ್ತ ವೆಂಕಯ್ಯಶಾಸ್ತ್ರಿಗಳಿಗೆ ತಿಳಿಸುತ್ತಾ ಕಾಯದ ಸಮಾಧಿ ಹೇರೂರಿನಲ್ಲಿ ಇಲ್ಲ, ಅಲ್ಲಿ ಸಿರಿ ಇದ್ದರೂ ಅದಕ್ಕೆ ಅರಿವಿಲ್ಲ. ನಂತರ ಹುಲಿಹೈದರನ ಚಂದ್ರಬಂಡಿ ಹೊಲದಲ್ಲಿ ಜಾಗ ಕೊಡುವುದಾಗಿ ದೊರೆಗಳು ಹೇಳಿದರೂ ನನಗಿಷ್ಟವಿಲ್ಲ. ಈಗ ನನಗೆ ಜೋಗಿ ಕಾಲುವೆಯ ಬಳಿ ನನ್ನ ಯೋಗ ಸಮಾಧಿ ಆಗಬೇಕಿದೆ ಎನ್ನುತ್ತಾ ಆ ಕೆಲಸವನ್ನು ನೀನೆ ಮಾಡಿಸಬೇಕೆಂದು ತಿಳಿಸುತ್ತಾರೆ.

ಗೌಡರ ಅಂತ್ಯಕಾಲ ಕೂಡಿಬಂದು, ಕಾಲವಾಗುವ ಮೂರುದಿನ ಮೊದಲೆ ಕಂಪ್ಲಿ ಬೀದಿಗಳಲ್ಲಿ "ಡಬ್ ಅಂದ್ರೆ ಬಯಲು, ಡಬ್ ಅಂದ್ರೆ ಬಯಲು", ಎಂದು ಹೇಳುತ್ತಾ ತಿರುಗಾಡುತ್ತಿದ್ದರು. ಇದ್ಯಾವುದೂ ಅರ್ಥವಾಗದ ಜನ, ಮಹಾತ್ಮರಾಟ ಅರಿತವರಾರು ಎಂದು ಸುಮ್ಮನಾಗುತ್ತಾರೆ. ಹೀಗೆ ಹೇಳಿದ ಮೂರನೆಯ ದಿನ ಬೆಳಿಗ್ಗೆ ಜೋಗಿ ಕಾಲುವೆ ದಂಡೆಯ ಗದ್ದೆಯೊಂದರ ಕೊಪ್ಪರಿಗೆ ಒಳಗೆ ಕುಳಿತಾಗ 'ಡಬ್' ಎಂಬ ಶಬ್ದವಾಯಿತು. ಆಶ್ಚರ್ಯಪಟ್ಟ ಜನವೆಲ್ಲಾ ಇದೇನೆಂದು ನೋಡಲು, ವೆಂಕೋಬಯ್ಯಶಾಸ್ತ್ರಿಗಳ ಸಮೇತ ಬರುತ್ತಾರೆ. ಅಲ್ಲಿ ಗೌಡರು ಸಹಜ ಶಿವಯೋಗದ ಸಮಾಧಿಸ್ಥಿತಿಯಲ್ಲಿದ್ದು, ಐಕ್ಯರಾಗಿರುತ್ತಾರೆ. ಗೌಡರು ಪ್ರಾಣಬಿಟ್ಟ ವಿಷಯ ಸುತ್ತ ಮುತ್ತಲ ಹಳ್ಳಿಗಳಿಗೆ ಹರಡಿ, ಭಕ್ತರು ತಂಡೋಪ ತಂಡವಾಗಿ ಆಗಮಿಸಿ ಭಜನೆ, ಉತ್ಸವ ಮಾಡುತ್ತಾ ಸಮಾಧಿ ಮಾಡುತ್ತಾರೆ. ಮುಂದೆ ವೆಂಕೋಬಣ್ಣನವರು ಆ ಸಮಾಧಿಗೆ ಗುಡಿ ಕಟ್ಟಿಸಿದ್ದು ಪುಣ್ಯತಿಥಿಯ ನೆನಪಿಗಾಗಿ ಪ್ರತಿ ವರ್ಷ ಜಾತ್ರೆ, ಉತ್ಸವಗಳು ಇಲ್ಲಿ ನಡೆಯುತ್ತಾ ಬರುತ್ತಿವೆ.

ಮಾನವನೇ ದೇವನಾಗುತ್ತಾನೆ ಎನ್ನುವುದಕ್ಕೆ ವಿರುಪಾವಧೂತರೆ ಸಾಕ್ಷಿಯಾಗಿದ್ದು, ತಮ್ಮ ಹಣ, ಅಂತಸ್ತು, ಅಧಿಕಾರ, ಜಾತಿ, ಸಂಸಾರ, ಇವೆಲ್ಲವುಗಳನ್ನು ಕಿತ್ತೊಗೆದು, ನಿತ್ಯ ಮುಕ್ತರಾಗಿ, ನಿರ್ಲಿಪ್ತ ಸ್ಥಿತಿಯ ಮಾರ್ಗ ಹಿಡಿದವರಾಗಿದ್ದಾರೆ. ಜೊತೆಗೆ ತತ್ತ್ವಪದಗಳನ್ನು ರಚಿಸಿ, ತಾವೇ ಹಾಡುತ್ತಿದ್ದರೆಂದು ಭಕ್ತರು ತಿಳಿಸುತ್ತಾರೆ. ವಿರುಪಾವಧೂತರ ಹಾಡುಗಳಲ್ಲಿ ಆಧ್ಯಾತ್ಮ, ಲಿಂಗಾಂಗಸಾಮರಸ್ಯ, ಸತ್ಸಂಗ, ಗುರುವಿನ ಅರಿವಿಗೆ ದಾರಿ, ಸುನೀತಿ, ಸುಧರ್ಮ, ಸುವಿಚಾರ, ಶಿವಧ್ಯಾನ, ಪರೋಪಕಾರ, ಬಡವರನ್ನ, ಅನಾಥರನ್ನ, ರೋಗಿಗಳನ್ನ ದೇವರೆಂದು ಉಪಚರಿಸಬೇಕೆಂದು ಕರೆಕೊಡುತ್ತಾರೆ. ಇಂಥ ಮಾನವ ಕಲ್ಯಾಣದ ವಿಷಯವನ್ನು ಹೇಳುವುದರ ಜೊತೆಗೆ, ಸಮಾಜದಲ್ಲಿ ಬೇರುಬಿಟ್ಟಿದ್ದ ಜಾತಿ ಪದ್ಧತಿ, ಮೂಢನಂಬಿಕೆಗಳನ್ನು ಅಲ್ಲಗಳೆದಿದ್ದಾರೆ. ಸಿದ್ದ, ಸಿದ್ಧೇಶ, ರುದ್ರೇಶ ಮುಂತಾದ ಅಂಕಿತದಲ್ಲಿ ಇವರು ರಚಿಸಿರುವ ತತ್ತ್ವಪದಗಳನ್ನು ಕಾಣಬಹುದು.

೧. ನಿರ್ಗುಣ ಪೂಜೆಯ ಮಾಡಪ್ಪ |
ಸ್ವರ್ಗದ ಹಾದಿಯ ಬೇಡಪ್ಪ | ಅ

ನರ್ಗ ವಸ್ತುವಿನ ನೀ ಕೂಡಪ್ಪ । ಸ
ನ್ಮಾರ್ಗ ಹೇಳುವೆ ಕೇಳಪ್ಪ ॥

ತನುಮನಧನವನು ಕೊಡಬೇಕು । ಒಳ್ಳೆ
ಘನ ಗುರು ಸೇವೆಯಲಿರಬೇಕು ।
ಬಿನಗು ಸಂಶಯಗಳನಳಿಬೇಕು ।
ಜನನ ಮರಣವನು ನೀ ಕಳಿಬೇಕು ॥

ಹತ್ತು ಹಿಡಿದು ಮತ್ತನೊಂದು ಅಲ್ಲಿ ।
ಸುತ್ತಿಳಿಯುತಲಿದೆ ಶಿವಬಂಧು ।
ಚಿತ್ತದೊಳಗೆ ತಿಳಿವದು ಸಂದು । ನೀ
ಸತ್ತು ಹುಟ್ಟಿದ್ಯಾತಕೆ ಬಂದು ॥

ಹರಗುರುವ ನೀವು ತಿಳಿದು ।
ಮರೆವನ್ನು ಎಲ್ಲ ತೊರೆದು ।
ಇರಬೇಕೊ ಒಳಗೆ ಬಂಧು ।
ಗುರುವನ್ನು ತಿಳಿದ ಬಂಧು ॥

೨. ಮನವು ಬುದ್ಧಿವಿಕಾರ ತನು
ವಿನೋಳ್ನಾವರಿಸಿ ವಿಷಯಿರೆ
ವನಿತೆಯರ ಮೋಹಿಸಿ, ಕೆಡುವವು ಅನವು ಅರಿಯದೆಲೆ ॥
ಚಿನುಮಯಾತ್ಮನೆ ಚಿತ್ಪ್ರಕಾಶನೆ
ಘನಕೆ ಘನತರವಾದ ಮರಮನೆ
ವಿನಯದಿಂ ಸನ್ಮತವ ಹೇಳೈ ಭಳಿರೇರುದ್ರೇಶ ॥[೨]

೪. ೮. ಕಾಳಘಟ್ಟದ ರುದ್ರಾವಧೂತರು

ಹೊಸಪೇಟೆ ತಾಲೂಕಿನ ನಾಗೇನಹಳ್ಳಿಯಿಂದ ಸುಮಾರು ನಾಲ್ಕು ಕಿಲೋಮೀಟರ್ ದೂರದ ಹಂಪಿ ಪರಿಸರದಲ್ಲಿ ಕಾಳಘಟ್ಟ ಎಂಬ ಪ್ರದೇಶವಿದೆ. ಅಲ್ಲಿ ದತ್ತಾತ್ರೇಯ ಪೀಠ ಶ್ರೀ ರುದ್ರಾವಧೂತರ ಆಶ್ರಮವಿರುವುದನ್ನು ಕಾಣಬಹುದು.

ವಿಜಯನಗರ ಕಾಲದ ಸೈನಿಕರು ಕಾಳಗಕ್ಕಾಗಿ ತರಬೇತಿ ಪಡೆಯುತ್ತಿದ್ದ ಸ್ಥಳ ಇದಾಗಿದ್ದುದರಿಂದ ಇದಕ್ಕೆ ಕಾಳಘಟ್ಟ ಎಂಬ ಹೆಸರು ಬಂದಿರುವುದಾಗಿ ಇಲ್ಲಿಯ ಜನತೆ ಹೇಳುತ್ತಾರೆ. ಈಗ ಇಲ್ಲಿ ರುದ್ರಾವಧೂತರ ಆಶ್ರಮವನ್ನು ಬಿಟ್ಟರೆ ಬೇರೇನೂ ಇಲ್ಲ. ಯುಗಾದಿ, ಮಹಾನವಮಿ, ದೀಪಾವಳಿ, ಹಂಪಿ ಹುಣ್ಣಿಮೆ ಇಂಥ

ವಿಶೇಷ ದಿನಗಳಲ್ಲಿ ಅನೇಕ ಕಡೆಯಿಂದ ಶಿಷ್ಯಮಕ್ಕಳು ಇಲ್ಲಿಗೆ ಬರುತ್ತಾರೆ. ಬಂದವರು ಒಂದು ಅಥವ ಎರಡು ದಿನಗಳು ಇಲ್ಲಿದ್ದು ಹೋಗುತ್ತಾರೆ. ರುದ್ರಾವಧೂತರು ವಾಸವಾಗಿದ್ದಾಗ, ಊರ ಜನರ ಕಿರಿಕಿರಿಯಿಂದ ಬೇಸತ್ತು, ಅವರೇ ಊರಿನ ನಾಶಕ್ಕೆ ಶಾಪವನ್ನು ಕೊಟ್ಟಿದ್ದರಂತೆ. ಅಂದಿನಿಂದ ಸಾಮಾನ್ಯ ಜನರಾರು ಇಲ್ಲಿ ವಾಸವಾಗುತ್ತಿಲ್ಲವೆಂದು, ಅವರ ಶಿಷ್ಯ ಪರಪರೆಯನ್ನು ಮುಂದುವರೆಸಿರುವ ಡಾ. ರುದ್ರಯ್ಯನವರು ತಿಳಿಸುತ್ತಾರೆ.

ಅವಧೂತ ಪರಂಪರೆಯಲ್ಲಿ ಪ್ರಮುಖರಾಗಿರುವ, ಜ್ಞಾನಸಿಂಧು, ದೇವಿ ಮಾಹಾತ್ಮೆ, ಕಾಮ ವಿಡಂಬನೆ, ಬಗಳಾಂಬ ಸ್ತೋತ್ರ, ಚಿದಾನಂದ ವಚನ, ಪಂಚೀಕರಣ, ತತ್ತ್ವಚಿಂತಾಮಣಿ, ನವಚಕ್ರಕುಲರೇಖಾ ಲಕ್ಷಣ ಮೊದಲಾದ ಕೃತಿಗಳನ್ನು ಬರೆದಿರುವ ಚಿದಾನಂದವಧೂತರ ಶಿಷ್ಯ ಪರಂಪರೆಯಲ್ಲಿ ರುದ್ರಾವನಂದಾವಧೂತರು ಪ್ರಮುಖರು. ಚಿದಾನಂದವಧೂತರ ಶಿಷ್ಯರಾಗಿ, ಸಿದ್ಧಪುರುಷನೆಂದು ಹೆಸರು ಮಾಡಿದ, ಹಠಯೋಗಿ ತಿಮ್ಮಾವಧೂತರು ಈ ಆಶ್ರಮದ ಸ್ಥಾಪಕರು. ತಿಮ್ಮಾವಧೂತರ ಶಿಷ್ಯರೇ ರುದ್ರಾವಧೂತರು. ಇವರು ಹಂಪಿಯ ಹೇಮಕೂಟದ ಶಿವರಾಮವಧೂತ ಸಮಕಾಲೀನರೆಂದು ತಿಳಿಯುತ್ತದೆ.

ರುದ್ರಾವಧೂತರ ಜನ್ಮಸ್ಥಳ ಚಿತ್ರದುರ್ಗ ಜಿಲ್ಲೆಯ ದೊಡ್ಡಸಿದ್ದವ್ವನ ಹಳ್ಳಿ. ಲೌಕಿಕ ಜೀವನದ ಬಗ್ಗೆ ಜಿಗುಪ್ಸೆ ಹೊಂದಿ ವೈರಾಗ್ಯ ತಾಳಿರುತ್ತಾರೆ. ವಿರಾಗಿಯಾಗಿ ಊರೂರು ಅಲೆಯುತ್ತಾ ಹಂಪಿಗೆ ಬಂದು, ಕಾಳಘಟ್ಟದ ತಿಮ್ಮಾವಧೂತರ ಶಿಷ್ಯರಾಗಿ ಗುರುಸೇವೆಯಲ್ಲಿ ನಿರತರಾಗುತ್ತಾರೆ. ಗುರುವಿನಿಂದ ಗುರುಕೃಪೆ ಮತ್ತು ಗುರೂಪದೇಶವನ್ನು ಪಡೆದು, ಯೋಗ ಮಾರ್ಗದಲ್ಲಿ ಹಠಯೋಗ ಮತ್ತು ರಾಜಯೋಗವನ್ನು ಸಾಧಿಸುತ್ತಾರೆ. ಈಗಿರುವ ಮಠದ ಎಡಭಾಗದ ಸ್ವಲ್ಪದೂರದ ಹೊಳೆ ದಡದಲ್ಲಿ ಒಂದು ಸಣ್ಣ ಗವಿಯಿದೆ. ಸ್ವಾಭಾವಿಕವಾಗಿ ನಿರ್ಮಾಣವಾಗಿರುವ ಈ ಗವಿಯಲ್ಲಿಯೇ ರುದ್ರಾವಧೂತರು ಯೋಗಭ್ಯಾಸವನ್ನು ಮಾಡು ತ್ತಿದ್ದರು. ಯೋಗ ಮಾರ್ಗಾವಲಂಬಿಗಳಾಗಿದ್ದ ಇವರು ಆಯುರ್ವೇದ ಪಂಡಿತರೂ ಆಗಿದ್ದರು. ತಮ್ಮನ್ನು ನಂಬಿ ಬಂದಿದ್ದ ನಾನಾ ರೀತಿಯ ರೋಗಿಗಳನ್ನು ಗುಣಪಡಿಸುತ್ತಿದ್ದು ಉಚಿತವಾಗಿ ಔಷದೋಪಚಾರಗಳನ್ನು ಮಾಡಿದ್ದಾರೆ. ಇವರ ವ್ಯಕ್ತಿತ್ವ, ಸಾಧನೆ, ಸಿದ್ಧಿಯನ್ನರಿತ ಎಷ್ಟೋ ಜನರು ಇವರ ಶಿಷ್ಯರಾಗಿದ್ದಾರೆ. ಅವರುಗಳಲ್ಲಿ ಮುಖ್ಯರಾದವರು ರಾಜಯೋಗಿ ತಿಪ್ಪೇಸ್ವಾಮಿಗಳು ಮತ್ತು ಸಿದ್ಧ ಪುರುಷರಾದ ಕೆಂಚಪ್ಪನವರು. ತಿಪ್ಪೇಸ್ವಾಮಿಗಳು ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲೂಕಿನ ಕಳವೀಬಾಗಿಯವರು. ಕೆಂಚಪ್ಪನವರೂ ಸಹ ಚಿತ್ರದುರ್ಗ ಜಿಲ್ಲೆಯ ಕೊಳಾಳು ಗ್ರಾಮದವರು. ಮುಂದೆ ಇವರು ಕೊಳಾಳು ಕೆಂಚಾವಧೂತರೆಂದು ತುಂಬಾ ಪ್ರಸಿದ್ಧಿ ಪಡೆದು ಅಪಾರ ಭಕ್ತ ಜನತೆಯನ್ನು ಪಡೆದಿರುವುದನ್ನು ಕಾಣಬಹುದು.

ರುದ್ರಾವಧೂತರು ತನ್ನ ಅಂತ್ಯದ ಸಮಯದಲ್ಲಿ ತನ್ನೆಲ್ಲಾ ಆಸ್ತಿ ಮತ್ತು ಪರಂಪರೆಯನ್ನು ಮುಂದುವರೆಸುವ ಬಗ್ಗೆ ಶಿಷ್ಯೆಯಾದ ದುರ್ಗಮ್ಮನಿಗೆ ಈ ರೀತಿ ಹೇಳಿದರಂತೆ. "ನನ್ನ ಶಿಷ್ಯ ಮಕ್ಕಳೆಲ್ಲಾ ಬಂದು, ನನ್ನ ಸಮಾಧಿಯ ಮೇಲೆ ಜೋಳವನ್ನು ಚಲ್ಲಬೇಕು. ಯಾರು ಹಾಕಿದ ಜೋಳವು ಹರಳುಗಳಾಗುವವೋ ಅವರೇ ನನ್ನ ಉತ್ತರಾಧಿಕಾರಿಗಳೆಂದು ಹೇಳಿರಲು ಅದರಂತೆ ಅವರ ಅಂತ್ಯದ ಸಮಯದಲ್ಲಿ ಬಂದ ಕೆಂಚಾವಧೂತರು (ಕೊಳಾಳು) ಮತ್ತು ತಿಪ್ಪೇಸ್ವಾಮಿ (ಕಳವೀಭಾಗಿ) ಇಬ್ಬರೂ ಸಮಾಧಿಯ ಮೇಲೆ ಜೋಳ ಹಾಕಿದಾಗ, ಹಾಕಿದ ಜೋಳವೆಲ್ಲಾ ಹರಳಾಗಿವೆ. ಇದರ ಪ್ರತೀಕವಾಗಿ ಅವಧೂತ ಪರಂಪರೆಯನ್ನು ತಿಪ್ಪೇಸ್ವಾಮಿಗಳು

ಕಳವೀಭಾಗಿಯಲ್ಲಿ ಮುಂದುವರೆ ಸಿದರೆ, ಕೆಂಚಾವಧೂತರು ಕೊಳಾಳು ಗ್ರಾಮದಲ್ಲಿ ಮುಂದುವರೆಸಿದ್ದಾರೆ. ತಿಪ್ಪೇಸ್ವಾಮಿಗಳ ಶಿಷ್ಯರು ರಂಗಾ ವಧೂತರು. ಇವರಿಬ್ಬರ ನಿಜ ಸಮಾಧಿಗಳು ಈಗ ಕಳವೀಭಾಗಿಯಲ್ಲಿವೆ. ರಂಗಾವಧೂತರ ಶಿಷ್ಯರೇ ನರಸಿಂಹಾ ವಧೂತರು.

ನರಸಿಂಹಾವಧೂತರು ಸರ್ಕಾರಿ ನೌಕರರಾಗಿದ್ದು, ತಮ್ಮ ಬಿಡುವಿನ ಸಮಯದಲ್ಲಿ ಯೋಗ ಮಾರ್ಗ ಹಿಡಿದು, ಆಧ್ಯಾತ್ಮ ಸಾಧನೆ ಮಾಡಿದವರು. ಲಿಂಗಭೇದ, ಜಾತಿಭೇದವಿಲ್ಲದೆ ನೂರಾರು ಜನ ಶಿಷ್ಯ ಪರಂಪರೆಯನ್ನು ಹೊಂದಿದ್ದ ಇವರು ತಮ್ಮ ಮಠದಲ್ಲಿ ಶಿವಭಜನೆ, ದೇವಿ ಪಾರಾಯಣ ಜ್ಞಾನಸಿಂಧು ಪ್ರವಚನ, ಯೋಗಮಾರ್ಗ, ಮತ್ತು ನಿಜಾನಂದದ ಬಗ್ಗೆ ತನ್ನ ಶಿಷ್ಯರೊಂದಿಗೆ ಚರ್ಚೆ ನಡೆಸುತ್ತಿದ್ದರು. ವಿಶೇಷ ದಿನಗಳಂದು ತಮ್ಮ ಮಠದಲ್ಲಿ ನಡೆಯುವ ದೇವಿಪುರಾಣದ ಪ್ರವಚನ ಕಾರ್ಯಕ್ರಮಕ್ಕೆ ಅವಧೂತರು, ಆರೂಢರು, ಸಾಧುಗಳು, ಯೋಗಿಗಳು, ತಪಸ್ವಿಗಳು, ಋಷಿಗಳು, ಜ್ಞಾನಿಗಳು, ಮತ್ತು ಗುರುವಿನ ಮಕ್ಕಳನ್ನು ಕರೆಸಿಕೊಂಡು, ಪಾರಾಯಣ ಮತ್ತು ಜೀವನ್ಮುಕ್ತಿಯ ಮಾರ್ಗದ ಚರ್ಚೆ ನಡೆಸುತ್ತಿದ್ದರು. ಎಲ್ಲೆಲ್ಲಿಂದಲೋ ಬರುತ್ತಿದ್ದ ಇವರುಗಳಿಗೆ ನಿತ್ಯ ಅನ್ನ ಸಂತರ್ಪಣೆಯನ್ನು ಮಾಡುತ್ತಿದ್ದರು. ಹಾಗೆಯೇ ಸ್ವತಃ ಪಂಡಿತರಾಗಿದ್ದ ನರಸಿಂಹಾವಧೂತರು, ತಮ್ಮನ್ನು ನಂಬಿ ಬರುತ್ತಿದ್ದ, ಎಲ್ಲಾ ತರಹದ ರೋಗಿಗಳಿಗೆ ಉಚಿತವಾಗಿ ಗಿಡಮೂಲಿಕೆ ಔಷಧವನ್ನು ನೀಡುತ್ತಿದ್ದರು. ಹಾವು ಕಡಿದು, ಸಾವು ಬದುಕಿನ ಮಧ್ಯೆ ಹೋರಾಡುತ್ತಿದ್ದ ಎಷ್ಟೋ ಜನರನ್ನು ಗಿಡಮೂಲಿಕೆಯ ಔಷಧ ಕೊಟ್ಟು ಬದುಕಿಸಿದ್ದು ಇವರ ಮಹತ್ವದ ಸಾಧನೆಯಾಗಿದೆ.

ವಚನಶಾಸ್ತ್ರದ ಸಾರವನ್ನು ಅರಿತು, ಶಿವಯೋಗದ ಘನತೆಯನ್ನು ತೋರಿದ ನರಸಿಂಹಾವಧೂತರು ಮಹಾತಪಸ್ವಿಗಳು, ವೈರಾಗ್ಯ ಮೂರ್ತಿಗಳು, ಹಠಯೋಗಿ, ರಾಜಯೋಗಿ, ಕಾರಣಪುರುಷರಾಗಿದ್ದವರು. ತಮ್ಮ ಗುರು ರಂಗಾವಧೂತರ ಆದೇಶದಂತೆ ವೇದಾಂತ ಗ್ರಂಥಗಳನ್ನು ಸರಳವಾಗಿ ಜನಸಾಮಾನ್ಯರಿಗೂ ತಿಳಿಯುವಂತೆ ತತ್ವರಹಸ್ಯವನ್ನು ರಚಿಸಿದ್ದಾರೆ. ಶ್ರೀ ಝುಂಕಣ್ಣನವರ ಬಾಲಲೀಲೆ (ಚಿದಾನಂದವಧೂತರು) ಮತ್ತು ಶ್ರೀ ರಾಜರಾಜೇಶ್ವರಿಯ ಸ್ತುತಿ ಎನ್ನುವ ಎರಡು ಆಧ್ಯಾತ್ಮಿಕ ಕೃತಿಗಳನ್ನು ಸಂಪಾದಿಸಿ ಮಠದಿಂದಲೇ ಪ್ರಕಟಿಸಿದ್ದಾರೆ.

ಸುಮಾರು ೮೫ ವರ್ಷ ಬಾಳಿ ಆಧ್ಯಾತ್ಮಿಕ ಜೀವನ ನಡೆಸಿದ ಇವರು ೨೩-೫-೨೦೦೩ ರಂದು ದೈವಾಧೀನರಾಗಿದ್ದಾರೆ. ರುದ್ರಾವಧೂತರ ಮಠದ ಬಲ ಭಾಗದಲ್ಲಿ ನರಸಿಂಹಾವಧೂತರ ನಿಜ ಸಮಾಧಿಯಿದ್ದು, ಮಠದ ಎಡ ಭಾಗದಲ್ಲಿ ಕೆಂಚಾವಧೂತರ ಮತ್ತು ತಿಪ್ಪೇಸ್ವಾಮಿಗಳ ಜ್ಞಾಪಕ ಸಮಾಧಿಗಳಿವೆ. ಮಠದ ಸುತ್ತ-ಮುತ್ತ ಹಲವಾರು ಶಿಷ್ಯ ಮಕ್ಕಳ ನಿಜ ಮತ್ತು ಜ್ಞಾಪಕ ಸಮಾಧಿಗಳಿವೆ. ಗುಡಿಯ ಬಲಭಾಗದಲ್ಲಿ ಒಂದು ಅನುಭವ ಮಂಟಪವಿದ್ದು, ಎಲ್ಲಾ ಸಮಾಧಿಗಳು ದತ್ತಾತ್ರೇಯ ಪೀಠದ ಶೈಲಿಯಲ್ಲಿವೆ. ಮಠದ ಮೇಲ್ಭಾಗದ ಬೆಟ್ಟದ ಮೇಲೆ ಒಂದು ಸಣ್ಣಮನೆಯ ರೀತಿಯಲ್ಲಿ ಗವಿಯೊಂದಿದೆ. ಅದನ್ನು ತ್ರಿಕೂಟಗಿರಿಯೆಂದು ಕರೆಯಲಾಗುತ್ತಿದೆ. ಬೃಹತ್ ಮೂರು ಬಂಡೆಗಳ ನಡುವೆ ಈ ಗವಿಯಿದ್ದು, ಇಲ್ಲಿ ತ್ರಿನಯನನ ತ್ರಿಕಾಲಪೂಜೆ ನಡೆಯುತ್ತವೆಂದು ಬರೆಯಲಾಗಿದೆ. ಗವಿಯ ಒಳಗಡೆ ರುದ್ರಾವಧೂತ, ಕೆಂಚಾವಧೂತ, ತಿಪ್ಪೇಸ್ವಾಮಿ, ರಂಗಾವಧೂತ, ನರಸಿಂಹಾವಧೂತರ ಜ್ಞಾಪಕ ಸಮಾಧಿಗಳನ್ನು ಒಂದರ ಮೇಲೊಂದು ಕಟ್ಟಲಾಗಿದೆ.

ನರಸಿಂಹಾವಧೂತರು ಅಪಾರ ಶಿಷ್ಯ ಬಳಗವನ್ನು ಹೊಂದಿದ್ದರೆಂಬುದಕ್ಕೆ ಅವರಿಗೆ ಬಂದಿರುವ ಪತ್ರಗಳು ಮಠದಲ್ಲಿವೆ. ಎಲ್ಲಾ ಭಕ್ತರು ವಿಶೇಷ ದಿನಗಳಂದು ಇಲ್ಲಿಗೆ ಆಗಮಿಸಿ, ಶಿವಭಜನೆ, ಆಧ್ಯಾತ್ಮಿಕ ಚಿಂತನೆ ಮುಂತಾದ ಆಚರಣೆಗಳಲ್ಲಿ ಭಾಗವಹಿಸಿ ಹೋಗುತ್ತಿರುತ್ತಾರೆ. ಈ ಪದ್ಧತಿ ಇಂದಿಗೂ ಆಚರಣೆಯಲ್ಲಿದೆ.

ಶ್ರೀ ರಾಜರಾಜೇಶ್ವರಿ ಸ್ತುತಿ : ಲೋಕದಲ್ಲಿ ಸಾಮಾನ್ಯವಾಗಿ ಪ್ರತಿಯೊಬ್ಬ ಮಾನವನಿಗೂ ಕಷ್ಟ-ನಷ್ಟ ಮುಂತಾದ ತೊಂದರೆಗಳು ಬರುತ್ತವೆ. ಇವು ನಿವಾರಣೆಯಾಗಲೆಂದು ಲೋಕಕಲ್ಯಾಣಕ್ಕಾಗಿ ಶ್ರೀ ರಾಜರಾಜೇಶ್ವರಿಯ ಸ್ತುತಿಯನ್ನು ೧೦೮ ದಿವಸ ಬೆಳಿಗ್ಗೆ, ಸಾಯಂಕಾಲ ತಪ್ಪದೆ ಓದಿದರೆ ಎಂಥ ಕಂಟಕವಿದ್ದರೂ ದೂರವಾಗುತ್ತದೆ ಎಂಬುದು ಸ್ವಾಮಿಗಳ ಅನುಭವದ ಸಿದ್ಧಾಂತವಾಗಿದೆ.

ಇದೊಂದು ಸಂಗ್ರಹ ಕೃತಿಯಾಗಿದ್ದು, ಇದರಲ್ಲಿ ಗುರುಸ್ತುತಿ, ಗುರುಸ್ತೋತ್ರ, ಈಶ್ವರಸ್ತುತಿ, ಪರಮೇಶ್ವರಿ ಸ್ತುತಿ, ಶ್ರೀಬಗಳಾಂಬ ಸ್ತೋತ್ರ, ನಾರಾಯಣಿ ಸ್ತುತಿ, ಜ್ಞಾನಶಕ್ತಿ, ಶೋಬಾನ ಪದ, ತಿಪ್ಪೇರುದ್ರಸ್ತುತಿ, ಶ್ರೀಗುರು ಶಿಷ್ಯರ ವಾರ್ಧಿ ಮತ್ತು ತತ್ವ ಎನ್ನುವ ಹತ್ತು ವಿಷಯಗಳಿವೆ. ಪ್ರತಿಯೊಂದು ವಿಷಯದಲ್ಲಿ ಶ್ಲೋಕ ಅಥವಾ ಪದ್ಯಗಳಿದ್ದು, ಇವುಗಳನ್ನು ಚಿದಾನಂದವಧೂತರ ಕೃತಿಗಳು ಮತ್ತು ಇತರೆ ಕೃತಿಗಳಿಂದ ಆಯ್ಕೆ ಮಾಡಿಕೊಂಡು ಸಂಗ್ರಹಿಸಲಾಗಿದೆ. ಚಿದಾನಂದವಧೂತರ ಶ್ರೀ ಬಗಳಾಂಬಾ ಸ್ತೋತ್ರವು ಚೌಪದಿಯ ರೂಪದಲ್ಲಿದ್ದು, ಅದರಲ್ಲಿನ ೧೦೧ ಪದ್ಯಗಳನ್ನು ಇದರಲ್ಲಿ ಸಂಗ್ರಹಿಸಲಾಗಿದೆ.

ನಿರ್ಗುಣೆ ನಿರಂಜನೆ ನಿರಾಮಯೆ
ನಿರಾಶೆ ನಿರ್ಗಮೆ ನಿರಾಪೇಕ್ಷಿ ನಿತ್ಯ ಸಂತೋಷೆ
ಭರ್ಗೋ ದೇವಳೆ ಅಭವಳೆ ಭಸ್ಮಸೂರಿ ದೂರಿ
ಭರ್ಗ ಚಿದಾನಂದ ಬಗಳಾಂಬ ಭವಹಾರಿ ॥[೯೩]
ಸಿದ್ಧ ಮುಕ್ತಿಯ ಸಿದ್ಧ ಐಶ್ವರ್ಯನಿತ್ಯ
ಸಿದ್ಧ ಯೋಗವು ಸಿದ್ಧ ಕಾಮ್ಯಗಳು ಸತ್ಯ
ಸಿದ್ಧ ವಾಹವು ಸಿದ್ಧ ಗಿರಿವಾಸದಿಂದ
ಸಿದ್ಧ ಚಿದಾನಂದ ಬಗಳಾಜ್ಞೆಯಿಂದ [೯೪]

ದೇವಿಸ್ಮರಣೆಯ ಮಹತ್ವ ಮತ್ತು ಅದರ ಪ್ರಯೋಜನವನ್ನು ಈ ಕೃತಿ ತಿಳಿಸುತ್ತದೆ. ಹೀಗೆ ಭಾಗವತ, ರಾಮಾಯಣ, ದೇವಿಮಹಾತ್ಮೆ, ನಾರಾಯಣಿ ಸ್ತೋತ್ರ ಮುಂತಾದ ಆಧ್ಯಾತ್ಮಿಕ ಕೃತಿ ಸಂಪುಟದಿಂದ ಇಲ್ಲಿನ ಪದ್ಯಗಳನ್ನು ಆಯ್ಕೆ ಮಾಡಿ ಸಂಪಾದಿಸಲಾಗಿದೆ. 'ತಿಪ್ಪೇರುದ್ರನ ಸ್ತುತಿ' ಭಾಗದಲ್ಲಿ ರುದ್ರಾವಧೂತರ ಶಿಷ್ಯರಾದ ತಿಪ್ಪೇಸ್ವಾಮಿಗಳ ಅಂಕಿತನಾಮದಿಂದ ರಚಿತವಾದ ಕಂದ ಪದ್ಯಗಳಿವೆ. ಆಧ್ಯಾತ್ಮ ಮತ್ತು ಯೋಗದ ವಿಷಯಕ್ಕೆ ಸಂಬಂಧಿಸಿದ ಈ ಹಾಡುಗಳಲ್ಲಿ ಸಂಸಾರದ ಅನಿತ್ಯತೆ ಮತ್ತು ನಿಜಾನಂದದ ಮಾರ್ಗವನ್ನು ಹೇಳಲಾಗಿದೆ.

ನಿಜವಲ್ಲ ಜಗದ ಬಾಳ್ವೆಯು
ನಿಜವಲ್ಲವು ಸತಿ ಸುತಾದಿ ಗೃಹ ಧನ ಪಶುಗಳ್
ನಿಜವಲ್ಲವು ನಿತ್ಯವಲ್ಲವು
ನಿಜ ನೀ ಕರುಣಿಸು ಕರುಣಾ ಸಮುದ್ರ ತಿಪ್ಪೇರುದ್ರಾ ॥[೯೫]

ಧನವಿರಲು ನೆಂಟರಿಪ್ಪರು
ಅನುದಿನ ಮತ್ತವನ ಬಿಡದೇ ಆರಾಧಿಪರು
ಧನ ಹೀನವಾಗೆ ಜಗದೊಳು
ಗಣಿಸರು ಮತ್ತವನ ಕರುಣಿಸು ಕರುಣಾಸಮುದ್ರ ತಿಪ್ಪೇರುದ್ರಾ ॥[೯೬]

''ಆರಾರರಿಯದ ಮಾಲು, ಜೋಡು ಸಂಗತಿ ಮಾಲು, ಗುರು ತಂದೆ ಇರುವುದೆ ಗಗನ್ಮಾಲು, ಯಿದು ಆರಾರರಿಯದ ಮಾಲು'' ಎನ್ನುವ ತತ್ವಪದಗಳನ್ನು ಈ ಕೃತಿಯಲ್ಲಿ ಸಂಗ್ರಹಿಸಲಾಗಿದೆ. ಸುಮಾರು ೨೦ ತತ್ವ ಪದಗಳಿದ್ದು, ಕೊನೆಗೆ ''ಇಪ್ಪತ್ತು ಪದವನು ಅಪ್ಪಾ ನೀನೋದಿಕೋ, ನೆಪ್ಪಿರಲೆಂದು ಬರಕೊಟ್ಟೆ, ಯಿದು ಆರಾರರಿಯದ ಮಾಲು, ನೆಪ್ಪಿರಲೆಂದು ಬರಕೊಟ್ಟೆ ನಾನೀಗ, ತಪ್ಪದೆ ಪಠಿಸು ನೀನಿದನೂ. ಯಿದು ಆರಾರರಿಯದ ಮಾಲು'' ಎಂದು ತತ್ವಪದದ ಮಹತ್ವವನ್ನು ತಿಳಿಸಿದ್ದಾರೆ.

ಮನವ ಮಲ್ಲಿಗೆ ಮಾಡಿ
ತನುವ ಕೇದಿಗೆ ಮಾಡಿ
ನನ್ನವೈದೂ ಬೆರಳಾ ಮರೆ ಮಾಡಿ
ಯಿದು ಆರಾರರಿಯದ ಮಾಲು
ನನ್ನವೈದೂ ಬೆರಳಾ ಮರೆಮಾಡಿ ನೀಡೆನು
ಸುತಮತವುಳ್ಳ ಗುರುವಿಗೆ
ಯಿದು ಆರಾರರಿಯದ ಮಾಲು ॥[೯೭]

ಕೃತಿಯ ಕೊನೆಗೆ ಗುರು ಪರಂಪರೆಯನ್ನು ಹೇಳುವ ಮಂಗಳಾರತಿ ಪದ್ಯಗಳಿವೆ.

ಶ್ರೀ ಝುಂಕಣ್ಣನವರ ಬಾಲಲೀಲೆ : ಇದು ಚಿದಾನಂದವಧೂತರನ್ನು ಅವರ ಅವಧೂತ ಪಥವನ್ನು ತಿಳಿಸುವ ಕೃತಿ. ಕವಿಗಳಲ್ಲಿ ಅವಧೂತನೆಂದೂ, ಅವಧೂತರಲ್ಲಿ ಕವಿಗಳೆಂದೂ ಹೆಸರು ಪಡೆದು ವೈವಿಧ್ಯಮಯ ಕೃತಿಗಳನ್ನು ರಚಿಸಿ, ಅವಧೂತ ಸಾಹಿತ್ಯದ ಹಿರಿಮೆಗೆ ಕಾರಣರಾದ ಚಿದಾನಂದವಧೂತರನ್ನು ಕುರಿತು ಕವಿ ಅಯ್ಯಪ್ಪ ಬರೆದ ಅವಧೂತ ಚಾರಿತ್ರ್ಯದ ಗದ್ಯಾನುವಾದವೇ ಶ್ರೀ ಝುಂಕಣ್ಣನವರ ಬಾಲಲೀಲೆ ''ಚಿದಾನಂದ ವಧೂತರ ಮೊದಲ ಹೆಸರು ಝುಂಕಣ್ಣ. ಆದವಾನಿ ತಾಲೂಕಿನ ದೊಡ್ಡ ಹರಿವಾಣ ಗ್ರಾಮದ ಕರಣಿಕ ವೃತ್ತಿಯ ಲಕ್ಷ್ಮೀಪತಿ ಮತ್ತು ಅಣ್ಣಮ್ಮ ದಂಪತಿಗಳ ಪುತ್ರನೇ ಝುಂಕಪ್ಪ. ಬಾಲ್ಯದಲ್ಲಿ ಶಿಕ್ಷಣದ ಜೊತೆಗೆ, ಯೋಗದತ್ತ ಆಸಕ್ತಿ ವಹಿಸುತ್ತಿದ್ದ. ಈತನು, ಋಷಿಗಳ, ಯೋಗಿಗಳ ಕಥೆಯನ್ನುಳ್ಳ ಶಾಸ್ತ್ರ, ಪುರಾಣಗಳನ್ನು ಶ್ರದ್ಧೆಯಿಂದ ಅಧ್ಯಯನ ಮಾಡುತ್ತಿದ್ದನು. ಲಕ್ಷ್ಮೀಪೂಜೆ ಮತ್ತು ಧ್ಯಾನದಲ್ಲಿ ತುಂಬಾ ಆಸಕ್ತಿ ವಹಿಸುತ್ತಿದ್ದ ಇವರು ಅಯೋಧ್ಯೆಯ ಸದ್ಗುರುಗಳಾದ ಚಿದಾನಂದರಲ್ಲಿ ಶಿಷ್ಯರಾಗಿ ವೇದೋಪನಿಷತ್ತುಗಳ ಅಧ್ಯಯನ ಮಾಡಿದ್ದಾರೆ. ಹೀಗೆ ಗುರುಕೃಪೆ ಮತ್ತು ಗುರೂಪದೇಶ ಪಡೆದ ಝುಂಕಪ್ಪ ಗುರುವಿನಿಂದ ಚಿದಾನಂದವಧೂತರಾಗಿ ಪರಿವರ್ತಿತರಾಗಿದ್ದಾರೆ.

ಮೂಲದಲ್ಲಿ ಏಳು ಸಂಧಿಗಳಲ್ಲಿ ಹೇಳಿರುವ ಬಾಲ್ಯವಿವರ, ಕ್ಷೇತ್ರಸಂಚಾರ, ಸದ್ಗುರು ಕಟಾಕ್ಷ, ಹಠಯೋಗ, ರಾಜಯೋಗ, ಕಾಶಿಯಾತ್ರೆ ಮತ್ತು ಚಿದಾನಂದ ಅವಧೂತರ ಚರಿತೆಯು ಇಲ್ಲಿ ಸವಿವರವಾಗಿ ಬಂದಿದೆ. ಚಿದಾನಂದವಧೂತರ ಶಿಷ್ಯಬಳಗದಲ್ಲಿದ್ದ ಕವಿ ಅಯ್ಯಪ್ಪನು, ೯೭೨ ಸಾಂಗತ್ಯ ಪದ್ಯಗಳಿಂದ ಈ ಕೃತಿಯನ್ನು ರಚಿಸಿದ್ದು, ದೀರ್ಘಕಾವ್ಯ ಕೃತಿಯಾಗಿ ಹೊರಬಂದಿದೆ. ಶ್ರೀ ಗುರು ಝುಂಕಣ್ಣನ ಬಾಲಲೀಲೆಯನ್ನು "ಸಾಧುಗಳ ಅಥವಾ ಯೋಗಿಗಳ ನಿಂದೆ ಮಾಡುವ ಮೂರ್ಖರಿಗೂ, ಶಿವಜೀವರ ಗುಟ್ಟು ತಿಳಿಯದ ಮೂಢರಿಗೂ, ಈ ತತ್ವ ಬೋಧನೆಯನ್ನು ಹಿಂದು ಮುಂದು ಲಾಲಿಸುವವರಿಗೆ, ಕ್ರೋಧದಲ್ಲಿ ಇರುವವರಿಗೆ, ಮನಸ್ಸಿನಲ್ಲಿ ಕುದಿಯುವವರಿಗೆ, ಕುಹಕಬುದ್ಧಿ ಹುಡುಕುವವರಿಗೆ, ಗುಟ್ಟು ರಟ್ಟು ಮಾಡುವವರಿಗೂ, ತೂಗಡಿಸುವವರಿಗೂ, ಗುಣಹೀನರಿಗೂ, ಹೆಂಡತಿಯನ್ನು ಬಡಿಯುವವನಿಗೂ ಸತ್ಯ ಚರಿತೆಯಾದ ಚಿದಾನಂದವಧೂತರ ಚರಿತ್ರೆಯನ್ನು ಹೇಳಬಾರದೆಂದು" ತಿಳಿಸಿದ್ದಾರೆ. ಕವಿ ಅಯ್ಯಪ್ಪನು ಏಳು ಸಂಧಿಗಳಲ್ಲಿ ಹೇಳಿದ ಸಾಂಗತ್ಯ ಪದ್ಯಗಳನ್ನು, ನರಸಿಂಹಾವಧೂತರು ಶ್ರೀ ಝುಂಕಣ್ಣನ ಬಾಲಲೀಲೆಯಲ್ಲಿ ೧೧ ಅಧ್ಯಾಯಗಳಲ್ಲಿ ಗದ್ಯಾನುವಾದ ಮಾಡಿದ್ದಾರೆ. ಕ್ರಮವಾಗಿ ಝುಂಕಣ್ಣನ ಲೀಲೆಯು ಕ್ಷೇತ್ರ ಸಂಚಾರ, ಸದ್ಗುರುಗಳ ಸೇವಾಮೃತ, ಗುರುಗಳ ಲಕ್ಷಣ, ಕಾಲ ನಿರ್ಣಯ ಲಕ್ಷಣ, ಸದ್ಗುರು ಕಟಾಕ್ಷ, ಹಠರಾಜಯೋಗ, ಶುದ್ಧರಾಜಯೋಗ, ಕಾಶೀಯಾತ್ರೆ, ಅವಧೂತ ಚರಿತ್ರೆ, ಮತ್ತು ಜೀವನ್ಮುಕ್ತಿ ವಿಚಾರಗಳಲ್ಲಿ ಹೇಳಿದ್ದಾರೆ. ಪ್ರತಿ ಅಧ್ಯಾಯವು ಝುಂಕಣ್ಣನ ಜೀವನದಲ್ಲಿ ಘಟಿಸಿದ ಘಟನೆಗಳು ಕ್ರಮಬದ್ಧವಾಗಿ ಒಗೊಂಡಿದೆ.

೪. ೯. ಬೈಲುಹೊದ್ದಿಗೆರೆ ಸುಡುಗಾಡಪ್ಪತಾತ

ಮಡಿಕೆ ಮಾಡುವ ಕುಂಬಾರ ಮನೆತನದ ಬಾರೆಪ್ಪ ಎಂಬುವರ ಮಗನೆ ಸುಡುಗಾಡಪ್ಪ. ಇದು ನಿಜ ಹೆಸರೋ ಅಥವಾ ಯಾವಾಗಲೂ ಊರ ಮುಂದಿನ ಸುಡುಗಾಡಿನಲ್ಲಿ ತಿರುಗಾಡುತ್ತಿದ್ದರಿಂದ ಈ ಹೆಸರು ಬಂದಿತೋ ತಿಳಿಯದೆಂದು ಅನೇಕ ಭಕ್ತರು ತಿಳಿಸುತ್ತಾರೆ.

ಇವರ ಜೀವನ ಚರಿತ್ರೆಯನ್ನು ಹೇಳಲು ಯಾವುದೇ ಲಿಖಿತ ಆಧಾರವಿಲ್ಲ. ಇಂದು ತಾತನವರನ್ನು ನಂಬಿರುವ ಅಪಾರ ಭಕ್ತಜನತೆಯಿದೆ. ಅವರು ಕೇಳಿದ, ನೋಡಿದ ಕೆಲ ಘಟನೆಗಳ ಆಧಾರದಿಂದ ದೊರೆತ ಮಾಹಿತಿಯನ್ನು ಹೀಗೆ ಸಂಗ್ರಹಿಸಲಾಗಿದೆ.

ಬಾಲ್ಯದಲ್ಲಿ ಸುಡುಗಾಡಪ್ಪನು ತಂದೆಯು ಮಾಡುತ್ತಿದ್ದ ಮಡಿಕೆ ಮಾಡುವ ಕಾಯಕದಲ್ಲಿ ನೆರವಾಗುತ್ತಿದ್ದನು. ಮಡಿಕೆಗೆ ಬೇಕಾದ ಮಣ್ಣನ್ನು ಅಗೆಯುವುದು, ಹದ ಮಾಡುವುದು, ಮಡಿಕೆಗಳನ್ನು ಆವಗೆಯಲ್ಲಿ ಹಾಕಿ ಸುಡುವುದು ಮುಂತಾದ ಕೆಲಸಗಳನ್ನು ಶ್ರದ್ಧೆ ಮತ್ತು ಆಸಕ್ತಿವಹಿಸಿ ಮಾಡುತ್ತಿದ್ದನು. ಈ ಹುಡುಗನ ಕೆಲಸವನ್ನು ಕಂಡ ತಂದೆ, ತಾಯಿ ಮತ್ತು ಊರವರು ಆಶ್ಚರ್ಯ ಪಡುತ್ತಿದ್ದರು. ಊರಲ್ಲಿ ಯಾರೊಂದಿಗೂ ಬೆರೆಯದೆ, ತಾನಾಯಿತು ತನ್ನ ಕೆಲಸವಾಯಿತು ಹೀಗೆ ಕಾಲ ಕಳೆಯುತ್ತಿದ್ದನು.

ಒಮ್ಮೆ ಮಡಿಕೆ ಮಾಡಲು ಕೆರೆಯ ಮಣ್ಣನ್ನು ಅಗೆಯುತ್ತಿರುವಾಗ, ಮೇಲಿನ ಮಣ್ಣಗಡ್ಡೆ ಕುಸಿದು, ಮಣ್ಣಲ್ಲೆ ಮುಚ್ಚಿ ಹೋಗುತ್ತಾನೆ. ಮನೆಯಲ್ಲಿ ತಂದೆ ತಾಯಿಗಳು ಗಾಬರಿಗೊಂಡು ಊರೆಲ್ಲಾ ಹುಡುಕಿದರೂ

ಮಗ ಸಿಗಲಿಲ್ಲ. ಮಾರನೆಯ ದಿನ ಮಣ್ಣು ಅಗೆಯುವ ಜಾಗಕ್ಕೆ ಬಂದು ಮಗನನ್ನು ಕೂಗುತ್ತಾರೆ. ಆಗ ಮಣ್ಣೊಳಗಿಂದ 'ನಾನಿಲ್ಲಿದ್ದೇನೆ' ಎಂದು ಎದ್ದು ಬಂದನಂತೆ. ಹೀಗೆ ಬಾಲ್ಯದಲ್ಲೇ ವಿಚಿತ್ರ ಸ್ವಭಾವವನ್ನು ಸುಡುಗಾಡಪ್ಪನು ಹೊಂದಿರುತ್ತಾನೆ. ಹಸಿ ಮಡಿಕೆಗಳನ್ನು ಆವಿಗೆಯಲ್ಲಿ ಹಾಕಿ ಸುಡುತ್ತಿರುವಾಗ, ಸುಟ್ಟ ಮಡಿಕೆಗಳನ್ನು ಪರೀಕ್ಷಿಸಲು ಆವಿಗೆಯಲ್ಲೆ ಇಳಿದು ನೋಡುತ್ತಿದ್ದನಂತೆ. ಮೈಮೇಲೆ ಸುಟ್ಟ ಗುರುತುಗಳಾವುವು ಕಾಣುತ್ತಿರಲಿಲ್ಲವಂತೆ ಎಂದು ಮಠದ ಆವರಣದಲ್ಲಿ ಅಂಗಡಿ ಹಾಕಿಕೊಂಡಿರುವವರು ತಿಳಿಸುತ್ತಾರೆ.

ಸಂಸಾರವಂದಿಗನಾಗಿದ್ದ ಸುಡುಗಾಡಪ್ಪನು ಬಾಲಮ್ಮ ಮತ್ತು ದುರ್ಗಮ್ಮ ಎಂಬ ಇಬ್ಬರನ್ನು ಮದುವೆಯಾಗಿದ್ದು, ಸಂಸಾರದಲ್ಲಿ ಸುಖ ಕಾಣದೆ ವೈರಾಗ್ಯತಾಳಿ ಯೋಗ ಮಾರ್ಗವನ್ನು ಅನುಸರಿಸುತ್ತಾನೆ. ಆತ್ಮ ಸುಖದ ಸಾಧನೆಗಾಗಿ, ಗುರುವನ್ನು ಹುಡುಕುತ್ತಾ ಧರ್ಮಸಾಗರದ ಶರಭಯ್ಯಸ್ವಾಮಿಗಳಲ್ಲಿಗೆ ಬರುತ್ತಾನೆ. ಅವರಲ್ಲಿ ಶಿಷ್ಯನಾಗಿ ನಿಂತು ಗುರುಸೇವೆ ಮಾಡುತ್ತಾ ಗುರುವಿನ ಅನುಗ್ರಹ ಪಡೆಯುತ್ತಾನೆ. ಗುರುವಿನಿಂದ ಉಪದೇಶ ಪಡೆದು ಬೈಲುಹೊದ್ದಿಗೆರೆಗೆ ಬಂದು ಎಲ್ಲೆಂದರಲ್ಲೆ ವಾಸಮಾಡುತ್ತಾ ಜೀವಪರ ಕಾಳಜಿಯನ್ನು ವಹಿಸುತ್ತಾರೆ. ಕೈ, ಕಾಲು ನೋವು ಬಂದವರಿಗೆ, ಅಶಕ್ತರಿಗೆ, ಹಾವು ಚೇಳು ಕಡಿದವರಿಗೆ ಹೀಗೆ ನೊಂದುಬರುವ ಜನರ ರೋಗ-ರುಜಿನಗಳನ್ನು ಪರಿಹರಿಸುತ್ತಿದ್ದರು. ಯಾವ ರೋಗದವರೇ ಬರಲಿ ಔಡಲ ಎಣ್ಣೆ ಮತ್ತು ಆವಿಗೆಯ ಬೂದಿಯನ್ನು ಔಷಧವಾಗಿ ನೀಡಿ ಗುಣಪಡಿಸುತ್ತಿದ್ದರು. ಯಾವ ಸ್ವಾರ್ಥವೂ ಇಲ್ಲದೆ ಯಾವುದೇ ರೀತಿಯ ಪ್ರತಿಫಲ ನಿರೀಕ್ಷಿಸದೆ, ಮಾನವತಾವಾದಿಯಾಗಿ ನಂಬಿ ಬರುವ ಜನರ ಎಡರು-ತೊಡರುಗಳನ್ನು ಪರಿಹರಿಸಿದ್ದಾರೆ. ಕ್ರಮೇಣ ಇವರ ಶಕ್ತಿಯಿಂದ ಪ್ರಭಾವಿತರಾದ ಜನತೆ ಭಕ್ತಿಯಿಂದ 'ತಾತ' ಎಂದು ಕರೆಯಲಾರಂಭಿಸಿದ್ದಾರೆ. ತಾತನವರ ಹೆಸರು ಸುತ್ತಮುತ್ತಲಿನ ಗ್ರಾಮಗಳಿಗೆಲ್ಲಾ ಹರಡಿ, ನಿತ್ಯ ಅವರನ್ನು ಕಾಣಲು ಬರುವವರ ಸಂಖ್ಯೆ ಹೆಚ್ಚಾಗುತ್ತಿರುತ್ತದೆ.

ತಾತನು ಜೀವಂತವಾಗಿದ್ದಾಗ ನಡೆದ ಕೆಲ ಘಟನೆಗಳು

ಸಂಡೂರಿನ ಮಹಾರಾಜರಿಗೆ ಒಮ್ಮೆ ಹೆಗಲುಣ್ಣು (ರಾಜಪುಂಡು) ಬಂದಿರುತ್ತದೆ. ಆಗ ತಾತನವರೇ ಹೋಗಿ ಅವರಿಂದ ಯಾವುದೇ ರೀತಿಯ ಸಂಭಾವನೆಯನ್ನು ಪಡೆಯದೆ ನಿಸ್ವಾರ್ಥವಾಗಿ ರಾಜರ ಗಾಯಕ್ಕೆ ಹರಳೆಣ್ಣೆ ಮತ್ತು ಬೂದಿಯನ್ನು ಹಚ್ಚಿ ಗುಣಪಡಿಸಿದ್ದಾರೆ. ಹೊಸಪೇಟೆಯಿಂದ ಸಂತೆ ಮಾಡಿಕೊಂಡು ಜನರೊಂದಿಗೆ ಬರುವಾಗ ಕತ್ತಲೆಯಾಗುತ್ತದೆ. ನಡೆಯಲು ದಾರಿಯೇ ಕಾಣದಂತಾದಾಗ, ಜೊತೆಯಲ್ಲಿದ್ದವರಿಗೆ ಬೆಳಕನ್ನು ಮಾಡಿಕೊಂಡು ಕರೆತಂದಿದ್ದಾರೆ. ಸುತ್ತಲೂ ಕತ್ತಲಿದ್ದು ನಡೆಯುವವರಿಗೆ ಮಾತ್ರ ಬೆಳಕನ್ನು ಮೂಡಿಸುತ್ತಿದ್ದರಂತೆ ಎಂದು ಇಂದಿನ ಭಕ್ತರು ಹೇಳುತ್ತಾರೆ.

ಒಮ್ಮೆ ದನಕಾಯುವ ಹುಡುಗರೊಂದಿಗೆ ಕಾಡಿನಲ್ಲಿ ಆಟವಾಡುತ್ತಿದ್ದಾಗ ಎಲ್ಲರನ್ನು ಹತ್ತಿರ ಕರೆದು ನೀವ್ಯಾರು ಹೆದರಬೇಡಿ, ನಿಮಗೊಂದು ಆಟ ತೋರಿಸುತ್ತೇನೆಂದು ಹೇಳುತ್ತಾರೆ. ಎಲ್ಲರೂ ಸುತ್ತುವರೆದು ನಿಂತಿರುವಾಗ ಕಾಡುಕವಳಕಾಯಿ ಬಳ್ಳಿಗೆ ಹರಳನ್ನು ಮಂತ್ರಿಸಿ ಎಸೆಯುತ್ತಾರೆ. ಆ ಬಳ್ಳಿ ಭಯಂಕರ ಶಬ್ದ ಮಾಡುತ್ತಾ, ಮೇಲಕ್ಕೆ ಹೋಗಿ ಕೆಳಗೆ ಬಿದ್ದಿದೆ. ನಂತರ ಗಿಡ ಮಾಮೂಲಿನಂತೆ ಇರುವ ಹಾಗೆ ನೆಟ್ಟಿದ್ದಾರೆ.

ಹಾಗೆಯೇ ಹಸಿ ಬೇವಿನ ಮರವನ್ನು ಒಣಗಿದ ಮರವನ್ನಾಗಿ ಮಾಡಿ, ಮತ್ತೆ ಹಸಿ ಮರದಂತೆ ತೋರಿಸಿದ್ದಾರೆಂದು ತಿಳಿಯುತ್ತದೆ.

ಮೋಡಿ ಮಾಡುವ ಮೋಡಿಕಾರನು ತನ್ನ ಆಟ ತೋರಿಸಲು ಒಮ್ಮೆ ಬೈಲುಹೊದ್ದಿಗೆರೆ ಗ್ರಾಮಕ್ಕೆ ಬರುತ್ತಾನೆ. ತಾತನು ಅವನನ್ನು ಊರೊಳಗೆ ಬಿಡಿಸಿಕೊಳ್ಳದೆ ಅವನು ಹಾಕಿಕೊಳ್ಳುವ ಕಾಲಗೆಜ್ಜೆಯೇ ಹರಿದು ಚಲ್ಲಾಪಿಲ್ಲಿಯಾಗುವಂತೆ ಮಾಡಿ, ಅವನನ್ನು ಹಿಂದಕ್ಕೆ ಕಳಿಸಿದ್ದಾರೆ. ಒಟ್ಟಾರೆ ತಾತನಿರುವವರೆಗೂ ಊರಲ್ಲಿ ಮಾಟ-ಮಂತ್ರಗಳು ನಡೆಯುತ್ತಿರಲಿಲ್ಲವೆಂದು ಇಂದಿಗೂ ಗ್ರಾಮಸ್ಥರು ನೆನೆಯುತ್ತಾರೆ.

ತಾತನು ಜೀವಂತವಾಗಿರುವಾಗ ಸಮಾಜದ ಎಲ್ಲಾ ವರ್ಗದ ಜನರು ಅವರಲ್ಲಿ ಬಂದು ತಮ್ಮ ನೋವು-ನಲಿವುಗಳನ್ನು, ಕಷ್ಟ-ಸುಖಗಳನ್ನು ನಿವೇದಿಸಿಕೊಳ್ಳುತ್ತಿದ್ದರು. ವೈದ್ಯರಿಂದ ಗುಣಪಡಿಸಲಾಗದ ಎಷ್ಟೋ ಖಾಯಿಲೆಗಳನ್ನು ಅವರು ಗುಣಪಡಿಸಿದ್ದಾರೆ. ದಯೆ, ಪ್ರೀತಿ, ಕರುಣೆ, ಸಮಾನತೆಯ ಗುಣವುಳ್ಳ ತಾತನು, ತಾನು ಸಾಯುವಾಗ ತನ್ನ ಭಕ್ತರನ್ನು ಕರೆದು 'ನನ್ನ ಸಮಾಧಿಯನ್ನು ಸುಡುಗಾಡಿನಲ್ಲಿ ಮಾಡದೆ, ರಸ್ತೆ ಬದಿಯಲ್ಲಿ ಮಾಡಿರೆಂದು' ಹೇಳಿದ್ದಾರೆ. ಅವರ ಹೇಳಿಕೆಯಂತೆ ಇಂದು ಅವರ ಸಮಾಧಿಯು ರಸ್ತೆ ಬದಿಯಲ್ಲಿದ್ದು, ಪ್ರಯಾಣಿಕರೆಲ್ಲರ ಆರಾಧ್ಯದೈವವಾಗಿದ್ದಾರೆ. ತಾತನವರು ಐಕ್ಯರಾಗಿ ಸುಮಾರು ವರ್ಷಗಳು ಕಳೆದ ಮೇಲೆ, ಕಮ್ಮಾರ ಷಣ್ಮುಖಪ್ಪನವರಿಗೆ ಸ್ವಪ್ನದರ್ಶನ ನೀಡಿದ್ದಾರೆ. ದವಡೆಯ ಒಳಜಂತು ರೋಗದಿಂದ ತುಂಬಾ ನರಳುತ್ತಿದ್ದ ಷಣ್ಮುಖಪ್ಪನಿಗೆ ತಾತನು ಕನಸಿನಲ್ಲಿ ಕಾಣಿಸಿಕೊಂಡು, ನನ್ನ ಸಮಾಧಿಯ ಮೇಲೆ ಗದ್ದುಗೆ ನಿರ್ಮಾಣ ಮಾಡಿ ನನ್ನ ಸೇವೆ ಮಾಡುತ್ತಿರು ಎಂದು ಹೇಳಿದರಂತೆ. ಅದರಂತೆ ಷಣ್ಮುಖಪ್ಪನು ಗದ್ದುಗೆ ನಿರ್ಮಾಣ ಮಾಡಿದ್ದರಿಂದ ಆತನ ಒಳಜಂತು ರೋಗ ಗುಣವಾಗಿದೆ. ಅಂದಿನಿಂದಲೇ ತಾತನ ಮಠ ಬೆಳೆಯಲು ಪ್ರಾರಂಭವಾಗಿದೆ ಎನ್ನುತ್ತಾರೆ ಇಂದಿನ ಭಕ್ತರು.

ಗ್ರಾಮದ ಕೆಲ ಮಹಿಳೆಯರು ಹೊಲಕ್ಕೆ ಹೋಗಿ ಮೇವು ತರುವಾಗ ಗದ್ದುಗೆಯ ಸ್ಥಳದಲ್ಲಿದ್ದ ಮರದ ನೆರಳಿನಲ್ಲಿ ಕುಳಿತುಕೊಳ್ಳುತ್ತಾರೆ. ಆಗ ಅಲ್ಲಿದ್ದ ತಾತನ ಹೆಂಡತಿ ಬಾಲಮ್ಮ, ಇವರ ಹತ್ತಿರ ಬಂದು ತಾತನು ಸಮಾಧಿಯ ಗುಣಿಯಲ್ಲಿ ಒಡಮೂಡಿದ್ದಾನೆ (ಉದ್ಭವ) ಬಂದು ನೋಡಿರೆಂದು, ಮೂರ್ತಿಯನ್ನು ತೋರಿಸುತ್ತಾಳೆ. ಜೊತೆಯಲ್ಲಿದ್ದ ಒಬ್ಬಳು, ಇದು ಮೂರ್ತಿಯಲ್ಲವೆಂದು ಕಟ್ಟಿಗೆಯಿಂದ ಮುಖವನ್ನು ಊನ ಮಾಡಿದ್ದಾಳೆ. ಊನಗೊಂಡ ಮೂರ್ತಿ ಇನ್ನೂ ಹಾಗೆಯೇ ಇದೆಯೆಂದು, ಗುಣಿಯಲ್ಲಿರುವ ಮೂರ್ತಿಯನ್ನು ಇಂದಿನವರು ತೋರಿಸುತ್ತಾರೆ. ಮುಂದೆ ಊನ ಮಾಡಿದವಳ ವಂಶವೆ ಸರ್ವನಾಶವಾಗಿರುವುದು ತಿಳಿಯುತ್ತದೆ.

ಮಠ ನಿರ್ಮಾಣ : ತಾತನವರು ಸತ್ತು ಸುಮಾರು ೫೦ ವರ್ಷಗಳ ನಂತರ ಅವರ ಸಮಾಧಿಯ ಜಾಗದಲ್ಲಿ ಮಠ ನಿರ್ಮಾಣವಾಗಿದ್ದು ಬರುವ ಭಕ್ತರಿಗೆ ಆಶ್ರಯದ ತಾಣವಾಗಿದೆ. ಭಕ್ತರೆಲ್ಲಾ ಸೇರಿ ಸಮಿತಿಯೊಂದನ್ನು ಮಾಡಿಕೊಂಡು ನೀರು, ಕೊಠಡಿಗಳು, ಪೂಜೆ, ಆರಾಧನೆ, ಜಾತ್ರೆ ಮುಂತಾದ ಕಾರ್ಯಗಳು ಸುಗಮವಾಗಿ ನಡೆಯಲು ವ್ಯವಸ್ಥೆ ಮಾಡಿಕೊಂಡಿದ್ದಾರೆ. ಮಠವು ರಸ್ತೆ ಬದಿಯಲ್ಲಿರುವುದರಿಂದ ಹೋಗಿ ಬರುವ ಪ್ರಯಾಣಿಕರು ಸೇರಿ ಅಪಾರ ಭಕ್ತ ಜನತೆಯನ್ನು ತಾತನು ಹೊಂದಿದ್ದು, ಅವರ ಮನ-ಮನೆಯಲ್ಲಿ ನಿತ್ಯ ಆರಾಧನೆ ಗೊಳ್ಳುತ್ತಿದ್ದಾರೆ.

ಇಂದು ಮಠವಿರುವ ಜಾಗ ಮೊದಲು ಸ್ಮಶಾನ. ಮಠದ ಮುಂದಿನ ಜಾಗವನ್ನು ಭಕ್ತರು ದಾನ ಮಾಡಿದ್ದಾರೆ. ಸುಮಾರು ೩೦ ವರ್ಷಗಳ ಹಿಂದೆ ತಮಿಳುನಾಡಿನಿಂದ ಬಂದ ರಾಮಲಿಂಗಸ್ವಾಮಿ ಎಂಬುವರು ಈ ಮಠದ ಏಳ್ಗೆಗೆ ಶ್ರಮಿಸಿದ್ದಾರೆ. ರಸ್ತೆ ಬದಿಯಲ್ಲೆ ಮಠವಿರುವುದರಿಂದ ಪ್ರಯಾಣಿಕರು ನೀಡುತ್ತಿದ್ದ ಹಣ ಮತ್ತು ಕಲ್ಲು, ಕಬ್ಬಿಣ, ಇಟ್ಟಿಗೆ, ಸಿಮೆಂಟ್ ಲಾರಿಗಳ ಭಕ್ತರು ಕೊಡುತ್ತಿದ್ದ ಕಾಣಿಕೆರೂಪದ ವಸ್ತುಗಳ ಸಹಾಯದಿಂದ ಮಠ ನಿರ್ಮಾಣವಾಗಿದೆ. ಮಠ ನಿರ್ಮಾಣವಾದಾಗ ಬರುವ ಭಕ್ತರ ಅನುಕೂಲಕ್ಕೆ ಆವರಣದಲ್ಲಿ ಬಾವಿ ತೆಗೆಸಿದ್ದಾರೆ. ಭಿಕ್ಷೆ ಬೇಡಿ ತಂದ ಹಣದಿಂದ ಮತ್ತು ಕಾಣಿಕೆರೂಪದಲ್ಲಿ ಬಂದ ಹಣದಿಂದ ದಾಸೋಹದ ವ್ಯವಸ್ಥೆ ಮಾಡಿದ್ದಾರೆ. ಮಠದ ಆವರಣದಲ್ಲಿದ್ದ ಮರಗಳನ್ನು ಕಡಿದು ಮಠಕ್ಕೆ ಬೇಕಾದ ಸಾಮಾನುಗಳನ್ನು ಮಾಡಿಸಿದ್ದಾರೆ. ಆದರೆ ಮಠದಲ್ಲಿ ತಾತನವರ ಭಾವಚಿತ್ರವಿಲ್ಲ. ಅವರ ಸಮಾಧಿಯ ಮೇಲೆ ಸುಂದರವಾದ ಗದ್ದುಗೆ ಮಾತ್ರ ನಿರ್ಮಾಣವಾಗಿದೆ. ನಿತ್ಯವೂ ಭಕ್ತರು ಮಠಕ್ಕೆ ಬರುತ್ತಿದ್ದು, ಅಮವಾಸ್ಯೆಯ ದಿನದಂದು ಎರಡರಿಂದ ಮೂರು ಸಾವಿರ ಭಕ್ತರು ಸೇರುತ್ತಾರೆ. ಅಂದು ಮಠದಲ್ಲಿ ದಾಸೋಹದ ವ್ಯವಸ್ಥೆಯಿರುತ್ತದೆ. ಬಂದ ಭಕ್ತರು ನೀಡುತ್ತಿದ್ದ ಹರಕೆ, ಕಾಣಿಕೆಯಿಂದ ನಂದಾದೀಪದ ವ್ಯವಸ್ಥೆ, ರಥದ ನಿರ್ಮಾಣ, ದಾಸೋಹ ವ್ಯವಸ್ಥೆ ಮತ್ತು ಜಾತ್ರೆಯನ್ನು ನಡೆಸಲು ವ್ಯವಸ್ಥೆ ಮಾಡಿದ್ದಾರೆ. ರಾಮಲಿಂಗ ಸ್ವಾಮಿಯವರೇ ಶ್ರಮವಹಿಸಿ ಶಿವರಾತ್ರಿಯ ಅಮವಾಸ್ಯೆಯೆಂದು ಜಾತ್ರೆಯನ್ನು ಪ್ರಾರಂಭಿಸಿದ್ದಾರೆ. ಅಂದಿನಿಂದ ಇಂದಿನವರೆಗೂ ಅಪಾರ ಭಕ್ತಸ್ತೋಮದ ಮಧ್ಯೆ ರಥೋತ್ಸವ ಜರುಗುತ್ತಿದೆ.

ಇತ್ತೀಚಿನ ಕೆಲ ಮಹಿಮೆಗಳು : ತಾತನವರು ಐಕ್ಯರಾಗಿ ಎಷ್ಟೋ ವರ್ಷಗಳಾಗಿವೆ. ಆದರೆ ಅವರ ಮೇಲಿನ ನಂಬಿಕೆ ಜೀವಂತವಾಗಿದ್ದು, ನಾನಾ ರೀತಿಯ ತೊಂದರೆಗಳಿಂದ ಬಳಲಿದವರು ಇಂದು ಮಠಕ್ಕೆ ಬಂದು, ಹಿಂದೆ ತಾತನು ಕೊಡುತ್ತಿದ್ದ ಎಣ್ಣೆ ಮತ್ತು ಆವಿಗೆ ಬೂದಿಯನ್ನು ಸೇವಿಸಿ, ಗುಣಮುಖರಾಗಿ ಹೋಗುತ್ತಿದ್ದಾರೆ.

ಹರಿಜನ ಮಾರೆಪ್ಪನು ಕಣ್ಣು ಕಾಣದೆ ಕುರುಡನಾಗಿದ್ದು, ತಾತನ ಮಠದಲ್ಲಿದ್ದುಕೊಂಡು ಮಠದ ಸೇವೆ ಮಾಡುತ್ತಿರುತ್ತಾನೆ. ದಿನ ಕಳೆದಂತೆ ಕಣ್ಣು ಕಾಣುವಂತಾಗಿ ಇಂದು ಎಲ್ಲಾ ಕೆಲಸಗಳನ್ನು ಮಾಡುತ್ತಿದ್ದು ಎಲ್ಲಿಗೆ ಬೇಕಾದರೂ ನಡೆದು ಹೋಗುತ್ತಿದ್ದಾನೆ.

ಕಾಕಬಾಳಿನ ತಿಮ್ಮಪ್ಪ ಎಂಬ ಹುಡುಗ ಖಾಯಿಲೆಯಿಂದ ನರಳಿ ಅಶಕ್ತನಾಗಿರುತ್ತಾನೆ. ಕುಳಿತು ಕೊಳ್ಳಲಾಗದೆ, ಯಾವಾಗಲೂ ಮಲಗಿಕೊಂಡೇ ಇರುವ ಈ ಹುಡುಗನ ಖಾಯಿಲೆಯನ್ನು ಯಾವ ವೈದ್ಯರಿಂದಲೂ ಗುಣಪಡಿಸಲಾಗಿರಲಿಲ್ಲ. ಇಂಥವನನ್ನು ಮಠಕ್ಕೆ ಹಾಕಿಕೊಂಡು ಬಂದು ಹಜಾರದಲ್ಲಿ ಮಲಗಿಸಿರುತ್ತಾರೆ. ಕೆಲ ದಿನಗಳ ನಂತರ ಹಜಾರದಲ್ಲಿ ಮಲಗಿದ್ದ ಹುಡುಗನ ಬೆನ್ನ ಮೇಲೆ, ಮಠದಲ್ಲಿ ತೂಗು ಹಾಕಿದ್ದ ೧೦ ಕೆ.ಜಿ. ತೂಕದ ಗಂಟೆಹರಿದು ಬಿದ್ದಿದೆ. ಆಗ ಅಯ್ಯೋ ಎಂದು ಕೂಗಿಕೊಂಡು ಎದ್ದವನು, ಆರೋಗ್ಯವಂತನಂತೆ ಕುಳಿತುಕೊಂಡಿದ್ದಾನೆ. ಅಂದಿನಿಂದ ನಡೆದಾಡುತ್ತಾ, ಎಲ್ಲರೊಂದಿಗೂ ಮಾತನಾಡುತ್ತಾ ಕೆಲದಿನಗಳು ಮಠದಲ್ಲೇ ಇದ್ದು ನಂತರ ಊರಿಗೆ ಹೋದನೆಂದು, ಈ ಘಟನೆಯನ್ನು ಕಣ್ಣಾರೆ ಕಂಡವರು ತಿಳಿಸುತ್ತಾರೆ.

ಪರಮ ಭಕ್ತರ ಬಾಧೆಗಳನು ಪರಿ
ಹರಿಸಿ ಮನದಿಷ್ಟಾರ್ತಗಳ ಅನ

ವರತ ವಿತ್ತುದ್ದರಿಸಿ ನಂಬಿದ ಭಕ್ತರನು ಬಿಡದೆ |
ಹರನ ತರದೋಲೊರೆಯುತಿಹರೆ
ಮರೆವ ಬೈಲೋದ್ದೇರಿ ಪುರವರ
ಶರಣ ಸುಡುಗಾಡೇಶ ರಕ್ಷಿಸು ಸತತ ಸರ್ವರನು ||

ಆನೆಗೊಂದಿಯ ಸೆಟ್ಟಿಯ ಕಾಲುಗಳು ಶಕ್ತಿ ಕಳೆದುಕೊಂಡು ನಡೆಯಲಾಗದೆ ಇದ್ದಾಗ, ತಾತನವರ ಮಹಿಮೆಯ ವಿಷಯ ಕೇಳಿ ಮಠಕ್ಕೆ ಬಂದು ನಾಲ್ಕು ವಾರಗಳ ಕಾಲ, ಮಠದಲ್ಲಿ ಕೊಡುವ ಎಣ್ಣೆ ಮತ್ತು ಆಧಾರವನ್ನು ಕಾಲುಗಳಿಗೆ ಹಚ್ಚಿದ್ದರಿಂದ ಸಂಪೂರ್ಣ ಗುಣಮುಖರಾಗಿ ಹೋಗಿದ್ದಾರೆ. ಹೀಗೆ ವೈದ್ಯಲೋಕದಿಂದ ಗುಣ ಪಡಿಸಲಾಗದ ಎಷ್ಟೋ ಖಾಯಿಲೆಗಳು, ಮಠದಲ್ಲಿ ಕೊಡುವ ಎಣ್ಣೆ ಮತ್ತು ಆಧಾರದಿಂದ ಗುಣವಾಗಿವೆ ಎನ್ನುತ್ತಾರೆ ಭಕ್ತರು.

ದೆವ್ವ, ಪೀಡೆ ಹಿಡಿದವರು, ಮಕ್ಕಳಿಲ್ಲದವರು, ವ್ಯಾಪಾರದಲ್ಲಿ ಕಷ್ಟ-ನಷ್ಟ ಅನುಭವಿಸಿದವರು, ಮಠಕ್ಕೆ ಬಂದು, ತಾತನಲ್ಲಿ ಹರಕೆ ಮಾಡಿಕೊಂಡು ತಮ್ಮ ಸಮಸ್ಯೆಗಳನ್ನು ಪರಿಹರಿಸಿಕೊಂಡಿದ್ದಾರೆ. ಮಠಕ್ಕೆ ಬರುವವರಿಗೆ, ಹೋಗುವವರಿಗೆ ಅನುಕೂಲವಾಗಲೆಂದು ಗುಡೇಕೋಟೆ ಹನುಮಂತಪ್ಪ ಎಂಬುವವರು ಅರವಟ್ಟಿಗೆ ನಿರ್ಮಿಸಿದ್ದಾರೆ.

ತಾತನನ್ನು ನಂಬಿ ಸುಖವಾಗಿದ್ದವರು ತಮ್ಮ ಮಕ್ಕಳಿಗೆ ಸುಡುಗಾಡಪ್ಪ, ಸುಡುಗಾಡಮ್ಮ ಎಂದು ಹೆಸರಿಟ್ಟುಕೊಂಡಿದ್ದಾರೆ. ಪ್ರತಿ ಭಾನುವಾರ ಮತ್ತು ಗುರುವಾರ ಭಜನೆ ನಡೆಯುತ್ತಿದ್ದು, ಗದ್ದುಗೆಯ ಪೂಜೆಯನ್ನು ವಂಶಸ್ಥರು ನಡೆಸುತ್ತಿದ್ದಾರೆ.

೪. ೧೦. ಕುಡಿತಿನಿ ಶಂಕ್ರಪ್ಪತಾತ

ಕುಡಿತಿನಿಯ ನಾಗಲಿಂಗಪ್ಪ ಮತ್ತು ಸಿರಿಸಂಗಮ್ಮ ಎಂಬ ದಂಪತಿಗಳ ಮಗ ಶಂಕ್ರಪ್ಪತಾತನು. ಇವರು ಲಕ್ಷ್ಮಮ್ಮ ಎಂಬುವವರನ್ನು ಮದುವೆಯಾಗಿದ್ದು, ಇಬ್ಬರು ಮಕ್ಕಳನ್ನು ಪಡೆದಿದ್ದರು. ಶಂಕ್ರಪ್ಪತಾತನು ಐಕ್ಯರಾಗಿ ಎಷ್ಟೋ ವರ್ಷಗಳಾಗಿವೆ. ಕುಡಿತಿನಿಯ ಹೊರಭಾಗದಲ್ಲಿ ಅವರ ಮಠವೊಂದಿದ್ದು, ಯಾವಾಗಲೂ ಭಕ್ತರಿಂದಲೇ ತುಂಬಿರುತ್ತದೆ. ದೆವ್ವ-ಪೀಡೆ ಹಿಡಿದವರು, ಹಾವು-ಚೇಳು ಕಡಿಸಿಕೊಂಡವರು, ಕೈ-ಕಾಲು ನೋವಿನಿಂದ ನರಳುವವರು, ಮಕ್ಕಳಿಲ್ಲದವರು, ಅಶಕ್ತರು, ಬಡವರು ಹೀಗೆ ನಾನಾ ರೀತಿಯ ನೋವು-ನರಳಿಕೆಯಿಂದ ಬಳಲಿದವರು ಮಠಕ್ಕೆ ಆಗಮಿಸುತ್ತಿರುತ್ತಾರೆ. ಎಲ್ಲೆಲ್ಲಿಂದಲೋ ಬಂದವರು ಗುಣಮುಖರಾಗುವವರೆಗೂ ಮಠದಲ್ಲಿದ್ದು ತಮ್ಮ ಊರಿಗೆ ವಾಪಾಸ್ಸಾಗುತ್ತಾರೆ. ಹೀಗೆ ಅಪಾರ ಭಕ್ತಜನತೆಯನ್ನು ಹೊಂದಿರುವ ತಾತನವರ ಬಗ್ಗೆ ಯಾವುದೇ ಲಿಖಿತ ಮಾಹಿತಿಗಳಿಲ್ಲ. ಇತ್ತೀಚೆಗೆ ಬೈಲಹೊದ್ದಿಗೆರೆ ಶಿವಮೂರ್ತಿ ಶಾಸ್ತ್ರಿಗಳು ತಾತನವರನ್ನು ಕುರಿತು ಪುರಾಣವನ್ನು ರಚಿಸಿದ್ದು ಅದು ಪ್ರಕಟಣೆಯಾಗಬೇಕಿದೆ.

ಶಂಕ್ರಪ್ಪನ ಮನೆಯಲ್ಲಿ ಬಡತನ ವ್ಯವಸಾಯ ಮಾಡಿಕೊಂಡೇ ಜೀವನ ಸಾಗಿಸಬೇಕು. ಮನೆಯಲ್ಲಿ ಕೂತು ಉಣ್ಣುವವರ ಸಂಖ್ಯೆ ಹೆಚ್ಚು. ದುಡಿಯುವವರು ಕಡಿಮೆ. ಹೀಗಾಗಿ ಶಂಕ್ರಪ್ಪನು ಇರುವ ಜಮೀನಿನಲ್ಲಿ

ವ್ಯವಸಾಯ ಮಾಡಿಕೊಂಡು, ಜೊತೆಗೆ ಬಡಗಿ ಕೆಲಸವನ್ನು ಮಾಡುತ್ತಿದ್ದನು. ಆದರೂ ಸಂಸಾರದ ತೂಕ ಸಾಗಿಸಲಾಗಲಿಲ್ಲ. ಬಡತನದಿಂದ ಬೇಸರಗೊಂಡು, ಸಂಸಾರದ ಬಗ್ಗೆ ಜಿಗುಪ್ಸೆಬಂದು, ಮನಸ್ಸಿನಲ್ಲಿ ಅಶಾಂತಿ ತಂದುಕೊಳ್ಳುತ್ತಾನೆ. ಈ ಅತಂತ್ರದಿಂದ ಹೊರಬರಲು ವೈರಾಗ್ಯಮೂರ್ತಿಯಂತೆ ತಂದೆ-ತಾಯಿ, ಹೆಂಡತಿ-ಮಕ್ಕಳು ಎಲ್ಲರನ್ನೂ ಬಿಟ್ಟು, ನಿಜಶಾಂತಿಗಾಗಿ ಗುರುವನ್ನು ಅರಸುತ್ತಾ ಅಲೆದಾಡುತ್ತಿರುತ್ತಾನೆ. ಗುರುಸಂಪ್ರದಾಯದ ಲೇಬಗಿರಿಸ್ವಾಮಿಗಳಲ್ಲಿಗೆ ಬಂದು ಶಿಷ್ಯನಾಗಿ, ಗುರುಸೇವೆ ಮಾಡತೊಡಗುತ್ತಾನೆ.

ಗುರುವಿನಿಂದ ಗುರುಕೃಪೆ ಮತ್ತು ಗುರೂಪದೇಶ ಪಡೆದು ಆಧ್ಯಾತ್ಮದ ಹಾದಿ ಹಿಡಿದಿದ್ದಾರೆ. ಗುರುದೀಕ್ಷೆ ಪಡೆದಂದಿನಿಂದ ಸದಾ ಮೌನಿಯಾಗಿದ್ದು, ಸಕಲ ಜೀವರಾಶಿಗಳಲ್ಲಿ ದಯೆ, ಕರುಣೆ, ಅನುಕಂಪವುಳ್ಳವರಾಗಿದ್ದರು. ಸಕಲ ವರ್ಗದ ಜನರನ್ನು ಸಮಾನ ಗೌರವದಿಂದ ಕಾಣುತ್ತಿದ್ದು, ಎಲ್ಲರಿಂದಲೂ ಗೌರವ ಮನ್ನಣೆ ಪಡೆಯುತ್ತಿರುತ್ತಾರೆ. ತಮ್ಮನ್ನು ನಂಬಿ ಬರುತ್ತಿದ್ದ ಎಲ್ಲಾ ತರಹದ ರೋಗಿಗಳನ್ನು ಗುಣಪಡಿಸುತ್ತಾ, ಬಂದ ಭಕ್ತರ ಬಯಕೆಯನ್ನು ಈಡೇರಿಸುತ್ತಿದ್ದರು. ಇದರಿಂದ ಶಂಕ್ರಪ್ಪನ ಹೆಸರು ಸುತ್ತ-ಮುತ್ತಲಿನ ಗ್ರಾಮಗಳಿಗೆಲ್ಲಾ ಹರಡಿ, ನಿತ್ಯ ಬರುವವರ ಸಂಖ್ಯೆ ಅಧಿಕವಾಗುತ್ತದೆ. ಬಂದವರು ಭಕ್ತಿ ಗೌರವದಿಂದ 'ತಾತ' ಎಂದು ಕರೆಯುತ್ತಿದ್ದರಿಂದ ಶಂಕ್ರಪ್ಪತಾತನೆಂದು ಪ್ರಸಿದ್ಧಿಯನ್ನು ಪಡೆದಿದ್ದಾರೆ.

ಒಮ್ಮೆ ಕುಡಿತಿನಿಯ ವೆಂಕಟೇಶ್ವರ ಗುಡಿಯಲ್ಲಿನ ಮೂರ್ತಿ ಶಿಥಿಲಗೊಂಡು ಪೂಜೆಗೆ ಯೋಗ್ಯವಾಗಿರುವುದಿಲ್ಲ. ಊರವರೆಲ್ಲಾ ಸೇರಿ ಹೊಸ ಮೂರ್ತಿಯನ್ನು ಹೊಸಪೇಟೆಯಲ್ಲಿ ಕೆತ್ತಿಸುತ್ತಾರೆ. ಈ ಸಮಯದಲ್ಲಿ ಜ್ಯೋತಿಷಿಯೊಬ್ಬ ಯಾರು ಮೂರ್ತಿಯನ್ನು ಹೊತ್ತುತಂದು, ಇಲ್ಲಿ ಪ್ರತಿಷ್ಠಾಪಿಸುತ್ತಾರೋ ಅವರು ಮೂರು ತಿಂಗಳೊಳಗಾಗಿ ಮರಣ ಹೊಂದುತ್ತಾರೆಂದು ಭವಿಷ್ಯ ನುಡಿದಿರುತ್ತಾರೆ. ಹೀಗಾಗಿ ಯಾರೂ ಮೂರ್ತಿಯನ್ನು ತರಲು ಮುಂದಾಗುವುದಿಲ್ಲ. ಶಂಕ್ರಪ್ಪತಾತನು ಮುಂದಾಗಿ ತಾವೊಬ್ಬರೇ ಹೊಸಪೇಟೆಗೆ ಹೋಗಿ, ಮೂರ್ತಿಯನ್ನು ತಂದು ಪ್ರತಿಷ್ಠಾಪಿಸಿದ್ದಾರೆ. ಜ್ಯೋತಿಷಿ ಹೇಳಿದ ಭವಿಷ್ಯವನ್ನು ಸುಳ್ಳಾಗಿಸಿದ ಮಹಾನುಭಾವನೆಂದು ತಾತನನ್ನು ಇಂದಿಗೂ ಕೊಂಡಾಡುತ್ತಾರೆ.

ಕೊಪ್ಪಳದ ಗವಿ ಸಿದ್ಧೇಶ್ವರನ ದರ್ಶನಕ್ಕೆಂದು ಹಲವು ಭಕ್ತರ ಜೊತೆಯಲ್ಲಿ ತಾತನವರು ಹೋಗಿರುತ್ತಾರೆ. ಆಗ ಶ್ರಾವಣಮಾಸವಾಗಿದ್ದರಿಂದ, ದೇವಸ್ಥಾನಕ್ಕೆ ಬಂದ ಭಕ್ತರೆಲ್ಲಾ ಸೇರಿ ರಾತ್ರಿ ಭಜನೆ ಮಾಡುತ್ತಿದ್ದರು. ಹೀಗಿರುವಾಗ ಜನರ ಮಧ್ಯದಲ್ಲಿ ಹಾವೊಂದು ಬರುತ್ತದೆ. ಜನರೆಲ್ಲಾ ಹೆದರಿ, ಗದ್ದಲವೆಬ್ಬಿಸಲು, ಆಗ ತಾತನವರು ಬಂದು ಹಾವನ್ನು ಹಿಡಿದು, ಅದರೊಡನೆ ಮಾತನಾಡುತ್ತಾ, ಹುತ್ತದಲ್ಲಿ ಬಿಟ್ಟಿದ್ದಾರೆ. ಹೀಗೆ ಮನುಷ್ಯರಷ್ಟೇ ಅಲ್ಲದೆ, ಜೀವಜಂತುಗಳಲ್ಲಿಯೂ ದಯೆ, ಕರುಣೆಯುಳ್ಳವರಾಗಿ, ಪ್ರತಿಯೊಂದು ಪ್ರಾಣಿಯಲ್ಲೂ ಅನುಕಂಪವುಳ್ಳವರಾಗಿದ್ದರೆಂದು ಭಕ್ತರು ತಿಳಿಸುತ್ತಾರೆ.

ಪ್ರತಿವರ್ಷ ಶಿವಾರಾತ್ರಿಯ ದಿನ ವಿರೂಪಾಕ್ಷೇಶ್ವರನ ದರ್ಶನಕ್ಕೆಂದು ಹಂಪಿಗೆ ಹೋಗುತ್ತಿದ್ದರು. ಹೋಗುವಾಗ ಮಾರ್ಗ ಮಧ್ಯದಲ್ಲಿನ ಭಕ್ತರ ಮನೆಗಳಲ್ಲಿ ದವಸ ಧಾನ್ಯಗಳನ್ನು ಸಂಗ್ರಹಿಸಿಕೊಂಡು ಹೋಗುತ್ತಿದ್ದರು. ಹೀಗೆ ಸಂಗ್ರಹಿಸಿದ ದವಸ-ಧಾನ್ಯದಿಂದ ದೇವಸ್ಥಾನದಲ್ಲಿ ದಾಸೋಹ ಮಾಡಿ, ಉಳಿದ ಆಹಾರವನ್ನು ಬಡವರಿಗೆ ದಾನಮಾಡಿ ಬರುತ್ತಿದ್ದರು. ತಾತನವರು ಪ್ರಾರಂಭಿಸಿದ ಈ ಪದ್ಧತಿ ಈಗಲೂ

ಮುಂದುವರೆಯುತ್ತಿದ್ದು, ಭಕ್ತರು ಈ ಕಾರ್ಯ ನೆರವೇರಿಸುತ್ತಿದ್ದಾರೆ. ಇಂತಹ ಸಮುದಾಯ ಕೆಲಸಗಳಿಂದ ತಾತನವರ ಹೆಸರು ದಿನದಿಂದ ದಿನಕ್ಕೆ ಸುತ್ತ-ಮುತ್ತಲಿನ ಗ್ರಾಮಗಳಿಗೆಲ್ಲಾ ಹರಡಿ, ಅವರ ದರ್ಶನಕ್ಕೆಂದು ಬರುವವರ ಸಂಖ್ಯೆ ಅಧಿಕವಾಗುತ್ತದೆ.

ಎಲ್ಲಿಯುಂ ಶಂಕ್ರಪ್ಪತಾತನ
ಸಲ್ಲಲಿತ ಗದ್ದುಗೆಯ ಮಹಿಮೆಯ
ದೆಲ್ಲಿಯುಂ ಕುಡಿತಿನಿಯ ಕ್ಷೇತ್ರದ ಮಾತೆ ಪಸರಿಸಿತು ।
ಬಲ್ಲ ಜನರಹುದೆಂಬವೊಲು ಮ
ತೆಲ್ಲೆಲಿಯುಂ ಸದ್ಭಕ್ತಿ ತಿಂತಿಣಿ
ನಿಲ್ಲದೈತರತಿತ್ತು ಕುಡಿತಿನಿ ಕುಡಿತಿನಿ ಎನುತಾ ॥

ತಾತನವರ ಮಹಿಮೆ ಕೇಳಿ ಕುಡಿತಿನಿ ಗ್ರಾಮಕ್ಕೆ ಬರುವ ಭಕ್ತರ ಅನುಕೂಲಕ್ಕಾಗಿ ಆಗಿನ ಮದ್ರಾಸ್ ಸರ್ಕಾರದಿಂದ ಅನುಮತಿಯನ್ನು ಪಡೆದು, ಗುಂತಕಲ್ಲಿನಿಂದ ಹೊಸಪೇಟೆಗೆ ಪ್ಯಾಸೆಂಜರ್ ರೈಲೊಂದನ್ನು ಬಿಡಿಸಿದ್ದರಂತೆ. ಆ ರೈಲು ಶಂಕ್ರಪ್ಪತಾತನ ರೈಲೆಂದೇ ಜನಪ್ರಿಯವಾಗಿತ್ತೆಂದು ಭಕ್ತರು ಹೇಳುತ್ತಾರೆ.

ಬಡತನವ ಹರಿಸೆಂದೂ ಸಂಪದ
ವೊಡನೆ ಕೃಪೆ ಮಾಡೆಂದು ಬಳಲಿಪ
ಜಡಮತಿಯ ಕಳೆಯೆಂದು ತನುಜರ ಬಿಡದೆ ಕೊಡು ಎಂದೂ ।
ಪೊಡವಿಯೊಳು ಮಳೆ ಬೆಳೆಗಳನು ಸುಖ
ಸಡಗರವ ಕೊಡು ಎಂದು ಮಡದಿಗೆ
ಬಡಿದ ಭೂತವ ಬಿಡಿಸಿ ಕಳುಹೆಂದೆನುತ ಬೇಳ್ಪವರಿಂ ॥

ಹಲವು ಬಯಕೆಗಳನ್ನು, ಎಡರು ತೊಡರುಗಳನ್ನು ಹೊತ್ತು ಬಂದ ಭಕ್ತರುಗಳಿಗೆ ಉಳಿದುಕೊಳ್ಳಲು ಮಠದಲ್ಲಿ ವ್ಯವಸ್ಥೆಯಿದೆ. ಮಠದ ಸಮಿತಿಯವರು ಸಾರ್ವಜನಿಕ ಸಮಾರಂಭಕ್ಕೆಂದು ವಿಶಾಲವಾದ ಮಂಟಪ, ಸಮುದಾಯ ಭವನ, ಪುರಾಣ ಭವನಗಳನ್ನು ಕಟ್ಟಿಸಿದ್ದಾರೆ. ತಾತನವರ ಭವ್ಯ ಗದ್ದುಗೆ ನಿರ್ಮಾಣ ಮಾಡಿದ್ದು ನಿತ್ಯ ಪೂಜಾ ಕಾರ್ಯಗಳು ಸರಾಗವಾಗಿ ನಡೆಯುವಂತೆ ವ್ಯವಸ್ಥೆ ಮಾಡಿದ್ದಾರೆ.

ಬಿಡದೆ ಶನಿವಾಸರದಿ ರವಿ ಶನಿ
ಸಡಗರದಿ ಜೊತೆಗೂಡಿ ಮೂಡಲ
ದುದಯಿಸುವ ದಿನದಂದು ಭಕ್ತಿಯ ನೇಮದಲಿ ಜನರೂ ।
ಒಡನೆ ತಾವೈತಂದು ಶಂಕ್ರಪ
ನಡಿಗಳನು ಸ್ಮರಿಸುತಲಿ ಬಂದವ
ರೊಡನೆ ಭಜನೆಯನೆಸಗಿ ಪೋಪರು ರಾತ್ರಿಯನು ಕಳೆದು ॥[೯೮]

ಶನಿವಾರದಂದು ವಿಶೇಷ ಪೂಜಾಕಾರ್ಯಗಳು ನಡೆಯುತ್ತಿದ್ದು, ಎಲ್ಲೆಲ್ಲಿಂದಲೋ ಬಂದ ಭಕ್ತರು, ಅಂದು ಮಠದಲ್ಲಿ ನಡೆಯುವ ಆಚರಣೆಗಳಲ್ಲಿ ಭಾಗಿಯಾಗುತ್ತಾರೆ. ರಾತ್ರಿಯಲ್ಲಿ ನಡೆಯುವ ಭಜನೆಯಲ್ಲಿ, ಪಾಲ್ಗೊಂಡು, ಮಾರನೆಯ ದಿನ ತಮ್ಮ ಊರಿಗೆ ಮರಳುತ್ತಾರೆ. ಹರಕೆ ಹೊತ್ತವರು ಕೆಲ ರಾತ್ರಿಗಳು ಮಠದಲ್ಲೇ ಮಲಗುತ್ತಾರೆ. ರೋಗಿಗಳು, ದೆವ್ವ ಪೀಡೆ ಹಿಡಿದವರು ಸಂಪೂರ್ಣಗುಣಮುಖರಾಗುವವರೆಗೂ ಮಠದಲ್ಲಿ ಉಳಿಯುತ್ತಾರೆ. ಮಠದ ಸೇವೆ, ಭಜನೆ ಮಾಡುತ್ತಾ ತಮಗಾಗಿರುವ ನೋವನ್ನು ಮರೆಯುತ್ತಾರೆ. ತಪ್ಪು ಒಪ್ಪುಗಳನ್ನು ತಾತನವರ ಮೇಲೆಯೇ ಹಾಕಿ ದಿನನಿತ್ಯದ ಜೀವನ ಸಾಗಿಸುತ್ತಿದ್ದಾರೆ.

ಅಪಾರ ಭಕ್ತಜನತೆಯನ್ನು ಹೊಂದಿರುವ ಶಂಕ್ರಪ್ಪತಾತನು ಊರೂರು ಅಲೆದಾಡುತ್ತಿದ್ದರು. ಅದರ ನೆನಪಿಗಾಗಿ ಕೆಲಗ್ರಾಮಗಳಲ್ಲಿ ಅವರ ಮಠಗಳಿದ್ದು, ಅಲ್ಲಿ ಜ್ಞಾಪಕ ಸಮಾಧಿಗಳನ್ನು ಮಾಡಿಕೊಂಡು ಪೂಜಿಸುತ್ತಿದ್ದಾರೆ. ಅಲ್ಲೀಪುರ, ಬುಕ್ಕಸಾಗರ, ಕುಮತಿ ಮುಂತಾದ ಸ್ಥಳಗಳಲ್ಲಿ ತಾತನವರ ಮಠಗಳಿರುವುದನ್ನು ಕಾಣಬಹುದು.

ಶ್ರಾವಣಮಾಸದ ಕೊನೆ ಶನಿವಾರ ತಾತನವರ ಉತ್ಸವವು ಅದ್ದೂರಿಯಾಗಿ ನಡೆಯುತ್ತದೆ. ಉತ್ಸವಕ್ಕೆ ಎಲ್ಲಾ ವರ್ಗದ ಜನ ಜಾತಿ-ಲಿಂಗ ತಾರತಮ್ಯವನ್ನು ಮರೆತು ಪಾಲ್ಗೊಳ್ಳುತ್ತಾರೆ.

೪. ೧೧. ಕೊಟಗಿನಹಾಳು ಬಸಪ್ಪತಾತ

ಎಲ್ಲೋ ಹುಟ್ಟಿ, ಇನ್ನೆಲ್ಲಿಯೋ ಯೋಗ ಸಾಧನೆ ಮಾಡಿ, ಅಂತಿಮವಾಗಿ ಕೊಟಗಿನಹಾಳಿನಲ್ಲಿ ನೆಲೆ ನಿಂತು ಅಪಾರ ಭಕ್ತಜನತೆಯನ್ನು ಹೊಂದಿರುವ ಬಸಪ್ಪತಾತನ ಜೀವನ ಚರಿತ್ರೆ ಅಸ್ಪಷ್ಟವಾಗಿದೆ.

ಧಾರವಾಡ ಜಿಲ್ಲೆ ನವಲುಗುಂದ ತಾಲೂಕಿನ ಪಡೆಸೂರು ಬಸಪ್ಪತಾತನು ಹುಟ್ಟಿದ ಸ್ಥಳ. ಲಿಂಗಾಯತ ಮನೆತನದ ಸಂಪ್ರದಾಯಸ್ಥ ಕುಟುಂಬದ ನವಡಿಗೂಳಪ್ಪ ಮತ್ತು ನಂಕವ್ವ, ಇವರ ತಂದೆ ತಾಯಿಗಳು. ಸಂಸಾರವಂದಿಗನಾಗಿದ್ದ ಬಸಪ್ಪತಾತನಿಗೆ ಗುರುಪಾದಪ್ಪ, ದ್ಯಾಮವ್ವ ಎಂಬಿಬ್ಬರು ಮಕ್ಕಳಿದ್ದರು. ಅಲ್ಪ ಸ್ವಲ್ಪ ವಿದ್ಯಾಭ್ಯಾಸ ಮಾಡಿದ್ದು, ಜಮೀನುದಾರರ ಕುಟುಂಬವಾಗಿದ್ದರಿಂದ ವ್ಯವಸಾಯ ಮಾಡುತ್ತಾ ಜೀವನ ಸಾಗಿಸುತ್ತಿರುತ್ತಾನೆ. ಅವರದು ಅವಿಭಕ್ತ ಕುಟುಂಬವಾಗಿದ್ದು ಚಿಕ್ಕಪ್ಪ, ದೊಡ್ಡಪ್ಪನವರ ಸಂಸಾರವು ಒಂದೇ ಮನೆಯಲ್ಲಿ ವಾಸವಾಗಿದ್ದವು. ಸುಮಾರು ಮೂವತ್ತೈದು ವರ್ಷದವನಿದ್ದಾಗ ಮನೆಯಲ್ಲಿ ಒಂದು ಘಟನೆ ನಡೆಯುತ್ತದೆ. ಯಾವುದೋ ಒಂದು ಸಣ್ಣ ವಿಷಯಕ್ಕೆ ತಂದೆ ಜಗಳವಾಡಿ, ತಾಯಿಯನ್ನು ಹೊಡೆದು ಮನೆಯಿಂದ ಹೊರ ಹಾಕಿರುತ್ತಾರೆ. ಇದರಿಂದ ತಂದೆ ಮೇಲೆ ಬೇಸರವಾಗಿ ತಾಯಿ, ತನ್ನ ಹೆಂಡತಿ, ಮಕ್ಕಳೊಂದಿಗೆ ಬೇರೆ ಜೀವನ ಸಾಗಿಸುತ್ತಾನೆ. ಒಮ್ಮೆ ಹೊಲದಲ್ಲಿ ಕೆಲಸ ಮಾಡುತ್ತಿದ್ದಾಗ ಕೆಲವು ಸಂಬಂಧಿಕರ, ಹಿತೈಷಿಗಳ ಮಾತನ್ನು ಕೇಳಿ, ತಂದೆಯ ಹತ್ತಿರ ಜಮೀನಿನಲ್ಲಿ ಭಾಗ ಕೇಳುತ್ತಾನೆ. ಕುಪಿತರಾದ ತಂದೆ, ಚಿಕ್ಕಪ್ಪ, ದೊಡ್ಡಪ್ಪ, ಈತನ ಮೇಲೆಯೇ ಪೊಲೀಸಿನವರಿಗೆ ದೂರು ಸಲ್ಲಿಸಿ, ಊರಿಗೆ ಪೋಲಿಸಿನವರನ್ನು ಕರೆಸುತ್ತಾರೆ. ಒಬ್ಬರಿಗೊಬ್ಬರಿಗೆ ವಾದ-ವಿವಾದವಾಗಿ ಹೊಲದ ವಿಷಯ ಕೋರ್ಟಿಗೆ ಹೋಗುತ್ತದೆ. ತಂದೆಯಿಂದಲೇ ಇಂಥ ವಿಚಿತ್ರ ಘಟನೆಗಳು ಗತಿಸಿದ್ದರಿಂದ ಮಾನಸಿಕವಾಗಿ ಜಿಗುಪ್ಸೆ ತಾಳಿದ ಬಸಪ್ಪನು ನಿದ್ದೆ,

ಊಟವಿಲ್ಲ, ಅಶಾಂತಿ, ಅತೃಪ್ತಿಯಿಂದ ಯಾವುದೂ ಬೇಡವೆನಿಸಿ ಯಾರಿಗೂ ಹೇಳದಂತೆ ತಾಯಿ, ಹೆಂಡತಿ, ೨ ವರ್ಷದ ಮಗ, ೬ ತಿಂಗಳ ಮಗಳನ್ನು ಬಿಟ್ಟು ವಿರಕ್ತನಾಗಿ ಊರೂರು ಅಲೆಯುತ್ತಾ ಮಲೆನಾಡಿನ ಪ್ರಾಂತ್ಯಕ್ಕೆ ಬಂದಿರುತ್ತಾರೆ. ಮನೆ ಬಿಡುವಾಗ ಇದ್ದ ಎರಡು ವರ್ಷದ ಮಗ ಗುರುಪಾದಪ್ಪನೇ ಈಗ ಕೊಟಗಿನ ಹಾಳಿನ ಮಠದಲ್ಲಿ ನಿತ್ಯ ಪೂಜಾ ಕಾರ್ಯಗಳನ್ನು ನಡೆಸುತ್ತಿದ್ದಾರೆ.

ಮನೆಬಿಟ್ಟ ಬಸಪ್ಪನು ಮಲೆನಾಡಿನ ಉಳವಿ, ಸಾಗರ, ಮಳಲಗದ್ದೆಯ ದಂಡಕಾರಣ್ಯದಲ್ಲಿದ್ದು ಯೋಗಸಾಧನೆ ಮಾಡಿದ್ದಾರೆ. ಅನ್ನ, ನೀರುಗಳಿಲ್ಲದೆ, ನಿದ್ರೆ, ಬಾಯಾರಿಕೆಗಳನ್ನು ತೊರೆದು, ಚಳಿ, ಮಳೆಯೆನ್ನದೆ ಸುಮಾರು ಹನ್ನೆರಡು ವರ್ಷಗಳ ಕಾಲ ನಿರ್ಜನ ಪ್ರದೇಶದಲ್ಲಿದ್ದು ಹಠಯೋಗವನ್ನು ಸಾಧಿಸಿದ್ದಾರೆ. ಕೆಲ ದಿನಗಳು ನೀರಿನಲ್ಲಿಯೇ ಇದ್ದು ಧ್ಯಾನ ಮಾಡಿದ್ದಾರೆ. ಆಗ ಅವರು ಸುಮಾರು ಹದಿನಾಲ್ಕು ಮಾರಿನ ಜಪಮಾಲೆ ಯನ್ನು ಉಪಯೋಗಿಸುತ್ತಿದ್ದರೆಂದು, ಕೊಟಗಿನಹಾಳಿಗೆ ಬಂದಾಗ ಆ ಮಾಲೆ ಅವರ ಬಳಿ ಇತ್ತೆಂದು ಅವರ ಮಗ ಗುರುಪಾದಪ್ಪನವರು ತಿಳಿಸುತ್ತಾರೆ.

ಮಳಲಗದ್ದೆಯ ದಂಡಕಾರಣ್ಯದಲ್ಲಿದ್ದಾಗ ಅಲ್ಲಿನ ವೀರಭದ್ರೇಶ್ವರ ದೇವಸ್ಥಾನದಲ್ಲಿದ್ದು, ಮೈ ಮೇಲೆ ಬಟ್ಟೆಯಿಲ್ಲದೆ, ಅನ್ನ ನೀರಿಲ್ಲದೆ ವಿಚಿತ್ರವಾಗಿದ್ದಾಗ, ಆ ಊರಿನ ವೀರಭದ್ರೇಗೌಡನು ಇವರ ಸೇವೆ ಮಾಡಿ ದ್ದಾನೆ. ಮನೆ ಬಿಟ್ಟು ಸುಮಾರು ಹನ್ನೆರಡು ವರ್ಷದ ನಂತರ ಭಕ್ತ ವೀರಭದ್ರೇಗೌಡನ ಜೊತೆಯಲ್ಲಿ ಹುಬ್ಬಳ್ಳಿಯ ಸಿದ್ಧಾರೂಢರ ಮಠಕ್ಕೆ ಬರುತ್ತಾರೆ. ಅಲ್ಲಿದ್ದ ಕೆಲವರು ಇವರನ್ನು ಗುರ್ತಿಸಿ ಊರಿಗೆ ಕರೆಯುತ್ತಾರೆ. ಲೋಕ ಬಂಧನವೇ ತನಗೆ ಬೇಡವೆಂದು ತಿರಿಸ್ಕರಿಸಿದ್ದ ಇವರು ಮತ್ತೆ ಊರಿನವರಿಂದ ದೂರವಾಗಲು ಮಲೆನಾಡಿನ ದಂಡಕಾರಣ್ಯಕ್ಕೆ ಹಿಂತಿರುಗಿದ್ದಾರೆ.

ಕೆಲ ವರ್ಷಗಳ ನಂತರ ಬಸವಕಲ್ಯಾಣಕ್ಕೆ ಅಲ್ಲಿನ ಕಾಲಜ್ಞಾನವನ್ನು ನೋಡಲು ಬರುತ್ತಾರೆ. ಅಲ್ಲಿನ ಪರುಷಕಟ್ಟೆ ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ ಕುಳಿತಿದ್ದಾಗ, ಮಾಯಾ ಕೋಲಾಹಾಲ್ ಶ್ರೀ ಕರ್ಪೂರಸ್ವಾಮಿಗಳು ಅಲ್ಲಮಪ್ರಭು ರೂಪದಲ್ಲಿ ಇವರಿಗೆ ದರ್ಶನ ನೀಡಿ, ಪೂರ್ವದಲ್ಲಿ ನಮ್ಮ ಸ್ಥಾನವಿದೆ. ಅಲ್ಲಿ ಭಕ್ತರಿಗೆ ಸಂದೇಶ ನೀಡೆಂದು ಹರಸಿ, ಅದೃಶ್ಯರಾಗಿದ್ದಾರೆ. ಆ ಹೇಳಿಕೆಯಂತೆ ಹೊಸಪೇಟೆಗೆ ಬರುತ್ತಾರೆ. ಅಲ್ಲಿ ಕಟ್ಟೆ ಯೊಂದರ ಮೇಲೆ ಕುಳಿತಿದ್ದಾಗ ಅಪರಿಚಿತ ಮುಸ್ಲಿಂ ವ್ಯಕ್ತಿಯೊಬ್ಬರು ಬಂದು ಅವರನ್ನು ಜೊತೆಯಲ್ಲಿ ಕೊಟಗಿನ ಹಾಳಿಗೆ ಕರೆತಂದಿದ್ದಾರೆ. ಗ್ರಾಮಕ್ಕೆ ಬಂದ ತಾತನು ಈಶ್ವರ ದೇವಸ್ಥಾನದಲ್ಲಿ ಕುಳಿತಿದ್ದಾಗ, ಊರಿನ ಕೆಲ ಹುಡುಗರು ಈತನಾರೊ ಹುಚ್ಚನಿರಬೇಕೆಂದು ಕಲ್ಲು, ಮಣ್ಣನ್ನು ಮೈ ಮೇಲೆ ಎಸೆಯುತ್ತಾರೆ. ಕೋಲಿನಿಂದ ಹೊಡೆಯುತ್ತಾರೆ. ಅವರ ಕಿರುಕುಳ ಅತಿಯಾದಾಗ, ಮತ್ತೆ ಮಲೆನಾಡಿನ ದಂಡಕಾರಣ್ಯಕ್ಕೆ ಹೋಗುತ್ತಾರೆ. ಅಲ್ಲಿನ ವೀರಭದ್ರೇಶ್ವರ ದೇವಸ್ಥಾನದಲ್ಲಿ ಕುಳಿತಿದ್ದಾಗ ಬಸವಕಲ್ಯಾಣದಲ್ಲಿ ಕಂಡ ಸ್ವಾಮಿಗಳೇ ಮತ್ತೆ ದರ್ಶನಕೊಟ್ಟು ಒತ್ತಾಯ ಮಾಡಿ ಕೊಟಗಿನಹಾಳು ಗ್ರಾಮಕ್ಕೆ ಕರೆತಂದಿರುತ್ತಾರೆ. ಈ ಎಲ್ಲಾ ವಿಷಯವನ್ನು ಬಸಪ್ಪತಾತನೇ ತಿಳಿಸಿದರೆಂದು ಇಲ್ಲಿನ ಭಕ್ತರು ಹೇಳುತ್ತಾರೆ. ಇಲ್ಲಿ ನೆಲೆನಿಂತ ಮೇಲೆ ಜನರೆಲ್ಲ ಇವರನ್ನು 'ತಾತ' ಎಂದು ಕರೆಯಲಾರಂಭಿಸಿದ್ದಾರೆ.

ಕೊಟಗಿನಹಾಳು ಗ್ರಾಮದಲ್ಲಿ ನೆಲೆನಿಂತು, ಊರ ಜನರ ವಿಶ್ವಾಸ ಗಳಿಸಿ ಗ್ರಾಮದ ಪೂರ್ವದಿಕ್ಕಿನ ಹೊಲದಲ್ಲಿದ್ದ ಪೊದೆಯನ್ನು ಅಗಿಸುತ್ತಾರೆ. ಆ ಜಾಗದಲ್ಲಿ ಸುಮಾರು ೮೦೦ ವರ್ಷಗಳ ಹಿಂದೆ ಅರಬ್ ದೇಶದಿಂದ ಬಂದ ಸಂತ ಕಪೂರಸ್ವಾಮಿಗಳು ಮತ್ತು ಅವರ ಶಿಷ್ಯ ವಿರೂಪಾಕ್ಷಸ್ವಾಮಿಗಳು ಇದ್ದ ಸ್ಥಳವೆಂದು, ಇಲ್ಲೆ ಅವರು ಸಮಾಧಿಯಾಗಿದ್ದರೆಂದು ತಿಳಿಯುತ್ತದೆ. ನೆಲವನ್ನು ಅಗಿಯುತ್ತಿದ್ದಾಗ ತಾಯಿತ, ಕಲ್ಲು, ಯೋಗದಂಡ, ಕಮಂಡಲ, ಎರಡು ಶಂಖು, ಒಂದು ಕೊಡಲಿ, ಕಬ್ಬಿಣದ ಬಳೆ, ಬೆತ್ತ, ಕಬ್ಬಿಣದ ಸಲಾಕೆಗಳು ಸಿಕ್ಕಿವೆ. ಒಳಗಡೆ ಒಂದು ಹಾಸು ಬಂಡೆಯ ಕೆಳಗೆ ಎರಡು ದೀಪಗಳು ದೊರೆತಿವೆ. ಈ ಎಲ್ಲಾ ಸಾಮಾನುಗಳು ಇಂದು ಮಠದಲ್ಲಿದ್ದು ನಿತ್ಯ ಅವುಗಳನ್ನು ಪೂಜಿಸುತ್ತಿದ್ದಾರೆ. ಆ ಸ್ಥಳದಲ್ಲೇ ಅವರ ಸಮಾಧಿಗಳನ್ನು ನಿರ್ಮಾಣ ಮಾಡಿ, ದತ್ತ ಪೀಠದಂತೆ ಗದ್ದುಗೆ ನಿರ್ಮಾಣ ಮಾಡಿದ್ದಾರೆ. ಹಿಂದೆ ಬಸವಕಲ್ಯಾಣದಲ್ಲಿ ನನಗೆ ದರ್ಶನಕೊಟ್ಟು, ಇಲ್ಲಿಗೆ ಕರೆಸಿದ ಮಹಾತ್ಮ ಇವರೇ ಎಂದು, ಸಮಾಧಿಯಾಗಿದ್ದ ಕಪೂರಸ್ವಾಮಿಗಳನ್ನೇ ಗುರು ಎಂದು ಶಿಷ್ಯನಾಗಿ ಮಠದ ಸೇವೆ ಮಾಡತೊಡಗಿದ್ದಾರೆ. ಗದ್ದುಗೆ ನಿರ್ಮಾಣವಾದಂದಿನಿಂದ ಆರಾಧನೆ, ಪೂಜೆಗಳು ನಡೆಯುತಲಿದ್ದು, ಗುರು ಗದ್ದುಗೆಯ ಪಕ್ಕದಲ್ಲೆ ಗುಡಿಸಲು ಕಟ್ಟಿಕೊಂಡ ಬಸಪ್ಪತಾತನು ಅಲ್ಲಿಯೇ ಕೊನೆಯವರೆಗೂ ನೆಲೆಸಿದ್ದಾರೆ. ಗುರುವಿನ ನೆನಪಿಗಾಗಿ ಅವರ ಪುಣ್ಯತಿಥಿಯಂದು ಚೈತ್ರಮಾಸದ ಹುಣ್ಣಿಮೆಯಾದ ಹನ್ನೊಂದನೆ ದಿನಕ್ಕೆ ಕಪೂರಸ್ವಾಮಿಗಳ ಪುಣ್ಯಾರಾಧನೆ ನಡೆಸಿದ್ದಾರೆ. ಮಠಕ್ಕೆ ಶ್ರೀ ಗುರು ನಿಜಾನಂದ ಶಿವಯೋಗಿಗಳ ಮಠವೆಂದು ಹೆಸರಿಟ್ಟುಕೊಂಡು, ತಮ್ಮಲ್ಲಿಗೆ ಬರುವ ಭಕ್ತ ಜನತೆಯ ಕಷ್ಟ-ನಷ್ಟಗಳನ್ನು ಪರಿಹರಿಸತೊಡಗಿದ್ದಾರೆ. ಹೀಗೆ ತಾತನು ಕೋಮು ಸೌಹಾರ್ದತೆಗೆ ಮಾದರಿಯಾಗಿ, ಜಾತಿ-ಲಿಂಗ ತಾರತಮ್ಯವಿಲ್ಲದೆ ಸರ್ವರನ್ನು ಸಮಾನವಾಗಿ ಕಂಡಿರುವುದು ತಿಳಿಯುತ್ತದೆ.

ಮಠದಲ್ಲಿ ತಾತನು ಜೀವಬ್ರಹ್ಮೈಕ್ಯ ರಾಜಯೋಗ ಸಾರಾಮೃತ, ಜ್ಞಾನಸಿಂಧು, ವೇದಾಂತ ಕುಸುಮಾಂಜಲಿ, ರುದ್ರಾಧ್ಯಾಯ, ನಮಕ-ಚಮಕ, ಬಸವಣ್ಣನ ವಚನಗಳು, ದೇವಿಪುರಾಣ, ಶಿಶುನಾಳ ಶರೀಫರ ಜೀವನ ಚರಿತ್ರೆ, ಮೋಹಿನಿ, ಭೈರವಿ, ಚಂಡಿ, ಚೌಡಿದೇವಿ, ರೇಣುಕಾ ದೇವಿಯ ಸ್ತೋತ್ರಗಳನ್ನು ಅಧ್ಯಯನ ಮಾಡಿದ್ದಾರೆ. ಈ ಎಲ್ಲಾ ಪುಸ್ತಕಗಳು ಮಠದಲ್ಲಿದ್ದು, ದೇವಿಸ್ತೋತ್ರಗಳನ್ನು ಒಂದು ಹಾಳೆಯಲ್ಲಿ ಬರೆದಿಟ್ಟಿದ್ದಾರೆ. ಜೊತೆಗೆ ರೋಗಿಗಳಿಗೆ ಕೊಡುತ್ತಿದ್ದ ಔಷಧಿಗಳ ಪಟ್ಟಿಯನ್ನು ತಾತನವರು ಬರೆದಿಟ್ಟಿರುವುದನ್ನು ಕಾಣಬಹುದು.

ತಾತನವರು ಮಠದಲ್ಲಿದ್ದಾಗ ಊಟ ಮಾಡಿದ್ದನ್ನು , ಸ್ನಾನ ಮಾಡಿದ್ದನ್ನು ಯಾರೂ ನೋಡಿಲ್ಲವಂತೆ. ಮುಖ್ಯವಾಗಿ ಸ್ನಾನವನ್ನು ವರ್ಷದಲ್ಲಿ ಒಂದು ಸಾರಿ ಅದು ಸಂಕ್ರಾಂತಿಯ ದಿನದಂದು ಮಾತ್ರ ಮಾಡುತ್ತಿದ್ದರು. ಆ ದಿನದಂದು ತನ್ನ ಭಕ್ತರ ಜೊತೆಯಲ್ಲಿ ಹಂಪಿಯ ಪುರಂದರ ಮಠಕ್ಕೆ ಹೋಗಿ, ಅಲ್ಲಿನ ಹೊಳೆಯಲ್ಲಿ ಸ್ನಾನ ಮಾಡಿ ಬರುತ್ತಿದ್ದರು. ಮತ್ತೆ ಮುಂದಿನ ವರ್ಷ ಇದೇ ದಿನದಂದು ಸ್ನಾನ. ಈ ಪದ್ಧತಿ ತಾತನಿರುವವರೆಗೂ ನಡೆದಿದ್ದು, ಈಗಲೂ ಮಠದವರು ಈ ಪದ್ಧತಿಯನ್ನು ಮುಂದುವರೆಸಿದ್ದಾರೆ. ಹಲವಾರು ಭಕ್ತರು ಸಂಕ್ರಾತಿಯ ದಿನದಂದು ಹಂಪಿಹೊಳೆಗೆ ಹೋಗಿ ಸ್ನಾನಮಾಡಿ ಬರುತ್ತಾರೆಂದು ಭಕ್ತರು ತಿಳಿಸುತ್ತಾರೆ..

ಭಕ್ತರು ತಮ್ಮ ಮನೆಗಳಿಗೆ ಕರೆದರೆ, ತನಗಿಷ್ಟ ಬಂದವರ ಮನೆಗಳಿಗೆ ಮಾತ್ರ ಹೋಗುತ್ತಿದ್ದು, ಜೀರಿಗೆ ಬೆರೆಸಿ ಕೈಯಿಂದ ತಟ್ಟಿದ ಜೋಳದ ರೊಟ್ಟಿಯನ್ನು ತಿನ್ನುತ್ತಿದ್ದರಂತೆ. ತಮ್ಮಲ್ಲಿ ಬರುವ ಎಷ್ಟೋ ರೋಗಿಗಳಿಗೆ

ಇದೇ ಸಿದ್ಧೌಷಧವೆಂದು ತಿನ್ನಲು ಹೇಳಿ ಅವರ ಖಾಯಿಲೆಗಳನ್ನು ಗುಣಪಡಿಸಿದ್ದಾರೆ. ಎಣ್ಣೆ ತಿಂದರೆ ಖಾಯಿಲೆ ಎಂದೇಳಿ ಎಣ್ಣೆ ತಿನ್ನುವುದನ್ನೇ ಎಷ್ಟೋ ಭಕ್ತರಿಂದ ಬಿಡಿಸಿದ್ದಾರೆ. ಹಾಗೆಯೆ ಋಣದ ಊಟವನ್ನು ಎಲ್ಲಿಯೂ ಮಾಡಬಾರದೆಂದು ಹೇಳುತ್ತಾ, ಊಟ ಮಾಡಿದರೆ ಅದರಿಂದ ಋಣಮುಕ್ತರಾಗಿರಬೇಕೆಂದು ಹೇಳಿದ್ದಾರೆ. ಇದರಿಂದಾಗಿ ತಾತನವರ ಹೆಸರು ದಿನದಿಂದ ದಿನಕ್ಕೆ ತುಂಬಾ ಪ್ರಸಿದ್ಧಿಯನ್ನು ಪಡೆದು ಅಪಾರ ಸಂಖ್ಯೆಯ ಭಕ್ತರು ನಿತ್ಯವು ಮಠಕ್ಕೆ ನಾನಾ ರೀತಿಯ ಸಮಸ್ಯೆಗಳನ್ನು ಹೊತ್ತು ಬರುತ್ತಿರುತ್ತಾರೆ. ಬಂದವರಿಗೆ ಅವರ ಮುಖವನ್ನು ನೋಡಿ, ನಿಮ್ಮ ಸಮಸ್ಯೆ ಇದೇ ಎಂದು ಹೇಳಿ ಅದಕ್ಕೆ ಪರಿಹಾರವನ್ನು ನೀಡಿದ್ದಾರೆ. ಎಲ್ಲೋ ಆಗುತ್ತಿರುವುದನ್ನು, ಎಂದೋ ಆಗಬಹುದಾದುದನ್ನು ಭವಿಷ್ಯದಂತೆ ಹೇಳುತ್ತಿದ್ದರು. ಮದುವೆ ಆಗುವುದು, ನೌಕರಿ ಸಿಗುವುದು, ಮಕ್ಕಳಾಗುವುದು, ಸಂಬಂಧ ಬೆಳೆಸುವುದು, ಹೆಣ್ಣು-ಗಂಡಿನ ಗುಣಲಕ್ಷಣ ಹೇಳುವುದು, ಮನೆ ಕಟ್ಟುವುದು, ವ್ಯಾಪಾರ ಮಾಡುವುದು, ವಿದ್ಯಾಭ್ಯಾಸ ಹೀಗೆ ಪ್ರತಿಯೊಂದು ವಿಷಯವನ್ನು, ಅದರ ಸಾಧಕ-ಬಾಧಕಗಳನ್ನು ತಿಳಿಸುತ್ತಿದ್ದರು. ಅವರು ಹೇಳುತ್ತಿದ್ದ ಪ್ರತಿಯೊಂದು ವಿಷಯವೂ, ಸತ್ಯವಾಗಿ ಕಂಡುಬಂದವೆಂದು ಅವರನ್ನು ನೋಡಿದ ಭಕ್ತರು ಹೇಳುತ್ತಾರೆ. ರೋಗಿಗಳು ಬಂದರೆ ಅದಕ್ಕೆ ಗಿಡಮೂಲಿಕೆ ಔಷಧಿ ಹೇಳುತ್ತಿದ್ದರು. ವೈದ್ಯರಿಂದ ಗುಣಪಡಿಸಲಾಗದ ಎಷ್ಟೋ ಖಾಯಿಲೆಗಳನ್ನು ಅವರು ಗುಣಪಡಿಸಿದ್ದಾರೆ. ಎಷ್ಟೋ ಜನ ವೈದ್ಯರೂ ಸಹ ತಾತನಲ್ಲಿ ಬಂದು ಔಷಧಕ್ಕೆ ಸಂಬಂಧಿಸಿದಂತೆ ಸಲಹೆಯನ್ನು ಕೇಳಿಕೊಂಡು ಹೋಗುತ್ತಿದ್ದರು. ಯಾವ ಔಷಧಿ ನೀಡಿದರೂ ಯಾರಿಂದಲೂ ಹಣ ಪಡೆಯದೆ, ನಿಸ್ವಾರ್ಥ ಮನೋಭಾವದಿಂದ ಭಕ್ತಸಮುದಾಯದ ಸಮಸ್ಯೆ ಪರಿಹರಿಸಿರುವುದು ತಿಳಿಯುತ್ತದೆ.

ಹೊಸಪೇಟೆಯಲ್ಲಿದ್ದ ರಾಜಸ್ಥಾನದ ನಿವಾಸಿ ತಮ್ಮ ಮಗನಿಗೆ ಬಂದ ಖಾಯಿಲೆಯನ್ನು ಯಾವ ವೈದ್ಯರೂ ಗುಣಪಡಿಸದಾದಾಗ, ತಾತನವರ ಮಹಿಮೆ ಕೇಳಿ, ಅವರಲ್ಲಿಗೆ ಕರೆತಂದಿದ್ದಾರೆ. ರೋಗಿಯನ್ನು ನೋಡಿದ ತಾತನು ಸಕ್ಕರೆ ಮತ್ತು ನೀರನ್ನು ಬೆರೆಸಿ, ದಿನಾಲು ಕುಡಿಸಬೇಕೆಂದು ಹೇಳಿದ್ದಾರೆ. ಅದರಂತೆ ಅವರು ಮಾಡಿದ್ದರಿಂದ ಹುಡುಗ ಸಂಪೂರ್ಣ ಗುಣ ಮುಖನಾಗಿದ್ದಾನೆ. ಅದರ ಕೃತಜ್ಞತೆಗೆ ತಾತನನ್ನು ಭಕ್ತರ ಜೊತೆಯಲ್ಲಿ ಒಮ್ಮೆ ರಾಜಸ್ಥಾನಕ್ಕೆ ಕರೆದುಕೊಂಡು ಹೋಗಿ ಬಂದಿದ್ದಾರೆ.

ಕಪ್ಪಗಲ್ಲಿನ ಬಸಮ್ಮ ಎಂಬುವವರ ಮಗನಿಗೆ ಬಂದ ರೋಗ ಗುಣಪಡಿಸಿ, ಕೆಲದಿನಗಳು ಅವರ ಮನೆಯಲ್ಲಿಯೇ ವಾಸವಾಗಿದ್ದರೆಂದು ತಿಳಿಯುತ್ತದೆ. ಕಾಕಬಾಳಿನ ಎಮ್ಮಿಗನೂರು ಜಡೇತಾತನ ಮಠದಲ್ಲಿದ್ದ ಶಿವಲಿಂಗಪ್ಪತಾತನವರ ಜೊತೆಗಾರರಾಗಿದ್ದು, ಅವರ ಮನೆಯ ಕೆಲಸ ಕಾರ್ಯಗಳಲ್ಲಿ ಭಾಗಿಯಾಗಿದ್ದಾರೆ. ಬೈಲಹೊದ್ದಿಗೆರೆ ಶರಭಣ್ಣ ಎಂಬುವವರಿಗೆ ಬಂದಿದ್ದ ದೊಡ್ಡ ಬೇನೆಯನ್ನು, ಬೆಲ್ಲ, ಕಾಫಿ, ಟೀ, ಕುಡಿಯ ಬೇಡಿ, ಆ ರೋಗ ಗುಣವಾಗುತ್ತದೆ ಎಂದೇಳಿ ಅದರಂತೆ ಅವರು ನಡೆದಿದ್ದರಿಂದ ಆ ರೋಗ ಗುಣಮುಖವಾಗಿದೆ. ತಾತ ಹೇಳಿದ ವಿಷಯದಲ್ಲಿ ನಂಬಿಕೆಯಿಲ್ಲದಿದ್ದರೆ ಗುಣವೇ ಆಗುತ್ತಿರಲಿಲ್ಲವಂತೆ. ಬಂಡೆಟ್ಟಿಯ ಯರ್‍ರಮ್ಮನಿಗೆ ಮೈ, ಕೈಯಲ್ಲಾ ಹುಣ್ಣಾಗಿ ರಕ್ತ ಸೋರುತ್ತಿರುತ್ತದೆ. ತಾತನ ಮಹಿಮೆ ಕೇಳಿ ಮಠಕ್ಕೆ ಬರುತ್ತಾಳೆ. ಆಕೆಗೆ ''ಪಾದಗಟ್ಟೆ ಪೂಜೆ ಮಾಡಿ, ಐದು ಮಕ್ಕಳಿಗೆ ಸಕ್ಕರೆ ಹಂಚು ಗುಣವಾಗುತ್ತದೆ'' ಎಂದು ಹೇಳಿದ್ದಾರೆ. ಅದರಂತೆ ಆಕೆ ಪೂಜೆ ಮಾಡುವಾಗ ಯಾರೋ ಬೆನ್ನ ಮೇಲೆ ಹೊಡೆದಂತಾಗುತ್ತದೆ. ಅಂದಿನಿಂದಲೇ ಆಕೆಯ ರೋಗ ಗುಣವಾಗತೊಡಗಿರುವುದು ತಿಳಿಯುತ್ತದೆ. ಕಪ್ಪಗಲ್ಲಿನ ಮುಕ್ತಿಮುನಿ ಶಿವಾಚಾರ್ಯ ಎಂಬುವವರಿಗೆ

ಮನೆಯಲ್ಲಿ ಒಮ್ಮೆ ಊಟ ಮಾಡುವಾಗ, ಈ ಮಠದ ಪಟ್ಟ ನಿಮಗೇ ಬರುತ್ತದೆ ಎಂದು ಭವಿಷ್ಯ ಹೇಳಿದರಂತೆ. ಅವರ ಹೇಳಿಕೆಯಂತೆ ಆ ಸ್ವಾಮಿಗಳೇ ಮಠಾಧ್ಯಕ್ಷರಾಗಿದ್ದಾರೆ.

ಬಳ್ಳಾರಿಯ ಹಲವಾರು ಭಕ್ತರ ಮನೆಗಳಿಗೆ ಬಂದಿದ್ದು, ಭಕ್ತರ ಸೇವೆ ಸ್ವೀಕರಿಸಿ ಅವರನ್ನು ಉದ್ಧರಿಸಿದ್ದಾರೆ. ಕುರುಬರ ಸಿದ್ಧಣ್ಣ ಎಂಬುವವರಿಗೆ ಎಕ್ಕೆ ಗಿಡದ ಬೆನಕನನ್ನು ಕೊಟ್ಟು ಪೂಜಿಸಲು ಹೇಳಿದ್ದಾರೆ. ಅದರಂತೆ ಆತನು ಪೂಜಿಸಿದ್ದರಿಂದ ಇಂದು ಸುಖಜೀವನ ಸಾಗಿಸುತ್ತಿದ್ದಾರೆ. ಗಿರಿಯಪ್ಪ ಎಂಬುವವರಿಗೆ ಇಂಥ ಶಾಲೆಯಲ್ಲಿ ನೀವು ಶಿಕ್ಷಕರಾಗುತ್ತೀರಿ ಎಂದ್ಹೇಳಿದ್ದರಿಂದ ಅದೇ ಶಾಲೆಯಲ್ಲಿ ಅವರು ಶಿಕ್ಷಕರಾಗಿದ್ದಾರೆ. ಹೀಗೆ ಶುದ್ಧ ಮನಸ್ಸಿನ ಭಕ್ತರ ಇಷ್ಟಾರ್ಥಗಳನ್ನು ನೆರವೇರಿಸಿ, ಅವರ ಆರಾಧ್ಯದೈವವಾಗಿದ್ದಾರೆ. ಇಷ್ಟ ಬಂದ ಭಕ್ತರ ಮನೆಗೆ ಹೋಗಿ ಅವರ ಸಮಸ್ಯೆಯನ್ನು ಕೇಳಿ, ಮನೆದೇವರ ಪೂಜೆ, ಲಿಂಗ ಪೂಜೆ ಮಾಡಲು ಹೇಳಿ, ದೇವರ, ಹಿರಿಯರ ಹರಕೆ ಇರುವುದರಿಂದಲೇ ಹಲವಾರು ಕಷ್ಟ-ನಷ್ಟಗಳು, ರೋಗ-ರುಜಿನಗಳು ಬರುವವೆಂದು ಹೇಳಿದ್ದಾರೆ. ಅವರಲ್ಲಿದ್ದ ಅಜ್ಞಾನ, ಮೌಢ್ಯವನ್ನು ಹೋಗಲಾಡಿಸಲು ರಾತ್ರಿಯ ಹೊತ್ತು ಶಿವ-ಶರಣರ ಕಥೆಗಳನ್ನು, ಆಧ್ಯಾತ್ಮ ಮಾರ್ಗದ ನಿಜ ತತ್ವವನ್ನು ಬೋಧಿಸುತ್ತಿದ್ದ ರೀತಿ ವಿನೂತನವಾಗಿತ್ತೆಂದು ಅವರನ್ನು ನೋಡಿದ ಭಕ್ತರು ತಿಳಿಸುತ್ತಾರೆ.

ಒಮ್ಮೆ ಮಠದ ಆವರಣದಲ್ಲಿ ಐವತ್ನಾಲ್ಕು ಜನ ಸ್ವಾಮಿಗಳನ್ನು ಕರೆಸಿ ಹಿರೇಹಾಳಿನ ಮಠದ ಪೀಠಾಧ್ಯಕ್ಷರ ನೇತೃತ್ವದಲ್ಲಿ, ಐವತ್ನಾಲ್ಕು ಮಂಟಪಗಳನ್ನು ಕಟ್ಟಿ ಪೂಜೆ ಮಾಡಿಸಿದ್ದಾರೆ. ಮುಂದೆ ಐದು ವರ್ಷದ ನಂತರ ೧೦೮ ಸ್ವಾಮಿಗಳನ್ನು ಕರೆಸಿ ಪೂಜೆ ಮಾಡಿಸಿದ್ದಾರೆ. ಬಂದ ಸ್ವಾಮಿಗಳಿಗೆ ೧೩ ಸಾಮಾನುಗಳನ್ನು, ೧೦೧ ರೂ ಕಾಣಿಕೆಯನ್ನು ಕೊಟ್ಟು ಗೌರವಿಸಿದ್ದಾರೆ. ಈ ಎರಡೂ ಕಾರ್ಯಕ್ರಮಗಳ ಆಚರಣೆಗೆ ಸಾವಿರಾರು ರೂಪಾಯಿಗಳ ಖರ್ಚು ಬಂದಿದ್ದರೂ ಯಾರಿಂದಲೂ ಹಣ ಕೇಳದೆ, ಹಣದ ವ್ಯವಸ್ಥೆಯನ್ನು ತಾವೇ ಮಾಡಿದ್ದರಂತೆ. ಆ ಹಣವನ್ನು ಅವರು ಹೇಗೆ ಜೋಡಿಸುತ್ತಿದ್ದರೋ ಒಬ್ಬರಿಗೂ ತಿಳಿಯುತ್ತಿರಲಿಲ್ಲವೆಂದು ಅವರ ಮಗ ಗುರುಪಾದಪ್ಪನವರು ಮತ್ತು ಭಕ್ತರು ಹೇಳುತ್ತಾರೆ. ಒಂದು ಸಾರಿ ಹಲವಾರು ಭಕ್ತರನ್ನು ತಾನು ಹಿಂದೆ ಯೋಗ ಮಾಡಿದ ಮಲೆನಾಡಿನ ದಂಡಕಾರಣ್ಯಕ್ಕೆ ಕರೆದುಕೊಂಡು ಹೋಗಿ ಬಂದಿದ್ದರೆಂದು ಅವರು ತಿಳಿಸುತ್ತಾರೆ.

ತಾತನವರು ಐಕ್ಯರಾಗಿ ನಲವತ್ತು ವರ್ಷಗಳಾಗಿವೆ. ಭಕ್ತರೆಲ್ಲಾ ಸೇರಿ ಅವರ ಸಮಾಧಿಯ ಮೇಲೆ ಗದ್ದುಗೆ ನಿರ್ಮಾಣ ಮಾಡಿ, ಅವರ ಶಿಲಾಮೂರ್ತಿಯನ್ನು ಪ್ರತಿಷ್ಠಾಪಿಸಿದ್ದಾರೆ. ನಿತ್ಯವೂ ವಂಶಸ್ಥರಿಂದ ಗುರು ಕರ್ಪೂರಸ್ವಾಮಿಗಳ ಗದ್ದುಗೆಗೆ ಮತ್ತು ತಾತನವರ ಗದ್ದುಗೆಗೆ ಹಾಗೂ ಮೂರ್ತಿಗೆ, ಲೋಬಾನದ ಪೂಜೆ ನಡೆಯುತ್ತಿದೆ. ಅಮಾವಾಸ್ಯೆ ಮತ್ತು ಹುಣ್ಣಿಮೆಯ ದಿನ ವಿಶೇಷ ಪೂಜೆಗಳಿದ್ದು, ಅಂದು ಬೇರೆ ಸ್ಥಳದಿಂದ ಬಂದ ಭಕ್ತರಿಗೆ ದಾಸೋಹದ ವ್ಯವಸ್ಥೆಯಿರುತ್ತದೆ. ತಾತನವರು ಐಕ್ಯರಾದ ಪುಣ್ಯತಿಥಿಯ ನೆನಪಿಗೆ ಭಾದ್ರಪದ ಮಾಸದ ಹುಣ್ಣಿಮೆಯಾದ ಹನ್ನೊಂದನೆ ದಿನಕ್ಕೆ ಆರಾಧನಾ ಮಹೋತ್ಸವವಿರುತ್ತದೆ. ಪರಸ್ಥಳದ ಹಲವಾರು ಭಕ್ತರು ತಮ್ಮ ಊರುಗಳಲ್ಲಿಯೇ ತಾತನವರ ಜ್ಞಾಪಕ ಸಮಾಧಿಯನ್ನು ಮಾಡಿಕೊಂಡು ಪೂಜೆ ಸಲ್ಲಿಸುತ್ತಿದ್ದಾರೆ. ಕೊಟ್ಟೂರಿನ ಪಂಚಪ್ಪನವರು ತಮ್ಮ ತೋಟದಲ್ಲಿ ಜ್ಞಾಪಕ ಸಮಾಧಿಯ ಮಂಟಪ ಕಟ್ಟಿಕೊಂಡಿದ್ದಾರೆ. ಬೆಂಗಳೂರಿನ ದಾಸರಹಳ್ಳಿಯ ರಾಮಸ್ವಾಮಿ, ಗಿರಿಯಪ್ಪ ಎಂಬ ಭಕ್ತರು ಸೇರಿ ಜ್ಞಾಪಕ ಸಮಾಧಿಯನ್ನು ಕಟ್ಟಿಕೊಂಡು ನಿತ್ಯ ಪೂಜೆ ಸಲ್ಲಿಸುತ್ತಿದ್ದಾರೆ.

೪. ೧೨. ಹರಗಿನ ದೋಣಿ ಬುಗ್ಗಪ್ಪತಾತ

ಆಂಧ್ರ ಪ್ರದೇಶದ ಅನಂತಪುರ ಜಿಲ್ಲೆಯ ತಟ್ರಕಲ್ಲು ಬುಗ್ಗಪ್ಪನವರ ಜನ್ಮಸ್ಥಳ. ರಾಮಪ್ಪ ಮತ್ತು ವೀರಮ್ಮ ಎಂಬ ದಂಪತಿಗಳ ಮೂರು ಜನ ಮಕ್ಕಳಲ್ಲಿ ಹಿರಿಯ ಮಗನೆ ಬುಗ್ಗಪ್ಪನು. ಬಾಲ್ಯದಲ್ಲಿಯೇ ಬುಗ್ಗಪ್ಪನ ವರ್ತನೆ ಸಾಮಾನ್ಯ ಹುಡುಗರಿಗಿಂತ ಭಿನ್ನವಾಗಿರುತ್ತದೆ. ಇತರೆ ಹುಡುಗರು ಆಟ-ಪಾಠಗಳಲ್ಲಿ ಕಾಲ ಕಳೆಯುತ್ತಿದ್ದರೆ, ಬುಗ್ಗಪ್ಪ ಪಾಠ ಕಲಿತು, ಆಟದ ಸಮಯದಲ್ಲಿ ಶಾಸ್ತ್ರ, ಪುರಾಣಗಳ ಅಧ್ಯಯನ ಮತ್ತು ಪೂಜೆ-ಆಚರಣೆಗಳಲ್ಲಿ ತುಂಬಾ ಆಸಕ್ತಿವಹಿಸುತ್ತಿದ್ದನು. ಯಾರೊಂದಿಗೂ ಮಾತನಾಡದೆ, ಧ್ಯಾನ ಮಾಡುವವನಂತೆ ಸದಾ ಮೌನಿಯಾಗಿರುತ್ತದ್ದನು. ಮಗನ ಇಂಥ ವರ್ತನೆ ಕಂಡ ತಂದೆ ತಾಯಿಗಳು ಮದುವೆ ಮಾಡಿದರೆ ಸರಿಹೋಗಬಹುದೆಂದು ಸಂಸಾರವಂದಿಗನನ್ನಾಗಿ ಮಾಡುತ್ತಾರೆ. ಮದುವೆಯಾದರೂ ಮಗನ ವರ್ತನೆಯಲ್ಲಿ ಬದಲಾವಣೆಯಾಗದಿರುವುದನ್ನು ಕಂಡ ತಂದೆ-ತಾಯಿಗಳು ಚಿಂತೆಗೊಳಗಾಗುತ್ತಾರೆ. ಕೊನೆಗೆ ಇವನಿಗೆ ಹುಚ್ಚು ಹಿಡಿದಿರಬಹುದೆಂದು ಗಿಡಮೂಲಿಕೆಯ ಔಷಧಿ ಕೊಡಿಸುತ್ತಾರೆ. ಅದರಿಂದಲೂ ಪ್ರಯೋಜನ ವಾಗುವುದಿಲ್ಲ. ಮನೆಯಲ್ಲಿ ಮಡದಿಗೆ ಮಗುವಾಗಿದ್ದರೂ ಅದರ ಬಗ್ಗೆ ಆಸಕ್ತಿ ವಹಿಸದೆ, ವಿರಕ್ತನಾಗಿ ಊರೂರು ಅಲೆದಾಡುತ್ತಿರುತ್ತಾನೆ.

ಹಂಪಿಯ ಶಿವರಾಮವಧೂತರ ಸೇವೆ : ಶಿವರಾಮವಧೂತರು ಚೇಳಗುರಿಕೆ ಎರ್ರಿತಾತನವರ ಶಿಷ್ಯರು. ಬುಗ್ಗಪ್ಪನು ವೈರಾಗ್ಯತಾಳಿ ಮನೆ, ಮಡದಿ, ತಂದೆ, ತಾಯಿಗಳ ಬಂಧನವ ತ್ಯಜಿಸಿ, ಅಲೆಮಾರಿಯಾಗಿ ಅಲೆದಾಡುತ್ತಾ ಹಂಪಿಗೆ ಬರುತ್ತಾನೆ. ಅಲ್ಲಿನ ಹೇಮಕೂಟದ ಶಿವರಾಮವಧೂತರ ಸೇವೆಮಾಡುತ್ತಾ ಗುರುಕೃಪೆಯನ್ನು ಪಡೆದು ಮಠದಲ್ಲಿಯೇ ನೆಲೆಸುತ್ತಾನೆ. ಮಗನು ಹಂಪಿಯಲ್ಲಿರುವ ವಿಷಯ ತಿಳಿದ ತಂದೆ ರಾಮಪ್ಪನು ಹಂಪಿಗೆ ಬಂದು ಮಗನನ್ನು ಮನೆಗೆ ಕರೆದರೆ ನಿರಾಕರಿಸುತ್ತಾನೆ. ಮುಂದೆ ಶಿವರಾಮವಧೂತರ ಅನುಗ್ರಹ ಪಡೆದ ಬುಗ್ಗಪ್ಪನು ದೇಹದ ಪರಿವೇ ಇಲ್ಲದೆ ದಿಗಂಬರನಾಗಿ ಎಲ್ಲೆಂದರಲ್ಲೆ ಅಲೆದಾಡುತ್ತಿದ್ದನು. "ಬುಗ್ಗಪ್ಪ ಆರು ಅಡಿ ಎತ್ತರದ ಸದೃಢಕಾಯವುಳ್ಳ ವ್ಯಕ್ತಿ. ಆತನ ಮೈ ಬಣ್ಣ ಕಪ್ಪಗಿದ್ದು ಮಿರಿಮಿರಿ ಮಿಂಚುತ್ತಿತ್ತು. ಎಂತಹ ಕಡು ಬಿಸಿಲಿರಲಿ ಕೊರೆಯುವ ಛಳಿಯಿರಲಿ ಅಂತಹದರಲ್ಲಿಯೂ ಒಳ್ಳೆಯ ಚಟುವಟಿಕೆ ಯಿಂದ ಕಾಲುನಡಿಗೆಯಲ್ಲಿ ಸಂಚರಿಸುತ್ತಿದ್ದ. ದಿನಕ್ಕೆ ಅತಿ ವೇಗವಾಗಿ ೧೮-೨೦ ಮೈಲುಗಳನ್ನು ಆಯಾಸವಿಲ್ಲದೆ ನಡೆಯುತ್ತಿದ್ದ. ಕಾಲಲ್ಲಿ ಚಪ್ಪಲಿ ಇದ್ದರೂ ಸರಿ, ಇಲ್ಲದಿದ್ದರೂ ಸರಿ, ಹಾಗೆಯೇ ನಡೆಯುತ್ತಿದ್ದ. ಒಂದೊಂದು ಸಲ ನಡೆಯುವಾಗ ಯಾವುದಾದರೂ ಒಂದು ಚಪ್ಪಲಿ ಹರಿದು ಹೋದರೆ ಅದೊಂದನ್ನೇ ಕೈಯಲ್ಲಿ ಹಿಡಿದು, ಇನ್ನೊಂದನ್ನು ಕಾಲಿನಲ್ಲಿಯೇ ಹಾಕಿಕೊಂಡು ಬರುತ್ತಿದ್ದರು. ಇದು ತಾತನ ದೇಹಾಭಿಮಾನವಿಲ್ಲದ ಸ್ಥಿತಿಯನ್ನು ತೋರುತ್ತದೆ. ತಾತ ಹೀಗೆ ಲೀಲಾಜಾಲವಾಗಿ ಸಂಚರಿಸುವಾಗ ಕಲ್ಲುಮುಳ್ಳುಗಳೆನ್ನದೆ ಸಂಚರಿಸುತ್ತಿದ್ದ. ಇದರಿಂದಾಗಿ ಕಾಲಲ್ಲಿ ಅನೇಕ ಮುಳ್ಳುಗಳು ನೆಟ್ಟಿರುತ್ತಿದ್ದವು. ಅವು ಕಾಲಲ್ಲಿಯೇ ಸವೆದು ಹೋಗುತ್ತಿದ್ದವೇ ಹೊರತು, ತಾತನಿಗೆ ಮಾತ್ರ ಅವುಗಳ ಬಾಧೆಯ ಅರಿವಿದ್ದಿಲ್ಲ. ಅವುಗಳನ್ನು ಕ್ಷೌರ ಮಾಡಿಸಿಕೊಳ್ಳುವಾಗ ತೆಗೆಯಿಸುತ್ತಿದ್ದವು."[೬೯] ಹೀಗೆ ಲೋಕದ ಮತ್ತು ದೇಹದ ಪರಿವೇ ಇಲ್ಲದೆ ಅಲೆದಾಡುತ್ತಾ ಹರಗಿನದೋಣಿಗೆ ಬಂದಿರುತ್ತಾರೆ.

ಹರಗಿನ ಡೋಣಿಯಲ್ಲಿ ನೆಲೆ : ಹರಗಿನ ಡೋಣಿಯಲ್ಲಿ ಲಕ್ಷ್ಮೀಪತೆಪ್ಪತಾತ (ಸದಾನಂದವಧೂತರು)ನವರು, ಅಲ್ಲಿನ ಮಠದಲ್ಲಿ ತನ್ನ ಶಿಷ್ಯ ಭೀಮಲಿಂಗಪ್ಪನವರೊಂದಿಗೆ ವಾಸವಾಗಿದ್ದರು. ಆ ಸ್ಥಳಕ್ಕೆ ಬಂದ ಬುಗ್ಗಪ್ಪನನ್ನು ನೋಡಿದ ಲಕ್ಷ್ಮೀಪತೆಪ್ಪತಾತನವರು, ಈತನೇ ತನ್ನ ನಿಜವಾದ ಶಿಷ್ಯನೆಂದು ತಿಳಿದು, ತನ್ನ ಮಠದಲ್ಲಿಯೇ ಉಳಿಸಿಕೊಳ್ಳುತ್ತಾರೆ. ಗುರು ಅನುಗ್ರಹ ಪಡೆದ ಬುಗ್ಗಪ್ಪತಾತನು ಗುರುವಿನ ಸೇವೆ ಮಾಡುತ್ತಾ ನಿಜಾನಂದದ ಮಾರ್ಗದಲ್ಲಿ ವಿಹರಿಸುತ್ತಿದ್ದರು. ಗುರುಲಕ್ಷ್ಮೀಪತೆಪ್ಪತಾತನವರು ಈತನೇ ತನ್ನ ಉತ್ತರಾಧಿಕಾರಿಯೆಂದು ನಿರ್ಧರಿಸಿ, ಬುಗ್ಗಪ್ಪತಾತನು ಎಲ್ಲಿಗೇ ಹೋದರೂ ಹರಗಿನಡೋಣಿಗೆ ಬರುವಂತೆ ತಿಳಿಸಿದರು. ಅದರಂತೆ ಬುಗ್ಗಪ್ಪನವರು ಬರದಿದ್ದರೆ ಉಳಿದ ತನ್ನ ಶಿಷ್ಯರನ್ನು ಕಳಿಸಿ, ಹುಡುಕಿಸಿ ಕರೆಸಿಕೊಳ್ಳುತ್ತಿದ್ದರು. ಬೆಳಗಲ್ಲು, ಸಿಂಧವಾಳ, ಬಾಣಾಪುರ, ಎರಗುಡಿ, ಅಲ್ಲೀಪುರ, ಚೇಳಗುರ್ಕಿ, ಬಳ್ಳಾರಿ, ಗೋನಾಳು, ಕೊಳಗಲ್ಲು, ಶ್ರೀಧರಗಡ್ಡೆ, ಕುಡಿತಿನಿ, ಜಾಲಿಹಾಳು, ಹೀಗೆ ಸುತ್ತ ಮುತ್ತಲಿನ ಗ್ರಾಮಗಳಲ್ಲಿ ತನಗೆ ಇಚ್ಛೆ ಬಂದಂತೆ ವರ್ತಿಸುತ್ತಾ, ಅಲೆದಾಡುತ್ತಿರುತ್ತಾರೆ. ಯಾರಾದರೂ ಊಟ ಕೊಟ್ಟರೆ ಊಟ, ಬಟ್ಟೆ ಉಡಿಸಿದರೆ ಉಡುಗೆ, ಇಲ್ಲದಿದ್ದರೆ ಯಾವುದೂ ಇಲ್ಲದೆ, ಹಸಿವು ಬಾಯಾರಿಕೆಗಳ ಮರೆತು ದಿಗಂಬರನಾಗಿ ಉನ್ಮತ್ತನಂತೆ ತಿರುಗಾಡುತ್ತಿದ್ದರು. ಹೀಗೆ ಒಮ್ಮೆ ಅಲ್ಲೀಪುರದಲ್ಲಿ ಹುಚ್ಚನಂತೆ ವಿಲಕ್ಷಣ ವೇಷದಲ್ಲಿ ಅಲೆದಾಡುತ್ತಿದ್ದಾಗ, ಅಲ್ಲೀಪುರದ ಮಹದೇವತಾತನು "ಈತ ಸಾಮಾನ್ಯನಲ್ಲ, ಮಹಾಮಹಿಮನೆಂದು ತಮ್ಮ ಮಠಕ್ಕೆ ಕರೆದುಕೊಂಡು ಹೋಗಿ ಸೇವೆ ಮಾಡಿರುವುದು ತಿಳಿಯುತ್ತದೆ. ಇಂಥ ಹಲವಾರು ಮಹಾನುಭಾವಿಗಳ ಗೌರವಕ್ಕೆ ಪಾತ್ರರಾಗಿದ್ದ ಬುಗ್ಗಪ್ಪ ತಾತನು ಪ್ರತಿಯೊಬ್ಬರಲ್ಲಿಯೂ ಶಿವನನ್ನು ಕಾಣುತ್ತಿದ್ದರು." ದೇಹದ ಪರಿವೆಯಿಲ್ಲದೆ, ಪರವಶನಾಗಿ ಸಂಚರಿಸುತ್ತಿದ್ದ ಆತನಿಗೆ ಯಾವ ಕಾಲ, ದೇಶದ ನೆನಪೂ ಇರುತ್ತಿದ್ದಿಲ್ಲ. ಅದು ನಡು ರಾತ್ರಿಯಾಗಿರಬಹುದು. ಯಾವ ಸಮಯವೇ ಆಗಿರಲಿ ನಡೆದು ಹೋಗುತ್ತಿದ್ದರು. ಈ ರೀತಿ ಹೋಗುತ್ತಿದ್ದ ಸಮಯದಲ್ಲಿ ಯಾವುದೋ ಊರವರು ತಾತನನ್ನು ಕಳ್ಳನೆಂದು ಭಾವಿಸಿ ಬಹಳ ಹೊಡೆಯುತ್ತಾರೆ. ಆಗ ತಾತನ ಮೈಮೇಲಿನ ಹೊಡೆತದ ಕಲೆಗಳನ್ನು ನೋಡಿ ಯಾರಾದರೂ ಬಡಿದರಾ ತಾತ! ಎಂದು ಕೇಳಿದರೆ "ಹೂಂ ಅವನೇ ಶಿವ ಅಂಬೋಸು' ಎನ್ನುತ್ತಿದ್ದರಂತೆ.[೧೦೦] ಹೀಗೆ ಎಲ್ಲರನ್ನು ಶಿವ ಸ್ವರೂಪಿಗಳೆಂದು ತಿಳಿದು, ಪ್ರತಿ ಜೀವದಲ್ಲಿಯೂ ಪರಮಾತ್ಮನಿದ್ದಾನೆಂದು ಅರಿತಿದ್ದರು.

ಸುಮಾರು ೮೫-೮೬ ವಯಸ್ಸಿನ ತಾತನು ಊರೂರು ಅಲೆದಾಡುತ್ತಿರುವಾಗ, ಕಾಲಿನ ಹೆಬ್ಬೆರಳ ಗಣ್ಣಿಗೆ ಒಂದು ಮುಳ್ಳು ಬಡಿದು ಬಹಳ ಬಾಧೆಯನ್ನುಂಟುಮಾಡುತ್ತದೆ. ಆ ನೋವಿನಲ್ಲಿ ಜ್ವರ ಬಂದು ಹಾಸಿಗೆ ಹಿಡಿದಿದ್ದಾಗ, ಭಕ್ತರೆಲ್ಲಾ ಸೇರಿ ಆಸ್ಪತ್ರೆಗೆ ಸೇರಿಸುತ್ತಾರೆ. ಯಾರಿಗೂ ಗೊತ್ತಾಗದ ಹಾಗೆ ಅಲ್ಲಿಂದ ಎದ್ದು ಗಾಯದ ನೋವು ಮತ್ತು ಜ್ವರದ ಬಾಧೆಯಲ್ಲಿಯೇ ಊರೂರು ಅಲೆದಾಡಿದ್ದಾರೆ. ಕುಡಿತಿನಿ, ಕೊಳಗಲ್ಲು ಮುಂತಾದ ಗ್ರಾಮಗಳಲ್ಲಿ ಸಂಚರಿಸಿ, ಕೊನೆಗೆ ಹರಗಿನಡೋಣಿಗೆ ಬರುತ್ತಾರೆ. ತಾತನು ಬಂದ ವಿಷಯ ತಿಳಿದು ಭಕ್ತರೆಲ್ಲಾ ಬಂದು ಸೇರುತ್ತಾರೆ. "ಆ ದಿನ ಶುಕ್ರವಾರ ೩೦-೧೦-೮೧ ನೇ ತಾರೀಖು, ಮಾರ್ಗಶಿರ ಶುದ್ಧ ತದಿಗೆ ರಾತ್ರಿಯವರೆಗೆ ಭಜನೆ ಮಾಡ್ರಿ ಎಂದು ಹೇಳಿ ಸುಮ್ಮನೆ ಮಲಗಿದರು. ರಾತ್ರಿ ಸುಮಾರು ಒಂದು ಗಂಟೆ ಇಪ್ಪತ್ತೈದು ನಿಮಿಷಗಳಾಗಿತ್ತು. ಆಗ ತಾತ ಎದ್ದು ಧ್ಯಾನದ ಸ್ಥಿತಿಯಲ್ಲಿ, ಗೋಡೆಗೆ ಒರಗಿಕೊಂಡು ಬಾಹ್ಯ ದೇಹದಿಂದ ಬಿಡುಗಡೆಹೊಂದಿ ವಿಶ್ವಾತ್ಮರಾಗಿದ್ದಾರೆ.[೧೦೧]

ಬುಗ್ಗಪ್ಪತಾತನು ಜೀವಂತವಾಗಿದ್ದಾಗ ಮಾತನಾಡಿದ್ದೇ ಸ್ವಲ್ಪ. ಯಾವಾಗಲೂ ಮೌನ. ಯಾರಾದರೂ ಬಂದು ಮಾತನಾಡಿಸಿ ನಮ್ಮೂರಿಗೆ ಬನ್ನಿ ಎಂದು ಕರೆದರೆ 'ಅಲ್ಲೆ ಅದೀನೀ' ಎಂದಷ್ಟೇ ಉತ್ತರ ನೀಡುತ್ತಿದ್ದರಂತೆ. ಮಠದಲ್ಲಿದ್ದಾಗ ಅಥವಾ ಭಕ್ತರ ಮನೆಯಲ್ಲಿದ್ದಾಗ ದಿನಕ್ಕೆ ಹತ್ತು, ಹನ್ನೆರಡು ಸಲ ಲಿಂಗಪೂಜೆ ಮಾಡುತ್ತಿದ್ದು, ಯಾರಾದರೂ ತಾತಾ ಪೂಜೆ ಆಯಿತಾ ಎಂದು ಕೇಳಿದರೆ 'ಪೂಜಾಗೆ ಇರೋದು' ಎಂದು ಉತ್ತರಿಸಿ ಸುಮ್ಮನಾಗುತ್ತಿದ್ದರೆಂದು ಅವರನ್ನು ನೋಡಿದ್ದ ಭಕ್ತರು ತಿಳಿಸುತ್ತಾರೆ.

ಕುಡಿತಿನಿಯ ಪಲ್ಲೇದ ಪಂಪಾಪತೆಪ್ಪನವರ ಮನೆಯಲ್ಲಿ ಒಮ್ಮೆ ಉಳಿದುಕೊಂಡಾಗ ಮನೆಯಲ್ಲಿದ್ದ ಎರ್ರಿತಾತನ ಫೋಟೋವನ್ನು ಭಾವುಕರಾಗಿ ನೋಡುತ್ತಿದ್ದರಂತೆ. ಎರ್ರಿತಾತ ಹೇಗಿದ್ದರು ಎಂದು ಕೇಳಿದ್ದಕ್ಕೆ 'ನನ್ನಂಗೇ' ಎಂದು ಉತ್ತರಿಸಿದರಂತೆ. ಲೋಕ ಜೀವನಕ್ಕೆ ಸಂಪೂರ್ಣ ಭಿನ್ನವಾಗಿದ್ದ ಬುಗ್ಗಪ್ಪತಾತನಿಗೆ ಯಾರಾದರೂ ಹಣ ಕೊಟ್ಟರೆ, ಅದನ್ನು ಕೂಡಿಟ್ಟು ತನಗಿಷ್ಟ ಬಂದವರಿಗೆ ಕೊಡುತ್ತಿದ್ದರು. ಹಾಗೆ ಯಾರಾದರೂ ಬಟ್ಟೆ ಕೊಟ್ಟರೆ ಅದನ್ನೂ ಸಹ ಎದುರಿಗೆ ಬಂದ ಯಾರಿಗಾದರೂ ಕೊಟ್ಟು ಮುನ್ನಡೆಯುತ್ತಿದ್ದರೆಂದು ತಾತನನ್ನು ನೋಡಿದವರು ತಿಳಿಸುತ್ತಾರೆ.

ಒಟ್ಟಾರೆ ಯಾವಾಗಲೂ ಮೌನ. ಮೌನ ಮುರಿದು ಮಾತನಾಡಿದ ಒಂದೆರಡು ಮಾತುಗಳು ರಹಸ್ಯವಾಗಿಯೇ ಉಳಿಯುತ್ತಿದ್ದವು. ಯಾರಿಗೂ ಅರ್ಥವಾಗುತ್ತಿರಲಿಲ್ಲ. ತನ್ನ ಜೀವಿತದ ಅವಧಿಯಲ್ಲಿ ಸರ್ವರನ್ನೂ ಸಮಭಾವದಿಂದ ನೋಡುತ್ತಿದ್ದು, ತಾನು ತುರಿಯಾತೀತನಾಗಿ, ಆತ್ಮಸ್ವರೂಪವೇ ತಾನಾಗಿ ನಿಜಾನಂದದಲ್ಲಿ ವಿಹರಿಸುತ್ತಿದ್ದರೆಂದು ಅವರ ಸೇವೆ ಮಾಡಿದ ಭಕ್ತರು ತಿಳಿಸುತ್ತಾರೆ.

೪. ೧೩. ಹೊಸಪೇಟೆ ಕೆಂಪಾವಧೂತರು

ಕೆಂಪಾವಧೂತರ ಮೂಲ ಹೆಸರು ಹನುಮಯ್ಯ. ಕುರುಬ ಜಾತಿಗೆ ಸೇರಿದ ಇವರು ಶ್ರೀಮಂತ ಒಕ್ಕಲು ಕುಟುಂಬದವರು. ಇಬ್ಬರು ಹೆಂಡತಿಯರಿದ್ದರೂ ಹುಟ್ಟಿದ ಮಕ್ಕಳೆಲ್ಲಾ ಸತ್ತಿದ್ದರಿಂದ ಸಂಸಾರದ ಬಗ್ಗೆ ಬೇಸರವಾಗುತ್ತದೆ. ವ್ಯವಸಾಯ, ಬೇಟೆ ಇವುಗಳಲ್ಲಿ ಆಸಕ್ತಿವಹಿಸಿದ್ದ ಹನುಮಯ್ಯನವರಿಗೆ ಜೀವನದ ಬಗ್ಗೆ ಜಿಗುಪ್ಸೆಯಾಗಿ ತನ್ನೆಲ್ಲಾ ಆಸ್ತಿಯನ್ನು ತ್ಯಾಗಮಾಡಿ ಹಂಪಿಯ ಹೇಮಕೂಟದಲ್ಲಿರುವ ಶಿವರಾಮವಧೂತರ ಆಶ್ರಮ ಸೇರುತ್ತಾರೆ. ಹಿಂದೆ ಹನುಮಯ್ಯನವರ ಅಜ್ಜಿ ತಿಮ್ಮಕ್ಕ ಶಿವರಾಮವಧೂತರ ಸೇವೆ ಮಾಡಿದ್ದವಳು. ಅವಧೂತರಿಗೆ ಊಟವನ್ನು ತೆಗೆದುಕೊಂಡು ಹೋಗುವಾಗ ಅಜ್ಜಿಯ ಜೊತೆಯಲ್ಲಿ ಆಶ್ರಮಕ್ಕೆ ಬರುತ್ತಿದ್ದ ಹನುಮಯ್ಯನು ಈಗ ವೈರಾಗ್ಯತಾಳಿ, ಶಿವರಾಮವಧೂತರ ಶಿಷ್ಯರಾಗಿದ್ದ ಶಿವಶರಣಾನಂದರ ಶಿಷ್ಯರಾಗಿ ಗುರುಸೇವೆ ಮಾಡಿದ್ದಾರೆ. ಅವರಿಂದ ಗುರೂಪದೇಶವನ್ನು ಪಡೆದು ಹೊಸಪೇಟೆಗೆ ಬಂದು, ಹಂಪಿ ಮಾರ್ಗದಲ್ಲಿ ನಗರದ ಹೊರಭಾಗದಲ್ಲೊಂದು ಸಣ್ಣ ಮಠ ಕಟ್ಟಿಕೊಂಡು ವಾಸ ಮಾಡಿದ್ದಾರೆ. ಅಕ್ಷರಜ್ಞಾನ ಬಲ್ಲವರಾಗಿದ್ದ ಇವರು ನಿಜಗುಣ ಶಿವಯೋಗಿಗಳ ವಿಚಾರಸಾಗರ, ಗುರುಚರಿತೆ, ಜ್ಞಾನಸಿಂಧು, ದೇವಿಮಹಾತ್ಮೆ, ಮಾರ್ಕಂಡೇಯ ಪುರಾಣ, ಶಿವರಾತ್ರಿ ಕಥೆ, ವಿದೇಹಕೈವಲ್ಯ ಸಾರಾಮೃತ, ನಾಮಲಿಂಗಾನುಶಾಸನ ಮುಂತಾದ ಆಧ್ಯಾತ್ಮಿಕ ಗ್ರಂಥಗಳನ್ನು ಅಧ್ಯಯನ ಮಾಡಿದ್ದಾರೆ. ಅಧ್ಯಯನ ಮಾಡಿದ ಹಲವಾರು ಪುಸ್ತಕಗಳು ಈಗಲೂ ಮಠದಲ್ಲಿವೆ. ದೇವಿಪುರಾಣವನ್ನು ಪಾರಾಯಣ ಮಾಡುವುದರಲ್ಲಿ ಸುತ್ತಮುತ್ತಲಿನ ಹಳ್ಳಿಗಳಿಗೆಲ್ಲಾ

ಪ್ರಸಿದ್ಧರಾಗಿದ್ದವರು. ಜೊತೆಗೆ ಬಯಲಾಟಗಳನ್ನು ಆಡುವುದರಲ್ಲಿಯೂ ನಿಪುಣರು. ದಕ್ಷಬ್ರಹ್ಮ, ಗಿರಿಜಾ ಕಲ್ಯಾಣ ನಾಟಕಗಳ ಅಭಿನಯದಲ್ಲಿ ಜನಪ್ರಿಯತೆ ಪಡೆದಿದ್ದರೆಂದು ಭಕ್ತರು ತಿಳಿಸುತ್ತಾರೆ.

ಆಧ್ಯಾತ್ಮಿಕ ಗ್ರಂಥಗಳ ಅಧ್ಯಯನ ಮತ್ತು ಯೋಗಸಾಧನೆ ಮಾಡುತ್ತಿದ್ದು, ಆಶ್ರಮಕ್ಕೆ ಬರುವ ಭಕ್ತರುಗಳ ಸಮಸ್ಯೆ, ನೋವು, ಎಡರು, ತೊಡರುಗಳನ್ನು ಪರಿಹರಿಸಿ, ನಂಬಿದ ಭಕ್ತರಿಗೆ ಮಹಾತ್ಮರಾಗಿದ್ದವರು. ಬಂದ ಭಕ್ತರುಗಳಿಗೆ, ಸ್ಥಳೀಯ ಭಕ್ತರ ಮನೆಗಳಿಗೆ ಹೋಗಿ ಅನ್ನ ಭಿಕ್ಷೆ ತಂದು ದಾಸೋಹದ ವ್ಯವಸ್ಥೆ ಮಾಡಿದ್ದಾರೆ. ರಾತ್ರಿಯ ಸಮಯದಲ್ಲಿ ನಿತ್ಯ ಭಜನೆ ಮಾಡುತ್ತಿದ್ದು, ಭಕ್ತರುಗಳ ಮನೆಯಲ್ಲಿಯೂ ಭಜನೆಗಳನ್ನು ಮಾಡಿ ಬರುತ್ತಿದ್ದರು. ಭಜನೆಗೆ ಉಪಯೋಗಿಸುತ್ತಿದ್ದ ಸಾಮಗ್ರಿಗಳು ಇನ್ನೂ ಮಠದಲ್ಲಿವೆ.

ಮಠದಲ್ಲಿ ಸೋಮವಾರ ಮತ್ತು ಶುಕ್ರವಾರ ವಿಶೇಷ ಕಾರ್ಯಕ್ರಮಗಳಿದ್ದು, ಹೆಚ್ಚಿನ ಭಕ್ತರು ಸೇರುತ್ತಿದ್ದರು. ತಮ್ಮನ್ನು ನಂಬಿ ಬರುತ್ತಿದ್ದ ರೋಗಿಗಳಿಗೆ, ಅಶಕ್ತರಿಗೆ, ಮಕ್ಕಳಿಲ್ಲದವರಿಗೆ ಅನುಕಂಪ ತೋರುತ್ತಿದ್ದು, ಕೆಲವು ರೋಗಗಳಿಗೆ ಗಿಡಮೂಲಿಕೆ ಔಷಧ ನೀಡಿ ಗುಣಪಡಿಸಿದ್ದಾರೆ.

ಕಾಮಾಲೆರೋಗಕ್ಕೆ ಪಥ್ಯವಿಲ್ಲದ ಔಷಧ ನೀಡುತ್ತಿದ್ದು, ಕೆಮ್ಮು ಬಂದಿದ್ದರೆ ಎಪ್ಪತ್ತು ಊರುಗಳ ಹೆಸರನ್ನು ಹೇಳಿಸಿ ತಾಯತ ಕಟ್ಟುತ್ತಿದ್ದರಂತೆ. ಕೈ-ಕಾಲುಗಳು ನಿಶ್ಯಕ್ತಿ ಹೊಂದಿದ್ದರೆ ಉಗುಳನ್ನು ಹಚ್ಚಿ ಗುಣಪಡಿಸುತ್ತಿದ್ದ ರೆಂದು, ಸ್ವತಃ ಅನುಭವಿಸಿದ ಅಂಬಮ್ಮ ಎನ್ನುವ ಭಕ್ತೆ ಹೇಳುತ್ತಾರೆ. ಹಾಗೆಯೆ ತನ್ನ ಮಗಳಿಗೆ ಗಂಡು ಸಂತಾನ ಇಲ್ಲದಿದ್ದಾಗ, ಯಾರಿಗೂ ಹೇಳಬೇಡಿಯೆಂದು ಔಷಧಿ ಕೊಟ್ಟರು. ಅದರಿಂದ ಎರಡು ಗಂಡು ಮಕ್ಕಳು ಜನಿಸಿದವೆಂದು ತಿಳಿಸುತ್ತಾರೆ.

ಶಕ್ತಿವರ್ಧನೆಗೆ ಕಕ್ಕೆ ಗಿಡದ ಚೆಕ್ಕೆ, ಯಾಲಕ್ಕಿ ಮತ್ತು ಬೆಲ್ಲವನ್ನು ನೋವು, ಗಾಯಗಳಿಗೆ ಗೆದ್ಲಡಿಕೆ ಸೊಪ್ಪನ್ನು ಕುಟ್ಟಿ, ಅದರ ಪುಡಿ ಮತ್ತು ರಸವನ್ನು ಕಟ್ಟಿ ಗುಣಪಡಿಸಿದ್ದಾರೆ. ಅದೇ ಔಷಧವನ್ನು ಇಂದಿಗೂ ಅವರ ಶಿಷ್ಯ ಪರಂಪರೆಯ ಅಂಬಮ್ಮನವರು ನೀಡುತ್ತಿದ್ದಾರೆ.

ಗ್ರಹ-ಗತಿಗಳ ಕಾಟವಿದ್ದವರನ್ನು, ದೆವ್ವ, ಪೀಡೆ ಹಿಡಿದವರನ್ನು ಗುಣಪಡಿಸುವುದರ ಜೊತೆಗೆ, ದನ-ಕರುಗಳಿಗೆ ಬರುತ್ತಿದ್ದ ರೋಗವನ್ನು, ಗುಣಪಡಿಸಿದ್ದಾರೆ. ಸಾಮಾನ್ಯವಾಗಿ ದನ-ಕರುಗಳಿಗೆ ಬರುತ್ತಿದ್ದ 'ಹೆಗಲುಣ್ಣು' ರೋಗಕ್ಕೆ ತಮ್ಮ ಎಂಜಲನ್ನು ಹಚ್ಚಿ ವಾಸಿಮಾಡುತ್ತಿದ್ದರೆಂದು 'ರಾಮಲಿ' ಎಂಬ ಭಕ್ತನು ಹೇಳುತ್ತಾನೆ. ವಾಸ್ತು ಶಾಸ್ತ್ರವನ್ನು ಹೇಳುತ್ತಿದ್ದು, ಹೊಸಪೇಟೆಯಲ್ಲಿರುವ ಹಲವಾರು ಮನೆಗಳಿಗೆ ಇವರದೇ ವಾಸ್ತುವೆಂದು ಭಕ್ತರು ತಿಳಿಸುತ್ತಾರೆ.

ಬೇಟೆಯನ್ನು ಆಡುತ್ತಿದ್ದು, ಒಮ್ಮೆ ಹತ್ತುಜನರ ತಂಡದ ಜೊತೆ ಬೇಟೆಗೆಂದು ಹೋಗಿರುತ್ತಾರೆ. ಅಲ್ಲಿ ಗಾಬರಿಗೊಂಡ ಕಾಡುಹಂದಿ ಮತ್ತು ಹುಲಿಗಳು ಇವರ ಮೇಲೆ ಎರಗಲು ಬಂದಾಗ, ಒಂದೇ ಗುಂಡಿನಿಂದ ಹಂದಿ ಮತ್ತು ಹುಲಿಯನ್ನು ಕೊಂದಿದ್ದಾರೆ. ಇಂದು ಅವರ ಮಠದಲ್ಲಿ ಅವರು ಬೇಟೆಯಾಡಿದ್ದ ಹುಲಿಯ ಚರ್ಮವಿರುವುದನ್ನು ಕಾಣಬಹುದು.

ಒಮ್ಮೆ ನಾರಾಯಣಸ್ವಾಮಿ ಎನ್ನುವವರು ಎರ್ರಿತಾತನ ಮಠವನ್ನು ಹೊಸಪೇಟೆಯಲ್ಲಿ ಸ್ಥಾಪಿಸುವಾಗ, ಇವರನ್ನು ಕರೆದಿರಲಿಲ್ಲ. ಸಿಟ್ಟಿಗೆದ್ದ ಕೆಂಪಾವಧೂತರು ಅವನ "ಕಣ್ಣು ಹೋಗಲಿ" ಎಂದು ಶಪಿಸಿದ್ದಾರೆ. ಅದರಂತೆ ಅವನ ಕಣ್ಣುಗಳು ಕಾಣದಾಗಿದ್ದು, ಇಂದಿಗೂ ಕುರುಡರಾಗೇ ಇದ್ದಾರೆ.

ಕೆಂಪಾವಧೂತರ ಸಾವಿರಾರು ಶಿಷ್ಯ ಮಕ್ಕಳು ನಾಡಿನಾದ್ಯಂತ ಇದ್ದು, ಗುರುವಿನ ನೆನಪಿಗಾಗಿ ಜ್ಞಾಪಕ ಸಮಾಧಿಯನ್ನು, ಮಠವನ್ನು ಕಟ್ಟಿಕೊಂಡಿದ್ದಾರೆ. ರಾಯಚೂರು ಜಿಲ್ಲೆಯ ಕಲ್ಲೂರಿನಲ್ಲಿ ಬಸವರಾಜ ಎನ್ನುವ ಶಿಷ್ಯನು ಮಠಕಟ್ಟಿಕೊಂಡಿದ್ದಾನೆ. ಹಾಗೆಯೇ ಕಾರಿಗನೂರಿನ ಶರಣಮ್ಮ ಎನ್ನುವವರು ಮಠವನ್ನು ಕಟ್ಟಿಕೊಂಡಿದ್ದಾರೆ.

ಕೆಂಪಾವಧೂತರು ೧೯೯೩ರಲ್ಲಿ ತಮ್ಮ ಮಠದಲ್ಲಿಯೇ ಐಕ್ಯರಾಗಿದ್ದು, ಅವರ ನಿಜಸಮಾಧಿ ಇದೆ. ನಂತರ ಅವರ ಶಿಷ್ಯ ನಾಯಕ ಜಾತಿಯ ಬೋರಮ್ಮ ಎಂಬುವವರು ವಾಸಿಸುತ್ತಿದ್ದು, ಗುರುಗಳು ಹೇಳಿಕೊಟ್ಟ ಔಷಧಿಯನ್ನು ಮಠಕ್ಕೆ ಬರುತ್ತಿದ್ದ ಭಕ್ತರುಗಳಿಗೆ ನೀಡುತ್ತಿದ್ದರು. ತಾತನವರು ಉಪಯೋಗಿಸುತ್ತಿದ್ದ ಮಂಚ ಇಂದು ಮಠದಲ್ಲಿದ್ದು, ಅದರಲ್ಲಿ ದೇವಿ ಫೋಟೋ ಮತ್ತು ದೇವಿಪುರಾಣವನ್ನಿಟ್ಟು ಪೂಜಿಸುತ್ತಿದ್ದಾರೆ. ತಾತನವರ ಹೆಸರಿನಲ್ಲಿ ಸಮಿತಿಯೊಂದನ್ನು ಮಾಡಿಕೊಂಡು ಪುಣ್ಯತಿಥಿಯ ನೆನಪಿಗೆ ಆರಾಧನೆಗಳು ನಡೆಯುತ್ತಿವೆ. ಪ್ರತಿ ದಸರಾ ಹಬ್ಬದ ನವರಾತ್ರಿಯಲ್ಲಿ ದೇವಿಪುರಾಣದ ಪಾರಾಯಣ ನಡೆಯುತ್ತಿದ್ದು, ಅಪಾರ ಭಕ್ತರು ಸೇರಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸುತತಿದ್ದಾರೆ.

ಕೊನೆ ಟಿಪ್ಪಣಿಗಳು

೧. ಶಿವಾನಂದ ಎಸ್., ಚೇಳಗುರಿಕೆ ಎರ್ರಿತಾತ, ಪುಟ-೩

೨. ದೊಡ್ಡನಗೌಡ ಜೋಳದರಾಶಿ, ಚೇಳಗುರಿಕೆ ಎರ್ರಿತಾತನವರ ಶಿವಮಯ ಜೀವನ ಚರಿತ್ರೆ, ಪುಟ-೧೯

೩ ಅದೇ, ಪುಟ-೧೫

೪. ನಾಗೇಶ ಶಾಸ್ತ್ರಿ ವೈ., ಲೀಲಾಮೃತ, ಪೀಠಿಕೆ

೫ ಅದೇ, ಸಂಧಿ ೨-೩೩

೬ ಬಸವರಾಜ್ ಬಿ.ಸಿ. ಚೇಳಗುರಿಕೆ ಶ್ರೀ ಎರ್ರಿಸ್ವಾಮಿಗಳು, ಪುಟ-೧೫

೭. ನಾಗೇಶ ಶಾಸ್ತ್ರಿ ವೈ., ಲೀಲಾಮೃತ, ಸಂಧಿ, ೩-೧೩.

೮. ಚನ್ನಬಸವೇಶ್ವರ ಶಿ.ವ., ಚೇಳಗುರಿಕೆ ಶ್ರೀ ಎರ್ರಿಸ್ವಾಮಿಗಳ ಲೀಲಾವಿಲಾಸ, ಪುಟ-೧೭

೯. ನಾಗೇಶ ಶಾಸ್ತ್ರಿ ವೈ., ಲೀಲಾಮೃತ, ಸಂಧಿ, ೪-೮

೧೦ ಚನ್ನಬಸವೇಶ್ವರ ಶಿ.ವ., ಲೀಲಾವಿಲಾಸ, ಪುಟ-೧೭

೧೧. ನಾಗೇಶಶಾಸ್ತ್ರಿ ವೈ., ಲೀಲಾಮೃತ, ೫-೪೧

೧೨. ಅದೇ, ಸಂಧಿ, ೭-೨೦

೧೩. ಚನ್ನಬಸವೇಶ್ವರ ಶಿ.ವ., ಲೀಲಾವಿಲಾಸ, ಪುಟ-೧೩

೧೪. ಅದೇ, ಪುಟ-೨೧

೧೫. ನಾಗೇಶ ಶಾಸ್ತ್ರಿ ವೈ., ಲೀಲಾಮೃತ, ಸಂಧಿ, ೮-೨೬

೧೬. ಚನ್ನಬಸವೇಶ್ವರ ಶಿ.ವ., ಲೀಲಾವಿಲಾಸ, ಪುಟ-೨೫

೧೭. ದೊಡ್ಡನಗೌಡ ಜೋಳದರಾಶಿ, ಶಿವಮಯ ಜೀವನ ಚರಿತ್ರೆ, ಪುಟ-೧೭

೧೮. ನಾಗೇಶ ಶಾಸ್ತ್ರಿ ವೈ., ಲೀಲಾಮೃತ, ಸಂಧಿ, ೯-೩೩

೧೯. ಅದೇ, ಸಂಧಿ, ೧೦-೧೨

೨೦. ದೊಡ್ಡನಗೌಡ ಜೋಳದರಾಶಿ, ಶಿವಮಯ ಜೀವನ ಚರಿತ್ರೆ, ಪುಟ-೧೮

೨೧. ನಾಗೇಶ ಶಾಸ್ತ್ರಿ ವೈ., ಲೀಲಾಮೃತ, ಸಂಧಿ, ೧೦-೩೧

೨೨. ದೊಡ್ಡನಗೌಡ ಜೋಳದರಾಶಿ, ತಾತನವರ ಭಕ್ತಿಗೀತೆಗಳು

೨೩. ನಾಗೇಶ ಶಾಸ್ತ್ರಿ, ಲೀಲಾಮೃತ, ಸಂಧಿ, ೧೧-೨೪

೨೪. ಅದೇ, ಸಂಧಿ, ೧೩-೪೦

೨೫. ಚನ್ನಬಸವೇಶ್ವರ ಶಿ.ವ., ಲೀಲಾವಿಲಾಸ, ಪುಟ-೭೧

೨೬. ಅದೇ, ಪುಟ-೭೨

೨೭. ನಾಗೇಶ ಶಾಸ್ತ್ರಿ, ಲೀಲಾಮೃತ, ಸಂಧಿ, ೧೫-೩

೨೮. ಅದೇ, ಸಂಧಿ, ೧೫-೩೮

೨೯. ಶರಣಾಂಬುಧಿ - ಶ್ರೀರಾಗಿ ಶರಣಬಸವಯ್ಯ, ಪುಟ-೨೧

೩೦. ಶ್ರೀ ಜಡೇಸಿದ್ದೇಶ್ವರ ಶತಕ, ಚನ್ನಬಸವ ಶಿವಬಸವಪ್ಪ ಕಲ್ಮಂಗಿ, ಪುಟ-೨

೩೧. ದಿನಾಂಕ ೧-೧೦-೦೨ರಂದು ದೊಡ್ಡ ಜಡಯ್ಯನವರನ್ನು ಎಮ್ಮಿಗನೂರಿನ ಮಠದಲ್ಲಿ ಸಂದರ್ಶಿಸಿದಾಗ ತಿಳಿದ ವಿಷಯ.

೩೨. ಪಂ|| ಅಮರನಾಥ ಶಾಸ್ತ್ರಿಗಳು, ಜಡೆಸಿದ್ಧ ಶಿವಯೋಗಿಗಳ ಪುರಾಣ, ಸಂಧಿ ೩-೧೬

೩೩. ಜಡೆಸಿದ್ಧ ಶಿವಯೋಗಿಗಳ ಪುರಾಣ, ಸಂಧಿ, ೬-೭

೩೪. ಪಂ|| ಅಮರನಾಥ ಶಾಸ್ತ್ರಿಗಳು, ಜಡೆಸಿದ್ಧ ಶಿವಯೋಗಿಗಳ ಪುರಾಣ, ಸಂಧಿ, ೭-೯

೩೫. ಗುರುಸಿದ್ಧಲಿಂಗ ಶಿವಾಚಾರ್ಯರು, ಶ್ರೀ ಜಡೆಯೋಗೀಶ್ವರ ಚರಿತ್ರೆ, ಪುಟ-೩೬

೩೬. ಪಂ|| ಅಮರನಾಥ ಶಾಸ್ತ್ರಿಗಳು, ಜಡೆಸಿದ್ಧ ಶಿವಯೋಗಿಗಳ ಪುರಾಣ, ಸಂಧಿ ೯-೫

೩೭. ಅದೇ, ಸಂಧಿ, ೯-೯

೩೮. ಗುರುಸಿದ್ಧಲಿಂಗ ಶಿವಾಚಾರ್ಯರು, ಶ್ರೀ ಜಡೆಯೋಗೀಶ್ವರ ಚರಿತ್ರೆ, ಪುಟ-೪೫

೩೯. ಪಂ॥ ಅಮರನಾಥ ಶಾಸ್ತ್ರಿಗಳು, ಜಡೆಸಿದ್ಧ ಶಿವಯೋಗಿಗಳ ಪುರಾಣ, ಸಂಧಿ ೧೦-೧೭

೪೦. ಅದೇ, ಸಂಧಿ, ೧೨-೬

೪೧. ಶ್ರೀ ರಾಗಿಬಸಯ್ಯ ಎಮ್ಮಿಗನೂರು, ಶರಣಾಂಬುಧಿ, ಪುಟ-೨೪

೪೨. ಗುರುಸಿದ್ಧಲಿಂಗ ಶಿವಾಚಾರ್ಯರು, ಶ್ರೀ ಜಡೆಯೋಗೀಶ್ವರ ಚರಿತ್ರೆ, ಪುಟ-೫೪

೪೩. ಪಂ॥ ಅಮರನಾಥ ಶಾಸ್ತ್ರಿಗಳು, ಜಡೆಸಿದ್ಧ ಶಿವಯೋಗಿಗಳ ಪುರಾಣ, ಸಂಧಿ, ೧೨-೩೩

೪೪. ಅದೇ, ಸಂಧಿ, ೧೨-೪೧

೪೫. ಅದೇ, ಸಂಧಿ, ೧೩-೩೯

೪೬. ಅದೇ, ಸಂಧಿ, ೧೪-೩೪

೪೭. ಅದೇ, ಸಂಧಿ, ೧೬-೫

೪೮. ಶಿವಮೂರ್ತಿ ಶಾಸ್ತ್ರಿ ಡಿ.ಎಂ., ಶ್ರೀ ಸದ್ಗುರು ವೆಂಕಾವಧೂತರ ಪುರಾಣ, ಸಂಧಿ, ೨-೨೨

೪೯. ಅದೇ, ಸಂಧಿ, ೫-೪೦

೫೦. ಅದೇ, ಸಂಧಿ, ೬-೨

೫೧. ಅದೇ, ಸಂಧಿ, ೬-೨೨

೫೨. ಸುಂಕಾಪುರ ಎಂ.ಎಸ್., ನಾಗಭೂಷಣ ಶಾಸ್ತ್ರಿಗಳು, (ಸಂ) ಗುರುಬಸವ ಕೃತ ಅವಧೂತಗೀತಾ, ಪುಟ-೨

೫೩. ಸ್ವಾಮಿ ಸೋಮನಾಥನಂದ, ಅವಧೂತಗೀತಾ, ಪುಟ-೪೦

೫೪. ಶಿವಮೂರ್ತಿಶಾಸ್ತ್ರಿ ಡಿ. ಎಂ., ಶ್ರೀ ಸದ್ಗುರು ವೆಂಕಾವಧೂತರ ಪುರಾಣ, ಸಂಧಿ, ೭-೨೩

೫೫. ಅದೇ, ಸಂಧಿ, ೭-೪೮

೫೬. ಅದೇ, ಸಂಧಿ, ೯-೧೪

೫೭. ಸಂದರ್ಶನಕ್ಕೆಂದು ದಮ್ಮೂರಿಗೆ ಹೋದಾಗ ನೀಡಿದ ಮಾಹಿತಿ

೫೮. ವೇಮಲಗಟ್ಟಪ್ಪ ಶ್ರೇಷ್ಠಿ, ವೆಂಕಾವಧೂತರ ಚರಿತ್ರೆ, ಪುಟ-೬೦

೫೯. ಶಿವಮೂರ್ತಿಶಾಸ್ತ್ರಿ, ವೆಂಕಾವಧೂತರ ಪುರಾಣ, ಸಂಧಿ, ೧೨-೧೯

೬೦. ಅದೇ, ಸಂಧಿ, ೧೩-೩೩

೬೧. ಶಿವಮೂರ್ತಿ ಶಾಸ್ತ್ರಿಗಳು, ಸದ್ಗುರು ಎರಿಬಸವೇಶ ಪುರಾಣ, ಸಂಧಿ, ೧-೩೮

೬೨. ಮಾರ್ಕಂಡೇಯ, ಶರಣಾಂಬುಧಿ, ಪುಟ-೧೦೧

೬೩. ಶಿವಮೂರ್ತಿ ಶಾಸ್ತ್ರಿಗಳು, ಸದ್ಗುರು ಎರಿಬಸವೇಶ ಪುರಾಣ, ಸಂಧಿ, ೪-೧೨

೬೪. ಅದೇ, ಸಂಧಿ, ೫-೩

೬೫. ಅದೇ, ಸಂಧಿ, ೬-೧೩

೬೬. ಅದೇ ಸಂಧಿ, ೧೨-೨೭

೬೭ ಅದೇ ಸಂಧಿ, ೧೫-೧

೬೮. ಅದೇ ಸಂಧಿ, ೧೬-೧

೬೯. ಪ್ರಭಾನಂದ ಪಂಡಿತರು, ಸಿಂಧಿಗೇರಿ ಮಲ್ಲೇಶ್ವರನ ಪುರಾಣ, ಸಂಧಿ, ೪-೫

೭೦. ಅದೇ, ಸಂಧಿ, ೬-೧೪

೭೧. ಅದೇ, ಸಂಧಿ, ೭-೪೪

೭೨. ಅದೇ, ಸಂಧಿ, ೧೦-೩

೭೩. ಅದೇ, ಸಂಧಿ, ೧೬-೧೦೯

೭೪. ಚಾಕುಬಂಡೆ ಎಂ.ಎಸ್.ಸುಬ್ಬಣ್ಣ, ಶ್ರೀ ಶಿವರಾಮ ಅವಧೂತರ ಜೀವನ ಚರಿತ್ರೆ, ಪುಟ-೬

೭೫. ಬದನೇಹಾಳು ಮರಿಸಿದ್ದಯ್ಯ ಸ್ವಾಮಿಗಳು, ಶ್ರೀ ಶಿವರಾಮ ಅವಧೂತರ ಜೀವನ ಚರಿತ್ರೆ, ಪುಟ-೯೬

೭೬. ಚಾಕುಬಂಡೆ ಎಂ.ಎಸ್. ಸುಬ್ಬಣ್ಣ, ಶ್ರೀ ಶಿವರಾಮವಧೂತರ ಜೀವನ ಚರಿತ್ರೆ, ಪುಟ-೯

೭೭. ಅದೇ, ಪುಟ-೯

೭೮. ನಾಗೇಶ ಶಾಸ್ತ್ರಿ, ಲೀಲಾಮೃತ, ೧೨-೭

೭೯. ಜೋಳದರಾಶಿ ದೊಡ್ಡನಗೌಡರು, ಚೇಳಗುರಿಕೆ ಎರ್ರಿತಾತ, ಪುಟ-೩೧

೮೦. ಬದನೇಹಾಳು ಮರಿಸಿದ್ದಯ್ಯ ಸ್ವಾಮಿಗಳು, ಶ್ರೀ ಶಿವರಾಮವಧೂತರ ಜೀವನ ಚರಿತ್ರೆ, ಪುಟ-೧೦೫

೮೧. ನಾಗೇಶ ಶಾಸ್ತ್ರೀ, ಲೀಲಾಮೃತ, ಸಂಧಿ, ೧೨-೧೯

೮೨. ಅದೇ, ೧೨-೪೫

೮೩. ಚಾಕುಬಂಡೆ ಎಂ. ಎಸ್. ಸುಬ್ಬಣ್ಣ, ಶ್ರೀ ಶಿವರಾಮವಧೂತರ ಜೀವನ ಚರಿತ್ರೆ, ಪುಟ-೩೦

೮೪. ಅದೇ, ಪುಟ-೪೭

೮೫. ಸ್ವಾಮಿ ಸೋಮನಾಥಾನಂದ, ಅವಧೂತಗೀತ, ೪-೧೨

೮೬. ಬದನೇಹಾಳ ಮರಿಸಿದ್ದಯ್ಯ ಸ್ವಾಮಿ, ಶ್ರೀ ಶಿವರಾಮವಧೂತರ ಚರಿತ್ರೆ, ಪುಟ-೧೨೮

೮೭. ಚಾಕುಬಂಡೆ ಎಂ. ಎಸ್.ಸುಬ್ಬಣ್ಣ, ಶ್ರೀ ಶಿವರಾಮವಧೂತರ ಜೀವನ ಚರಿತ್ರೆ, ಪುಟ ೫೮

೮೮. ಅದೇ, ೬೮

೮೯. ಅದೇ, ೭೬

೯೦. ಅದೇ, ೭೬

೯೧. ಬಸವರಾಜ ಸಬರದ, (ಸಂ) ಹೈದರಾಬಾದ್ ಕರ್ನಾಟಕದ ತತ್ತ್ವಪದಕಾರರು, ಪುಟ-೨೨೧

೯೨. ಅದೇ, ಪುಟ-೨೨೦

೯೩. ಸ್ವಾಮಿ ಕೆ.ಎನ್., (ಅನು) ಶ್ರೀ ರಾಜರಾಜೇಶ್ವರಿಯ ಸ್ತುತಿ, ಪುಟ-೧೬

೯೪. ಅದೇ, ಪುಟ-೨೩

೯೫. ಅದೇ, ಪುಟ-೩೨

೯೬. ಅದೇ, ಪುಟ-೩೩

೯೭. ಅದೇ, ಪುಟ-೪೦

೯೮. ಶಿವಮೂರ್ತಿಶಾಸ್ತ್ರಿಗಳ ಕೈಬರಹದ ಪ್ರತಿಯಿಂದ ಆಯ್ಕೆ ಮಾಡಿರುವುದು.

೯೯. ಪಲ್ಲೇದ ಪಂಪಾಪತೆಪ್ಪ, ತಟ್ರಕಲ್ಲು ಬುಗ್ಗಪ್ಪತಾತ, ಪುಟ-೮

೧೦೦. ಅದೇ, ಪುಟ-೧೪

೧೦೧. ಅದೇ, ಪುಟ-೧೭

ಅಧ್ಯಾಯ ಐದು

ಅವಧೂತರ ಕುರಿತ ಸಾಹಿತ್ಯ

ಅಧ್ಯಾಯ ಐದು

ಅವಧೂತರ ಕುರಿತ ಸಾಹಿತ್ಯ

ಕವಿಗಳಲ್ಲದ ಅವಧೂತರು ತಮ್ಮ ನಡೆ - ನುಡಿಗಳಿಂದಲೇ ಸಮಾಜಕ್ಕೆ ಸರ್ವಧರ್ಮ ಸಮನ್ವಯತೆಯನ್ನು, ಭಾವೈಕ್ಯತೆಯನ್ನು, ಮಾನಸಪೂಜೆಯ ಮಹತ್ವವನ್ನು, ಜಾತ್ಯತೀತ ಮನೋಧರ್ಮವನ್ನು ಸಾರಿದ್ದಾರೆ. ಆಡಂಬರ, ಡಂಭಾಚಾರ, ಬೂಟಾಟಿಕೆಗಳಿಲ್ಲದೆ ಮೌನವಾಗಿದ್ದೇ ಅಂತರಂಗದಲ್ಲಿ ಪರಮಾತ್ಮನನ್ನು ಸಾಕ್ಷಾತ್ಕರಿಸಿ ಕೊಂಡಿದ್ದಾರೆ. 'ಮೌನ ಮತ್ತು ಮಾತುಗಳೆಂಬ ಎರಡು ಮಹತ್ತರ ಶಕ್ತಿಗಳಿವೆ. ಅವುಗಳಲ್ಲಿ ಮೌನ ಅಣಿಗೊಳಿಸಿದರೆ, ಮಾತು ಸೃಷ್ಟಿಸುತ್ತದೆ. ಮೌನ ಆಚರಿಸಿದರೆ ಮಾತು ಪ್ರೋತ್ಸಾಹ ನೀಡುತ್ತದೆ. ಮೌನ ಬಲಾತ್ಕರಿಸಿದರೆ ಮಾತು ಸಮ್ಮಿತಿಗೊಳಿಸುತ್ತದೆ' ಎನ್ನುವ ಅರವಿಂದರ ಮಾತು, ಮೌನ ಮತ್ತು ಮಾತಿನ ಮಹತ್ವವನ್ನು ತಿಳಿಸುತ್ತದೆ. ಮಾತಿಗಿಂತಲೂ ಮೌನ ಶ್ರೇಷ್ಠವಾದುದು ಎನ್ನುವ ಅರವಿಂದರು ಮೌನದಿಂದಲೇ ನಿಜವಾದ ಪ್ರಗತಿಯನ್ನು ಸಾಧಿಸಲು ಸಾಧ್ಯ. ವಕ್ರತಿಯ ಅಕ್ರಮ ಚಲನವನ್ನು ಮೌನದಿಂದಲೇ ತಿದ್ದಿಕೊಳ್ಳಲು ಸಾಧ್ಯ. ಮೌನದಲ್ಲಿಯೇ ಯಾರಾದರೂ ಇತರರಿಗೆ ಸಹಾಯ ಮಾಡಲು ಸಾಧ್ಯ ಎಂದಿದ್ದಾರೆ. ಮಾತು ಕಲಿತ ಮಾನವ ಮೌನದಿಂದಿರಲು ಸಾಧ್ಯವಿಲ್ಲ. ಹಾಗಾಗಿ ಮೌನವಾದ ಮನಸ್ಸು ಯೋಗದಿಂದ ಸಿದ್ಧಿಸಿದ್ದು. ಇಂತಹ ಮೌನಸಾಧನೆ, ಯೋಗದೃಷ್ಟಿ, ಸಮಾಜದಿಂದ ದೂರ ಉಳಿದ ಅಂತರ್ಮುಖಿ ಬದುಕು, ಮಾನಸಪೂಜೆ, ಇವೇ ಮೊದಲಾದ ಸ್ವಭಾವವನ್ನೊಳಗೊಂಡ ಹಲವಾರು ಅವಧೂತರು ಸಾಮಾನ್ಯವಾಗಿ ಈ ರೀತಿಯಲ್ಲಿರುತ್ತಾರೆ.

೧. ಅವಧೂತರು ಮೌನಿಗಳು. ಯಾವಾಗಲಾದರೊಮ್ಮೆ ಮೌನ ಮುರಿದು ಮಾತನಾಡಿದ್ದರೆ ಅವುಗಳು ಯಾರಿಗೂ ಅರ್ಥವಾಗುತ್ತಿರಲಿಲ್ಲ.

೨. ನುಡಿಯುತ್ತಿದ್ದ ಮಾತುಗಳು ಸಾಂಕೇತಿಕ ಶಬ್ಧಗಳಂತಿರುತ್ತಿದ್ದವು.

೩. ತಮಗೆ ತಾವೇ ಪಿಸುಧ್ವನಿಯಲ್ಲಿ ಮಾತನಾಡಿಕೊಳ್ಳುತ್ತಿದ್ದರು.

೪. ಶಿಷ್ಯರಿಗೆ ಅವರ ಸೇವೆ-ಸಾಮೀಪ್ಯವೇ ಉಪದೇಶವಾಗುತಿತ್ತು.

೫. ಅವಧೂತರು ನುಡಿದ ಕೆಲ ನುಡಿಗಳು, ನಡೆಗಳು, ಉಚ್ಚಾರ-ಆಚರಣೆಗಳು ಲೌಕಿಕರಿಗೆ ಲೀಲೆಗಳಾಗಿ ಕಂಡಿವೆ.

ಇವರುಗಳನ್ನು ಕುರಿತು ಪುರಾಣ, ಚರಿತ್ರೆ, ಸ್ತೋತ್ರ, ಭಕ್ತಿಗೀತೆಗಳು, ನಾಟಕಗಳು, ಹೀಗೆ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಇವರ ಜೀವನ, ಸಾಧನೆ, ಮಹಿಮೆಗಳನ್ನು ಭಕ್ತ ಜನತೆಗೆ (ಸಮಾಜಕ್ಕೆ) ನೀಡಲಾಗಿದೆ.

ಬಹುಮಟ್ಟಿಗೆ ಅವಧೂತರ ಪೂರ್ವಭಾಗದ ಚರಿತ್ರೆಗಳನ್ನು ನಿರ್ಧರಿಸುವುದು ಕಷ್ಟ. ಅವರು ತಮ್ಮ ಪೂರ್ವ ಚರಿತ್ರೆಯ ಸ್ಥಳ-ಕುಲ, ಸ್ಥಿತಿಗತಿಗಳ ಬಗ್ಗೆ ಯಾವುದೇ ಆಸಕ್ತಿವಹಿಸದೆ ಸಿದ್ಧಿಯ ಕಡೆಗೆ ಗಮನ ನೀಡಿರುವುದರಿಂದ ಪೂರ್ವ ಚರಿತ್ರೆ ಅಸ್ಪಷ್ಟವಾಗಿಯೇ ಉಳಿದಿದೆ. ಸಿದ್ಧರಾಗಿ ಪ್ರಸಿದ್ಧಿ ಹೊಂದಿದ ನಂತರ ನಡೆದ ಉತ್ತರಭಾಗದ ಚರಿತ್ರೆಗಳು ಮಾತ್ರ ವಿವಿಧ ಪ್ರಕಾರಗಳಲ್ಲಿ ರೂಪುಗೊಂಡಿವೆ. ಅಲ್ಲದೆ ಲೋಕಾತೀತ, ಲೀಲಾಮಯರೆನಿಸಿಕೊಂಡ ಈ ಮಹಾತ್ಮರ ಪೂರ್ವಚರಿತ್ರೆಗಿಂತಲೂ, ಉತ್ತರಭಾಗದ ಮಹಿಮೆಗಳನ್ನೊಳಗೊಂಡ ಚರಿತ್ರೆಗಳನ್ನು ನಂಬಿ ಓಲೈಸಿಕೊಂಡು ಬರುತ್ತಿರುವ ರೂಢಿಯೂ ನಮ್ಮಲ್ಲಿದೆ. ಸಿದ್ಧರಾಗಿ ಪ್ರಸಿದ್ಧಿ ಪಡೆದು ಮಹಿಮೆ ಅಥವಾ ಪವಾಡಗಳನ್ನು ಮೆರೆದ ಅವಧೂತರನ್ನು ಭಕ್ತ ಜನತೆ ತಮ್ಮ ಬಾಳಿನಲ್ಲಿ ಸಂಬಂಧಿಸಿದ ಆಗು-ಹೋಗುಗಳಿಗೆ ಈ ಮಹಾತ್ಮರೇ ಕಾರಣರೆಂದು, ಅವರ ಮೇಲೆ ಭಯ-ಭಕ್ತಿ ಶ್ರದ್ಧೆಯಿಂದ ನಂಬಿಕೆ ಇಟ್ಟು ಬಾಳುತ್ತಾರೆ. ಅವಧೂತರ ಮಹಿಮೆ ಅಥವಾ ಪವಾಡಗಳನ್ನು ಅವರ ಬಗ್ಗೆ ಬಂದಿರುವ ಪುರಾಣಗಳಿಂದಾಗಲಿ, ಹಿರಿಯರಿಂದಾಗಲಿ ಕೇಳಿ ಭಕ್ತಿಯಿಂದ ಪೂಜಿಸುತ್ತಾರೆ. ಇಂಥ ಭಕ್ತ ಜನತೆಗಾಗಿಯೆ, ಅವರ ನಂಬಿಕೆ ಅಭಿರುಚಿಗಳಿಗನುಗುಣವಾಗಿ ಪವಾಡ ಕಥೆಗಳಿಂದ ತುಂಬಿದ ಪುರಾಣಗಳು, ಚರಿತ್ರೆಗಳು, ವಿಪುಲವಾಗಿ ಬೆಳೆದಿವೆ. ಜೊತೆಗೆ ಪವಾಡಗಳನ್ನು ಮಾಡುವವರೇ ಮಹಾತ್ಮರೆಂದು ನಂಬುವ ಪರಂಪರೆ ನಮ್ಮಲ್ಲಿರುವುದರಿಂದ, ಪವಾಡಗಳಿಂದ ತುಂಬಿರುವ ಪುರಾಣ ಪರಂಪರೆ ನಮ್ಮಲ್ಲಿ ಬೆಳೆದು ಬಂದಿದೆ. ನಮ್ಮ ಪರಂಪರೆ ಮತ್ತು ನಂಬಿಕೆಯ ಪ್ರತೀಕವೆ ಈ ಪವಾಡಗಳೆಂದು ನಂಬಿರುವುದರಿಂದ, ಇಂಥ ನಂಬಿಕೆಗೆ ಪಾತ್ರವಾಗಿರುವ ಪವಾಡಗಳು ಧಾರ್ಮಿಕ ಸಾಹಿತ್ಯದ ಅವಿಭಾಜ್ಯ ಅಂಗವಾಗಿ, ಸಾವಿರಾರು ವರ್ಷಗಳಿಂದ ಇಂದಿನವರೆಗೂ ಬೆಳೆದುಕೊಂಡು ಬಂದಿದೆ. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಭೀಮಕವಿಯಿಂದ ಆರಂಭವಾಗಿ, ಇಂದಿನವರೆಗೂ ಅಧಿಕ ಸಂಖ್ಯೆಯಲ್ಲಿ ಪುರಾಣಸಾಹಿತ್ಯ ಬೆಳೆಯುತ್ತಿದೆ. ಮಹಾತ್ಮರ ಹುಟ್ಟಿನ ಬಗ್ಗೆ, ಅವರ ಸಾಧನೆ-ಸಿದ್ಧಿಯ ಬಗ್ಗೆ, ಅಂತ್ಯ ಸಮಾಧಿಯ ಬಗ್ಗೆ ಅವರ ವಿಕಾಸದ ಚರಿತ್ರೆಯುದ್ದಕ್ಕೂ ಪವಾಡಗಳು ವರ್ಣಿತವಾಗಿವೆ.

ಮಹಾತ್ಮರ ಬದುಕು ಕಾವ್ಯಕ್ಕೆ ವಸ್ತುವಾದಾಗ ಪುರಾಣಕಾರರು ಜನಸಾಮಾನ್ಯರಲ್ಲಿ ಪ್ರತೀತಿಯಲ್ಲಿರುವ ಐತಿಹ್ಯಗಳನ್ನು ಕಲೆಹಾಕಿ, ಅವುಗಳಿಗೆ ಒಂದು ನಿರ್ದಿಷ್ಟ ರೂಪ ಕೊಟ್ಟಿರುತ್ತಾರೆ. ಇಂಥ ಐತಿಹ್ಯಗಳು ಜನರಿಂದ ಜನರಿಗೆ ಹರಡಿಕೊಂಡು ಬರುವಾಗ ರಂಗು-ರಂಗಾಗಿ ವೈಭವೀಕರಿಸಿ ಪ್ರಚಾರವಾಗುತ್ತವೆ. ಪುರಾಣ ಚರಿತ್ರೆ ಬರೆಯುವವರೂ ಸಹ ಭಕ್ತರ ಭಕ್ತಿ-ಶ್ರದ್ಧೆಗನುಗುಣವಾಗಿ ಜನರಿಂದ ಕಲೆಹಾಕಿದ ಪವಾಡಕಥೆಗಳನ್ನು ಅತ್ಯಂತ ಸಮರ್ಥವಾಗಿ, ಪರಿಣಾಮಕಾರಿಯಾಗಿ ಚಿತ್ರಿಸಿರುವುದುಂಟು. ಮಹಾತ್ಮರು ತಮ್ಮ ಜೀವನದುದ್ದಕ್ಕೂ ಏನೇನು ಮಾಡಿದರೆಂಬ ಕಥೆಯಿದ್ದು, ಅವರಿಗೆ ಒದಗಿದ ಅಸಮಾನ್ಯ ಸಂದರ್ಭಗಳಲ್ಲಿ ಅವರು ನಡೆಸಿದರೆನ್ನಲಾದ ಅಸಮಾನ್ಯ ಘಟನೆಗಳು ಇರುತ್ತವೆ. "ಈ ಪುರಾಣಗಳು ವೇದಗಳಷ್ಟು ಕಟ್ಟುನಿಟ್ಟಿಲ್ಲದೆ, ಜನಸಾಮಾನ್ಯರ ಆಸೆ-ಆಕಾಂಕ್ಷೆಗಳಿಗೆ ಸ್ಪಂದಿಸಬಲ್ಲ ಮತ್ತು ಅದೇ ಕಾಲದಲ್ಲಿ ಸಂಪ್ರದಾಯಸ್ಥರ ನಂಬಿಕೆಗಳನ್ನು ಪೋಷಿಸಬಲ್ಲ ದೇವತಾ ಕಥೆಗಳನ್ನು ನಿರೂಪಿಸುವಂಥ ಮಾಧ್ಯಮವೊಂದರ ಅಗತ್ಯವುಂಟಾಯಿತೆಂದು ತೋರುತ್ತದೆ."[1] ಇಂಥ ಅಗತ್ಯತೆಯಿಂದ ಪುರಾಣ ಸಾಹಿತ್ಯ ಹುಟ್ಟಿ ಸಮೃದ್ಧಿಯಾಗಿ ಬೆಳೆದಿದೆ. "ಪ್ರಸ್ತುತ ಲಭ್ಯವಿರುವ ಬಹುತೇಕ ಪುರಾಣಗಳ ಪ್ರಧಾನ ವಿಷಯವೆಂದರೆ ಭಕ್ತಿಪಂಥದ ಬಳುವಳಿಯಾಗಿ ಬಂದ ಆರಾಧನೆಗೆ ಸಂಬಂಧಿಸಿದ

ವಿವರಗಳು. ಜನರ ಭಕ್ತಿ ಮತ್ತು ನಿಷ್ಠೆಗೆ ಪಾತ್ರರಾದ ದೇವತೆಗಳಿಗೆ ಸಂಬಂಧಿಸಿದ ವಿವರಗಳು. ಮತ್ತು ಈ ದೇವತೆಗಳ ದೈವಾಂಶಸಂಭೂತರ ಕೃಪೆಗೆ ಪಾತ್ರರಾದ ಜನರು ತೋರುವ ಕೃತಜ್ಞತೆ ಹಾಗೂ ತದನುಗುಣವಾದ ಉಪಾಸನಾ ವಿಧಾನ.''[೨] ಈ ಹಿನ್ನೆಲೆಯಲ್ಲಿ ಪ್ರಾಚೀನ ಕಾಲದಿಂದಲೂ ಪುರಾಣವನ್ನು ಸೃಷ್ಟಿಮಾಡಿರುವ ಎರಡು ಸಂಪ್ರದಾಯಗಳು ನಮ್ಮಲ್ಲಿವೆ.

೧. ''ಪ್ರೌಢ ಸಂಪ್ರದಾಯ

೨. ಸರಳ ಸಂಪ್ರದಾಯ''[೩]

ಪ್ರೌಢ ಸಂಪ್ರದಾಯದಲ್ಲಿ ಆರ್ಯಋಷಿಗಳಿಂದ ರಚಿತವಾದ ವೇದ ಮಂತ್ರಗಳೆಂಬ ಧಾರ್ಮಿಕ ಗೀತೆಗಳಿದ್ದು, ಸಂಸ್ಕೃತದಲ್ಲಿ ವ್ಯಾಸರಿಂದ ರಚಿತವಾಗಿರಬಹುದಾದ ೧೮ ಪುರಾಣಗಳು ಮತ್ತು ಉಪಪುರಾಣಗಳ ರೂಪ ಈ ಸಂಪ್ರದಾಯದಲ್ಲಿ ಬರುತ್ತವೆ.

ಸರಳ ಸಂಪ್ರದಾಯದಲ್ಲಿ ಪ್ರತಿಭಾವಂತ ಸಾಮಾನ್ಯ ಜನರಿಂದ ಹಾಡುಗಬ್ಬಗಳ ರೂಪದಲ್ಲಿ ರಚಿತ ವಾಗಿರುವವು. ಒಬ್ಬ ವಿದ್ವಾಂಸ ದೀರ್ಘ ಕಾವ್ಯ ರೂಪದಲ್ಲಿ ಬರೆದ ಕರ್ತೃ ಪ್ರಸಿದ್ಧ ಪದ್ಧತಿ. ಭಕ್ತ ಜನತೆಯನ್ನೇ ಮುಖ್ಯ ಉದ್ದೇಶವಾಗಿಟ್ಟು ರಚಿಸಿದ ಪುರಾಣಗಳನ್ನು ಸಾಮಾನ್ಯವಾಗಿ

೧. ವೈದಿಕ ಪುರಾಣಗಳು

೨. ಜೈನ ಪುರಾಣಗಳು

೩. ಶೈವ ಪುರಾಣಗಳು (ವೀರಶೈವ ಪುರಾಣಗಳು)

ಹೀಗೆ ಪುರಾಣಗಳನ್ನು ಅಧ್ಯಯನದ ಅನುಕೂಲಕ್ಕೆ ವಿಭಾಗ ಮಾಡಿಕೊಳ್ಳಬಹುದು. ''ಬಸವ ಪುರಾಣ ಮೊದಲಾದ ವೀರಶೈವ ಪುರಾಣಗಳ ಜೊತೆಗೆ ಬಹುತೇಕ ಮೌಖಿಕ ಸಂಪ್ರದಾಯವಾಗಿ ಸಾಗಿ ಬರುತ್ತಿರುವ ಜಾನಪದ ಸಾಹಿತ್ಯ, ದಂತಕಥೆ ಮೊದಲಾದವುಗಳಲ್ಲಿಯೂ ಪುರಾಣಗಳಲ್ಲಿ ಕಾಣುವ ಹಲವು ಗುಣಲಕ್ಷಣಗಳು ಕಂಡು ಬರುತ್ತವೆ.''[೪] ಒಟ್ಟಾರೆ ಪ್ರೌಢ, ಸರಳ ಮತ್ತು ಜಾನಪದ ಮೌಖಿಕ ಸಂಪ್ರದಾಯದಲ್ಲಿ ಪುರಾಣ ಸಾಹಿತ್ಯ ಬೆಳೆದು ಬಂದಿದೆ.

ನಮ್ಮಲ್ಲಿ ಇಂದು ಪ್ರಚಲಿತವಿರುವ ಪುರಾಣಗಳು ಏಕ ವ್ಯಕ್ತಿ ಪ್ರಧಾನವಾದವುಗಳು. ಈ ಪುರಾಣಗಳನ್ನು ಲೀಲೆ, ವಿಲಾಸ, ಚರಿತೆ ಎಂದೂ ಕರೆಯಲಾಗುತ್ತಿದೆ. ಇಂಥ ಪುರಾಣಗ್ರಂಥಗಳಲ್ಲಿ ಹೆಚ್ಚಿನ ಗಾತ್ರವನ್ನು ಆಕ್ರ ಮಿಸಿರುವ ಅಂಶವೆಂದರೆ ಮಹಾತ್ಮರು ಮಾಡಿದರೆನ್ನಲಾದ ಪವಾಡಗಳು. ಪುರಾಣದ ಭಕ್ತಿ - ಭಾವವನ್ನು ವ್ಯಕ್ತಪಡಿಸುವುದಕ್ಕೆ ಭಾಮಿನಿ ಷಟ್ಪದಿ ಯೋಗ್ಯವಾಗಿದ್ದು, ಹೆಚ್ಚಿನ ಪುರಾಣಗಳೆಲ್ಲಾ ಈ ಷಟ್ಪದಿಯಲ್ಲೇ ರಚಿತವಾಗಿವೆ. ಸರಳ ದೇಶಿನಿಷ್ಠವಾದ ಶೈಲಿ, ಗೇಯಾಂಶ ಪ್ರಧಾನ ಗಣ ವಿನ್ಯಾಸ ಅದರ ತಾಳಗಳ ಗತಿಗೆ ಅನುಗುಣವಾಗಿ ೩/೪/೩/೪ ರಂತೆ ಇರುತ್ತದೆ. ಭೀಮಕವಿಯಿಂದ ಆರಂಭವಾಗಿ (೧೩೬೯) ಇಂದಿನವರೆಗೂ ವೀರಶೈವ ಪುರಾಣಗಳು ಹೆಚ್ಚಾಗಿ ಈ ಷಟ್ಪದಿಯಲ್ಲಿ ಬರುತ್ತಿವೆ. ಮಹಾತ್ಮರ ಚಾರಿತ್ರ, ಧರ್ಮ, ನೀತಿ,

ತತ್ತ್ವಗಳನ್ನು ಪುರಾಣ ಪ್ರವಚನಕಾರರು ಹಾಡುಗಬ್ಬಗಳಾದ ಇವುಗಳನ್ನು ರಾಗವಾಗಿ, ಅರ್ಥವತ್ತಾಗಿ ಹೇಳಿ ಜನಸಾಮಾನ್ಯರ ಮೇಲೆ ವಿಶೇಷ ಪರಿಣಾಮ ಬೀರುತ್ತಿರುವುದನ್ನು ಕಾಣಬಹುದು.

ಈ ಅನುಭಾವಿಗಳನ್ನು ಕುರಿತು ಪುರಾಣಗಳಲ್ಲದೆ ಗದ್ಯರೂಪದಲ್ಲಿ ಚರಿತ್ರೆ, ಅವರ ತತ್ತ್ವವನ್ನು ಕುರಿತ ಭಕ್ತಿಗೀತೆಗಳು, ಸ್ತೋತ್ರಗಳೂ ಇವೆ. ಜೊತೆಗೆ ಸ್ವರವಚನ ಮತ್ತು ಹೇಳಿಕೆಯ ರೂಪದ ತ್ರಿಪದಿಗಳಂತಹ ಸಣ್ಣ ಪ್ರಮಾಣದ ಹಾಡುಗಳೂ ಇವೆ.

ಅವಧೂತರ ಮಠದವರು ತಮ್ಮ ಮಠದ ಹಿರಿಮೆಯನ್ನು ಸಾರಲು, ಅವರ ಮಹಿಮೆಯನ್ನು ಬಿತ್ತರಿಸಲು ಪುರಾಣ-ಚಾರಿತ್ರ-ಲೀಲೆಗಳನ್ನು ಕವಿಗಳಿಂದ ಬರೆಸಿರುವುದನ್ನು ಕಾಣುತ್ತೇವೆ. ಪುರಾಣಕಾರರು ತಮ್ಮ ಪುರಾಣ ನಾಯಕನ ಬಗೆಗೆ ಭಕ್ತಜನತೆಯಲ್ಲಿ ಹರಡಿರುವ ಐತಿಹ್ಯಗಳನ್ನು ಕಲೆಹಾಕಿ, ಇಲ್ಲವೆ ಸಮಕಾಲೀನರಾಗಿದ್ದರೆ, ಅವರ ಮಹಿಮೆಗಳಿಂದ ಪ್ರಭಾವಿತರಾಗಿ ಪುರಾಣ ರಚಿಸಿದ್ದಾರೆ. ಜೀವನ ಚರಿತ್ರೆ ಮತ್ತು ಪವಾಡಗಳ ಜೊತೆಗೆ ಷಟ್ಸ್ಥಲ, ಅಷ್ಟಾವರಣ ಮೊದಲಾದ ತಾತ್ತ್ವಿಕ ವಿಷಯಗಳನ್ನು ಜನಮನದ ಸಂಸ್ಕಾರಕ್ಕಾಗಿ ಧರ್ಮ-ಅಧರ್ಮ, ನೀತಿ-ಅನೀತಿಗಳ ಉಪದೇಶವೂ ಇರುತ್ತದೆ. ಪ್ರವಚನಕಾರರು ತನ್ನ ಸುಶ್ರಾವ್ಯ ವಾಚನದಿಂದ, ಸರಳ ವಿವರಣೆ ಯಿಂದ ಕ್ಲಿಷ್ಟವಾದೆಡೆಯಲ್ಲಿ ಉಪಕಥೆ ಹೇಳುತ್ತಾ ಭಕ್ತ ಜನತೆಗೆ ಪುರಾಣ ಪರಿಚಯ ಮಾಡಿಕೊಡುವ ಪದ್ಧತಿ ಈ ಮುಖಾಂತರ ನಡೆಯುತ್ತಿದೆ.

ಚೇಳಗುರಿಕೆ ಎರಿತಾತನವರ ಕುರಿತ ಸಾಹಿತ್ಯ

೧. ಚೇಳಗುರಿಕೆ ಶ್ರೀ ಎರ್ರಿಸ್ವಾಮಿಗಳ ಲೀಲಾ ವಿಲಾಸ (೧೯೬೩) : ಶ್ರೀ ಶಿ.ವ.ಚನ್ನಬಸವೇಶ್ವರರು ತಾತನವರನ್ನು ಕಂಡಿರುವ ಮತ್ತು ಕೇಳಿರುವ ಭಕ್ತರ ಹೇಳಿಕೆಗಳನ್ನು, ಸಂಗತಿಗಳನ್ನು, ಹಾಗೆಯೇ ಶ್ರೀ ವೈ.ಎಂ.ಚಂದ್ರಯ್ಯನವರು ತಾತನವರ ಪೂರ್ವಚರಿತ್ರೆಯ ಬಗ್ಗೆ ಕ್ಷೇತ್ರಕಾರ್ಯ ಮಾಡಿ ಕಷ್ಟಪಟ್ಟು ಸಂಗ್ರಹಿಸಿದ ಕರಡುಗಳ ಆಧಾರದ ಮೇಲೆ ಈ ಕೃತಿ ರಚಿಸಿದ್ದಾರೆ. ಪುರಾಣ, ಉಪನಿಷತ್, ಗೀತೆ, ಸಿದ್ಧಾಂತ ಶಿಖಾಮಣಿ ಮತ್ತು ಮಹಾನುಭಾವಿಗಳ ಆಧ್ಯಾತ್ಮಿಕ ನುಡಿಗಳನ್ನು ಆಧಾರವಾಗಿಟ್ಟುಕೊಂಡು ಈ ಚರಿತ್ರೆಯನ್ನು ರೂಪಿಸಿ ದ್ದಾರೆ. ಕೃತಿಯಲ್ಲಿ ತಾತನವರ ಪೂರ್ವ ಇತಿಹಾಸಕ್ಕಿಂತಲೂ ಅವರು ಚೇಳಗುರಿಕೆಗೆ ಬಂದು ನೆಲೆನಿಂತ ಮೇಲೆ, ಜನರಿಗೆ ಅವರ ಮೇಲಿದ್ದ ಹುಚ್ಚು ಭಾವನೆಗಳು ಹೋಗಿ ಭಕ್ತರಾದ ವಿಷಯವಿದೆ. ತಾತನವರ ಲೀಲಾ ವಿಲಾಸಗಳನ್ನು ತಿಳಿಸುತ್ತಾ, ಮಠದ ನಿರ್ಮಾಣ, ತಾತನವರ ವ್ಯಕ್ತಿತ್ವ ಮತ್ತು ಲಕ್ಷಣ, ಅವರು ಮಾಡಿದರೆನ್ನಲಾದ ಪವಾಡಗಳು, ಶಿಷ್ಯರ ಬಳಗ ಮತ್ತು ಅಂತ್ಯ (ಸಮಾಧಿ) ಇವೆಲ್ಲವನ್ನೂ ಭಕ್ತರಿಗೆ ಪ್ರಿಯವಾಗುವಂತೆ ರಚಿಸಿದ್ದಾರೆ. ಸಮಾಧಿಯಾದ ನಂತರ ಮಠದ ಕಾರ್ಯಕಲಾಪಗಳ ವಿವರಣೆ ನೀಡುತ್ತಾ, ಇಂದು ಬೆಳೆದಿರುವ ಮತ್ತು ಬೆಳೆಯುತ್ತಿರುವ ಮಠದ ಚಿತ್ರಣ ಇದೆ. ಮಠದ ನಿರ್ಮಾಣ ಕಾರ್ಯಕ್ಕೆ ಶ್ರಮಿಸಿದ ಶಿಷ್ಯ ತಿಕ್ಕಯ್ಯನವರು ಮತ್ತು ಭಕ್ತ ಶ್ಯಾಮಣ್ಣನವರ ಸೇವೆಯನ್ನು ಶ್ಲಾಘಿಸುತ್ತಾ, ಮಠದ ನಿರ್ಮಾಣಕ್ಕೆ ದಾನ ನೀಡಿದ ಭಕ್ತರುಗಳ ವಿವರಣೆಯಿದೆ. ಬಿಡಿಬಿಡಿ ಲೇಖನಗಳನ್ನು, ಹೇಳಿಕೆಗಳನ್ನು ಆಧಾರ ವಾಗಿಟ್ಟುಕೊಂಡು ಒಂದು ಉತ್ತಮ ಚರಿತ್ರೆಯನ್ನು ಗ್ರಂಥಕರ್ತರು ನೀಡಿದ್ದಾರೆ.

''ಯೋಗಿಗಳ ಜೀವನ ಚರಿತ್ರೆಯು ಭೌತಿಕ ಘಟನೆಗಳ ಬೌದ್ಧಿಕ ಸಂಗ್ರಹವಲ್ಲ. ಸಿದ್ಧಿಯು ಅನುಗ್ರಹಿಸಿದಾಗ ಮಾತ್ರವೇ ಬುದ್ಧಿಯು ಸಿದ್ಧಿಯ ಸಾಧನೆಯನ್ನು, ಸಾಧನೆಯ ಸಿದ್ಧಿಯನ್ನು, ಸಿದ್ಧಿ-ಸಾಧನೆಗಳ ದಿವ್ಯ ಚರಿತ್ರೆಯನ್ನು ಗ್ರಹಿಸಬಲ್ಲುದು. ಶಿವನ ಶಕ್ತಿಯು ಅನುಗ್ರಹಿಸಿದ ವಿನಾ ಶಿವನನ್ನು ಗ್ರಹಿಸುವುದು ದುಸ್ಸಾಧ್ಯ. ಭಕ್ತಿಯಿಂದ ಆಶ್ರಯಿಸಿದವರಿಗೆ ಮಾತ್ರ ಶಿವನ ಶಕ್ತಿಯ ಅನುಗ್ರಹ ಸಾಧ್ಯ. ಇದು ಒಂದು ಚಕ್ರವ್ಯೂಹ ವ್ಯೂಹಾತ್ಮಕ ವಾದ ಈ ಚಕ್ರವು ಶ್ರೀ ಚಕ್ರವಾಗಿ ಪರಿಣಮಿಸಬೇಕು. ಹಾಗೆ ಪರಿಣಮಿಸದಿದ್ದರೆ ಆತ್ಮನಿಗೆ ಪರಿಭ್ರಮಣವೇ ವಿನಾ ಪರಿಣಾಮವಿಲ್ಲ. ಅಪರಿಭ್ರಮಿತನಾಗಿ ಅಪ್ರಮತ್ತನಾಗಿ, ಶಿವಯೋಗಿಸಿದ್ಧನೂ, ಸಿದ್ಧಕುಲ ಕಮಲ ಕಮನೀಯ ಭಾಸ್ಕರನೂ ಆದ ಶ್ರೀಮದೆರ್ರಿತಾತನ ಶಿವಮಯ ಜೀವನವನ್ನು ಶಿವದೃಷ್ಟಿಯಿಂದ ದರ್ಶನ, ಶಿವಾರ್ಪಿತಭಾವದಿಂದ ಪ್ರದರ್ಶಿಸಲು ಪಟ್ಟ ಪ್ರಯತ್ನವೇ ಈ ಗ್ರಂಥ ರಚನೆಗೆ ಮೂಲೋದ್ದೇಶ''[೯] ಎಂದು ಲೇಖಕರು ಗ್ರಂಥ ರಚನೆಯ ಉದ್ದೇಶವನ್ನು ತಿಳಿಸಿದ್ದಾರೆ.

ಜೀವನದ ಜಂಜಡವನ್ನು ಮೀರಿ, ಆಧ್ಯಾತ್ಮದ ಮೆಟ್ಟಿಲನ್ನೇರಿ, ಹಠದಿಂದ ವಿಧಿ ವಿಲಾಸಗಳನ್ನು ಮೆಟ್ಟಿನಿಂತು, ಕಲ್ಪನಾಶಕ್ತಿಗೆ ಮೀರಿದ ಪವಾಡಮೆರೆದು, ಪತಿತರನ್ನು ಪತಿಕಲಿಸಿ ಪಾವನಗೊಳಿಸಲೂ, ಬಿದ್ದವರನ್ನು ಎಬ್ಬಿಸಿ, ಎದ್ದವರನ್ನು ಮುನ್ನಡೆಸಲೂ, ನೆಲವನ್ನು ನೋಡಿದ ಜೀವಿಗಳನ್ನು ಉದ್ಧರಿಸಲೂ ಅವತರಿಸಿದ ಈಶ್ವರಾಂಶ ಸಂಭೂತರಾದ ಮಹಾಯೋಗಿಗಳಲ್ಲಿ ಶ್ರೀ ಎರ್ರಿತಾತನವರೂ ಒಬ್ಬರೆಂದು, ಅವತಾರ ಪುರುಷರ ಹಿನ್ನಲೆಯಲ್ಲಿ ಹೇಳಿದ್ದಾರೆ. ವೇದ ಉಪನಿಷತ್ತುಗಳ ಅಧ್ಯಯನವುಳ್ಳ, ಆಧ್ಯಾತ್ಮಿಕ ಮನೋಧರ್ಮದ ಕೃತಿಕಾರರು ತಾತನವರ ಜೀವನದಲ್ಲಿ ನಡೆದ ಎಲ್ಲಾ ಘಟನೆಗಳ ಬಗ್ಗೆ ಸಮಂಜಸ ನಿರೂಪಣೆ ನೀಡಿದ್ದಾರೆ. ಸರ್ವರಿಗೂ ತಾತನವರ ವ್ಯಕ್ತಿತ್ವವನ್ನು ಪರಿಚಯಿಸುತ್ತಿರುವ ಈ ಕೃತಿ ಸರಳವಾದ ಶೈಲಿಯಿಂದ, ಸುಂದರ ನಿರೂಪಣೆಯಿಂದ ಕೂಡಿದೆ. ಓದುಗರಿಗೆ ಹಲವಾರು ಆಧ್ಯಾತ್ಮದ, ಯೋಗಿಗಳ ತಾತ್ವಿಕ ವಿಷಯವನ್ನು ಸಾದರಪಡಿಸುತ್ತದೆ. ಶ್ರೀ ಎರ್ರಿಸ್ವಾಮಿಗಳವರನ್ನು ಕಂಡುಕೇಳಿದ ಭಕ್ತರ ಸ್ಮೃತಿಪಟಲದಲ್ಲಿದ್ದ ಎಲ್ಲಾ ಸಂಗತಿಗಳನ್ನು ಒಂದೆಡೆ ಸೇರಿಸಿ, ಓದುಗರಿಗೆ ಸ್ವಾರಸ್ಯವಾಗಿರುವಂತೆ ರಚಿಸಿ ಜನತೆಗೆ ಮಹೋಪಕಾರವನ್ನು ಮಾಡಿದ್ದಾರೆ ಎನ್ನುವ ಮೆಚ್ಚುಗೆಯ ಮಾತು ಅರ್ಥಪೂರ್ಣವಾದದ್ದು. ಮೂರು ಬಾರಿ ಮರು ಮುದ್ರಣಗೊಂಡಿರುವುದಲ್ಲದೆ, ತೆಲುಗಿನಲ್ಲಿ ''ಎರ್ರಿಸ್ವಾಮುಲ ಮೌನ ಚರಿತ್ರಂ'' ಎಂಬ ಹೆಸರಿನಿಂದ ಅನುವಾದಗೊಂಡಿರುವುದನ್ನು ನೋಡಿದರೆ ಈ ಕೃತಿಯ ಜನಪ್ರಿಯತೆ ಎಷ್ಟಿತ್ತೆಂಬುದು ಮನದಟ್ಟಾಗುತ್ತದೆ.

೨. ಲೀಲಾಮೃತ, ಪಂ|| ವೈ.ನಾಗೇಶ ಶಾಸ್ತ್ರಿಗಳು (೧೯೬೬) : ಭಾಮಿನಿ ಷಟ್ಪದಿಯಲ್ಲಿ ರಚಿತವಾಗಿರುವ ಈ ಪುರಾಣವು ೧೭ ಸಂಧಿಯನ್ನೊಳಗೊಂಡು ಒಟ್ಟು ೭೭೭ ಪದ್ಯಗಳಿಂದ ಕೂಡಿದೆ. ಗ್ರಂಥಕರ್ತ ಪಂ|| ವೈ.ನಾಗೇಶಶಾಸ್ತ್ರಿಗಳೇ ಹೇಳುವಂತೆ ಶ್ರೀ ಚಂದ್ರಯ್ಯನವರು ಸಂಗ್ರಹಿಸಿದ ಟಿಪ್ಪಣಿಗಳು ಮತ್ತು ಶ್ರೀ ಶಿ.ವ. ಚನ್ನಬಸವೇಶ್ವರರ ಕೃತಿಯಾದ ಚೇಳಗುರಿಕೆ ಶ್ರೀ ಎರ್ರಿಸ್ವಾಮಿಗಳ ಲೀಲಾವಿಲಾಸ ಹಾಗೂ ಕಂಡು ಕೇಳಿದ ಘಟನೆಗಳ ಆಧಾರದ ಮೇಲೆ ಈ ಕೃತಿ ರೂಪುಗೊಂಡಿದೆ ಎಂದಿದ್ದಾರೆ. ಪುರಾಣ ಕೃತಿಯ ಬಗ್ಗೆ ಮುನ್ನುಡಿ ಬರೆಯುತ್ತಾ ಜೋಳದರಾಶಿ ದೊಡ್ಡನಗೌಡರು ''ಚಂದ್ರಯ್ಯನವರು ಸಂಗ್ರಹಸಿದ ವಿಷಯಗಳನ್ನು ಬಹು ಮಟ್ಟಿಗೆ ಇದ್ದುದಿದ್ದಂತೆ ಚಿತ್ರಿಸಿರುವ ಶಿ.ವ.ಚನ್ನಬಸವೇಶ್ವರರಿಗಿಂತಲೂ, ಶಾಸ್ತ್ರಿಗಳು ಎರ್ರಿಸ್ವಾಮಿಗಳ ಲೀಲಾ

ವಿಲಾಸಗಳ ಕಥಾನಕದಲ್ಲಿ ಉತ್ತರಭಾಗವನ್ನು ಇದ್ದುದಿದ್ದಂತೆ ಚಿಕ್ಕ ವ್ಯತ್ಯಾಸಗಳೊಂದಿಗೆ ಸಂಗ್ರಹಿಸಿ, ನಿರ್ಣಯಾತ್ಮಕವಾಗಿ ಹೇಳಲಾಗಿದ್ದು, ಪೂರ್ವಭಾಗವನ್ನು ಮಾತ್ರ ಉತ್ತರ ಲೀಲಾವಿಲಾಸಗಳ ವಿಕಾಸಕ್ಕೆ ಅನುಗುಣವಾದ ಪುರಾಣದ ಕಥಾ ವಿಧಾನಕ್ಕೆ ಅವಶ್ಯಕವಾದ ಕಲ್ಪನೆಯೊಂದಿಗೆ ಕಥೆಯನ್ನು ಕಟ್ಟಿದ್ದಾರೆ. ಈ ಸಂವಿಧಾನವನ್ನು ಕಲ್ಪನೆಯೆಂದು ಕರೆಯುವುದಕ್ಕಿಂತ ಲೀಲಾವಿಲಾಸದಲ್ಲಿ ಸಂದೇಹ ಗಳಾಗಿ ಉಕ್ತವಾದ ವಿಷಯಗಳನ್ನು ಸಂಗ್ರಹಿಸಿ ಕಥೆಗೊಂದು ಕ್ರಮವನ್ನು ನೀಡಿದ್ದಾರೆಂದು ಹೇಳುವುದು ಸೂಕ್ತ''[೬] ಎಂದಿದ್ದಾರೆ.

ನೀಲಕಂಠಾರಾಧ್ಯರೆಂಬಸು
ಶೀಲರಿಗೆ ಮಗನಾಗಿ ಹುಟ್ಟಿದ
ನಾಲ ಸದ್ಗುರುವೆರ‍್ರಿತಾತನು ನಿರ್ಮಳಾಂಬಿಕೆಯೋಳ್ ॥

ಭಕ್ತಿಯೊಳು ಬಸವಣ್ಣನಮಳವಿ
ರಕ್ತಿಯೋಳ್ ಪ್ರಭುದೇವರೆಂದಾ
ಸಕ್ತಿಯಿಂ ಬುಧರಾವ ಪೂಜ್ಯನ ಪೊಗಳಿಸುಖಿಸಿದರೋ ॥
ಮುಕ್ತತನ್ಮೃತ್ಯುಂಜಯಪ್ಪನ
ಭುಕ್ತಿ ಮುಕ್ತಿಪ್ರದ ಪದಾಬ್ಜವ
ಭಕ್ತಿಯಿಂ ಭಜಿಪೊಂದು ಭಾಗ್ಯವದಿರಲಿ ನನ್ನಲ್ಲಿ॥[೭]

ಇಷ್ಟದೇವತಾ ಪ್ರಾರ್ಥನೆಗಳಿಂದ ಪುರಾಣವು ಆರಂಭಗೊಂಡು ಎರ‍್ರಿತಾತನವರ ಊರು, ತಂದೆ, ತಾಯಿ, ಬಾಲ್ಯಜೀವನ, ವಿದ್ಯಾಭ್ಯಾಸ, ಗುರುಅನುಗ್ರಹ, ವಿವಾಹ, ವೈರಾಗ್ಯ, ಯೋಗ, ಅವಧೂತ ಸ್ಥಿತಿ, ಲೋಕ ಪರ್ಯಟನೆ, ಪವಾಡ ವೃತ್ತಾಂತಗಳು, ಹಲವಾರು ಊರುಗಳನ್ನು ಸುತ್ತುತ್ತಾ ಚೇಳಗುರಿಕೆಗೆ ಆಗಮನ, ಚೇಳಗುರಿಕೆಯಲ್ಲಿ ನೆಲೆ ಮತ್ತು ಮಹಿಮೆಗಳು, ತನ್ನ ಶಿಷ್ಯರ ಬಳಗ, ತಿಕ್ಕಯ್ಯಾವಧೂತರು ಮಠವನ್ನು ಕಟ್ಟಿಸಿ, ಹೊರಟು ಹೋದ ಮೇಲೆ ಜೀವಸಮಾಧಿ, ತಾತನವರ ಮಠಕ್ಕೆ ಆಗಮಿಸುವ ಗುರು ಜಂಗಮಾದಿಗಳ ವಿವರ ನೀಡುವವರೆಗೂ ಕಥೆ ಸಾಗಿ ಬಂದಿದೆ.

ಸುಮಾರು ೧೪ ಪುರಾಣಗಳನ್ನು ಬರೆದಿರುವ ಶಾಸ್ತ್ರಿಗಳು ತಮ್ಮ ಪಾಂಡಿತ್ಯ ಪ್ರತಿಭೆಗಳನ್ನು ತೋರಿಸುವು ದಕ್ಕಿಂತ, ಜನ ಸಾಮಾನ್ಯರಿಗೆ ಯಾವ ರೀತಿಯಲ್ಲಿ ಹೇಳಿದರೆ ಹೆಚ್ಚು ಪರಿಣಾಮಕಾರಿಯಾಗುತ್ತದೆ ಎಂಬುದನ್ನು ಮನಗಂಡು, ಜನಸಾಮಾನ್ಯರಿಗೆ ಉಪಯುಕ್ತವಾದ ಶೈಲಿಯಲ್ಲಿಯೇ ಮಹಾತ್ಮರ ಚರಿತ್ರೆ ಬರೆದಿದ್ದಾರೆ. ಭಕ್ತಿ-ಜ್ಞಾನ-ವೈರಾಗ್ಯವನ್ನು ಪರಿಪಕ್ವ ಅನುಭವಗಳ ತತ್ವಾರ್ಥದೊಂದಿಗೆ ಎರ‍್ರಿತಾತನ ಚರಿತ್ರೆ ಕಟ್ಟಿದ್ದಾರೆ.

ಪುರಾಣದಲ್ಲಿ ಎರ‍್ರಿತಾತನ ವ್ಯಕ್ತಿತ್ವ, ಸಾಧನೆ, ಮಹಿಮೆಯ ನಿರೂಪಣೆಯ ಜೊತೆಗೆ ತತ್ತ್ವ-ಧರ್ಮ-ನೀತಿ ಇವುಗಳ ತಿಳಿವಳಿಕೆಯನ್ನು ಸಂದರ್ಭೋಚಿತವಾಗಿ ಕೊಡುವ ಕಡೆಗೂ ಗಮನ ಹರಿಸಲಾಗಿದೆ. ತತ್ತ್ವ-ಧರ್ಮ-ನೀತಿಗಳು ಜನಮನ ಮುಟ್ಟುವಂತೆ, ಅವರ ಆಧ್ಯಾತ್ಮಿಕ ಬೆಳವಣಿಗೆಗೆ ಸಹಾಯಕವಾಗುವಂತೆ ಸಂದರ್ಭೋಚಿತ ವಾಗಿ ಹಲವಾರು ಪವಾಡ ಕಥೆಗಳನ್ನು ವಿವರಿಸಿದ್ದಾರೆ. ಬೆಳಗುಪ್ಪೆ, ಉರವಕೊಂಡ, ವೆಲಗೊಂಡೆ, ಚೀಕಲ

ಗುರಿಕೆ, ಚೇಳುಗುರಿಕೆ ಮುಂತಾದ ಗ್ರಾಮಗಳಲ್ಲಿ ತಾತನು ತೋರಿದ ಪವಾಡ ಕಥೆಗಳನ್ನು ವರ್ಣಿಸಿದ್ದು, ಭಕ್ತ ಜನತೆಗೆ ನ್ಯಾಯ-ನೀತಿ-ಧರ್ಮ ಸತ್ಯದಿಂದ ಬಾಳಲು ಪ್ರೇರೇಪಿಸುವಂತೆ, ನಂಬಿದವರನ್ನು ತಾತನು ಕೈಬಿಡು ವುದಿಲ್ಲವೆಂಬ ಭರವಸೆಯನ್ನು ಕೊಡುವಂತೆ, ಸದ್ಭಕ್ತರಿಗೆ ಏನು ಬೇಕೋ ಎಲ್ಲವನ್ನೂ ಪರಿಪಕ್ವಾನುಭವಗಳ ಹಿನ್ನೆಲೆಯಲ್ಲಿ ಸಮಯೋಚಿತವಾಗಿ ಬೋಧಿಸಿದ್ದಾರೆ.

ಪುಣ್ಯಪುರುಷರ ಪುರಾಣಗಳನ್ನು ಭಕ್ತಿ ಶ್ರದ್ಧೆಯಿಂದ ಯಾರು ಕೇಳುತ್ತಾರೋ, ಓದುತ್ತಾರೋ, ಅಂಥವರು ತಮ್ಮ ಪಾಪಗಳಿಂದ ಮುಕ್ತರಾಗಿ ಸ್ವರ್ಗಾದಿಭೋಗಗಳನ್ನು ಪಡೆಯುತ್ತಾರೆಂಬ ನಂಬಿಕೆ ನಮ್ಮ ನೆಲದಲ್ಲಿರುವು ದರಿಂದ, ಶ್ರೀ ಎರ್ರಿತಾತನವರ ಲೀಲಾಮೃತ ಪುರಾಣವನ್ನು ರಸಭಾವಗಳಿಗೆ ತಕ್ಕಂತೆ ಪರಿಣಾಮ ಕಾರಿಯಾಗಿ ಓದುವವರೂ ಮತ್ತು ಭಕ್ತಿ ಶ್ರದ್ಧೆಯಿಂದ ಕೇಳುವವರ ಪರಂಪರೆ ಬೆಳೆದುಕೊಂಡು ಬಂದಿದೆ. ಜಾತ್ರೆಗಳಲ್ಲಿ, ಹಬ್ಬ ಹರಿದಿನಗಳಲ್ಲಿ ಇತರೆ ಶುಭ ಕಾರ್ಯಗಳಲ್ಲಿ ಮನೆ, ಮಂದಿರ, ಮಠಗಳಲ್ಲಿ ಈ ಕೃತಿಯನ್ನು ಪಾರಾಯಣ ಮಾಡಿಕೊಂಡು ಬರುತ್ತಿದ್ದಾರೆ.

೩. **ಶಿವಮಯ ಜೀವನ ಚರಿತ್ರೆ :** ಡಾ.ಜೋಳದರಾಶಿ ದೊಡ್ಡನಗೌಡರು ಸಂಗ್ರಹಿಸಿರುವ ಚಿಕ್ಕ ಕೃತಿ. ಈ ಕೃತಿಯಲ್ಲಿ ತಾತನವರು ಚೇಳಗುರಿಕೆಗೆ ಬಂದು ನೆಲೆನಿಂತ ಪ್ರಮುಖ ಘಟನೆಗಳಿವೆ. ತಾತನವರ ಚರಿತ್ರೆಯ ಮುಖ್ಯಾಂಶಗಳೆಂದು ಅವರೇ ಹೇಳಿರುವುದರಿಂದ ಪ್ರಮುಖ ಘಟನೆಗಳ ವಿಷಯ ಮಾತ್ರವಿದೆ. ಪುಸ್ತಕ ಚಿಕ್ಕದಾದರೂ ಉತ್ತಮವಾಗಿದೆ. ಪ್ರಸ್ತಾವನೆಯಲ್ಲಿ ತಾತನವರು ಚೇಳಗುರಿಕೆಗೆ ಬಂದು ನೆಲೆನಿಂತ ಮೇಲಿನ ಚಿತ್ರಣವನ್ನು ವೈಚಾರಿಕವಾಗಿ ಅವಲೋಕಿಸಿದ್ದಾರೆ. "ನೋಡುವವರಿಗೆ ಕುರುಹಾಗಿ, ಅನುಗ್ರಹದ ಗುರುವಾಗಿ ಕುರುಹಳಿದ ಎರ್ರಿಸ್ವಾಮಿಗಳ ಮಹಿಮಾನ್ವಿತ ಪರವಶ ಜೀವನದ ಅಂಶಗಳನ್ನು ಐತಿಹಾಸಿಕ ದೃಷ್ಟಿಯಿಂದ ವಿವರಿಸಲು ಸಾಧ್ಯವಿಲ್ಲ. ಏಕೆಂದರೆ ಎಲ್ಲರಂತೆ ಅವರಿರಲಿಲ್ಲ. ಅವರಿದ್ದ ರೀತಿಯನ್ನು ಎಲ್ಲರೂ ಅರಿಯುವಂತಿ ರಲಿಲ್ಲ. ಆದ್ದರಿಂದ ಲೌಕಿಕ ವರ್ತನೆಯನ್ನು ಕಂಡು ಅಪಹಾಸ್ಯದಿಂದ "ಇವನೊಬ್ಬ ಎರ್ರಿ(ಹುಚ್ಚ)ಸ್ವಾಮಿ" ಎಂದು ಕರೆದ ಹುಚ್ಚು ಜನರ ಹೆಸರೇ ಇದುವರೆವಿಗೂ ನಾಡಿನಲ್ಲಿ ಪ್ರಚಲಿತವಾಗಿ ಪ್ರಸಿದ್ಧಿಯಾಗಿದೆ. ಹೆತ್ತ ತಂದೆ ತಾಯಿಗಳು ಹೊತ್ತನಾಡು, ಪಡೆದ ಹೆಸರು, ಹಿಡಿದ ಕುಲಗೋತ್ರ ಇಂದಿಗೂ ತಿಳಿದಿಲ್ಲ. ಅವರನ್ನು ನೋಡಿದವರು ಅವರ ಸೇವೆಯಲ್ಲಿದ್ದವರು ಇಂದಿಗೂ ಕೆಲವರಿದ್ದಾರೆ. ಆದರೆ ಇವರಾರಿಗೂ ಅವರಾರೆಂಬುದು ತಿಳಿಯದು"[೮] ತಾತನವರ ಪೂರ್ವ ಇತಿಹಾಸ ಅಸ್ಪಷ್ಟವೆಂಬುದನ್ನು ತಿಳಿದ ಗೌಡರು ಚೇಳಗುರಿಕೆಯಲ್ಲಿ ನೆಲೆನಿಂತ ಮೇಲೆ ಅವರು ಮಾಡಿದರೆನ್ನಲ್ಲಾದ ಕೆಲವು ಪವಾಡಕಥೆಗಳನ್ನು ವಿವರಿಸಿದ್ದಾರೆ. ತಾತನವರ ಶಿಷ್ಯರಾದ ತಿಕ್ಕಯ್ಯಾವಧೂತ, ಮತ್ತು ಶಿವರಾಮ ವಧೂತರ ಬಗ್ಗೆ ತಿಳಿಸುತ್ತಾ ಮಠದ ನಿರ್ಮಾಣ, ದಿನದಿಂದ ದಿನಕ್ಕೆ ಆಗಮಿಸುವ ಭಕ್ತರು, ಗುರುಗಳು ಮತ್ತು ಮಹಾತ್ಮರುಗಳ ಸಂಕ್ಷಿಪ್ತ ಚಿತ್ರಣ ನೀಡಿದ್ದಾರೆ.

ಎರ್ರಿಸ್ವಾಮಿಗಳನ್ನು ಎರ್ರಿ ಎಂದು ಕರೆದಂತೆ, ಅವರ ಶಿಷ್ಯನನ್ನು ತಿಕ್ಕಯ್ಯನೆಂದು ಕರೆದಿದ್ದಾರೆ. ಎರ್ರಿ, ತಿಕ್ಕ ಎಂಬ ಶಬ್ದಗಳ ಅರ್ಥ ಒಂದೇ - ಹುಚ್ಚನೆಂಬುದು. ಈ ಹಿನ್ನೆಲೆಯಲ್ಲಿ ಅವರ ಹೆಸರ ಸಮರ್ಥಿಸಿ, ಅವರು ಮತ್ತು ಇತರರು ಬರೆದ ಗೀತೆಗಳನ್ನು ಈ ಕೃತಿಯಲ್ಲಿ ಸಂಗ್ರಹಿಸಲಾಗಿದೆ.

೪. **ಚೇಳಗುರಿಕೆ ಎರ್ರಿತಾತ : ಡಾ.ಜೋಳದರಾಶಿ ದೊಡ್ಡನಗೌಡ, ೧೯೮೧ :** ೧೮೯೭ರಲ್ಲಿ ತಾತನವರು ಚೇಳಗುರಿಕೆಗೆ ಬಂದಂದಿನಿಂದ ಕಥೆ ಪ್ರಾರಂಭವಾಗಿದೆ. ತಾತನವರು ಚೇಳಗುರಿಕೆಗೆ ಬಂದಾಗ ಹೇಗಿದ್ದರೆಂಬುದನ್ನು ತಿಳಿಸುತ್ತಾ "ತಲೆತುಂಬ ಜಡೆಗಟ್ಟಿದ ಕೂದಲು, ಗಡ್ಡ. ಮೀಸೆಯಿಂದ ಅಡಗಿ ಹೋದ ಬಾಯಿ, ಗುಬುರಾಗಿ ಬೆಳೆದ ಹುಬ್ಬಿನ ಕೂದಲಿಂದ ಅರೆಮುಚ್ಚಿದ ವಿಶಾಲವಾದ ಕಣ್ಣು, ಆತನ ಕಣ್ಣು ಕೂತಿದ್ದರಿಂದ ನೋಡಿದವರಿಗೆ ಭಯವಾಗುತ್ತಿತ್ತು"[೯] ಹೀಗೆ ಅವರ ಬಾಹ್ಯ ಚಿತ್ರ ನೀಡಿದ್ದಾರೆ. ಪ್ರತಿ ಯೊಂದು ಭಾಗಕ್ಕೂ ಶೀರ್ಷಿಕೆಯನ್ನು ಕೊಟ್ಟು, ಹೇಳಬೇಕೆಂಬ ವಿಷಯವನ್ನು ಸರಳ ಶೈಲಿ ಮತ್ತು ಸುಂದರ ನಿರೂಪಣೆಯಲ್ಲಿ ಕಟ್ಟಿಕೊಟ್ಟಿದ್ದಾರೆ.

'ಹೆಸರಿಲ್ಲದ ಎರ್ರಯ್ಯ' ಎನ್ನುವ ಭಾಗದಲ್ಲಿ ಮಕ್ಕಳಿಂದ ಮೊದಲ್ಗೊಂಡು, ಹಿರಿಯರವರೆವಿಗೂ ತಾತನೊಬ್ಬ ಕುತೂಹಲ ವ್ಯಕ್ತಿಯಾಗಿ, ಆ ಊರೇ ತನ್ನದೆಂಬಂತೆ, ಎಲ್ಲಿ ನೋಡಿದರಲ್ಲಿ ಹಗಲು ರಾತ್ರಿಗಳ ಬೇಧವಿಲ್ಲದೆ ಸುಳಿದಾಡುತ್ತಿದ್ದರು. ಮಾತನಾಡುವುದಂತೂ ತೀರಾ ಕಡಿಮೆ. ಮಾತನಾಡಿಸಬೇಕಾದರೆ ಬಹಳ ಕಷ್ಟವಾಗುತ್ತಿತ್ತು. ದಿನಗಳು ಕಳೆದಂತೆ ಆತನ ಆಕಾರದ ಪರಿಚಯವಾಯಿತಲ್ಲದೆ ಅವರ ನಿಜವಾದ ನೆಲೆಕಲೆಗಳು ಯಾರಿಗೂ ತಿಳಿಯಲಿಲ್ಲ."[೧೦] ಮಹಿಮಾಪುರುಷ ತಿಕ್ಕಯ್ಯನವರ ಆಗಮನ, ಮಠದ ನಿರ್ಮಾಣ, ನೂತನ ಮಠಕ್ಕೆ ತಾತನ ಆಗಮನ, ಮಠದ ವ್ಯವಸ್ಥೆ, ತಿಕ್ಕಯ್ಯನವರು ಮಠಬಿಟ್ಟು ಹೋಗಿದ್ದು, ತಾತನವರ ಲೀಲೆಗಳು, ಶಿವರಾಮವಧೂತರಿಗೆ ಅನುಗ್ರಹ, ತಾತನವರ ಉತ್ಸವ, ಲಿಂಗೈಕ್ಯ ಹೀಗೆ ತಾತನವರು ಸುಮಾರು ೨೨ ವರ್ಷ ಚೇಳಗುರಿಕೆಯಲ್ಲಿದ್ದಾಗ ಘಟಿಸಿದ ಘಟನೆಗಳನ್ನೆಲ್ಲ ಆಧ್ಯಾತ್ಮಿಕವಾಗಿ, ವೈಚಾರಿಕವಾಗಿ ವಿವರಿಸಿದ್ದಾರೆ. ತಾತನವರ ಲಿಂಗೈಕ್ಯದ ನಂತರ ಮಠದ ಜವಾಬ್ದಾರಿಯನ್ನು ಹೊತ್ತ ಶಾಮಣ್ಣನವರ ಕಿರು ಪರಿಚಯವನ್ನು ಮಾಡಿದ್ದಾರೆ. ದಿನಗಳು ಗತಿಸಿದಂತೆ ಮಠದ ಏಳ್ಗೆ ನಿರಂತರವಾಗಿ ಅಭಿವೃದ್ಧಿ ಹೊಂದಲು ಸಹಾಯಕವಾಗುವಂತೆ ಅಭಿವೃದ್ಧಿ ಸಮಿತಿಯನ್ನು ಕಟ್ಟಿದ ವಿವರಣೆಯನ್ನು ನೀಡಿದ್ದಾರೆ. ಕ್ಷೇತ್ರಕ್ಕೆ ಬಂದ ಮಹನೀಯರುಗಳನ್ನು ಹೆಸರಿಸುತ್ತಾ, ನಾಡಿನ ನಾನಾ ಪ್ರಾಂತದ ಮಹನೀಯರು ಆಗಮಿಸುತ್ತಲೂ ಇದ್ದಾರೆ ಎಂದು ಕ್ಷೇತ್ರ ಮಹಿಮೆಯನ್ನು ಪ್ರಶಂಸಿಸಿದ್ದಾರೆ. ಈ ಗ್ರಂಥವು ಎರ್ರಿತಾತನ ಜೀವನ ಸಾಧನೆ ಮೊದಲಾದ ಹಲವಾರು ವಿಷಯಗಳನ್ನು ಪರಿಚಯ ಮಾಡಿಕೊಡುವ ಕೈಗನ್ನಡಿಯಂತಿದೆ.

೫. **ಚೇಳಗುರಿಕೆ ಶ್ರೀ ಎರ್ರಿಸ್ವಾಮಿಗಳವರು : ಬಿ.ಸಿ.ಬಸವರಾಜ್, ೧೯೯೯ :** ವೃತ್ತಿಯಲ್ಲಿ ಇಂಜಿನಿಯರಾಗಿದ್ದ ಬಸವರಾಜ್ ಅವರು ತಾತನವರ ಪರಮಭಕ್ತರೂ, ಕಲಾಭಿಮಾನಿಗಳೂ, ಸಾಹಿತ್ಯ ಪ್ರೇಮಿಗಳೂ, ಶರಣರ ಮತ್ತು ಮಹಾತ್ಮರ ಜೀವನದ ಅಧ್ಯಯನದ ಬಗ್ಗೆ ಆಧ್ಯಾತ್ಮ ಮತ್ತು ಯೋಗದ ಬಗ್ಗೆ ವಿಶೇಷ ಆಸಕ್ತಿವಹಿಸಿದ್ದವರೆಂಬುದು ತಿಳಿಯುತ್ತದೆ.

ತಾತನವರು ಚೇಳಗುರ್ಕೆಗೆ ಬರುವುದಕ್ಕಿಂತ ಪೂರ್ವದ ಚರಿತ್ರೆಯ ಸಂಗ್ರಹ ಇಲ್ಲಿದೆ. ಈಗಾಗಲೇ ತಾತನವರ ಬಗ್ಗೆ ಬಂದಿರುವ ಗದ್ಯ ಮತ್ತು ಪದ್ಯರೂಪದ ಚರಿತ್ರೆಯನ್ನಾಧರಿಸಿ, ತಾತನವರ ಹುಟ್ಟೂರಾದ ದೊಡ್ಡ ಬಳ್ಳಾಪುರದ ಹತ್ತಿರವಿರುವ ಲಿಂಗನಹಳ್ಳಿಯಿಂದ ಮಾಹಿತಿಯನ್ನು ಸಂಗ್ರಹಿಸಿ ಈ ಕೃತಿ ರಚಿಸಿದ್ದಾರೆ. ಬಾಲ್ಯ, ವಿದ್ಯಾರ್ಜನೆ, ಗುರು ಅನುಗ್ರಹ, ಸಂಸಾರ, ಉದ್ಯೋಗ, ವೈರಾಗ್ಯ ಅಲೆಮಾರಿಯಾಗಿ ಊರೂರು ಅಲೆಯುತ್ತಾ

ಹೋದಲ್ಲೆಲ್ಲಾ ಪವಾಡಗಳನ್ನು ಮೆರೆಯುತ್ತಾ ಚೇಳಗುರ್ಕಿಗೆ ಬಂದು ಸಮಾಧಿಯಾದ ಕಥೆಯಿದೆ. "ಶ್ರೀ ಎರ್ರಿತಾತನು ದೊಡ್ಡ ಮಹಾತ್ಮನು. ಪವಾಡ ಪುರುಷ. ಅವರನ್ನು ನೆನೆವುದೇ ಧನ್ಯ. ಅವರ ನೋಟವೇ ಕಾಮಧೇನು. ಹಸ್ತವೇ ಕಲ್ಪವೃಕ್ಷ, ಪಾದಗಳೇ ಚಿಂತಾಮಣಿಯು ವಾಕ್ಯವೇ ಸಿದ್ಧಿರಸ"[೧೪] ಎಂದು ತಾತನವರ ವ್ಯಕ್ತಿತ್ವವನ್ನು ವಿಧವಿಧವಾಗಿ ಕೊಂಡಾಡಲಾಗಿದೆ.

'ಎರ್ರೀ ಎಂದರೆ ನಮ್ಮೊಳಗಿನ ಉರಿಹೋಯಿತು ನೋಡಾ
ಎರ್ರೀ ಎಂದರೆ ಸಿರಿಸಂಪದ ಬಂದಿತು ನೋಡ
ಎರ್ರೀ ಎಂದರೆ ಸಕಲವೂ ಸರಿಯಾಯಿತು ನೋಡಾ'

ಎಂಬ ಭಕ್ತನೊಬ್ಬನ ನುಡಿಯನ್ನು ಉಲ್ಲೇಖಿಸಿ, ತಾತನವರ ಶಕ್ತಿ ಸಾಮರ್ಥ್ಯದ ಮಹಿಮೆಯನ್ನು ಸಾರಿದ್ದಾರೆ. ಶರಣರ ನೆನೆದರೆ ಅದೇ ಮಂಗಳ ಸ್ನಾನ ಎನ್ನುವಂತೆ ತಾತನವರ ಅಚ್ಚರಿಯ ಪವಾಡಗಳ, ಅಸದೃಶ ಮಹಿಮೆಯ ಸಂಗತಿಗಳ ವಿಶದ ವರ್ಣನೆ ನೀಡಿದ್ದಾರೆ. ತಾತನವರು ಸಮಾಧಿಯಾಗಿ ಹಲವು ವರ್ಷಗಳೇ ಕಳೆದಿದ್ದರೂ, ತಾತನನ್ನು ನಂಬಿದ ಇಂದಿನ ಭಕ್ತರ ಅನುಭವಗಳನ್ನು ಈ ಕೃತಿಯಲ್ಲಿ ದಾಖಲಿಸಿದ್ದಾರೆ. ದಿನದಿಂದ ದಿನಕ್ಕೆ ಬೆಳೆಯುತ್ತಿರುವ ಮಠದ ಅಭಿವೃದ್ಧಿ ಮತ್ತು ತನಗಾದ, ತನ್ನ ಕುಟುಂಬದವರಿಗಾದ ತಾತನ ಮಹಿಮೆಯನ್ನು ಸಂಕ್ಷಿಪ್ತವಾಗಿ ವಿವರಿಸಿದ್ದಾರೆ. ಸಹಜ, ಸರಳವಾದ ಶೈಲಿಯಿಂದ ಓದಿಸಿಕೊಂಡು ಹೋಗುವ ಗುಣ ಈ ಪುಸ್ತಕಕ್ಕಿದೆ.

ಭಕ್ತಿಗೀತೆಗಳು : ದೇವರನ್ನು ದೈವಾಂಶಸಂಭೂತರನ್ನೂ, ಸಮಾಜ ಸುಧಾರಕರನ್ನು, ಧಾರ್ಮಿಕ ರೀತಿ-ನೀತಿಗಳ ನಡವಳಿಕೆಗಳನ್ನು ಕುರಿತು ಭಕ್ತಿಗೀತೆಗಳನ್ನು, ಭಜನೆ ಪದಗಳನ್ನು ರಚಿಸುವ ಪರಂಪರೆ ನಮ್ಮಲ್ಲಿದೆ. ಮಹಾತ್ಮರೆಂದು ಪೂಜಿಸಿಕೊಳ್ಳುತ್ತಿರುವವರ ಬಗ್ಗೆ, ಅವರು ನೆಲೆನಿಂತ ಕ್ಷೇತ್ರದ ಬಗ್ಗೆ, ಅವರ ಭಕ್ತಿ ಮಾರ್ಗದ ಬಗ್ಗೆ, ರೀತಿ, ನೀತಿ, ಭಕ್ತಿ ಮತ್ತು ವೈರಾಗ್ಯದ ಬಗ್ಗೆ ಹಾಡುಗಳು ಮೂಡಿ ಬರುತ್ತಿವೆ. ಈ ಪರಂಪರೆಯಲ್ಲಿ ಎರ್ರಿತಾತನವರ ಬಗ್ಗೆಯೂ ಹಲವಾರು ಭಕ್ತಿಗೀತೆಗಳು ರಚನೆಗೊಂಡಿವೆ.

ಆಶುಕವಿಯಾದ ತಿಕ್ಕಯ್ಯನವರು : ಎಲ್ಲಿಂದಲೋ ಗುರುವನ್ನು, ಗುರಿಯನ್ನು ಅರಸುತ್ತಾ ಬಂದ ತಿಕ್ಕಯ್ಯನವರು, ತಾತನವರ ಶಿಷ್ಯರಾಗಿ, ಗುರುಸೇವೆ ಮಾಡುತ್ತಾ, ಕಂಥೆ ಭಿಕ್ಷೆ ಬೇಡುತ್ತಾ, ತಾತನವರಿಗೆ ಮಠ ಕಟ್ಟಿಸಿದ ಮಹಾಪುರುಷರು. ವೈರಾಗ್ಯ, ಸತ್ಯ, ಸೇವೆ, ವಾಕ್ಚತುರತೆ, ನಿಸ್ವಾರ್ಥತೆಯಿಂದ ಕೂಡಿದ ತಿಕ್ಕಯ್ಯನವರು ನಾಡನ್ನೆಲ್ಲಾ ಸುತ್ತಾಡಿ, ಹೋದಲೆಲ್ಲಾ ಬೇಡಿ ಮಠಕಟ್ಟಲು ಶ್ರಮಿಸಿದವರು. ಊರೂರು ಅಲೆಯುವಾಗ ಕುದುರೆಯನ್ನು ಹಿಮ್ಮುಖವಾಗಿ ಓಡಿಸುತ್ತಾ ಅಲೆದಾಡುತ್ತಿದ್ದರೆಂಬ ವದಂತಿಯೂ ಇದೆ. ಇವರು ಆಶುಕವಿಗಳಾಗಿದ್ದು, ತಾತನವರ ಮೇಲೆ ಹಲವಾರು ಭಕ್ತಿಗೀತೆಗಳನ್ನು ರಚಿಸಿದ್ದಾರೆ.

'ನೀನೇ ಕಾಪಾಡು' ಎನ್ನುವ ಗೀತೆಯಲ್ಲಿ ಅಜ್ಞಾನ, ಅಂಧಕಾರದಲ್ಲಿ ಮಾನವ ದಾರಿ ತಪ್ಪಿ ಬಿದ್ದಿದ್ದಾನೆ. ತಪ್ಪಿನ ಅರಿವಾಗಿ ಅವನನ್ನು ಸನ್ಮಾರ್ಗದಲ್ಲಿ ನಡೆಸೆಂದು ಗುರುವಲ್ಲಿ ಬೇಡುವ ನಿವೇದನೆ ಇದೆ.

ನೀನೇ ಕಾಪಾಡು ಗುರುರಾಯ ನಿಮ್ಮ
ಧ್ಯಾನವು ಮರೆಸುವುದು ಅಜ್ಞಾನದ ಪ್ರಾಯ || ಪ ||

ಊರಿಗೆ ಹೋಗುತಲಿದ್ದೆ ಅಲ್ಲಿ
ದಾರಿಯ ತಪ್ಪಿ ಘೋರಾರಣ್ಯದಿ ಬಿದ್ದೆ
ಯಾರು ದಿಕ್ಕಿಲ್ಲವೆಂದಿದ್ದೆ ಬಂದು
ದಾರಿಯ ತೋರಿದೆ ಕಾರುಣ್ಯ ನಿಧಿಯೆ || ೩ ||[೧೨]

ಹೀಗೆ ಗುರುಮಹತ್ವವನ್ನು ಸಾರುವುದರ ಜೊತೆಗೆ, ಎನ್ನ ಮಾನಭಿಮಾನವು ನಿನ್ನದು ತಂದೆ ಎಂದು ಮಾನಭಿಮಾನಗಳನ್ನು ಅಹಂಕಾರ ಮಮಕಾರಗಳನ್ನು ನಾಶಮಾಡಿ, ಉದ್ಧರಿಸು ತಂದೆ ಎಂದು ಗುರುಧ್ಯಾನದಲ್ಲಿ ನಿರತನಾಗಿರುವಂತೆ ಪ್ರಾರ್ಥಿಸಿಕೊಂಡಿದ್ದಾರೆ.

'ಗುರುರಾಯ' ಎನ್ನುವ ಗೀತೆಯಲ್ಲಿ ನಿಜವಾದ ಗುರುವನ್ನು, ಅವರ ಕುರುಣಾಮಯದ ಸ್ವಭಾವವನ್ನು, ಹಾಗೆಯೇ ವೇಷಧಾರಿ ಗುರುಗಳನ್ನು ಅವರ ಆಡಂಬರದ, ಡಂಭಾಚಾರದ ವೇಷವನ್ನು ಬಯಲಿಗೆಳೆದಿದ್ದಾರೆ.

ಗುರುರಾಯ ಸದ್ಗುರುರಾಯ ನಿಮ್ಮ
ಚರಣವ ನಂಬಿದೆ ಚಿರಕಾಯ || ಪ ||

ಗುಂಭದ ಮೋಸಗಾರರನು ಆ
ಡಂಭಕ ವೇಷದ ಚೋರರನು
ನಂಬದೆ ಬಂದಿಹೆ ನಿನ್ನೆಡೆಗೆ ನಿನ್ನ
ಹಂಬಲಹಿಡಿಸಿ ಪೊರೆಯನ್ನ || ೨ ||

ತಾತನವರನ್ನು ಕಾಣುವುದಕ್ಕಿಂತ ಮುಂಚೆ ಅನೇಕ ಸಾಧು ಸಂತರನ್ನು ನೋಡಿದ್ದೇನೆಂದೂ, ಅವರೆಲ್ಲಾ ಮೋಸಗಾರರು, ಡಾಂಭಿಕರು, ಚೋರರು. ಅವರ ಮೂಢತ್ವಕ್ಕೆ ಅವಿಚಾರಕ್ಕೆ ಅಸಹ್ಯಪಟ್ಟು 'ಕೊನೆಗೆ ಪಿಡಿದೆನು ನಿಮ್ಮನು ದೃಢ ತರದಿ ನಾ' ಎಂದು ತಾತನವರಲ್ಲಿ ನಿಜಗುರುತ್ವವನ್ನು ಕಂಡಿದ್ದಾರೆ. ಜೊತೆಗೆ ಆಡಂಬರದ ತೋರ್ಪಡಿಕೆಯ ಭಕ್ತರನ್ನು ಟೀಕಿಸಿದ್ದಾರೆ.

'ಯಾರೇನೆಂದರು' ಮತ್ತು 'ಗುರು ಬಂದ' ಎರಡೂ ಗೀತೆಗಳ ಹಿನ್ನೆಲೆ ಒಂದೇ ಆಗಿದ್ದು ಗುರುಕೃಪೆಯನ್ನು ಭಕ್ತನು ನಿರೀಕ್ಷಿಸುವಂತೆ ಭಕ್ತರ ಭಕ್ತಿಯನ್ನು ಗುರುವು ಪರೀಕ್ಷಿಸುತ್ತಾನೆ. ಮನೆಗೆ ಬಾರದಿರುವ ಗುರುವನ್ನು ಶಿಷ್ಯನು (ಭಕ್ತನು) ಮನೆಗೆ ಬರುವಂತೆ ಬೇಡುತ್ತಾನೆ.

'ಯಾರೇನೆಂದರು ನಿಮಗೆ ಸದ್ಗುರುನಾಥ || ಪ ||
ಯಾರೇನೆಂದರು ನಿಮಗೆ ಬಾರದಿರಲೀ ಮನೆಗೆ
ಸಾರಿಸಾರಿಗೆ ನಿಮ್ಮ ದಾರಿ ನೋಡುತಲಿರುವೆ'

ಎಂದು ಆಲಾಪಿಸುತ್ತಾರೆ. ಶಿಷ್ಯನ ವೇದನೆಯನ್ನು ಕಂಡ ಕರುಣಾಮಯಿಯಾದ ಗುರು ಮನೆಗೆ ಬರುತ್ತಾನೆ. ಆಗ ಶಿಷ್ಯನು

ಗುರುಬಂದ ಗುರುಬಂದ ಗುರುಬಂದ ಮನೆಗೆ
ಗುರು ಎಲ್ರಿತಾತನು ತಾ ಬಂದ ಮನೆಗೆ ‖ ಪ ‖

ಎಂದೂ ಬಾರದ ಗುರುವು ಇಂದಿಗೆ ಬಂದಾ
ನಂದ ಪದವಿಯು ನಿಮಗಾಗಲೆಂದ ‖ ೧ ‖

ಕುರುಡರಿಗೆ ಕುಂಟರಿಗೆ ಕಣ್ಣು ಕಾಲ್ಗಳ ತಂದ
ಬರಡುಗೋವಿನ ಹಾಲು ಕರೆಯುತ್ತ ಬಂದ ‖ ೨ ‖

ಮನೆಗೆ ಬಂದ ಗುರುವನ್ನು ಆನಂದಾವೇಷದಿಂದ ಮನದುಂಬಿ ಹಾಡುತ್ತಾ ಹರ್ಷಿತರಾಗಿದ್ದಾರೆ. ತಿಕ್ಕಯ್ಯನವರು ಈ ಗೀತೆಯನ್ನು ರಚಿಸಲು ಹಿನ್ನೆಲೆಯಾಗಿ ಒಂದು ಕಾರಣವೂ ಇದೆ. ತಾತನವರಿಗೆ ಮಠ ಕಟ್ಟಿ ತಾತನವರನ್ನು ಮಠಕ್ಕೆ ಕರೆತರಬೇಕೆನ್ನುವ ವಿಷಯದಲ್ಲಿ ಊರಪ್ರಮುಖರಲ್ಲಿ ಭಿನ್ನಾಭಿಪ್ರಾಯಗಳು ಮೂಡಿವೆ. ಅದಕ್ಕೆ ತಾತನವರು ಮಠವೇ ಬೇಡವೆಂದು ಹೇಳಿದ್ದಾರೆ. ಮುಂದೆ ಊರ ಮುಖಂಡರೆಲ್ಲಾ ತಮ್ಮ ಭಿನ್ನಾಭಿಪ್ರಾಯಗಳನ್ನು ಮರೆತು ತಾತನವರನ್ನು ಮಠಕ್ಕೆ ಕರೆತರುತ್ತಾರೆ. ಹೊಸಮಠಕ್ಕೆ ತಾತನವರು ಬರಬೇಕೆಂದು ಹಂಬಲಿಸುತ್ತಿದ್ದ ತಿಕ್ಕಯ್ಯನವರಿಗೆ, ತಾತನವರು ಮಠಕ್ಕೆ ಬಂದದ್ದು ಹಿಡಿಸಲಾರದಷ್ಟು ಸಂತೋಷವಾಗಿದೆ. ಆ ಸಂದರ್ಭದಲ್ಲಿ ಈ ಗೀತೆಯನ್ನು ರಚಿಸಿರಬಹುದು.

ಶ್ರಮವಹಿಸಿ ಅತ್ಯಂತ ವ್ಯವಸ್ಥಿತವಾದ ಮಠವನ್ನು ಕಟ್ಟಿ ಎಲ್ಲರ ಅನುಗ್ರಹಕ್ಕೆ ಪಾತ್ರರಾದ ತಿಕ್ಕಯ್ಯನವರನ್ನು, ಒಂದು ದಿನ ಇದ್ದಕ್ಕಿದಂತೆ ''ನೀನು ಹೊರಟು ಹೋಗಯ್ಯಾ'' ಎಂದು ತಾತನು ಹೇಳಲು, ತಿಕ್ಕಯ್ಯನವರು ತಕ್ಷಣ ಮಠ ಬಿಟ್ಟು, ಊರುಬಿಟ್ಟು ಹೋದರಂತೆ. ಹೋಗುವಾಗ ''ಹೇಗೆ ಮರೆಯಲೋ ಗುರುವನ್ನು'' ಎಂಬ ಹಾಡನ್ನು ಹಾಡುತ್ತಾ ಹೋದರಂತೆ.

ಹೇಗೆ ಮರೆಯಲೋ ತಾತನ ಹೇಗೆ ಮರೆಯಲೋ ‖ ಪ ‖
ಭೋಗ ವಿಷಯಗಳನು ತ್ಯಜಿಸಿ
ತ್ಯಾಗವರುಹಿದ ಶ್ರೀ ಗುರುವೇ ನಿಮ್ಮ ‖ ಅ ‖

ರಾಗ ದ್ವೇಷಾದಿ ಗುಣಗಳನೆಲ್ಲ
ನೀಗಿ ನಿರ್ಬೈಲಾದ ಶಿವನ
ಯೋಗವನ್ನು ತಿಳುಹಿ ಭವ
ರೋಗವನ್ನು ಕಳೆದ ಸದ್ಗುರುವಿನ ‖ ೨ ‖

ತಾನು ಕಟ್ಟಿದ ಮಠವನ್ನು, ತನ್ನ ಗುರುವನ್ನು ತೊರೆದು ಹೋಗುವ ದುಃಖದ ಭಾವನೆ ಈ ಗೀತೆಯಲ್ಲಿ ವ್ಯಕ್ತವಾಗಿದೆ.

‘ಸರ್ವಾಂತರ್ಯಾಮಿ’ ಎನ್ನುವ ಗೀತೆಯಲ್ಲಿ ಶಿಷ್ಯನಾದ ತಿಕ್ಕಯ್ಯನವರಿಗೆ ಎಲ್ಲೆಲ್ಲಿಯೂ ಗುರುವಾದ ತಾತನೇ ಕಾಣುತ್ತಾನೆ.

ಎಲ್ಲರೊಳಗಿರ್ದಿಲ್ಲದೇ ಜಗ
ವೆಲ್ಲ ಶೋಭಿಸಿ ಕಾಣ್ವನೆ ‖ ಪ ‖

ಎಲ್ಲಿ ನೋಡಲು ಅಲ್ಲಿ ಚಿತ್ಕಳೆ
ಯಲ್ಲಿ ತಾ ಮುಳುಗಾಡ್ವನೆ
ಕಲ್ಲು ಮುಳ್ಳೊಳು ಕಾಡು ಕಾಷ್ಠಗ
ಳೆಲ್ಲ ಬೆಳಕನೆ ಮಾಡ್ವನೆ ‖ ೧ ‖

ತಿಕ್ಕಯ್ಯನ ಕಣ್ಣಿಗೆ ಕಾಣುವ ಪ್ರತಿವಸ್ತುವಿನಲ್ಲಿಯೂ ತಾತನೆ. ಎಲ್ಲವೂ ಸರ್ವಕಾರ್ಯ ಕಾರಣನಾದ ಆ ಕಾರಣ ಪುರುಷನೆ ಕಾಣುತ್ತಾನೆ. ಅಂಥವನ ದಾಸನಾದವನಿಗೆ ತುರ್ಯಾತೀತವೂ, ಸಚ್ಚಿದಾನಂದವೂ ಆದ ಶಿವತ್ವವು ಲಭಿಸುತ್ತದೆಂದು ಕವಿ ಹಾಡಿದ್ದಾನೆ. ಅವಸ್ಥಾತ್ರಯಗಳನ್ನೂ, ಗುಣತ್ರಯಗಳನ್ನೂ ಮೀರಿ ತುರ್ಯಾಸ್ಥಾನಕ್ಕೇರಿದಾಗ ಜೀವತ್ವವೇ ಶಿವತ್ವವಾಗುತ್ತವೆಂಬ ಅದ್ವೈತ ಭಾವನೆ ಈ ಗೀತೆಯಲ್ಲಿದೆ.

ನರರಲ್ಲೋ ನಾವು ನರರಲ್ಲ - ಶಿವ
ಶರಣರೆಲ್ಲರು ನೀವು ಕರುಣಿಸಿ ಕೇಳಿರಿ ‖ ಪ ‖
ಅರಿವಿಗೆ ಅರಿವಾಗಿ ಮರೆವೆಗೆ ದೂರಾಗಿ
ಅರಿವು ಮರೆವೆಗೆ ಸಾಕ್ಷಿ ಪರವಸ್ತು ತಾನಾಗಿ ‖ ೧ ‖
ಅಂಗದಲಿ ಲಿಂಗಾಗಿ ಲಿಂಗದಲಿ ಅಂಗಾಗಿ
ಅಂಗಲಿಂಗ ಸಂಗಸಮರಸದೊಳು ನಿಂದ ‖ ೨ ‖

ಶಿವತ್ವಪ್ರಾಪ್ತಿಗೆ ತಾನು ನರನಲ್ಲವೆಂಬ ಭಾವನೆ ಬರಬೇಕು. ಆಗಲೇ ಗುರುಕೃಪೆ, ತನ್ನ ಅಂಗವೇ ಲಿಂಗ, ಹಾಗಿದ್ದ ಮೇಲೆ ದೇಹದ ಮೇಲೆ ಲಿಂಗದ ಅವಶ್ಯಕತೆಯಿಲ್ಲ ಎನ್ನುವ ಲಿಂಗಾಂಗ ಸಾಮರಸ್ಯವನ್ನು ಪರತ್ವ ಪ್ರಾಪ್ತಿಯ ಮಾರ್ಗವನ್ನು ಈ ಗೀತೆಯಲ್ಲಿ ತೋರಿದ್ದಾರೆ. ಹೀಗೆ ತಿಕ್ಕಯ್ಯನವರು ರಚಿಸಿದ್ದಾರೆನ್ನಲಾದ ಸುಮಾರು ಗೀತೆಗಳನ್ನು ಸಂಗ್ರಹಿಸಿದ್ದು, ಮಠದವರು ಅವುಗಳನ್ನು ಪ್ರಕಟಿಸಿದ್ದಾರೆ.

ಜೋಳದರಾಶಿ ದೊಡ್ಡನಗೌಡರು : ಗಮಕ ಕಲಾನಿಧಿಯಾದ ಜೋಳದರಾಶಿ ದೊಡ್ಡನಗೌಡರು ಚೇಳಗುರಿಕೆ ಕ್ಷೇತ್ರದ ಧಾರ್ಮಿಕ, ಸಾಹಿತ್ಯ, ಸಾಂಸ್ಕೃತಿಕ ರಂಗಗಳಲ್ಲಿ ಸೇವೆಸಲ್ಲಿಸಿದ್ದು, ತಾತನವರ ಬಗ್ಗೆ ಲೇಖನಗಳನ್ನು, ಪುಸ್ತಕಗಳನ್ನು ಬರೆದಿರುವುದರ ಜೊತೆಗೆ ಹಲವಾರು ಗೀತೆಗಳನ್ನು ರಚಿಸಿದ್ದಾರೆ.

‘ಗುರು ಎರ್ರಿನಾಥ’ ಎನ್ನುವ ಭಕ್ತಿಗೀತೆಯನ್ನು ಭಾಮಿನಿ ಷಟ್ಪದಿಯಲ್ಲಿ ರಚಿಸಿದ್ದಾರೆ.

ಭೋಗವೊಲ್ಲದ ಯೋಗಿ ನೀನೆಲೆ
ಭೋಗ ಬಯಸುವರಾಗಿ ನಾನೆಲೆ
ತ್ಯಾಗಶೀಲನು ನೀನು ನಾನತಿ ಲೋಭಗುಣದವನು!

ಲೋಕವಂದಿತ ಎರ್‍ರಿನಾಥನೆ
ಹೇಗೆ ನಿನಗೆನಗೆಂತು ಮೇಳವು
ಸಾಗದಿರಲಾನೆಂತು ನಿನ್ನನು ನುತಿಸಿ ಮೆಚ್ಚಿಸಲಿ ||

ಈ ಹಾಡಿನಲ್ಲಿ ಲೌಕಿಕ ಜಂಜಾಟದಿಂದ ತನ್ನನ್ನು ಪಾರುಮಾಡೆಂದು ಬೇಡಿದ್ದಾರೆ. 'ನೀನೆರ್‍ರಿತಾತನೆ?' ಎನ್ನುವ ಹಾಡಿನಲ್ಲಿ ನರನೇ ಹರನಾಗುತ್ತಾನೆ ಎನ್ನುವ ಭಾವನೆ ಇದ್ದು,

'ನರರೂಪವ ತಾಳಿ ಧರೆಯೊಳು ಉದಿಸಿದಿ
ಹರ ನೀನಲ್ಲದೆ ನರನೇ ನೋಡಲು' || ೧ ||

ಬಾಹ್ಯಕ್ಕೆ ನೀ ನರನಾಗಿದ್ದರೂ ಅಂತರಂಗದಲ್ಲಿ ಶಿವನನ್ನು ಸಾಕ್ಷಾತ್ಕರಿಸಿಕೊಂಡವ, ಹಾಗಾಗಿ ನೀ ನೆರ್‍ರಿತಾತನಲ್ಲ. ನೀನೆ ಹರ ಎಂದು ಕೊಂಡಾಡಿದ್ದಾರೆ.

'ದಯಬಂದಿತೆ!' ಈ ಗೀತೆಯಲ್ಲಿ

ಇಂದಿಗೆ ದಯ ಬಂದಿತೇ ನಾ
ಮಂದ ಭಾಗ್ಯನ ನೋಡಿ ನಿನಗೆ ||
ಒಂದು ದಿನ ಕನಸಿನಲಿ ಕಂಡ
ಸುಂದರದ ಮೃದುಹೂಗಳಿತ್ತು
ಆದರಿಸಿ ಜ್ಞಾನವನು ಬೋಧಿಸಿ
ಅಂದಿನಿಂ ದರ್ಶನವನೀಯದೆ
ಕಂದನನು ಮರುಗಿಸಿದ ಮಹಿಮ ||

ತಾತನನ್ನು ಕಾಣಬೇಕೆಂದು ಹಂಬಲಿಸುತ್ತಿದ್ದ ಭಕ್ತನಿಗೆ, ಕನಸಿನಲ್ಲಿ ಬಂದು ಜ್ಞಾನವನ್ನು ಬೋಧಿಸಿ, ತನಗೆ ದರ್ಶನವನ್ನಿತ್ತಿದ್ದನ್ನು ಸ್ಮರಿಸುತ್ತಾ ತಂದೆ ಮಗನನು ಮರೆಯಲುಂಟೆ, ಇಂದು ದರ್ಶನವಿತ್ತು ಸಲಹಿದೆ ಎಂದು ಕೊಂಡಾಡಿದ್ದಾರೆ.

'ನೀನಾರೋ' ಉತ್ತಮ ಗೀತೆಯಾಗಿದ್ದು, ಎಲ್ಲಿಂದಲೋ ಬಂದು ಚೇಳಗುರಿಕೆಯಲ್ಲಿ ನೆಲೆನಿಂತ ತಾತನನ್ನು

ನೀನಾರೋ? ಹೆಸರೇನೋ?
ಯಾವ ನಾಡಿನ ಮೃಡನೊ?
ಎರಿತಾತನೆಂದೆನಿಸಿ ಚೇಳ್ಗುರಿಕೆಯಲಿ ನಿಂದೆ!

ಎಂದು ಅವರ ಪೂರ್ವ ಇತಿಹಾಸವನ್ನು ಕೇಳುತ್ತಾ, ಅವರ ನಡೆ-ನುಡಿ ಗುಣದ ಚಿತ್ರಣ ನೀಡುತ್ತಾರೆ.

ಜಾತಿಮತ ಕುಲಪಂಥ ಸೂತಕಾದಿಗಳಳಿದು
ಭೀತಿ ಮಾನವಮಾನ ನಿಂದೆ ನುತಿಗಳ ತುಳಿದು

ಖ್ಯಾತಿ ಪಾತಕ ಪುಣ್ಯ ಸ್ವರ್ಗ ನರಕಗಳೊದೆದು
ಶಾಂತಿಯಿಂದೆಲ್ಲವನು ಸಮದಿ ಸಂಭಾವಿಸಿದ ॥ ೨ ॥

ಅರಿವಿನರಮನೆಯಲ್ಲಿ ಚಿರ ಮುಕ್ತಿ ಕಾಂತೆಯಲಿ
ಸುರತ ಶಿವಸುಖ ಸಾರದಾನಂದ ವಾರ್ಧಿಯಲಿ
ಅರಿವು ಮರೆವೆಂದು ನೀಗಿ ಶೂನ್ಯದಲಿ ಗುರುತಳಿದು
ಗುರುತಾಗಿ ಗುರುವಾಗಿ ಹೊರಗಿಂತು ತೋರುವ ॥ ೩ ॥

ಈ ಹಾಡಿನಲ್ಲಿ ಅವಧೂತರ ಚಿತ್ರಣ ನೀಡುತ್ತಾ, ಅವರ ಮಾರ್ಗ, ಸಾಧಿಸಿದ ಸಿದ್ಧಿ, ಪಡೆದ ಮುಕ್ತಿಯ ಚಿತ್ರಣ ನೀಡಿದ್ದಾರೆ. ಜಾತಿ, ಮತ, ಧರ್ಮಗಳ ಕಟ್ಟಳೆಗಳ ಮೀರಿ ಮಾನವಧರ್ಮದ ಮಹತ್ವವನ್ನು ಲೋಕಕ್ಕೆ ಸಾರಿದ ತಾತನ ಮಹಿಮೆಯನ್ನು ವರ್ಣಿಸಿದ್ದಾರೆ.

ಗುರುವನ್ನು, ಗುರಿಯನ್ನು ಅರಸುತ್ತಾ ಬಂದ ತಿಕ್ಕಯ್ಯನವರು ತಾತನವರ ಶಿಷ್ಯರಾಗಿ ಚೇಳಗುರಿಕಿಯಲ್ಲಿ ನೆಲೆನಿಂತಾಗ, ಲೌಕಿಕರು ತಾತನನ್ನು ಎರ್ರಿ (ಹುಚ್ಚ) ಎಂದಂತೆ, ಶಿಷ್ಯ ತಿಕ್ಕಯ್ಯನನ್ನು ತಿಕ್ಕ (ಹುಚ್ಚ) ಎಂದು ಕರೆಯುತ್ತಾರೆ. ಜನರ ಹುಚ್ಚು ಹೇಳಿಕೆಗಳನ್ನು ಕಂಡ ಗೌಡರು ಈ ರೀತಿ ಪ್ರತಿಕ್ರಿಯಿಸುತ್ತಾರೆ.

'ಅರಿಯಬಹುದೇ ನಿನ್ನ ಎರ್ರಿಯಾ ಮರ್ಮವನು
ಅರಿತವನು ತಾನೊಬ್ಬ ನಿನ್ನಂತೆ ತಿಕ್ಕಯ್ಯ
ಎರ್ರಿತಿಕ್ಕುಗಳೊಂದೆ ಲೌಕಿಕರ ನೋಟದಲಿ
ಯಾರರಿಯಬಲ್ಲರೋ ನೀನೆ ಪೇಳುವ ತನಕ' ॥ ೪ ॥

ಹುಚ್ಚು ಜನರ ಭಾವನೆಗೆ ಹುಚ್ಚನಾಗಿ, ಭಕ್ತ ಜನರಿಗೆ ದೇವರಾದ ಎರ್ರಿತಾತನವರನ್ನು, ತಿಕ್ಕಯ್ಯನವರನ್ನು ಎಲ್ಲರೂ ಅರಿಯುವ ಹಾಗಿರಲಿಲ್ಲ. ಏಕೆಂದರೆ ಎಲ್ಲರಂತೆ ಇವರಿರಲಿಲ್ಲ. ಇವರಂತೆ ಎಲ್ಲರಿರಲಿಲ್ಲ. ಇವರು ಸಂಗದಲ್ಲಿದ್ದು ನಿಸ್ಸಂಗಿಗಳಾದವರು. ಬಾಹ್ಯದಲ್ಲಿ ಹುಚ್ಚನಂತೆ ಕಂಡರೂ ಅಂತರಂಗದಲ್ಲಿ ಪರಮಾತ್ಮನನ್ನು ಕಂಡವರು.

'ನೀನೆಂಥ ಕರುಣಾಳು' ಎನ್ನುವ ಹಾಡಿನಲ್ಲಿ ಲೌಕಿಕ ಸಂಗ ತೊರೆದು ಅಲೌಕಿಕ ಮಾರ್ಗಹಿಡಿದು, ಅದರ ಆನಂದ ಅನುಭವಿಸಿದ ಚಿತ್ರಣವಿದೆ.

ನಾನೊಲ್ಲದಿದ್ದರು ನೀ ಬಿಡಲೊಲ್ಲೆ
ನೀನೆಂಥ ಕರುಣಾಳೋ ಗುರು ಎರ್ರಿನಾಥ
ಮನೆ ಮಾರು ಮಠ ಮಾನ್ಯ ಮಡದಿ ಬಾಂಧವ ಮಿತ್ರ
ಧನ ಧಾನ್ಯ ಕನಕಾದಿ ವಸ್ತ್ರ ಸಂಚಯವೆಲ್ಲ
ಎನ್ನದೆನ್ನದು ಎಂಬ ಮಮಕಾರದೊಳು ಮುಳುಗಿ
ನಿನ್ನ ಗುರುತರಿಯದ ಮಂದ ಮತಿ ಮೂರ್ಖನು ॥ ೧ ॥

ನುಡಿಯೊಂದು ನಡೆಯೊಂದು ಬಗೆಯೊಂದು ಬದುಕೊಂದು
ಪಿಡಿದು ಮಾಡುವುದೊಂದು ಕಡೆಗಾಗೊದಿನ್ನೊಂದು
ಬಿಡದಿಂತು ಚಣಕೊಮ್ಮೆ ಚಲಿಪ ಬಣ್ಣದ ಬಾಳು
ದಿಟವೆಂದು ನಂಬಿದ ಮತಿಹೀನ ಮರುಳ ॥ ೨ ॥

ಲೋಕ ಜನರ ಚಪಲ, ಚಂಚಲತೆ, ಮೋಸ, ವಂಚನೆಗಳ ಸ್ವಭಾವ ತಿಳಿಸುತ್ತಾ, ಇರುವುದೆಲ್ಲವನ್ನು ಬಿಟ್ಟು, ಲೋಕ ವ್ಯವಹಾರಕ್ಕೆ ಸಂಪೂರ್ಣ ಭಿನ್ನವಾದ ಬಾಳನ್ನು ಬಾಳಿದ ತಾತನು, ಶಿಷ್ಯರನ್ನಷ್ಟೇ ಅಲ್ಲದೆ, ಮತಿಭ್ರಷ್ಟ, ದುಷ್ಟ, ದುಶ್ಚಿಂತ, ದುರ್ಮಾರ್ಗಿಗಳನ್ನು ಕೈಬಿಡದೆ ಕಾಪಾಡಿರುವ ಕರುಣಾಮೂರ್ತಿ. ಅಂಥವರನ್ನು ಅರಿಯುವ ಅರಿವು ಭಕ್ತನಿಗಿರಬೇಕೆಂದು ತಾತನ ಕಾರುಣ್ಯದ ಹಿರಿಮೆ ಸಾರಿದ್ದಾರೆ.

ಬಿಡದು ಹಿಡಿದಹಂಕಾರ ಕಾಡುವ ಬೇತಾಳನಂತೆ
ಒಡೆಯಾ ಎರಿನಾಥ ನಿನ್ನ ಭಕ್ತನೆಂತಪ್ಪೆನಯ್ಯ ॥
ನಿನ್ನ ಮಹಿಮೆಯ ಕೇಳಿ ಕೃತಿರಚಿಸಿ ಹಾಡಿದೆ
ನಿನ್ನ ಕಥೆಗಳನೋದಿ ಪ್ರವಚನವ ಮಾಡಿದೆ
ನಿನ್ನ ಪೂಜೋತ್ಸವ ಸಂಭ್ರಮವ ನೋಡಿದೆ
ಏನಾಯ್ತು ನಾಯಿಯ ಬಾಲದಂತಾಯ್ತು ನೋಡ ॥ ೧ ॥

ಮನುಷ್ಯ ಸಹಜ ಸ್ವಭಾವಗಳು, ಹೊರನೋಟಕ್ಕೆ ನಿತ್ಯ ನೇಮ, ಪೂಜೆ ಪ್ರವಚನ, ಭಜನೆ ಮಾಡಿದರೇನು ಫಲ. ಅಂತರಂಗದಲ್ಲಿ ಅಜ್ಞಾನ ಅಂಧಕಾರಗಳಿಂದಾವರಿಸಿದ ಅಹಂಕಾರವಿದೆ. ಮಾನಸಿಕ ಅಹಂಕಾರ ಅಳಿಯದ ಮುನ್ನ ಭಕ್ತಿ ಒಲಿಯದೆಂದು, ಕಲಿತ ದುರ್ಮಾರ್ಗಗಳನ್ನು ಬಿಡಬೇಕೆಂದು, ಇಲ್ಲದಿದ್ದರೆ ಮಾಡುವುದೆಲ್ಲ ವ್ಯರ್ಥವೆಂದು ಸನ್ಮಾರ್ಗದ ಅರಿವನ್ನು ತಿಳಿಸಿದ್ದಾರೆ. 'ಇಂತೆನ್ನ ಸಲಹು' ಎನ್ನುವ ಗೀತೆಯಲ್ಲಿ ಸರ್ವಾಂತರ್ಯಾಮಿಯಾದ ಪರಮಾತ್ಮನೆ ನೀನಾಗಿದ್ದೀಯ. ಸಕಲವೂ ನಿನ್ನದೆ ಎಂಬ ಆತ್ಮನಿವೇದನೆಯ ಸಮರ್ಪಣಾ ಭಾವವನ್ನು ಕಾಣುತ್ತೇವೆ.

ಎನಿಬರೆನಿಬರೂ ಬಂದು ಇಲ್ಲಿದ್ದು ಹೋದರು
ಎನಿತೆನಿತೊ ವೇದಾಂತ ಬೋಧೆಗಳ ಮಾಡಿದರು
ಮೌನದಿಂದೆರಿತಾತ ಬೋಧೆಗಳ ಮಾಡದಲೆ
ತಾನೆ ಬ್ರಹ್ಮವನೆಂಬ ಸತ್ಯವನೆ ತೋರಿದರು ॥ ೧ ॥

ಅವಧೂತರು ಮೌನಕ್ಕೆ ಮಹತ್ವ ನೀಡಿದವರು. ಮೌನದಿಂದಲೇ ಅದ್ವೈತ ತತ್ವವ ಸಾರಿ 'ಅಹಂ ಬ್ರಹ್ಮಾಸ್ಮಿ' ಎಂಬ ತತ್ವವನ್ನು ಜಗಕೆ ತೋರಿದ್ದಾರೆ.

ವೇದಗಳು ಶಾಸ್ತ್ರಗಳು ಉಪನಿಷತ್ ಸೂತ್ರಗಳು
ಸಾಧ್ಯವಲ್ಲ ಏನೆಂದು ಬೆಚ್ಚಿ ಬೆರಗಾಗಿರುವ

ಚಿದ್ರೂಪದಾ ಬ್ರಹ್ಮವೀಲೋಕ ಭಾಗ್ಯದಲಿ
ಉದಿಸಿತ್ತೈ ಗುಣರೂಪದೆರಿತಾತನಾಗುತಲಿ ॥ ೨ ॥
ಮಾತನಾಡಿದೊಡದುವೆ ಬ್ರಹ್ಮತಾನಲ್ಲಂತೆ
ಮಾತಾಡಿದರೆ ಬ್ರಹ್ಮವವನು ಅರಿಯಲರಿದಂತೆ
ಮಾತಾಡಿ ಆಡದಲೆ ಮಾತುಮರ್ಮವನರುಹಿ
ತಾತ ಚೇಳ್ಗುರಿಕೆಯಲಿ ನಿಂದ ಸದ್ಗುರುವಾಗಿ ॥ ೩ ॥[೧೩]

ಅವಧೂತರು ಮಾತನಾಡುವುದೇ ಕಡಿಮೆ. ಮೌನ ಒಡೆದು ಒಮ್ಮೆ ಮಾತಾಡಿದರೆ ಅದು ಯಾರಿಗೂ ಅರ್ಥವಾಗುತ್ತಿರಲಿಲ್ಲ. ಮಾತನಾಡದಲೆ ತಾನೇಳಬೇಕಾದುದನ್ನು ಹೇಳುವ "ಪರಬ್ರಹ್ಮ" ಇವರೆಂದು ಕವಿಗಳು ಸಾರಿದ್ದಾರೆ.

ವೈ.ಯಂ.ಚಂದ್ರಯ್ಯನವರು : ಎರ್ರಿತಾತನವರು ಶಿವೈಕ್ಯರಾದ ಬಹುದಿನಗಳ ಮೇಲೆ ಅವರ ಮೇಲೆ ಅಚಲ ಶ್ರದ್ಧೆಯನ್ನಿಟ್ಟುಕೊಂಡು ಪುನೀತರಾದ ಬೆಂಗಳೂರಿನ ಎ.ಜಿ.ಶಾಮಣ್ಣನವರು ಶ್ರೀತಾತನ ಜೀವನ ಚರಿತ್ರೆಯನ್ನು ಸಂಗ್ರಹಿಸುವ ಕಾರ್ಯ ಕೈಗೊಂಡರು. ಅದರ ಫಲವಾಗಿ ಸಿಡಗಿನಮೊಳೆಯ ಶ್ರೀ ವೈ.ಯಂ. ಚಂದ್ರಯ್ಯನವರನ್ನು ಈ ಕಾರ್ಯಕ್ಕಾಗಿ ನೇಮಿಸಿದರು. ವೈರಾಗ್ಯಶೀಲನಾದ ತಾತನು ಸಂಚರಿಸುವ ಸ್ಥಳಗಳಲ್ಲೆಲ್ಲಾ ಚಂದ್ರಯ್ಯನವರು ಸಂಚರಿಸಿ, ವಿಷಯ ಸಂಗ್ರಹದಲ್ಲಿ ತೊಡಗುತ್ತಾರೆ. ಆದರೆ ತಾತನವರ ಊರು, ಮನೆ, ತಂದೆ, ತಾಯಿ, ವಂಶ, ಕುಲ ಏನೊಂದು ಸರಿಯಾಗಿ ತಿಳಿಯದಿದ್ದಾಗ, ಕಂಗಾಲಾದ ಚಂದ್ರಯ್ಯನವರು ಅನು ಭವಿಸಿದ ಅನುಭವಗಳನ್ನು ಭಾವಪರವಶರಾಗಿ ಈ ರೀತಿ ಹಾಡಿದ್ದಾರೆ.

ಎನ್ನಯ್ಯ ಎರ್ರಿತಾತ ನಿಮ್ಮೂರಾವುದು ಪೇಳಾ
ಸುಮ್ಮನಿರುವ ನಿನ್ನೂರು ಎನಗೆ ಬೇಕಯ್ಯಾ ॥ ಪ ॥

ನಿಮ್ಮೂರು ಹುಡುಕೆಂದು ಎನ್ನಗುರುವು ಪೇಳೆ
ನಿಮ್ಮೂರು ಹುಡುಕಿದೆ ಎನಗೆ ಸಿಗದಯ್ಯಾ
ಸುಮ್ಮನಿರುವ ನಿಮ್ಮೂರು ಅನ್ಯರೇಂ ಬಲ್ಲರು
ನಿಮ್ಮವನೆಂದು ಎನಗೆ ನನ್ನಿಯೊಳ್ವೇಳ್ತಾತಾ ॥ ೧ ॥
ಹಿರಿಯೂರ ಕಡೆಯೆಂಬ ಹಿರಿಯರ ನುಡಿ ನಂಬಿ
ಹಿರಿಯೂರ ಕಡೆಗೋಗಿ ಪರಿಪರಿ ಕೇಳಿದೆ
ಅರಿಯೆವೆಂಬರು ನಿನ್ನ ಪರದೇಶಿಯೇ ನೀನು
ಅರಿಯುವದೆಂತು ನಿನ್ನ ಪರವೂರ ಮಾರ್ಗವ ॥ ೨ ॥

ಹೀಗೆ ತಾತನವರ ಪೂರ್ವಜೀವನ ವೃತ್ತಾಂತ ಅರಿಯದಾದಾಗ ಅದನ್ನು ಅರಸಲು ಹೋಗಿ ನಿರಾಸೆಯಾದ ಚಿತ್ರಣವನ್ನು ಈ ಹಾಡಿನಲ್ಲಿ ವ್ಯಕ್ತಪಡಿಸಿದ್ದಾರೆ.

ಶ್ರೀ ಶಾಮಣ್ಣನವರಿಗೆ ತಾತನವರ ಮೇಲೆ ಅಪಾರ ಭಕ್ತಿ. ತಾತನವರು ಸಮಾಧಿಯಾದ ನಂತರದಲ್ಲಿ ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಗೆ ಶ್ರಮವಹಿಸಿ ತಿಂಗಳುಗಟ್ಟಲೆ ಚೇಳಗುರಿಕೆಯಲ್ಲಿದ್ದು, ಮಠದ ಕಾರ್ಯಗಳನ್ನು ನೆರವೇರಿಸಿದವರು. ತಮಿಳುನಾಡಿನಿಂದ ಶಿಲ್ಪಿಗಳನ್ನು ಕರೆಸಿ, ಗೋಪುರ, ವಿಗ್ರಹಗಳನ್ನು ಕೆತ್ತಿಸಿದರು. ಎಲ್ಲೆಲ್ಲಿಂದಲೋ ಬರುವ ಭಕ್ತರಿಗಾಗಿ ವಸತಿಗೃಹಗಳನ್ನು ಕಟ್ಟಿಸಿದವರು. ಹೀಗೆ ಮಠದ ಪುರೋಭಿವೃದ್ಧಿಗೆ ಹಗಲಿರುಳು ಶ್ರಮಿಸಿದ ಶ್ರೀ ಶಾಮಣ್ಣನವರು ೨೪-೧೧-೧೯೬೦ರಂದು ಮಠದಲ್ಲಿ ಸಮಾಧಿಯಾಗಿದ್ದಾರೆ. ಅವರ ಸಾವನ್ನು ಕಂಡ ಚಂದ್ರಯ್ಯನವರು "ಅನ್ಯಾಯ ಮಾಡಿದೆಯಾ" ಎನ್ನುವ ಗೀತೆಯಲ್ಲಿ ತಾತನನ್ನು ನಿಂದಿಸುವ ಹಾಗೆ ಭಕ್ತಿ ತೋರಿದ್ದಾರೆ.

ಓ ತಾತ ಅನ್ಯಾಯ ಮಾಡಿದೆಯಾ
ನಮ್ಮ ಶಾಮಣ್ಣನನು ಕರೆದೊಯ್ದು
ನೀನೆಮಗೆ ಅನ್ಯಾಯ ಮಾಡಿದೆಯಾ ||

ಕಾಡಿ ಬೇಡುವರುಂಟು ಕೇಡ ಬಯಸುವರುಂಟು
ನಾಡ ಕಂಟಕರುಂಟು ಕೇಡಿಗರು ಉಂಟು
ಕೇಡಿನಾಸೆಗೆ ಸಿಲ್ಕಿ ನಾಡಸುಲಿವರ ಬಿಟ್ಟು
ಕೇಡನರಿಯದ ನಮ್ಮ ಶಾಮಣ್ಣನೆಂತೊಯ್ದೆ || ೩ ||

ನಿರಾಡಂಬರದ, ನಿರಹಂಕಾರದ, ನಿಸ್ವಾರ್ಥ ಮನೋಭಾವದ ಶಾಮಣ್ಣನ ಶ್ರಮದಿಂದ ಈ ನೆಲೆ ಸರ್ವತೋಮುಖವಾಗಿ ಬೆಳೆಯಿತು. 'ಭಕ್ತ ಶಾಮಣ್ಣನಂ ಎತ್ತೊಯ್ದು ನಿನಗೆ ಹುಚ್ಚನೆಂಬುವ ಹೆಸರ ಸಾರ್ಥಕ ಮಾಡಿಕೊಂಡೆಂದು' ನಿಂದಿಸುವಂತೆ ಬರೆದಿದ್ದಾರೆ.

'ಎತ್ತ ಹೋದಿರಿ ನೀವು?' ಎನ್ನುವ ಗೀತೆಯಲ್ಲಿ ಶಾಮಣ್ಣನವರ ಸೇವೆಯನ್ನು, ಭಕ್ತಿಯನ್ನು ಸ್ಮರಿಸುತ್ತಾರೆ. ಪ್ರತಿವರ್ಷ ನಡೆಯುವ ಜಾತ್ರೆಗೆ, ರಥೋತ್ಸವಕ್ಕೆ ಬಂದ ಭಕ್ತರು ಮಠವನ್ನು, ಗೋಪುರವನ್ನು ನೋಡುತ್ತಾರೆ. ನೋಡಿ ಇದನ್ನು ಕಟ್ಟಿಸಿದವರು ಯಾರೆಂದು ಕೇಳುತ್ತಾರೆ. ಕೇಳಿದವರಿಗೆ ಏನೆಂದು ಉತ್ತರ ಕೊಡಲಿ ಎಂದು ದುಃಖಿಸುತ್ತಾರೆ.

ಎತ್ತ ಹೋದಿರಿ ನೀವು ಶಾಮಣ್ಣನವರೇ
ಗೊತ್ತಾಗಲೊಲ್ಲದೇ ನೀವಿರುವ ತಾಣ ||
ತಾತನೊಡಗೂಡಿ ಪರಲೋಕಯಾತ್ರೆಗೆ ತೆರಳಿ
ನೀ ತಡವ ಮಾಡಿದೆಯಾ ಜಾತ್ರೆಗೂ ಬರದೆ
ಆತನೊಡನೇಕ್ಹೋದೆ ಲೋಕದಾಟವ ಬಿಟ್ಟು
ಜಾತಿಭೇದವನಳಿದ ಅದ್ವೈತಿಯೊಡನೆ || ೨ ||[೧೪]

ತಿಕ್ಕಯ್ಯನವರಂತೆ ಕಾರ್ಯದಕ್ಷರಾಗಿ ತಮ್ಮನ್ನು ತಾತನ ಸೇವೆಗೆ ಅರ್ಪಿಸಿಕೊಂಡ ಶಾಮಣ್ಣನವರ ನೆನಪು ಈ ಗೀತೆಯಲ್ಲಿದೆ.

[illegible]

ಅಜ್ಞಾತ ಕವಿಯೊಬ್ಬರು ಬರೆದಿರಬಹುದಾದ 'ಪರಬ್ರಹ್ಮ ಜೋಗುಳ' ಎನ್ನುವ ಹಾಡು, ಜೋಗುಳದ ರೂಪದಲ್ಲಿದೆ. ಈ ಜೋಗುಳದಲ್ಲಿ ತಾತನವರ ಜೀವನ ವೃತ್ತಾಂತವನ್ನು ಕಾಣಬಹುದು.

ಜೋ ಜೋ ಪರಬ್ರಹ್ಮರೂಪ ಜೋ ಜೋ
ಜೋ ಜೋ ಸಿದ್ಧಯೋಗಿ ಹೃದ್ದೀಪ ಜೋ ಜೋ
ಜೋ ಜೋ ದ್ವೈತಗುಣಾವಳಿ ಲೋಪ
ಯತಿರಾಜ ವಿರಾಜಿತ ಕರ್ಮನಿರ್ಲೇಪ ಜೋ ಜೋ ‖ ೧ ‖

ಅದು ಇದು ಎನ್ನುವ ಅಖಿಲ ತತ್ವವ ಜರಿದು
ವಿದಿತ ಚಿದಾನಂದ ನೀನೆ ಎಂದರಿದು ಜೋ ಜೋ
ಹೃದಯದಿ ನಂಬಿ ದ್ವೈತಮತಿ ಮರೆದು
ಸದಮಳ ಜ್ಞಾನಿಯಾಗಿಹೆ ಸುಖಮೆರೆದು ಜೋ ಜೋ ‖ ೨ ‖

ಭೂತಳದಿ ನರರೂಪವನ್ನು ನೀ ತಳೆದು
ಭೂತ ಪರಿಚರದ ವಿಸ್ತಾರವನು ತಿಳಿದು ಜೋಜೋ
ಜಾತಿ ನಾಮಗಳೆಂಬ ಸಂಕಲ್ಪವಳಿದು ಎರ್ರಿ
ತಾತನೀನೆನಿಸಿದೆ ವಾಸನೆ ಕಳೆದು ಜೋಜೋ ‖ ೩ ‖

ಪಿತಮಾತೆ ಜನ್ಮಭೂಮಿಗಳೆಲ್ಲ ಬಿಟ್ಟು
ಕ್ಷಿತಿಯ ಭೋಗವನೆಲ್ಲ ದ್ವೇಷಿಸಿ ಸುಟ್ಟು ಜೋಜೋ
ಮತಿಯೊಳು ವೈರಾಗ್ಯತಾಳಿ ಗೃಹಬಿಟ್ಟು, ಸತ್ಯ
ಯತಿಯೆನಿಸಿದೆ ಬ್ರಹ್ಮನೊಳು ಚಿತ್ತವಿಟ್ಟು ಜೋಜೋ ‖೧೫

ಒಟ್ಟಾರೆಯಾಗಿ ಸತ್ಯ ನೀತಿ ಭಕ್ತಿ ವೈರಾಗ್ಯ ತಾತನವರ ಲೀಲೆಗಳನ್ನೊಳಗೊಂಡ ಆರತಿ ಪದ್ಯಗಳು, ಜೋಗುಳ ಪದ್ಯಗಳು, ಸುಪ್ರಭಾತಗಳು, ನಾಮಾವಳಿಗಳು ರಚನೆಯಾಗಿವೆ. ಭಾವ, ಭಾಷೆ, ರಾಗ, ತಾಳಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು ಗೀತೆಗಳನ್ನು ರಚಿಸಲಾಗಿದೆ.

ತಾತನವರನ್ನು ಮತ್ತು ತಿಕ್ಕಯ್ಯನವರನ್ನು ಕುರಿತ ಹಾಡುಗಳು ಕನ್ನಡವಷ್ಟೇ ಅಲ್ಲದೆ ತೆಲುಗಿನಲ್ಲೂ ಇವೆ. ಭಾಷಾ ಬಾಂಧವ್ಯಕ್ಕೆ, ಭಾಷೆಯ ಬೆಳವಣಿಗೆಗೆ, ಭಕ್ತರ ಮನೋಧರ್ಮಕ್ಕೆ ಸಹಕಾರಿಯಾಗಲು ಇವು ಉತ್ತಮ ಗೀತೆಗಳಾಗಿವೆ.

ಎಮ್ಮಿಗನೂರು ಜಡೆಯಪ್ಪ ತಾತನವರ ಕುರಿತ ಸಾಹಿತ್ಯ

ಮಹಾಮಹಿಯ ಜಡೆಯೋಗೀಶ್ವರ ಚರಿತ್ರೆ - ೧೯೫೫ : ವೈರಾಗ್ಯಶೀಲರೂ, ಶಿವಪೂಜಾನುಷ್ಠಾನ ನಿಷ್ಠರೂ ಆದ, ಶ್ರೀ ಗುರುಸಿದ್ಧ ಶಿವಯೋಗಿಗಳು ಈ ಕೃತಿಯನ್ನು ಬರೆದಿದ್ದಾರೆ. ಕೃತಿಯ ಆರಂಭದಲ್ಲಿ ಮೋಕ್ಷಸಾಧಕನು ಯಾರು? ಎಂಬ ಪ್ರಶ್ನೆಗೆ ಮೂರುತೆರನಾದ ಸ್ಥಿತಿಗಳಲ್ಲಿ ಮೋಕ್ಷಸಾಧಕನಿರುತ್ತಾನೆ ಎಂದು ತಿಳಿಸುತ್ತಾರೆ. "೧.

ಜ್ಞಾನ ಸಂಪಾದನೆಗಾಗಿ ಶ್ರೀ ಗುರುವರ್ಯನನ್ನಾಶ್ರಯಿಸಿ, ಆರಂಭಶೂರನಾಗಿ, ಉಬ್ಬಿನಿಂದ ಬ್ರಹ್ಮ ಬೋಧೆಯನ್ನು ಪಡೆದು ಮರೆತವನಿಗೆ ಕಾದ ಕಬ್ಬಿಣದ ಮೇಲೆ ನೀರೆರದಂತೆ ಬರಿದಾಗುವುದು. ೨. ಆತ್ಮವಿದ್ಯಾ ಮೋಹದಿಂದ ನಲಿನಲಿದು ಉಪದೇಶ ಪಡೆದವಗೆ ಕಮಲದೆಲೆಯ ಮೇಲಣ ನೀರಿನಂತೆ ಮುತ್ತಿನ ಆಕಾರವನ್ನು ತಳೆಯುವುದು. ೩. ಬ್ರಹ್ಮವಿದ್ಯಾಪೇಕ್ಷೆಯಿಂದಲೂ ಸಂಸ್ಕಾರ ಬಲದಿಂದಲೂ ಪಡೆದ ಜ್ಞಾನ ಜಲವು, ಸ್ವಾತಿಯ ಹನಿಯು ಮುತ್ತಿನ ಚಿಪ್ಪಿನಲ್ಲಿ ಬಿದ್ದು ತಾನೂ ಮೌಕ್ತಿಕವಾದಂತೆ ಶಿವಲಿಂಗವೇ ತಾನಾಗುವದು.”[೧೬] ಹೀಗೆ ನಿಜವಾದ ಮೋಕ್ಷಸಾಧಕನು ಯಾವ ರೀತಿಯಲ್ಲಿರುತ್ತಾನೆಂದು ಹೇಳಿದ್ದಾರೆ. ಜ್ಞಾನಿ ಎಂದರೆ ಯಾರು? ಅವನನ್ನು ಗುರ್ತಿಸುವುದು ಹೇಗೆ? ನಿಜವಾದ ಸುಖ ವೆಂದರೇನು? ಮಹಾತ್ಮರು ಯಾರು? ಹೇಗಿರುವರು? ಹೀಗೆ ಆಧ್ಯಾತ್ಮ ಮಾರ್ಗದ ಮೆಟ್ಟಿಲುಗಳಿಗೆ ಪ್ರಶ್ನೆಯನ್ನು ಹಾಕಿಕೊಳ್ಳುತ್ತಾ ಉತ್ತರ ನೀಡಿರುತ್ತಾರೆ.

ಮೌನಿಯಾಗಿಯೂ, ಜಡನಾಗಿಯೂ, ಉನ್ಮತ್ತನಾಗಿಯೂ ಇದ್ದ ಮಹಾತ್ಮ ಜಡಭರತನ ಕಥೆಯನ್ನು ಉಲ್ಲೇಖಿಸುತ್ತಾ. ಹುಚ್ಚನಂತಿದ್ದರೂ ಸಹ, ಬ್ರಹ್ಮಾನಂದದಲ್ಲಿ ಮುಳುಗಿದ್ದು, ಆತ್ಮಸುಖದಲ್ಲಿ ತೇಲುತ್ತಿರುತ್ತಾನೆ. ಈತ ಅನುಭವಿಸಿದ ಸುಖವನ್ನು ರಾಜನಾದವನೂ ಅನುಭವಿಸಲಾರ. ಸುಖಕ್ಕೆ, ಹಣ, ಅಧಿಕಾರ, ಅಂತಸ್ತುಗಳ ಅಗತ್ಯವಿಲ್ಲೆಂದು ಜಡಭರತನ ಅಭಿಪ್ರಾಯ. ಇಂಥ ಅವಧೂತ ಜಡಭರತನ ಕತೆಯನ್ನು ಹಿನ್ನೆಲೆಯಾಗಿಟ್ಟುಕೊಂಡು ಶ್ರೀ ಜಡೆಪ್ಪತಾತನವರ ಚರಿತ್ರೆಯನ್ನು ಹೆಣೆದಿದ್ದಾರೆ. ಜನನ, ಬಾಲಲೀಲೆ, ವಿದ್ಯಾಭ್ಯಾಸ, ವಿವಾಹ, ವೈರಾಗ್ಯ, ಶ್ರೀ ಗುರುದರ್ಶನ, ಗುರೂಪದೇಶ, ಅಲೆದಾಟ, ತೋರಿದ ಮಹಿಮೆಗಳು ಸಕಲ ಪ್ರಾಣಿಗಳಲ್ಲಿ ದಯೆ, ಸದಾಚಾರ, ಲಿಂಗಾಂಗ ಸಮರಸಭಾವ, ಅಸ್ಪೃಷ್ಯತೆಯ ನಿವಾರಣೆ, ಹೀಗೆ ತಾತನವರ ಜೀವನದಲ್ಲಿ ಘಟಿಸಿದ ಪ್ರಮುಖ ಘಟನೆಗಳನ್ನು ಆಧಾರವಾಗಿಟ್ಟುಕೊಂಡು ಚರಿತ್ರೆಯನ್ನು ನಿರೂಪಿಸಿದ್ದಾರೆ. ಸರಳವಾದ ಗದ್ಯರೂಪದಲ್ಲಿದ್ದು, ಭಕ್ತ ಜನತೆಗೆ ತಾತನವರ ಭಕ್ತಿ, ವೈರಾಗ್ಯ, ಮಾನವೀಯ ಮೌಲ್ಯಗಳನ್ನು, ಅವರು ಸಾಧಿಸಿರುವ ಸಾಧನೆಯನ್ನು ತಿಳಿದುಕೊಳ್ಳಲು ಸಹಕಾರಿಯಾಗಿದೆ.

ಎಮ್ಮಿಗನೂರ ಜೆಡೆಸಿದ್ಧ ಶಿವಯೋಗಿಗಳ ಪುರಾಣ - ೧೯೬೨

ಗದ್ಯ ಸಾಹಿತ್ಯಕ್ಕಿಂತಲೂ ಪದ್ಯಸಾಹಿತ್ಯವು ಜನಮನದಲ್ಲಿ ಭಕ್ತಿದ್ಯೋತಕವಾಗಿ ಉಳಿಯುವುದರಿಂದ ಕಾವ್ಯ ರೂಪದಲ್ಲಿ ಈ ಪುರಾಣವನ್ನು ಬರೆದಿರುವುದಾಗಿ ಪುರಾಣಕಾರ ಪಂ॥ ಅಮರನಾಥ ಶಾಸ್ತ್ರಿಗಳು ಹೇಳಿದ್ದಾರೆ. ಈ ಕೃತಿ ೧೮ ಸಂಧಿಯಲ್ಲಿ ೧೦೨೧ ಭಾಮಿನಿ ಷಟ್ಪದಿಯನ್ನೊಳಗೊಂಡಿದೆ.

> ಯೋಗಿ ಎಮ್ಮಿಗನೂರು ಜಡೆಯತಿ
> ತ್ಯಾಗಿ ಭವಹರ ಭೋಗದೊರ ವಿ
> ರಾಗಿ ಚರಿತೆಯ ಬರೆಯುವೆನು ಮುದದಿಂದ ಭಕ್ತಿಯಲೀ ।
> ರಾಗ ದಿಂದಿದನೋದಿ ಕೇಳ್ವರಿ
> ಗಾಗುರೂತ್ತಮ ಸಕಲ ಸಂಪದ
> ಬೇಗ ಕರುಣಿಸಿ ಭೋಗಿ ಭೂಷಣ ಪದವಿ ಕೊಡವ ನಿಜ ॥[೧೭]

ಜಡೆಯಪ್ಪತಾತನ ಜನನ, ಬಾಲಲೀಲೆ, ಸಾಂಸಾರಿಕ ಜೀವನ, ವೈರಾಗ್ಯ, ಮನಪರಿವರ್ತನೆ, ತೋರಿದ ಮಹಿಮೆ, ಅಂತ್ಯಸ್ಥಿತಿ, ಹೀಗೆ ಯೋಗಿಯ ಸಂಪೂರ್ಣ ಜೀವನ ಚಿತ್ರಣವನ್ನುಈ ಕೃತಿ ಒಳಗೊಂಡಿದೆ.

ಮಾನವ ಜನ್ಮದ ಮಹತಿಯನ್ನು ಆಳವಾಗಿ ಅಭ್ಯಸಿಸುತ್ತಾ ಹೋದರೆ ಮಾನವನೆ ಮಹಾತ್ಮನಾಗುತ್ತಾನೆ ಎನ್ನುವ ಮಾತಿಗೆ ಈ ಪುರಾಣದ ನಾಯಕನೇ ಸಾಕ್ಷಿಯಾಗಿದ್ದಾನೆ. ತಾತನವರು ನಿಗ್ರಹಾನುಗ್ರಹ ಸಾಮರ್ಥ್ಯ ವುಳ್ಳವರು, ಮಹಾ ತಪಸ್ವಿಗಳು, ಅಮಾನುಷ ಶಕ್ತಿಯುಳ್ಳವರೂ, ವೈರಾಗ್ಯಮೂರ್ತಿಗಳೂ ಆದ ರೀತಿಯನ್ನು ಪರಿಣಾಮಕಾರಿಯಾಗಿ ಚಿತ್ರಿಸಲಾಗಿದೆ.

ಹಂದ್ಯಾಳಿನಲ್ಲಿ ಹುಟ್ಟಿ ಲೋಕ ಸಂಚಾರ ಮಾಡುತ್ತಾ ಕೊನೆಗೆ ಎಮ್ಮಿಗನೂರಿನಲ್ಲಿ ನೆಲೆನಿಂತು ಮೇಲು-ಕೀಳು, ಸ್ಪೃಶ್ಯ-ಅಸ್ಪೃಶ್ಯ ಎಂಬ ಕ್ಷುಲ್ಲಕಭಾವನೆಗಳನ್ನು ಜನರ ಮನಸ್ಸಿನಿಂದ ದೂರ ಮಾಡುವ ಸಲುವಾಗಿ ಹರಿಜನ ಕೇರಿಗೂ, ಅವರ ಮನೆ-ಮನೆಗಳಿಗೂ ಪ್ರವೇಶಿಸಿದ್ದಾರೆ. ಕುಡಿತದಂತಹ ದುಶ್ಚಟಗಳನ್ನು ಬಿಡಿಸಿ, ಕಾಯಕದ ಮಹತ್ವವನ್ನು ತಿಳಿಯಪಡಿಸಿದ್ದಾರೆ. ಇವರ ಶಿವಯೋಗದ ಸಾಮರ್ಥ್ಯವನ್ನು ಪರೀಕ್ಷಿಸಲು ಹಾನಗಲ್ಲು ಕುಮಾರಸ್ವಾಮಿಗಳು ಬಂದಾಗ ತೋರುವ ಲಿಂಗಾಂಗಸಾಮರಸ್ಯ ಮಹತ್ವಪೂರ್ಣವಾದುದು. ತಾತನವರ ಅದ್ವೈತ ಪ್ರತಿಪಾದನೆ ಅರ್ಥಾತ್ ಶಿವಯೋಗಿಯೇ ಶಿವನೆಂಬ ತತ್ವವನ್ನು ಅರ್ಥಗರ್ಭಿತವಾಗಿ ಈ ಕೃತಿಯಲ್ಲಿ ಪ್ರತಿಪಾದಿಸಿದ್ದಾರೆ.

ಜಡೆಪ್ಪತಾತನು ತಮ್ಮ ಜೀವಿತದುದ್ದಕ್ಕೂ ವರ್ಗ ರಹಿತ, ವರ್ಣ ರಹಿತ ಸಮಾಜ ರಚನೆಯಲ್ಲಿ ತೊಡಗಿಸಿ ಕೊಂಡು ಮಹಾ ಮನವತಾವಾದಿಯಾಗಿದ್ದರೆಂಬುದು ತಿಳಿಯುತ್ತದೆ. ‘‘ಈ ಕೃತಿ ಯಾವುದೇ ಮತ, ಪಂಥಗಳನ್ನು ತಿರಿಸ್ಕರಿಸದೆ ಕೇವಲ ಭಕ್ತಿ, ಜ್ಞಾನ, ವೈರಾಗ್ಯ, ಸದಾಚಾರ, ನೀತಿ, ಮಾನವಧರ್ಮ ಇವುಗಳನ್ನು ಪ್ರತಿಪಾದಿಸು ವಂಥ ಆದರ್ಶ ಪುರಾಣವಾಗಿದೆ.’’[೧೮] ಈ ಪುರಾಣವು ಮೊದಲ ಮುದ್ರಣದಲ್ಲಿ ೧೬ ಸಂಧಿಗಳಿದ್ದು, ಎರಡನೆ ಮುದ್ರಣದ ಸಮಯಕ್ಕೆ ತಾತನವರ ಇನ್ನೂ ಕೆಲವು ಪವಾಡಗಳು ತಿಳಿದು ಬಂದಿದ್ದರಿಂದ ೧೮ ಸಂಧಿಗೆ ಪುರಾಣ ಮಂಗಳಗೊಂಡಿದೆ. ಪುರಾಣಕಾರರ ಶಾಸ್ತ್ರವ್ಯಾಸಂಗ, ಅನುಭವ, ಪ್ರತಿಭೆ, ಪಾಂಡಿತ್ಯಗಳು ಈ ಕೃತಿ ಯಲ್ಲಿ ವ್ಯಕ್ತವಾಗಿದೆ. ಬಳ್ಳಾರಿ ಜಿಲ್ಲೆಯ ಹಲವಾರು ಗ್ರಾಮಗಳ ಮಠ-ಮಂದಿರ-ಮನೆಗಳಲ್ಲಿ, ಹಬ್ಬ-ಉತ್ಸವಗಳಂದು ಈ ಪುರಾಣವನ್ನು ಪಾರಾಯಣ ಮಾಡುತ್ತಿರುತ್ತಾರೆ. ಸರಳ ಶೈಲಿ ಮತ್ತು ಯತಾರ್ಥವರ್ಣನೆ ಯಿರುವುದು ಭಕ್ತರಿಗೆ ಸುಲಭವಾಗಿ ತಾತನ ಮಹಿಮೆಯನ್ನು ಭಕ್ತಿ, ಜ್ಞಾನ, ವೈರಾಗ್ಯವನ್ನು ತಿಳಿದುಕೊಳ್ಳಲು ಸಹಕಾರಿಯಾಗಿದೆ.

ಜಡೆಸಿದ್ಧ ಶಿವಯೋಗಿಯ ಬಗ್ಗೆ ರಚಿಸಿರಬಹುದಾದ ಸ್ವರ-ವಚನಗಳು

ಅನುಭಾವದ ಅಡುಗೆ,

ಅನುಭಾವದ ಅಡುಗೆಯಾ ಮಾಡಿ
ಅದಕ್ಕಾನುಭವಿಗಳು ಬಂದು ನೀವೆಲ್ಲಾ ಕೂಡಿ
ಅನುಭಾವದ ಅಡುಗೆಯ ಮಾಡೀ ||

ತುನುವೆಂಬಾ ಭಾಂಡವ ತೊಳೆದೂ
ಕೆಟ್ಟ ಮನದಾ ಜಂಜಡವೆಂಬಾ ಮುಸುರೆಯ ಕಳೆದೂ
ಘನವೆಂಬಾ ಮನೆಯನ್ನೇ ಬಳಿದೂ
ಅಲ್ಲಿ ತ್ರಿಗುಣವೆಂಬಾ ಒಲೆಗುಂಡಾ ತೊಳೆದೂ |
ವಿರತಿಯೆಂಬಾ ಮುಡಿಯನ್ನುಟ್ಟು
ಪೂರ್ಣ ಹರಭಕ್ತಿಯೆಂಬಾ ನೀರ ಹೆಸರಿಟ್ಟು
ಅರಿವೆಂಬಾ ಚಿಂತೆಯಾ ಕೊಟ್ಟು
ಮಾಯಾ ಮರೆವೆಂಬಾ ಕಾಷ್ಠಗಳನ್ನೆಲ್ಲಾ ಸುಟ್ಟು |
ಪರವೆಂಬಾ ಸಾಮಗ್ರಿ ಕೂಡೀ
ಪರತರ ಮೋಕ್ಷವೆಂಬಾ ಪಾಕವ ಮಾಡೀ
ಹರಶರಣರು ಸವಿದಾಡೀ | ನಮ್ಮ
ಜಡೆಸಿದ್ಧ ಶಿವಯೋಗಿಯಾ ಧ್ಯಾನವಾ ಪಾಡೀ ||[೧೯]

ಸರ್ಪಭೂಷಣ ಶಿವಯೋಗಿಗಳ ಸ್ವರ-ವಚನವನ್ನು ಅಂಕಿತ ಬದಲಿಸಿ ಭಕ್ತರೊಬ್ಬರು ಹಾಡಿದ್ದಾರೆ. ಜೊತೆಗೆ ಪುರಂದರ ದಾಸರ ಜನಪ್ರಿಯ ಕೀರ್ತನೆಯ ಪ್ರಭಾವದಿಂದ ಈ ಸ್ವರವಚನ ರಚಿಸಿರಬಹುದು. ಯೋಗಿಯನ್ನು ಕುರಿತು ಧ್ಯಾನವ ಮಾಡುವುದೇ ಮೃಷ್ಟಾನ್ನ ಸವಿದಂತೆ. ಮೃಷ್ಟಾನದ ಅಡುಗೆಯನ್ನು ಮಾಡುವ ಪಾತ್ರೆಯೇ ಈ ದೇಹ. ದೇಹದಲ್ಲಿನ ದುರ್ಗುಣಗಳನ್ನು ತೊಳೆದು, ಭಕ್ತಿ-ಜ್ಞಾನ-ವೈರಾಗ್ಯವೆಂಬ ಸಾಮಗ್ರಿಗಳಿಂದ ಮಾಯಾ ಮರೆವೆಂಬಾ ಕಾಷ್ಠಗಳನ್ನೆಲ್ಲಾ ಸುಟ್ಟು, ಅನುಭಾವದ ಅಡುಗೆ ಸಿದ್ಧಮಾಡಿ, ಹರ ಶರಣರೆಲ್ಲಾ ಕೂಡಿ, ಸವಿದಾಡಿ, ಎನ್ನುವ ಈ ಸ್ವರವಚನ ತನು-ಮನಗಳ ಶುದ್ಧೀಕರಣವನ್ನು ತಿಳಿಸುವುದರ ಜೊತೆಗೆ, ಮೋಕ್ಷದ ಹಾದಿಯನ್ನು ತೋರುತ್ತದೆ. ಇಷ್ಟದೈವದ ಸಾಕ್ಷಾತ್ಕಾರಕ್ಕೆ, ಅದ್ವೈತ ಭಾವದ ಆನಂದಕ್ಕೆ ಮಾರ್ಗವನ್ನು ಈ ವಚನ ತೋರಿ ಸುತ್ತಿದೆ.

ಮಹಾ ಮಹಿಮ ಶ್ರೀ ಜಡಿತಾತ,

ಶ್ರೀ ಜಡಿತಾತನ ಧ್ಯಾನವ ಮಾಡಣ್ಣಾ
ನಿರುತ ಧ್ಯಾನವಾ ನೀ ಮಾಡಣ್ಣಾ
ಶ್ರೀ ಜಡಿತಾತನ ಧ್ಯಾನವ ಮಾಡಣ್ಣಾ ||

ಒಡಲ ದುರ್ಗುಣವ ನೀ ಅಳಿಯ ಬೇಕಣ್ಣಾ
ಸತಿ - ಸುತರ ಮೋಹ-ಮದ ಮತ್ಸರ ನೀ ತ್ಯಜಿಸಬೇಕಣ್ಣಾ
ಧಡೆ ಸೂಗೂರು ಗ್ರಾಮದ ಪಾಪಿ ವಿಧವೆಯಾದ
ಬಡವಳ ಕರುಣದಿ ಪೊರೆದೆ
ಆಯಾಜಾವಳ ಗ್ರಾಮದ ಗೌಡರ

ಮನೆಯೊಳು ಬರಡಾಕಳಿನ ಕರೆದೆ
ಸಂತಸದಿ ಸಕಲ ಸೌಭಾಗ್ಯವ ದಯಪಾಲಿಸಿದೆ ||

ಶಿವನ ಶರಣರೊಳು ಪ್ರಬುದ್ಧನೆನಿಸಿದೇ |
ಜಡೆ ಸಿದ್ಧ ಶಿವಯೋಗಿ ಶರಣವೈರಾಗಿ |
ಭವಿನುತ ಭರಿತನು ತಾನಾಗಿ |
ಭಕ್ತರ ಮೊರೆಯನು ಮುದದಿ ಕೇಳಿ ತಾ |
ಹಂದ್ಯಾಳು ಗ್ರಾಮದಿ ಮಳೆಯನು ತರಿಸಿದಾ ||

ಮಹಾಮಹಿಮ ಶ್ರೀ ಜಡಿತಾತನ
ಧ್ಯಾನವಾ ಮಾಡಣ್ಣಾ ಇಂಥ
ಶಿವಶರಣರಾಳಾಗಿ ಸೇವೆ ಮಾಡಣ್ಣಾ!
ಮುಕ್ತಿ ಪಡೆಯಣ್ಣಾ ||[೨೦]

ನಂಬಿದ ಭಕ್ತರನ್ನು ತಾತನು ಕಾಯುವನು. ಅದಕ್ಕೆ ಭಕ್ತರ ನಂಬಿಕೆ ಪವಿತ್ರವಾಗಿರಬೇಕು. ಶುದ್ಧ ಮನಸ್ಸಿನಿಂದ ತಾತನ ಧ್ಯಾನಿಸಿದರೆ ಕಷ್ಟಗಳು ಪರಿಹಾರವಾಗುವವು ಎನ್ನುವುದಕ್ಕೆ ಕೆಲವು ದೃಷ್ಟಾಂತಗಳನ್ನು ಕೊಡಲಾಗಿದೆ. ದೇಹದ ದುರ್ಗುಣವ ಬಿಟ್ಟು, ಸತಿ,ಸುತ, ಮೋಹ, ಮದ, ಮತ್ಸರವ ಬಿಟ್ಟಿರಬೇಕು. ತಾತನನ್ನು ಮನಸಾರೆ ನಂಬಿದ ವ್ಯಕ್ತಿಗಳು ಹಾಗೂ ಗ್ರಾಮಗಳು ಉದ್ಧಾರವಾಗಿವೆ. ಬಡತನ, ಸಂಕಟಗಳು ಪರಿಹಾರವಾಗಿವೆ. ಭಕ್ತರ ವೈಯಕ್ತಿಕ ಮತ್ತು ಸಾಮುದಾಯಿಕ ಸಮಸ್ಯೆಗಳೆಲ್ಲಾ ಪರಿಹಾರವಾಗಿವೆ. ಅದಕ್ಕಾಗಿ ಶ್ರೀ ಜಡೆತಾತನ ಧ್ಯಾನವ ಮಾಡಿದರೆ ಆತನನ್ನು ನಂಬಿದರೆ ನಮ್ಮ ಎಡರು ತೊಡರುಗಳು ಪರಿಹಾರವಾಗುತ್ತವೆ ಎನ್ನುವ ಈ ಸ್ವರವಚನದಲ್ಲಿ ಯೋಗಿಗಳ ನಂಬಿಕೆಯ ಹಿಂದಿರುವ ಮಹತ್ವವನ್ನು ಕಾಣಬಹುದು.

ವೆಂಕಾವಧೂತರ ಕುರಿತ ಸಾಹಿತ್ಯ

ಶ್ರೀ ಸದ್ಗುರು ವೆಂಕಾವಧೂತರ ಪುರಾಣ : ೧೯೯೮ : ೧೮ ಸಂಧಿಗಳಿದ್ದು, ಸುಮಾರು ೮೫೬ ಭಾಮಿನಿ ಷಟ್ಪದಿಯನ್ನೊಳಗೊಡ ಈ ಕೃತಿಯನ್ನು ಡಿ.ಎಂ.ಶಿವಮೂರ್ತಿಶಾಸ್ತ್ರಿಗಳು ರಚಿಸಿದ್ದಾರೆ.

ಭಾವಜಾರಿಯ ಕರುಣೆಯಿಂ ಮುದ
ತೀವಿ ಮಂಗಮ್ಮಳಿಗೆ ಸುತನೆನಿ
ಸೋವಿಯುದಿಸಿದ ವೆಂಕಟೇಶನು ದೇವಲಾಪುರದಿ ||

ಕಂಗೊಳಿಪ ದೇವ್ಲಾಪುರದಿ ಭವ
ಭಂಗವಿಲ್ಲದ ಕ್ಷೀರ ಮತದಲಿ
ಪಿಂಗದಿಹ ಧರ್ಮಿಗಳು ನರಸಿಂಹಪ್ಪ ಮಂಗಮ್ಮ |
ತುಂಗ ದಾಂಪತ್ಯದೊಳು ನಿರುತಮ

ನಂಗಹರನಂ ನೆನೆದು ವಿಷಯದ

ಸಂಗರಹಿತರುಮೆನಿಸಿ ಕೃಷಿಕಾಯಕದಿ ಮನನಿಲಿಸಿ ||[೨೧]

ವೆಂಕಪ್ಪನ ಜನನ, ಸಂಸಾರ, ವೈರಾಗ್ಯ, ಬಡತನ, ಗುರುಶೋಧ, ಗುರುಅನುಗ್ರಹ, ಯೋಗಸಾಧನೆ, ಪರ್ಯಾಟನೆ, ದಮ್ಮೂರಿನಲ್ಲಿ ನೆಲೆ, ಮಂಟಪ ನಿರ್ಮಾಣ, ಅವಧೂತಸ್ಥಿತಿ ಮತ್ತು ಸಮಾಧಿಸ್ಥಿತಿ ಹೀಗೆ ಅವಧೂತರ ಜೀವನದ ಘಟನೆಗಳನ್ನೆಲ್ಲಾ ನಿರೂಪಿಸಿದ್ದಾರೆ. ಆತನನ್ನು ನಂಬಿದ ಭಕ್ತರಿಗೆ ಇಂಬನ್ನು ತೋರಿದ ಮಹಿಮೆಗಳನ್ನು ಚಿತ್ರಿಸುತ್ತಾ, ಪುರಾಣ ಓದುವವರಿಗೆ ಮತ್ತು ಕೇಳುವವರಿಗೆ ಅವರ ಮೇಲೆ ಅಪಾರ ಗೌರವ ಭಕ್ತಿಗಳನ್ನು ಮೂಡಿಸುತ್ತದೆ. ಅವರ ಶಾಪಾನುಗ್ರಹದ ಶಕ್ತಿಯನ್ನು ಪುರಾಣ ತಿಳಿಸುವುದರಿಂದ ಭಕ್ತ ಜನತೆ ಭಯ-ಭಕ್ತಿಯಿಂದ, ನ್ಯಾಯ, ನೀತಿ, ಸತ್ಯ, ಧರ್ಮದಿಂದ ಬಾಳುವಂತೆ, ಮತ್ತು ತಾತನವರನ್ನು ನಂಬಿದರೆ ಯಾವ ರೂಪದಲ್ಲಾದರೂ ನಮ್ಮನ್ನು ಕಾಪಾಡುತ್ತಾನೆ ಎನ್ನುವ ಭಾವನೆಯನ್ನು ಪುರಾಣ ಮೂಡಿ ಸುತ್ತದೆ.

ಪುರಾಣಕಾರರೇ ಹೇಳುವಂತೆ ಈ ಕೃತಿಯನ್ನು ಬರೆಯಲು ಆ ತಾತನೇ ಪ್ರೇರಣೆಯನ್ನಿತ್ತು ಸಲಹಿದನೆಂದೂ ಇದರ ಉನ್ನತಿ ಪ್ರಚಾರ, ಪ್ರಯೋಜನ, ಇದರಿಂದ ಭಕ್ತರ ಮನದಲ್ಲಿಯ ಪರಿಣಾಮ ಇವೆಲ್ಲವೂ ಆತನೇ ಬಲ್ಲನೆಂದು ಹೇಳಿಕೊಂಡಿದ್ದಾರೆ. ಹಲವಾರು ಪುರಾಣಗಳನ್ನು ಬರೆದ ಅನುಭವವಿರುವ ಲೇಖಕರು ತಮ್ಮ ವಿದ್ವತ್‌ಪೂರ್ಣ ಪ್ರತಿಭೆ ಮತ್ತು ಪಾಂಡಿತ್ಯವನ್ನು ಈ ಕೃತಿಯಲ್ಲಿ ತೋರಿದ್ದಾರೆ. ಪುರಾಣ ಪ್ರವಚನವನ್ನೂ ಹೇಳುವ ಕಲೆಯುಳ್ಳ ಲೇಖಕರು, ವಾಚನ-ಪ್ರವಚನಾದಿಗಳಿಗೆ ಯೋಗ್ಯವಾದ ರೀತಿಯಲ್ಲಿ ಸರಳಕನ್ನಡದಲ್ಲಿ ರಚಿಸಿದ್ದಾರೆ. ತಾತನವರ ರಥೋತ್ಸವ ಹಾಗೂ ಹಬ್ಬ-ಹರಿದಿನಗಳ ಸಂದರ್ಭದಲ್ಲಿ ಈ ಪುರಾಣ ಪ್ರವಚನ ವಿರುತ್ತದೆ.

ದಮ್ಮೂರು ಶ್ರೀ ಸದ್ಗುರು ವೆಂಕಾವಧೂತರ ಚರಿತ್ರೆ

ಜೀವನ ಮತ್ತು ಸಾಧನೆ : ೨೦೦೧ : ಸ್ವತಃ ತಾತನ ಭಕ್ತರೂ, ದಮ್ಮೂರಿನಲ್ಲಿರುವ ಅವರ ಮಠದ ಏಳ್ಗೆಗೆ ಸತತ ಶ್ರಮಿಸುತ್ತಿರುವವರೂ ಆದ, ಹೊಸಪೇಟೆಯ ವ್ಯಾಪಾರಿ ವೇಮಲ ಗಟ್ಟೆಪ್ಪ ಶ್ರೇಷ್ಠಿ ಈ ಕೃತಿಯ ಕರ್ತರು. ಅವರೇ ಹೇಳುವಂತೆ ಪುರಾಣ ಸಾಹಿತ್ಯ ಕಲಾದೃಷ್ಟಿಯಿಂದ ಬಹಳ ಅದ್ಭುತವಾದುದು. ಆದರೆ ಪುರಾಣಸಾಹಿತ್ಯ ಸಾಮಾನ್ಯ ಜನರಿಗೆ ನುಂಗಲಾರದ ತುತ್ತಾಗಿದೆ. ಶ್ರೀ ಸದ್ಗುರುಗಳ ಜೀವನಚರಿತ್ರೆ ಜನಸಾಮಾನ್ಯ ರಿಗೂ ಅರ್ಥವಾಗುವ ಹಾಗೆ ಗದ್ಯ ರೂಪದಲ್ಲಿ ಚರಿತ್ರೆ ಬರೆದಿದ್ದೇನೆ ಎಂದಿದ್ದಾರೆ.

ವೆಂಕಪ್ಪತಾತನ ಚರಿತ್ರೆಯನ್ನು ಬರೆಯುವಾಗ ಹಲವಾರು ಮಹಾನುಭಾವಿಗಳ, ವೇದ ಉಪನಿಷತ್‌ವಾಕ್ಯಗಳ ವಚನಗಳನ್ನು ಉಲ್ಲೇಖಿಸುತ್ತಾ, ಆ ನುಡಿಗಳ ಆಧಾರದಲ್ಲಿ ತಾತನ ಜೀವನಚರಿತ್ರೆಯನ್ನು ಕಟ್ಟಿದ್ದಾರೆ. ತಾತನು ಮಹಾವೈರಾಗ್ಯಮೂರ್ತಿ, ಪವಾಡಪುರುಷ ಎಂದು ಹೇಳಿರುವ ಗ್ರಂಥಕರ್ತರು "ಅವಧೂತ ಲಕ್ಷ್ಯ ಮತ್ತು ಲಕ್ಷಣಗಳನ್ನು ಈ ಕೃತಿಯಲ್ಲಿ ಹೇಳುತ್ತಾ, ಯಾವ ಶಕ್ತಿಯಿಂದ ತನ್ನನ್ನು ತಾನು ಉದ್ಧಾರ ಮಾಡಿ ಕೊಂಡನೋ, ತನ್ಮೂಲಕ ಜಗತ್ತನ್ನು ಉದ್ಧಾರ ಮಾಡಿ ಈಶ್ವರಾದೇಶಾವರ್ತಿಯಾಗಿ ಉಚ್ಚರಿಸುತ್ತಾನೆ, ಸಂಚರಿ ಸುತ್ತಾನೆ, ಹಾಗೂ ಅವತರಿಸುತ್ತಾನೆ. ಅವನ ಉಚ್ಚಾರ, ಆಚಾರಗಳೇ ನಮಗೆ ವಿಲಕ್ಷಣವಾದ ಲೀಲಾ ವಿಶೇಷ ಗಳು.

ಅವೇ ಅಪ್ರಾಕೃತ ಶಕ್ತಿ ಸಂಕೇತಗಳಾದ ಪವಾಡಗಳು.''[೨೨] ಎಂದಿದ್ದಾರೆ. ಸ್ವತಃ ವೆಂಕಾವಧೂತರನ್ನು ಕಂಡಿರುವ, ಅವರ ಮಹಿಮೆಯನ್ನು ನೋಡಿರುವ ಮತ್ತು ಅನುಭವಿಸಿರುವ ಕೃತಿಕಾರರು ಈಗಲೂ ತಾತನನ್ನೇ ನಂಬಿ, ಪರಮ ಭಕ್ತರಾಗಿ ಲೋಕ ಜೀವನ ಸಾಗಿಸುತ್ತಿದ್ದಾರೆ.

''ಸಾಧೂನಾಂ ದರ್ಶನಂ ಪುಣ್ಯಂ
ಸ್ಪರ್ಶನಂ ಪಾಪನಾಶನಮ್
ಸಂಭಾಷಣಂ ಕೋಟಿತೀರ್ಥಂ
ವಂದನಂ ಮೋಕ್ಷದಾಯಕಂ''

ಎನ್ನುವಂತೆ ತಾತನವರ ದರ್ಶನದಿಂದ ನಮ್ಮ ಜೀವನದಲ್ಲಿ ಪರಿವರ್ತನೆಯಾಯಿತು ಎನ್ನುತ್ತಾರೆ. ತಾತನನ್ನು ತಾವು ಮೊದಲಬಾರಿ ನೋಡಿದಾಗ''ಮೂರ್‍ನಾಲ್ಕು ದಿನಗಳಿಂದ ತೀರ್ಥ ಆಹಾರಾದಿಗಳನ್ನು, ಮಲಮೂತ್ರಾದಿ ಗಳನ್ನು ತ್ಯಜಿಸಿ ತಪಸ್ಸು ಮಾಡುತ್ತಿದ್ದನೋ ಎನ್ನುವಂತೆ ಕಂಬಳಿ ಹೊದ್ದುಕೊಂಡಿದ್ದ ತಾತನು ವಟವೃಕ್ಷದಲ್ಲಿದ್ದ ಗುಡಿಸಲಿನಿಂದ ಕೆಳಗಿಳಿದು ಯಾವಾಗಲೂ ಧಗಧಗಿಸುತ್ತಿದ್ದ ಅಗ್ಗಿಷ್ಟಿಕೆಯ ಮುಂದೆ ಸಿಗರೇಟನ್ನು ಎಳೆಯುತ್ತಾ ನಮಗಾಗಿ ಕಾಯುತ್ತ ಕುಳಿತಿರುತ್ತಿದ್ದನು. ನೋಡಲು ಕಪ್ಪಾದ, ಬಡಕಲು ಶರೀರ, ಜಟಾಧಾರಿ, ಹೆದರಿಕೆ ಹುಟ್ಟಿಸುವ ರೂಪ.'' ಹೀಗೆ ತಾತನನ್ನು ಮೊದಲಬಾರಿಗೆ ನೋಡಿದಾಗ ಆದ ಅನುಭವದ ಚಿತ್ರಣ ನೀಡುತ್ತಾರೆ. ಕೃತಿಕಾರರು ತಾತನ ಚರಿತ್ರೆಯ ಜೊತೆಗೆ ಹಲವು ಭಕ್ತಿಗೀತೆಗಳನ್ನೂ ರಚಿಸಿದ್ದಾರೆ.

ಸದ್ಗುರು ಸ್ತುತಿ ಪುಷ್ಪಾಂಜಲಿ (ಸ್ತೋತ್ರ ಸಂಗ್ರಹ)

ಜೀವನದ ಪ್ರವಾಹದಲ್ಲಿ ಸಮಸ್ಯೆಗಳ ಸುಳಿವಿಗೆ ಸಿಲುಕಿ, ಸೋತುಹೋದ ಮಾನವನಿಗೆ ಕಷ್ಟದಾಟಿಸಿ, ದೇವರ ದಡ ಸೇರಿಸುವ ಸುಲಭ ಹಾಗೂ ಸುಸ್ಥಿರ ಸ್ಥಾಯೀ ಸೇತುವೆಗಳೇ ಈ ಸ್ತೋತ್ರಗಳು. ಲೌಕಿಕ ಜೀವನವನ್ನು ಮೀರಿ, ಆಧ್ಯಾತ್ಮಿಕ ಜೀವನದಲ್ಲಿ ಅನುಭವವನ್ನು ಅನುಭವಿಸಿದ ಮಹಾನುಭಾವಿಗಳು ನುಡಿದಿರುವ ಶ್ಲೋಕಗಳು ಈ ಸಂಗ್ರಹದಲ್ಲಿವೆ. ಶ್ರೀ ಗುರುಸ್ತುತಿ, ಶ್ರೀ ಗಣೇಶ ಸ್ತೋತ್ರಮಂಜರಿ, ಶಿವಪಂಚಾಕ್ಷರೀ ಸ್ತೋತ್ರ ಮಂಜರಿ, ಸದ್ಗುರು ಪಾದ ಪೂಜಾ ವಿಧಾನ, ಶರಣರ ವಚನ ಮಾಲೆ, ಅಷ್ಟೋತ್ತರ ಶತನಾಮಾವಳಿ, ಧರ್ಮ, ಭಕ್ತಿ, ವೈರಾಗ್ಯ, ಜೀವನ್ಮುಕ್ತಿ ಸ್ಥಿತಿ, ಗುರು ಮತ್ತು ಶಿಷ್ಯ ಹೀಗೆ ಆಧ್ಯಾತ್ಮ ಮಾರ್ಗದ ಎಲ್ಲಾ ನೆಲೆಗಳ ಅರ್ಥವನ್ನು ಅವುಗಳ ಮಹತ್ತ್ವವನ್ನು ಈ ಸಂಗ್ರಹ ಕೃತಿ ತಿಳಿಸುತ್ತದೆ.

ಅವಧೂತ ಪಂಥೀಯರಲ್ಲಿ ಗುರು ಮುಖ್ಯ, ಸರ್ವವೂ ಆತನೆ. ಅಂತಹ ಸದ್ಗುರುವಿನ ಮಹತ್ವವನ್ನು ಗುರುವಿನ ಪೂಜಾ ವಿಧಾನವನ್ನು ಈ ಕೃತಿಯಲ್ಲಿ ಕಾಣಬಹುದು. ಸದ್ಗುರುವು ಹೇಗಿರುವನು? ಅವನ ಲಕ್ಷಣ ಗಳೇನು? ಅವನ ವ್ಯಕ್ತಿತ್ವ ಎಂತಹುದು? ಎನ್ನುವ ಪ್ರಶ್ನೆಗಳನ್ನು ಹಾಕಿಕೊಂಡು ಆ ಪ್ರಶ್ನೆಗಳಿಗೆ ವಿಶಾಲವಾದ ಅರ್ಥವನ್ನು ಕೊಡುವ ಶ್ಲೋಕಗಳಿವೆ.

''ಧ್ಯಾನ ಮೂಲಂ ಗುರೋರ್ಮೂರ್ತಿಃ
ಪೂಜಾ ಮೂಲಂ ಗುರೋಃಪಾದಃ

ಮಂತ್ರ ಮೂಲಂ ಗುರೋರ್ವಾಕ್ಯಂ
ಮೋಕ್ಷ ಮೂಲಂ ಗುರೋಕೃಪಾ''

ಹೀಗೆ ಗುರುವಿನ ಮೂರ್ತಿಯೇ ಧ್ಯಾನಕ್ಕೆ ಆಧಾರ. ಗುರುವಿನ ಪಾದ ಪದ್ಮಂಗಳೇ ಆರಾಧನೆಗೆ ಮೂಲವು. ಗುರುವಿನ ವಾಕ್ಯಗಳೇ ಮಂತ್ರಕ್ಕೆ ಮೂಲವು ಮತ್ತು ಗುರುವಿನ ಕೃಪೆಯೇ ಮೋಕ್ಷಕ್ಕೆ ಮೂಲವು''[೨೨] ಎಂದಿದ್ದಾರೆ. ಗುರುವಿನ ಅರ್ಥವನ್ನು ತಿಳಿಸುತ್ತಾ,

''ಗುಕಾರಶ್ಚಾಂದಕಾರೋ ಹಿ ಗುಕಾರಸ್ತೇಜ ಉಚ್ಯತೆ ।
ಅಜ್ಞಾನ ಗ್ರಾಸಕಂ ಬ್ರಹ್ಮ ಗುರುರೇವ ನ ಸಂಶಯ''॥

'ಗು'ಕಾರವು ಅಜ್ಞಾನವೆಂಬ ಅಂಧಕಾರವು. 'ರು'ಕಾರವು ಆ ಅಂಧಕಾರವನ್ನು ಹೋಗಲಾಡಿಸುವ ಬೆಳಕು. ಗುರುವೇ ಅಂಧಕಾರವನ್ನು ನಾಶಮಾಡುವ ಬ್ರಹ್ಮವು. ಇದರಲ್ಲಿ ಸಂಶಯವಿಲ್ಲ. ಇಂಥಹ ಗುರುವಿನ ಮೂಲದ ಅರ್ಥವನ್ನು ಈ ಕೃತಿಯಲ್ಲಿ ತಿಳಿಯಬಹುದು.

ಗುರುವಿಂದ ಬಂಧುಗಳು ಗುರುವಿಂದ ದೈವಗಳು
ಗುರುವಿಂದಲಾದದಂ ಪುಣ್ಯ ಲೋಕಕ್ಕೆ
ಗುರುವಿಂದ ಮುಕ್ತಿ ಸರ್ವಜ್ಞ॥

ಗುರುವಿನ ನಂತರ ಬಂಧುಗಳನ್ನು ವಿಚಾರಿಸಬೇಕು. ಗುರುವನ್ನು ಪೂಜಿಸಿದ ಮೇಲೆ ದೇವರನ್ನು ಪೂಜಿಸ ಬೇಕು. ಗುರುವಿನಿಂದಲೇ ಪುಣ್ಯ, ಪ್ರಪಂಚಕ್ಕೆಲ್ಲಾ ಗುರುವಿನಿಂದಲೇ ಮುಕ್ತಿಯಾಗುವುದು. ಶ್ರೀ ಗುರುವಿನ ಬಗ್ಗೆ ಬಂದಿರುವ ಶ್ಲೋಕ, ವಚನ, ಕೀರ್ತನೆಗಳ್ನು ಸಂಗ್ರಹಿಸಿ, ಅವುಗಳ ಸರಳಾನುವಾದವನ್ನು ಈ ಸಂಗ್ರಹದಲ್ಲಿ ಕಾಣಬಹುದು.

ಸಂಸಾರದಲ್ಲಿ ವಿರಕ್ತನಾದವನು ಬ್ರಹ್ಮನಿಷ್ಠರಾದ ಸದ್ಗುರುವನ್ನು ಶೋಧಿಸಬೇಕು. ಕಾರಣ ಗುರುಗಳು ತಮ್ಮ ಭಕ್ತಿ-ಜ್ಞಾನ-ವೈರಾಗ್ಯವನ್ನು ತೋರಿಸಿಕೊಳ್ಳದೇ ಎಲೆಮರೆಯ ಕಾಯಿಯಂತಿರುತ್ತಾರೆ. ಸದ್ಗುರುವನ್ನು ಹುಡುಕಿ ಅವರ ಶಿಷ್ಯನಾಗಬೇಕೆಂಬ ದಾರಿಯನ್ನು ಮುಮುಕ್ಷು ಬಯಸುವವನಿಗೆ ಈ ಕೃತಿ ತೋರಿಸುತ್ತದೆ.

ಭಕ್ತಿ ಗೀತೆಗಳು

ಶ್ರೀ ಸದ್ಗುರು ವೆಂಕಾವಧೂತ ನಮನ ಮಾಡುವೇ
ಕರುಣಿಸಯ್ಯ ತಾತ ವರವ ಬೇಡುವೆ ॥ ಪ ॥

ಕುರಣಿಸಯ್ಯ ತಂದೆ ನಿನಗೆ ಕರವ ಮುಗಿಯುವೇ ॥ ಅ.ಪ ॥
ದೇವಲಾಪುರ ಗ್ರಾಮದಲ್ಲಿ ಆಯ್ತು ಜನನವು
ಬಾಲ್ಯದಲ್ಲಿ ಶಿವನ ಕರುಣೆ ಪಡೆದೆ
ಬಲಶಾಲಿಯಾಗಿ ಧರೆಗೆ ಅವತರಿಸಿದೆ
ಭಜಿಸುವಂಥ ಭಕ್ತರಿಗೆ ಸಲುಹ ಬಂದೆ ॥ ೧ ॥

ಛಿದ್ರವಾದ ಹಾಳು ಗ್ರಾಮವ ವೃದ್ಧಿಗೊಳಿಸಿದೆ
ಭಕ್ತಕೋಟಿ ಜನರಿಗೆ ಸನ್ಮಾರ್ಗ ತೋರಿದೆ
ಭಕ್ತಿಯಿಂದ ಭಜಿಸುವವರಿಗೆ ಮುಕ್ತಿ ನೀಡುವೆ
ಶಕ್ತಿ ವರದಾತನಾಗಿ ನಮ್ಮನನುವರತ ಪೊರೆಯುವೆ ||[೨೪]

ವೆಂಕಾವಧೂತರ ಹುಟ್ಟು, ಬಾಲ್ಯಲೀಲೆ, ಗುರು ಅನುಗ್ರಹ, ದಮ್ಮೂರಿಗೆ ಆಗಮನ, ತನ್ನ ಮಹಿಮೆಯಿಂದ ನಂಬಿದ ಭಕ್ತರ ಉದ್ಧಾರ, ಭಕ್ತಿಯಿಂದ ಭಜಿಸುವವರಿಗೆ ಮುಕ್ತಿ ನೀಡುವ ಶಕ್ತಿವರದಾತನೆಂದು ಕೊಂಡಾಡುವ ಭಕ್ತಿಗೀತೆ ಇದಾಗಿದೆ.

ಗುರು ಬಂದ ಮನೆಗೆ : ಎನ್ನುವ ಗೀತೆಯಲ್ಲಿ ಭಕ್ತರು ಎಲ್ಲೇ ಇರಲಿ, ಅವರನ್ನು ಕಾಪಾಡಲಿಕ್ಕೆ ತಾತನೇ ಮನೆಗೆ ಬರುತ್ತಿದ್ದರಂತೆ.ಇದ್ದಕ್ಕಿದ್ದಂತೆ ಒಮ್ಮೆ ಲೇಖಕರ ಮನೆಗೆ ತಾತನವರು ಬಂದಾಗಿನ ಅನುಭವವನ್ನು ಈ ಗೀತೆಯಲ್ಲಿ ವ್ಯಕ್ತಪಡಿಸಿದ್ದಾರೆ.

ಗುರು ಬಂದ ಗುರುಬಂದ ಗುರುಬಂದ ಮನೆಗೆ
ಗುರು ಯಂಕಪ್ಪ ತಾತನು ತಾ ಬಂದ ಮನೆಗೆ || ಪ ||

ಎಂದು ಬಾರದ ಗುರುವು ಇಂದಿಗೆ ಬಂದ ಆ
ಆನಂದ ಪದವಿಯು ನಿಮಗಾಗಲೆಂದ || ೧ ||

ಕುರುಡರಿಗೆ, ಕುಂಟರಿಗೆ ಕಣ್ಣು ಕಾಲ್ಗಳ ತಂದ
ಬರಡು ಗೋವಿನ ಹಾಲು ಕರೆಯುತ್ತ ಬಂದ || ೨ ||

ಗುರುವು ಸಾಕ್ಷಾತ್ತಾಗಿ ತಾನೇ ಭಿಕ್ಷೆಗೆ ಬಂದ
ಮೋಕ್ಷವನು ಕೊಡುವಂಥ ತಾತ ತಾ ಬಂದ ||[೨೫]

ದೀನರಿಗೆ, ಅನಾಥರಿಗೆ, ಕುರುಡ-ಕುಂಟರಿಗೆ ತಾತನ ಅನುಗ್ರಹ, ಆಶೀರ್ವಾದ ಇರುತ್ತದೆ. ಶಿಷ್ಟರ ರಕ್ಷಣೆ ತನ್ನ ಹೊಣೆಯೆಂದು ತಿಳಿದ ತಾತನು ಭಿಕ್ಷುಕನ ವೇಷದಲ್ಲಿ ಮನೆಗೆ ಬಂದು, ನಂಬಿದ ಭಕ್ತರುಗಳಿಗೆ ವರ ನೀಡುವನೆಂಬ ಆಶಯ ಈ ಗೀತೆಯಲ್ಲಿದೆ.

ಶಿವರಾಮವಧೂತರನ್ನು ಕುರಿತ ಸಾಹಿತ್ಯ

ಶ್ರೀ ಶಿವರಾಮ ಅವಧೂತರ ಜೀವನ ಚರಿತ್ರೆ : ೨೦೦೩ : ಚಾಕುಬಂಡೆ ಎಂ.ಎಸ್.ಸುಬ್ಬಣ್ಣನವರು ಗದ್ಯರೂಪದಲ್ಲಿ ಶಿವರಾಮವಧೂತರ ಚರಿತ್ರೆ ಬರೆದಿದ್ದಾರೆ. ಅವಧೂತರು ಮೈಲಾರದಲ್ಲಿ ಹುಟ್ಟಿ, ಸಂಸಾರವಂದಿಗನಾಗಿದ್ದು, ಆಕಸ್ಮಿಕ ಘಟನೆಗಳಿಂದ ಬೇಸತ್ತು, ಜಿಗುಪ್ಸೆ ಹೊಂದಿ ದುಷ್ಟ ಜನರ ಸಹವಾಸ ಮಾಡಿ ದುರಭ್ಯಾಸ ಮತ್ತು ದುಶ್ಚಟಗಳಿಗೆ ಬಲಿಯಾಗಿ, ಮತ್ತೆ ಎಚ್ಚೆತ್ತು ಕೊಂಡು, ಊರು ಬಿಟ್ಟು ಪರ ಊರಿಗೆ ಬಂದು ನೆಲೆಸುತ್ತಾರೆ. ಒಳ್ಳೆಯ ನಡೆ-ನುಡಿಯಿಂದ ಇದ್ದುಕೊಂಡು ಊರ ಮಕ್ಕಳಿಗೆ ಪಾಠ, ಪ್ರವಚನಗಳನ್ನು ಹೇಳಿಕೊಡುತ್ತಾರೆ. ಹೀಗೆ ಸಮಾಜಸೇವೆ ಸಲ್ಲಿಸುತ್ತಾ ಭಕ್ತಿಧ್ಯಾನದಲ್ಲಿದ್ದು ಹಂಪಿ

ವಿರುಪಾಕ್ಷೇಶ್ವರನನ್ನು ಆರಾಧಿಸುತ್ತಿರುತ್ತಾರೆ. ಮುಂದೆ ಸಿದ್ಧಾರೂಢರ ಆದೇಶದಂತೆ ಚೇಳಗುರಕೆಗೆ ಬಂದು ಎರ್ರಿತಾತನ ಸೇವೆ ಮಾಡುತ್ತಾ, ಗುರು ಅನುಗ್ರಹ ಪಡೆಯುತ್ತಾರೆ. ಗುರುಗಳು ಶಿಷ್ಯನ ಸಹನೆ, ಶ್ರದ್ಧೆಯನ್ನು ಪರೀಕ್ಷಿಸಬೇಕೆಂದು "ತುಮಕೂರಿಗೆ ಹೋಗಿ ಚಕ್ಲಿ ತಾರಯ್ಯ" ಎಂದಾಗ, ಕಷ್ಟಪಟ್ಟು ತಾತನವರ ಸೇವೆ ಮಾಡುತ್ತಾನೆ. ಇದರಿಂದ ಗುರು ಅನುಗ್ರಹ ದೊರೆತು, ಗುರುವಿನಿಂದ ಆತ್ಮಜ್ಞಾನದ ಉಪದೇಶವಾಗಿ ಶಿವರಾಮವಧೂತನೆಂಬ ಅಭಿದಾನವನ್ನು ಪಡೆದಿರುತ್ತಾರೆ.

ಮಾನವ ಜನಾಂಗಕ್ಕೆ ಅವರ ಏಳ್ಗೆಗೆ, ಚಾಕುಬಂಡೆಯಲ್ಲಿದ್ದು ಸಪ್ತಾಹ ಭಜನೆ ಮತ್ತು ಜ್ಞಾನ ದಾಸೋಹ, ಅನ್ನದಾಸೋಹದಂತಹ ಕಲ್ಯಾಣ ಕಾರ್ಯಗಳನ್ನು ಮಾಡಿ 'ಹಂಪಿ'ಗೆ ಬಂದು ನೆಲೆಸಿರುತ್ತಾರೆ. ಹಲವಾರು ಗ್ರಾಮಗಳಿಗೆ ತೆರಳಿ ಸಪ್ತಾಹ ಭಜನೆಗಳನ್ನು ಏರ್ಪಡಿಸಿ ಬಂದಿದ್ದಾರೆ. ಹಂಪಿಯ ಆಶ್ರಮದಲ್ಲಿ ತಮ್ಮ ಪರಂಪರೆಯ ಮುಂದುವರೆಕೆಗಾಗಿ ಶಿಷ್ಯ ಶಿವಶರಣಾನಂದರಿಗೆ ಉಪದೇಶ ನೀಡಿ ಅವರಿಗೆ ಆಶಿರ್ವದಿಸಿದ ವಿವರಣಾತ್ಮಕ ಮಾಹಿತಿ ಈ ಚರ್ರಿತೆಯಲ್ಲಿದೆ.

ಶಿವರಾಮವಧೂತರ ಆಧ್ಯಾತ್ಮಪ್ರಚಾರ ವಿದೇಹ ಕೈವಲ್ಯ, ಭಕ್ತಿ-ಜ್ಞಾನ, ವೈರಾಗ್ಯಗಳು ಎಂಥಾ ನಾಸ್ತಿಕನನ್ನು ಆಸ್ತಿಕನನ್ನಾಗಿ ಮಾಡುವ, ಅವಧೂತರ ಬಗ್ಗೆ ಗುರುಭಕ್ತಿ-ಗುರುನಿಷ್ಠೆ ಮೂಡಿಸುವಂತಹ ಕೃತಿ ಇದಾಗಿದೆ. ನಿರೂಪಣೆ ಉತ್ತಮವಾಗಿದ್ದು, ಸರಳ ಶೈಲಿಯಿಂದ ಜನಸಾಮಾನ್ಯರಿಗೂ ಶ್ರೀ ಶಿವರಾಮವಧೂತರ ಜೀವನ ಚರಿತ್ರೆಯನ್ನು ತಿಳಿಯಪಡಿಸುವ ಪ್ರಯತ್ನ ಈ ಕೃತಿಯಿಂದ ನೆರವೇರಿದೆ.

ಶಿವರಾಮವಧೂತರ ಜೀವನ ಚರಿತ್ರೆ, ಪುರಾಣ ಕಾವ್ಯ :೨೦೦೩

ಬದನೇಹಾಳು ಮರಿಸಿದ್ದಯ್ಯಸ್ವಾಮಿಗಳು ಏಳು ಸಂಧಿಗಳಲ್ಲಿ ಸುಮಾರು ೨೬೬ ಪದ್ಯಗಳ ಭಾಮಿನಿ ಷಟ್ಪದಿಯಲ್ಲಿ ಈ ಪುರಾಣ ರಚಿಸಿದ್ದಾರೆ. ಶಿವರಾಮವಧೂತರ ಬಾಲ್ಯ ಜೀವನವನ್ನು ಸಂಕ್ಷಿಪ್ತವಾಗಿ ತಿಳಿಸುತ್ತಾ, ಲೌಕಿಕ ಜೀವನದಿಂದ ಜಿಗುಪ್ಸೆಹೊಂದಿ, ಸಾಧುಗಿರಿಗೆ ಬಂದು ಅಲ್ಲಿಂದ ಚೇಳಗುರಿಕೆಗೆ ಹೋಗಿ ಎರ್ರಿತಾತನವರ ಸೇವೆಗೈದು, ಗುರುಗಳ ಅನುಗ್ರಹ ಪಡೆದು ಮತ್ತು ಸಾಧುಗಿರಿಗೆ ಬಂದು ಭಕ್ತಜನತೆಯ ಸಹಕಾರದಿಂದ ಸಪ್ತಾಹ ಭಜನೆ ನಡೆಸಿದ ಸಂಕ್ಷಿಪ್ತ ವಿವರಣೆ ಇದೆ. ಹಂಪಿಯ ಸೀತಾ ಸರೋವರದಲ್ಲಿ ಕೆಲವು ವರ್ಷಗಳಿದ್ದು, ಹಠಯೋಗದಂತಹ ಯೋಗ ಸಾಧನೆ ಮಾಡಿ, ಕೊನೆಗೆ ಹೇಮಕೂಟದಲ್ಲಿ ನೆಲೆಸಿ, ಅಪಾರ ಸಂಖ್ಯೆಯಲ್ಲಿ ಮಹಾತ್ಮರನ್ನು, ಸಜ್ಜನರನ್ನು, ಪಾಪಿಗಳನ್ನು, ದುಷ್ಟರನ್ನು, ಸಾಧಕರನ್ನು ಹೀಗೆ ವಿವಿಧ ಭಕ್ತ ಸಮೂಹಕ್ಕೆ ಕೃಪಾದೃಷ್ಟಿ ಬೀರಿ, ಹಿತೋಪದೇಶಗೈದು ಉದ್ಧಾರ ಮಾಡಿದ ವಿವರ ಈ ಕೃತಿಯಲ್ಲಿದೆ. ಪ್ರತಿ ಸಂಧಿಯ ಆರಂಭದಲ್ಲಿ ಅವತರಣಿಕೆಯನ್ನು ಗದ್ಯದಲ್ಲಿ ಹೇಳಿ ಕಥೆ ಪ್ರಾರಂಭಿಸಿದ್ದಾರೆ.

ದೇವಿ ದೇವನು ಪೇಳ್ದ ಪರಿಯಲಿ
ಸೇವೆ ಗೈದನು ಯರ್ರಿತಾತನ
ಕೇವಲದ ಕರುಣವನು ಪಡೆದನು ಖ್ಯಾತ ಶಿವರಾಮಾ ||

ಮೂರು ತಿಂಗಳ ಕೂಸಿನಂದದಿ
ತೋರುತಿಹ ಗುರುವರನ ದೇಹದಿ
ಸೋರುತಿಹ ಮಲ ಮೂತ್ರವೆಲ್ಲವ ಶುದ್ಧಗೈಯ್ಯುತಲೀ |
ಸಾರ ಜಲದಿಂ ಸ್ನಾನ ಮಾಡಿಸಿ
ಮೂರು ಕಾಲದಿ ನಿತ್ಯದೀ ಪರಿ
ಮಾರ ಹರ ಶಿವನೆಂದು ಮನದಲ್ಲಿ ದೃಢಮಾಗಿ ||೨೬

ಗದ್ಯದಲ್ಲಿ ಬಂದ ಚರಿತ್ರೆಯ ವಿಷಯವನ್ನು ಆಧಾರವಾಗಿಟ್ಟುಕೊಂಡು ಕಾವ್ಯದಲ್ಲಿ ಹೆಣೆಯಲಾಗಿದೆ. ಓದುಗರಿಗೆ ಮತ್ತು ಕೇಳುಗರಿಗೆ ಭಕ್ತಿ-ಜ್ಞಾನ-ವೈರಾಗ್ಯಗಳು ಉಂಟಾಗಿ ಪರಮಮೋಕ್ಷವನ್ನು ಹೊಂದಲು, ಆಧ್ಯಾತ್ಮಿಕ ಮನೋಭಾವನೆಯನ್ನು ಮೂಡಿಸಿಕೊಳ್ಳಲು ಪುರಾಣ ನೆರವಾಗಬಲ್ಲದು. ಪ್ರತಿ ಸಂಧಿಯ ಕೊನೆಯಲ್ಲಿ ಇತಿ ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯ, ಶಿವರಾಮವಧೂತ ಚರಿತ್ರೆ ಎಂದು ಕೊನೆಗೊಳಿಸಿದ್ದಾರೆ.

ಶಿವರಾಮವಧೂತರ ಶಿಷ್ಯರಾದ ಶಿವಶರಣಾನಂದರು ಗುಲಬರ್ಗಾದಿಂದ ಬಂದವರು. ಜೀವನದಲ್ಲಿ ತೀವ್ರವೈರಾಗ್ಯಹೊಂದಿ, ಭವಸಾಗರದಿಂದ ಮುಕ್ತನಾಗಲು ಜ್ಞಾನೋಪದೇಶವನ್ನು ಪಡೆಯಲು ಸದ್ಗುರುವನ್ನು ಹುಡುಕುತ್ತಾ ಬಂದವರು. ಹೇಮಕೂಟದಲ್ಲಿ ಶಿವರಾಮವಧೂತರ ಶಿಷ್ಯರಾಗಿ, ಅವಧೂತರ ಮರಣಾನಂತರ ಆಶ್ರಮದ ಪರಂಪರೆಯನ್ನು ಮುಂದುವರೆಸಿದ ಶಿವಶರಣಾನಂದರು ಅಥವ ಅವರ ಶಿಷ್ಯರು ಬರೆದಿರಬಹುದಾದ ಕೆಲ ಸ್ವರ ವಚನಗಳು ದೊರೆತಿವೆ. ಅವುಗಳಲ್ಲಿ ಕೆಲವು ಇಂತಿವೆ,

ಜ್ಞಾನಿಯಾದರೆ ಹ್ಯಾಂಗಿರಬೇಕು

ಜ್ಞಾನಿಯ ಗುಣಬ್ಯಾರೆ
ಅಜ್ಞಾನಿಯ ಗುಣಬ್ಯಾರೆ
ಜ್ಞಾನಿಯಾದರೆ ಹ್ಯಾಂಗಿರಬೇಕು
ಜನನ ಮರಣವೆಲ್ಲ ಅಳದಿರಬೇಕು ||

ಎತ್ತು ಎಮ್ಮೆ ಎರಡೂ ಕೂಡಿ
ಜೊತೇಲಿ ಮೇಯುವವು
ಹೀನ ಕುಲದ ಎಮ್ಮೆ ಸರಗಡಲೋಗ್ವದು
ಜ್ಞಾನಿ ಬಸವ ತನ್ನೊಡೆಯನ ಕಾಯ್ವದು || ೧ ||

ಕತ್ತೆ ಕುದುರೆ ಎರಡೂ ಕೂಡಿ ಜೊತೇಲಿ ಮೇಯುವವು
ಹೀನ ಕುಲದ ಕತ್ತೆಯು ಮೈಲಿಗೆ ಹೊತ್ತೊತ್ತು ಸಾಯ್ವದು
ಉತ್ತಮ ತೇಜಿ ತನ್ನೊಡೆಯನ ಕಾಯ್ವದು || ೨ ||

ಧರೆಯೊಳು ಹೇಮಕೂಟ
ಹಂಪಿಪುರದೊಳು ಮೆರೆವ
ಸದ್ಗುರು ಶಿವಶರಣಾನಂದವಧೂತರ
ವಾಕ್ಯವು ಜಗತ್ತೆಲ್ಲವನ್ನು ಬೆಳಗಿತು ॥ ೫ ॥[೨೭]

ಈ ಸ್ವರವಚನದಲ್ಲಿ ಜ್ಞಾನಿ ಮತ್ತು ಅಜ್ಞಾನಿಗಳ ಸ್ವಭಾವವನ್ನು ತಿಳಿಸುತ್ತಾ, ಅಜ್ಞಾನಿಗಳನ್ನು ಸಾಂಕೇತಿಕವಾಗಿ ಎಮ್ಮೆ, ಕತ್ತೆ, ಗುಂಗ, ಉಪ್ಪುಗಳನ್ನು ನಿದರ್ಶನವಾಗಿ ನೀಡಿದ್ದಾರೆ. ಬುದ್ಧಿಯಿಲ್ಲದೆ ನಿರರ್ಥಕವಾಗಿ ಕೆಲಸ ಮಾಡುವ ಪರಿಯನ್ನು ಅಜ್ಞಾನಿಗಳ ಗುಣ ಎಂದಿದ್ದಾರೆ. ಜ್ಞಾನಿಗಳ ಸಂಕೇತವಾಗಿ ಬಸವ, ಕುದುರೆ, ಜೇನುಹುಳು ಮತ್ತು ಮುತ್ತುಗಳನ್ನು ಕೊಡುತ್ತಾ, ಹೋಲಿಕೆಯಲ್ಲಿ ಅಥವಾ ಹುಟ್ಟಿನ ಮೂಲದಲ್ಲಿ ಒಂದೇ ಆದರೂ ಜ್ಞಾನಿಗಳ ಮತ್ತು ಅಜ್ಞಾನಿಗಳ ಸ್ವಭಾವಗಳು ಹೇಗೆ ಭಿನ್ನವಾಗಿರುತ್ತವೆ ಎನ್ನುವುದು ಈ ಗೀತೆಯ ಆಶಯ.

ಮೂಕನು ಎನುತಿರಲಿ ಎನ್ನುವ ಸ್ವರವಚನದಲ್ಲಿ ಮೌನದ ಮಹತ್ವವನ್ನು ಸಾರಿದ್ದಾರೆ.

ಮೂಕನು ಮೂಕನು ಎನುತಿರಲಿ
ಕಿಂಕರ ಭಾವವು ತನಗಿರಲಿ
ಸಂಕೋಲಿಯ ತನಗಿಕ್ಕಿರಲಿ
ಸಂಕಟದೊಳು ತಾ ಸಿಕ್ಕಿರಲಿ
ಭೋಗ-ಭಾಗ್ಯವು ನೀಗಿರಲಿ
ಗಾಂಪನು-ಮರಳನು ಎನುತಿರಲೀ
ಭಕ್ತಿ-ಭಾವದಿಂದಿರುತಿರಲಿ ॥

ಮೋಹ ಮತ್ಸರದ ತೊರೆಯುತಲಿ
ಜ್ಞಾನದ ಮಾರ್ಗ ಹುಡುಕುತಲಿ
ಭವ ಸಂಕಟವನು ಜೈಸುತಲಿ
ಸ್ವಾಮಿಯ ನಿತ್ಯ ಭಜಿಸುತಲಿ ॥[೨೮]

ಲೋಕ ವ್ಯವಹಾರದಲ್ಲಿ ಭಾಗಿಯಾಗದೆ, ಲೌಕಿಕ ಜೀವನದ ಸಂಬಂಧವ ಬಿಟ್ಟು ಭಕ್ತಿ ಭಾವದಿ ಅವಧೂತರ ಭಜಿಸಬೇಕು. ಜೀವನ ಜಿಗುಪ್ಸೆಯಿಂದ ಎಲ್ಲವನ್ನೂ ತ್ಯಜಿಸಿ ಹೊರಬಂದಾಗ, ಲೋಕವು ನಾನಾ ರೀತಿಯಲ್ಲಿ ದೂಷಣೆಯ ಮಾತನ್ನಾಡುತ್ತದೆ. ಅಂಥ ಮಾತುಗಳಿಗೆ ಮಹತ್ವ ನೀಡಬಾರದೆಂದೂ, ಸದಾ ಮೌನಿಯಾಗಿರ ಬೇಕೆಂದು ಈ ಗೀತೆ ಉಪದೇಶಿಸುತ್ತದೆ.

ಲಿಂಗ ಅಂಗದ ಅನುಭವ ತಿಳಿ : ಎನ್ನುವ ಸ್ವರ-ವಚನದಲ್ಲಿ ಲಿಂಗಾಂಗ ಸಾಮರಸ್ಯದ ಚಿತ್ರಣವಿದೆ.

ಅಯ್ಯಾ ಅಯ್ಯಾ ಬಾರಯ್ಯಾ
ಲಿಂಗ ವಿಲ್ಲದವರಾರಯ್ಯಾ ।

ಅಂಗದೊಳಗೆ ಶಂಭುಲಿಂಗನೆ
ಲಿಂಗವ ನುಡಿವನು ಕೇಳಯ್ಯಾ ||
ಖದರಲಿಂಗ ಕಾಲೊಳಗಿಟ್ಟು
ಮನಸಿನೊಳಗೆ ಮಹಾಲಿಂಗಯ್ಯಾ
ಲಿಂಗದ ಅಂಗದ ಅನುಭವ ತಿಳಿದರೆ
ಸ್ವರ್ಗ ನಾಕ ಎರಡೂ ಒಂದಯ್ಯಾ ||

ದಕ್ಷಿಣ ಕಾಶಿ ಹಂಪಿ ಹೇಮಕೊಟದಲ್ಲಿರುವ
ಹತ್ತು ಮಂದಿ ಅಂಥವರಯ್ಯಾ
ಗುರು ಶಿವರಾಮ ಶಿವಶರಣಾನಂದವಧೂತರ
ಸ್ಮರಣೆ ಮಾಡಿದರೆ ಮುಕ್ತಿ ದೊರೆಯುವುದಯ್ಯಾ ||[೨೬]

ಅಂಗವೇ ಲಿಂಗವಾದ ಬಳಿಕ ಲಿಂಗದ ಅವಶ್ಯಕತೆ ಇಲ್ಲ. ಅಂಗವು ಲಿಂಗವಾಗಲು ಗುರುವಿನ ಅನುಗ್ರಹ ಬೇಕು. ಅಂಥ ಗುರುಗಳು ಹಂಪಿಯ ಹೇಮಕೂಟದಲ್ಲಿರುವರೆಂಬುದು ಈ ಸ್ವರ-ವಚನದ ಆಶಯ.

ಕೊಳಗಲ್ಲು ಶ್ರೀ ಸದ್ಗುರು ಎರಿಬಸವೇಶ ಪುರಾಣ : ೨೦೦೦

ಭಕ್ತಿ, ಜ್ಞಾನ, ವೈರಾಗ್ಯ ಸಂಪನ್ನರಾದ ಎರಿಬಸವನ ಜೀವನ ಚರಿತ್ರೆಯನ್ನು ಪುರಾಣರೂಪದಲ್ಲಿ ಶ್ರೀ ಡಿ.ಎಂ. ಶಿವಮೂರ್ತಿ ಶಾಸ್ತ್ರಿಗಳು ರಚಿಸಿದ್ದಾರೆ. ಪುರಾಣವು ೧೮ ಸಂಧಿಗಳಿದ್ದು. ೬೯೧ ಪದ್ಯಗಳಿಂದ ಕೂಡಿದೆ. ಸಕಲರಿಗೂ ತಿಳಿಯುವಂತೆ ಸರಳವಾದ ಶೈಲಿಯಲ್ಲಿ ವಿವರಣಾತ್ಮಕವಾಗಿ ಕಥೆಯನ್ನು ನಿರೂಪಿಸಿದ್ದಾರೆ.

"ಅದರಿನಿಂ ಎರಿಬಸವ ಲೀಲೆಯ
ನೊದವಿ ರಚಿಸುವೊಡಾನುಮೆನ್ನಯ
ಹೃದಯ ಸರಸೀರುಹದೊಳಾ ಮಹಿತಾತ್ಮ ನೆಲೆಗೊಂಡು |
ಪದಪುಮಿಗೆ ಬರೆಯಿಸಲು ಮಿದರ
ಭ್ಯುದಯ ತಾತನದೆಂದು ರಚಿಸಿದೆ
ನಿದರೊಳಿರ್ದೊಡೆ ಲೋಪಗಳು ತಿರ್ದುಪುದು ವಿಭುದರ್ಕಳು" ||[೨೭]

ಎರಿಬಸವನ ಬಾಲ್ಯ, ವೈರಾಗ್ಯ, ಗುರುಸೇವೆ, ಗುರೂಪದೇಶ, ಯೋಗ ಸಾಧನೆ, ಆಧ್ಯಾತ್ಮ ಶಕ್ತಿಯ ಸಾಧನೆ, ಭಕ್ತ ಜನತೆಯ ನೋವು ಎಡರು-ತೊಡರುಗಳನ್ನು ತನ್ನ ಸಾಧನೆಯ ಸಿದ್ಧಿಯಿಂದ ಪರಿಹಾರ ಮಾಡಿದ, ಅನುಗ್ರಹ ಶಕ್ತಿಯುಳ್ಳ ಮಹಿಮೆಗಳನ್ನು ಕೇಳುಗರ ಮತ್ತು ಓದುಗರ ಮನಮುಟ್ಟುವಂತೆ ಚಿತ್ರಿಸಿದ್ದಾರೆ. ದನ-ಕರು, ಕುರಿ-ಮೇಕೆಗಳನ್ನು ಮೇಯಿಸುತ್ತಾ, ಕೃಷಿಕ ಜೀವನ ಸಾಗಿಸುತ್ತಿದ್ದ ಕುಟುಂಬದಲ್ಲಿ ಜನಿಸಿ, ಮುಂದಿನ ಜೀವನವನ್ನು ತಪೋಮಯವನ್ನಾಗಿ ಮಾಡಿಕೊಂಡು, ಭಕ್ತರ ವೈಯುಕ್ತಿಕ, ಮತ್ತು ಸಮುದಾಯದ ಸಮಸ್ಯೆಗಳನ್ನು ಪರಿಹರಿಸಿ, ಭಕ್ತರ ದೇವರಾಗಿ ಪೂಜೆಗೊಳ್ಳುತ್ತಿರುವ ಚಿತ್ರಣ ಈ ಕೃತಿಯಲ್ಲಿದೆ. ಮಾನವ

ಮಹಾದೇವನಾಗಬಲ್ಲ, ಅವನು ನಂಬಿದವರನ್ನು ಕೈಬಿಡುವುದಿಲ್ಲ ಎಂಬ ಸಂದೇಶವನ್ನು ಎರಿಬಸವನ ಜೀವನದ ಸಾಧನೆಯ ಹಿನ್ನೆಲೆಯಲ್ಲಿ ನಿರೂಪಿಸಿದ್ದಾರೆ. ತಾತನವರು ಸಮಾಧಿಯಾದ ನಂತರ ಅವರ ಮಠದ ಬೆಳವಣಿಗೆಯನ್ನೂ ಭಕ್ತರ ಸಹಕಾರವನ್ನು ಕೃತಿ ಸ್ಮರಿಸುತ್ತದೆ. ಪುರಾಣದಲ್ಲಿ ಪವಾಡಗಳು ಹೆಚ್ಚಾಗಿದ್ದು, ಆ ಪವಾಡಗಳನ್ನು ಅವರು ಮಾಡಲೆಂದು ಹೋದವರಲ್ಲ, ಮಹಾತ್ಮರ ನಿತ್ಯದ ಆಚರಣೆಯೇ ಪವಾಡಮಯ ವಾಗಿತ್ತೆಂಬುದನ್ನು ಕೃತಿ ಸಾದರಪಡಿಸುತ್ತದೆ.

ಪುರಾಣ ಸಾಹಿತ್ಯ ಒಂದರ್ಥದಲ್ಲಿ ಜನಪದರಿಂದ,ಜನಪದರಿಗಾಗಿಯೇ ರಚಿಸಿದ ಸಾಹಿತ್ಯ. ಅವರ ಪ್ರೇರಣೆ ಯಿಂದಲೇ ಬೆಳೆದು ಬಂದಿರುವುದರಿಂದ ಜನಪದರ ರೀತಿ, ನೀತಿ,ನಂಬಿಕೆ, ಸಂಪ್ರದಾಯ ಮುಂತಾದವು ಈ ಕೃತಿಯಲ್ಲಿ ಸೇರಿವೆ.

ಸಿಂಧಿಗೇರಿ ಶ್ರೀ ಶಿವಶರಣ ಮಲ್ಲೇಶ್ವರನ ಪುರಾಣ : ೧೯೯೫

ಭಾಮಿನಿ ಷಟ್ಪದಿಯಲ್ಲಿ ರಚಿತವಾಗಿರುವ ಈ ಪುರಾಣವು ೧೮ ಅಧ್ಯಾಯಗಳನ್ನೊಳಗೊಂಡು ಸುಮಾರು ೯೭೧ ಪದ್ಯಗಳಿಂದ ಕೂಡಿದೆ. ಶ್ರೀ ಪ್ರಭಾನಂದ ಪಂಡಿತರು (ರೌಡಕುಂದ) ಈ ಪುರಾಣವನ್ನು ರಚಿಸಿದ್ದು, ಪುರಾಣ ರಚನೆಗೆ ಕಾರಣ ತಿಳಿಸಿದ್ದಾರೆ. "ಶ್ರೀ ಸಿಂಧಿಗೇರಿ ಶರಣ ಮಲ್ಲಪ್ಪನವರ ಪುರಾಣವನ್ನು ನಾನು ವಿನೋದಕ್ಕಾಗಿ ಬರೆದಿಲ್ಲ, ಪಾಂಡಿತ್ಯ ಪ್ರದರ್ಶನ ಮಾಡುವುದಕ್ಕೆ ಬರೆದಿಲ್ಲ, ಶ್ರೀ ಸಾಮಾನ್ಯನಿಗೂ ಕೂಡ ಪುರಾಣ ಸುಲಭವಾಗಿ ತಿಳಿಯುವಂತೆ ಕೃತಿರಚನೆ ಮಾಡಿರುವೆ ಎಂದಿದ್ದಾರೆ.

ನೋಡಿ ಬಾಲನ ಲಕ್ಷಣವ ಮಾ
ತಾಡಿಸುತ ಕರ ಪಿಡಿದು ಗುರುಗಳು
ರೂಢಿಯೊಳಗೀ ವಿಧ । ಲಕ್ಷಣ ಹಸ್ತವನು ನಾನು ।
ನೋಡಿಯೇಯಿರಲಿಲ್ಲವೀತ ನಿ
ಗೂಢ ಲಕ್ಷಣ ಭರಿತನನುಪಮ
ನಾಡಲೆನ್ನಳವಲ್ಲ ಶಿವನೇ ಬಲ್ಲನೆಂದೆನಲು ॥[೭೧]

ಮಲ್ಲಪ್ಪತಾತನ ನಡೆ-ನುಡಿ, ಭೋಗ-ತ್ಯಾಗ, ಮತ್ತು ಯೋಗ ಸಾಧನೆಗಳತ್ತ ಗಮನಕೊಡಿ, ಕೇವಲ ಅವರ ಪವಾಡಗಳನ್ನು ಮಾತ್ರ ಮೆಚ್ಚಬೇಡಿ, ಬ್ರಹ್ಮಾನಂದ ಸದೃಶವಾದ ಕಾವ್ಯರಸಾನಂದದಲ್ಲಿ ಮಗ್ನರಾಗಿರಿ. ಮಲ್ಲಪ್ಪತಾತನ ಆದರ್ಶ ಜೀವನವನ್ನು ಗುರಿಯಾಗಿಟ್ಟುಕೊಂಡು ಜೀವನ ಸಾಧಿಸಿ ಸಿದ್ಧಿ ಪಡೆಯಿರಿ" ಎನ್ನುವ ಸನ್ಮಾರ್ಗ ಸಲಹೆಯನ್ನು ಕೃತಿಕಾರರು ನೀಡಿದ್ದಾರೆ.

ಪುರಾಣದ ಪೀಠಿಕಾ ಸಂಧಿಯಲ್ಲಿ ಪುರಾಣ ಬರೆಯಲು ಕಾರಣಕರ್ತರಾದವರನ್ನು ನೆನೆದಿದ್ದಾರೆ. ಮುಂದಿನ ಅಧ್ಯಾಯದಲ್ಲಿ ಮಲ್ಲಪ್ಪತಾತನ ಜನನ, ಬಾಲ್ಯಲೀಲೆ, ಶಿಕ್ಷಣ, ಸಂಸಾರ, ವೈರಾಗ್ಯ, ಗುರುಶೋಧ, ಗುರು ಅನುಗ್ರಹ, ಯೋಗ ಸಾಧನೆಯಿಂದ ಸಾಧಿಸಿದ ಮಹಿಮೆಗಳು, ಮಠಗಳ ನಿರ್ಮಾಣ, ಜೀವೈಕ್ಯ ಮುಖ್ಯವಾಗಿ ಮರಣ ಹೊಂದಿದ್ಧ ಮೇಲೂ ಸೊಸೆ ಮಲ್ಲಮ್ಮನಿಂದ ಉಪಚರಿಸಿಕೊಳ್ಳುವುದು, ನಂತರ ಭಕ್ತರ ಸ್ವಪ್ನದಲ್ಲಿ

ಬಂದು ತಿಳಿಸಿದಂತೆ ಸಿಂಧಿಗೇರಿ ಮಠದಿಂದ ಬೈಲೂರು ಮಠದಲ್ಲಿ ಮರುಸಮಾಧಿ ಹೊಂದುವುದು ಹೀಗೆ ಅವರ ಜೀವನದ ಪ್ರಮುಖ ಘಟನೆಗಳು ಓದುಗ ಮತ್ತು ಕೇಳುಗರಿಗೆ ಸುಲಭ ಗ್ರಾಹ್ಯವಾಗುವಂತೆ ರಚಿಸಿದ್ದಾರೆ.

ಗುರೂಪದೇಶವನ್ನು ಪಡೆಯುವ ೭ ನೇ ಸಂದಿಯಿಂದ ಗ್ರಂಥಕರ್ತರು ವಿವಿಧ ಶಾಸ್ತ್ರ, ದರ್ಶನ, ಪುರಾಣ, ಕಾವ್ಯ, ನಾಟಕ, ಲಕ್ಷಣಗ್ರಂಥ ಮುಂತಾದ ಅನೇಕ ಕೃತಿಗಳನ್ನು ಆಳವಾಗಿ ಅಧ್ಯಯನ ಮಾಡಿರುವುದು ತಿಳಿಯುತ್ತದೆ. ಮಲ್ಲಪ್ಪತಾತನ ಕಥೆಯನ್ನು ಹೇಳುತ್ತಾ, ಕುಲ-ಜಾತಿ-ತತ್ವ ಭೇದಗಳನ್ನು ಮರೆತು ಜನೋದ್ಧಾರ ಮಾಡಿರುವ ಮಹಾನುಭಾವಿಗಳ ಉಪಕಥೆಗಳನ್ನು ಸೇರಿಸಿದ್ದಾರೆ. ಪುರಾಣದಲ್ಲಿ ಬಳಸಿರುವ ಗಾದೆ ಮಾತುಗಳು, ಅನುಭವೋಕ್ತಿಗಳು, ಲೋಕೋಕ್ತಿಗಳು ಪುರಾಣಕ್ಕೆ ಹೊಸ ಕಳೆಯನ್ನು ನೀಡಿವೆ. ಪುರಾಣವು ಸುಲಭವಾಗಿದ್ದು, ಅತ್ಯವಶ್ಯಕವಾಗಿ ತಿಳಿಯಲೇಬೇಕಾದ ಹಾಗೂ ನೆನಪಿನಲ್ಲಿಡಬೇಕಾದ ಸದ್ವಿಷಯಗಳಿಂದ ಕೂಡಿದ ಉತ್ತಮ ಕೃತಿ ಇದಾಗಿದೆ.

ಮಲ್ಲಪ್ಪತಾತನ ಜೀವನ ಚರಿತ್ರೆ (ಕಿರುಪುಸ್ತಕ)

ಕುಂ॥ ಬಸಣ್ಣ ಮೋಕಾ ಎನ್ನುವರು ಪುರಾಣದಲ್ಲಿ ಬಂದಿರುವ ಶ್ರೀ ಮಲ್ಲಪ್ಪತಾತನ ಜೀವನ ಚರಿತ್ರೆಯನ್ನು ಸಂಕ್ಷಿಪ್ತವಾಗಿ ಗದ್ಯರೂಪದಲ್ಲಿ ಹೇಳಿದ್ದಾರೆ. ವಂಶಸ್ಥರಾದ ದೊಡ್ಡಬಸವ ಗವಾಯಿಗಳು ತಾತನವರ ಜೀವನ ಚರಿತ್ರೆಯನ್ನು ಸಂಕ್ಷಿಪ್ತವಾಗಿ ಕಟ್ಟಿಕೊಡುವ ಕಾವ್ಯವೊಂದನ್ನು ರಚಿಸಿದ್ದಾರೆ.

ಕನ್ನಡ ನಾಡಿನಲ್ಲಿ ಬಳ್ಳಾರಿ ಜಿಲ್ಲೆಯೊಳು ಸಿಂಧಿಗೇರಿಯಲಿ ।
ಚಿನ್ನದಂತ ಗುಂಡಪ್ಪ ನೀಲಮ್ಮರು ಬಾಳುತ್ತಿದ್ದರಲ್ಲಿ ।
ಜನಿಸಿ ಬಂದನು ದಿವ್ಯಜ್ಯೋತಿಯಾಗಿ ಅವರ ಉದರದಲ್ಲಿ ।
ಮನೆಯ ಗುರುವು ಬಂಡೆಪಾರ್ಯರ ಆಜ್ಞೆಗೆ ಶಿಶುವಲ್ಲಿ ॥ ೧ ॥

ಬಾಳಿನ ಭಾಗ್ಯದಿ ಗೌರಮ್ಮ ತಾಯಿಗೆ ಪತಿಯಾಗಿ ಬಂದಾತ ।
ಲೀಲಾ ಮೂರುತಿ ಗಾದಿಲಿಂಗರ ಗುರುವಾಗಿ ಪಡೆದಾತ ।
ಹಳೆಗೂಳ್ಯಕೆ ಔಡಲ ಎಣ್ಣೆಯ ಗುರುಕಳಸಕೆ ಅರ್ಪಿಸಿ ಎಂದಾತಂ ।
ಇಳೆಯೊಳು ನಂದಿಯ ವಾಹನ ಪಡೆದ ಮಹಾ ಶರಣೀತ ॥ ೨ ॥

ನುಚ್ಚು ಮಜ್ಜಿಗೆಯ ಭಕ್ತರಿಗೆ ಎಡೆಯ ಉಣಿಸಿದಾತ ।
ಸ್ವಚ್ಛ ಮನದಲಿ ಸಗಣಿಯ ಬಳಿದು ಸೇವೆ ಮಾಡಿದಾತ ।
ನೀಚ ಮಕ್ಕಳ ಮನವ ಗೆದ್ದು ಬಂಧುಗಳ ಪೊರೆದಾತ ।
ಯೋಜಿಸಿ ಗಂಗೆಯ ಹತ್ತಿರ ತುಪ್ಪವ ಸಾಲವ ಪಡೆದಾತ ॥ ೪ ॥

ಮಳೆಯಿಲ್ಲದ ಬಳಲುವ ಭಕ್ತರಿಗೆ ಮಳೆಯ ತರಿಸಿದಾತ ।
ಲೋಲ ತಾತನು ಗೊಡ್ಡು ಆಕಳಲಿ ಹಾಲನು ಕರೆದಾತ ।

ಮಳೆಯಿಂದ ಗಡಿಗೆ ಸುಡುವ ಆವುಗೆ ಪೊರೆದಾತ |
ಜಲ ಕಂಠಕದಿಂದ ರಕ್ಷಿಸಿ ಮಗುವಿಗೆ ಪ್ರಾಣವ ಕೊಟ್ಟಾತ || ೬ ||

ಒಂದೇ ಸಮಯಕ್ಕೆ ಎರಡು ಊರಲಿ ಗೌರಿಯ ಪೂಜೆ ಮಾಡಿದಾತ |
ಚೆಂದದಿ ಬಾಯಿಯ ತೆಗೆಯುವಾಳ್ಗಳಿಗೆ ಇಷ್ಟಭೋಜನಗೈದಾತ |
ನಿಂದಿಸಿ ಪರೀಕ್ಷೆಯ ಮಾಡಿದ ಜನಕೆ ಶಿಕ್ಷೆ ವಿಧಿಸಿದಾತ |
ಬೆಂದು ರೋಗದಿ ಸತ್ತ ಎಮ್ಮೆಗೆ ಪ್ರಾಣವ ನೀಡಿದಾತ || ೮ ||

ತಾತ ಶಿವ ಸಮಾಧಿಯ ಹೊಂದಿ ಮತ್ತೆ ಧರೆಗೆ ಬಂದಾತ |
ಸತ್ಯವಂತೆ ಸೊಸೆ ಮಲ್ಲಮ್ಮನ ಕೈಯಲಿ ಊಟ ಮಾಡಿದಾತ |
ತಾತ ಹಿರಿಲಿಂಗಪ್ಪನ ರಕ್ಷಿಸಿ ಕನಕಮ್ಮಗೆ ಕಣ್ಣು ಕೊಟ್ಟಾತ |
ಮತ್ತೆ ಮರು ಸಮಾಧಿ ಬೈಲೂರಲಿ ಪಡೆದು ದೊಡ್ಡ ಬಸವಗೆ ವಲಿದಾತ || ೯ ||[೨೨]

ಕೊನೆ ಟಿಪ್ಪಣಿಗಳು

೧. ಗೋಪಾಲಕೃಷ್ಣಯ್ಯ ಕೆ.ಎಲ್., ಪುರಾಣ, ಪುಟ-೫

೨. ಅದೇ, ಪುಟ-೧೦

೩. ವಿದ್ಯಾಶಂಕರ.ಎಸ್, ವೀರಶೈವ ಪುರಾಣಗಳು, ಪುಟ-೫

೪. ಅದೇ, ಪುಟ-೧೭

೫. ಚನ್ನಬಸವೇಶ ಶಿ.ವ., ಚೇಳಗುರಿಕೆ ಶ್ರೀ ಎರ್ರಿಸ್ವಾಮಿಗಳ ಲೀಲಾವಿಲಾಸ, ಪುಟ-೧

೬. ಜೋಳದರಾಶಿ ದೊಡ್ಡನಗೌಡರು, ಮುನ್ನುಡಿ, ಲೀಲಾವಿಲಾಸ, ಪುಟ-೪

೭. ನಾಗೇಶ ಶಾಸ್ತ್ರಿಗಳು, ಲೀಲಾಮೃತ, ೨-೧

೮. ಜೋಳದರಾಶಿ ದೊಡ್ಡನಗೌಡರು, ಶ್ರೀ ಎರ್ರಿಸ್ವಾಮಿಗಳ ಶಿವಮಯ ಜೀವನ ಚರಿತ್ರೆ, ಪುಟ-೧೯

೯. ಜೋಳದರಾಶಿ ದೊಡ್ಡನಗೌಡ, ಚೇಳಗುರಿಕೆ ಎರ್ರಿತಾತ, ಪುಟ-೩

೧೦. ಅದೇ, ಪುಟ-೧೦

೧೧. ಬಸವರಾಜ್ ಬಿ.ಸಿ., ಚೇಳಗುರಿಕೆ ಶ್ರೀ ಎರ್ರಿಸ್ವಾಮಿಗಳವರು, ಪುಟ-೫೬

೧೨. ಜೋಳದರಾಶಿ ದೊಡ್ಡನಗೌಡ (ಸಂ), ಭಕ್ತಿಗೀತೆಗಳು, ಪುಟ-೩೪-೪೨

೧೩. ಅದೇ, ಪುಟ-೪೪-೬೦

೧೪. ಅದೇ, ಪುಟ-೬೩

೧೫. ಅದೇ, ಪುಟ-೭೧

೧೬. ಶ್ರೀ ಗುರುಸಿದ್ಧ ಶಿವಯೋಗಿಗಳು, ಶ್ರೀ ಜಡೆಯೋಗೀಶ್ವರ ಚರಿತ್ರೆ, ಪುಟ-೧೪

೧೭. ಅಮರನಾಥ ಶಾಸ್ತ್ರಿಗಳು, ಜಡೆಯೋಗೀಶ್ವರ ಪುರಾಣ, ಪೀಠಿಕಾ ಸಂಧಿ-೩೫

೧೮. ಚಂದ್ರಶೇಖರ ಶಾಸ್ತ್ರಿಗಳು, ಜೆಡೆಯೋಗೀಶ್ವರ ಪುರಾಣ (ಮುನ್ನುಡಿ)

೧೯. ಚನ್ನವೀರಪ್ಪ ಎಸ್.ಆರ್., ಸ್ವರವಚನ ತರಂಗ, ಸಂಪುಟ-೧, ಪುಟ-೬೦

೨೦. ಅದೇ, ಪುಟ-೬೪

೨೧. ಶಿವಮೂರ್ತಿ ಶಾಸ್ತ್ರಿಗಳು, ಸದ್ಗುರು ವೆಂಕಾವಧೂತರ ಪುರಾಣ, ೧-೨೦

೨೨. ವೇಮಲಗಟ್ಟೆಪ್ಪ ಶ್ರೇಷ್ಠಿ, ದಮ್ಮೂರು ಶ್ರೀ ಸದ್ಗುರು ವೆಂಕಾವಧೂತರ ಚರಿತ್ರೆ, ಪುಟ-೧೧

೨೩. ಗಟ್ಟೆಪ್ಪ ಶ್ರೇಷ್ಠಿ, (ಸಂ) ಶ್ರಿ ಸದ್ಗುರು ಸ್ತುತಿ ಪುಷ್ಪಾಂಜಲಿ, ಪುಟ-೧೯

೨೪. ವೇಮಲಗಟ್ಟೆಪ್ಪ ಶ್ರೇಷ್ಠಿ, ದಮ್ಮೂರ ಶ್ರೀ ಸದ್ಗುರು ವೆಂಕಾವಧೂತರ ಚರಿತ್ರೆ, ಪುಟ-೧೦೬

೨೫. ಅದೇ, ಪುಟ-೧೦೯

೨೬. ಬದನೆಹಾಳು ಮರಿಸಿದ್ದಯ್ಯ ಸ್ವಾಮಿ, ಶಿವರಾಮವಧೂತರ ಪುರಾಣ, ೨-೫

೨೭. ಚನ್ನವೀರಪ್ಪ ಎಸ್.ಆರ್. (ಸಂ), ಸ್ವರವಚನ ತರಂಗ, ಸಂ-೧, ಪುಟ-೧೦

೨೮. ಅದೇ, ಸಂಪುಟ-೧, ಪುಟ-೨೮

೨೯. ಅದೇ, ಸಂಪುಟ-೧, ಪುಟ-೩೧

೩೦. ಶಿವಮೂತಿ ಶಾಸ್ತ್ರಿಗಳು, ಶ್ರೀ ಸದ್ಗುರು ಎರಿಬಸವೇಶ ಪುರಾಣ. ಪೀಠಿಕಾ ಸಂಧಿ-೧೯

೩೧. ಪ್ರಭಾನಂದ ಪಂಡಿತರು, ಸಿಂಧಿಗೇರಿ ಶ್ರೀ ಶಿವಶರಣ ಮಲ್ಲೇಶ್ವರನ ಪುರಾಣ, ೩-೧೨

೩೨. ದೊಡ್ಡಬಸವ ಗವಾಯಿ, ಡಿ.ಕಗ್ಗಲ್

ಅಧ್ಯಾಯ ಆರು

ಆಚರಣೆಗಳು-ನಂಬಿಕೆಗಳು

ಅಧ್ಯಾಯ ಆರು

ಆಚರಣೆಗಳು-ನಂಬಿಕೆಗಳು

ನಾಡಿನಾದ್ಯಂತ ಅನೇಕ ದೇವರುಗಳ, ಸಾಧು-ಸಂತರ, ಶರಣರ, ಸೂಫಿಗಳ, ಆರೂಢರ, ಅವಧೂತರ ಹೆಸರಿನಲ್ಲಿ ವಿಶಿಷ್ಟ ಆಚರಣೆಗಳು, ಜಾತ್ರೆ ಉತ್ಸವಗಳು ನಡೆಯುತ್ತಿವೆ. ಆಯಾ ಮತಧರ್ಮದ ನೇತಾರರ ಹೆಸರಿನಲ್ಲಿ ನಿರ್ಮಾಣವಾಗಿರುವ ಗುಡಿಗಳು, ಚರ್ಚುಗಳು, ಮಸೀದಿಗಳು, ಜಿನಾಲಯಗಳು, ವಿಹಾರಗಳು, ಗದ್ದುಗೆ(ಸಮಾಧಿ)ಗಳು ಹೀಗೆ ವಿವಿಧ ರೀತಿಯ ಆರಾಧನಾ ಸ್ಥಳಗಳಲ್ಲಿ ವಿಶಿಷ್ಟ ಪೂಜೆಗಳನ್ನೊಳಗೊಂಡಂತೆ, ವಿಶೇಷ ದಿನಗಳಂದು, ಹಬ್ಬ-ಹರಿದಿನಗಳಂದು ಮತ್ತು ಮಹಾತ್ಮರು ಐಕ್ಯರಾದ ದಿನದಂದು ಆಚರಣೆ ಮತ್ತು ನಂಬಿಕೆಗಳು ಜೀವ ತಾಳುತ್ತವೆ. ಇಂಥ ಆಚರಣೆಗಳಿಗೆ ಸುತ್ತಮುತ್ತಲಿನ ಊರುಗಳಿಂದ ಅಪಾರ ಭಕ್ತ ಜನತೆ ಸೇರಿ ತಮ್ಮ ಇಷ್ಟಾರ್ಥ ಸಿದ್ಧಿಗಾಗಿ, ತಾವು ಪ್ರಾರ್ಥಿಸಿಕೊಂಡಂತೆ ಅಲ್ಲಿನ ಆಚರಣೆಗಳಲ್ಲಿ ಭಾಗವಹಿಸಿ ಸೇವೆ ಸಲ್ಲಿಸುತ್ತಿರುತ್ತಾರೆ.

ಸಾಮಾಜಿಕ ಬಾಂಧವ್ಯಕ್ಕೆ, ಧಾರ್ಮಿಕ ಸಮನ್ವಯಕ್ಕೆ, ಪರಮತ ಸಹಿಷ್ಣುತೆಗೆ ಹೆಸರಾಗಿರುವ ಅವಧೂತರ ಮಠಗಳಲ್ಲಿ ನಡೆಯುತ್ತಿರುವ ಆಚರಣೆಗಳು ತಮ್ಮದೇ ಆದ ಅರ್ಥಪೂರ್ಣ ಮೂಲದಿಂದ ಬೆಳೆದು ಬಂದಿವೆ. ಅವಧೂತರು ಐಕ್ಯರಾದ ಸ್ಥಳದಲ್ಲಿ ಗದ್ದುಗೆಯಿದ್ದು, ಅಲ್ಲಿ ಮಠಗಳು ನಿರ್ಮಾಣವಾಗಿವೆ. ಮಠಗಳು ದೇವ ಸ್ಥಾನದ ರೂಪದಲ್ಲಿದ್ದು, ಯಾವುದೇ ಗುರು-ಶಿಷ್ಯರ ಪರಂಪರೆಗಳು ಇರುವುದಿಲ್ಲ. ವಂಶಸ್ಥರು ಅಥವ ಮಠದ ಸಮಿತಿಯವರು ನೇಮಿಸಿದ ಅರ್ಚಕರು ಶಾಸ್ತ್ರೋಕ್ತವಾಗಿ ಪೂಜೆ ಸಲ್ಲಿಸುತ್ತಾರೆ. ಭಕ್ತರು ನಮ್ಮದಿಯ ಜೀವನಕ್ಕೆ ವಿವಿಧ ರೀತಿಯ ಆಚರಣೆಗಳನ್ನು ಅನಿವಾರ್ಯವೆನಿಸುವ ಹಾಗೆ ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ ಅವಧೂತರ ಗದ್ದುಗೆಗೆ, ಮತ್ತು ಮೂರ್ತಿಗಳಿಗೆ ವಿಶೇಷ ಪೂಜೆ, ಅಭಿಷೇಕ, ಜಾತ್ರೋತ್ಸವ ಗಳ ನಂಬಿಕೆ-ಸಂಪ್ರದಾಯಗಳು ಬೆಳೆದು ಬಂದಿವೆ. ಅವುಗಳ ಪರಿಚಯವನ್ನು ಈ ಅಧ್ಯಾಯದಲ್ಲಿ ಮಾಡಿ ಕೊಡಲಾಗಿದೆ.

೬. ೧. ಪೂಜೆ

ಪ್ರಪಂಚದ ಅನೇಕ ದೇಶಗಳಲ್ಲಿ ವಾಡಿಕೆಯಲ್ಲಿರುವಂತೆ, ಹಿರಿಯರನ್ನು, ಮಹಾತ್ಮರನ್ನು, ದೈವಾಂಶ ಸಂಭೂತರನ್ನು ನೆನೆದು ಅವರಿಗೆ ತೋರುವ ಗೌರವ ಸೂಚಕವೇ ಪೂಜೆ. ಇಂಥ ಪೂಜಾವಿಧಾನಗಳಲ್ಲಿ ಮುಖ್ಯವಾಗಿ ಶಿಷ್ಟ ಪೂಜೆ ಮತ್ತು ಜಾನಪದ ಪೂಜಾ ವಿಧಾನಗಳನ್ನು ಕಾಣಬಹುದಾಗಿದೆ.

ಶಿಷ್ಟ ಪೂಜಾವಿಧಾನದಲ್ಲಿ ಪುರಾಣ ಮತ್ತು ಆಗಮ ಮಾರ್ಗಗಳನ್ನು ಅನುಸರಿಸಿ, ಹೆಚ್ಚಾಗಿ ಸಂಸ್ಕೃತ ಮಂತ್ರಗಳನ್ನು ಹೇಳಿಕೊಂಡು ಆಚರಿಸುವ ಮಾರ್ಗವಾದರೆ, ಜಾನಪದ ಪೂಜಾವಿಧಾನದಲ್ಲಿ ತಮ್ಮ ಇಷ್ಟಾರ್ಥ ಸಿದ್ಧಿ ಮತ್ತು ಅನಿಷ್ಟ ನಿವಾರಣೆಗಾಗಿ ದೇವರನ್ನು, ದೈವಾಂಶ ಸಂಭೂತರನ್ನು, ಮಹಾನುಭಾವಿಗಳನ್ನು ಒಲಿಸಿ ಕೊಳ್ಳುವ ಮಾರ್ಗವಾಗಿರುತ್ತದೆ ಎಂದು ತಿಳಿಯಬಹುದು.

ಅವಧೂತರು ಆಡಂಬರದ, ಡಂಭಾಚಾರದ-ಪೂಜೆಗಳನ್ನು, ಆಚರಣೆಗಳನ್ನು ಆಚರಿಸಿದವರಲ್ಲ. ಮಾನಸಪೂಜೆಗೆ ಹೆಚ್ಚಿನ ಮಹತ್ವ ನೀಡಿದ್ದು, ಆತ್ಮಜ್ಞಾನಿಗಳಾಗಿ ಮಹಾಯೋಗಿಗಳಾಗಿದ್ದವರು. ಅವರ ಮರಣಾನಂತರ ಅವರು ಸಮಾಧಿ ಸ್ಥಳಗಳಲ್ಲಿ, ಅವರು ಸಂಚಾರ ಮಾಡಿದರೆನ್ನಲಾದ ಹಲವು ಗ್ರಾಮ ಗಳಲ್ಲಿ ಮಠ-ಮಂದಿರಗಳನ್ನು ನಿರ್ಮಿಸಿ ಪೂಜೆ-ಆಚರಣೆ, ಉತ್ಸವಗಳು ನಡೆಯುತ್ತಿವೆ. ಸಮಾಧಿಯಾದ ಸ್ಥಳದಲ್ಲಿ ಗದ್ದುಗೆ ನಿರ್ಮಾಣ ಮಾಡಿ. ಅದರ ಮೇಲೆ ಅವಧೂತರ ಮೂರ್ತಿಗಳನ್ನು ಶಿಲೆ ಅಥವಾ ಲೋಹದಲ್ಲಿ ಕೆತ್ತಿಸಿ ಪ್ರತಿಷ್ಠಾಪಿಸಿರುತ್ತಾರೆ. ಈ ಮಠಗಳಲ್ಲಿ ಪ್ರತಿದಿನ ಎರಡು ಅಥವಾ ಮೂರು ಹೊತ್ತು ನಡೆಯಲಿರುವ ಪೂಜೆಯ ಜೊತೆಗೆ, ಪ್ರತಿ ಸೋಮವಾರ ಮತ್ತು ಗುರುವಾರಗಳು ಶುಭದಿನಗಳಂದು ವಿಶೇಷ ಪೂಜೆಗಳು ನಡೆಯುತ್ತವೆ. ಪೂಜೆಗಳನ್ನು ಅರ್ಚಕರು ಸಾಂಪ್ರದಾಯಿಕವಾಗಿ ನೆರವೇರಿಸುತ್ತಾರೆ. ಪ್ರತಿ ಅಮವಾಸ್ಯೆಗೆ ವಿಶೇಷ ಪೂಜೆಗಳು ನಡೆಯುತ್ತಲಿದ್ದು, ಸಾವಿರಾರು ಭಕ್ತರು ಪೂಜೆಗೆ ಆಗಮಿಸುತ್ತಾರೆ. ಇತ್ತೀಚೆ ಗಂತೂ ಅವಧೂತರ ಮಠದಲ್ಲಿ ಅಮವಾಸ್ಯೆ ಪೂಜೆಗೆ ವಿಶೇಷ ಮಹತ್ವವಿದ್ದು, ಜನ ಜಾತ್ರೆಗೆ ಸೇರಿದಂತೆ ಸೇರಿರುತ್ತಾರೆ.

ಹಬ್ಬ ಹರಿದಿನಗಳಲ್ಲಿ, ಜಾತ್ರೆ ಉತ್ಸವಗಳಲ್ಲಿ ಹಾಗೂ ವಿಶೇಷ ದಿನಗಳಲ್ಲಿ ಪೂಜೆಗಳು ವೈಭವದಿಂದ ನಡೆಯಲಿದ್ದು, ಭಕ್ತರು ಕಿಕ್ಕಿರಿದು ನೆರೆದಿರುತ್ತಾರೆ. ಪೂಜೆಯ ಸಮಯದಲ್ಲಿ ನಗಾರಿ, ಘಂಟೆ, ಜಾಗಟೆ ಬಾರಿಸುತ್ತಿದ್ದು ಆಗಮಿಸಿದ ಭಕ್ತರು ತಾತನವರ ಮೂರ್ತಿಯ ದರ್ಶನ ಪಡೆದು, ಗದ್ದುಗೆಯ ಸುತ್ತ ಪ್ರದಕ್ಷಿಣೆ ಹಾಕಿ ಪ್ರಸಾದ ಸ್ವೀಕರಿಸುವರು. ತಾತನವರು ಉಪಯೋಗಿಸಿದರೆನ್ನಲಾದ ಮಂಚ-ಕುರ್ಚಿ,ವಸ್ತ್ರ, ಪಾದುಕೆಗಳಿದ್ದರೆ ಅವುಗಳಿಗೆ ನಮಸ್ಕರಿಸುತ್ತಾರೆ. ದೂರದ ಪ್ರದೇಶಗಳಿಂದ ಬಂದ ಭಕ್ತರುಗಳಿಗೆ ಕೆಲವು ಮಠಗಳಲ್ಲಿ ನಿತ್ಯ ದಾಸೋಹದ ವ್ಯವಸ್ಥೆಯಿದ್ದರೆ, ಕೆಲವು ಮಠಗಳಲ್ಲಿ ವಿಶೇಷ ಪೂಜಾದಿನಗಳಂದು ಮಾತ್ರ ಈ ವ್ಯವಸ್ಥೆಯಿ ರುತ್ತದೆ. ಪ್ರತಿ ಮಠಗಳಲ್ಲೂ ಪೂಜೆಗಳು, ಉತ್ಸವಗಳು, ಜಾತ್ರೆಗಳು, ಸುಗಮವಾಗಿ ನಡೆಯುವಂತೆ ಸಮಿತಿ ಯೊಂದನ್ನು ರಚಿಸಿಕೊಂಡಿದ್ದಾರೆ.

ಚೇಳಗುರಿಕೆ ಎರ್ರಿತಾತನ ಮಠದಲ್ಲಿ ನಿತ್ಯ ಪೂಜೆಯ ಜೊತೆಗೆ ವರ್ಷದಲ್ಲಿ ನಡೆಯುವ ವಿಶೇಷ ಪೂಜಾ ಕಾರ್ಯಕ್ರಮಗಳು ಇಂತಿವೆ.

೧. ಧನುರ್ಮಾಸ ಪೂಜೆ

೨. ಪ್ರತಿ ಮಾಸದ ಶುದ್ಧ ಷಷ್ಠಿಯಂದು ವಿಶೇಷ ಪೂಜೆ

೩. ಪ್ರತಿ ಅಮವಾಸ್ಯೆಯಲ್ಲಿ ಪೂಜೆಯ ಜೊತೆ, ಶ್ರೀ ಮಠದ ಒಳಾಂಗಣದಲ್ಲಿ ಪಲ್ಲಕ್ಕಿ ಉತ್ಸವ ನಡೆಯುತ್ತದೆ.

೪. ಪ್ರತಿ ಹುಣ್ಣಿಮೆಯ ದಿನ ಶ್ರೀಮಠದಿಂದ ಬೆಟ್ಟಕ್ಕೆ (ತಾತನು ಚೇಳಗುರಿಕೆಗೆ ಬರುವಾಗ ಕುಳಿತುಕೊಂಡಿದ್ದ ಬೆಟ್ಟ) ಪಲ್ಲಕ್ಕಿ ಉತ್ಸವ ಹೋಗಿ ಬರುತ್ತದೆ.

೫. ಪ್ರತಿ ಶ್ರಾವಣಮಾಸದಲ್ಲಿ ಪುರಾಣ ಪ್ರವಚನಗಳು, ವಿಶೇಷ ಪೂಜಾಕಾರ್ಯಗಳು ನಡೆಯುತ್ತವೆ.

೬. ಜಾತ್ರೆ-ಉತ್ಸವಗಳಂದು ವಿಶೇಷ ಪೂಜೆಗಳು ನಡೆಯುತ್ತವೆ.

ಹಾಗೆಯೇ ಉಳಿದ ಅವಧೂತರ ಮಠದಲ್ಲೂ ವಂಶಸ್ಥರಿಂದ, ಇಲ್ಲವೆ ಸಮಿತಿಯವರು ನೇಮಿಸಿದ ಅರ್ಚಕರಿಂದ ಸಾಂಪ್ರದಾಯಿಕ ರೀತಿಯಲ್ಲಿ ಪೂಜೆಗಳು ಜರುಗುತ್ತಿವೆ. ಕೆಲ ಮಠಗಳಲ್ಲಿ ನಿತ್ಯ ಎರಡು ಬಾರಿ ಪೂಜೆಯಿದ್ದರೆ, ಕೆಲಮಠಗಳಲ್ಲಿ ನಿತ್ಯ ಮೂರು ಸಾರಿ ಪೂಜೆಯ ಜೊತೆಗೆ ರಾತ್ರಿಯ ಹೊತ್ತು ಭಜನಾ ಕಾರ್ಯಕ್ರಮಗಳಿರುತ್ತವೆ. ಸೋಮವಾರ ಮತ್ತು ಅಮವಾಸ್ಯೆಯ ಪೂಜೆಗೆ ವಿಶೇಷ ಮಹತ್ವವಿರುತ್ತದೆ. ಹಾಗೆಯೇ ಅವಧೂತರು ಸಂಚಾರ ಮಾಡಿದರೆನ್ನಲಾದ ಕೆಲ ಸ್ಥಳಗಳಲ್ಲಿಯೂ ಸಾಂಕೇತಿಕ ಮಠಗಳಿದ್ದು, ಅಲ್ಲಿಯೂ ನಿತ್ಯ ಮತ್ತು ವಿಶೇಷ ದಿನಗಳಲ್ಲಿ ಪೂಜಾ ವ್ಯವಸ್ಥೆಯಿರುತ್ತದೆ.

ಕೆಲವು ಮಠಗಳಲ್ಲಿ ವಿಶೇಷ ದಿನಗಳಂದು ವಿವಿಧ ರೀತಿಯ ಅಭಿಷೇಕದ ಪೂಜೆಗಳು ಜರುಗುತ್ತವೆ.

೧. ಚಿರಕಾಲ ರುದ್ರಾಭಿಷೇಕ

೨. ಪುರುಷ ಸೂಕ್ತ ಮಹಾಭಿಷೇಕ

೩. ಪಂಚಾಮೃತ ಅಭಿಷೇಕ

೪. ಸಹಸ್ರ ಬಿಲ್ವಾರ್ಚನೆ

೫. ಮಹಾಪ್ರಸಾದ

೬. ಕರ್ಪೂರದಾರತಿ

೭. ಮಂಗಳಾರತಿ

ಮುಖ್ಯವಾಗಿ ಶ್ರಾವಣಮಾಸ, ಅಮವಾಸ್ಯೆ, ಹಬ್ಬ, ರಥೋತ್ಸವಗಳಲ್ಲಿ ಭಕ್ತರ ಆಶಯಗಳಿಗನು ಸಾರವಾಗಿ ಪೂಜಾಕಾರ್ಯಗಳು ನಡೆಯುತ್ತವೆ. ಯಾವ ಪೂಜೆಗಳಿಗೂ ಇಂತಿಷ್ಟೇ ಎಂಬ ನಿಯಮಗಳಿಲ್ಲ.

೬. ೨. ಜಾತ್ರೆ-ಉತ್ಸವಗಳು

ಎಲ್ಲಾ ದೇಶಗಳಲ್ಲಿಯೂ ಎಲ್ಲಾ ಜನಾಂಗದವರಲ್ಲಿಯೂ ಜಾತ್ರೆ-ಉತ್ಸವಗಳು ನಡೆದುಕೊಂಡು ಬರುತ್ತಿವೆ. ಆಯಾಯ ಪ್ರಾದೇಶಿಕ ವೈಶಿಷ್ಟ್ಯಗಳಾದ ಊಟ, ಉಡುಗೆ, ತೊಡುಗೆ, ಆಚಾರ, ವಿಚಾರಗಳಿಂದ ಕೂಡಿರುವ ಈ ಜಾತ್ರೆಗಳು ಸಹಜವಾಗಿ ಮಳೆಗಾಲ ಮತ್ತು ಸುಗ್ಗಿಯ ಕಾಲವನ್ನು ಹೊರತುಪಡಿಸಿ, ಜನರ ಬಿಡುವಿನ ಅವಧಿಯಲ್ಲಿ ನಡೆಯುತ್ತಿರುತ್ತವೆ. ಸಮಾಜದ ಎಲ್ಲಾ ವರ್ಗದ ಜನ ಜಾತಿ, ಲಿಂಗ ವರ್ಣಭೇದ ಮರೆತು, ಸಾಮೂಹಿಕವಾಗಿ ಪಾಲ್ಗೊಳ್ಳುವ ಈ ಜಾತ್ರೆಗಳು ದೇವರೆಂದು ಪೂಜಿಸಿಕೊಳ್ಳುತ್ತಿರುವ ಮಹಾತ್ಮರು ತಂದು ಕೊಟ್ಟ ಸಾಂಸ್ಕೃತಿಕ ಹಿರಿಮೆಗಳನ್ನು ತೋರಿಸುತ್ತವೆ. ಸಾಮೂಹಿಕವಾಗಿ ಭಾಗವಹಿಸುವ ಈ ಜಾತ್ರೆಗಳು

ಸಹಜವಾಗಿಯೇ ಅನ್ಯೋನ್ಯ ಪ್ರೀತಿ, ಸ್ನೇಹ, ಸೌಹಾರ್ದತೆಯನ್ನು ಮೂಡಿಸುವುದರ ಜೊತೆಗೆ ವಿಶಾಲ ಮನೋಭಾವನೆಯನ್ನೂ ಧಾರ್ಮಿಕ ಸಮನ್ವಯತೆಯನ್ನೂ ಸಾರುತ್ತವೆ. ಕೆಲವು ಜಾತ್ರೆಗಳು ಭಾಷಾ ಬಾಂಧವ್ಯಕ್ಕೂ ಕಾರಣವಾಗಿವೆ.

ಆಧ್ಯಾತ್ಮಿಕ ಚೇತನಗಳು ಕಣ್ಮರೆಯಾದ ದಿನವನ್ನು 'ಪುಣ್ಯತಿಥಿ' ಗಳೆಂದು ಕರೆಯುವುದು ವಾಡಿಕೆಯಲ್ಲಿದೆ. ಆ ದಿನದಂದು ಅವರ ನೆನಪಿಗೆ ಜಾತ್ರೆ-ಉತ್ಸವಗಳು ನಡೆದುಕೊಂಡು ಬರುತ್ತವೆ. ಜನತೆಗೆ ಮತ್ತು ಸಮಾಜಕ್ಕೆ ಒಳ್ಳೆಯದನ್ನು ಮಾಡಿ, ಅವರಿಗೆ ಸದ್ಬೋಧೆಯನ್ನು ನೀಡಿರುವಂಥ ಸಂತರು, ಶರಣರು, ಅವಧೂತರು ಮುಂತಾದ ಮಹಾನುಭಾವಿಗಳ ಮರಣಾನಂತರ ಅವರ ಸ್ಮರಣಾರ್ಥವಾಗಿ ಜಾತ್ರೆಗಳನ್ನು ಆಚರಿಸುತ್ತಾ ಬಂದಿರುತ್ತಾರೆ. ಮಹಾನುಭಾವಿಗಳ ಮೇಲಿನ ನಂಬಿಕೆ ಮತ್ತು ಉತ್ಸಾಹಗಳ ಗಾಢ ಸಂಬಂಧವೇ ಜಾತ್ರೆ. ಕೆಲವು ಮಹಾತ್ಮರು ಇದ್ದಾಗಲೂ ಪಲ್ಲಕ್ಕಿಯಲ್ಲಿ ಕೂರಿಸಿ ಉತ್ಸವಗಳನ್ನು ಆಚರಿಸುತ್ತಾರೆ. "ಜನಜೀವನದ ಸಾಮಾಜಿಕ ವ್ಯವಸ್ಥೆ ಸುರಕ್ಷಿತವಾಗಿ ಮುನ್ನಡೆಯಲು ಮತ್ತು ತಲೆಮಾರಿನಿಂದ ತಲೆಮಾರಿಗೆ ಸಾಗಿಬಂದ ಸಾಂಸ್ಕೃತಿಕ ಪ್ರವಾಹಗಳನ್ನು ಮುಂದುವರೆಸಲು ಜಾತ್ರೆ ಮತ್ತು ಕಲೆಗಳು ನಿರಂತರ ಪ್ರಸ್ತುತ."[೧] ಜನತೆಗೆ ಒಳ್ಳೆಯದರ ತಿಳುವಳಿಕೆ ಮೂಡಿಸಿ, ಅಂಧಶ್ರದ್ಧೆಯನ್ನು ಹೊಡೆದು ಹಾಕಿ ಸುಜ್ಞಾನಿಗಳನ್ನಾಗಿ ಮಾಡಿದ ಮಹಾತ್ಮರ ಜಾತ್ರೆಯ ಅಥವ ಉತ್ಸವದ ದಿನದಂದು ರಥವನ್ನು ಎಳೆಯುವ ಪರಿಪಾಠವಿದೆ. "ಹಬ್ಬದೂಟ ಚಂದ, ಜಾತ್ರೆಯ ನೋಟ ಚಂದ" ಎನ್ನುವಂತೆ, ಜಾತ್ರೆಗಳು ಕೇವಲ ಜನಜಂಗುಳಿಯ ಉತ್ಸಾಹ ಮತ್ತು ಮೋಜಿನ ತಾಣವಾಗಿರದೆ, ಅವುಗಳು ಈ ನಾಡಿನ ಸಾಂಸ್ಕೃತಿಕ ಹಿರಿಮೆಯನ್ನು ಪ್ರತಿಬಿಂಬಿಸುತ್ತವೆ.

ಜಾನಪದ ತಜ್ಞರಾದ ಡಾ.ಮಲ್ಲಿಕಾರ್ಜುನ ಶಿ.ಲಠ್ಠೆಯವರು ಜಾತ್ರೆಗಳನ್ನು ಗುಡಿಜಾತ್ರೆ ಮತ್ತು ಮಠದ ಜಾತ್ರೆಗಳೆಂದು ಎರಡು ಭಾಗವಾಗಿ ವಿಭಾಗಿಸಿದ್ದಾರೆ.

ಗುಡಿ ಜಾತ್ರೆಗಳು : ವಾಸ್ತವವಾಗಿ ನಾವು ನಂಬಿಕೊಂಡು ಬಂದಿರುವ ದೇವರು ಮತ್ತು ದೇವತೆಗಳ ಹೆಸರಿನಲ್ಲಿ ಭಕ್ತರು ತಮಗೆ ಅನುಕೂಲವಾದಾಗ ಆಚರಿಸುತ್ತಾರೆ. ಊರಿನಲ್ಲಿ ಮಳೆ ಬಾರದಿದ್ದಾಗ, ಬೆಳೆ ಹಾಳಾದಾಗ, ಕುಡಿಯಲು ನೀರು ಸಿಗದಿದ್ದಾಗ, ದನಕರುಗಳಿಗೆ ಸೋಂಕುರೋಗ ತಗುಲಿದಾಗ, ಹಾಗೆಯೇ ಒಳ್ಳೆ ಮಳೆ, ಬೆಳೆಯಾಗಿ ಗ್ರಾಮ ಸಮೃದ್ಧಿಯಾಗಿದ್ದಾಗ ಜಾತ್ರೆಗಳು ನಡೆಯುತ್ತವೆ. ಹೆಚ್ಚಾಗಿ ಸ್ವಜಾತಿ-ಸ್ವಧರ್ಮದವರು ಆಚರಿಸುವ ಈ ಜಾತ್ರೆಗೆ ಬೇರೆ ಧರ್ಮದವರು ಬಂದರೂ ಅಲ್ಲಿನ ಆಚಾರ, ವಿಚಾರಗಳಿಂದ ದೂರ ಉಳಿಯುತ್ತಾರೆ. ಹಳ್ಳಿ ಮತ್ತು ಪಟ್ಟಣ ಪ್ರದೇಶಗಳಲ್ಲೂ ಈ ಜಾತ್ರೆಗಳು ನಡೆಯುತ್ತಿವೆ.

ಮಠದ ಜಾತ್ರೆಗಳು : ಮಹಾನುಭಾವಿಗಳ ಸ್ಮರಣಾರ್ಥ ನಡೆಯುವ ಜಾತ್ರೆಗಳು. ವ್ಯಕ್ತಿ ಮತ್ತು ಸಮಾಜಕ್ಕೆ ಒಳಿತನ್ನು ಮಾಡುವ ಜನಪರ ಕಾಳಜಿಯುಳ್ಳ ಮಹಾತ್ಮರ ಮರಣಾನಂತರ, ಅವರ ನೆನಪಿಗಾಗಿ ಪುಣ್ಯತಿಥಿಯಂದು ಆಚರಿಸುವ ಜಾತ್ರೆಗಳು. ಅಂದರೆ ಶರಣರ, ಸಂತರ, ಮಹಾನುಭಾವಿಗಳ ಗುಡಿಗಳಿಲ್ಲವೆಂದಲ್ಲ. ಹೆಚ್ಚಾಗಿ ಸಮಾಧಿಗಳೇ ಇದ್ದು, ಆ ಬಳಿಕ ಮಹಾತ್ಮರ ಸ್ಮರಣಾರ್ಥವಾಗಿ ಭಕ್ತರು ಗುಡಿಗಳನ್ನು ಕಟ್ಟಿಸಿದ್ದಾರೆ. ಆದರೆ ಮೂಲತಃ ಅವು ಸಮಾಧಿಗಳು "ಈ ಜಾತ್ರೆಗಳು ಶಿಷ್ಟ ಸಂಪ್ರದಾಯಕ್ಕಂಟಿಕೊಂಡು ಬಂದಿದ್ದರೂ ಜನಸ್ತೋಮ ದಿಂದಾಗಿ ಸಾಮಾಜಿಕ ಹಬ್ಬಗಳಾಗಿ ಎಲ್ಲ ಜಾತಿ ಜನಾಂಗದವರಿಂದ ನೆರವೇರಿಸುತ್ತಲಿರುವ ಮಠದ ಜಾತ್ರೆಗಳಾಗಿ ಶೋಭಿಸುತ್ತ ಬಂದಿರುತ್ತವೆ."[೨]

ಅವಧೂತರ ಜಾತ್ರೆಯನ್ನು ಮಠದ ಜಾತ್ರೆಗಳೆಂದು ಕರೆಯಬಹುದು. ಇವರ ಜಾತ್ರೆಗೆ ಊರಿಗೆ ಊರೇ ನೆರೆದಿರುವುದರ ಜೊತೆಗೆ ನೆಂಟರಿಷ್ಟರು, ಅಕ್ಕ-ಪಕ್ಕದ ಹಳ್ಳಿಯವರು ಮತ್ತು ಭಕ್ತರುಗಳು ಎಲ್ಲೇ ಇರಲಿ ಜಾತ್ರೆಯ ದಿನದಂದು ಆಗಮಿಸಿ ರಥೋತ್ಸವಕ್ಕೆ ವಿಶೇಷ ಮೆರುಗನ್ನು ನೀಡುತ್ತಾರೆ. ಧಾರ್ಮಿಕ ಹಿನ್ನಲೆಯಲ್ಲಿ ಹುಟ್ಟಿ ಬಂದ ಇಂಥ ಜಾತ್ರೆಗಳು ಹೆಣ್ಣು-ಗಂಡು, ಬಡವ-ಬಲ್ಲಿದ, ಊರು-ಕೇರಿ ಎಂಬ ಭೇದಭಾವವಿಲ್ಲದೆ ಸೇರುವುದರಿಂದ ಜಾತ್ರೆಗಳು ಸಾಮಾಜಿಕ ಭಾವೈಕ್ಯತೆಯ ಸಂಕೇತಗಳಾಗಿವೆ. ಮಠಗಳನ್ನು ಅದರ ಆವರಣವನ್ನು ಸ್ವಚ್ಛಗೊಳಿಸಿ, ಸುಣ್ಣ ಬಣ್ಣಗಳಿಂದ, ತಳಿರುತೋರಣಗಳಿಂದ, ವಿದ್ಯುತ್ ದೀಪಗಳಿಂದ ವಿಶೇಷವಾಗಿ ಅಲಂಕರಿಸಿರುತ್ತಾರೆ. ಮಠಗಳ ಹೊರಾಂಗಣದಲ್ಲಿ ನಿರ್ದಿಷ್ಟಪಡಿಸಿದ ಜಾಗಗಳಲ್ಲಿ ಹಣ್ಣು, ಕಾಯಿ, ಪುಸ್ತಕ, ಫೋಟೋ, ಆಟದ ಸಾಮಾನುಗಳು, ಪಾತ್ರೆ, ಬಟ್ಟೆ, ಬಳೆ ಅಂಗಡಿಗಳು ಹೀಗೆ ವಿವಿಧ ಸಾಮಾನುಗಳನ್ನು ಮಾರುವ ಅಂಗಡಿಗಳನ್ನು ಸಾಲು-ಸಾಲಾಗಿ ಹಾಕಿರುತ್ತಾರೆ.

ಪೂರ್ವಭಾವಿಯಾಗಿ ಊರಿನ ಎಲ್ಲಾ ವರ್ಗದವರು ತಮ್ಮ ತಮ್ಮ ಮನೆಗಳನ್ನು ಸುಣ್ಣ-ಬಣ್ಣಗಳಿಂದ ಅಲಂಕರಿಸಿರುತ್ತಾರೆ. ಹೊಸ ಉಡುಗೆ-ತೊಡುಗೆಗಳನ್ನು ತೊಟ್ಟು, ತಾತನವರ ಮಠಗಳಿಗೆ ಹೋಗಿ, ಅವರ ವಿಗ್ರಹಕ್ಕೆ, ಸಮಾಧಿಗೆ ನಮಸ್ಕರಿಸಿ, ತೀರ್ಥ ಪ್ರಸಾದ ತೆಗೆದುಕೊಳ್ಳುತ್ತಾರೆ. ನಂತರ ತಂದೆ, ತಾಯಿ, ಗುರು, ಹಿರಿಯರ ಪಾದಕ್ಕೆ ನಮಸ್ಕರಿಸಿ, ಅವರಿಂದ ಆಶೀರ್ವಾದ ಪಡೆಯುತ್ತಾರೆ. ಮಠಗಳಲ್ಲಿ ವಿಶೇಷ ಪೂಜಾ ಕಾರ್ಯಕ್ರಮಗಳಿದ್ದು, ಪುರಾಣ ಪ್ರವಚನಗಳು, ಶಿವಗೋಷ್ಠಿಗಳಂತಹ ಜ್ಞಾನ ದಾಸೋಹವು, ನಾಟಕ ಮತ್ತು ಕಲಾಪ್ರದರ್ಶನಗಳಂತಹ ಮನರಂಜನಾ ಕಾರ್ಯಕ್ರಮಗಳು, ಸಾಮೂಹಿಕ ವಿವಾಹಗಳು ಮಠದ ವತಿಯಿಂದ ನಡೆಯುತ್ತಿರುತ್ತವೆ. ಜಾತ್ರೆಗೆಂದೇ ಆಗಮಿಸಿದ ಭಕ್ತರು ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ತಾತನವರ ಜೀವನ, ವ್ಯಕ್ತಿತ್ವ, ಸಾಧನೆ, ಸಿದ್ಧಿ, ಮಹಿಮೆಗಳನ್ನು ಅರಿತುಕೊಂಡು ನ್ಯಾಯ, ನೀತಿ,ಧರ್ಮಗಳಂತ ಸದ್ಗುಣ ಗಳನ್ನು ತಮ್ಮ ಜೀವನಕ್ಕೆ ಅಳವಡಿಸಿಕೊಳ್ಳಲು ನಿರ್ಧರಿಸುತ್ತಾರೆ. ನಂಬಿದ ಭಕ್ತರನ್ನು ಆ ಮಹಾತ್ಮನು ಎಂದೂ ಕೈ ಬಿಡಲಾರನೆಂದು ತೀರ್ಮಾನಿಸಿ, ತಮ್ಮ ಕಷ್ಟ-ಕಾರ್ಪಣ್ಯಗಳನ್ನು, ಮನದ ಬಯಕೆಗಳನ್ನು ತಾತನಲ್ಲಿ ಅರಿಕೆ ಮಾಡಿಕೊಳ್ಳುತ್ತಾರೆ. ನಂತರ ಜಾತ್ರೆಯ ನೆನಪಿಗಾಗಿ ಮಠದ ಹೊರಾಂಗಣದಲ್ಲಿ ಹಾಕಿದ ಅಂಗಡಿಗಳಿಗೆ ಹೋಗಿ ಬೇಕಾದ ಸಾಮಾನುಗಳನ್ನು ಖರೀದಿಸುತ್ತಾರೆ.

ಮಠದ ಆಡಳಿತವರ್ಗದವರು, ಅರ್ಚಕರು, ಪಲ್ಲಕ್ಕಿ ಹೋರುವವರು, ದೀವಟಿಗೆಯವರು, ಕಲಾಮೇಳ ದವರು. ಪುರವಂತರು, ಮತ್ತು ಊರ ಪ್ರಮುಖರು, ಹೀಗೆ ಎಲ್ಲರೂ ಸೇರಿ ರಥೋತ್ಸವ ಕಾರ್ಯವನ್ನು ಕ್ರಮಬದ್ಧವಾಗಿ, ವಿಧಿ-ವಿಧಾನಗಳಿಂದ ನಡೆಸಿಕೊಡುತ್ತಾರೆ. ಮೂಲಗದ್ದುಗೆಯಿಂದ ತಾತನವರ ಉತ್ಸವ ಮೂರ್ತಿಯನ್ನು ಹೊರತಂದು ತೇರಿನಲ್ಲಿಡುತ್ತಾರೆ. ರಥೋತ್ಸವ ಪ್ರಾರಂಭವಾದಾಗ ನೆರೆದ ಭಕ್ತಸ್ತೋಮ ಫಲ-ತಾಂಬೂಲಗಳನ್ನು ರಥಕ್ಕೆ ಎಸೆಯುತ್ತಾ, ರಥದ ಚಕ್ರಗಳಿಗೆ ಕಾಯಿಗಳನ್ನು ಒಡೆಯುತ್ತಾರೆ. ರಥೋತ್ಸವದ ಮುಂದೆ ನಾನಾ ರೀತಿಯ ಜನಪದ ಕಲಾಮೇಳಗಳು, ನಂದಿಕೋಲು ಕುಣಿತ, ಭಜನೆ, ಕೋಲಾಟ, ಡೊಳ್ಳಿನವರು, ಸಮ್ಮಾಳ ಬಾರಿಸುವವರು, ಪುರವಂತರು, ಕರಡಿಮಜಲು ಹೀಗೆ ಪ್ರತಿಯೊಂದು ಕಲಾಮೇಳವು ತಮ್ಮ ವಾದ್ಯದೊಂದಿಗೆ ಕುಣಿಯುತ್ತಾ, ಹಾಡುತ್ತಾ, ಸಾಗುತ್ತಿರುತ್ತಾರೆ. ರಥವನ್ನು ಎಳೆಯುವವರು, ತಾತನವರಿಗೆ

ಜೈಕಾರ ಹಾಕುತ್ತಾ ಹುರುಪು ಹುಮ್ಮಸ್ಸಿನಿಂದ ಕೇಕೆ-ಸಿಳ್ಳು ಹಾಕಿಕೊಂಡು ಸಾಗುತ್ತಾರೆ. ಸರ್ವ ಜಾತಿ, ಮತ ಪಂಥದವರು ಸೇರಿ ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸುತ್ತಾರೆ. ಒಟ್ಟಾರೆ ಸಾಮೂಹಿಕವಾಗಿ ಸೇರಿ ನಡೆಯುವ ಈ ಜಾತ್ರೆಗಳು ಯಾತ್ರಾ ಸ್ಥಳಗಳಂತೆ ಇರುತ್ತವೆ. ಡಾ.ದೇ.ಜ.ಗೌ.ರವರು ಹೇಳಿರುವಂತೆ 'ಯಾತ್ರಾ ಸ್ಥಳಗಳೆಲ್ಲಾ ಜಾತ್ರೆಯ ಸ್ಥಳಗಳಾಗಬೇಕಿಲ್ಲ. ಆದರೆ ಜಾತ್ರೆಯ ಸ್ಥಳಗಳೆಲ್ಲಾ ಸಾಮಾನ್ಯವಾಗಿ ಯಾತ್ರಾಸ್ಥಳಗಳಾಗಿರುತ್ತವೆ.' ಜಾನಪದ ಸೊಗಡಿನ ಹಿನ್ನಲೆ ಈ ಜಾತ್ರೆಗಳಿಗಿರುವುದರಿಂದ ಸಾಮಾಜಿಕ ಹಬ್ಬಗಳಾಗಿ ಅತೀ ಸಡಗರದಿಂದ ಆಚರಿಸಲ್ಪಡುತ್ತಾ ಬಂದಿವೆ. "ಜಾತ್ರೆಗಳು ಒಂದು ಪ್ರದೇಶದ ಬೇರೆ ಬೇರೆ ಭಾಷೆ, ಜಾತಿ, ವರ್ಗ, ಸಾಮಾಜಿಕ ಅಂತಸ್ತು, ಅಭಿರುಚಿಯ ಜನಸಮುದಾಯವನ್ನು ಸಮಾವೇಶಗೊಳಿಸಿ ಅವರಲ್ಲಿ ಆಸ್ತಿಕ ಭಾವನೆಯನ್ನು ಉದ್ದೀಪನಗೊಳಿಸುವ ಸಾಂಸ್ಕೃತಿಕ ಕ್ರಿಯೆಯಾಗಿರುವುದರಿಂದ ಈ ವ್ಯವಸ್ಥೆಯ ಹಿನ್ನಲೆಯಲ್ಲಿ ದುಡಿಯುವ ಜನಪದ ಮನೋಭೂಮಿಕೆ ಮಹತ್ವದ್ದಾಗಿದೆ. ಹಾಗಾಗಿ ಮುಲಭೂತವಾಗಿ ಕಲ್ಪನೆ, ಸ್ವರೂಪ, ಆಶಯ, ಉದ್ದೇಶಗಳಲ್ಲಿ ಜಾತ್ರೆಯು ಜನಪದೀಯ."[೩] ವಿಶೇಷವೆಂದರೆ ಅವಧೂತರು ನೆಲೆನಿಂತ ಕ್ಷೇತ್ರದಲ್ಲಿ ಜಾತ್ರೆಗಳು ನಡೆಯುವ ದಿನದಂದೇ ಹುಟ್ಟಿದ ಊರುಗಳಲ್ಲಿ, ಸಂಚರಿಸಿದ ಸ್ಥಳಗಳಲ್ಲಿ ಮಠಗಳಿದ್ದರೆ ಅಲ್ಲಿಯೂ ರಥೋತ್ಸವಗಳು ನಡೆಯುತ್ತವೆ.

ಮುಖ್ಯವಾಗಿ ಇಂಥ ಜಾತ್ರೆಯಲ್ಲಿ ನಡೆಯುವ ವಿವಿಧ ಕಾರ್ಯಕ್ರಮಗಳ ಖರ್ಚು-ವೆಚ್ಚವನ್ನು ಕೆಲವು ಭಕ್ತಾದಿಗಳು, ಸಂಘ ಸಂಸ್ಥೆಗಳು ವಹಿಸಿಕೊಳ್ಳುತ್ತವೆ.

ಉದಾ: ಹೂವಿನ ರಥೋತ್ಸವವಿದ್ದರೆ ಅದರ ಎಲ್ಲಾ ಖರ್ಚನ್ನು ತಾತನವರ ಸೇವಾಭಾಗ್ಯವೆಂದು ಭಕ್ತರೇ ಭರಿಸುತ್ತಾರೆ. ಹೀಗೆ ಪ್ರತಿಯೊಂದು ಕಾರ್ಯಕ್ರಮಗಳ ಕೇಂದ್ರ ಭಕ್ತರೇ ಆಗಿದ್ದು, ತಮ್ಮ ಮನದ ಇಷ್ಟಾರ್ಥಗಳು ನೆರವೇರಿದರೆ, ಉತ್ತಮ ಮಳೆ ಬೆಳೆ ಬಂದರೆ, ವ್ಯವಹಾರಗಳಲ್ಲಿ ಉತ್ತಮ ಪ್ರಗತಿಯಾದವರು ಇಂಥ ಸೇವಾಸಕ್ತರಾಗಿರುತ್ತಾರೆ. ಹಾಗೆ ಮುತ್ತಿನ ಪಲ್ಲಕ್ಕಿ ಉತ್ಸವವಿದ್ದರೆ ಅದರ ವೆಚ್ಚವನ್ನು ಭಕ್ತರೊಬ್ಬರೇ ವಹಿಸುತ್ತಾರೆ.

ಬಳ್ಳಾರಿ ಜಿಲ್ಲೆಯಲ್ಲಿ ಅವಧೂತರ ಜಾತ್ರೆಗಳು ಜನಪ್ರಿಯ ಜಾತ್ರೆಗಳೆಂದು ಹೆಸರುಪಡೆದಿವೆ. ಚೇಳ್ಳ ಗುರಿಕೆ ಎರ್ರಿತಾತ, ದಮ್ಮೂರು ವೆಂಕಪ್ಪತಾತ, ಕೊಳಗಲ್ಲು ಎರ್ರಿಬಸವತಾತ, ಎಮ್ಮಿಗನೂರು ಜಡೆಪ್ಪತಾತ, ಹಂಪಿ ಶಿವರಾಮಧೂತ, ಸಿಂಧಿಗೇರಿ ಮಲ್ಲಪ್ಪತಾತ ಮೊದಲಾದ ಮಹಾನುಭಾವಿಗಳ ಜಾತ್ರೆಗಳು ಭಾರೀ ವಿಜೃಂಭಣೆಯಿಂದ ನಡೆಯುತ್ತಿವೆ. ಎಲ್ಲಾ ಜಾತಿ-ಜನಾಂಗದವರು ಗಂಡು-ಹೆಣ್ಣು, ಮೇಲು-ಕೀಳು, ಬಡವ-ಶ್ರೀಮಂತ ಎಂಬ ಭೇದ-ಭಾವವಿಲ್ಲದೆ ಇಂಥ ಜಾತ್ರೆಗಳಲ್ಲಿ ಸೇರುವುದರಿಂದ ಸಾಮಾಜಿಕ ಭಾವೈಕ್ಯತೆ ಮತ್ತು ಭಾಷಾಬಾಂಧವ್ಯಕ್ಕೆ ಸದರ್ಶನವಾಗಿವೆ.

ಚೇಳ್ಳಗುರಿಕೆ ಎರ್ರಿತಾತನವರ 'ಜೀವಸಮಾಧಿ' ಕ್ಷೇತ್ರದಲ್ಲಿ ವರ್ಷಕ್ಕೆ ಎರಡು ಬಾರಿ ಜಾತ್ರೆ ನಡೆಯುತ್ತದೆ. ಪ್ರತಿವರ್ಷ ಜೇಷ್ಠ ಮಾಸದ ಶುದ್ಧ ಷಷ್ಠಿಯಂದು ಅತ್ಯಂತ ವೈಭವದಿಂದ ಜರುಗುವ ಜಾತ್ರೆಯ ಅಂಗವಾಗಿ ವಿವಿಧ ಕಾರ್ಯಕ್ರಮಗಳು ನಡೆಯುತ್ತವೆ.

೧. ನಂದಿ ಧ್ವಜಾರೋಹಣ

೨. ಸಪ್ತ ಭಜನೆ

೩. ಶಿವಾನುಭವ ಗೋಷ್ಠಿಗಳು

೪. ಬಸವನುತ್ಸವ ಮತ್ತು ವಟುಗಳ ದೀಕ್ಷಾ ಕಾರ್ಯಕ್ರಮ

೫. ಮಹಾ ರಥೋತ್ಸವ ಮತ್ತು ಕರ್ಪೂರದ ಆರತಿ

೬. ಹೂವಿನ ರಥೋತ್ಸವ ಮತ್ತು ಬಾಣೋತ್ಸವ

೭. ಮಹಾ ದಾಸೋಹದ ವ್ಯವಸ್ಥೆ

ಪ್ರತಿ ಕಾರ್ತೀಕ ಮಾಸದಲ್ಲಿ ಶುದ್ಧ ೧ ರಿಂದ ಕಾರ್ತೀಕ ಬಹುಳ ೩೦ ರವರೆಗೆ ಪ್ರತಿದಿನ ತಾತನವರಿಗೆ ವಿಶೇಷ ಅಭಿಷೇಕ, ಅರ್ಚನೆ, ಮತ್ತು ದೀಪಾರಾಧನೆ ನಡೆಯುವವು. ಆದರ ಪ್ರಯುಕ್ತ

೧. ದೀಪೋತ್ಸವ

೨. ಅಷ್ಟೋತ್ತರ ಶಂಖಾಭಿಷೇಕ ಪೂಜೆ

೩. ಪುರಾಣ ಪ್ರವಚನ

೪. ಮುತ್ತಿನ ಪಲ್ಲಕ್ಕಿ ಉತ್ಸವ ಮತ್ತು ಮಹಾದಾಸೋಹದ ಕಾರ್ಯಕ್ರಮಗಳಿರುತ್ತವೆ.

ಈ ಆಚರಣೆಗಳಿಂದ ಜಾತ್ರೆಗೆಂದು ಬಂದ ಭಕ್ತ ಜನತೆಗೆ ತಾತನವರ ಬಗ್ಗೆ ಭಕ್ತಿ ಗೌರವಗಳು ಮೂಡುವುದರ ಜೊತೆಗೆ ಜ್ಞಾನ ದಾಸೋಹ ಮತ್ತು ಅನ್ನದಾಸೋಹದ ಭಾಗ್ಯ ಲಭಿಸುತ್ತದೆ.

ದಮ್ಮೂರು ವೆಂಕಾವಧೂತರ ಕ್ಷೇತ್ರದಲ್ಲಿ, ತಾತನವರ ಪುಣ್ಯ ತಿಥಿಯಂದು, ಅವರ ಸ್ಮರಣಾರ್ಥವಾಗಿ ಮಾಘ ಶುದ್ಧ ಒಂದರಿಂದ ಮಾಘಶುದ್ಧ ಪೌರ್ಣಮಿಯವರೆಗೆ ಮಹಾರಥೋತ್ಸವ ನಿಮಿತ್ತ ವಿವಿಧ ಕಾರ್ಯಕ್ರಮಗಳಿರುತ್ತವೆ.

೧. ಮಹಾ ರಥೋತ್ಸವಕ್ಕೆ ಸುಮಾರು ಹದಿನೈದು ದಿನಗಳ ಮುಂಚಿತವಾಗಿ ಪುರಾಣ ಪ್ರವಚನ ಕಾರ್ಯಕ್ರಮವಿದ್ದು ನಿತ್ಯ ಸಾಯಂಕಾಲ ನಡೆಯುತ್ತದೆ.

೨. ಮಾಘಮಾಸದ ಹುಣ್ಣಿಮೆಯ ದಿನ ಸಂಜೆ ಮಹಾರಥೋತ್ಸವದ ಪ್ರಯುಕ್ತ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳಿರುತ್ತವೆ.

ಎರಿಬಸವತಾತನವರ ಕ್ಷೇತ್ರ ಕೊಳಗಲ್ಲು ಇಲ್ಲಿ ಪ್ರತಿವರ್ಷ ತಾತನವರು ಜೀವೈಕ್ಯರಾದ ನೆನಪಿಗೆ ಭಾದ್ರಪದ ಬಹುಳ ಸಪ್ತಮಿಯಂದು ಪುಣ್ಯಾರಾಧನೆ ನಡೆಯುತ್ತದೆ. ಪ್ರಯುಕ್ತ ಮಠದಲ್ಲಿ ನಡೆಯುವ ಕಾರ್ಯಗಳು,

೧. ತಾತನವರ ಪುರಾಣ ಪ್ರವಚನ

೨. ರುದ್ರಾಭಿಷೇಕ

೩. ದಾಸೋಹ ವ್ಯವಸ್ಥೆಯ ಜೊತೆಗೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತವೆ

೧. ಪ್ರತಿವರ್ಷ ಚೈತ್ರ ಶುದ್ಧ ಪಾಡ್ಯಮಿಯಿಂದು ಮಹಾರಥೋತ್ಸವ ಜರುಗುತ್ತದೆ. ರಥೋತ್ಸವದ ಪ್ರಯುಕ್ತ ಕ್ಷೇತ್ರದಲ್ಲಿ ೧. ತಾತಾನವರ ಗದ್ದುಗೆಗೆ ರುದ್ರಾಭಿಷೇಕ ೨. ಬಿಲ್ವಾರ್ಚನೆ, ಪುಷ್ಪಾರ್ಚನೆ ೩. ಶ್ರೀ ಮದ್ಭಾಗವತ ಪುರಾಣ ಸಪ್ತಾಹ ಕಾರ್ಯಕ್ರಮಗಳು ನಡೆಯುತ್ತವೆ.

೨. ನಾಡಿನ ಪ್ರಮುಖ ಮಹಾಸ್ವಾಮಿಗಳ ನೇತೃತ್ವದಲ್ಲಿ ಆಧ್ಯಾತ್ಮಿಕ ಪ್ರವಚನ ಕಾರ್ಯಕ್ರಮ ಮತ್ತು ಅನ್ನ ಸಂತರ್ಪಣೆ ಇರುತ್ತದೆ.

೩. ಎರಿಬಸವತಾತ ಮತ್ತು ಅವರ ಶಿಷ್ಯರಾದ ಜಡೆತಾತನವರ ಮೂರ್ತಿಗಳೊಂದಿಗೆ ಗಂಗಾ ಪೂಜೆ, ಕುಂಭೋತ್ಸವ ಮತ್ತು ಕಳಸಗಳ ಮೆರವಣಿಗೆಯು ನಂದಿಕೋಲು, ಸಮ್ಮಾಳ, ಡೊಳ್ಳು, ಸನಾಯಿ ವಾದನ, ಮುಂತಾದ ವಿವಿಧ ವಾದ್ಯಗಳೊಂದಿಗೆ ಜರುಗುವುದು.

ಜಾತ್ರೆಯ ಕೊನೆಯದಿನ ವಿಶೇಷವಾಗಿದ್ದು, ಅಪಾರ ಭಕ್ತ ಜನತೆ ಸೇರುತ್ತದೆ. ಅಂದು ಬೆಳಿಗ್ಗೆ ಮಠದ ಆವರಣದಲ್ಲಿ

೧. ಸಾಮೂಹಿಕ ವಿವಾಹಗಳು
೨. ಮಹಾ ದಾಸೋಹ
೩. ಸಂಜೆ ಮಹಾ ರಥೋತ್ಸವ ನಡೆಯುತ್ತದೆ. ಹಾಗೆಯೆ ತಾತನವರ ಮಠವಿರುವ ಯರಂಗಳಿ ಯಲ್ಲೂ ಇದೇ ದಿನದಂದು ರಥೋತ್ಸವ ಜರುಗುತ್ತದೆ.

ಎಮ್ಮಿಗನೂರು ಜಡೇತಾತನವರ ಪುಣ್ಯತಿಥಿಯ ಸ್ಮರಣಾರ್ಥವಾಗಿ ಎಮ್ಮಿಗನೂರು ಕ್ಷೇತ್ರದಲ್ಲಿ ಪ್ರತಿವರ್ಷ ಕಾರ್ತಿಕಮಾಸದ ಪಂಚಮಿಯಿಂದ ಮಾರ್ಗಶಿರ ಪಂಚಮಿಯವರೆಗೆ ಒಂದು ತಿಂಗಳ ಪರ್ಯಂತ ವಿವಿಧ ಕಾರ್ಯಕ್ರಮಗಳಿರುತ್ತವೆ. ವಂಶಗುರುಗಳು ಮತ್ತು ಜಡೇತಾತನವರ ವಂಶಿಕರ ಸಂಕಲ್ಪದಂತೆ ಕೆಲಸಕಾರ್ಯಗಳು ವ್ಯವಸ್ಥಿತವಾಗಿ ನಡೆಯುವವು.

೧. ಪುರಾಣ ಪ್ರವಚನ (ಪ್ರತಿದಿನ ಸಂಜೆ)
೨. ಪಾಲಿಕೋತ್ಸವ
೩. ಲಕ್ಷ ದೀಪೋತ್ಸವ
೪. ಉಚಿತ ಸಾಮೂಹಿಕ ವಿವಾಹ
೫. ಮಹೇಶ ವಟುಗಳಿಗೆ ದೀಕ್ಷಾ ಕಾರ್ಯಕ್ರಮ
೬. ೧೦೧ ಡೊಳ್ಳಿನ ಕುಣಿತ
೧೦೧ ಕಳಸ
೧೦೧ ಜೋಡೆತ್ತಿನ ಮೆರವಣಿಗೆ

೭. ಮಹಾ ರಥೋತ್ಸವ (ಮಾರ್ಗಶಿರ ಶುದ್ಧ ಪಂಚಮಿಯಂದು) ಜಾತ್ರೆಯ ಪ್ರಯುಕ್ತ ವಿವಿಧ ಮಠಗಳ ಸ್ವಾಮಿಗಳು ಆಗಮಿಸಿ, ಜಾತ್ರಾ ಕಾರ್ಯಕ್ರಮಗಳನ್ನು ನಡೆಸಿಕೊಡುತ್ತಾರೆ.

ಬೈಲುಹೊದ್ದಿಗೆರೆ ಸುಡುಗಾಡಪ್ಪ ತಾತನ ಮಠದಲ್ಲಿ ಪ್ರತಿ ವರ್ಷ ಮಾಘಮಾಸದ ಶಿವರಾತ್ರಿ ಅಮವಾಸ್ಯೆಯಂದು ಮಹಾರಥೋತ್ಸವ ನಡೆಯುತ್ತದೆ. ರಥೋತ್ಸವದ ಪ್ರಯುಕ್ತ ಮುಂಚಿತವಾಗಿಯೆ, ಅಂದರೆ ಪುಷ್ಯ ಮಾಸದ ಚತುರ್ಥಿಯಿಂದ ಮಠದಲ್ಲಿ ೪೧ ದಿನಗಳ ಕಾಲ ಮಹಾನಂದಾದೀಪಾರಾಧನೆಯ ಮಹೋತ್ಸವ ನಡೆದು, ಜಾತ್ರೆಯ ದಿನದಂದು ಕೊನೆಗೊಳ್ಳುತ್ತದೆ. ಮಾಘಮಾಸದ ಅಮವಾಸ್ಯೆಯ ದಿನ ರಥೋತ್ಸವ ನಡೆಯಲಿದ್ದು, ಅಂದು ಮಠದಲ್ಲಿ ನಡೆಯುವ ಕಾರ್ಯಕ್ರಮಗಳು ಇಂತಿವೆ.

೧. ಬ್ರಾಹ್ಮೀಮುಹೂರ್ತದಲ್ಲಿ ನಂದಾದೀಪ ಮುಕ್ತಾಯ

೨. ಬೆಳಿಗ್ಗೆ ಶ್ರೀ ತಾತನವರ ಗದ್ದುಗೆಗೆ ರುದ್ರಾಭಿಷೇಕ, ಸಹಸ್ರ ಬಿಲ್ವಾರ್ಚನೆ, ಮಹಾಗಣಾರಾಧನೆ

೩. ಸಾಯಂಕಾಲ ಮಹಾ ರಥೋತ್ಸವ

೪ ರಾತ್ರಿ ಭಜನೆ, ಶಿವ ಕೀರ್ತನೆ ಹಾಗೂ ಮಹಾ ದಾಸೋಹದ ವ್ಯವಸ್ಥೆ ಇರುತ್ತದೆ.

ಹರಗಿನಡೋಣಿ ಬುಗ್ಗಪ್ಪತಾತನವರ ಮಠದಲ್ಲಿ ನಡೆಯುವ ಆಚರಣೆಗಳೆಂದರೆ, ಪ್ರತಿ ವರ್ಷ ಆಶ್ವೀಜ ಶುದ್ಧ ದ್ವಾದಶಿಯಿಂದ, ಕಾರ್ತಿಕ ಶುದ್ಧ ಚೌತಿಯವರೆಗೆ ಪ್ರತಿದಿನ ಸಾಯಂಕಾಲ ಪುರಾಣ ಪ್ರವಚನವಿರುತ್ತದೆ. ಅಂದೇ ಮಠದಲ್ಲಿ ಗುರುಗಳಾದ ಲಕ್ಕ್ಮಿಪತೆಪ್ಪತಾತನವರ, ಕೊಳಗಲ್ಲಿನ ಭೀಮಲಿಂಗಪ್ಪ ತಾತನವರ ಹಾಗೂ ಬುಗ್ಗಾವಧೂತರ ಶಿಷ್ಯೆ ಹನುಮಂತಮ್ಮನವರ ಪುಣ್ಯಾರಾಧನೆ ನಡೆಯುತ್ತದೆ.

ಬುಗ್ಗಾವಧೂತರ ಆರಾಧನೆ ಪ್ರಯುಕ್ತ ಸಾಮೂಹಿಕ ವಿವಾಹಕಾರ್ಯಗಳು ಜರುಗಲಿದ್ದು, ಅನ್ನ ದಾಸೋಹದ ವ್ಯವಸ್ಥೆಯಿರುತ್ತದೆ. ಆರಾಧನಾ ಮಹೋತ್ಸವಕ್ಕೆ ಸರ್ವರೂ ಜಾತಿ-ಲಿಂಗ ತಾರತಮ್ಯವಿಲ್ಲದೆ ಭಾಗಿಯಾಗುತ್ತಾರೆ.

ಹೇರೂರು ವಿರುಪಾವಧೂತರ ಮಠ, ಕಂಪ್ಲಿ : ಇಲ್ಲಿ ಪ್ರತಿ ವರ್ಷ ಚೈತ್ರ ಬಹುಳ ಪಂಚಮಿಯಂದು ರಥೋತ್ಸವ ಜರುಗಲಿದ್ದು, ಪ್ರಯುಕ್ತ ಪುರಾಣ ಪ್ರವಚನ ನಡೆಯುತ್ತದೆ. ಅಂದು ನಡೆಯುವ ಕಾರ್ಯಕ್ರಮಗಳು ಇಂತಿವೆ.

೧. ರಥೋತ್ಸವದ ಮೊದಲ ದಿನ ಕಂಕಣ ಮತ್ತು ಕಳಸಧಾರಣ

೨. ಪಂಚಮಿಯಂದು ಬೆಳಿಗ್ಗೆ ಪ್ರಮುಖ ಬೀದಿಗಳಲ್ಲಿ ಕುಂಭೋತ್ಸವ

೩. ಸಾಯಂಕಾಲ ಮಹಾ ರಥೋತ್ಸವ

೪. ರಾತ್ರಿ ಉಯ್ಯಾಲೆ ಪೂಜೆ

ಜಾತ್ರೆಯ ವಿಶೇಷ : ಹೇರೂರು ಶ್ರೀ ವಿರುಪಣ್ಣತಾತನವರ ಭಜನಾ ಮಂಡಳಿಯವರಿಂದ ಬೆಳಿಗ್ಗೆ ಆರು ಗಂಟೆಯಿಂದ ಮಾರನೆಯ ದಿನ ಬೆಳಿಗ್ಗೆ ಆರು ಗಂಟೆಯವರೆಗೆ ಅಖಂಡ ಭಜನೆ ಏರ್ಪಡಿಸಲಾಗಿರುತ್ತದೆ.

ಅಖಂಡ ಭಜನೆಯಲ್ಲಿ ಮೆಟ್ರಿ, ಮುದ್ದಾಪುರ, ರಾಮಸಾಗರ, ದೇವಸಮುದ್ರ, ಚಿಕ್ಕ ಜಂತಕಲ್, ಕಂಪ್ಲಿ ಹಾಗು ಇತರೆ ಸುತ್ತ ಮುತ್ತಲಿನ ಗ್ರಾಮಗಳ ಭಜನಾ ಮಂಡಳಿಯವರು ಭಾಗವಹಿಸುತ್ತಾರೆ.

ಸಿಂಧಿಗೇರಿ ಗ್ರಾಮದ ಮಲ್ಲಪ್ಪತಾತನವರ ಪುಣ್ಯತಿಥಿಯ ನಿಮಿತ್ತ ಮಠದಲ್ಲಿ ನಡೆಯಲಿರುವ **ಕಾರ್ಯಕ್ರಮಗಳು :** ಪಾಲ್ಗುಣ ಶುದ್ಧ ದಶಮಿಯಂದು ರಥೋತ್ಸವ. ಆ ನಿಮಿತ್ತ ಸುಮಾರು ಹದಿನೈದು ದಿನಗಳ ಮೊದಲು ನಿತ್ಯ ಸಾಯಂಕಾಲ ಪುರಾಣ ಪ್ರವಚನ ನಡೆಯುತ್ತದೆ. ರಥೋತ್ಸವದ ಮಾರನೆಯ ದಿನ ವಗ್ಗರ ಆಟವಿರುತ್ತದೆ. ಈ ಆಟದಲ್ಲಿ ಕುದುರೆಕಾರರು ಭಾಗವಹಿಸುವುದು ವಿಶೇಷವಾಗಿರುತ್ತದೆ.

ಇದೇ ದಿನದಂದು ಮರುಸಮಾಧಿ ಹೊಂದಿದ ಬೈಲೂರು ಮಠದಲ್ಲಿಯೂ ರಥೋತ್ಸವ ಜರುಗುತ್ತದೆ. ಹಾಗೆಯೇ ಕರ್ಚೇಡು ಗ್ರಾಮದಲ್ಲಿ ಪ್ರತಿವರ್ಷ ಚೈತ್ರ ಮಾಸದ ಹಂಪಿಹುಣ್ಣಿವೆಗೆ ತಾತನವರ ಉತ್ಸವ ನಡೆಯುತ್ತದೆ. ಉತ್ಸವದ ಪ್ರಯುಕ್ತ ಸತತವಾಗಿ ಹನ್ನೆರಡು ದಿನ, ಸಾಯಂಕಾಲ ಪುರಾಣ ಪ್ರವಚನವಿರುತ್ತದೆ. ಪುರಾಣದ ಕೊನೆಯದಿನ ರಾತ್ರಿಭಜನೆ ಕಾರ್ಯಕ್ರಮವಿದ್ದು, ಮಾರನೆಯದಿನ ತಾತನವರ ಉತ್ಸವ ನಡೆಯುತ್ತದೆ.

ಹಂಪಿ ಹೇಮಕೂಟದ ಶ್ರೀ ಶಿವರಾಮಧೂತರ ಆಶ್ರಮದಲ್ಲಿ ನಡೆಯುವ ಆಚರಣೆಗಳು : ಪ್ರತಿವರ್ಷ ಚೈತ್ರಶುದ್ಧ ದವನದ ಹುಣ್ಣಿಮೆಯಿಂದ ಇದೇ ಚೈತ್ರ ಬಹುಳ ಚತುರ್ಥಿಯವರೆಗೆ ಶ್ರೀ ಸದ್ಗುರು ಶಿವರಾಮನಾಮ ಮಂತ್ರ ಭಜನಾ ಮಹೋತ್ಸವ ನಡೆಯುತ್ತದೆ. ಪ್ರತಿದಿನ ಬೆಳಿಗ್ಗೆ ಎಂಟು ಗಂಟೆಯಿಂದ ಹತ್ತು ಗಂಟೆಯವರೆಗೆ ವೇದಾಂತ ಪ್ರವಚನವಿದ್ದು, ವೇದಾಂತ ಉಪದೇಶ ನೀಡಲು ಅನೇಕ ಸಾಧು ಸದ್ಗುರುಗಳು ಆಗಮಿಸುತ್ತಾರೆ. ಜೊತೆಗೆ ಶಿವಪಂಚಾಕ್ಷರಿ ಮಂತ್ರದ ಪೂಜಾ ಕಾರ್ಯಕ್ರಮವಿರುತ್ತದೆ. ಹಾಗೆಯೇ ಪ್ರತಿದಿನ ಸಾಯಂಕಾಲ ಆರು ಗಂಟೆಯಿಂದ ಬೆಳಿಗ್ಗೆ ಆರು ಗಂಟೆಯವರೆಗೆ ಶ್ರೀರಾಮತಾರಕ ಮಂತ್ರದ ಅಖಂಡ ಭಜನಾ ಕಾರ್ಯಕ್ರಮವಿರುತ್ತದೆ. ಭಜನಾ ಕಾರ್ಯಕ್ರಮವು ಕೊಳಗಲ್ಲು, ಯರಂಗಳಿ, ಸಿದ್ದಮ್ಮನಹಳ್ಳಿ, ಕುರೆಕುಪ್ಪ, ಚಾಕುಬಂಡೆ, ಬೇವಿನಹಾಳ್, ಡೊನೆಕಲ್, ನಂಚರ್ಲ ಭಕ್ತರುಗಳಿಂದ ಜರುಗುವುದು. ಅಪಾರ ಭಕ್ತ ಜನತೆ ಈ ಉತ್ಸವದಲ್ಲಿ ಭಾಗವಹಿಸುತ್ತಿದ್ದು, ಸರ್ವರಿಗೂ ದಾಸೋಹದ ವ್ಯವಸ್ಥೆಯಿರುತ್ತದೆ.

ಪ್ರತಿವರ್ಷ ವೈಶಾಖ ಶುದ್ಧ ನವಮಿಯಿಂದ, ಇದೇ ವೈಶಾಖ ಬಹುಳ ಪ್ರತಿಪದದವರೆಗೆ ಶ್ರೀ ಸದ್ಗುರು ಶಿವರಾಮನಾಮ ಸಪ್ತಾಹದ ಕಾರ್ಯಕ್ರಮವಿರುತ್ತದೆ. ಈ ಕಾರ್ಯಕ್ರಮವು ಶಿವರಾಮವಧೂತರ ಶಿಷ್ಯ ಶಿವಶರಣಾನಂದವಧೂತರ ಆಜ್ಞಾನುಸಾರವಾಗಿ ನಡೆಯುತ್ತದೆ. ಕಾರ್ಯಕ್ರಮಕ್ಕೆ ಅನೇಕ ಸಾಧು-ಸಂತರು ಮತ್ತು ಭಕ್ತವೃಂದವು ಆಗಮಿಸುತ್ತದೆ. ಈ ಎಲ್ಲಾ ಕಾರ್ಯಕ್ರಮಗಳು ಇಂದಿನ ಪೀಠಾಧಿಕಾರಿಗಳಾದ ಶ್ರೀ ವಿದ್ಯಾನಂದ ಭಾರತಿಸ್ವಾಮಿಗಳ ಅಧ್ಯಕ್ಷತೆಯಲ್ಲಿ ನಡೆಯುವವು.

೬. ೩. ನಂಬಿಕೆಗಳು-ಸಂಪ್ರದಾಯಗಳು

ನಂಬಿಕೆಗಳು ಪ್ರಾಚೀನವಾದವುಗಳು. ಕಾಲದಿಂದ ಕಾಲಕ್ಕೆ ಜನರಿಂದ ಜನರಿಗೆ ಹರಿದು ಬರುತ್ತಾ ಸಂಪ್ರದಾಯಗಳಾಗಿವೆ. ಹಾಗಾಗಿ ನಮ್ಮ ಸಂಪ್ರದಾಯಗಳಿಗೆ ನಂಬಿಕೆಯೇ ಮೂಲ. ನಂಬಿಕೆ ಮತ್ತು ಸಂಪ್ರದಾಯಗಳ ರೂಪವನ್ನು ಹೊತ್ತು ನಿಂತಿರುವ ಶರಣರು, ಸಾಧು-ಸಂತರು, ಅವಧೂತರು, ಯೋಗಿಗಳು,

[illegible]

ಇಂದು ಇಲ್ಲದಿದ್ದರೂ ಅವರು ನಡೆದ ನಡೆ, ಆಡಿದ ನುಡಿಗಳಿಂದ, ಅವರ ಗದ್ದುಗೆ ಪ್ರಭಾವದಿಂದ ಭಕ್ತರ ಎಡರು-ತೊಡರುಗಳನ್ನು, ರೋಗ-ರುಜಿನಗಳನ್ನು ಪರಿಹರಿಸಿ, ಇಷ್ಟಾರ್ಥವನ್ನು ನೆರವೇರಿಸುತ್ತಾರೆಂಬ ನಂಬಿಕೆಗಳು ಜೀವಂತವಾಗಿವೆ.

ಇಂದಿನ ತಂತ್ರಜ್ಞಾನ ಯುಗದಲ್ಲಿಯೂ ಜನಪದರ ನಂಬಿಕೆಗಳು ಪ್ರಮುಖವಾಗಿವೆ. ಸಮಾಜದ ಎಲ್ಲಾ ವರ್ಗದ, ಎಲ್ಲಾ ಅಂತಸ್ತಿನ ಜನರಲ್ಲಿಯೂ ಜನಪದ ನಂಬಿಕೆಗಳಿವೆ. "ಅಪಾರ ಜನ ತಮ್ಮ ಬದುಕಿನಲ್ಲಿ ಈ ನಂಬಿಕೆಗಳನ್ನು ಸ್ವಾಗತಿಸಿ, ಪೋಷಿಸಿ, ಅವುಗಳಿಗೆ ಮತ್ತಷ್ಟು ಶಕ್ತಿಯನ್ನು ತುಂಬುತ್ತಾ ಬಂದಿದ್ದಾರೆ. ಜನಪದ ನಂಬಿಕೆಗಳು ಜನ ಜೀವನದಲ್ಲಿ ಹಾಸು ಹೊಕ್ಕಾಗಿ ಸೇರಿ ಅವರ ಬದುಕನ್ನೇ ನಿಯಂತ್ರಿಸಿ ನಿರ್ದೇಶಿಸುತ್ತಿರುವ ಅವರ್ಣನೀಯ ಶಕ್ತಿಯಾಗಿ ಪರಿಣಮಿಸಿವೆ. ದಿನದಿನಕ್ಕೆ ಮೊನಚುತನವನ್ನು ಪಡೆದು ಜನಜೀವನದಲ್ಲಿ ಆಳವಾಗಿ ಬೇರುಬಿಟ್ಟಿವೆ. ಜನರ ಬದುಕಿಗೆ ವಜ್ರ ಕವಚವಾಗಿವೆ."[೪]

ನಂಬಿಕೆಗಳೇ ಸಂಪ್ರದಾಯಗಳ ಮೂಲ. "ನಂಬಿಕೆ-ಸಂಪ್ರದಾಯ ಎರಡು ಕವಲಾಗಿ ಒಡೆಯುತ್ತದೆ. ಒಂದು ರಾಜಕೀಯ, ಮತ್ತೊಂದು ಸಾಮಾಜಿಕ-ಧಾರ್ಮಿಕ. ಮೊದಲನೆಯದು ಕಾನೂನುಶಾಸ್ತ್ರವಾಗಿ ವಿಕಾಸಗೊಂಡಿದೆ. ಎರಡನೆಯದು ನೀತಿಶಾಸ್ತ್ರವಾಗಿ ಅರಳುತ್ತದೆ. ಗುರು-ಹಿರಿಯರು, ತಂದೆ-ಮಕ್ಕಳು ಹಾಗೂ ವ್ಯವಹಾರಗಳಿಗೆ ಸೇರುವ ಸಂಪ್ರದಾಯಗಳು ನೈತಿಕ ಕ್ಷೇತ್ರದ ಪರಿಧಿಯಲ್ಲಿ ಸಮಾವೇಶಗೊಳ್ಳುತ್ತವೆ. ಈ ನಂಬಿಕೆ ಸಂಪ್ರದಾಯಗಳು ಸಾಮಾಜಿಕ ಮತ್ತು ಕೌಟುಂಬಿಕ ಮೌಲ್ಯಗಳು ನಂಬಿಕೆಗಳ ಮೂಲಕ ವ್ಯಕ್ತವಾಗುತ್ತವೆ. ಅವು ಸಮಾಜದ ಅಲಿಖಿತ ಶಾಸನಗಳು. ಇವು ಲಿಖಿತ ಶಾಸನಗಳಿಗಿಂತ ಬೆಲೆಯುಳ್ಳವು. ಅವುಗಳ ಹಿಂದೆ ದೀರ್ಘಪರಂಪರೆಯಿರುವುದರಿಂದ ಅನೇಕ ಪೀಳಿಗೆಗಳ ಮೆಚ್ಚುಗೆಗೆ ಪಾತ್ರವಾಗಿರುವುದರಿಂದ ಅವುಗಳ ಬೆಲೆ ಅಮೇಯವಾದುದು. ಮನುಧರ್ಮಶಾಸ್ತ್ರ ಯಾವುದು? "ನಂಬಿಕೆಗಳ ಆ ಸಂಗ್ರಹ ಸಮರ್ಪಕವಾಗಿಲ್ಲದಿರಬಹುದು. ಅದರಲ್ಲಿ ನ್ಯೂನ್ಯತೆಗಳೂ ಇರಬಹುದು. ಪಕ್ಷಪಾತದಿಂದ ಕೂಡಿರಬಹುದು. ನಂಬಿಕೆಗಳು ನಿಂತ ಮಡುವಲ್ಲ. ಹರಿಯುವ ನದಿ ಎನ್ನುವುದನ್ನು ಗಮನಿಸಬೇಕು. ಅವೂ ಕಾಲಕ್ಕೆ ತಕ್ಕಂತೆ ಬದಲಾಯಿಸುತ್ತವೆ. ಇರಲಿ, ಸಮಾಜದಲ್ಲಿ ನೀತಿ ಧರ್ಮ ಉಳಿದಿರುವುದು ಈ ನಂಬಿಕೆಗಳಿಂದ "[೫] ಎಂಬುದು ಡಾ.ದೇ.ಜವರೇಗೌಡರ ಅಭಿಪ್ರಾಯ. ನಂಬಿಕೆ-ಸಂಪ್ರದಾಯಗಳ ರೂಪವನ್ನು ಹೊತ್ತುನಿಂತ ಹಲವಾರು ಯೋಗಿಗಳಲ್ಲಿ ಅವಧೂತರು ಮುಖ್ಯರು. ಇಂದು ಅವರಿಲ್ಲದಿದ್ದರೂ, ಅವರ ಮೇಲಿನ ನಂಬಿಕೆ ಮತ್ತು ಸಂಪ್ರಾದಯಗಳು ಜೀವಂತವಾಗಿವೆ. ಆ ನಂಬಿಕೆ ಮತ್ತು ಸಂಪ್ರದಾಯಗಳ ಆಚರಣೆಯಿಂದಲೇ ನಾವುಗಳು ಕಷ್ಟ-ಕಾರ್ಪಣ್ಯಗಳಿಂದ, ರೋಗ-ರುಜಿನಗಳಿಂದ ಮುಕ್ತರಾಗಿದ್ದು, ಸುಖ-ಶಾಂತಿ ನೆಮ್ಮದಿಗಳು, ಮನೆಗೆ, ಗ್ರಾಮಕ್ಕೆ, ನಾಡಿಗೆ ಲಭಿಸಿವೆ ಎಂಬುದು ಭಕ್ತರ ನಂಬಿಕೆ.

೧. ಅವಧೂತರನ್ನು ನಂಬಿರುವ ಭಕ್ತ ಜನತೆ ತಮ್ಮ ದೈನಂದಿನ ಸುಖ-ದುಃಖಗಳಿಗೆ ತಾತ (ಅವಧೂತ)ನೇ ಕಾರಣನೆಂದು ನಂಬಿರುತ್ತಾರೆ. ತಾವು ಏನೇ ಕೆಲಸ ಕೈಗೊಂಡಾಗ, ಎಲ್ಲಿಗೇ ಹೋಗಲು ಸಿದ್ಧರಾದಾಗ, ಅವರ ಮಠಕ್ಕೆ ಹೋಗಿ, ಮೂರ್ತಿ ಮತ್ತು ಸಮಾಧಿಗೆ ಪ್ರದಕ್ಷಿಣೆ ಹಾಕಿ ನಮಸ್ಕರಿಸಿ ಹೋಗುತ್ತಾರೆ. ಈ ನಂಬಿಕೆ ಇರುವುದರಿಂದ ನಮಗೆ ಯಾವುದೇ ತೊಡಕುಗಳು ಬರುವುದಿಲ್ಲವೆಂದೂ ಬಂದರೂ ಅವುಗಳನ್ನೆಲ್ಲಾ ತಾತನವರೇ ನಿವಾರಣೆ ಮಾಡುತ್ತಾರೆಂಬ ನಂಬಿಕೆ ಭಕ್ತರಲ್ಲಿದೆ.

೨. ರೋಗ ರುಜಿನಗಳು ಬಂದರೆ, ದೆವ್ವ-ಪೀಡೆಯಂಥ ಗಾಳಿ ಸೋಂಕಿದ್ದವರು ತಾತನವರುಗಳ ಮಠದಲ್ಲಿ ಇಂತಿಷ್ಟು ರಾತ್ರಿಗಳು ಮಲಗಿದರೆ ರೋಗಗಳೆಲ್ಲಾ ಪರಿಹಾರವಾಗುವವು ಎನ್ನುವ ನಂಬಿಕೆಯಿದೆ. ಈ ನಂಬಿಕೆಯ ಹಿನ್ನೆಲೆಯಲ್ಲಿ ಹಲವಾರು ಮಠಗಳಲ್ಲಿ, ಎಲ್ಲೆಲ್ಲಿಂದಲೋ ಬಂದು ಮಠದಲ್ಲಿ ನೆಲೆಸಿರುವುದನ್ನು ಕಾಣಬಹುದು. ಮುಖ್ಯವಾಗಿ ಇಂಥವರು ಅಮವಾಸ್ಯೆ ಪೂಜೆಗಂತೂ ತಪ್ಪದೇ ಬಂದು ಅಂದು ರಾತ್ರಿ ಮಠದಲ್ಲಿ ತಂಗುತ್ತಾರೆ.

೩ . ಹೊಲ, ಮನೆ, ವಾಹನ, ವೈವಾಹಿಕ ಸಂಬಂಧ, ವ್ಯವಹಾರ, ವಿದ್ಯಾಭ್ಯಾಸ, ಹೀಗೆ ಯಾವುದೇ ಹೊಸ ವ್ಯವಹಾರ ಮತ್ತು ಹೊಸ ಸಂಬಂಧ ಗೊತ್ತು ಪಡಿಸುವಾಗ ತಾತನವರ ಮಠಗಳಿಗೆ ಹೋಗಿ ಮೂರ್ತಿಯ ಮತ್ತು ಸಮಾಧಿಯ ದರ್ಶನ ಪಡೆದು ವ್ಯವಹರಿಸಿದರೆ ಒಳ್ಳೆಯದಾಗುತ್ತದೆ ಎಂಬ ನಂಬಿಕೆ ಇದೆ.

೪. ಮಳೆ ಬಾರದಿದ್ದರೆ, ಗ್ರಾಮಕ್ಕೆ ಯಾವುದಾದರೂ ರೋಗ ಸೋಂಕಿದರೆ, ಅವಧೂತರ ಪುರಾಣವನ್ನು ಪ್ರವಚಿಸುತ್ತಾರೆ. ಮಠಗಳಲ್ಲಿ, ದೇವಾಲಯಗಳಲ್ಲಿ, ಮನೆಯ ಮುಂದಿನ ಜಗುಲಿಯ ಮೇಲೆ ಇಂಥ ಪಾರಾಯಣದ ಕಾರ್ಯಕ್ರಮವಿರುತ್ತದೆ. ಹೀಗೆ ಮಾಡಿದರೆ ಮಳೆ ಬರುತ್ತದೆ. ಹಾಗೆಯೇ ಊರಿಗೆ ಸೋಂಕಿದ ರೋಗ ಪರಿಹಾರವಾಗುತ್ತದೆ ಎಂಬ ನಂಬಿಕೆಯಿದೆ. ಹೀಗೆ ಗ್ರಾಮಕ್ಕೆ ಬಂದ ಸಾಮೂಹಿಕ ಸಮಸ್ಯೆಯನ್ನು ಭಕ್ತರು ಪುರಾಣ ಪಾರಾಯಣ ಮಾಡುವುದರ ಮುಖಾಂತರ ಬಗೆಹರಿಸಿಕೊಳ್ಳುತ್ತಾರೆ.

೫. ಉತ್ತಮ ಮಳೆ ಬೆಳೆಯಾದರೆ, ಮನೆಗೆ, ಮನೆತನಕ್ಕೆ, ಮಕ್ಕಳಿಗೆ, ಬಂಧು-ಬಾಂಧವರಿಗೆ ಒಳ್ಳೆಯದಾದರೆ, ತಮ್ಮ ಇಷ್ಟಾರ್ಥಗಳು ನೆರವೇರಿದರೆ, ತಾತನವರ ಅನುಗ್ರಹದಿಂದಲೇ ನಮಗೆ ಒಳ್ಳೆಯದಾಯಿತೆಂದು, ಹರಕೆಯನ್ನು ಹೊತ್ತುವರು ಧನ-ಧಾನ್ಯದ ರೂಪದಲ್ಲಿ ಕಾಣಿಕೆ ಕೊಡುವ ನಂಬಿಕೆಯಿದೆ. ಹಾಗೆಯೇ ಮಠದಲ್ಲಿ ನಡೆಯುವ ದಾಸೋಹದ ಖರ್ಚನ್ನು ಭರಿಸುವ ಪದ್ಧತಿಯೂ ಇದೆ. ಹೆಚ್ಚಾಗಿ ಪ್ರತಿ ಅಮವಾಸ್ಯೆಗೆ ಬೇಡಿ ಕೊಂಡಂತೆ ಭಕ್ತರು ಬಂದು ತಮ್ಮ ಸೇವೆ ಮತ್ತು ಇಷ್ಟಾರ್ಥವನ್ನು ನೆರವೇರಿಸುತ್ತಾರೆ.

೬. ತಾತನು ಹುಟ್ಟಿದ ಊರಿನಲ್ಲಿ, ಸಂಚಾರ ಮಾಡಿದ ಸ್ಥಳಗಳಲ್ಲಿ, ಸಮಾಧಿ ಹೊಂದಿದ ಗ್ರಾಮದಲ್ಲಿ ವಾಸಿಸುವ ಭಕ್ತರು ತಮ್ಮ ಮನೆಗಳಲ್ಲಿ ತಾತನವರ ಫೋಟೋವನ್ನು ನಿತ್ಯವೂ ಪೂಜಿಸುತ್ತಾರೆ. ಆಪ್ತ ಭಕ್ತರುಗಳು ಎಲ್ಲೇ ಇದ್ದರೂ ತಲಅವಧೂತರ ಫೋಟೋವನ್ನು ತಮ್ಮಮನೆಗಳಲ್ಲಿಟ್ಟುಕೊಂಡು ಪೂಜಿಸುವ ನಂಬಿಕೆ ಇದೆ.

೭. ತಾತನವರು ವಾಸಿಸಿರುವ, ಸಂಚಾರ ಮಾಡಿರುವ, ಸಮಾಧಿಯಾಗಿರುವ ಸ್ಥಳಗಳಲ್ಲಿನ ಭಕ್ತರು ತಮ್ಮ ಮಕ್ಕಳು-ಮೊಮ್ಮಕ್ಕಳಿಗೆ ಅವರ ಹೆಸರುಗಳನ್ನು ಇಡುವ ಪದ್ಧತಿಯಿದೆ. ಚೇಳಗುರಿಕೆ ಎರ್ರಿತಾತನವರ ಭಕ್ತರುಗಳ ಮನೆಯಲ್ಲಿ ಒಬ್ಬರಿಗೆ ಇಲ್ಲವೆ ಇಬ್ಬರಿಗೆ ತಾತನವರ ಹೆಸರಿಟ್ಟಿರುವುದನ್ನು ಕಾಣಬಹುದು. ಗಂಡು ಮಗು ವಾಗಿದ್ದರೆ ಎರಿಸ್ವಾಮಿ, ಯರಣ್ಣ, ಯರಪ್ಪನೆಂದೂ, ಹೆಣ್ಣು ಮಕ್ಕಳಿಗೆ ಯರಮ್ಮನೆಂದು ನಾಮಕರಣ ಮಾಡಿರು ತ್ತಾರೆ. ದಮ್ಮೂರು ವೆಂಕಪ್ಪತಾತನವರ ಭಕ್ತರ ಮನೆಗಳಲ್ಲಿ ಯಂಕಪ್ಪ, ವೆಂಕಟಪ್ಪ, ವೆಂಕಟೇಶನೆಂದೂ, ಹೆಣ್ಣು ಮಕ್ಕಳಾದರೆ ಯಂಕಮ್ಮ, ವೆಂಕಮ್ಮನೆಂದು ಹೆಸರಿಟ್ಟಿದ್ದಾರೆ. ಹಾಗೆಯೇ ಎಮ್ಮಿಗನೂರಿನ ಜಡೆಪ್ಪ ತಾತನವರ ಭಕ್ತರ ಮನೆಯಲ್ಲಿ ಜಡೆಪ್ಪ, ಜಡಿಯಪ್ಪ, ಜಡೇಸ್ವಾಮಿ, ಜಡಿಯಣ್ಣ, ಜೆಡಿಯಮ್ಮ, ಜಡೆಮ್ಮ ನೆಂದು ಹೆಸರಿಟ್ಟಿದ್ದಾರೆ. ಹಾಗೆಯೇ ಆಯಾ ಪ್ರದೇಶದ ಭಕ್ತರ ಮನೆಯಲ್ಲಿ ಅಲ್ಲಿನ ತಾತನವರ ಹೆಸರಿಟ್ಟಿರುತ್ತಾರೆ. ಉದಾ. ಗಾದಿಲಿಂಗಪ್ಪ, ಗಾದೆಪ್ಪ, ಸಿದ್ದಪ್ಪ, ಸಿದ್ದೇಶ, ಮಲ್ಲಪ್ಪ, ಮಲ್ಲೇಶ, ಗಿರಿಯಪ್ಪ, ಸುಡುಗಾಡಪ್ಪ,

[illegible]

ಗಾದಿಲಿಂಗಮ್ಮ, ಲಿಂಗಮ್ಮ, ಸಿದ್ದಮ್ಮ, ಮಲ್ಲಮ್ಮನೆಂದೂ ಹೆಸರಿಟ್ಟಿದ್ದು, ಈ ಸಂಪ್ರದಾಯ ಈಗಲೂ ಇದೆ.

೮. ಹೊಸದಾಗಿ ಮನೆ ಕಟ್ಟಿಸಿದಾಗ ಅವಧೂತರ ಹೆಸರನ್ನು ಮನೆಗಳಿಗೂ ಕೆಲವು ಭಕ್ತರು ಇಟ್ಟಿರುತ್ತಾರೆ. ಉದಾ. ಎರಿತಾತ ನಿಲಯ, ಎರಿಬಸವ ನಿಲಯ, ಜಡಿತಾತ ನಿಲಯ.

೯. ಹೊಸದಾಗಿ ವಾಹನಗಳನ್ನು ಕೊಂಡಾಗ ಅವುಗಳ ಮೇಲೂ ತಾತನವರ ಹೆಸರನ್ನು ಬರೆಸುತ್ತಾರೆ. ಲಾರಿ, ಕಾರು, ಬಸ್ಸು, ಬೈಕ್‌ಗಳ ಮೇಲೆ ಎರಿಸ್ವಾಮಿ ಪ್ರಸನ್ನ, ಜಡಿತಾತ ಪ್ರಸನ್ನ, ಅವಧೂತ ಪ್ರಸನ್ನ ಎಂದು ವಿವಿಧ ರೀತಿಯಾಗಿ ಬರೆಸಿರುವುದನ್ನು ಕಾಣಬಹುದು.

೧೦. ವ್ಯಾಪಾರ-ವ್ಯವಹಾರದಲ್ಲೂ ಅವಧೂತರ ಹೆಸರುಗಳನ್ನು ಬಳಸಿಕೊಂಡಿರುತ್ತಾರೆ.

೧೧. ಅವಧೂತರ ಮೇಲಿನ ಭಕ್ತಿ-ಗೌರವದಿಂದ ಮಠಗಳಲ್ಲಿ ನಡೆಯುವ ವಿಶೇಷ ಪೂಜೆ, ಹಬ್ಬ, ಜಾತ್ರೆ, ಉತ್ಸವಗಳಿಗೆ ಭಕ್ತರು ಎಲ್ಲೇ ಇದ್ದರೂ ಇಂಥ ಕಾರ್ಯಕ್ರಮಗಳಿಗೆ ಬಂದು ಭಾಗಿಯಾಗುವ ಸಂಪ್ರದಾಯವಿದೆ.

೧೨. ಸ್ಥಳೀಯರು ದಿನಂಪ್ರತಿ ಮಠದಲ್ಲಿ ನಡೆಯುವ ಪೂಜಾ ಸಮಯಕ್ಕೆ ಸರಿಯಾಗಿ ಬಂದು ತಾತನವರಿಗೆ ಹಣ್ಣು, ಕಾಯಿ, ಕರ್ಪೂರ ಅರ್ಪಿಸಿ, ತೀರ್ಥ ಪ್ರಸಾದ ಸ್ವೀಕರಿಸುವ ಪದ್ಧತಿಯಿದೆ.

ಹೀಗೆ ವರ್ಷದುದ್ದಕ್ಕೂ ಧಾರ್ಮಿಕ ಆಚರಣೆಗಳಿಂದ, ಧಾರ್ಮಿಕ ವಿಧಿವಿಧಾನಗಳಿಂದ ಕೂಡಿರುವ ಅವಧೂತರ ಮಠಗಳು ಮತ್ತು ಅಲ್ಲಿ ನಡೆಯುವ ಆಚಾರ-ವಿಚಾರಗಳು ನಂಬಿಕೆಯ ಪ್ರತೀಕವಾಗಿವೆ. ''ಜನಪದರ ಬದುಕಿನಲ್ಲಿ ಆಚರಣೆ ಅವಿಭಾಜ್ಯ ಅಂಗವಾಗಿದೆ. ಅದು ಕಾಲಕಾಲಕ್ಕೆ ತಕ್ಕಹಾಗೆ ಬದಲಾವಣೆಗೊಳ್ಳುತ್ತಾ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ನಿರಂತರವಾಗಿ ಸಾಗಿ ಬಂದಿದೆ. ಮನುಷ್ಯ ತಾನು ನಡೆದುಕೊಂಡು ಬಂದ ವಿಶಿಷ್ಟ ಆಚರಣೆಗಳ ಬಗ್ಗೆ ಹೊಂದಿದ ಶ್ರದ್ಧೆ, ಉತ್ಸಾಹ ನಂಬಿಕೆಗಳು ಸಂಪ್ರದಾಯದ ಸೃಷ್ಟಿಗೆ ಕಾರಣವಾದವು.''[೬] ಒಟ್ಟಾರೆ ನಂಬಿಕೆ ಮತ್ತು ಸಂಪ್ರದಾಯಗಳು ಭಕ್ತರ ಬದುಕನ್ನು ರೂಪಿಸಿ ನಿಯಂತ್ರಿಸುವಂಥವುಗಳಾಗಿರುವುದನ್ನು ಕಾಣಬಹುದು.

೬. ೪. ಪವಾಡಗಳ ಆಶಯಗಳು

ಜಗತ್ತಿನ ಎಲ್ಲಾ ಧಾರ್ಮಿಕ ಮಹಾತ್ಮರ ಬಗ್ಗೆ ಬಂದಿರುವ ಕೃತಿಗಳಲ್ಲಿ ಪವಾಡದ ಕಥೆಗಳಿವೆ. ಧರ್ಮ ಮತ್ತು ಧಾರ್ಮಿಕ ಮಹಾ ಪುರುಷರನ್ನು ನಂಬಿರುವುದಕ್ಕೆ ಪ್ರತೀಕವಾಗಿ ಧಾರ್ಮಿಕ ಸಾಹಿತ್ಯದ ಅವಿಭಾಜ್ಯ ಅಂಗವಾಗಿ ಪವಾಡಗಳು ಬೆಳೆದಿವೆ. ಆ ಕೃತಿಗಳ ಹೆಚ್ಚಿನ ಭಾಗವನ್ನು ಆಕ್ರಮಿಸಿರುವ ಅಂಶವೆ ಅವರು ಮಾಡಿದ್ದರೆನ್ನಲಾದ ಪವಾಡಗಳು. ಕ್ರಿಸ್ತ, ಬುದ್ಧ, ಮಹಾವೀರ, ಪೈಗಂಬರ್, ಶಂಕರಾಚಾರ್ಯ, ಬಸವೇಶ್ವರ, ಕನಕದಾಸ, ಪುರಂದರದಾಸ ಹೀಗೆ ಅನೇಕ ಮಹಾತ್ಮರು ಪವಾಡಗಳನ್ನು ಮಾಡಿದ್ದಾರೆಂದು ಅವರ ಬಗ್ಗೆ ಬಂದಿರುವ ಸಾಹಿತ್ಯದಲ್ಲಿ ವರ್ಣಿತವಾಗಿರುವುದನ್ನು ಕಾಣಬಹುದು.

ಭಾರತೀಯ ಯೋಗಶಾಸ್ತ್ರಜ್ಞರು ಹಠಯೋಗದಂತಹ ಸಾಧನೆಯಿಂದ ಹಂತಹಂತವಾಗಿ ಅಣಿಮಾದಿ ಅಷ್ಟೈಶ್ವರ್ಯಗಳನ್ನು, ಪವಾಡಗಳಂತಹ ಸಿದ್ಧಿಗಳನ್ನು ಪಡೆದುಕೊಳ್ಳಬಹುದೆಂದು ಹೇಳಿದ್ದಾರೆ. ನಿತ್ಯಪೂ

ವ್ಯಾಯಾಮ ಮಾಡುವ ವ್ಯಕ್ತಿ ದೀರ್ಘಾಯುಷಿಯೂ, ನಿರೋಗಿಯೂ ಆಗಿರುತ್ತಾನೆ. ಆದರೆ ಅದಕ್ಕಿಂತಲೂ ಹೆಚ್ಚಿನ ಪ್ರಯೋಜನ ಯೋಗ ಸಾಧನೆಯಿಂದಾಗುತ್ತದೆ. ಯೋಗ ಒಂದು ಪರಮಾದ್ಭುತ ವಿಜ್ಞಾನ. ಸಹಸ್ರಾರು ವರ್ಷಗಳ ಹಿಂದೆ ಪತಂಜಲಿ ಮಹರ್ಷಿಗಳು ಜಗತ್ತಿಗೆ ನೀಡಿದ ಅತ್ಯದ್ಭುತ ಕೊಡುಗೆಯಾಗಿದೆ. ಹಠಯೋಗ ದಂತಹ ಸಾಧನೆಯಿಂದ ಸಿದ್ಧಿಸಿಕೊಂಡ ಪವಾಡಗಳನ್ನು ದೈವೀಸಂಭೂತರೆನಿಸಿದ, ದೈವ ಪ್ರೀತಿಗೆ ಪಾತ್ರರಾದ ವ್ಯಕ್ತಿಗಳು ಮಾತ್ರ ಪ್ರಯೋಗಿಸುವಂಥವುಗಳು. ಇಂಥ ವ್ಯಕ್ತಿಗಳು ಸಮಾಜದ ಪ್ರತಿವರ್ಗದಿಂದಲೂ ಪ್ರತಿ ಧರ್ಮದವರಿಂದಲೂ ಗೌರವ ಮನ್ನಣೆ ಪಡೆದಿದ್ದು, ಇವರ ಪವಾಡಗಳು ಯಾವುದೇ ಪೂರ್ವ ಸಿದ್ಧತೆಯಿಲ್ಲದೆ, ಭಕ್ತರ ವೈಯಕ್ತಿಕ ಮತ್ತು ಸಾಮೂಹಿಕ ಸಮಸ್ಯೆಗಳನ್ನು ಬಗೆಹರಿಸಲು ಬಳಸುವಂಥವುಗಳು. ಇವುಗಳಲ್ಲಿ ಯಾವುದೇ ರೀತಿಯ ಸ್ವಾರ್ಥವಾಗಲಿ, ಮೋಸವಾಗಲಿ, ಇರುವುದಿಲ್ಲ. ದುಃಖಿತರ, ನೊಂದವರ, ರೋಗ ರುಜಿನಗಳಿಗೆ ಒಳಗಾದವರ, ಮತ್ತು ಗ್ರಾಮಗಳಿಗೆ ಸಾಂಕ್ರಾಮಿಕದಂತಹ ಮಾರಿರೋಗಗಳು ತಗಲಿದಾಗ ಭಕ್ತರ ಮತ್ತು ಗ್ರಾಮದ ರಕ್ಷಣೆಗಾಗಿ ಬಳಸಿರುವಂಥವುಗಳು. ಅನಿಷ್ಟ ಪರಿಹಾರ, ಗಾಳಿಸೋಂಕು, ನೀರಿನ ಬವಣೆ, ಬರಗಾಲ, ಇಂಥವುಗಳಿಂದ ಬದುಕು ಬವಣೆಯಾದಾಗ ಲೋಕಹಿತಕ್ಕಾಗಿ, ತಾವು ಸಾಧಿಸಿದ ಶಕ್ತಿಯಿಂದ ಪವಾಡಗಳನ್ನು ಮಾಡಿರುವುದುಂಟು.

ಒಟ್ಟಾರೆ ಧಾರ್ಮಿಕ ಮಹಾಪುರುಷರು ಮಾಡಿದರೆನ್ನಲಾದ ಪವಾಡಕಥೆಗಳು ಸಾಮಾನ್ಯ ಜನತೆಯಲ್ಲಿ ಆಶ್ಚರ್ಯವನ್ನುಂಟು ಮಾಡುತ್ತವೆ. ಜೊತೆಗೆ ಆ ಮಹಾತ್ಮರ ಬಗ್ಗೆ ಆಳವಾದ ಭಕ್ತಿ ಗೌರವಗಳನ್ನು ಮೂಡಿಸುತ್ತವೆ. ಸಾರ್ವಜನಿಕ ಕ್ಷೇಮ, ಗ್ರಾಮದ ಆರೋಗ್ಯ, ಸಾಮಾಜಿಕ ನೆಮ್ಮದಿ ತರಲು ಶ್ರಮಿಸಿದ ಮಹಾತ್ಮರು, ಪುರಾಣಕ್ಕೆ ವಸ್ತುವಾದಾಗ ಅವರು ಮಾಡಿದರೆನ್ನಲಾದ, ಭಕ್ತರ ಬಾಯಲ್ಲಿ ನಂಬಿಕೆಯಾಗಿದ್ದ ಪವಾಡ'ಕಥೆಗಳು ಲಿಖಿತ ರೂಪ ಪಡೆದವು. "ಗಹನವಾದ, ಜಟಿಲವಾದ ಧಾರ್ಮಿಕ ತತ್ವಗಳನ್ನು ಸಾಮಾನ್ಯ ಜನರಿಗೆ ಸುಲಭವಾಗಿ ತಿಳಿಸಿಕೊಡಲು ಪುರಾಣಕಾರರು ಕೆಲವೆಡೆ ಸಾಂಕೇತಿಕ ದೃಷ್ಟಿಯನ್ನಿರಿಸಿಕೊಂಡು ಪವಾಡ ಕಥೆ ಬಣ್ಣಿಸಿದರೆ, ಮತ್ತೆ ಕೆಲವೆಡೆ ಅನ್ಯ ಮತದ ಮಹಾಪುರುಷರ ಕುರಿತಿದ್ದ ಪವಾಡಕಥೆಗಳ ಪ್ರೇರಣೆಯಿಂದ ಇಲ್ಲವೆ ಅದರಲ್ಲಿನ ಆಕರ್ಷಕವೆನಿಸಿದ ಘಟನೆಗಳನ್ನೆತ್ತಿಕೊಂಡು ತಮ್ಮ ಪುರಾಣದ ನಾಯಕನ ಚರಿತ್ರೆಯಲ್ಲಿ ಹೆಣೆದಿದ್ದಾರೆ."[೬] ಈ ಕೃತಿಗಳಲ್ಲಿ ಪವಾಡಗಳ ವರ್ಣನೆಯ ಉದ್ದೇಶವೆಂದರೆ,

೧. ಸಾಮಾನ್ಯ ಜನತೆಗೂ ಮಹಾನುಭಾವಿಗಳ ತತ್ವಗಳನ್ನು ಸರಳಗೊಳಿಸಿ ತಿಳಿಸುವುದು

೨. ಮಹಾನುಭಾವಿಗಳ ಮಹಿಮೆಯನ್ನು, ಅದ್ಭುತ ಶಕ್ತಿಯನ್ನು ತಿಳಿಯಪಡಿಸುವುದು

೩. ಅವರ ತತ್ವಗಳನ್ನು ಆಚರಿಸುವುದರಿಂದ ದೊರೆಯುವ ಸತ್ಫಲಗಳನ್ನು ತಿಳಿಯಪಡಿಸುವುದು

ಹೀಗೆ ಧಾರ್ಮಿಕ ತತ್ವಗಳ ಬಗ್ಗೆ, ಆಚರಣೆಗಳ ಬಗ್ಗೆ ಶ್ರದ್ಧೆ ಮೂಡಿಸಿ, ಮಹಾತ್ಮರನ್ನು ನಂಬಿದವರಿಗೆ ಯಾವಾಗಲೂ ಒಳ್ಳೆಯದಾಗುತ್ತದೆಂಬ ನಂಬಿಕೆಯನ್ನು ಬಲಪಡಿಸುವುದು ಈ ಪವಾಡಗಳ ವರ್ಣನೆಯ ಉದ್ದೇಶ. ನಂಬಿದ ಚೇತನಗಳು ಕಣ್ಮರೆಯಾದರೂ ನಂಬಿದವರನ್ನು ಅವರು ಕೈಬಿಡುವುದಿಲ್ಲವೆಂದು ತಿಳಿದ ಭಕ್ತರು ಅವರ ಪವಾಡಕಥೆಗಳನ್ನು ಓದಿ, ಇಲ್ಲವೆ ಕೇಳಿ ಆರಾಧಿಸುತ್ತಾರೆ. "ಇಂಥ ಪವಾಡಗಳನ್ನು ನಡೆಸು

ವವರು ಜನಸಾಮಾನ್ಯರ ಕಣ್ಣಿನಲ್ಲಿ ಮಹಾತ್ಮರು, ಸಾಧು ಸಂತರು, ಶರಣರು, ಋಷಿಮುನಿಗಳು, ಅತಿಮಾನುಷ ವ್ಯಕ್ತಿಗಳು, ಪವಾಡ ಪುರುಷರಾಗಿ ಜನಪದರ ಕಣ್ಣಿಲ್ಲಿ ಮಹಾತ್ಮರಾಗಿರುತ್ತಾರೆ."[೮]

ಕನ್ನಡನಾಡಿನಲ್ಲಿ ಬಸವಣ್ಣ, ಸಿದ್ಧರಾಮ, ಕನಕದಾಸ, ಪುರಂದರದಾಸ, ಬಾಲಲೀಲಾ ಮಹಾಂತ ಶಿವಯೋಗಿಗಳು, ಹಾಗೂ ಅನೇಕ ಯೋಗಿಗಳು, ಆರೂಢರು,ಅವಧೂತರು ಪವಾಡಗಳನ್ನು ಮಾಡಿರುವ ಬಗ್ಗೆ ಕೃತಿಗಳಲ್ಲಿ ವರ್ಣಿತವಾಗಿದೆ. ಪವಾಡಗಳನ್ನು ಕುರಿತು ವರ್ಣಿಸಿದ ಮೊದಲ ಕವಿಯೆಂದರೆ ಹರಿಹರ. ಶರಣರನ್ನು ಕುರಿತು ಅನೇಕ ಕಥೆ, ಐತಿಹ್ಯಗಳನ್ನು ಆಧಾರವಾಗಿಟ್ಟುಕೊಂಡು ಪವಾಡಕಥೆಗಳಾಗಿ ವರ್ಣಿಸಿದ್ದಾನೆ. ನಂತರ ಪಾಲ್ಕುರಿಕೆ ಸೋಮನಾಥ, ಭೀಮಕವಿ, ಲಕ್ಕಣ್ಣ ದಂಡೇಶ, ಮುಂತಾದವರು ಪುರಾಣರೂಪದ ತಮ್ಮ ಕಾವ್ಯಗಳಲ್ಲಿ ಪವಾಡಗಳನ್ನು ವರ್ಣಿಸಿದ್ದಾರೆ.

ಪವಾಡ ಕಥೆಗಳು ಮೊದಲು ವರ್ಣಿತವಾಗಿರುವುದು ಜನಪದ ಕಥೆ ಮತ್ತು ಜಾನಪದ ಹಾಡುಗಳಲ್ಲಿ. ಇಂಥ ಕಥೆ ಮತ್ತು ಹಾಡುಗಳನ್ನು ಕೇಳಿರುವ ಜನತೆ ಪವಾಡಗಳಲ್ಲಿ ನಂಬಿಕೆ ಇಡುವುದು ಸಹಜ. ಇವುಗಳಲ್ಲಿ ಜನಪದರ ರೀತಿ, ನೀತಿ, ನಂಬಿಕೆಗಳೇ ಅಡಕವಾಗಿದ್ದು, ಪವಾಡಗಳನ್ನು ಮಾಡಿರುವವರು ಇವರ ದೃಷ್ಟಿಯಲ್ಲಿ ಮಹಾತ್ಮರು ಮತ್ತು ಪೂಜ್ಯರಾಗಿರುತ್ತಾರೆ. ಪವಾಡಗಳನ್ನು ಮಾಡಿದರೆನ್ನಲಾದ ಮಹಾನುಭಾವಿಗಳಲ್ಲಿ ಅವಧೂತರು ಮುಖ್ಯರು. ಸಹಜವಾಗಿ ಅವರು ಮಾಡಿದರೆನ್ನಲಾದ ಪವಾಡಗಳು ಇಂತಿವೆ.

೧. ಮಳೆ ತರಿಸಿರುವುದು

೨. ಮಕ್ಕಳಿಲ್ಲದವರಿಗೆ ಮಕ್ಕಳಾಗುವಂತೆ ಆಶೀರ್ವದಿಸಿರುವುದು

೩. ಬರಡು ಆಕಳು, ಎಮ್ಮೆಗಳಲ್ಲಿ ಹಾಲು ಕರೆದಿರುವುದು

೪. ಬಡತನ ಹೋಗಲಾಡಿಸಿ, ನಂಬಿದವರನ್ನು ಉದ್ಧಾರಗೊಳಿಸಿರುವುದು

೫. ಊರಿನ ಸಾಂಕ್ರಾಮಿಕ ರೋಗಗಳನ್ನು ಪರಿಹರಿಸಿರುವುದು

೬. ಅವಮಾನಗೊಳಿಸಿದವರಿಗೆ ಕೋಪಿಷ್ಟರಾಗಿ ಶಾಪ ಹಾಕಿರುವುದು

೭. ಸತ್ತ ದೇಹಕ್ಕೆ ಮರುಜೀವ ಕೊಟ್ಟಿರುವುದು

ಇಂಥ ಪವಾಡಗಳು ಇಂದಿನ ವೈಜ್ಞಾನಿಕ ಜಗತ್ತಿಗೆ ಆಶ್ಚರ್ಯ ಮೂಡಿಸಿ, ಅವೈಚಾರಿಕ, ಅವೈಜ್ಞಾನಿಕ, ಅವಾಸ್ತವವಾದವುಗಳು ಎಂದು ಕಂಡು ಬಂದರೂ ಅವುಗಳಿಗೆ ತನ್ನದೇ ಆದ ಅರ್ಥ ಮತ್ತು ಆಶಯವಿದೆ. ಇಂಥ ಪವಾಡಕಥೆಗಳ ಹಿಂದೆ ಮುಗ್ಧ ಮನಸ್ಸಿನ ಭಕ್ತ ಜನತೆಯ ನಂಬಿಕೆಯನ್ನು, ಶುದ್ಧ ಧಾರ್ಮಿಕ ಪ್ರಜ್ಞೆಯನ್ನು ಕಾಣಬಹುದು. ಪವಾಡ ಕಥೆಗಳನ್ನು ಸೃಷ್ಟಿಸಲು ಜನತೆಗೆ ತಮ್ಮ ಹಿಂದಿನ ಜಾನಪದ ಸಾಹಿತ್ಯದ ಕಥೆ, ಹಾಡು, ಮತ್ತು ವಚನ ಸಾಹಿತ್ಯದ ವಚನಗಳು ಹಿನ್ನೆಲೆ ಮತ್ತು ಪ್ರೇರಣೆಯಾಗಿವೆ. ಜಾನಪದ ಸಾಹಿತ್ಯ ಮತ್ತು ವಚನ ಸಾಹಿತ್ಯವನ್ನು ತಿಳಿದಿರುವ ಜನತೆ, ಅವಧೂತರು ಮಾಡಿದರೆನ್ನಲಾದ ಪವಾಡಗಳನ್ನು ನಂಬಿರುವ ಸಾಧ್ಯತೆಯಿದೆ.

ಧಾರ್ಮಿಕ ಮಹಾತ್ಮರು ಸ್ಪರ್ಶಿಸಿದರೆ ಸಾಕು, ಅಸಾಧ್ಯ ಅಥವಾ ಅಸಹಜವೆನ್ನಬಹುದಾದ ಘಟನೆಗಳು ಘಟಿಸುತ್ತವೆ ಎಂಬ ನಂಬಿಕೆಯಿಂದ ಹಲವಾರು ಪವಾಡಗಳು ಸೃಷ್ಟಿಯಾಗಿವೆ. ಈ ಕತೆಗಳ ಸೃಷ್ಟಿಗೆ ಇಂಥ ವಚನಗಳು ಪುಷ್ಟಿ ನೀಡಿರಬಹುದು.

ನೀ ನೊಲಿದಡೆ ಕೊರಡು ಕೊನರುವುದಯ್ಯಾ
ನೀ ನೊಲಿದಡೆ ಬರಡು ಹಯನಹುದಯ್ಯಾ
ನೀ ನೊಲಿದಡೆ ವಿಷವೆಲ್ಲಾ ಅಮೃತವಹುದಯ್ಯಾ
ನೀ ನೊಲಿದಡೆ ಸಕಲ ಪಡಿಪದಾರ್ಥ
ಇದಿರಲಿರ್ಪವು ಕೂಡಲಸಂಗಮದೇವಾ

ಬಸವಣ್ಣನವರ ವಚನ ತಿಳಿಸುವಂತೆ ಆ ಪರಮಾತ್ಮ ಒಲಿದರೆ ಅಸಾಧ್ಯವಾದುದು ಯಾವುದೂ ಇಲ್ಲ. ಅದರಂತೆ ನಾವು ನಂಬಿರುವ ಮಹಾತ್ಮರು ಒಲಿದರೆ ಎಲ್ಲವೂ ಸಾಧ್ಯ ಎಂಬ ನಂಬಿಕೆ ಭಕ್ತ ಜನತೆಯದು.

ಚೇಳಗುರಿಕೆ ಎರ್ರಿತಾತನವರ ಜೀವನ ಚರಿತ್ರೆಯಲ್ಲಿ ಬರುವ ಬರಡೆಮ್ಮೆಗಳಲ್ಲಿ ಹಾಲು ತರಿಸಿರುವುದು, ಸತ್ತು ಬಿದ್ದ ಕರುವನ್ನು ಕಾಲಿನಿಂದ ಮುಟ್ಟಿ ಎಬ್ಬಿಸಿರುವುದು. ಹಾದಿಯಲ್ಲಿ ಸತ್ತು ಬಿದ್ದ ಹದ್ದನ್ನು ಎದ್ದು ಹೋಗಯ್ಯ ಎಂದು ಹೇಳಿರುವುದು, ಕಲ್ಲು ಬಸವನ ತಿರುಗಿಸಿರುವುದು ಈ ಎಲ್ಲಾ ಪವಾಡಕತೆಗಳ ಹಿಂದೆ, ಆ ಮಹಾತ್ಮನ ಮಹಿಮೆಯ ಬಗ್ಗೆ ಜನಪದರು ಇಟ್ಟಿರುವ ಅಪಾರ ನಂಬಿಕೆಯನ್ನು ಕಾಣಬಹುದು. ಇದೇ ರೀತಿಯ ಪವಾಡಕತೆಗಳು ಕೊಳಗಲ್ಲು ಎರಿಬಸವತಾತ, ಸಿಂಧಿಗೇರಿ ಮಲ್ಲಪ್ಪತಾತ, ಎಮ್ಮಿಗನೂರು ಜಡೆಪ್ಪತಾತ, ಯಂಕಪ್ಪತಾತ, ಹೀಗೆ ಎಲ್ಲಾ ಅವಧೂತರ ಚರಿತ್ರೆಯಲ್ಲೂ ಸೇರಿವೆ. ಜಡೆಪ್ಪತಾತನವರು ಅಲೆದಾಡುತ್ತಿರುವಾಗ ತಾವರಗೇರಿಯ ಗೌಡನ ಮನೆಯ ಬರಡು ಎಮ್ಮೆಗಳಿಂದ ಹಾಲನ್ನು ಕರೆಸಿದ್ದಾರೆ. ಸಿಂಧಿಗೇರಿಯ ಮಲ್ಲಪ್ಪ ತಾತನವರು ಚಾನಾಳಿನ ಬಡರೈತನ ಗೊಡ್ಡು ಆಕಳುಗಳಿಂದ ಹಾಲನ್ನು ಕರೆದು, ತಾನೂ ಕುಡಿದು, ಮಿಕ್ಕಿದ್ದ ಹಾಲನ್ನು ಅವರಿಗೆ ನೀಡಿ, ಅವರ ಬಡತನ ಹೋಗಲಾಡಿಸಿದ್ದಾರೆಂಬ ಪವಾಡಕತೆಗಳಿವೆ. ಯಾವುದೇ ವಿಷಯ ದಲ್ಲಿ ಶುದ್ಧ ಮನಸ್ಸು ಮತ್ತು ನಂಬಿಕೆಯಿದ್ದರೆ ಎಂಥಾ ಅಸಾಧ್ಯವಾದ ಕಾರ್ಯಗಳು ಸಾಧ್ಯವೆಂಬುದು ಈ ಕಥೆಗಳಿಂದ ತಿಳಿಯುತ್ತದೆ. ಅಚೇತನದಲ್ಲಿಯೂ ಚೇತನವಿರುತ್ತದೆಂಬ ಸತ್ಯವನ್ನು ತಿಳಿಸುವುದಕ್ಕೆ ಇಂಥ ಪವಾಡ ಕತೆಗಳು ಹುಟ್ಟಿದ್ದು, ನಿರ್ಮಲವಾದ ಅಂತರಂಗ ಸ್ವಭಾವವುಳ್ಳವರು ಸಂಕಲ್ಪಮಾಡಿದರೆ ಅಸಾಧ್ಯವಾದದ್ದು ಯಾವುದೂ ಇಲ್ಲವೆಂದು ಭಕ್ತ ಜನತೆ ನಂಬಿದ್ದಾರೆ.

ಅವಧೂತರು ಮೌನಿಗಳು, ಹುಚ್ಚರಂತೆ ಇದ್ದವರು. ಅವರ ನಡೆ-ನುಡಿ, ವೇಷ, ನೋಡುಗರ ಕಣ್ಣಿಗೆ ವಿಚಿತ್ರವಾಗಿ ಕಂಡಿದ್ದರಿಂದ ಹುಚ್ಚನೆಂದು ಅಪಹಾಸ್ಯ ಮಾಡಿದ್ದಾರೆ. ಮನೆ, ಮಠ, ಮಡದಿ-ಮಕ್ಕಳನ್ನು ಬಿಟ್ಟವನೆಂದು ನಿಂದಿಸಿದ್ದಾರೆ. ಇಂಥ ಸಂದರ್ಭದಲ್ಲಿ ಮಹಾತ್ಮರು ಕೋಪಿಷ್ಟರಾಗಿದ್ದರ ಪರಿಣಾಮ, ನಿಂದಿಸಿದವರು, ಅನುಭವಿಸಿದ ಕಷ್ಟಗಳು ಅಪಾರ. ಸಾಧು-ಸತ್ಪುರುಷರನ್ನ, ಶರಣರನ್ನ, ಮಹಾತ್ಮರನ್ನ, ಅಪಹಾಸ್ಯ ಮಾಡಿದರೆ, ಅಪಾಯವನ್ನು ನಾವೇ ತಂದು ಕೊಂಡಂತೆ ಎಂಬ ಸಂಗತಿಯನ್ನು ತಿಳಿಸುವ ಹಲವು ದೃಷ್ಟಾಂತಗಳು ಜಾನಪದ ಮತ್ತು ವಚನ ಸಾಹಿತ್ಯದಲ್ಲಿ ಇವೆ.

ಹಾವಿನ ಹೆಡೆಗಳ ಕೊಂಡು ಕೆನ್ನೆಯ ತುರಿಸುವಂತೆ
ಉರಿಯ ಕೊಳ್ಳಿಯ ಕೊಂಡು ಮಂಡೆಯ ಸಿಕ್ಕ ಬಿಡಿಸುವಂತೆ
ಹುಲಿಯ ಮೀಸೆಯ ಹಿಡಿದುಕೊಂಡು ಒಲಿದುಯ್ಯಲನಾಡುವಂತೆ
ಕೂಡಲ ಸಂಗನ ಶರಣರೊಡನೆ ಮರೆದು ಸರಸವಾಡಿದಂತೆ
ಸುಣ್ಣದಕಲ್ಲ ಮಡಿಲಲ್ಲಿ ಕಟ್ಟಿಕೊಂಡು ಮಡುವ ಬಿದ್ದಂತೆ.[೧೦]

ಅವಧೂತರನ್ನು ನಿಂದಿಸಿದ ಪರಿಣಾಮ, ಅನುಭವಿಸಿದ ತೊಂದರೆಗಳು

೧. ಅಧಿಕಾರ ಕಳೆದುಕೊಂಡಿರುವುದು

೨. ಬಡತನ ಬಂದಿರುವುದು

೩. ಅಂಧರಾಗಿರುವುದು

೪. ರೋಗ ರುಜಿನಗಳಿಂದ ನರಳಿರುವುದು

ಎಮ್ಮಿಗನೂರಿನಲ್ಲಿ ಒಮ್ಮೆ ಜಡೆಪ್ಪತಾತನವರ ಸುತ್ತ ನೂರಾರು ಭಕ್ತರು ನೆರೆದಿರುತ್ತಾರೆ. ಪಕ್ಕದ ಚಾವಡಿಯಲ್ಲಿ ಬ್ರಿಟೀಶ್ ಆಡಳಿತದ ಪೋಲಿಸ್ ಅಧಿಕಾರಿಯೊಬ್ಬ ಕುಳಿತಿದ್ದು, ತಾತನವರನ್ನು, ಅವರ ಭಕ್ತರನ್ನು ನಿಂದಿಸುತ್ತಾನೆ. ಏನಿದು ವಿಕಾರ ಈ ಹುಚ್ಚನು ಮೈಯಲ್ಲಿ ಹೊಲಸು ಮಾಡಿಕೊಂಡು ಥೂ, ಥೂ ಎಂದು ಉಗಿಯವುದು, ಉಗಿದ ಎಂಜಲನ್ನು ಪ್ರಸಾದವೆಂದು ಇವರು ಸ್ವೀಕರಿಸುವುದು ಎಂದು ಅಸಹ್ಯಭಾವನೆಯಿಂದ ನುಡಿಯುತ್ತಾನೆ. ಇವನು ಕುಲಗೇಡಿ, ನೀಚ, ದುರಾಚಾರಿ, ಇಂತಹ ಉನ್ಮತ್ತನನ್ನು ಮಹಾತ್ಮನೆಂದು ಭಯಭಕ್ತಿಯಿಂದ ಗೌರವಿಸಬೇಕಾದರೆ ಜನರೆಂಥ ಮೂಢರು ಎನ್ನುತ್ತಾನೆ. ಈ ನಿಂದನೆಯ, ಅಪಹಾಸ್ಯದ ಮಾತನ್ನು ಕೇಳಿದ ತಾತನು ''ನಿನ್ನ ಅಧಿಕಾರ ಹೋಗುತ್ತದೆ ಹೋಗು''ಎಂದು ನುಡಿಯಲು, ಅದರಂತೆ ಅಧಿಕಾರಿಯು ತನ್ನ ಅಧಿಕಾರ ಕಳೆದುಕೊಂಡಿದ್ದಾನೆ.

ಎಮ್ಮಿಗನೂರಿನ ಚನ್ನಯ್ಯಸ್ವಾಮಿಯ ಮನೆಯಲ್ಲಿ ಹಾಲು ಕೇಳಲು, ಮನೆಯಲ್ಲಿ ಹಾಲಿದ್ದರೂ ಕೊಡದೆ, ತಾತನನ್ನು ನಿಂದಿಸಿದ ಪರಿಣಾಮ ಮನೆಯಲ್ಲಿ ಹಾಲು ಕರೆವ ಎಮ್ಮೆಗಳೆಲ್ಲಾ ಬರಡಾಗಿವೆ.

ಚೇಳಗುರಿಕೆ ಎರ್ರಿತಾತನನ್ನು ಕಳ್ಳರು ಅಪಹಾಸ್ಯ ಮಾಡಿದ್ದರಿಂದ ಕೆಲವರು ಪೋಲಿಸರ ಕೈಗೆ ಸಿಕ್ಕರೆ, ಕೆಲವರು ತಮ್ಮ ತಮ್ಮಲ್ಲೇ ಹೊಡೆದಾಡಿಕೊಂಡು ಸತ್ತಿದ್ದಾರೆ. ಕೊಳಗಲ್ಲು ಎರಿಬಸವತಾತನನ್ನು ಕೋದಂಡ ರಾಮಪ್ಪನೆಂಬುವನು ತಾತ್ಸಾರದಿಂದ ಜಾತಿಹೀನ, ಕುಲಗೇಡಿ, ಹುಚ್ಚ, ಮಲೀನನೆಂದು ನಿಂದಿಸಿದ ಫಲವಾಗಿ ಬಡತನ ಬಂದು ಮನೆಯವರೆಲ್ಲಾ ರೋಗ ರುಜಿನಗಳಿಂದ ನರಳಿರುತ್ತಾರೆ.

ಬಾಹ್ಯದಲ್ಲಿ ಹುಚ್ಚರಂತಿದ್ದರೂ ಅಂತರಂಗದಲ್ಲಿ ಜ್ಞಾನಿಗಳಾಗಿದ್ದ ಅವಧೂತರನ್ನು ಅರಿಯದೆ, ಆಲೋಚಿಸದೆ, ದುಡುಕಿ, ನಿಂದಿಸಿದ ಪರಿಣಾಮವಾಗಿ ಎಷ್ಟೋ ಜನ ಭಾರೀ ಅನಾಹುತಕ್ಕೆ ತುತ್ತಾಗಿದ್ದಾರೆ. ಬಡತನ, ಕೈ ಕಾಲುಗಳು ಅಶಕ್ತ, ಕುರುಡುತನ, ವಂಶವೇ ಸರ್ವನಾಶ, ಅಧಿಕಾರ ಕಳೆದುಕೊಂಡಿರುವುದು ಹೀಗೆ ವಿವಿಧ ತೊಂದರೆಗಳನ್ನು ಅನುಭವಿಸಿದ್ದಾರೆ. ಒಟ್ಟಾರೆ ಮಹಾತ್ಮರನ್ನು, ಮಹಾನುಭಾವಿಗಳನ್ನು ಗೌರವದಿಂದ,

[illegible]

ಭಕ್ತಿಯಿಂದ ಕಾಣಬೇಕೆಂಬ ನಂಬಿಕೆ ಜನಪದರಲ್ಲಿರುವುದರಿಂದ, ಅವರನ್ನು ಕುರಿತ ಪವಾಡ ಕಥೆಗಳೂ ಅದೇ ನೆಲೆಗಟ್ಟಿನಲ್ಲಿ ಬೆಳೆದು ಬಂದಿವೆ. ವ್ಯಕ್ತಿಗಳು ಹೊರಗೆ ಮಲೀನವಾಗಿರಬಹುದು, ಆದರೆ ಆತ್ಮಜ್ಞಾನಿಗಳು. ಅವರೊಳಗಿನ ಶಕ್ತಿಗೆ ಬೆಲೆಕೊಡಬೇಕೆಂಬುದು ಇಂಥ ಕಥೆಗಳ ಹಿಂದಿನ ಆಶಯವಾಗಿದೆ.

ಕೆಲವು ಪವಾಡ ಕಥೆಗಳು ತಲೆಮಾರಿನಿಂದ, ತಲೆಮಾರಿಗೆ ಧಾರ್ಮಿಕ ಭಾವನೆಯನ್ನು ಬೆಳೆಸುವಂಥವುಗಳಾಗಿವೆ. ಎರ್ರಿತಾತನವರು ಊರಿಂದೂರಿಗೆ ಅಲೆದಾಡುತ್ತಿರುವಾಗ ಬೆಳಗುಪ್ಪೆಯಲ್ಲಿ ಭಕ್ತಳಾಗಿದ್ದ ಕುರುಬರ ಲಕ್ಷ್ಮಮ್ಮ ಎಂಬುವಳ ಬಡತನ ಕಂಡು,ಹುತ್ತದಿಂದ ಹಾವನ್ನು ತೆಗೆದುಕೊಟ್ಟಿದ್ದಾರೆ. ಮನೆಯಲ್ಲಿ ಆ ಹಾವು ಬಂಗಾರದ ಗಟ್ಟಿಯಾಗಿತ್ತೆಂಬ ಕಥೆಯಿದೆ. ಹೇರೂರು ವಿರುಪಾವಧೂತರು ಕಂಪ್ಲಿಯಲ್ಲಿದ್ದಾಗ, ಬ್ರಾಹ್ಮಣ ಶಾಸ್ತ್ರಿ ಮನೆತನದ ವೆಂಕೋಬಯ್ಯನವರು ಬೆಲ್ಲದ ವ್ಯಾಪಾರದಲ್ಲಿ ನಷ್ಟ ಅನುಭವಿಸಿ, ಪ್ರಾಣ ಕಳೆದುಕೊಳ್ಳಲು ಸಿದ್ಧರಾಗಿರುತ್ತಾರೆ. ಆಗ ಅವಧೂತರು ಅವರನ್ನು ತಡೆದು ಹುತ್ತದಲ್ಲಿದ್ದ ಹಾವೊಂದನ್ನು ತೆಗೆದುಕೊಟ್ಟು ಮನೆಯಲ್ಲಿ ನೋಡಲು ಹೇಳುತ್ತಾರೆ. ಅದರಂತೆ ಮನೆಯಲ್ಲಿ ಆ ಹಾವು ಬಂಗಾರದ ನಾಣ್ಯಗಳಾಗಿದ್ದವೆಂಬ ಕತೆಯಿದೆ. ಹೀಗೆ ಶುದ್ಧ ಮನಸ್ಸಿನ ಭಕ್ತರ ಬಡತನವನ್ನು, ಎಡರುತೊಡರುಗಳನ್ನು ಹೋಗಲಾಡಿಸಿ, ಧನಿಕರನ್ನಾಗಿ ಮಾಡಿದ ಹಲವಾರು ಕಥೆಗಳಿವೆ. ಇಂಥ ಕಥೆಗಳಿಂದ ಅವಧೂತರ ಬಗ್ಗೆ ಭಕ್ತಿ ಗೌರವಗಳು ಮೂಡಿ, ನ್ಯಾಯ, ನೀತಿ, ಸತ್ಯ, ಧರ್ಮ, ಪ್ರಾಮಾಣಿಕತೆಯಿಂದ ಭಕ್ತರು ಬಾಳಲು ಅನುವು ಮಾಡಿಕೊಡುತ್ತವೆ. ನಂಬಿದರೆ ಆ ಮಹಾತ್ಮ ಕೈ ಬಿಡುವುದಿಲ್ಲವೆಂಬ ಧಾರ್ಮಿಕ ಭಾವನೆ ತಲೆಮಾರಿನಿಂದ ತಲೆಮಾರಿಗೆ ಬೆಳೆದು ಬರುತ್ತಿದೆ.

ಒಬ್ಬ ಅವಧೂತರು ಮಾಡಿದ ಪವಾಡದಂತೆಯೇ ಮತ್ತೊಬ್ಬ ಅವಧೂತರು ಮಾಡಿರುವ ಹಲವಾರು ಪವಾಡ ಕಥೆಗಳು ಇದ್ದು ಅವುಗಳ ನಂಬಿಕೆ ಮತ್ತು ಆಶಯಗಳು ಒಂದೇ ರೀತಿಯಲ್ಲಿವೆ.

೧. ಭಕ್ತರ ರೋಗಗಳನ್ನು ನಿವಾರಿಸಿ ರಕ್ಷಿಸುವುದು

೨. ಸತ್ತವರಿಗೆ ಮರಳಿ ಪ್ರಾಣದಾನ ನೀಡಿರುವುದು

೩. ಮಕ್ಕಳಿಲ್ಲದವರಿಗೆ ಮಕ್ಕಳ ಭಾಗ್ಯ ಅನುಗ್ರಹಿಸಿರುವುದು

೪. ಬರಗಾಲ ನಿವಾರಣೆ ಮತ್ತು ಮಳೆ ತರಿಸಿರುವುದು

೫. ಗ್ರಾಮಕ್ಕೆ ಹರಡುವ ಸಾಂಕ್ರಾಮಿಕ ರೋಗಗಳನ್ನು ಪರಿಹರಿಸಿರುವುದು

ಹೀಗೆ ಭಕ್ತರ ವೈಯಕ್ತಿಕ ಮತ್ತು ಸಾಮೂಹಿಕ ಸಮಸ್ಯೆಗಳನ್ನು ಬಗೆಹರಿಸಿ, ಗ್ರಾಮದ ಆರೋಗ್ಯ ಮತ್ತು ಸಮಗ್ರತೆಯನ್ನು ಕಾಪಾಡಿದ್ದಾರೆ. ಗ್ರಾಮದ ದನ-ಕರು ಮುಂತಾದ ಪ್ರಾಣಿಗಳ ಮೇಲೆ ಮಹಾತ್ಮರಿಗಿದ್ದ ಅಭಿಮಾನ ಮತ್ತು ಕ್ಷೇಮವನ್ನು ತೋರಿಸುವುದಕ್ಕೆ ಜೀವ ದಯೆಯ ಕಥೆಗಳು ಇವೆ. ವೈದ್ಯರಿಂದ ಗುಣಪಡಿಸಲಾಗದ ರೋಗ, ಮತ್ತು ಊರುಗಳಿಗೆ ಬಂದ ಮಾರಿಬೇನೆಯನ್ನು ತಮ್ಮ ದಿವ್ಯಶಕ್ತಿಯಿಂದ ನಿವಾರಿಸಿದ್ದಾರೆ. ಕಣ್ಣಿಲ್ಲದವರಿಗೆ ಕಣ್ಣು, ಅಶಕ್ತರಿಗೆ ಶಕ್ತಿ, ಸತ್ತವರಂತಿದ್ದವರಿಗೆ ಜೀವ ನೀಡಿ ನವ ಚೈತನ್ಯ ನೀಡಿದ್ದಾರೆ. ಅವಧೂತರು ಮೃತರ ಪಾಲಿಗೆ ಸಂಜೀವಿನಿ ಎಂಬುದನ್ನು ತಿಳಿಸಲು ಇಂಥ ಕಥೆಗಳು ಸೃಷ್ಟಿಯಾಗಿವೆ. ಬಂಜೆಯಾ ಪವಾ

ಬಾಳಲಾರದೆ, ತಾಯಿಯಾಗುವ ಹಂಬಲದಿಂದ ಅವಧೂತರಲ್ಲಿಗೆ ಬಂದು ಮಕ್ಕಳ ಭಾಗ್ಯ ಬೇಡಲು, ಕರುಣಾಮಯಿಗಳಾದ ಅವಧೂತರು ಪ್ರಸಾದರೂಪದಲ್ಲಿ ಹಣ್ಣು, ಹೂ, ಅನ್ನ ಹೀಗೆ ಯಾವುದಾದರೊಂದನ್ನು ಅನುಗ್ರಹಿಸಿ ಕೊಟ್ಟಿರುತ್ತಾರೆ. ಅದನ್ನು ಶುದ್ಧ ನಂಬಿಕೆಯಿಂದ ಸೇವಿಸಿದವರು ಗರ್ಭಧರಿಸಿ ಮಕ್ಕಳಭಾಗ್ಯ ಪಡೆದಿರುವ ಕಥೆಗಳು ಎಲ್ಲಾ ಅವಧೂತರ ಚರಿತ್ರೆಯಲ್ಲೂ ಸೇರಿವೆ. ಮಳೆ ತರಿಸಿರುವುದು, ಊರಿನ ಸಾಂಕ್ರಾಮಿಕ ರೋಗ ಪರಿಹರಿಸಿ ಭಕ್ತರಿಗೆ ಮತ್ತು ಗ್ರಾಮಗಳಲ್ಲಿ ಅನ್ನ, ನೀರು, ದನ-ಕರುಗಳಿಗೆ ಮೇವು ನೀಡುವುದರ ಜೊತೆಗೆ ಸಾರ್ವಜನಿಕ ಕ್ಷೇಮ, ನೆಮ್ಮದಿಗಾಗಿ ಗ್ರಾಮಕ್ಕೆ ತಗುಲುವ ರೋಗಗಳನ್ನು ಪರಿಹರಿಸಿರುವ ಕಥೆಗಳಿವೆ. ರೋಗ ನಿವಾರಣೆ, ಅನಿಷ್ಟ ಪರಿಹಾರ ಇಂಥ ಹಲವಾರು ಕಥೆಗಳು, ನಂಬಿಕೆಗಳು ಇನ್ನೂ ಜೀವಂತವಾಗಿವೆ. ಒಟ್ಟಾರೆ ಅವಧೂತರು ಮಾಡಿದರೆನ್ನಲಾದ ಪವಾಡಕಥೆಗಳಲ್ಲಿ ಯಾವುದೇ ರೀತಿಯ ಸ್ವಾರ್ಥವಾಗಲಿ, ನಿಯಮ, ನಿಬಂಧನೆಗಳಾಗಲಿ ಇಲ್ಲದೆ, ಶುದ್ಧ ನಿಸ್ವಾರ್ಥ ಮನೋಭಾವದವುಗಳು. ಇಂಥ ಕಥೆಗಳಲ್ಲಿ ಶುದ್ಧ ಧಾರ್ಮಿಕ ಪ್ರಜ್ಞೆಯನ್ನು ಕಾಣುವುದರ ಜೊತೆಗೆ ಶುದ್ಧ ಮನಸ್ಸಿನ ಭಕ್ತರ ಮತ್ತು ಸಮುದಾಯದ ರಕ್ಷಣೆಯ ಹೊಣೆಯನ್ನು ಹೊತ್ತಿರುವುದು ಕಾಣುತ್ತದೆ. "ಧಾರ್ಮಿಕ ಮಹಾಪುರುಷರ ಮಹಿಮಾಪೂರ್ಣ ಕಥೆಗಳ ನ್ನಾಲಿಸುವುದರಿಂದ ಅವರ ಆದರ್ಶಮಯ ಜೀವನ, ಎತ್ತಿ ಹಿಡಿದ ಮೌಲ್ಯಗಳು, ಧ್ಯೇಯ-ಧೋರಣೆಗಳು ಜನತೆಯ ಹೃದಯ ಮಂದಿರದಲ್ಲಿ ಕಡೆದಿರಿಸಿ, ದೈವೀಭಾವನೆಯನ್ನು ಹುಟ್ಟಿಸುವವು. ಆ ಮಹಿಮಾ ಪುರುಷರ ದಿವ್ಯಾನುಭವ ಕಥನದಿಂದ ಅವರ ಅದ್ಭುತ ಶಕ್ತಿಯ ಪರಿಚಯದಿಂದ ಜನ ರೋಮಾಂಚನಗೊಂಡು ಭಾವನಾಮ ಯರಾಗುವರು. ಈ ರೀತಿಯ ಭಾವುಕತೆ, ಧಾರ್ಮಿಕ ಪ್ರಪಂಚದಲ್ಲಿ ಅವಶ್ಯವಾದುದು. ಇದು ಜನತೆಯನ್ನು ಸನ್ಮಾರ್ಗದತ್ತ ಒಯ್ಯುವುದು."[೧೧]

ಒಟ್ಟಾರೆ ಜನತೆಗೆ ಧಾರ್ಮಿಕ ತತ್ತ್ವ ತಿಳಿದು, ಆಧ್ಯಾತ್ಮಿಕ ಜೀವನದಲ್ಲಿ ಸಹಾಯಕವಾಗುವಂತೆ ಮಾಡಲು ಸಂದರ್ಭೋಚಿತವಾಗಿ ಪವಾಡಕಥೆಗಳು ವರ್ಣಿತವಾಗಿವೆ. ಇಂದಿನ ವೈಜ್ಞಾನಿಕ ನೋಟಕ್ಕೆ, ಪವಾಡಕಥೆಗಳನ್ನು ನಂಬುವುದು ಒಂದು ಬಗೆಯ ಮೌಢ್ಯ, ಮೂಢನಂಬಿಕೆಯಾಗಿ ಕಂಡು ಬಂದರೂ, ಭಕ್ತ ಜನತೆ ಮಾತ್ರ ಧಾರ್ಮಿಕ ನಿಷ್ಠೆಯಿಂದ ತಮ್ಮ ಮನಸ್ಸಿನ ಮನೋವೈಕಲ್ಯವನ್ನು ಕಳೆದುಕೊಂಡಂತೆ ಮಾನಸಿಕ ನೆಮ್ಮದಿ, ಮತ್ತು ಆನಂದವನ್ನು ಪಡೆಯುತ್ತಾರೆ. ಪವಾಡ ಕಥೆಗಳು ಹೇಗೆ ಇರಲಿ, ಹೇಗೆ ಹುಟ್ಟಿರಲಿ, ನಂಬಿರುವ ಮನಸ್ಸು ಮಾತ್ರ ಭಾವನಾತ್ಮಕವಾದುದು. ಮೂಲಭೂತವಾಗಿ ಅವಧೂತರ ನಡೆ-ನುಡಿಗಳು, ವೇಷಭೂಷಣ ಗಳು ವಿಚಿತ್ರ ಮತ್ತು ವಿಲಕ್ಷಣವಾಗಿದ್ದವುಗಳು. ವೈಜ್ಞಾನಿಕ ಯುಗದಲ್ಲಿರುವ ನಾವು ಅವಧೂತರು ಮಾಡಿದ ಪವಾಡಗಳು ಸುಳ್ಳಿನ ಕಂತೆಯೆಂದಾಗಲಿ, ಕಲ್ಪಿತವಾದವುಗಳೆಂದಾಗಲಿ ಕರೆದರೆ ತಪ್ಪಾಗುತ್ತದೆ. ಹಾಗೆಂದ ಮಾತ್ರಕ್ಕೆ ಇವರು ಮಾಡಿದ ಪವಾಡಗಳು ಸರಿ ಅಥವಾ ಸತ್ಯವೆಂದು ಹೇಳಿದಂತಲ್ಲ. ತಾರ್ಕಿಕವಾಗಿ ಇವು ಪವಾಡಗಳು. ಇವುಗಳು ಪವಾಡಗಳಲ್ಲವೆಂದು ಭೇದವೆಣಿಸುವುದು ಕಷ್ಟಕರವಾದುದು. ಹೀಗಾಗಿ ಅವಧೂತರು ಮಾಡಿದರೆನ್ನ ಲಾದ ಪವಾಡಗಳು ಸತ್ಯಾಸತ್ಯತೆಯ ನಿಲುವು ನಂಬುವವರ ಅನುಭವ ಮತ್ತು ತಿಳುವಳಿಕೆಯ ಮೇಲೆ ನಿಂತಿರುತ್ತವೆ.

ಕೊನೆ ಟಿಪ್ಪಣಿಗಳು

೧. ಶಿವಕುಮಾರಸ್ವಾಮಿ (ಸಂ), ಕರ್ನಾಟಕ ಜಾತ್ರೆಗಳು : ಪುಟ-೬೭

೨. ಅದೇ, ಪುಟ-೬

೩. ಅದೇ, ಪುಟ-೩೦

೪. ದಾಸೇಗೌಡ.ಜಿ.ವಿ. (ಸಂ), ನಮ್ಮ ಜಾನಪದ ನಂಬಿಕೆಗಳು : ಪ್ರಸ್ತಾವನೆ

೫. ಜವರೇಗೌಡ ದೇ.: ಜಾನಪದ ಅಧ್ಯಯನ ಚರಿತ್ರೆ : ಪುಟ-೩೨೧

೬. ಮಂಜುನಾಥ ಬೇವಿನಕಟ್ಟೆ: ಜಾನಪದ ನಂಬಿಕೆಗಳು : ಪುಟ-೧೯

೭. ಪೂಜಾರ್ ವ್ಹಿ.ಜಿ.: ವೀರಶೈವ ಸಾಹಿತ್ಯದಲ್ಲಿ ಪವಾಡ ಕಥೆಗಳು : ಪುಟ-೪೨

೮. ಭದ್ರಾಪುರ ಎಸ್.ಎಸ್.: ಉತ್ತರ ಕರ್ನಾಟಕದ ಜಾನಪದ ಐತಿಹ್ಯಗಳು : ಪುಟ-೯

೯. ಕಲಬುರ್ಗಿ ಎಂ.ಎಂ. (ಸಂ), ಬಸವಣ್ಣನವರ ವಚನ ಸಂಪುಟ : ಪುಟ-೧೯

೧೦. ಅದೇ, ಪುಟ-೧೬೬

೧೧. ಪೂಜಾರ್ ವ್ಹಿ.ಜಿ.: ವೀರಶೈವ ಸಾಹಿತ್ಯದಲ್ಲಿ ಪವಾಡ ಕಥೆಗಳು : ಪುಟ-೧೮೨

ಅಧ್ಯಾಯ ಏಳು

ಸಮಾರೋಪ

ಸಮಾರೋಪ

ಮಧ್ಯಕಾಲೀನ ಚಾರಿತ್ರಿಕ ಸಂದರ್ಭದಲ್ಲಿ ಹುಟ್ಟಿದ ನಾಥ, ಸಿದ್ಧ, ಆರೂಢ, ಅವಧೂತ ಮುಂತಾದ ಪಂಥಗಳಲ್ಲಿ ಅವತರಿಸಿದ ಹಲವಾರು ಅನುಭಾವಿಗಳು ಜೈನ, ವೈಷ್ಣವ, ವೀರಶೈವ ಮುಂತಾದ ಸಾಂಸ್ಥಿಕ ಧರ್ಮಗಳ ಚೌಕಟ್ಟಿನಿಂದ ಹೊರಗುಳಿದವರು. ಇವರೆಲ್ಲಾ ತಮ್ಮ ವಿಶಿಷ್ಟ ನಡೆ-ನುಡಿಯಿಂದ ಸಮನ್ವಯತೆ, ಸೌಹಾರ್ಧತೆಯನ್ನು ಮತ್ತು ನೈತಿಕ ಜೀವನದ ತಳಹದಿಯನ್ನು ಹಾಗೆಯೇ ಅಸ್ಥಿರ ಬದುಕಿನ ಚಿತ್ರಣವನ್ನು ಪ್ರಾಪಂಚಿಕವಾದ ಸರ್ವವೂ ನಶ್ವರ ಎಂಬ ತಿಳುವಳಿಕೆಯನ್ನು ಜನತೆಗೆ ಸಾರಿದವರಾಗಿದ್ದಾರೆ.

ಸಮಾಜದಲ್ಲಿ ಆಗಿಂದಾಗ್ಗೆ ಜಾತಿ, ಮತ, ಧರ್ಮ, ಪಂಥ, ಪಂಗಡಗಳ ಹೆಸರಿನಲ್ಲಿ ಘರ್ಷಣೆಗಳು ನಡೆಯುತ್ತಿವೆ. ಇದರಿಂದ ಸಾಮಾಜಿಕ, ಧಾರ್ಮಿಕ ವಾತಾವರಣ ಕಲುಷಿತಗೊಂಡು ಮುಗ್ಧ ಜನರ ಬದುಕು ದುಸ್ಥಿತಿಗೊಳ್ಳುತ್ತಿದೆ. ಇಂಥ ಧರ್ಮಾಂಧತೆ, ಮತಾಂಧತೆ, ಅಸಮಾನತೆ ಮತ್ತು ಅನೈತಿಕತೆ ತುಂಬಿರುವ ಸಮಾಜವನ್ನು ತಿಳಿಗೊಳಿಸುವುದು ಅನಿವಾರ್ಯವಾಗಿದ್ದ ಸಂದರ್ಭದಲ್ಲಿ, ನಾಡಿನಾದ್ಯಂತ ಅವತರಿಸಿದ ಅನೇಕ ಸಾಧು ಸಂತರು, ಶರಣರು, ಆರೂಢರು, ಅವಧೂತರು, ತತ್ವಪದಕಾರರು ಹಾಗೂ ಇತರೆ ಅನುಭಾವಿಗಳು ತಮ್ಮ ನಡೆನುಡಿಯಿಂದ ಸಾಮಾಜಿಕ ಸಂಕ್ರಮಣ ಮಾಡಿದ್ದಾರೆ. ವಚನ, ಕೀರ್ತನೆ, ತ್ರಿಪದಿ, ಸ್ವರವಚನ, ತತ್ವಪದಗಳು ಹೀಗೆ ವಿವಿಧ ಸಾಹಿತ್ಯ ಪ್ರಕಾರಗಳಲ್ಲಿ ಜನತೆಯ ಅಜ್ಞಾನ, ಅಂಧಕಾರ ಮತ್ತು ಅಸಮಾನತೆಯನ್ನು ಹೋಗಲಾಡಿಸುತ್ತಾ ನೈತಿಕ ಪ್ರಜ್ಞೆಯನ್ನು ಮೂಡಿಸಿದ್ದಾರೆ.

ಬಳ್ಳಾರಿ ಜಿಲ್ಲೆಯ ಪರಿಸರದಲ್ಲಿ ಹೆಚ್ಚಾಗಿ ನೆಲೆನಿಂತಿರುವ ಅವಧೂತರ ಬಗ್ಗೆ ಸಂಶೋಧನೆ ಕೈಗೊಂಡಾಗ ಮಾಹಿತಿ ಹೆಚ್ಚಿಗೆ ಸಿಗಲಾರದು ಎಂಬ ಭಾವನೆಯುಂಟಾಯಿತು. ನಂತರ ಕ್ಷೇತ್ರಕಾರ್ಯ ಕೈಗೊಂಡು ಅವರ ಬಗ್ಗೆ ಇರುವ ಲಿಖಿತ ಮತ್ತು ಮೌಖಿಕ ಆಧಾರಗಳನ್ನು ಸಂಗ್ರಹಿಸಿ ಶೋಧಿಸಿದಾಗ, ಕಾಲಗರ್ಭದಲ್ಲಿ ಅವಿತು ಕೊಂಡಿರುವ ಸಾಕಷ್ಟು ಮಾಹಿತಿಗಳು ಲಭ್ಯವಾದವು. ಇದರಿಂದ ಅವರ ಸಾಧನೆ, ಸಿದ್ಧಿ ಮತ್ತು ಮೌಲ್ಯಗಳ ಅಧ್ಯಯನ ಇಂದು ಅಗತ್ಯವೆಂದು ತಿಳಿದು ದೊರೆತ ಮಾಹಿತಿಗಳನ್ನು ಆಧಾರವಾಗಿಟ್ಟುಕೊಂಡು ಅಧ್ಯಯನದಲ್ಲಿ ಬಳಸಿಕೊಳ್ಳಲಾಗಿದೆ.

ಅವಧೂತರು ನಿರ್ದಿಷ್ಟ ವರ್ಗ, ವರ್ಣ, ಜಾತಿ, ಮತ, ಪಂಗಡಗಳಿಗೆ ಸೇರದೆ ವರ್ಣಾಶ್ರಮಗಳನ್ನು ಮೀರಿ ನಿಂತು ಅತಿವರ್ಣಾಶ್ರಮಿಗಳಾಗಿದ್ದವರು. ದೈವವನ್ನು ಬಾಹ್ಯದಲ್ಲಿ ಹುಡುಕದೆ ಅರಿವಿನ ಮುಖಾಂತರ ತಮ್ಮಂತರಂಗದಲ್ಲಿಯೇ ಕಂಡುಕೊಂಡವರು. ಮಾನವನು ನಿರಂತರ ಸಾಧನೆಯಿಂದ ದೇವನಾಗಬಲ್ಲ. ಹಾಗೆಯೆ

ತನ್ನೊಳಗಿನ ದೈವವನ್ನು ಜಾಗೃತಗೊಳಿಸಬಲ್ಲ ಎಂಬುದು ಇವರ ಧ್ಯೇಯ. ಈ ಸಾಧನೆಗಾಗಿ ಮಠ, ದೇಗುಲ, ಶಾಸ್ತ್ರ, ಪುರಾಣ, ಪೂಜೆ ಮುಂತಾದ ಆಚರಣೆಗಳಿಂದ ದೂರ ಉಳಿದಿದ್ದಾರೆ. ಸ್ಥಾವರ ಸಂಸ್ಕೃತಿಯ ಆಚಾರ-ವಿಚಾರಗಳೊಂದೂ ಬೇಕಾಗಿರದ ಇವರು ತಮ್ಮ ಜೀವಿತದ ಕಾಲಾವಧಿಯಲ್ಲಿ ಸಂಗದಲ್ಲಿದ್ದು ನಿಸ್ಸಂಗಿಯಾಗಿದ್ದವರು. ಸಾಧನೆಯಿಂದ ಅವಧೂತಸ್ಥಿತಿ ತಲುಪಿದಾಗ ಕೆಲವರಿಂದ ದೇವರೆಂದೂ ಮಹಾತ್ಮರೆಂದೂ ಇನ್ನು ಕೆಲವರಿಂದ ಹುಚ್ಚನೆಂದೂ ಜಾತಿ ಭ್ರಷ್ಟನೆಂದೂ ಕರೆಸಿಕೊಂಡಿದ್ದವರು.

ಅವಧೂತರು ಬಡತನ, ಅಸಮಾನತೆ, ಶೋಷಣೆಯ ವಿರುದ್ಧ ಇತರ ಯಾವುದೇ ಸಮಸ್ಯೆಗಳ ವಿರುದ್ಧ ಹೋರಾಡಿದವರಲ್ಲ. ಹಾಗೆಯೇ ಸಾಮಾಜಿಕ, ರಾಜಕೀಯ, ಆರ್ಥಿಕ, ಧಾರ್ಮಿಕ ಕ್ಷೇತ್ರಗಳಲ್ಲಿ ಆಮೂಲಾಗ್ರ ಬದಲಾವಣೆಯನ್ನು ಬಯಸದೆ, ಕೇವಲ ಮನುಷ್ಯನಲ್ಲಿ ಮಾತ್ರ ಬದಲಾವಣೆಯಾಗಬೇಕೆಂದು ಬಯಸಿದವರು. ಇದಕ್ಕಾಗಿ ಯಾವ ಸಾಹಿತ್ಯವನ್ನೂ ರಚಿಸಿದವರಲ್ಲ. ತಾವು ಹುಟ್ಟಿದ ನೆಲ, ನೆಲೆಯನ್ನು, ಹೆಂಡತಿ, ಮಕ್ಕಳು, ತಂದೆ-ತಾಯಿ, ಬಂಧು ಬಳಗವನ್ನು ನಿರಾಕರಿಸಿ ಆತ್ಮಜ್ಞಾನದ ಕೈವಲ್ಯವೊಂದೇ ಪರಮಸಾಧನವೆಂದು ನಂಬಿದ್ದವರು. ನಿಜಾನಂದದ ಆತ್ಮತೃಪ್ತಿಗಾಗಿ 'ವೈಯಕ್ತಿಕ ಬಂಧನಗಳು ಅಳಿದು ಹೋದಾಗ ಸಂತರು, ಯೋಗಿಗಳು ಇಡೀ ಸೃಷ್ಟಿಯೊಡನೆ ಏಕತೆಯನ್ನು ಪಡೆಯುತ್ತಾರೆ. ಅವರು ವಿಶ್ವ ಜೀವನದಲ್ಲಿ ನೆಲೆಸಿ, ಮಾನವ, ಪ್ರಕೃತಿ ಹಾಗೂ ಪರಮಾತ್ಮನೊಡನೆ ತಾದ್ಯಾತ್ಮ್ಯವನ್ನನುಭವಿಸುವರು ಮತ್ತು ಸಂಲಗ್ನವಾಗುವರು. ವಿಶ್ವದ ಮೂಲೆಮೂಲೆಗಳಲ್ಲಿ, ಸಂದಿಗೊಂದಿಗಳಲ್ಲಿ ಅಂತು ಇರವಿನ ವಿಶ್ವ ವಿಷಯಕ, ಮನೋ ವಿಷಯಕ, ಜ್ಞಾನ ವಿಷಯಕ ಹಾಗೂ ಅನುಭಾವ ವಿಷಯಕ ಎಂಬೆಲ್ಲಾ ರೂಪಗಳಲ್ಲಿ ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಂಡು ಸಂತರು ಯೋಗಿಗಳು ಆಶ್ಚರ್ಯಯುಕ್ತವಾದ ಆನಂದಾತಿರೇಕದಲ್ಲಿ ಮುಳುಗಿ ಬಿಡುವರು' ಎನ್ನುವ ಆರ್.ಡಿ. ರ್‍ಯಾನಡೆಯವರ ಮಾತು ಅವಧೂತರ ವ್ಯಕ್ತಿತ್ವ ಮತ್ತು ಸಾಧನೆಗೆ ಪೂರಕವಾಗಿ ನಿಲ್ಲುತ್ತದೆ.

ಬಡವ ಬಲ್ಲಿದ, ಮೇಲು ಕೀಳು ಎಂಬ ಭೇದಭಾವಗಳನ್ನು ತ್ಯಜಿಸಿ ಆತ್ಮಜ್ಞಾನಿಗಳಿಗೆ ಜಾತಿಸೂಚಕವಿಲ್ಲವೆಂಬ ವಿಶಾಲ ದೃಷ್ಟಿಯನ್ನು ಒಳಗೊಂಡಿದ್ದವರು. ಪ್ರಪಂಚದ ಒಳಿತು ಕೆಡಕುಗಳ ಭಾವನೆಗಳಿಗೆ ಉದಾಸೀನವಾಗಿ ಪ್ರಜ್ಞಾತೀತ ಸ್ಥಿತಿಯಲ್ಲಿದ್ದವರು. ಸಮಾಜ ಇವರನ್ನು ಗೌರವಿಸಬಹುದು ಅಥವಾ ಅಪಹಾಸ್ಯ ಮಾಡುತ್ತಾ ನಿಂದಿಸಬಹುದು. ಯಾವುದಕ್ಕೂ ಮಾನ್ಯತೆ ನೀಡದೆ ಯಾವ ಸ್ವಾರ್ಥ ಉದ್ದೇಶವಿಲ್ಲದೆ ನಂಬಿ ಬಂದ ನೊಂದವರಿಗೆ, ಅಸಹಾಯಕರಿಗೆ ಒಟ್ಟಾರೆ ಜನ ಸಮುದಾಯಕ್ಕೆ ನೆಲೆ ನಿಂತ ಸ್ಥಳಕ್ಕೆ ಸಾಧಿಸಿದ ಸಾಧನೆಯ ಸಿದ್ಧಿಯಿಂದ ಸಹಾಯ ಮಾಡಿರುತ್ತಾರೆ. ಆಧ್ಯಾತ್ಮಿಕತೆ ಸ್ವಾರ್ಥವಲ್ಲ ಅದನ್ನು ಸಾಧಿಸಿದ ಹಲವಾರು ಅನುಭಾವಿಗಳು ಅದರಿಂದ ತಾವು ಮುಕ್ತಿಯನ್ನು ಪಡೆದು ಇತರರೂ ಅದನ್ನು ಪಡೆಯಬೇಕೆಂಬ ಮನೋಭಾವ ಹೊಂದಿ ದವರಾಗಿರುತ್ತಾರೆ ಎನ್ನುವುದಕ್ಕೆ ಅವಧೂತರು ಸಾಕ್ಷಿಯಾಗಿದ್ದಾರೆ.

ಅವಧೂತರು ಜನಸಾಮಾನ್ಯರಂತೆ ಬಾಳಿ ಬದುಕಿ ಬಂದವರು. ಅನಿವಾರ್ಯವಾಗಿ ಎದುರಾದ ನೈತಿಕ ಸಂಘರ್ಷಗಳಿಂದ ಪಾರಾಗಿ ಲೌಕಿಕ ಜೀವನದ ಬಗ್ಗೆ ಜಿಗುಪ್ಸೆ ಮೂಡಿ ವೈರಾಗ್ಯ ತಾಳಿದವರು. ಲೌಕಿಕ ಜೀವನಕ್ಕೆ ವಿಚಿತ್ರವಾಗಿ, ವಿಲಕ್ಷಣವಾಗಿದ್ದ ಇವರ ಜೀವನದ ಸಾಧನೆಯಿಂದ ಸಹಜವಾಗಿ ಕಂಡುಬರುವ ಅಂಶಗಳು ಇಂತಿವೆ.

೧. ಸಂಸಾರ ಬಂಧನಕ್ಕೆ ಸಿಲುಕಿ, ಅದು ಬೇಸರಗೊಂಡು ವಿರಕ್ತರಾಗಿರುತ್ತಾರೆ. ಕೊನೆಗೆ ಲೌಕಿಕ ಬಂಧನಗಳನ್ನೆಲ್ಲಾ ತಿರಸ್ಕರಿಸಿ ನಿರ್ಲಿಪ್ತರಾಗಿ ಅದರಿಂದ ಹೊರಬಂದಿರುತ್ತಾರೆ.

೨. ಗುರುಕೃಪೆ ಮತ್ತು ಗುರೂಪದೇಶವಿಲ್ಲದೆ ಆತ್ಮತೃಪ್ತಿ ಅಸಾಧ್ಯವೆಂದು ತಿಳಿದಿರುತ್ತಾರೆ. 'ಗುರುತನವು ಹಿರಿತನವಹುದು ಜಗಕೆ' ಎಂಬ ಶಿವಯೋಗಿಯ ವಾಣಿಯಂತೆ, "ಗುರುವಿನ ಗುಲಾಮನಾಗದ ತನಕ ದೊರೆಯದಣ್ಣ ಮುಕುತಿ" ಎಂಬ ದಾಸ ವಾಣಿಯಂತೆ, ಗುರುವನ್ನು ಶೋಧಿಸಿ, ಅವರಿಗೆ ಶರಣಾಗಿರುತ್ತಾರೆ. ಗುರು ಯಾವ ಜಾತಿ ಮತದವರೇ ಆಗಿರಲಿ ತನ್ನ ಮನಸ್ಸಿಗೆ ಹಿಡಿಸಿದ ಗುರುವನ್ನೇ ಸಾಕ್ಷಾತ್ ದೈವವೆಂದೂ ತಂದೆಯೆಂದೂ ತಿಳಿದು ಗುರುವಿಗೆ ಪ್ರಾಧಾನ್ಯತೆ ನೀಡಿರುತ್ತಾರೆ.

೩. ಭಕ್ತಿ, ಜ್ಞಾನ, ವೈರಾಗ್ಯ ಮತ್ತು ಯೋಗ ಸಾಧನೆಗಳು ಮುಕ್ತಿಗೆ ಅಡಿಗಲ್ಲುಗಳೆಂದು ತಿಳಿದು ಅದರಂತೆ ನಡೆದವರು.

೪. ಮಾನ ಅಭಿಮಾನಗಳ ಹಂಗನ್ನು ಬಿಟ್ಟ ಇವರು, ಹಸಿವು, ನಿದ್ರೆ, ಬಾಯಾರಿಕೆಗಳ ಪರಿವೆ ಇಲ್ಲದವರು. ಲೌಕಿಕರ ದೃಷ್ಟಿಯಲ್ಲಿ ಹುಚ್ಚರಂತೆ ವಿಲಕ್ಷಣವಾಗಿ ಕಂಡುಬಂದರೂ ಅಂತರಂಗದಲ್ಲಿ ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಂಡವರು.

೫. ಒಂದು ಜಾಗ, ಒಂದು ಊರಲ್ಲಿ ಇರದೆ ಪರಿವ್ರಾಜಕರಂತೆ ಮನಬಂದ ಕಡೆ ಅಲೆದಾಡಿರುತ್ತಾರೆ.

೬. ಅವಧೂತಸ್ಥಿತಿ ತಲುಪಿ, ಅಲೆದಾಡಿದ ಮತ್ತು ನೆಲೆನಿಂತ ಸ್ಥಳಗಳಲ್ಲಿ ಸರ್ವರನ್ನು ಸಮಾನವಾಗಿ ಕಂಡಿದ್ದಾರೆ. ಅವರ ಜನಪ್ರಿಯತೆಗೆ ಅವರ ಜಾತ್ಯತೀತ ಮತ್ತು ಧರ್ಮಾತೀತ ನಿಲುವುಗಳು ಸಾಕ್ಷಿಯಾಗಿವೆ. ಹಾಗೆಯೇ ಸಕಲ ಜೀವಿಗಳಿಗೂ ಲೇಸನ್ನೇ ಬಯಸಿ ಮಾನವತಾವಾದಿಗಳಾಗಿದ್ದಾರೆ.

ಹೀಗೆ ವಿಶಿಷ್ಟ ವ್ಯಕ್ತಿತ್ವ ಮತ್ತು ಮೌಲ್ಯಗಳನ್ನು ಅಳವಡಿಸಿಕೊಂಡಿದ್ದ ಅವಧೂತರು ಜಡತ್ವಗೊಂಡಿದ್ದ ಸಾಂಸ್ಕೃತಿಕ ಪರಿಸರವನ್ನು ಪರಿವರ್ತನೆಗೊಳಿಸಿ ತಮ್ಮ ಜೀವನದ ಅಂತ್ಯದಲ್ಲಿ ತಮಗಿಷ್ಟಬಂದ ಸ್ಥಳದಲ್ಲಿ ಸಮಾಧಿ ಹೊಂದಿದ್ದಾರೆ. ಕಾಲ ಕಳೆದಂತೆ ಅವರ ಶಿಷ್ಯರು ಮತ್ತು ಭಕ್ತರೆಲ್ಲಾ ಸೇರಿ ಸಮಾಧಿ ಹೊಂದಿದ ಸ್ಥಳದಲ್ಲಿ ಶಿಲೆ ಅಥವಾ ಲೋಹದಲ್ಲಿ ಅವರ ಮೂರ್ತಿಯನ್ನು ಪ್ರತಿಷ್ಠಾಪಿಸಿದ್ದಾರೆ. ಅವಧೂತರ ಜೀವಿತದ ಕಾಲದಲ್ಲಿ ಭಕ್ತರಿಗಾಗುತ್ತಿದ್ದ ಪವಾಡದಂತಹ ಘಟನೆಗಳು, ಅವರು ಸಮಾಧಿಯಾದ ನಂತರವೂ ಅವರವರ ನಂಬಿಕೆಯಂತೆ ನಡೆಯುತ್ತಿರುತ್ತವೆ. ಅದರ ಪ್ರತೀಕವಾಗಿ ಅವಧೂತರ ಮೂರ್ತಿಯ ದರ್ಶನಕ್ಕಾಗಿ ಮಠಕ್ಕೆ ಬರುವವರ ಸಂಖ್ಯೆ ಅಧಿಕವಾಗುತ್ತದೆ. ಇದರಿಂದ ಮಠದ ಆದಾಯವೂ ಹೆಚ್ಚಾಗುತ್ತಿದ್ದು, ಸ್ಥಳೀಯ ಭಕ್ತರೆಲ್ಲಾ ಸೇರಿ ಸಮಿತಿಯೊಂದನ್ನು ರಚಿಸಿಕೊಂಡು, ಮಠದ ಸರ್ವತೋಮುಖ ಏಳಿಗೆಗೆ ಹಾಗೆಯೇ ಮಠಕ್ಕೆ ಬರುವ ಭಕ್ತರಿಗೆ ಅನುಕೂಲವಾಗಲು ಅನ್ನ ದಾಸೋಹ ಮತ್ತು ತಂಗಲು ಕೊಠಡಿಗಳ ವ್ಯವಸ್ಥೆ ಮಾಡುತ್ತಿದ್ದಾರೆ.

ಮೂರ್ತಿ ಪೂಜಾ ಸಂಸ್ಕೃತಿಯನ್ನು ನಿರಾಕರಿಸುತ್ತಿದ್ದ ಅವಧೂತರುಗಳಿಗೆ ಈಗ ಅವರ ಗದ್ದುಗೆ ಅಥವಾ ಮೂರ್ತಿಗೆ ನಿತ್ಯಪೂಜೆ ಮತ್ತು ಆಚರಣೆಗಳು ನಡೆಯುತ್ತಿವೆ. ವಂಶಸ್ಥರು ಇಲ್ಲವೆ ಸಮಿತಿಯವರು ನೇಮಿಸಿದವರಿಂದ ಪೂಜಾಕಾರ್ಯಗಳು ಕಾಲಕ್ಕೆ ತಕ್ಕಂತೆ ಹೊಂದಿಕೊಂಡು ಜರುಗುತ್ತಿವೆ. ಇಂದಿನ ವೈಜ್ಞಾನಿಕ ಯುಗದಲ್ಲಿ

ಜನರ ರೀತಿ ನೀತಿ ಅಭಿರುಚಿ ಅಭಿಪ್ರಾಯಗಳು ಬದಲಾಗುತ್ತಿದ್ದರೂ, ಸಂಸ್ಕೃತಿಯ ಹಿರಿಮೆಯನ್ನು ಸಾರುವ ಜಾತ್ರೆ ಉತ್ಸವಗಳು ಅಪಾರ ಭಕ್ತ ಸಮುದಾಯದಿಂದ ಅದ್ದೂರಿಯಾಗಿ ನಡೆಯುತ್ತಿವೆ. ಇಂತಹ ಆಚರಣೆ ಮತ್ತು ಸಂಪ್ರದಾಯಗಳಿಂದ ಅವಧೂತರು ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡಿರುವುದು ಸ್ಪಷ್ಟವಾಗಿದೆ. ಒಟ್ಟಾರೆ ಮಠಗಳಲ್ಲಿನ ಆಚರಣೆಗಳು ಉತ್ಸವಗಳು ಸ್ನೇಹ ಸೌಹಾರ್ದತೆಯನ್ನು, ಸರ್ವಧರ್ಮ ಸಮನ್ವಯ ತೆಯನ್ನು, ಭಾಷಾ ಬಾಂಧವ್ಯವನ್ನು, ಬೆಳೆಸುತ್ತಿರುವುದು ಸಮಾಜದ ಆರೋಗ್ಯಕರ ಬೆಳವಣಿಗೆಯಾಗಿದೆ.

ಕೆಲವು ಅವಧೂತ ಮಠಗಳಲ್ಲಿ ವೀರಶೈವ ವರ್ಗದವರ ಪ್ರಾಬಲ್ಯ ಕಂಡುಬಂದರೂ, ಬೇರೆ ವರ್ಗದವರ ಪ್ರತಿರೋಧದಿಂದ ಜಾತ್ಯತೀತ ಮಠಗಳಾಗಿ ಬೆಳೆಯುತ್ತಿವೆ. ಇನ್ನು ಮಠದಲ್ಲಿ ನಡೆಯುವ ಪೂಜಾಚರಣೆಗಳು ವೀರಶೈವ ಸಿದ್ಧಾಂತದ ಚೌಕಟ್ಟಿನಲ್ಲೇ ನಡೆಯುತ್ತಿದ್ದರೂ, ಮೂಲತಃ ಅದ್ವೈತ ಉಪಾಸಕರಾಗಿದ್ದ ಅವಧೂತರ ವ್ಯಕ್ತಿತ್ವ ಮತ್ತು ಸಂದೇಶಗಳಿಗೆ ಪೂರಕವಾಗಿಯೇ ನಿಲ್ಲುತ್ತವೆ. ಸ್ಥಾಪಿತಗೊಂಡಿರುವ ಅವಧೂತರ ಮಠಗಳಲ್ಲಿ ಸಮಿತಿಯೊಂದನ್ನು ಬಿಟ್ಟರೆ ಉತ್ತರಾಧಿಕಾರಿಗಳಾಗಿ ಯಾರೂ ಇರುವುದಿಲ್ಲ. ಅವಧೂತರ ಜೀವಿತ ಕಾಲಾವಧಿ ಯಲ್ಲಿದ್ದ ಶಿಷ್ಯ ಪರಂಪರೆ, ಬೇರೆ ಬೇರೆ ಸ್ಥಳಗಳಲ್ಲಿ ಐಕ್ಯರಾಗಿದ್ದು, ಅಲ್ಲಿನ ಭಕ್ತರು ಅವರ ಹೆಸರಿನಲ್ಲಿ ಮಠಗಳನ್ನು ಕಟ್ಟಿಕೊಂಡು ಪೂಜಾಕಾರ್ಯಗಳನ್ನು ನಡೆಸುತ್ತಿದ್ದಾರೆ. ಹಂಪಿಯ ಶಿವರಾಮವಧೂತರ ಮಠವು ಇದಕ್ಕೆ ಹೊರತಾಗಿದ್ದು, ಇಂದು ಇಂಚಲ ಸಾಧು ಸಂಸ್ಥಾನಮಠದ ಶಿಷ್ಯ ಪರಂಪರೆಯ ಆಡಳಿತಕ್ಕೆ ಒಳಪಟ್ಟಿದೆ. ಶಿವರಾಮವಧೂತರ ಶಿಷ್ಯ ಶಿವಶರಣಾನಂದರು. ಇವರ ಶಿಷ್ಯ ಕಟ್ಟೇ ಬಸವರಾಜರು. ಇವರೆಲ್ಲಾ ಅವಧೂತ ಮಾರ್ಗದಲ್ಲಿ ನಡೆದು ಹೇಮಕೂಟದ ಮಠದಲ್ಲಿಯೇ ಐಕ್ಯರಾಗಿದ್ದಾರೆ. ನಂತರ ಇಂಚಲ ಮಠದ ಶ್ರೀ ಶಿವಾನಂದ ಭಾರತಿಸ್ವಾಮಿಗಳು ಕಟ್ಟೇಬಸವರಾಜರ ಶಿಷ್ಯರಾಗಿ ಅವಧೂತ ಮಠದ ಉಸ್ತುವಾರಿ ನೋಡಿಕೊಂಡಿದ್ದಾರೆ. ಈಗ ಅವರ ಶಿಷ್ಯ ಶ್ರೀ ವಿದ್ಯಾನಂದಭಾರತೀಸ್ವಾಮಿಗಳು ೧೯೯೭ರಿಂದ ಪೀಠಾಧಿಪತಿಗಳಾಗಿದ್ದಾರೆ. ಆದರೆ ಇವರು ಅವಧೂತರಲ್ಲ. ಅವಧೂತ ತತ್ವದ ಉಳಿವಿಗೆ ಶ್ರಮಿಸುತ್ತಿರುವವರು.

ಪುಚ್ಛರಂತೆ ಮಲಿನವಾಗೇ ಇದ್ದ ಅವಧೂತರು ಮೈಮೇಲೆ ಇದ್ದರೆ ತುಂಡುಬಟ್ಟೆ, ಇಲ್ಲದಿದ್ದರೆ ದಿಗಂಬರ ರಾಗಿಯೇ ತಿರುಗಾಡಿದ್ದವರು. ಅದಕ್ಕೆ ಪೂರಕವೆಂಬಂತೆ ಇಂದು ಅವರ ಮಠಗಳಲ್ಲಿ ಉತ್ಸವಮೂರ್ತಿಯನ್ನು ಬಿಟ್ಟರೆ, ಸ್ಥಾಪಿತಮೂರ್ತಿಗಳೆಲ್ಲಾ ತುಂಡು ಬಟ್ಟೆ ಧರಿಸಿರುವ ನಗ್ನ ಮೂರ್ತಿಗಳು.

ಅವಧೂತರ ಬಗ್ಗೆ ಭಕ್ತ ಜನತೆಯ ಮನಸ್ಸಿನಲ್ಲಿ ಶಾಶ್ವತವಾಗಿ ಉಳಿದಿರುವ ಅಂಶಗಳೆಂದರೆ, ಅವರು ಮಾಡಿದರೆನ್ನಲಾದ ಪವಾಡಗಳು ಮತ್ತು ನಂಬಿಕೆಗಳು. ಹಾಗೆಯೇ ಇವುಗಳನ್ನೊಳಗೊಂಡಿರುವ ಪುರಾಣ, ಚರಿತ್ರೆ, ಭಕ್ತಿಗೀತೆ, ಸುಪ್ರಭಾತ, ಭಜನಾಪದ, ನಾಮಾವಳಿ ಮೊದಲಾದ ಲಿಖಿತ ಮಾಹಿತಿಗಳು. ಇವುಗಳ ಮುಖಾಂತರ ಅವರ ಜೀವನ ಚರಿತ್ರೆಯನ್ನು, ಸಾಧನೆ ಸಿದ್ಧಿಯನ್ನು, ಅರಿತಿರುವುದರಿಂದ ಅವಧೂತರು ಅಲೆದಾಡಿದ ಹಾಗೂ ನೆಲೆನಿಂತ ಸ್ಥಳಗಳು ಇಂದು ಪುಣ್ಯಕ್ಷೇತ್ರಗಳಾಗಿವೆ. ಪುರಾಣ, ಚರಿತ್ರೆಗಳಲ್ಲಿ ಅವರ ಜೀವನಚರಿತ್ರೆಯನ್ನು ತಿಳಿಯುವುದರ ಜೊತೆಗೆ ಅವರು ಮಾಡಿದರೆನ್ನಲಾದ ಜೀವಪರವಾದ ಸಾಮಾಜಿಕ ಸಂವೇದನೆಯುಳ್ಳ ಪವಾಡ ಕತೆಗಳಿವೆ. ಪುರಾಣ ಸಾಹಿತ್ಯದ ಅವಿಭಾಜ್ಯ ಅಂಗವಾಗಿ ಬೆಳೆದಿರುವ ಪವಾಡಗಳ ವರ್ಣನೆಯ ಉದ್ದೇಶ ಜನಸಾಮಾನ್ಯರಿಗೆ ಅವಧೂತರ ಚರಿತ್ರೆ ಮತ್ತು ಅವರ ಮೌಲ್ಯಗಳನ್ನು ತಲುಪಿಸುವುದು.

[illegible]

ಇದಕ್ಕೂ ಮುಖ್ಯವಾಗಿ ಜನತೆಯಲ್ಲಿದ್ದ ಧಾರ್ಮಿಕ ಮೌಢ್ಯ, ಜಾತಿ-ಲಿಂಗ ತಾರತಮ್ಯ, ಅಹಂಕಾರ ಆಡಂಬರದ ಮನಸ್ಸುಗಳಿಗೆ ದಯೆ, ಪ್ರೀತಿ, ಕರುಣೆಯ ಮಹತ್ವ ತಿಳಿಸುವುದಾಗಿದೆ. ಮಹಾತ್ಮರ ಚರಿತ್ರೆಯನ್ನು ಕೇಳಿದ ಭಕ್ತರು, ಅವರ ಬಗ್ಗೆ ಭಕ್ತಿ ಗೌರವ ಮೂಡಿ, ನಿಷ್ಠೆ, ಆದರ್ಶ, ನಿರ್ಮಲ ಚಾರಿತ್ರ್ಯವನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬಹುದಾಗಿದೆ. ಭಕ್ತರ ಮನೋಧರ್ಮವನ್ನು ಅರಿತಿರುವ ಕೃತಿಕಾರರು ತಾವು ರಚಿಸಿರುವ ಪುರಾಣ, ಲೀಲೆ, ವಿಲಾಸ, ಚರಿತ್ರೆ ಮುಂತಾದ ಹೆಸರುಳ್ಳ ಕೃತಿಗಳಲ್ಲಿ ಹೆಚ್ಚು ಪವಾಡ ಕಥೆಗಳನ್ನೇ ವರ್ಣಿಸಿದ್ದಾರೆ. ಇಂದಿಗೂ ಮಠ, ಮಂದಿರ, ದೇವಾಲಯಗಳಲ್ಲಿ ಪುರಾಣ ಪ್ರವಚನ ಕಾರ್ಯಕ್ರಮಗಳು ತುಂಬಾ ಯಶಸ್ವಿಯಾಗಿ ನಡೆಯುತ್ತಿರುವುದು ಅವಧೂತರ ಜನಪ್ರಿಯತೆಗೆ ನಿದರ್ಶನವಾಗಿದೆ.

ಕೆಲವು ಕಡೆ ಗುರುಮಾರ್ಗದ ಮತ್ತು ಗುರುಗಳ ಹೆಸರಿನಲ್ಲಿ ಮಠ ಮಂದಿರಗಳನ್ನು ಕಟ್ಟಿಕೊಂಡು ಅನೇಕರು ಕಪಟ ಗುರು-ಶಿಷ್ಯರಾಗಿ ವಾಮಮಾರ್ಗದ ಹಾದಿ ಹಿಡಿದವರಿದ್ದಾರೆ. ಮಾಡಬಾರದ ಅನೈತಿಕ ಕೆಲಸಗಳನ್ನು, ದುಶ್ಚಟಗಳನ್ನು ಗುರುಗಳ ಹೆಸರ್ಹೇಳಿಕೊಂಡು ನಡೆಸುತ್ತಿದ್ದಾರೆ.

'ಮದ್ಯಪಾನಂ ಮಹಾಪಾಪಂ ನಾರೀ ಸಂಗಸ್ತಥೈವ ಚ
ತಸ್ಮಾದ್ವಯಂ ಪರಿತ್ಯಜ್ಯ ತತ್ತ್ವನಿಷ್ಠೋ ಭವೇನ್ಮುನಿಃ ||' ಅವಧೂತ ಉವಾಚ

ಮಧ್ಯಪಾನ ಮಹಾಪಾಪ, ಇದರಂತೆ ಸ್ತ್ರೀ ಸಂಗ. ಮುನಿಗಳಾದವರು ಎರಡನ್ನೂ ತ್ಯಜಿಸಿ ತತ್ವದಲ್ಲಿ ನಿಷ್ಠೆಯುಳ್ಳವರಾಗಿರಬೇಕು ಎನ್ನುವ ಅವಧೂತ ವಾಕ್ಯವನ್ನು ಮರೆತು ತಮ್ಮನ್ನು ತಾವೇ ಅನುಭಾವಿಗಳೆಂದೂ, ಸದ್ಗುರುಗಳೆಂದೂ ಕರೆದುಕೊಂಡಿರುವವರಿದ್ದಾರೆ. ತಮ್ಮ ಸ್ವಾರ್ಥಕ್ಕಾಗಿ ಭಕ್ತ ಜನತೆಯನ್ನು ದಾರಿತಪ್ಪಿಸಿ ಅವಧೂತ ಸಂಸ್ಕೃತಿಯನ್ನು ಹಾಳುಮಾಡುತ್ತಿದ್ದಾರೆ. ಇಂಥವರಿಂದ ಭಕ್ತಜನತೆ ದೂರವಿದ್ದು ಸದಾ ಎಚ್ಚರವಹಿಸಬೇಕಾಗಿರುವುದು ಅವಶ್ಯಕವಾಗಿದೆ.

ಮಡಿ-ಮೈಲಿಗೆಯನ್ನು, ಜಾತಿ-ಮತಗಳ ಅಜ್ಞಾನವನ್ನು ಮೂಢನಂಬಿಕೆ ಮತ್ತು ಡಂಭಾಚಾರದ ಆಚರಣೆಗಳನ್ನು ವಿಡಂಬಿಸುವಂತೆ ದೈಹಿಕವಾಗಿ ಮಲಿನವಾಗಿದ್ದರೂ, ಮಾನಸಿಕವಾಗಿ ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಂಡ ಅವಧೂತರು ದೈವವನ್ನು ತಮ್ಮ ಅರಿವಿನ ಮೂಲಕ ತಮ್ಮಂತರಂಗದಲ್ಲಿಯೇ ಹುಡುಕಿಕೊಂಡವರು. ಬಹು ಧರ್ಮೀಯರ, ಬಹುಜಾತೀಯ, ಬಹುಭಾಷೆಯ ಸಮಾಜದಲ್ಲಿ ನಾನಾ ರೀತಿಯ ಗಲಭೆಗಳು ನಡೆಯುತ್ತಿರುವಾಗ, ಧರ್ಮಸಾಮರಸ್ಯ, ಜಾತಿ ಮತ್ತು ಭಾಷಾಬಾಂಧವ್ಯ ಮೂಡಿಸುವಲ್ಲಿ ಅವಧೂತ ಸಂಸ್ಕೃತಿಯು ಅಗತ್ಯವಾಗಿದೆ.

ಸಿಲುಕದಿರಿ ಮತವೆಂಬ ಮೋಹದಜ್ಞಾನಕ್ಕೆ
ಮತಿಯಿಂದ ದುಡಿಯಿರೈ ಲೋಕಹಿತಕೆ
ಆ ಮತದ, ಈ ಮತದ ಹಳೆ ಮತದ ಸಹವಾಸ
ಸಾಕಿನ್ನು ಸೇರಿರೈ ಮನುಜ ಮತಕೆ
ಓ ಬನ್ನಿ ಸೋದರರೆ ವಿಶ್ವಪಥಕೆ

ಎನ್ನುವ ಕುವೆಂಪುರವರ ವಿಶ್ವಮಾನವ ಸಂದೇಶ ಅವಧೂತ ಮಾರ್ಗಕ್ಕೆ ಸಂವಾದಿಯಾಗಿ ನಿಲ್ಲುತ್ತದೆ. ಅವಧೂತರಂತೆ ವಿಶಿಷ್ಟ ವ್ಯಕ್ತಿತ್ವ ಮತ್ತು ಧೋರಣೆ ಹೊಂದಿರುವ ತತ್ವಪದಕಾರರು, ಸ್ವರವಚನಕಾರರು, ಸೂಫಿಗಳು, ಸಂತರು, ಅದ್ವೈತಿಗಳು, ಆರೂಢರು ಮುಂತಾದ ಧರ್ಮನಿರಪೇಕ್ಷಿಗಳು ಸಮಾನ ಮನೋಭಾವ ವುಳ್ಳವರಾಗಿದ್ದಾರೆ.

ಒಟ್ಟಾರೆ ವಿಶಾಲ ಧಾರ್ಮಿಕ ನೀತಿ, ಜಾತ್ಯತೀತ ನಿಲುವು, ಸಾಮಾಜಿಕ ಮೌಲ್ಯಗಳು ಮತ್ತು ಮಾನವ ಕುಲವನ್ನೆ ಎತ್ತಿ ಹಿಡಿದ ಅವಧೂತರ ಸಂಸ್ಕೃತಿ ಹಾಗೂ ತತ್ವ ಸಂದೇಶಗಳು ಸರ್ವಕಾಲಕ್ಕೂ ಪ್ರಸ್ತುತವಾಗಿವೆ. ಈ ದಿಸೆಯಲ್ಲಿ ಅವಧೂತ ಸಂಸ್ಕೃತಿಯನ್ನು ದೇಶೀಯ ನೆಲೆಗಟ್ಟಿನ ಆಧಾರದಲ್ಲಿ ಮೌಖಿಕ ಕಥೆಗಳ ಹಿನ್ನೆಲೆ ಯಲ್ಲಿ ಅವರ ಚಿಂತನೆಯನ್ನು ಅಧ್ಯಯನ ಮಾಡಬೇಕಾದ ಅನಿವಾರ್ಯತೆ ಇದೆ. ಈ ನಿಟ್ಟಿನಲ್ಲಿ ಬಳ್ಳಾರಿ ಜಿಲ್ಲೆಯ ಅವಧೂತರ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಅನುಬಂಧ


೧. ನಕ್ಷೆ

೨. ಛಾಯಾಚಿತ್ರಗಳು

೩. ವಕ್ತೃಗಳ ವಿವರ

೪. ಗ್ರಂಥಋಣ


ಬಳ್ಳಾರಿ ಜಿಲ್ಲೆಯ ಅವಧೂತರ ನೆಲೆಗಳು



೧. ಚೇಳಗುರಿಕೆ	೮. ಬೈಲುಹೊದ್ದಿಗೆರೆ
೨. ಎಮ್ಮಿಗನೂರು	೯. ಕೊಟಗಿನಹಾಳು
೩. ದಮ್ಮೂರು	೧೦. ಕುಡಿತಿನಿ
೪. ಕೊಳಗಲ್ಲು	೧೧. ಹರಗಿನ ಡೋಣಿ
೫. ಸಿಂಧಿಗೇರಿ	೧೨. ಕಾಳಘಟ್ಟ
೬. ಹಂಪಿ	೧೩. ಹೊಸಪೇಟೆ
೭. ಕಂಪ್ಲಿ	




ಚೇಳಗುರಿಕೆ ಎರ್‍ರಿತಾತ




ಎರ್‍ರಿತಾತನವರ ಜೀವಸಮಾಧಿ ಕ್ಷೇತ್ರ, ಚೇಳಗುರಿಕೆ







ಎರ್ರಿತಾತನವರ ಮುತ್ತಿನ ಪಲ್ಲಕ್ಕಿ, ಚೇಳಗುರಿಕೆ



ಎರ್ರಿತಾತನವರ ಹೂವಿನ ರಥೋತ್ಸವ








ಎರ್ರಿತಾತನವರ ಜಾತ್ರೋತ್ಸವ, ಚೇಳಗುರಿಕೆ



ಎರ್ರಿತಾತನವರ ಅಷ್ಟೋತ್ತರ ಶಂಖಾಭಿಷೇಕ ಪೂಜೆ



ಎಮ್ಮಿಗನೂರು ಜಡೆಪ್ಪತಾತ




ಜಾತ್ರೆಯ ಸಂದರ್ಭದಲ್ಲಿ ಗಂಗಾಪೂಜೆ, ಹಂದ್ಯಾಳು








ಜಡೆಪ್ಪತಾತನವರ ಜಾತ್ರೋತ್ಸವ, ಹಂದ್ಯಾಳು




ಪುರಾಣ ಪ್ರವಚನ ಕಾರ್ಯಕ್ರಮ







ದಮ್ಮೂರು ವೆಂಕಾವಧೂತ



ವೆಂಕಾವಧೂತರ ಗಂಧದ ಮಂಚ







ವೆಂಕಾವಧೂತರು ಕುಳಿತುಕೊಳ್ಳುತ್ತಿದ್ದ ಕುರ್ಚಿ



ವೆಂಕಾವಧೂತರ ಮಠ, ದಮ್ಮೂರು




ವೆಂಕಾವಧೂತರ ಜಾತ್ರೋತ್ಸವ, ದಮ್ಮೂರು



ಕೊಳಗಲ್ಲು ಎರಿಬಸವತಾತ








ಸಿಂಧಿಗೇರಿ ಮಲ್ಲಪ್ಪತಾತ




ಸಿಂಧಿಗೇರಿ ಮಲ್ಲಪ್ಪತಾತನವರ ರಥೋತ್ಸವ, ಬೈಲೂರುಮಠ







ಶಿವರಾಮವಧೂತರು ಹೇಮಕೂಟ, ಹಂಪಿ




ಶಿವಶರಣಾನಂದಾವಧೂತರು ಹೇಮಕೂಟ, ಹಂಪಿ







ಹೇರೂರು ವಿರೂಪಾವಧೂತ




ರುದ್ರಾನಂದಾವಧೂತರ ಗದ್ದುಗೆ, ಕಾಳಘಟ್ಟ







ಬೈಲುಹೊದ್ದಿಗೆರೆ ಸುಡುಗಾಡಪ್ಪತಾತನವರ ಗದ್ದುಗೆ




ಕುಡಿತಿನಿ ಶಂಕ್ರಪ್ಪತಾತನವರ ಗದ್ದುಗೆ







ಕೊಟಗಿನಹಾಳು ಬಸಪ್ಪತಾತ



ಗುರು ಕಪೂರಸ್ವಾಮಿ ಮತ್ತು ವಿರುಪಾಕ್ಷಸ್ವಾಮಿಗಳ ಸಮಾಧಿ, ಕೊಟಗಿನಹಾಳು







ಹರಗಿನದೋಣಿ ಬುಗ್ಗಾವಧೂತ



ಹೊಸಪೇಟೆ ಕೆಂಪಾವಧೂತ





ವಕ್ತೃಗಳ ವಿವರ

ಹೆಸರು		ಸ್ಥಳ	ವಯಸ್ಸು	ಉದ್ಯೋಗ
೦೧.	ಅಂಬಮ್ಮ	ಹೊಸಪೇಟೆ	೬೫	ಆಶ್ರಮವಾಸಿ
೦೨.	ಈರ ಬಸಪ್ಪಗೌಡ	ಕೊಳಗಲ್ಲು	೮೦	ಒಕ್ಕಲುತನ
೦೩.	ಎರ್ರಿಸ್ವಾಮಿ	,,	೭೨	,,
೦೪.	ಕೊತ್ಲಪ್ಪ	,,	೭೮	,,
೦೫.	ಗಣಪಲ್ ಯಂಕಾರೆಡ್ಡಿ	ದಮ್ಮೂರು	೭೨	,,
೦೬.	ಗುರುಪಾದಯ್ಯಸ್ವಾಮಿ	,,	೭೦	ನಿವೃತ್ತ ಶಿಕ್ಷಕರು
೦೭.	ಗುರುರಾಜ ನಿಪ್ಪಾಣಿ ಆಚಾರ್	ಬಳ್ಳಾರಿ	೫೫	ಸಂಸ್ಕೃತ ಉಪನ್ಯಾಸಕರು
೦೮.	ಗುರುಪಾದಪ್ಪ.	ಕೊಟಗಿನಹಾಳು	೬೦	ವಂಶಸ್ಥರು
೦೯.	ಗುರುಪಾದಪ್ಪ	ಸಿಂಧಿಗೇರಿ	೭೦	ಒಕ್ಕಲುತನ
೧೦.	ಚನ್ನಬಸಪ್ಪ ಚಿಲ್ಕರಾಗಿ	ಸಿಂಧನೂರು	೩೫	ಉಪನ್ಯಾಸಕರು
೧೧.	ಚೌದ್ರಿ ಷಣ್ಮುಖಪ್ಪ	ಬಳ್ಳಾರಿ	೬೭	ಒಕ್ಕಲುತನ
೧೨.	ಜಯರಾಮ ರೆಡ್ಡಿ	ದಮ್ಮೂರು	೫೦	,,
೧೩.	ದೊಡ್ಡ ಜಡಯ್ಯ	ಎಮ್ಮಿಗನೂರು	೫೦	ವಂಶಸ್ಥರು
೧೪.	ದೊಡ್ಡಬಸವ ಗವಾಯಿ	ಡಿ.ಕಗ್ಗಲ್	೪೦	ಸಂಗೀತಮಾಸ್ತರು
೧೫.	ನಾಗರೆಡ್ಡಿ ಗೌಡರು	ದಮ್ಮೂರು	೭೫	ಒಕ್ಕಲುತನ
೧೬.	ನಾರಾಯಣ ಸ್ವಾಮಿ	ಬೈಲಹೊದ್ದಿಗೆರೆ	೫೮	,,
೧೭.	ನಿಷ್ಠಿ ಬಸವರಾಜಪ್ಪ	ಬಳ್ಳಾರಿ	೬೮	ಹಾರ್ಮೋನಿಯಂ ರಿಪೇರಿಕಾರರು
೧೮.	ನಿಷ್ಠಿ ರುದ್ರಪ್ಪ	,,	೩೮	ವ್ಯಾಪಾರಸ್ಥರು
೧೯.	ಪಲ್ಲೇದ ಪಂಪಾಪತೆಪ್ಪ	ಕುಡಿತಿನಿ	೬೫	ಒಕ್ಕಲುತನ
೨೦.	ಪಾರ್ವತಮ್ಮ	ಕೊಟಗಿನಹಾಳು	೫೦	ವಂಶಸ್ತರು

೨೧. ಬಸವರಾಜು	ಕೊಳಗಲ್ಲು	೪೦	ಒಕ್ಕಲುತನ
೨೨. ಬಸಪ್ಪ ಕುಂಬಾರ ಚಿಲ್ಕರಾಗಿ	ಕಾರಟಗಿ	೬೦	,,
೨೩. ಬಸಣ್ಣಗೌಡ	ಬಳ್ಳಾರಿ	೬೮	ವ್ಯಾಪಾರಸ್ಥರು
೨೪. ಬಸವನ ಗೌಡ ವೈ.	ದಮ್ಮೂರು	೬೮	ಒಕ್ಕಲುತನ
೨೫. ಭೈರಪ್ಪ	ಪಿ.ಡಿ.ಹಳ್ಳಿ	೩೦	ಛಾಯಾಗ್ರಾಹಕ
೨೬. ಬಾರಿಕೇರಿ ಗೋವಿಂದಪ್ಪ	ಬೈಲಹೊದ್ದಿಗೆರೆ	೫೦	ವ್ಯಾಪಾರಸ್ಥರು
೨೭. ಮಾರ್ಕಂಡೇಯ ಹೆಚ್.ಎಂ.	ಬಳ್ಳಾರಿ	೫೦	ಶಿಕ್ಷಕರು
೨೮. ಮೇಟಿ ಹಂಪಮ್ಮ	ಚೇಳಗುರಿಕೆ	೯೦	ಒಕ್ಕಲುತನ
೨೯. ಯಂಕಮ್ಮ	ಬೈಲಹೊದ್ದಿಗೆರೆ	೭೦	....
೩೦. ರಾಮನಗೌಡ	ದಮ್ಮೂರು	೭೨	ಒಕ್ಕಲುತನ
೩೧. ರಾಮಲಿ	ಹೊಸಪೇಟೆ	೫೦	,,
೩೨. ರುದ್ರಯ್ಯ	,,	೭೦	ನಿವೃತ್ತ ವೈದ್ಯರು
೩೩. ವೀರಮ್ಮ	ಬಳ್ಳಾರಿ	೬೦	......
೩೪. ವೇಮಲ ಗಟ್ಟೆಪ್ಪ ಶ್ರೇಷ್ಠಿ	ಹೊಸಪೇಟೆ	೭೦	ವ್ಯಾಪಾರಸ್ಥರು
೩೫. ಶಶಿಧರ ಮೇಟಿ	ಚೇಳಗುರಿಕೆ	೨೪	ವಿದ್ಯಾರ್ಥಿ
೩೬. ಶಿವಮೂರ್ತಿ ಶಾಸ್ತ್ರಿಗಳು	ಬೈಲುಹೊದ್ದಿಗೆರೆ	೬೫	ನಿವೃತ್ತ ಶಿಕ್ಷಕರು ಮತ್ತು ಪುರಾಣಕರ್ತರು
೩೭. ಶಿವಶಂಕರ ರೆಡ್ಡಿ	ದಮ್ಮೂರು	೭೦	ಒಕ್ಕಲುತನ
೩೮. ಸಾದಿಕ್	ಎಮ್ಮಿಗನೂರು	೪೫	ಒಕ್ಕಲುತನ
೩೯. ಸಿದ್ದಲಿಂಗಪ್ಪ ಕೆ.ಬಿ.	ಬಳ್ಳಾರಿ	೫೫	ಶಿಕ್ಷಕರು
೪೦. ಸಿದ್ದಪ್ಪ	ಬೈಲುಹೊದ್ದಿಗೆರೆ	೭೦	ಒಕ್ಕಲುತನ
೪೧. ಸಿದ್ಧಯ್ಯತಾತ	ಕುರೇಕುಪ್ಪ	೬೦	ಆಶ್ರಮವಾಸಿಗಳು
೪೨. ವೈ.ಹನುಮಂತರೆಡ್ಡಿ	ಬಳ್ಳಾರಿ	೭೦	ನಿವೃತ್ತ ಶಿಕ್ಷಕರು
೪೩. ಹಿರೆಗೌಡ್ರ ಕರಿಬಸವನಗೌಡ್ರು	ಚೇಳಗುರಿಕೆ	೬೦	ಒಕ್ಕಲುತನ

ಗ್ರಂಥಋಣ

ಅ. ಕೃತಿಗಳು

೧. ಅಮರನಾಥ ಶಾಸ್ತ್ರಿಗಳು : ಎಮ್ಮಿಗನೂರು ಜಡೆಸಿದ್ಧ ಶಿವಯೋಗಿಗಳ ಪುರಾಣವು
ಪ್ರ : ಶ್ರೀ ಪ್ರಣವಜ್ಯೋತಿ ಪ್ರಕಾಶನ, ಮೆಟ್ರಿ, ೧೯೭೫

೨. ಅಮರೇಶ ನುಗಡೋಣಿ : (ಸಂ) ಶೂನ್ಯ ಸಂಪಾದನೆಗಳು : ಸಾಂಸ್ಕೃತಿಕ ಮುಖಾಮುಖಿ
ಪ್ರ : ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨

೩. ಅಮರೇಶ ನುಗಡೋಣಿ : ನುಡಿವ ಬೆಡಗು, ಪ್ರ : ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯

೪. ಅಮರೇಶ ನುಗಡೋಣಿ : ಹೈದರಾಬಾದು ಕರ್ನಾಟಕ ಹಾಡು-ಪಾಡು
ಪ್ರ : ಕನ್ನಡ ವಿ.ವಿ. ಹಂಪಿ, ೨೦೦೩

೫. ಅಯ್ಯನಗೌಡ ಎಸ್.ವಿ. : ಸಂಶೋಧನ ದೀಪ್ತಿ, ಪ್ರ : ಶ್ರೀ ಜ.ಗಂ. ಧರ್ಮ ಪ್ರಚಾರಕ ಮಂಡಳಿ ಮೂರುಸಾವಿರ ಮಠ, ಹುಬ್ಬಳ್ಳಿ - ೧೯೯೪

೬. ಕಲಬುರ್ಗಿ ಎಂ.ಎಂ. : ಮಾರ್ಗ-೧, ಪ್ರ : ಕರ್ನಾಟಕ ಬುಕ್ ಏಜೆನ್ಸಿ , ಬೆಂಗಳೂರು, ೧೯೮೮

೭. ಕಲಬುರ್ಗಿ ಎಂ.ಎಂ. : ಮಾರ್ಗ-೩
ಪ್ರ : ಕರ್ನಾಟಕ ಬುಕ್ ಏಜೆನ್ಸಿ ಇಲಾಖೆ, ಬೆಂಗಳೂರು, ೧೯೯೮

೮. ಕಲಬುರ್ಗಿ ಎಂ.ಎಂ. : ಬಸವಣ್ಣನವರ ವಚನ ಸಂಪುಟ,
ಪ್ರ : ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೧೯೯೩

೯. ಕೃಷ್ಣಮೂರ್ತಿ ಎಂ.ಎಸ್. : ಸಿದ್ಧ ಸಾಹಿತ್ಯ
ಪ್ರ : ಮೈಸೂರು ವಿಶ್ವವಿದ್ಯಾನಿಲಯ ಮೈಸೂರು, ೧೯೮೨

೧೦. ಕಾಪಸೆ, ಜಿ.ಎಸ್. : ಕಂಠಿ, (ಸಂ) ಚಿದಾನಂದವಧೂತರ ಜ್ಞಾನ ಸಿಂಧು
ಪ್ರ : ಶ್ರೀ ಹುರಕಡ್ಲಿ ಅಜ್ಜ ಶಿಕ್ಷಣ ಸಮಿತಿ, ಧಾರವಾಡ, ೧೯೯೦

೧೧. ಗಂಗಾಧರ ಪತ್ತಾರ : (ಸಂ) ಶರಣಾಂಬುಧಿ
ಪ್ರ : ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಬಳ್ಳಾರಿ ಘಟಕ, ೨೦೦೦

೧೨. ಗದ್ದಿಗಿಮಠ, ಬಿ.ಎಸ್. : (ಸಂ) ಕನ್ನಡ ಜನಪದ ಗೀತೆಗಳು
ಪ್ರ : ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೧೯೫೭

೧೩. ಗುಂಡಪ್ಪ ಎಲ್. : (ಸಂ) ಆದಿಪುರಾಣ, ಪ್ರ : ಮೈ ವಿ.ವಿ. ಮೈಸೂರು, ೧೯೫೭

೧೪. ಗುರುಸಿದ್ಧ ಶಿವಾಚಾರ್ಯರು : ಮಹಾಮಹಿಮ ಜಡೆಯೋಗೀಶ್ವರ ಚರಿತ್ರೆ
ಪ್ರ : ಶ್ರೀ ಹಂಪಿ ಸಾವಿರ ದೇವರು ಮಹಾಂತಿನಮಠ, ಎಮ್ಮಿಗನೂರು

೧೫. ಗೋಪಾಲಯ್ಯ ಕೆ.ಎಚ್.: ಪುರಾಣ, ಪ್ರ: ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು, ೧೯೯೦

೧೬. ಚನ್ನಬಸವೇಶ್ವರ. ಶಿ. ವ. : ಚೇಳಗುರಿಕೆ ಶ್ರೀ ಎರ್ರಿಸ್ವಾಮಿಗಳ ಲೀಲಾವಿಲಾಸ
ಪ್ರ : ಚೇಳಗುರಿಕೆ ಶ್ರೀ ಎರ್ರಿಸ್ವಾಮಿಗಳ ಜೀವಸಮಾಧಿ, ಚೇಳಗುರಿಕೆ, ೧೯೬೫

೧೭. ಚನ್ನಬಸಪ್ಪ ಶಿವಬಸಪ್ಪ ಕಲ್ಮಂಗಿ : ಮಹಾಮಹಿಮ ಯಮ್ಮಿಗನೂರು ಶ್ರೀ ಜಡೇಸಿದ್ದೇಶ್ವರ ಶತಕವು, ಪ್ರ : ಶ್ರೀ ಜಡೆಸಿದ್ದೇಶ್ವರ ಶಿವಯೋಗಾಶ್ರಮ, ಕಾಕಬಾಳು, ಹೊಸಪೇಟೆ, ೧೯೮೭

೧೮. ಚನ್ನವೀರಪ್ಪ ಎಸ್.ಆರ್.: (ಸಂ) ಸ್ವರವಚನ ತರಂಗ, ಪ್ರ : ಕನ್ನಡ ವಿ.ವಿ ಹಂಪಿ. ೨೦೦೦

೧೯. ಚಿದಾನಂದ ಮೂರ್ತಿ ಎಂ. : ಸಂಶೋಧನೆ, ಪ್ರ : ಕನ್ನಡ ಅಧ್ಯಯನ ಸಂಸ್ಥೆ. ಮೈ.ವಿ.ವಿ. ಮೈಸೂರು, ೧೯೯೭

೨೦. ಜವರೇಗೌಡ : ಜಾನಪದ ಅಧ್ಯಯನ, ಪ್ರ : ವಿ.ಕೆ.ಮೂರ್ತಿ, ಮೈಸೂರು, ೧೯೭೮

೨೧. ತಿಪ್ಪೇರುದ್ರಸ್ವಾಮಿ ಹೆಚ್.: ಕರ್ನಾಟಕ ಸಂಸ್ಕೃತಿ ಸಮೀಕ್ಷೆ,
ಪ್ರ : ಪಿ.ವಿ.ಕೆ.ಮೂರ್ತಿ, ಮೈಸೂರು, ೧೯೯೭

೨೨. ತಿಪ್ಪೇಸ್ವಾಮಿ, ಶರಣರು ಮತ್ತು ಸಂತರು, ಪ್ರ : ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಮೈಸೂರು, ೧೯೯೮

೨೩. ತಿಪ್ಪೇರುದ್ರಸ್ವಾಮಿ ಹೆಚ್.: ಶರಣರ ಅನುಭಾವ ಸಾಹಿತ್ಯ
ಪ್ರ : ಪಿ,ವಿ,ಕೆ ಮೂರ್ತಿ, ಮೈಸೂರು, ೧೯೯೧

೨೪. ದಾಸೇಗೌಡ : ನಮ್ಮ ಜನಪದ ನಂಬಿಕೆಗಳು, ಪ್ರ : ಕನ್ನಡ ಅಧ್ಯಯನ ಸಂಸ್ಥೆ. ಮೈ.ವಿ.ವಿ. ಮೈಸೂರು, ೧೯೭೩

೨೫. ದೇವುಡು ನರಸಿಂಹ ಶಾಸ್ತ್ರಿ ಮತ್ತು ಶಿವಮೂರ್ತಿ : (ಸಂ) ಜೈಮಿನಿ ಭಾರತ
ಪ್ರ : ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ನೃಪತುಂಗ ರಸ್ತೆ, ಬೆಂಗಳೂರು

೨೬. ದೊಡ್ಡನಗೌಡರು ಜೋಳದರಾಶಿ : ಚೇಳಗುರಿಕೆ ಎರ್ರಿತಾತ
ಪ್ರ : ಐ.ಬಿ.ಹೆಚ್.ಪ್ರಕಾಶನ, ಬೆಂಗಳೂರು, ೧೯೮೧

೨೭. ದೊಡ್ಡನಗೌಡರು ಜೋಳದರಾಶಿ : (ಸಂ) ಚೇಳಗುರಿಕೆ ಎರ್ರಿತಾತನವರ ಶಿವಮಯ ಜೀವನ ಚರಿತ್ರೆ ಮತ್ತು ತಿಕ್ಕಾವಧೂತರ ಭಕ್ತಿಗೀತೆಗಳು, ಪ್ರ : ಶ್ರೀ ಎರ್ರಿತಾತನವರ ಜೀವಸಮಾಧಿ ಕ್ಷೇತ್ರ, ಚೇಳಗುರಿಕೆ, ೧೯೭೪

೨೮. ನಂಜುಂಡಪ್ಪ. ವೈ.ವಿ. : ಶಿವಯೋಗಿ ಶ್ರೀ ಜಿನಕಲ್ಲು ಸಿದ್ದೇಶ್ವರ ಪ್ರ : ಸಿದ್ಧ ಸಾಹಿತ್ಯ ಪ್ರಕಾಶನ, ಅರಸೀಕೆರೆ, ೧೯೯೯

೨೯. ನರಸಿಂಹಾಚಾರ್, ಆರ್. : ಕರ್ನಾಟಕ ಕವಿ ಚರಿತೆ, ಸಂಪುಟ -೨ ಪ್ರ : ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು, ೧೯೭೩

೩೦. ನಾಗೇಶ ಶಾಸ್ತ್ರಿಗಳು, ವೈ. : ಲೀಲಾಮೃತ, ಪ್ರ : ಶ್ರೀ ಎರ್ರಿಸ್ವಾಮಿಗಳ ಜೀವಸಮಾಧಿ ಕ್ಷೇತ್ರ, ಚೇಳ್ಳಗುರಿಕೆ ೧೯೬೬

೩೧. ನಾಯಕ, ಹಾ.ಮಾ. : ಜಾನಪದ ಸ್ವರೂಪ, ಪ್ರ : ತಳಿಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ ಮೈಸೂರು, ೧೯೭೧

೩೨. ಪುಟ್ಟಪ್ಪ. ಕೆ.ವಿ.: (ಸಂ) ಯುಗಯಾತ್ರಿ ಭಾರತೀಯ ಸಂಸ್ಕೃತಿ, ಸಂಪುಟ-೧ ಪ್ರ : ಮೈಸೂರು ವಿ.ವಿ., ಮೈಸೂರು, ೧೯೭೦

೩೩. ಪೂಜಾರ್ ವ್ಹಿ.ಜಿ. : ವೀರಶೈವ ಸಾಹಿತ್ಯದಲ್ಲಿ ಪವಾಡ ಕಥೆಗಳು, ಪ್ರ : ಪುಸ್ತಕ ಅಕಾಡಮಿ, ಕಲುಬುರ್ಗಿ, ೧೯೯೧

೩೪. ಪ್ರಭಾನಂದ ಪಂಡಿತರು : ಸಿಂಧಿಗೇರಿ ಶ್ರೀ ಶಿವಶರಣ ಮಲ್ಲೇಶ್ವರನ ಪುರಾಣವು, ಪ್ರ : ಕೆ.ಗುರುಪಾದಪ್ಪ, ಸಿಂಧಿಗೇರಿ ೧೯೮೭

೩೫. ಪ್ರೇಮಾನಂದ : ವಿಜ್ಞಾನ ಮತ್ತು ಪವಾಡಗಳು, (ಅನು) ಪಾಂಡುರಂಗ ಶಾಸ್ತ್ರಿ, ಸೀತಾರಾಮ್ ಪ್ರ : ನವಕರ್ನಾಟಕ ಪ್ರಕಾಶನ, ಬೆಂಗಳೂರು, ೧೯೯೭

೩೬. ಬಸಣ್ಣಶಾಸ್ತ್ರಿ : ಸಿಂಧಿಗೇರಿ ಶರಣ ಶ್ರೀ ಮಲ್ಲಪ್ಪತಾತನ ಜೀವನ ಚರಿತ್ರೆ : ಕರ್ಚೇಡು

೩೭. ಬಸವರಾಜ ಬಿ.ಸಿ. : ಚೇಳಗುರಿಕೆ ಶ್ರೀ ಎರ್ರಿಸ್ವಾಮಿಗಳು, ಪ್ರ : ತ್ರಿವೇಣಿ ಪಬ್ಲಿಕೇಷನ್ಸ್, ಚಾಮರಾಜನಗರ, ಮೈಸೂರು, ೧೯೯೯

೩೮. ಬಸವರಾಜ ಎಲ್.: (ಸಂ) ಶಿವಗಣ ಪ್ರಸಾದಿ ಮಹಾದೇವಯ್ಯಗಳ ಶೂನ್ಯ ಸಂಪಾದನೆ ಪ್ರ : ಶ್ರೀ ಬೃಹನ್ಮಠ ಸಂಸ್ಥಾನ, ಚಿತ್ರದುರ್ಗ, ೧೯೬೯

೩೯. ಬಸವರಾಜ ಕಲ್ಗುಡಿ : ಮಧ್ಯಕಾಲೀನ ಭಕ್ತಿ ಮತ್ತು ಅನುಭಾವ ಸಾಹಿತ್ಯ ಹಾಗೂ ಚಾರಿತ್ರಿಕ ಪ್ರಜ್ಞೆ, ಪ್ರ : ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೫

೪೦. ಬಸವರಾಜ ಸಬರದ : (ಸಂ) ಹೈದರಬಾದ್ ಕರ್ನಾಟಕದ ತತ್ತ್ವಪದಕಾರರು,
ಪ್ರ : ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೦

೪೧. ಬಸವರಾಜ ಸಬರದ : ಗುಲಬರ್ಗಾ ಜಿಲ್ಲೆಯ ಅನುಭಾವದ ಕವಿಗಳು
ಪ್ರ : ಕನ್ನಡ ವಿಶ್ವವಿದ್ಯಾಲಯ ಹಂಪಿ, ೧೯೯೫

೪೨. ಬದ್ರಾಪುರ ಎಸ್.ಎಸ್.: ಉತ್ತರ ಕರ್ನಾಟಕದ ಜಾನಪದ ಐತಿಹ್ಯಗಳು

೪೩. ಬಸವರಾಜ ಎಲ್.: ನಿಜಗುಣ ಶಿವಯೋಗಿಯ ತತ್ತ್ವ ದರ್ಶನ
ಪ್ರ : ಶ್ರೀ ಜಗದ್ಗುರು ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು ೧೯೯೧

೪೪. ಮರಿಸಿದ್ದಯ್ಯ ಸ್ವಾಮಿಗಳು : ಶ್ರೀ ಶಿವರಾಮವಧೂತರ ಪುರಾಣವು,
ಪ್ರ : ಶ್ರೀ ವಿದ್ಯಾನಂದ ಭಾರತಿಸ್ವಾಮಿಗಳು. ಶ್ರೀ ಶಿವರಾಮವಧೂತ ಆಶ್ರಮ ಹೇಮಕೂಟ, ಹಂಪಿ, ೨೦೦೩

೪೫. ಮಂಜುನಾಥ ಬೇವಿನಕಟ್ಟಿ : ಜನಪದ ನಂಬಿಕೆಗಳು
ಪ್ರ : ಕನ್ನಡ ವಿಶ್ವವಿದ್ಯಾಲಯ ಹಂಪಿ, ೧೯೯೬

೪೬. ಮಲ್ಲೇಪುರಂ ಜಿ.ವೆಂಕಟೇಶ : ಮಹಲಿಂಗರಂಗ
ಪ್ರ : ಕರ್ನಾಟಕ ಸಾಹಿತ್ಯ ಅಕಾಡಮಿ, ಬೆಂಗಳೂರು, ೧೯೯೬

೪೭. ರಹಮತ್ ತರೀಕೆರೆ : ಮರದೊಳಗಿನ ಕಿಚ್ಚು, ೨೦೦೨
ಪ್ರ : ಬೆಳ್ಳಿಚುಕ್ಕಿ ಬುಕ್ ಟ್ರಸ್ಟ್, ಕಾಂತರಾಜ್ ಅರಸ ರಸ್ತೆ, ಮೈಸೂರು

೪೮. ರಹಮತ್ ತರೀಕೆರೆ : ಕರ್ನಾಟಕದ ಸೂಫಿಗಳು, ಪ್ರ : ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೧

೪೯. ರಹಮತ್ ತರೀಕೆರೆ : (ಸಂ) ಧರ್ಮ ವಿಶ್ವಕೋಶ
ಪ್ರ : ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦

೫೦. ರಾನಡೆ ಆರ್.ಡಿ.: ಕನ್ನಡ ಸಂತರ ಪರಮಾರ್ಥ ಪಥ (ಅನು) ದೇಶಪಾಂಡೆ
ಪ್ರ : ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೬

೫೧. ವಿದ್ಯಾಶಂಕರ ಎಸ್.: ವೀರಶೈವ ಪುರಾಣಗಳು
ಪ್ರ: ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೭

೫೨. ವೆಂಕಟೇಶ್ ಇಂದ್ವಾಡಿ : ಮಂಟೇಸ್ವಾಮಿ ಪರಂಪರೆ
ಪ್ರ : ಕನ್ನಡ ವಿಶ್ವವಿದ್ಯಾಲಯ ಹಂಪಿ, ೧೯೯೯

೫೩. ವೇಮಲ ಗಟ್ಟೆಪ್ಪ ಶ್ರೇಷ್ಠಿ : ದಮ್ಮೂರು ಶ್ರೀ ಸದ್ಗುರು ವೆಂಕಾವಧೂತರ ಚರಿತ್ರೆ
ಪ್ರ : ವೇಮಲ ಟ್ರೇಡರ್ಸ್, ಹೊಸಪೇಟೆ, ೨೦೦೧

೫೪. ವೇಮಲ ಗಟ್ಟೆಪ್ಪ ಶ್ರೇಷ್ಠಿ : (ಸಂ) ಶ್ರೀ ಸದ್ಗುರು ಸ್ತುತಿ ಪುಷ್ಪಾಂಜಲಿ
ಪ್ರ : ವೇಮಲ ಟ್ರೇಡರ್ಸ್, ಹೊಸಪೇಟೆ, ೧೯೯೮

೫೫. ಶಿರೂರ ಬಿ.ವಿ. : ಸಂಶೋಧನಾ ಸ್ವರೂಪ, ಪ್ರ : ಅನ್ನಪೂರ್ಣ ಪ್ರಕಾಶನ, ಹುಬ್ಬಳ್ಳಿ, ೧೯೯೨

೫೬. ಶಿವಕುಮಾರ ಸ್ವಾಮಿ ಸಿ.ಎಸ್.: (ಸಂ) ಕರ್ನಾಟಕದ ಜಾತ್ರೆಗಳು
ಪ್ರ : ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೮೮

೫೭. ಶಿವಮೂರ್ತಿ ಶಾಸ್ತ್ರಿಗಳು ಡಿ.ಎಂ. : ಶ್ರೀ ಸದ್ಗುರು ವೆಂಕಾವಧೂತರ ಪುರಾಣ
ಪ್ರ : ವ್ಹಿ.ಜಿ.ಶೆಟ್ಟಿ, ವೇಮಲ ಟ್ರೇಡರ್ಸ, ಹೊಸಪೇಟೆ, ೧೯೯೮

೫೮. ಶಿವಮೂರ್ತಿ ಶಾಸ್ತ್ರಿಗಳು ಡಿ.ಎಂ.: ಶ್ರೀ ಸದ್ಗುರು ಎರಿಬಸವೇಶ ಪುರಾಣ
ಪ್ರ : ಶರಣಪ್ಪರೆಡ್ಡಿ, ಕೊಳಗಲ್ಲು, ಬಳ್ಳಾರಿ, ೨೦೦೦

೫೯. ಶಿವಾನಂದ ವಿರಕ್ತಮಠ : ಪ್ರೌಢದೇವರಾಯನ ಕಾಲದ ಕನ್ನಡ ಸಾಹಿತ್ಯ
ಪ್ರ : ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೮

೬೦. ಶಿವಾನಂದ ವಿರಕ್ತಮಠ : (ಸಂ) ಕೊಡೇಕಲ್ಲು ವಚನಕಾವ್ಯ ಸಂಪುಟ, ವಚನ-ಸ್ವರವಚನ
ಪ್ರ: ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦

೬೧. ಶಿವಾನಂದ ಎಸ್.: ಚೇಳಗುರುಕೆ ಎರ್ರಿತಾತ
ಪ್ರ : ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೧೯೯೧

೬೨. ಶ್ರೀನಿವಾಸ ಹಾವನೂರು : ಹೊಸಗನ್ನಡದ ಅರುಣೋದಯ
ಪ್ರ : ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ೧೯೭೪

೬೩. ಷಣ್ಮುಖಯ್ಯ ಅಕ್ಕೂರಮಠ : ಸೂಫಿ ಮತ್ತು ಶರಣರ ಅನುಭಾವ ಪಥ
ಪ್ರ : ಶ್ರೀ ಜಗದ್ಗುರು ಗಂಗಾಧರ ಧರ್ಮ ಪ್ರಚಾರಕ ಮಂಡಳಿ, ಮೂರುಸಾವಿರಮಠ, ಹುಬ್ಬಳ್ಳಿ, ೧೯೮೨

೬೪. ಸ್ವಾಮಿ ಸೋಮನಾಥನಂದ : (ಅನು) ಅವಧೂತ ಗೀತಾ
ಪ್ರ : ಶ್ರೀ ರಾಮಕೃಷ್ಣಾಶ್ರಮ, ಮೈಸೂರು, ೧೯೮೯

೬೫. ಸ್ವಾಮಿ ಭಜನಾನಂದ : (ಅನು) ಯೋಗ ಮತ್ತು ಆಧ್ಯಾತ್ಮ ಸಾಧನೆ
ಪ್ರ : ಶ್ರೀ ರಾಮಕೃಷ್ಣ ಆಶ್ರಮ, ಮೈಸೂರು, ೨೦೦೧

೬೬. ಸ್ವಾಮಿ ವಿವೇಕಾನಂದ : ಭಕ್ತಿಯೋಗ (ಕನ್ನಡಾನುವಾದ)
ಪ್ರ : ಶ್ರೀ ರಾಮಕೃಷ್ಣಾಶ್ರಮ, ಮೈಸೂರು, ೧೯೯೯

೬೭. ಸುಂಕಾಪುರದ ಎಂ.ಎಸ್., ನಾಗಭೂಷಣ ಶಾಸ್ತ್ರಿಗಳು: (ಸಂ)ಗುರುಬಸವ ಕೃತ ಅವಧೂತ ಗೀತ
ಪ್ರ : ಶ್ರೀ ಮುರುಘಮಠ. ಮೃತ್ಯುಂಜಯನಗರ, ಧಾರವಾಡ, ೧೯೬೭

೬೮. ಸುಬ್ಬಣ್ಣ ಎಂ.ಎಸ್.: ಚಾಕುಬಂಡೆ : ಶ್ರೀ ಶಿವರಾಮ ಅವಧೂತರ ಚರಿತ್ರೆ
ಪ್ರ : ಶ್ರೀ ವಿದ್ಯಾನಂದ ಭಾರತಿ ಸ್ವಾಮಿಗಳು ಶ್ರೀ ಶಿವರಾಮ ಅವಧೂತರ ಆಶ್ರಮ,
ಹೇಮಕೂಟ ಹಂಪಿ, ೨೦೦೩

೬೯. ಹರಿದಾಸ ಭಟ್ಟಾಚಾರ್ಯ : (ಸಂ) ಯುಗಯಾತ್ರಿ ಭಾರತೀಯ ಸಂಸ್ಕೃತಿ
ಸಂಪುಟ-೩, ದರ್ಶನಗಳು ೧೯೭೫
ಸಂಪುಟ-೪, ಧರ್ಮಗಳು ೧೯೮೮
ಪ್ರ : ಮೈಸೂರು ವಿಶ್ವವಿದ್ಯಾಲಯ, ಮೈಸೂರು

೭೦. ಹೀರೇಮಠ ಆರ್.ಸಿ.: ಮಹಾಯಾತ್ರೆ, ಪ್ರ : ಕನ್ನಡ ವಿಶ್ವವಿದ್ಯಾಲಯ ಹಂಪಿ, ೧೯೯೭

೭೧. ಕನ್ನಡ ತತ್ವಪದಕಾರರು : ವಿವಿಧ ಲೇಖಕರು
ಪ್ರ : ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು, ೧೯೯೩

೭೨. ಕರ್ನಾಟಕ-ಕನ್ನಡ : ವಿವಿಧ ಲೇಖಕರು, ಕನ್ನಡ ಭಾಷೆ ಮತ್ತು ಸಾಹಿತ್ಯ ವಿಭಾಗ,
ಕನ್ನಡ ವಿಶ್ವವಿದ್ಯಾಲಯ ಹಂಪಿ, ೧೯೯೯

ಬ. ಕೋಶಗಳು

೧. ಸಂಸ್ಕೃತ-ಕನ್ನಡ : ಶಬ್ಧಕೋಶ ಭಾಗ-೩, (ಸಂ) ಚಕ್ರವರ್ತಿ ಶ್ರೀನಿವಾಸ ಗೋಪಾಲಚಾರ್ಯ
ಶ್ರೀ ಕೌಸ್ತುಭ ಸೌಧ, ಬೆಂಗಳೂರು, ೧೯೮೪

೨. ಸಂಸ್ಕೃತ-ಕನ್ನಡ : ಸುವರ್ಣಕೋಶ

೩. ಕನ್ನಡ ನಿಘಂಟು : ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

೪. ಕನ್ನಡ-ಇಂಗ್ಲೀಷ್ ನಿಘಂಟು : (ಸಂ) ಆರ್.ಎಫ್.ಕಿಟಲ್, ಮಂಗಳೂರು

೫. ಕನ್ನಡ-ಕನ್ನಡ ಶಬ್ಧಕೋಶ : (ಸಂ) ಬಿ.ಜಿ. ಸಂಕೇಶ್ವರ, ಗದಗ

೬. ಪರಮಾರ್ಥ ಪದಕೋಶ : (ಸಂ) ಅ.ರಾ. ಸೇ. ಕಾಮಧೇನು, ನಂ. ೬, ನಾಗಪ್ಪ, ಶೇಷಾದ್ರಿಪುರಂ,
ಬೆಂಗಳೂರು, ೧೯೯೯

೭. ಕನ್ನಡ ವಿಶ್ವಕೋಶ, ಪ್ರ : ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

೮. ವಚನ ಪರಿಭಾಷಾ ಕೋಶ : (ಸಂ) ವಿದ್ಯಾಶಂಕರ ಎಸ್., ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು.

೯. Encyclopedia - Britanica, Vol-16

ಕ. ಸಂಸ್ಕೃತ ಕೃತಿಗಳು

೧. ಹಠಯೋಗ ಪ್ರದೀಪಿಕೆ : (ಸಂ) ಓ.ವೈ.ದೊರೆಸ್ವಾಮಯ್ಯ
ಪ್ರ : ವೆಸ್ಟ್ ವಾರ್ಡ್ ಅಂಡ್ ಕಂಪನಿ, ಮದ್ರಾಸ್, ೧೯೫೪

೨. ಶ್ರೀ ಭಾಗವತ ಸಾರೋದ್ಧಾರಮೃತಂ : ಘೂಳೀ ಕೃಷ್ಣಮೂರ್ತ್ಯಾಚಾರ್ಯ
ಪ್ರ : ಶ್ರೀ ವ್ಯಾಸ ಪ್ರಕಾಶನ, ಸತ್ಯನಾರಾಯಣಪೇಟೆ, ಬಳ್ಳಾರಿ

೩. ಜೀವ ಬ್ರಹ್ಮೈಕ್ಯ ರಾಜಯೋಗ ಸಾರಾಮೃತವು : (ಮೂಲ) ಸಚ್ಚಿದಾನಂದ ಪರಮಯೋಗೀಶ್ವರ, (ಕನ್ನಡಕ್ಕೆ) ಭೀಮಸೇನ